ಆನಂದ ಕರ್ಣಾಟಕ ಗ್ರಂಥರತ್ನಮಾಲೆ. ನಂ. ೧.

ಶ್ರೀಃ.

ವಾಲ್ಮೀಕಿಮಹರ್ಷಿಪ್ರಣೀತ

# ಶ್ರೀಮದ್ರಾಮಾಯಣವು

## ಅಯೋಧ್ಯಾಕಾಂಡವು.

ಕರ್ಣಾಟಕ ವಚನವು.

---

ಶ್ರೀಮದ್ಯದುಶೈಲನಿವಾಸರಸಿಕ
ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್ಯವಿರಚಿತವು.

---

ಮದ್ರಾಸು
ಆನಂದಮುದ್ರಾಕ್ಷರಶಾಲೆಯಲ್ಲಿ ಮುದ್ರಿತವಾಗಿ
ಆರ್. ವೇಂಕಟೇಶ್ವರ ಕಂಪೆನಿಯವರಿಂದ
ಪ್ರಕಟಿಸಲ್ಪಟ್ಟಿದೆ.

---

1918

[ALL RIGHTS RESERVED]

## All Rights Reserved.

---

ಕಾಪೀರೈಟ್, ೧೯೧೭—ಈ ಪುಸ್ತಕದ ಸರ್ವಸ್ವಾತಂತ್ರ್ಯ
ಮದ್ರಾಸ್, ಆರ್. ವೇಂಕಟೇಶ್ವರಕಂಪನಿಯವರಿಗೆ ಸೇರಿದೆ. ಇ
ಇಂಡಿಯಾದೇಶದ ಮತ್ತು ಹೊರದೇಶದ ಕಾಪೀರೈಟ್ ತೆಗೆಯಲ್ಪಟ್ಟಿ
ಈ ಪುಸ್ತಕವನ್ನು ಸಂಪೂರ್ಣವಾಗಿಯಾಗಲಿ, ಅಥವಾ ಇದರ ಯಾವು
ದರೂ ಭಾಗವನ್ನಾಗಲಿ ಪ್ರತ್ಯೇಕವಾಗಿ ಪ್ರಕಟಿಸುವುದಕ್ಕೂ, ಭಾಷಾಂ
ಕರಿಸಿ ವಿಕ್ರಯಿಸುವುದಕ್ಕೂ ಬೇರೊಬ್ಬರಿಗೂ ಬಾಧ್ಯತೆಯಿರದು. ಈ ಪು
ದೊಳಗಿನ ಭಾವಗಳನ್ನಾಗಲಿ, ಪದಗಳನ್ನಾಗಲಿ, ಚಿತ್ರಪಟಗಳನ್ನಾ
ಇತರರು ಕಾಪೀಮಾಡಿದಪಕ್ಷದಲ್ಲಿ, ಅಂತವರು ಕಾಪೀರೈಟನ್ನು ಉಲ್ಲಂ
ದಂತಾಗುವುದು. ಆದುದರಿಂದ ಯಾವ ಭಾಗದಲ್ಲಿಯಾದರೂ ಈ ಕ
ರೈಟನ್ನು ಉಲ್ಲಂಘಿಸಿದವರು, ನಷ್ಟದ ದಾವೆಗೆ ಗುರಿಯಾಗುವರೆಂದು
ರಿಂದ ತಿಳಿಯಪಡಿಸಿದೆ.

# ವಿ ಜ್ಞಾ ಪ ನೆ.

ಇದುವರೆಗೆ ನಾವು ರಾಮಾಯಣಕಥೆಯೆಂಬ ಮಹಾಸಾಗರದಲ್ಲಿ ಬಹಳ ಪ್ರಬಲವಾದ ಎರಡನೆಯ ಅಲೆಯನ್ನೂ ಅರ್ಧದಮಟ್ಟಿಗೆ ದಾಟಿಬಿಟ್ಟೆವು. ಇತರಸಾಗರಗಳಂತೆಯೇ ಈ ಮಹಾಸಮುದ್ರವೂ ಮುಂದೆ ಮುಂದೆ ಹೋದಷ್ಟೂ ಬಹಳ ಗಂಭೀರವಾಗಿಯೂ, ವಿಶೇಷರಸಸಮೃದ್ಧಿಯುಳ್ಳದಾಗಿಯೂ, ದುರವಗಾಹವಾಗಿಯೂ ಇದ್ದರೂ, ಮೊದಲಿನ ಒಂದೆರಡಲೆಗಳನ್ನು ದಾಟಿಬಿಟ್ಟಮೇಲೆ, ಸರಿಯಾದ ಸತ್ಪಾತ್ರಗಳ ಅವಲಂಬನವಿದ್ದರೆ, ನಿರಾಯಾಸವಾಗಿಯೇ ಕೊನೆಮುಟ್ಟಬಹುದೆಂಬುದರಲ್ಲಿ ಸಂದೇಹವಿಲ್ಲ. ಕೂಡಿದಮಟ್ಟಿಗೆ ಭಾಷಾಭಿಮಾನಿಗಳ ಬಲವಾದ ಅವಲಂಬನವು ನಮಗೆ ಸಿಕ್ಕಬಹುದೆಂದು ತೋರಿರುವುದರಿಂದ, ನಾವು ನಿರ್ಭಯರಾಗಿ ಮುಂದುವರಿಯುತ್ತಿರುವೆವು. ಆದುದರಿಂದ ನಡುದಾರಿಯಲ್ಲಿ ಕೈಬಿಟ್ಟುಹೋಗದೆ ಕೊನೆಮುಟ್ಟುವವರೆಗೂ ನಮ್ಮನ್ನು ಹಿಂಬಾಲಿಸಿ ಬಂದು, ನಮಗೆ ದೃಢವಾದ ಅವಲಂಬನವನ್ನು ಕೊಡುತ್ತಿರುವುದು, ಭಾಷಾಭಿಮಾನಿಗಳಾದ ಚಂದಾದಾರರ ಕರ್ತವ್ಯವೆಂಬುದನ್ನು ನಾವು ಹೇಳಬೇಕಾದುದೇ ಇಲ್ಲವು.

ಈ ಅಯೋಧ್ಯಾಕಾಂಡವನ್ನು ಪೂರ್ತಿಯಾಗಿ ಒಂದೇ ಸಂಚಿಕೆಯಾಗಿ ಮಾಡಿಟ್ಟರೆ, ಚಂದಾದಾರರಿಗೆ ಹೆಚ್ಚು ಭಾರವನ್ನು ಹೊರಿಸಿದಂತಾಗುವುದೆಂದು ಯೋಚಿಸಿ, ಅರ್ಧಭಾಗವನ್ನು ಮಾತ್ರ ಪ್ರತ್ಯೇಕಸಂಕಿಕೆಯಾಗಿ ಮಾಡಿ, ನಮ್ಮ ಮೊದಲಿನ ನಿಯಮಗಳ ಮೇರೆಗೆ, ೪೦೦ ಪುಟಗಳುಳ್ಳ ಈ ಸಂಚಿಕೆಗೆ ಒಂದೇ ರೂಪಾಯಿಯ ಬೆಲೆಯನ್ನು ನಿರ್ಣಯಿಸಿರುವೆವು.

ಆರ್. ವಿ.

# ವಿ ಷ ಯಾ ನು ಕ್ರ ಮ ಣಿ ಕೆ.


| ಸರ್ಗಸಂಖ್ಯೆ. | ವಿಷಯಗಳು. | ಪುಟಸಂಖ್ಯೆ. |
| --- | --- | --- |
| | ಅವತಾರಿಕೆ. ... ... ... | ೨೬೭ |
| ೧. | ಭರತಶತ್ರುಘ್ನರು ಮಾವನ ಮನೆಗೆ ಪ್ರಯಾಣಮಾಡಿದುದು ... | ೨೭೩ |
| ೨. | ದಶರಥನು ರಾಮಾಭಿಷೇಕಕ್ಕಾಗಿ ಪ್ರಜೆಗಳೊಡನೆ ಆಲೋಚಿಸಿದುದು. ... ... .. | ೨೮೮ |
| ೩. | ಪಟ್ಟಾಭಿಷೇಕಸಾಮಗ್ರಿಗಳನ್ನು ಸಿದ್ಧಪಡಿಸಿದುದು. .. | ೩೦೦ |
| ೪. | ದಶರಥನು ಅಭಿಷೇಕಾರ್ಥವಾಗಿ ರಾಮನನ್ನು ತ್ವರೆಪಡಿಸಿದುದು. | ೩೦೭ |
| ೫. | ವಸಿಷ್ಠನು ರಾಮನನ್ನು ಉಪವಾಸವಿರುವಂತೆ ನಿಯಮಿಸಿದುದು. | ೩೧೩ |
| ೬. | ರಾಮಾಭಿಷೇಕದ ಸನ್ನಾಹವು. ... ... | ೩೧೬ |
| ೭. | ಮಂಥರೆಯು ಕೈಕೇಯಿಗೆ ದುರ್ಬೋಧನೆಯನ್ನು ಮಾಡಿದುದು. | ೩೧೯ |
| ೮. | ತನ್ನ ಮಾತಿಗೆ ಬಾರದ ಕೈಕೇಯಿಗೆ, ಮಂಥರೆಯು ಮತ್ತಷ್ಟು ದುರ್ಬೋಧನೆಯನ್ನು ಮಾಡಿದುದು ... ... | ೩೨೫ |
| ೯. | ಕೈಕೇಯಿಯು ಮಂಥರೆಯ ದುರ್ಬೋಧನೆಗೆ ಒಳಗಾದುದು. | ೩೩೫ |
| ೧೦. | ದಶರಥನು ಕೈಕೇಯಿಯನ್ನು ನೋಡುವುದಕ್ಕಾಗಿ ಬಂದು, ಅವಳ ಕೋಪವನ್ನು ಸಮಾಧಾನಪಡಿಸಿದುದು. ... | ೩೪೫ |
| ೧೧. | ಕೈಕೇಯಿಯು ಭರತನಿಗೆ ರಾಜ್ಯವನ್ನು ಕೊಟ್ಟು, ರಾಮನನ್ನು ಕಾಡಿಗೆ ಕಳುಹಿಸುವಂತೆ ರಾಜನನ್ನು ನಿರ್ಬಂಧಿಸಿದುದು. | ೩೫೨ |
| ೧೨. | ದಶರಥನ ದುಃಖವು. ... ... ... | ೩೫೬ |
| ೧೩. | ದಶರಥನು ಪುನಃ ಕೈಕೇಯಿಯನ್ನು ಸಮಾಧಾನಪಡಿಸಿದುದು | ೩೭೩ |
| ೧೪. | ದಶರಥನು ರಾಮನನ್ನು ಕಾಡಿಗೆ ಕಳುಹಿಸುವುದಾಗಿ ನಿಶ್ಚಯಿಸಿದುದು. ಸುಮಂತ್ರನು ದಶರಥನ ಬಳಿಗೆ ಬಂದುದು. ರಾಮನನ್ನು ಕರೆಯಿಸಿದುದು. ... ... | ೩೭೭ |

೧೫. ರಾಮಾಭಿಷೇಕಸನ್ನಾಹವರ್ಣನವು. ... ... ೩೮೬

೧೬. ಸುಮಂತ್ರನು ರಾಮನನ್ನು ಕರೆತಂದು ಕೈಕೇಯೀದಶರಥರ ಬಳಿಯಲ್ಲಿ ಬಿಟ್ಟುದು. ... ... ೩೯೧

೧೭. ರಾಮನು ದಶರಥನಬಳಿಗೆ ಬಂದುದು. ... ... ೪೦೧

೧೮. ಕೈಕೇಯಿಯು ತಾನು ವರಗಳನ್ನು ಕೇಳಿದ ವೃತ್ತಾಂತವನ್ನು ರಾಮನಿಗೆ ತಿಳಿಸಿದುದು. ... ... ೪೦೫

೧೯. ರಾಮನು ತಾನು ಕಾಡಿಗೆ ಹೋಗುವುದಾಗಿ ಕೈಕೇಯಿಗೆ ಹೇಳಿದುದು. ... ... ... ೪೧೦

೨೦. ರಾಮನು ಕೌಸಲ್ಯೆಗೆ ತನ್ನ ವನವಾಸವೃತ್ತಾಂತವನ್ನು ಹೇಳಿದುದು. ಕೌಸಲ್ಯೆಯ ವಿಲಾಪವು. ... ... ೪೧೭

೨೧. ಲಕ್ಷ್ಮಣನು ಕೌಸಲ್ಯೆಯನ್ನು ಸಮಾಧಾನಪಡಿಸಿದುದು; ಸತ್ಯವನ್ನು ತಪ್ಪಕೂಡದೆಂದು ರಾಮನು ಲಕ್ಷ್ಮಣನಿಗೆ ಬುದ್ಧಿವಾದವನ್ನು ಹೇಳಿದುದು. ... ... ೪೨೯

೨೨. ರಾಮನು ಕೈಕೇಯಿಯ ವಿಷಯದಲ್ಲಿ ಲಕ್ಷ್ಮಣನಿಗಿರುವ ಕೋಪವನ್ನು ತಗ್ಗಿಸಿದುದು. ... ... ೪೨೪

೨೩. ಲಕ್ಷ್ಮಣನು ದೈವಬಲಕ್ಕಿಂತ ಪುರುಷಪ್ರಯತ್ನವೇ ಪ್ರಬಲವೆಂದು ವಾದಿಸಿದುದು ... ... ... ೪೪೭

೨೪. ಕೌಸಲ್ಯೆಯು ರಾಮನ ವನವಾಸನಿಶ್ಚಯವನ್ನು ಅನುಮೋದಿಸಿದುದು. ... ... ... ೪೫೭

೨೫. ಕೌಸಲ್ಯೆಯು ರಾಮನಿಗೆ ಮಂಗಳಾಶೀರ್ವಾದಗಳನ್ನು ಮಾಡಿದುದು .. ... ... ೪೬೦

೨೬. ರಾಮನು ಸೀತೆಯ ಅನುಮತಿಯನ್ನು ಪಡೆಯುವುದಕ್ಕಾಗಿ ಅವಳ ಅಂತಃಪುರಕ್ಕೆ ಹೋದುದು... ... ... ೪೬೬

೨೭. ರಾಮನು ತನ್ನೊಡನೆ ಬರಕೂಡದೆಂದುದಕ್ಕಾಗಿ, ಸೀತೆಯು ಕೋಪಿಸಿದುದು ... ... ... ೪೭೧

೨೮. ರಾಮನು ವನವಾಸದಲ್ಲಿರುವ ಕಷ್ಟವನ್ನು ಸೀತೆಗೆ ತಿಳಿಸಿದುದು. ೪೭೬

೨೯. ಸೀತೆಯು ತಾನೂ ಕಾಡಿಗೆ ಬಂದೇಬರುವೆನೆಂದು ರಾಮನನ್ನು ನಿರ್ಬಂಧಿಸಿದುದು ... ... ... ೪೩೯

೩೦. ಸೀತೆಯು ತನ್ನನ್ನು ಕಾಡಿಗೆ ಕರೆದುಕೊಂಡು ಹೋಗದ ಕೋಪಕ್ಕಾಗಿ ರಾಮನನ್ನು ಆಕ್ಷೇಪಿಸಿದುದು ... ೪೬೨

೩೧. ರಾಮನು ಲಕ್ಷ್ಮಣನನ್ನು ಕಾಡಿಗೆ ಬರಬೇಡವೆಂದು ಹೇಳಿದುದು ೪೯೪

೩೨. ರಾಮನು ವನಪ್ರಯಾಣಕ್ಕೆ ಮೊದಲು ದಾನಾದಿಗಳನ್ನು ಮಾಡಿದುದು ... ... ... ೫೦೫

೩೩. ರಾಮನು ಸೀತಾಲಕ್ಷ್ಮಣರನ್ನು ತನ್ನೊಡನೆ ಕಾಡಿಗೆ ಕರೆದುಕೊಂಡು ಹೋಗುವವಿಷಯದಲ್ಲಿ ಅನುಮತಿಯನ್ನು ಕೇಳುವುದಕ್ಕಾಗಿ, ದಶರಥನಬಳಿಗೆ ಹೋದುದು. ... ೫೧೧

೩೪. ರಾಮನು ವನಪ್ರಯಾಣಕ್ಕೆ ದಶರಥನ ಅನುಮತಿಯನ್ನು ಕೇಳಿದುದು ... ... ... ೫೧೫

೩೫. ಸುಮಂತ್ರನು ಕೈಕೇಯಿಯನ್ನು ನಿಂದಿಸಿದುದು ... ೫೨೩

೩೬. ದಶರಥನು ರಾಮನೊಡನೆ ಚತುರಂಗಸೈನ್ಯಗಳನ್ನು ಕೊಟ್ಟು ಕಳುಹಿಸುವುದಕ್ಕೆ ಪ್ರಯತ್ನಿಸಲು, ಕೈಕೇಯಿಯು ಅಡ್ಡಿ ಮಾಡಿದುದು. ಸಿದ್ಧಾರ್ಥನು ಕೈಕೇಯಿಗೆ ಬುದ್ಧಿವಾದಗಳನ್ನು ಹೇಳಿದದು ... ... ... ೫೨೮

೩೭. ರಾಮಲಕ್ಷ್ಮಣರೂ, ಸೀತೆಯೂ, ಕೈಕೇಯಿಯು ತರಿಸಿಕೊಟ್ಟ ನಾರುಬಟ್ಟೆಗಳನ್ನು ಧರಿಸಿದುಹು. ವಸಿಷ್ಠನು ಕೈಕೇಯಿಯನ್ನು ನಿಂದಿಸಿದುದು ... ... ೫೩೩

೩೮. ದಶರಥನು ಸೀತೆಗೆಮಾತ್ರ ನಾರುಬಟ್ಟೆಯನ್ನುಡಿಸಬಾರದೆಂದು ಕೈಕೇಯಿಯನ್ನು ಕೇಳಿಕೊಂಡುದು. ರಾಮನು ತನ್ನ ತಾಯಿಯಾದ ಕೌಸಲ್ಯೆಯನ್ನು ಕಾಪಾಡಿಕೊಳ್ಳಬೇಕೆಂದು ತಂದೆಯನ್ನು ಕೇಳಿಕೊಂಡುದು ... ... ೫೩೬

೩೯. ದಶರಥನು ಸುಮಂತ್ರನೊಡನೆ ರಾಮನಿಗೆ ರಥವನ್ನು ತರುವಂತೆ ಹೇಳಿದುದು. ಕೌಸಲ್ಯೆಯು ಸೀತೆಗೆ ನೀತಿಗಳನ್ನುಪದೇಶಿಸಿದುದು. ರಾಮನು ಕೌಸಲ್ಯೆ ಮೊದಲಾದವರನ್ನು ಸಮಾಧಾನಪಡಿಸಿದುದು ... ... ೫೪೧

೪೦. ರಾಮನು ವನಕ್ಕೆ ಪ್ರಯಾಣಮಾಡಿದುದು. ಪ್ರಜೆಗಳ ವಿಲಾಪವು ... ... ... ... ೫೪೫
೪೧. ಅಂತಃಪುರಸ್ತ್ರೀಯರ ವಿಲಾಪವು. ಪ್ರಜೆಗಳ ದುಃಖವು. ದುಶ್ಶಕುನಗಳು. ... ... ... ೫೬೬
೪೨. ರಾಮನು ಕಾಡಿಗೆ ಹೋದಮೇಲೆ ದಶರಥನ ವಿಲಾಪವು. ... ೫೫೯
೪೩. ಕೌಸಲ್ಯೆಯು ದಶರಥನೊಡನೆ ರಾಮನ ಗುಣಗಳನ್ನು ಹೇಳಿ ದುಃಖಿಸಿದುದು. ... ... .. ೫೬೬
೪೪. ಸುಮಿತ್ರೆಯು ಕೌಸಲ್ಯೆಯನ್ನು ಸಮಾಧಾನಪಡಿಸಿದುದು ... ೫೬೯
೪೫ ರಾಮನು ತನ್ನನ್ನು ಹಿಂಬಾಲಿಸಿ ಬರುತ್ತಿದ್ದ ಪ್ರಜೆಗಳಿಗೆ ಸಮಾಧಾನವನ್ನು ಹೇಳಿದುದು. ... ... ೫೭೭
೪೬. ರಾಮನು ತಮಸಾನದೀತೀರದಲ್ಲಿ ವಿಶ್ರಮಿಸಿಕೊಂಡಿದ್ದು, ರಾತ್ರಿಯಲ್ಲಿ ಪ್ರಜೆಗಳನ್ನು ವಂಚಿಸಿ, ಮುಂದಕ್ಕೆ ಹೊರಟುದು. ... ... ... ೫೮೨
೪೭. ರಾಮನಿಂದ ವಂಚಿಸಲ್ಪಟ್ಟ ಪ್ರಜೆಗಳು ದುಃಖದಿಂದ ಅಯೋಧ್ಯೆಗೆ ಹಿಂತಿರುಗಿದುದು. ... ... ೫೮೬
೪೮. ಪುರಜನರ ದುಃಖವು. ... ... ... ೫೮೯
೪೯. ರಾಮನು ವೇದಶ್ರುತಿ ಗೋಮತೀನದಿಗಳನ್ನು ದಾಟಿದುದು. ಸುಮಂತ್ರನೊಡನೆ ಸಂಭಾಷಣವು. ... ... ೫೯೩
೫೦. ರಾಮನು ಕೋಸಲದೇಶವನ್ನು ದಾಟಿ ಗಂಗಾತೀರವನ್ನು ಸೇರಿದುದು. ... ... ... ೫೯೬
೫೧. ಗುಹಲಕ್ಷ್ಮಣರ ಸಂಭಾಷಣವು. ... ... ೬೦೧
೫೨. ರಾಮನು ಸುಮಂತ್ರನೊಡನೆ ತನ್ನ ತಂದೆತಾಯಿಗಳಿಗೆ ಸಂದೇಶಗಳನ್ನು ಹೇಳಿದುದು. ಗುಹನನ್ನು ಸಮಾಧಾನಪಡಿಸಿ, ಜಡೆಗಳನ್ನು ಧರಿಸಿದುದು. ವತ್ಸದೇಶವನ್ನು ದಾಟಿ, ಮೃಗಮಾಂಸವನ್ನು ಭುಜಿಸಿ, ಮರದಕೆಳಗೆ ಮಲಗಿದುದು. ೭೦೬
೫೩. ರಾಮನು ದುಃಖದಿಂದ ಲಕ್ಷ್ಮಣನನ್ನು ಅಯೋಧ್ಯೆಗೆ ಹೋಗೆಂದು ಹೇಳಿದುದು. ಲಕ್ಷ್ಮಣನು ರಾಮನನ್ನು ಸಮಾಧಾನಪಡಿಸಿದುದು. .. ... ... ೬೦೭

# ಪ ಟ ಗ ಳ ಪ ಟ್ಟಿ.


ದಶರಥನು ರಾಮಾಭಿಷೇಕಕ್ಕಾಗಿ ಪ್ರಜೆಗಳೊಡನೆ ಸೇರಿ ಆಲೋಚಿಸಿದುದು. ೨೮೮

ಶ್ರೀವಿಷ್ಣುದೇವಾಲಯದಲ್ಲಿ ವಸಿಷ್ಠನು ಸೀತಾಸಮೇತನಾದ ರಾಮನಿಂದ ಉಪವಾಸಹೋಮಾದಿಗಳನ್ನು ಮಾಡಿಸಿದುದು. ೩೧೬

ಮಂಥರೆಯು ಕೈಕೇಯಿಗೆ ರಾಮಾಭಿಷೇಕವೃತ್ತಾಂತವನ್ನು ತಿಳಿಸಿದುದು. ೩೧೯

ದಶರಥನು ಕೈಕೇಯಿಯನ್ನು ಪ್ರಸನ್ನಳಾಗಿಸುವುದಕ್ಕಾಗಿ ಬಹುದೈನ್ಯದಿಂದ ಬೇಡಿದುದು, ೩೫೮

ಕೈಕೇಯಿಯು ತಾನು ವರಗಳನ್ನು ಕೇಳಿದುದಾಗಿ ರಾಮನಿಗೆ ತಿಳಿಸಲು, ರಾಮನು ಕಾಡಿಗೆ ಹೋಗುವುದಾಗಿ ಒಪ್ಪಿದುದು. ೪೦೫

ರಾಮನು ವಿಷ್ಣುಪೂಜೆಯಲ್ಲಿದ್ದ ಕೌಸಲ್ಯೆಯ ದುಃಖವನ್ನೂ, ಲಕ್ಷ್ಮಣನ ಕೋಪವನ್ನೂ ಸಮಾಧಾನಪಡಿಸಿದುದು. ೪೫೨

ರಾಮನು ಸೀತಾಲಕ್ಷ್ಮಣರ ಪ್ರಯಾಣಕ್ಕೆ ಅನುಮತಿಯನ್ನು ಕೇಳುವುದಕ್ಕಾಗಿ, ದಶರಥನ ಮನೆಗೆ ಬಂದು, ದ್ವಾರದೇಶದಲ್ಲಿ ಸುಮಂತ್ರನನ್ನು ನೋಡಿದುದು. ೫೧೧

ರಾಮಲಕ್ಷ್ಮಣರೂ, ಸೀತೆಯೂ, ಕೈಕೇಯಿಯು ಕೊಟ್ಟ ನಾರುಬಟ್ಟೆಗಳನ್ನು ಧರಿಸಿದುದು. ೫೩೩

ರಾಮನು ಕಾಡಿಗೆ ಪ್ರಯಾಣಮಾಡಿದುದು, ಪ್ರಜೆಗಳು ಅವನನ್ನು ಹಿಂಬಾಲಿಸಿದುದು. ೫೫೧

ರಾಮನು ಬೆಳಗಿನಜಾವದಲ್ಲಿ, ಗುಹನು ತರಿಸಿಟ್ಟ ನಾವೆಯನ್ನೇರಿ, ಗಂಗಾನದಿಯನ್ನು ದಾಟಿದುದು ೬೦೬

ಸೀತಾರಾಮಲಕ್ಷ್ಮಣರು ಮೂವರೂ ಗಂಗಾನದಿಯನಡುವೆ ದೋಣಿಯಲ್ಲಿ ಹೋಗುವುದು. ೬೧೬

ಅರಣ್ಯದಲ್ಲಿ ಮೊದಲನೆಯ ರಾತ್ರಿಯನ್ನು ಕಳೆದುದು. ೬೧೯

ಶ್ರೀರಸ್ತು.

ಶ್ರೀಸೀತಾಲಕ್ಷ್ಮಣಸಮೇತಶ್ರೀರಾಮಚಂದ್ರಪರಬ್ರಹ್ಮಣೇ ನಮ

# ಅವತಾರಿಕೆ.

ಇದುವರೆಗೆ ಎಂದರೆ, ಬಾಲಕಾಂಡದಲ್ಲಿ, ಶ್ರೀರಾಮನ ಮಹಾಕುಲ ಪ್ರಸೂತತ್ವವೂ, ಆತನ ಕಲ್ಯಾಣಗುಣಗಳೂ, ಆತನ ಧನುರ್ವಿದ್ಯಾಪ್ರವೀಣತೆಯೂ, ಆತನ ಅನನ್ಯಸಾಧಾರಣಗಳಾದ ಅದ್ಭುತಪರಾಕ್ರಮಗಳೂ, ಸೂಚಿಸಲ್ಪಟ್ಟಿವೆ. ಹಾಗೆಯೇ ಲಕ್ಷ್ಮಣನಿಗೆ "ಬಾಲ್ಯಾತ್ಪ್ರಭೃತಿ ಸುಸ್ನಿಗ್ಧಃ" ಎಂಬಂತೆ, ಅಣ್ಣನಾದ ರಾಮನಲ್ಲಿರುವ ಭಕ್ತ್ಯತಿಶಯವೂ, ಶತ್ರುಘ್ನನಿಗೆ "ತಸ್ಯಚಾಸೀತ್ತಥಾ ಪ್ರಿಯಃ" ಎಂಬಂತೆ, ಅಣ್ಣನಾದ ಭರತನಲ್ಲಿರತಕ್ಕ ನಿರತಿಶಯವಾದ ಪ್ರೇಮವೂ ಕಾಣಿಸಲ್ಪಟ್ಟಿವೆ. ಮತ್ತು ವಿವಾಹಿತರಾದ ಸೀತಾರಾಮರಲ್ಲಿ ಶೃಂಗಾರರಸತರಂಗಿತವಾದ ಪರಸ್ಪರಾನುರಾಗಸಂಪತ್ತಿಯೂ ವರ್ಣಿಸಲ್ಪಟ್ಟಿದೆ. ಕಥಾಬೀಜಭೂತಗಳಾಗಿ ಪ್ರತಿಪಾದಿಸಲ್ಪಟ್ಟಿರುವ ಆ ಮಹಾಪುರುಷರ ಕಲ್ಯಾಣಗುಣಗಳೆಲ್ಲವೂ, ಈ ಅಯೋಧ್ಯಾಕಾಂಡದಲ್ಲಿ ಪರಿಪಕ್ವಗಳಾಗಿ, ಆಯಾ ಅನುಷ್ಠಾನವಿಶೇಷಗಳಮೂಲಕವಾಗಿ ವ್ಯಕ್ತಪಡಿಸಲ್ಪಡುವುವು. ರಾಮಾವತಾರಕ್ಕೆ ಮುಖ್ಯಪ್ರಯೋಜನಭೂತವಾದ ದುಷ್ಟಶಿಕ್ಷಣ, ಶಿಷ್ಟರಕ್ಷಣ, ಧರ್ಮಸಂಸ್ಥಾಪನಗಳೆಂಬೀ ಮೂರು ಪ್ರಧಾನಕಾರ್ಯ

ಗಳಿಗೂ ಮೂಲಸಾಧನವಾದ ವನಪ್ರಯಾಣವೇ ಈ ಕಾಂಡದ ಮುಖ್ಯಸಾರವು. ಶ್ರೀಮದ್ರಾಮಾಯಣಕಥೆಯೆಂಬ ಕಲ್ಪಲತೆಗೆ ಇದೇ ಮೂಲಕಂದವು. ರಾಮನ ಅರಣ್ಯಗಮನಕ್ಕೆ ಸಹಕಾರಿಗಳಾದ ವಿಷಯಗಳೇ ಈ ಕಾಂಡದ ಪ್ರಧಾನಾಂಶಗಳು. ಇದರ ಹಿಂದಿನ ಕಾಂಡದ ಕೊನೆಯಲ್ಲಿ, ಭರತನನ್ನು ಕರೆದುಕೊಂಡು ಹೋಗುವುದಕ್ಕಾಗಿ ಯುಧಾಜಿತ್ತು ಅಯೋಧ್ಯೆಗೆ ಬಂದುದೂ, ಈ ಕಾಂಡದ ಕಥಾರಂಭದಲ್ಲಿ "ಗಚ್ಛತಾ ಮಾತುಲಕುಲಂ" ಎಂದು ಭರತನು ಮಾವನ ಮನೆಗೆ ಪ್ರಯಾಣಮಾಡಿದುದೂಕೂಡ, ಆತನು ಇಲ್ಲಿದ್ದರೆ ರಾಮನ ಅರಣ್ಯಪ್ರಯಾಣಕ್ಕೆ ಅನುಮತಿಸಲಾರನಾದುದರಿಂದ, ಅದು ಕೊನೆಸಾಗದೆಂಬುದಕ್ಕಾಗಿಯೇಹೊರತು ಬೇರೆಯಲ್ಲ. ಹೀಗೆಯೇ ರಾಮಾಭಿಷೇಕಪ್ರಸಕ್ತಿ, ಮಂಥರೆಯ ದುರ್ಬೋಧನೆ, ಕೈಕೇಯಿಯ ವರಪ್ರಾರ್ಥನೆ,ಮುಂತಾದುವುಗಳೆಲ್ಲವೂ ಇದಕ್ಕೆ ಸಹಕಾರಿಗಳಾಗಿ ಬಂದೊದಗಿದುದರಿಂದ. ಆ ಕಾರ್ಯವು ನಿರ್ವಿಘ್ನವಾಗಿ ನೆರವೇರಿಸಲ್ಪಟ್ಟಿತೆಂಬುದೇ ಇದರ ಮುಖ್ಯಾಂಶವು,

ಈ ಕಥಾಸಂದರ್ಭಗಳಿಂದಲೂ, ಕಥಾಪ್ರತಿಪಾದ್ಯರಾದ ರಾಮಾದಿ ಮಹಾಪುರುಷರ ಗುಣಸ್ವಭಾವಾದಿಗಳಿಂದಲೂ, ಅನೇಕವಿಧವಾದ ಸಾಮಾನ್ಯವಿಶೇಷಧರ್ಮಗಳೆಲ್ಲವೂ ಬೋಧಿಸಲ್ಪಡುವುವು. ಅವುಗಳಲ್ಲಿ ಮೊದಲು ಶ್ರೀರಾಮನಲ್ಲಿ ಪಿತೃವಚನಪರಿಪಾಲನ, ಸತ್ಯಪ್ರತಿಜ್ಞತ್ವ, ಮೊದಲಾದ ಸಾಮಾನ್ಯಧರ್ಮಗಳೆಲ್ಲವೂ ಪ್ರತಿಪಾದಿಸಲ್ಪಟ್ಟಿರುವುವು. ಮತ್ತು ಬಾಲಕಾಂಡದಲ್ಲಿ ಸೂಚಿಸಲ್ಪಟ್ಟ ಲಕ್ಷ್ಮಣನ ಭಕ್ತ್ಯತಿಶಯವು, "ಭ್ರಾತಾ ಭರ್ತಾಚ ಬಂಧುಶ್ಚ ಪಿತಾಚ ಮಮ ರಾಘವಃ" ಎಂಬುದಾಗಿ, ಆತನು ಸರ್ವವಿಧದಲ್ಲಿಯೂ ರಾಮನಿಗೇ ಶೇಷಭೂತನಾಗಿರುವನೆಂಬುದರಲ್ಲಿಯೇ ಪರ್ಯವಸಾನಹೊಂದುವುದರಿಂದ, ಭಗವಂತನಿಗೂ, ಜೀವನಿಗೂ ಇರತಕ್ಕ ಶೇಷಿಶೇಷಭಾವರೂಪವಾದ ವಿಶೇಷಧರ್ಮವೂ ಪ್ರತಿಪಾದಿಸಲ್ಪಟ್ಟಿದೆ. ಹಾಗೆಯೇ ಸೀತೆಯ ಗುಣಾತಿಶಯಗಳನ್ನು ಹೇಳುವಾಗ "ಸರ್ವಾವಸ್ಥಾಗತಾ ಭರ್ತುಃ ಪಾದಚ್ಛಾಯಾ ವಿಶಿಷ್ಯತೇ" ಎಂಬುದಾಗಿ, ಆಕೆಯ ಪತಿಪರಾಯಣತ್ವವೂ, "ಉಜ್ಝಿತಾಯಾಸ್ತ್ವಯಾ ನಾಥ ತದೈವ ಮರಣಂ ವರಂ" ಎಂದು, ಪತಿವಿಯೋಗವನ್ನು ಸಹಿಸಲಾರದ ಆಕೆಯ ಪ್ರೇಮಾತಿಶಯವೂ ನಿರೂಪಿಸಲ್ಪ

ಟ್ಟಿರುವುದರಿಂದ, ಸ್ತ್ರೀಯರಿಗಿರಬೇಕಾದ ಪಾತಿವ್ರತ್ಯಧರ್ಮದ ಪರಾಕಾಷ್ಠೆ ಯೂ ವಿವರಿಸಲ್ಪಟ್ಟಿರುವುದು. ಭರತನು ರಾಜ್ಯಭರವೆಲ್ಲವನ್ನೂ ರಾಮಪಾದುಕೆಯಲ್ಲರ್ಪಿಸಿ, ನಿರ್ಭರನಾಗಿ ವರ್ತಿಸುವನೆಂಬುದರಿಂದ, ಭಗವತ್ಪಾರತಂತ್ರ್ಯಸ್ವರೂಪವೂ ತೋರಿಸಲ್ಪಟ್ಟಿರುವುದು. ಅಂತಹ ಭಾಗವತಶಿಖಾಮಣಿಯಾದ ಭರತನ ವಿಷಯದಲ್ಲಿ ಶತ್ರುಘ್ನನು "ನೀತಃ ಪ್ರೀತಿಪುರಸ್ಕೃತಃ" ಎಂಬಂತೆ, ಕೇವಲ ಪರತಂತ್ರನಾಗಿದ್ದನೆಂಬುದರಿಂದ, ಭಾಗವತಾಭಿಮಾನ ನಿಷ್ಠೆಯೆಂಬ ಧರ್ಮವಿಶೇಷವೂ ಉಪದೇಶಿಸಲ್ಪಟ್ಟಿರುವುದು.

ಹೀಗೆ ಧರ್ಮಜಿಜ್ಞಾಸುಗಳಿಗೆ ಸಾಮಾನ್ಯವಿಶೇಷಧರ್ಮಗಳೆಲ್ಲವನ್ನೂ ಬೋಧಿಸತಕ್ಕುದಾಗಿಯೂ, ಆಸ್ತಿಕಜನಗಳಿಗೆ ಐಹಿಕಾಮುಷ್ಮಿಕಫಲಪ್ರದವಾಗಿಯೂ, ಸಹೃದಯರಿಗೆ ಹೃದಯಾನಂದಕವಾಗಿಯೂ ಇರುವ ಈ ಅಯೋಧ್ಯಾಕಾಂಡವನ್ನು ರಾಮಾಯಣವೆಂಬ ರತ್ನಮಾಲಿಕೆಗೆ ನಾಯಕರತ್ನದಂತೆಯೇ ಎಣಿಸಬೇಕು.

ಇದರಹಿಂದೆ ಬಾಲಕಾಂಡದಲ್ಲಿ ಹೇಳಿರುವುದಕ್ಕಿಂತಲೂ, ಈ ಅಯೋಧ್ಯಾಕಾಂಡದಲ್ಲಿ ನಿರೂಪಿಸಲ್ಪಡುವ ಕೆಲವು ಧರ್ಮಸೂಕ್ಷ್ಮವಿಶೇಷಗಳುಂಟು. ಹೇಗೆಂದರೆ:—

ಶ್ರಿಯಃಪತಿಯಾಗಿಯೂ, ಸರ್ವೇಶ್ವರನಾಗಿಯೂ, ಅಖಿಲಹೇಯಪ್ರತ್ಯನೀಕಸಕಲಕಲ್ಯಾಣಗುಣವಿಶಿಷ್ಟನಾಗಿಯೂ, ಪರಾತ್ಪರನಾಗಿಯೂ ಇರುವ ಸಾಕ್ಷಾನ್ಮಹಾವಿಷ್ಣುವೇ ರಾಮರೂಪದಿಂದವತರಿಸಿರುವುದರಿಂದ, ಆ ಮಹಾವಿಷ್ಣುವಿನ ಪರತ್ವವೂ, ಆತನ ಅಖಿಲಹೇಯಪ್ರತ್ಯನೀಕಕಲ್ಯಾಣಗುಣವೈಭವಗಳೂ,ರಾಮನಲ್ಲಿಯೂ ನಿದರ್ಶಿಸಲ್ಪಡಬೇಕೆಂಬುದಕ್ಕಾಗಿಯೇ, ಬಾಲಕಾಂಡದಲ್ಲಿ"ಏತಸ್ಮಿನ್ನಂತರೇವಿಷ್ಣುರುಪಯಾತೋ ಮಹಾದ್ಯುತಿಃ"ಇಷ್ಟರಲ್ಲಿ ಮಹಾವಿಷ್ಣುವೇ ಅಲ್ಲಿಗೆ ಬಂದು ಸೇರಿದನು." ಇತ್ಯಾದಿವಾಕ್ಯಗಳಿಂದ, "ಯತೋವಾ ಇಮಾನಿ ಭೂತಾನಿ ಜಾಯಂತೇ" ಇತ್ಯಾದಿಶ್ರುತಿಪ್ರತಿಪಾದಿತವಾದ ಆತನ ಜಗತ್ಕಾರಣತ್ವವೂ, "ಅಹಂ ವೇದ್ಮಿ ಮಹಾತ್ಮಾನಂ ರಾಮಂ" "ಆ ರಾಮನ ಮಹಿಮೆಯನ್ನು ನಾನೇ ಬಲ್ಲೆನು" ಎಂದು ಹೇಳಿದ ವಿಶ್ವಾಮಿ

ತ್ರನ ವಾಕ್ಯಗಳಿಂದ ಪುರುಷಸೂಕ್ತದಲ್ಲಿ ಹೇಳಲ್ಪಟ್ಟ ಆತನ ಮಹಾಪುರುಷತ್ವವೂ, “ತ್ವಮನಾದಿರನಿರ್ದೇಶ್ಯಃ” ಇತ್ಯಾದಿವಾಕ್ಯಗಳಿಂದ, ಆತನ ಅಪ್ರಮೇಯಪ್ರಭಾವವೂ ಸೂಚಿಸಲ್ಪಟ್ಟಿರುವುವಲ್ಲದೆ, “ಅಧಿಕಂ ಮೇನಿರೇ ವಿಷ್ಣುಂ” ದೇವತೆಗಳೆಲ್ಲರೂ ಆಗ ವಿಷ್ಣುವನ್ನೇ ಮೇಲಾಗಿ ತಿಳಿದರು, ಇತ್ಯಾದಿವಾಕ್ಯಗಳಿಂದ,ಇತರದೇವತೆಗಳು ಯಾರೂ ಆತನಿಗೆ ಸಮಾನರಲ್ಲವೆಂದೂ ಸಾಧಿಸಲ್ಪಟ್ಟಿದೆ. ಇನ್ನು ಮುಂದೆ ಈ ಅಯೋಧ್ಯಾಕಾಂಡದಲ್ಲಿ, ಹೇಯಗುಣವಿರೋಧಿಗಳಾದ ಆತನ ಸುಗುಣಗಳೆಲ್ಲವೂ ವ್ಯಕ್ತಗೊಳಿಸಲ್ಪಡುವುವೆಂದು ಗ್ರಹಿಸಬೇಕು. ಮತ್ತು ಇದರ ಹಿಂದಿನ ಕಾಂಡದಲ್ಲಿ ಕಥಾಪ್ರತಿಪಾದ್ಯರಾದ ರಾಮಾದಿಗಳು,ಮುಂದೆ ನಡೆಸಬೇಕಾದ ಧರ್ಮಾನುಷ್ಠಾನಗಳಿಗೆ ಸಹಕಾರಿಗಳಾದ ಗುಣಗಳೂ (ಎಂದರೆ, ಮಹಾಕುಲೀನತೆ, ಗುರೂಪಾಸನಾಲಬ್ಧವಿದ್ಯಜ್ಞಾನಸಂಪತ್ತಿ,) ತಾಟಕಾದಿವಧೆ, ಶಿವಧನುರ್ಭಂಗ, ವಿಷ್ಣುಧನುರ್ಗ್ರಹಣ, ಮೊದಲಾದುವುಗಳಲ್ಲಿ, ಅವನಿಂದ ತೋರಿಸಲ್ಪಟ್ಟ ಅಸಾಧಾರಣಶಕ್ತಿಯೂ,ಧರ್ಮಪತ್ನೀಪರಿಗ್ರಹಣಾದಿಗಳೂ ಹೇಳಲ್ಪಟ್ಟಿರುವುವು. ಇನ್ನು ಮೇಲೆ ಈ ಅಯೋಧ್ಯಾಕಾಂಡದಲ್ಲಿ, ಆದರಿಂದ ಅನುಷ್ಠಿಸಲ್ಪಟ್ಟ ಪಿತೃವಚನಪರಿಪಾಲನಾದಿರೂಪಗಳಾದ ಸಾಮಾನ್ಯಧರ್ಮಗಳೂ, ಕ್ರಮವಾಗಿ ಲಕ್ಷ್ಮಣ ಭರತಶತ್ರುಘ್ನಾದಿಗಳನಡತೆಯಿಂದ ವ್ಯಕ್ತವಾಗುವ ಭಗವಚ್ಛೇಷತ್ವ, ಭಗವತ್ಪಾರತಂತ್ರ್ಯ, ಭಾಗವತಾಭಿಮಾನನಿಷ್ಠೆಗಳೆಂಬ ವಿಶೇಷಧರ್ಮಗಳೂ ಹೇಳಲ್ಪಡುವುವು. ಮತ್ತು ವಿಷ್ಣುವಿನ ಅಂಶಭೂತನಾದ ರಾಮನಿಗೆ ಬಾಲಕಾಂಡದಲ್ಲಿ ಸೀತಾಸ್ವರೂಪದಿಂದಿರುವ ಮಹಾಲಕ್ಷ್ಮಿಯ ಯೋಗವು ಹೇಳಲ್ಪಟ್ಟಿತು. ಈ ಅಯೋಧ್ಯಾಕಾಂಡದಲ್ಲಿ ಭೂದೇವಿಯ ಯೋಗವು ಹೇಳಲ್ಪಡುವುದು. ಹಿಂದಿನಕಾಂಡದಲ್ಲಿ ಆ ರಾಮನ ಪರತ್ವವು ಹೇಳಲ್ಪಟ್ಟಿರುವುದು. ಈ ಕಾಂಡದಲ್ಲಿ ಆತನ ಪರಮಸೌಲಭ್ಯವು ನಿರೂಪಿಸಲ್ಪಡುವುದು. ಹಿಂದಿನ ಕಾಂಡದಲ್ಲಿ ಲಕ್ಷ್ಮೀವಿಶಿಷ್ಟವಾದ ಪ್ರಾಪ್ಯಸ್ವರೂಪವು ಹೇಳಲ್ಪಟ್ಟಿತು. ಈ ಕಾಂಡದಲ್ಲಿ ಪ್ರಾಪಕವಾದ ಜೀವಸ್ವರೂಪವು ನಿರೂಪಿಸಲ್ಪಡುವುದೆಂದೂ ಗ್ರಹಿಸಬಹುದು. ಇವುಗಳಲ್ಲಿ ಮೊದಲು ಅತಿರಹಸ್ಯವಾಗಿ, ಅತ್ಯವಶ್ಯವಾಗಿ ತಿಳಿಯಬೇಕಾದ ಭಾಗವತಾಭಿಮಾನನಿಷ್ಠೆಯೆಂಬ ಧರ್ಮವನ್ನು ಎಂ

ದರೆ, ಭಗವದ್ಭಕ್ತರಲ್ಲಿರಬೇಕಾದ ದೃಢಾಭಿಮಾನವನ್ನು, ಶತ್ರುಘ್ನನ ಅನುಷ್ಠಾನದಿಂದ ಚೇತನರಿಗೆ ಬೋಧಿಸುವುದಕ್ಕಾಗಿ, ಈ ಕಾಂಡದ ಪ್ರಥಮ ಶ್ಲೋಕವನ್ನು "ಗಚ್ಛತಾ ಮಾತುಲಕುಲಂ ಭರತೇನ ತದಾನಘಃ | ಶತ್ರುಘ್ನೋ ನಿತ್ಯಶತ್ರುಘ್ನೋ ನೀತಃ ಪ್ರೀತಿಪುರಸ್ಕೃತಃ" ಇತ್ಯಾದಿವಾಕ್ಯಗಳಿಂದ ಆರಂಭಿಸಿರುವರು.

---

ಶ್ರೀಸೀತಾ ಲಕ್ಷ್ಮಣ ಭರತ ಶತ್ರುಘ್ನ ಹನುಮತ್ಸಮೇತ
ಶ್ರೀರಾಮಚಂದ್ರ ಪರಬ್ರಹ್ಮಣೇ ನಮಃ.

# ಶ್ರೀಮದ್ರಾಮಾಯಣವು

## ಅಯೋಧ್ಯಾಕಾಂಡವು.

---



ಭರತನು *ತನ್ನ ಮಾವನ ಮನೆಗೆ ಹೊರಟಾಗ, ತನಗೆ ಪರಮಪ್ರಿಯನಾಗಿಯೂ, ಪಾಪರಹಿತನಾಗಿಯೂ, ಯಾವಾಗಲೂ ಶತ್ರುರಾಜರನ್ನು ನಿಗ್ರಹಿಸತಕ್ಕ ಪರಾಕ್ರಮವುಳ್ಳವನಾಗಿಯೂ ಇದ್ದ ತಮ್ಮನಾದ ಶತ್ರುಘ್ನನನ್ನೂ ಸಂಗಡ ಕರೆದುಕೊಂಡು ಹೊರಟನು. ಹಾಗೆಯೇ ಶತ್ರುಘ್ನನೂ ಅಣ್ಣನಾದ ಭರತನಲ್ಲಿ ವಿಶೇಷ

---

* "ಗಚ್ಛತಾ ಮಾತುಲಕುಲಂ ಭರತೇನ ತದಾಽನಘಃ । ಶತ್ರುಘ್ನೋ ನಿತ್ಯಶತ್ರುಘ್ನೋ ನೀತಃ ಪ್ರೀತಿಪುರಸ್ಕೃತಃ ॥" ಎಂಬುದೇ ಇದಕ್ಕೆ ಮೂಲವು. ಇದರ ವಿಶೇಷಾರ್ಥಗಳೇನೆಂದರೆ:—ಇಲ್ಲಿ ಮುಖ್ಯವಾಗಿ ಭರತನಲ್ಲಿ ಶತ್ರುಘ್ನನಿಗಿರುವ ಪಾರತಂತ್ರ್ಯವು ಹೇಳಲ್ಪಡುವುದು. (ಗಚ್ಛತಾ) ಎಂದು ವರ್ತಮಾನಕಾಲವನ್ನು ಹೇಳಿರುವುದರಿಂದ, ಭರತಶತ್ರುಘ್ನರಿಬ್ಬರ ಗಮನವೂ ಏಕಕಾಲದಲ್ಲಿಯೇ ಉಂಟಾಯಿತೆಂದು ಸೂಚಿತವಾಗುವುದು. ಇದರಿಂದ ಭರತನು ಹೊರಟಕಾಲದಲ್ಲಿ, ಆತನು ಧರಿಸಿದ್ದ ಅಚೇತನಗಳಾದ ವಸ್ತ್ರಾಭರಣಗಳೂ, ಆಯುಧಗಳೂ ಅವನಿಗೆ ಅಧೀನಗಳಾಗಿ, ಆತನೊಡನೆ ಎಡಬಿಡದೆ ಉಯ್ಯಲ್ಪಡುತಿದ್ದಂತೆಯೇ, ಶತ್ರುಘ್ನನುಕೂಡ, ಆ ಭರತನಿಗೆ ವಿಶೇಷಪರತಂತ್ರನಾಗಿ, ಅವನೊ

ವಿಶ್ವಾಸವುಳ್ಳವನಾದುದರಿಂದ, ಅವನನ್ನು ಹಿಂಬಾಲಿಸಿ ಹೋಗುವ ವಿಷಯದಲ್ಲಿ ಅತ್ಯುತ್ಸಾಹವುಳ್ಳವನಾಗಿಯೇ ಹೊರಟನು. ಭರತನು ತನ್ನ ಮಾವನ

---

ಡನೆಯೇ ಹೋಗುತಿದ್ದನೆಂದು ತದೇಕಪಾರತಂತ್ರ್ಯವು ಸೂಚಿಸಲ್ಪಡುವುದು. (ಮಾತುಲಕುಲಂ) ದ್ವಿತೀಯಾಂತವಾದ ಈ ಪದದಿಂದ, ಭರತನಿಗೆ ಉದ್ದೇಶ್ಯವಾದ ಸ್ಥಾನವೇ ಶತ್ರುಘ್ನನಿಗೂ ಉದ್ದೇಶ್ಯವಾಯಿತೆಂದು ಸೂಚಿಸಲ್ಪಡುವುದು. ಇದರಿಂದ ಶೇಷಿಯಾದವನಿಗೆ (ತನ್ನ ಸ್ವಾಮಿಯಾದವನಿಗೆ) ಯಾವುದುದ್ದೇಶ್ಯವೋ, ಶೇಷಭೂತನಾದವನಿಗೂ (ಆ ಸ್ವಾಮಿಗೆ ಅಧೀನವಾದ ವಸ್ತುವಿನಂತೆ ಅವನಲ್ಲಿ ವಿಧೇಯನಾಗಿರುವವನಿಗೂ) ಅದೇ ಉದ್ದೇಶ್ಯವಾಗಿರುವುದೆಂಬ ಪಾರತಂತ್ರ್ಯಸ್ವರೂಪದ ಸೂಕ್ಷ್ಮಾಂಶವು ಸೂಚಿತವಾಗುವುದು. (ಭರತೇನ) ಈ ಶಬ್ದದಿಂದ ಭಗವಂತನಿಗೆ ಪರತಂತ್ರನಾಗಿರುವನೆಂಬ ಭಾಗವತತ್ವವು ಸೂಚಿತವಾಗುವುದು, ಹೇಗೆಂದರೆ:—ಶ್ರೀರಾಮನು ವನವಾಸಕ್ಕಾಗಿ ಹೊರಟಾಗ, ಲಕ್ಷ್ಮಣನೂ ಅವನನ್ನು ಹಿಂಬಾಲಿಸಿ ಹೊರಡಲು, ಇತ್ತಲಾಗಿ ದಶರಥನು ರಾಮವಿರಹದಿಂದ ಮೃತಿಹೊಂದಲು, ರಾಜ್ಯವು ಅನಾಯಕವಾಗಿ ಹೋಗುತಿದ್ದ ಸ್ಥಿತಿಯಲ್ಲಿ, ತಾನು ಆರಾಜ್ಯವನ್ನು ವಹಿಸಿಕೊಂಡು ಆಳಿದುದರಿಂದ, ಈತನಿಗೆ ಭರತನೆಂದು ಹೆಸರು. ಕೇವಲ ರಾಮಾಜ್ಞೆಯನ್ನೇ ಶಿರಸಾವಹಿಸಿ, ಆತನ ಪಾದುಕೆಗಳನ್ನು ಮುಂದಿಟ್ಟುಕೊಂಡು ರಾಜ್ಯವನ್ನು ವಹಿಸಿದವನೆಂಬ ಭಗವತ್ಪರತಂತ್ರಸ್ವರೂಪವಾದ ಭಾಗವತತ್ವವು ಇಲ್ಲಿ ಸೂಚಿತವಾಗಿದೆ. (ತದಾ) ಎಂದರೆ 'ಆಗಲೇ, ಎಂದರ್ಥವು. ಶತ್ರುಘ್ನನು ತನಗೆ ಅನುಕೂಲಗಳಾದ ಚಂದ್ರತಾರಾಬಲಗಳೊಂದನ್ನೂ ನಿರೀಕ್ಷಿಸದೆ, ಭರತನು ಹೊರಟಾಗಲೇ ಹೊರಟನೆಂಬ ಪಾರತಂತ್ರ್ಯ ವಿಶೇಷವು ಹೇಳಲ್ಪಟ್ಟಿರುವುದು. (ಅನಘಃ) ಪಾಪರಹಿತನು ಈಸಂದರ್ಭದಲ್ಲಿ ಅಘಶಬ್ದಕ್ಕೆ ಕೇವಲರಾಮಭಕ್ತಿಯೆಂದೇ ಗ್ರಹಿಸಬೇಕು. ತನಗೆ ಶೇಷಿ (ಸ್ವಾಮಿ) ಯಾದ ಭರತನಿಗೆ, ರಾಮಭಕ್ತಿಯೇ ಮುಖ್ಯೋದ್ದೇಶ್ಯವಾಗಿರುವುದರಿಂದ, ಶತ್ರುಘ್ನನಿಗೂ ಅದೇ ಉದ್ದೇಶ್ಯವಾಗಿರುವುದೇಹೊರತು, ಭರತನಿಗೆ ಆ ರಾಮಭಕ್ತಿಯು ಉದ್ದೇಶ್ಯವಲ್ಲದಿದ್ದರೆ ಶತ್ರುಘ್ನನಿಗೂ ಉದ್ದೇಶ್ಯವಾಗದು, ಮತ್ತು ಅನಿಷ್ಟಾವಹವೂ ಆಗುವುದು. ಅನಿಷ್ಟಾವಹವಾದುದೇ ಪಾಪವೆನಿಸುವುದು. ''ನ ಸುಕೃತಂ ನ ದುಷ್ಕೃತಂ ಸರ್ವೇ ಪಾಪ್ಮಾನೋಽತೋ ನಿವರ್ತನ್ತೇ"ಇತ್ಯಾದಿಶ್ರುತಿಗಳಲ್ಲಿ ಹೇಳಲ್ಪಟ್ಟಿರುವಂತೆ, ಮೋಕ್ಷಾಪೇಕ್ಷೆಯುಳ್ಳವನಿಗೆ ಸುಕೃತವಾದರೂ ಅನಿಷ್ಟಾವಹವೇ ಆಗುವುದೆಂದು ಹೇಳಲ್ಪಟ್ಟಿರುವುದರಿಂದ, ರಾಮಭಕ್ತಿಯು ಸುಕೃತವೇ ಆಗಿದ್ದರೂ, ಭರತನಿಗೆ ಅದು ಉದ್ದೇಶ್ಯವಲ್ಲದಿದ್ದರೆ, ಅವನಿಗೆ ಶೇಷಭೂತನಾದ ಶತ್ರುಘ್ನನಿಗೂ ಅದು ಅನಿಷ್ಟಾವಹವಾಗಿ, ಪಾಪವಾಗಿಯೇ ಆಗುವುದು. ಅಂತಹ ಪಾಪವಿಲ್ಲದವನೇ ಶತ್ರುಘ್ನನೆಂದು ಭಾವವು. ಇದರಿಂದ

ಪಟ್ಟಣವನ್ನು ಸೇರಿದೊಡನೆ, ಅವನಿಂದ ಅನೇಕವಿಧದಲ್ಲಿ ಸತ್ಕರಿಸಲ್ಪಟ್ಟುದಲ್ಲದೆ, ತನ್ನ ತಮ್ಮನಾದ, ಶತ್ರುಘ್ನನ ಸಹವಾಸಸೌಖ್ಯದಿಂದ ಇನ್ನೂ ವಿಶೇಷ ಸಂತೋಷವುಳ್ಳವನಾಗಿ ಸುಖದಿಂದಿರುತಿದ್ದನು. ಅಶ್ವಪತಿಯಾದ

---

ಶತ್ರುಘ್ನನಿಗೆ ರಾಮನಲ್ಲಿರುವುದಕ್ಕಿಂತಲೂ ಭರತನಲ್ಲಿಯೇ ಭಕ್ತಿಯು ಹೆಚ್ಚೆಂಬುದೂ, ಆ ರಾಮಭಕ್ತಿವಿಷಯದಲ್ಲಿಯೂ ಶತ್ರುಘ್ನನು ಭರತನನ್ನೇ ಮುಂದಿಟ್ಟುಕೊಂಡು, ಅವನನ್ನೇ ಹಿಂಬಾಲಿಸಿ ರಾಮಸೇವೆಯನ್ನು ಮಾಡುತ್ತಿದ್ದನೆಂಬುದೂ ಸೂಚಿತವಾಗುವುದು. ಇದೇ ಅರ್ಥಗಳು ''ನಾಹಂ ಸ್ವಪಿಮಿ ಜಾಗರ್ಮಿ ತಮೇವಾರ್ಯಂ ವಿಚಿಂತಯನ್" ಎಂದೂ, ''ಜಗ್ರಾಹ ಭರತೋ ರಶ್ಮೀನ್ ಶತ್ರುಘ್ನಶ್ಛತ್ರಮಾದದೇ" ಎಂದೂ, ಮುಂದೆ ಹೇಳಲ್ಪಡುವ ವಿಷಯಗಳಿಂದ ಸ್ಪಷ್ಟವಾಗುವುದು. ಇದರಂತೆಯೇ (ನಿತ್ಯಶತ್ರುಘ್ನಃ) ನಿತ್ಯಶತ್ರುಗಳನ್ನು ನಿಗ್ರಹಿಸಿದವನು. ಎಂದರೆ, ಇಂದ್ರಿಯಗಳನ್ನು ನಿಗ್ರಹಿಸಿದವನೆಂದರ್ಥವು. ಈತನು ಇಂದ್ರಿಯಗಳನ್ನು ನಿಗ್ರಹಿಸಿದುದೂ, ರಾಮಭಕ್ತಿವಿಷಯದಲ್ಲಿಯೇ ಎಂದು ಗ್ರಹಿಸಬೇಕು. ಹೇಗೆಂದರೆ.''ಪುಂಸಾಂ ದೃಷ್ಟಿಚಿತ್ತಾಪಹಾರಿಣಂ" ಎಂಬುದಾಗಿ, ರಾಮನು ಗಂಡಸರಿಗೂ ಮೋಹಕನಾಗಿರುವುದರಿಂದ, ಆತನಲ್ಲಿ ತನ್ನ ಇಂದ್ರಿಯಗಳು ಲಯಿಸದಿರುವಂತೆ ಅವುಗಳನ್ನು ಈ ಶತ್ರುಘ್ನನು ನಿಗ್ರಹಿಸಿರುವನೆಂದು ಭಾವವು. ಶತ್ರುಘ್ನನು, ಸಾಕ್ಷಾತ್ತಾಗಿ ರಾಮನಲ್ಲಿಯೇ ಭಕ್ತಿಮಾಡುವುದಕ್ಕೆ ತನಗೆ ಅಧಿಕಾರವಿಲ್ಲವೆಂಬುದನ್ನು ತಿಳಿದು, ಆತನಕಡೆಗೆ ಆಕರ್ಷಿಸಲ್ಪಡಬಹುದಾದ ತನ್ನ ಇಂದ್ರಿಯಗಳನ್ನೂ ನಿಗ್ರಹಿಸಿ, ಭರತನಿಗೆ ಪರತಂತ್ರನಾಗಿದ್ದನೆಂಬ ಭಾಗವತಪಾರತಂತ್ರ್ಯವು ತಿಳಿಸಲ್ಪಡುವುದು. (ಪ್ರೀತಿಪುರಸ್ಕೃತಃ) ಶತ್ರುಘ್ನನು ಭರತನನ್ನು ಹಿಂಬಾಲಿಸಿ ಹೋದುದಕ್ಕೂ, ಆತನ ಪ್ರೀತಿಯೇ ಮುಖ್ಯಕಾರಣವೇಹೊರತು, ತನ್ನ ಅಣ್ಣನ ನಿರ್ಬಂಧಕ್ಕೆ ಕಟ್ಟುಬಿದ್ದು ಹೋದವನಲ್ಲವೆಂದಭಿಪ್ರಾಯವು. ಅಚೇತನಗಳಾದ ಆಯುಧಾದಿಗಳಂತೆಯೇ ಚೇತನನಾದವನಿಗೂಕೂಡ, ತನ್ನ ಸ್ವಾಮಿಯಲ್ಲಿ ಪಾರತಂತ್ರ್ಯವಿರಬೇಕಾದುದು ಧರ್ಮವಾಗಿದ್ದರೂ, ಅಚೇತನಗಳಿಗೆ ಪ್ರೀತಿಯೆಂಬ ಗುಣವಿಲ್ಲವು. ಚೇತನರಲ್ಲಿ ಆ ಪ್ರೀತಿಯೆಂಬುದೊಂದು ವಿಶೇಷಗುಣವುಂಟಲ್ಲವೆ? ಈ ಶತ್ರುಘ್ನನಲ್ಲಿರುವ ಪ್ರೀತಿಯು ಪಾರತಂತ್ರ್ಯವನ್ನು ಇನ್ನೂ ಹೆಚ್ಚಾಗಿ ವಿಶೇಷಿಸಿತೆಂದು ಭಾವವು. (ನೀತಃ) ಉಯ್ಯಲ್ಪಟ್ಟನು. ಇಲ್ಲಿ 'ಹೋದನು' ಎಂದು ಹೇಳದೆ, ಉಯ್ಯಲ್ಪಟ್ಟನು ಎಂದು ಹೇಳಲ್ಪಟ್ಟಿರುವುದರಿಂದ, ಆಯುಧಾದಿಗಳಂತೆ ಈ ಶತ್ರುಘ್ನನೂ ಸಾಗಿಸಲ್ಪಟ್ಟನೇಹೊರತು, ತಾನೇ ಸ್ವತಂತ್ರಿಸಿ ಹೋಗುತಿದ್ದವನಲ್ಲ. ಇದರಿಂದ ಅಚೇತನಗಳಲ್ಲಿರುವಷ್ಟು ಪಾರತಂತ್ರ್ಯವು ಸೂಚಿತವಾಗುವುದು. ಈ ಮೇಲಿನ ಅರ್ಥಗಳಿಂದ ಚೇತನನಾದವನಿಗೆ ಶತ್ರುಘ್ನನಲ್ಲಿರುವಂತೆಯೇ ಭಾಗವತಪಾರತಂತ್ರ್ಯವಿರಬೇಕೆಂದು ವ್ಯಕ್ತವಾಗುವುದು.

ಯುಧಾಜಿತ್ತೂ ಕೂಡ, ತನ್ನ ಸೋದರಳಿಯನಾದ ಭರತನನ್ನೂ, ಶತ್ರುಘ್ನ ನನ್ನೂ ಸಮದೃಷ್ಟಿಯಿಂದ ನೋಡುತ್ತ, ಅವರನ್ನು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಂತೆಯೇ ಭಾವಿಸಿ, ಅವರವರ ಇಷ್ಟಾನುಸಾರವಾದ ಆಹಾರವಸ್ತ್ರಾಭರಣಗಳನ್ನು ಕೊಟ್ಟು, ಬಹುಪ್ರೇಮದಿಂದ ಲಾಲಿಸುತಿದ್ದನು. ಬಹುರಮಣೀಯವಾದ ಆ ಪಟ್ಟಣದಲ್ಲಿ ಈ ರಾಜಕುಮಾರರಿಬ್ಬರೂ ತಮಗೆ ಬೇಕುಬೇಕಾದ ಸೌಖ್ಯಸಮೃದ್ಧಿಗಳನ್ನನುಭವಿಸುತ್ತ ಸುಖದಿಂದಿರುತಿದ್ದರು. ಅಶ್ವಪತಿಯು ಇಷ್ಟವಾದ ವಸ್ತುಗಳೆಲ್ಲವನ್ನೂ ಕೊಟ್ಟು ಅವರನ್ನು ಬಹುಪ್ರೀತಿಯಿಂದ ಪೋಷಿಸುತಿದ್ದರೂ ಅವರು ಇತ್ತಲಾಗಿ ತಮ್ಮ ತಂದೆಯಾದ ದಶರಥನನ್ನೇ ಆಗಾಗ ಸ್ಮರಿಸಿಕೊಳ್ಳುತ್ತ, "ಆಹಾ! ನಮ್ಮ ತಂದೆಯು ಬಹಳವೃದ್ಧನಾದನು! ಇನ್ನು ರಾಜ್ಯವನ್ನು ನಿರ್ವಹಿಸಲಾರನು! ಈಗಲಾದರೂ ರಾಮನನ್ನು ಯುವರಾಜನನ್ನಾಗಿ ಮಾಡಿರಬಹುದೆ? ಈಗ ನಾವು ವೃದ್ಧನಾದ ತಂದೆಯ ಶುಶ್ರೂಷೆಯನ್ನು ಮಾಡದೆ ಇಲ್ಲಿರುವೆವಲ್ಲ!" ಎಂದು ಆಗಾಗ ಚಿಂತಿಸುತ್ತಿರುವರು. ಅತ್ತಲಾಗಿ ಮಹಾತೇಜಸ್ವಿಯಾದ ದಶರಥನೂ ಕೂಡ, ಸಾಕ್ಷಾನ್ಮಹೇಂದ್ರವರುಣರಂತೆ ಮಹಿಮೆಯುಳ್ಳವರಾಗಿಯೂ, ಪರಸ್ಪರಪ್ರೇಮದಿಂದ ಎಡೆಬಿಡದವರಾಗಿಯೂ ಇರುವ ತನ್ನ ಮುದ್ದುಮಕ್ಕಳಾದ ಭರತಶತ್ರುಘ್ನರಿಬ್ಬರೂ ಹೀಗೆ ದೇಶಾಂತರಗತರಾಗಿರಲು, ಆಗಾಗ ಅವರನ್ನು ಜ್ಞಾಪಿಸಿಕೊಳ್ಳುತ್ತ, "ಆಹಾ! ಎಷ್ಟು ಭಾಗ್ಯಸಮೃದ್ಧಿಯಿದ್ದರೇನು? ಆ ಮಕ್ಕಳಿಬ್ಬರೂ ಸಮೀಪದಲ್ಲಿಲ್ಲದುದೇ ಒಂದು ದೊಡ್ಡ ಚಿಂತೆಯಾಗಿದೆ." ಎಂದು ಬಾರಿಬಾರಿಗೂ ಚಿಂತಿಸಿಕೊರಗುತ್ತಿರುವನು. ದಶರಥರಾಜನಿಗೆ ಪುರುಷಸಿಂಹರೆನಿಸಿಕೊಂಡ ಆ ನಾಲ್ವರು ಕುಮಾರರೂ, ದೇಹದಲ್ಲಿ ಹುಟ್ಟಿದ ನಾಲ್ಕು ತೋಳುಗಳಂತೆ ಸಮಾನವಾದ ಪ್ರೀತಿಗೆ ಪಾತ್ರರಾಗಿದ್ದರು. ಅದರಲ್ಲಿಯೂ ಮುಖ್ಯವಾಗಿ ರಾಮನು, ಸಮಸ್ತಭೂತಗಳಲ್ಲಿಯೂ ಬ್ರಹ್ಮನು ಹೇಗೋ ಹಾಗೆ, ಆ ನಾಲ್ವರಲ್ಲಿ ವಿಶೇಷವಾದ ಗುಣಗಳಿಂದಲೂ, ತೇಜಸ್ಸಿನಿಂದಲೂ ಶೋಭಿಸುತ್ತ, ತಂದೆಯ ಅಸಾಧಾರಣಪ್ರೀತಿಗೆ ಪಾತ್ರನಾಗಿದ್ದನು. ಆ ರಾಮನಾದರೂ ಸಾಮಾನ್ಯನೆ? *ಗರ್ವದಿಂದ ಕೊಬ್ಬಿ ತ್ರೈಲೋಕ್ಯವನ್ನೂ ಗೋಳಾಡಿಸುತ್ತಿರುವ

---

* ಸಹಿ ದೇವೈರುದೀರ್ಣಸ್ಯ ರಾವಣಸ್ಯ ವಧಾರ್ಥಿಭಿಃ । ಅರ್ಥಿತೋ ಮಾನುಷೇ ಲೋಕೇ ಜಜ್ಞೇ ವಿಷ್ಣುಸ್ಸನಾತನಃ॥ ಎಂಬುದೇ, ಇದಕ್ಕೆ ಮೂಲವು. (ಸಹಿ) ಅಂತವನೆಂದರೆ,

## ರಾವಣನನ್ನು ಕೊಲ್ಲಿಸುವುದಕ್ಕಾಗಿ, ದೇವತೆಗಳೆಲ್ಲರೂ ಬಂದು ಪ್ರಾರ್ಥಿಸಿದುದು

''ಅಜಾಯಮಾನೋ ಬಹುಧಾ ವಿಜಾಯತೇ" ಇತ್ಯಾದ್ಯುಪನಿಷತ್ತುಗಳಲ್ಲಿ ಪ್ರಸಿದ್ಧನಾದವನೆಂದು ಭಾವವು. (ದೇವೈಃ) 'ದೀವ್ಯತಿ' ಎಂದರೆ ಕೋರುವುದು. ದೇವತೆಗಳು ಭಾಗವತಾಗ್ರಣಿಗಳಂತೆ ಅನನ್ಯಪ್ರಯೋಜನರಾಗಿ ಭಗವಚ್ಛರಣಾಗತಿಯನ್ನು ಮಾಡಿದವರಲ್ಲ. ಮತ್ತೇನೆಂದರೆ, ರಾಕ್ಷಸಾದಿವಧವನ್ನು ಕೋರಿಯೇ ಭಗವಚ್ಛರಣಾಗತಿಯನ್ನು ಮಾಡಿದವರಾದುದರಿಂದ ಪ್ರಯೋಜನಾಂತರಪರರೆಂದರ್ಥವು. ಮತ್ತು 'ದೀವ್ಯತಿ' ಎಂದರೆ ಮದಿಸುವವನೆಂಬ ಅರ್ಥವೂ ಇರುವುದರಿಂದ, ಈಶ್ವರೋಹಮಹಂಭೋಗೀ" ಇತ್ಯಾದಿಪ್ರಕಾರವಾಗಿ, 'ತಾನೇ ಈಶ್ವರನು, ತಾನೇ ಭೋಗಿಯು' ಎಂಬ ದುರಭಿಮಾನವುಳ್ಳವರೆಂದೂ ಭಾವವು. ಇದಕ್ಕೆ ನಿದರ್ಶನರೂಪವಾಗಿ, ದೇವತೆಗಳು ನರಕಾಸುರನ ವಧಕ್ಕಾಗಿ ಕೃಷ್ಣನಲ್ಲಿ ಶರಣಾಗತಿಯನ್ನು ಮಾಡಿ, ಆ ಸ್ವಕಾರ್ಯವು ಸಿದ್ಧಿಸಿದಮೇಲೆ ಪಾರಿಜಾತಕ್ಕಾಗಿ ಆ ಕೃಷ್ಣನೊಡನೆಯೇ ಹೋರಾಡಿದವರಲ್ಲವೆ? ಹೀಗೆ ಮದಾಂಧರಾದವರೆಂದು ಭಾವವು. (ಉದೀರ್ಣಸ್ಯ ರಾವಣಸ್ಯ ವಧಾರ್ಥಿಭಿಃ) ಗರ್ವದಿಂದ ಕೊಬ್ಬಿ, ಮೂರುಲೋಕಗಳನ್ನೂ ನಾಶಮಾಡುತ್ತ, ತನಗೆ ವರಕೊಟ್ಟ ದೇವತೆಗಳನ್ನೇ ರಾಜ್ಯಚ್ಯುತರನ್ನಾಗಿ ಮಾಡಲೆಳಸಿದ ರಾವಣನನ್ನು ಕೊಲ್ಲಿಸಬೇಕೆಂದು ಕೋರಿಬಂದ ದೇವತೆಗಳಿಂದ(ಅರ್ಥಿತಃ)ಪ್ರಾರ್ಥಿಸಲ್ಪಟ್ಟವನಾಗಿ. ಆ ಪ್ರಾರ್ಥನೆಗಾಗಿಯೇ ವಶ್ಯನಾದನೇ ಹೊರತು ಉಪಾಸಿಸಲ್ಪಟ್ಟವನಲ್ಲವೆಂದು ಭಗವಂತನ ಸೌಲಭ್ಯವು ಸೂಚಿತವಾಗುವುದು. (ಮಾನುಷೇ ಲೋಕೇ) ಮನುಷ್ಯಲೋಕದಲ್ಲಿ ಎಂಬುದರಿಂದ, ಈ ಭೂಲೋಕದಲ್ಲಿರುವ ಮನುಷ್ಯಗಂಧವನ್ನೇ ಸಹಿಸಲಾರದುದಕ್ಕಾಗಿ,ಕೆಳಕ್ಕೆ ಬಾರದೆ, ಮೇಲೆ ಯೋಜನದೂರದಲ್ಲಿಯೇ ಇದ್ದುಕೊಂಡು, ಯಾಗಗಳಲ್ಲಿ ಹವಿಸ್ಸುಗಳನ್ನು ಗ್ರಹಿಸತಕ್ಕ ದೇವತೆಗಳೂಕೂಡ ಯಾವನಿಗೆ ಮನುಷ್ಯಪ್ರಾಯರಾಗಿರುವರೋ, ಅಂತಹ ಪರಮಾತ್ಮನೂಕೂಡ, ತನ್ನ ಸೌಭಾಗ್ಯಾತಿಶಯದಿಂದ ಅಷ್ಟು ಹೀನವಾದ ಮನುಷ್ಯಲೋಕದಲ್ಲಿ ಅವತರಿಸಿದನೆಂದು ಭಾವವು. (ಜಜ್ಞೇ) ನೃಸಿಂಹಾದಿಗಳಂತೆ ಸ್ತಂಭಾದಿಗಳಿಂದ ಹೊರಟು ಬಂದವನಲ್ಲ. ಮನುಷ್ಯರು ಹತ್ತುತಿಂಗಳವರೆಗೆ ಮಾತ್ರವೇಗರ್ಭದಲ್ಲಿ ಬಳೆದು ಹುಟ್ಟುವರು. ''ತತೋ ಚ ದ್ವಾದಶೇ ಮಾಸೇ" ಎಂಬಂತೆ ಇನ್ನೂ ಎರಡುತಿಂಗಳಕಾಲ ಹೆಚ್ಚಾಗಿ ಮನುಷ್ಯಗರ್ಭದಲ್ಲಿದ್ದು ಹುಟ್ಟಿದವನೆಂದರ್ಥವು. (ವಿಷ್ಣುಃ) ಸರ್ವವ್ಯಾಪಕನಾದವನು. (ಸನಾತನಃ) ಕೊನೆಮೊದಲಿಲ್ಲದೆ ನಿತ್ಯವಸ್ತುವಾದವನು. (ಜಜ್ಞೇ) ಹುಟ್ಟಿದನು. ಎಂಬುದರಿಂದ, ತಾನು ಸರ್ವವ್ಯಾಪಕನಾಗಿದ್ದರೂ, ತನ್ನ ವ್ಯಾಪ್ಯವಸ್ತುಗಳಲ್ಲಿ ಏಕದೇಶವಾದ ದಶರಥನಿಗೆ ತನ್ನ ಮಗನೆಂಬ ಅಭಿಮಾನಕ್ಕೆ ಪಾತ್ರನಾಗಿದ್ದನೆಂದೂ, ನಿತ್ಯವಸ್ತುವಾಗಿದ್ದರೂ ತನಗೆತಾನೇ ಜನ್ಮಾದಿಗಳನ್ನುಂಟುಮಾಡಿಕೊಂಡನೆಂದೂ ಅಭಿಪ್ರಾಯವು.

ದರಮೇಲೆ, ಸರ್ವಾಂತರ್ಯಾಮಿಯಾಗಿ, ನಿತ್ಯವಸ್ತುವೆನಿಸಿದ ಸಾಕ್ಷಾನ್ನಾರಾಯ ಣನೇ ರಾಮರೂಪದಿಂದ ಈ ಮನುಷ್ಯಲೋಕದಲ್ಲಿ ಅವತರಿಸಿರುವನಲ್ಲವೆ ಹೀಗಿರುವಾಗ ಆತನ ಗುಣಾತಿಶಯಗಳನ್ನು ಹೇಳತಕ್ಕುದೇನ? ತಂದೆಯ ಪ್ರೀತಿಯೂ ಹಾಗಿರಲಿ! ಆತನ ತಾಯಿಯಾದ ಕೌಸಲ್ಯೆಯೂಕೂಡ, ವಜ್ರಪಾಣಿಯಾದ ಇಂದ್ರನೊಡನೆ ಅದಿತಿಯು ಹೇಗೋ ಹಾಗೆ ಮಹಾತೇಜಸ್ವಿಯಾದ ಆ ರಾಮನೊಡಗೂಡಿ ಪ್ರಕಾಶಿಸುತ್ತಿರುವಳು. ಆ ರಾಮನು ಸ್ವಾಭಾವಿಕವಾಗಿಯೇ ಅತ್ಯುತ್ತಮವಾದ ರೂಪವುಳ್ಳವನು. ಔದಾರ್ಯಾದಿ ಗುಣಗಳೆಲ್ಲವೂ ಆತನಲ್ಲಿ ಪರಿಪೂರ್ಣವಾಗಿ ತುಂಬಿರುವುವು. ಮಹಾವೀರ್ಯವುಳ್ಳವನು. ಗುಣಗಳಲ್ಲಿಯೂ ದೋಷಗಳನ್ನೇ ಹುಡುಕುವ ಅಸೂಯೆಯೆಂಬ ದುರ್ಗುಣವು ಆತನಲ್ಲಿ ಲೇಶಮಾತ್ರವಾದರೂ ಇಲ್ಲ. ಭೂಲೋಕದಲ್ಲಿ ಎಲ್ಲಿ ಹುಡುಕಿದರೂ ಇಂತಹ ಪುತ್ರರತ್ನವು ಇದುವರಿಗೆ ಜನಿಸಿದುದಿಲ್ಲ. ಒಂದು ದೀಪದಿಂದ ಹತ್ತಿಸಿಟ್ಟ ಮತ್ತೊಂದು ದೀಪದಂತೆ, ತಂದೆಯಾದ ದಶರಥನಲ್ಲಿ ಕಾಣುವ ರೂಪಾದಿಗುಣಗಳೆಲ್ಲವೂ ಈತನಲ್ಲಿ ತುಂಬಿರುವುವು. ಈತನಲ್ಲಿ ಕೋಪವೆಂಬುದು ಸ್ವಲ್ಪಮಾತ್ರವೂ ಇಲ್ಲ. ಯಾವಾಗಲೂ ಶಾಂತಸ್ವಭಾವವುಳ್ಳವನು. ಆದುದರಿಂದಲೇ ಆತನೊಡನೆ ಯಾರೂ ಪರುಷವಾಗಿ ಮಾತನ್ನಾಡುವುದಿಲ್ಲ. ಒಂದುವೇಳೆ ಯಾರಾದರೂ ತನ್ನೊಡನೆ ಕ್ರೂರವಾಕ್ಯಗಳನ್ನಾಡಿದರೂ, ತಾಳ್ಮೆಯಿಂದಲೇ ಅವರಿಗೆ ಪ್ರತ್ಯುತ್ತರವನ್ನು ಕೊಡುವನು. ಯಾವಾಗಲೂ ಬಹುಮೃದುವಾದ ಮಾತುಗಳನ್ನಾಡತಕ್ಕವನು. ಯಾರಾದರೂ ಒಬ್ಬರು, ಪಿನೋದಾರ್ಥವಾಗಿಯಾಗಲಿ, ಫಲಾಪೇಕ್ಷೆಯಿಂದಾಗಲಿ, ಉಪೇಕ್ಷೆಯಿಂದಾಗಲಿ, ನಿರ್ಬಂಧಕ್ಕಾಗಲಿ, ಮನಸ್ಸಿಲ್ಲದೆಯಾಗಲಿ, ಒಂದಾವರ್ತಿ ತನಗೆ ಯಾವುದೋ ಒಂದುಪಕಾರವನ್ನು ಮಾಡಿದ್ದರೆ, ಅದು ಅತಿಸ್ವಲ್ಪವಾಗಿದ್ದರೂ, ಆ ಒಂದುಪಕಾರವನ್ನೇ ಮಹತ್ತಾಗಿ ಭಾವಿಸಿ, ಯಾವಾಗಲೂ ಅದನ್ನು ಮರೆಯದೆ ಸಂತೋಷಿಸುತ್ತಿರುವ ಸ್ವಭಾವವುಳ್ಳವನು. ಮತ್ತು ಆತನು ಕಾಮಕ್ರೋಧಾದಿಗಳೆಲ್ಲವನ್ನೂ ತಲೆಯೆತ್ತದಹಾಗೆ ಅಡಗಿಸಿಟ್ಟು, ಮನಸ್ಸನ್ನು ವಶಪಡಿಸಿಕೊಂಡಿರುವ ಮಹಾಜ್ಞಾನಿಯಾದುದರಿಂದ, ತನ್ನ ವಿಷಯದಲ್ಲಿ ಯಾರು ಎಷ್ಟೆಷ್ಟು ಅಪಕಾರಗಳನ್ನು ಮಾಡಿದ್ದರೂ, ಅದನ್ನು ಮನಸ್ಸಿನಲ್ಲಿ

ಯಾವರೂ ಎಣಿಸತಕ್ಕವನಲ್ಲ. ಆತನು ಯಾವಕಾಲದಲ್ಲಿಯೇ ಆಗಲಿ, ಕೊನೆಗೆ ಶಸ್ತ್ರಾಭ್ಯಾಸವನ್ನು ಮಾಡುತ್ತಿರುವಾಗಲೂ, ನಡುನಡುವೆ ಅವಕಾಶ ಸಿಕ್ಕಿದಾಗ, ಸಜ್ಜನರೊಡನೆ ಕಲೆತು ಮಾತಾಡುತ್ತಿರುವನು. ಒಳ್ಳೇ ಸದಾಚಾರಸಂಪನ್ನರಾದವರು ಸಿಕ್ಕಿದಾಗ, ಅವರೊಡನೆ ಸೇರಿ ಅತಿಸೂಕ್ಷ್ಮಗಳಾದ ಆಚಾರಧರ್ಮಗಳನ್ನು ವಿಚಾರಿಸುತ್ತಿರುವನು. ಜ್ಞಾನವೃದ್ಧರಾದವರು ಸಿಕ್ಕಿದಾಗ ಅವರೊಡನೆ ಕಲೆತು ವೇದಾಂತವಿಚಾರಗಳನ್ನು ಚರ್ಚಿಸುತ್ತಿರುವನು. ವಯೋವೃದ್ಧರೊಡನೆ ಕಲೆತು ಪರಂಪರಾಗತವಾದ ಪೂರ್ವಸಂಪ್ರದಾಯವಿಶೇಷಗಳನ್ನು ಕೇಳಿ ತಿಳಿಯುತ್ತಿರುವನು. ಸತ್ಸಹವಾಸವಿಲ್ಲದೆ ಒಂದು ನಿಮಿಷಮಾತ್ರವಾದರೂ ಆತನ ಮನಸ್ಸು ನಿಲ್ಲದು. ಆತನು ಅತಿಸೂಕ್ಷ್ಮವಾದ ಬುದ್ಧಿವಿಕಾಸವುಳ್ಳವನಾದುದರಿಂದ, ಸಮಸ್ತಜನಗಳನ್ನೂ ಸುಖಪಡಿಸುವುದಕ್ಕೆ ಉಪಾಯವೇನೆಂಬುದು ಯಾವಾಗಲೂ ಲೋಕರಕ್ಷಣಚಿಂತಾಪರನಾಗಿಯೇ ಇರುವನು. ಕಿವಿಗಿಂಪಾದ ಆತನ ಮಾತುಗಳು ಯಾರ ಮನಸ್ಸನ್ನೂ ಆಕರ್ಷಿಸುವುವು. ಅತ್ಯಲ್ಪನಾದವನನ್ನೂ ಕೂಡ, ಸೌಲಭ್ಯದಿಂದ ತಾನೇ ಮಾತಾಡಿಸಿಕೊಂಡು ಹೋಗುವನು. ಆವನು ಆಡತಕ್ಕ ಮಾತುಗಳೆಲ್ಲವೂ ಸರ್ವಜನಪ್ರಿಯವಾಗಿರುವುವು. ಆಶ್ರಿತವಿರೋಧಿಗಳನ್ನು ಹುಟ್ಟಡಗಿಸತಕ್ಕ ಮಹಾವೀರ್ಯವುಳ್ಳವನು. ಅಷ್ಟು ವೀರ್ಯವುಳ್ಳವನಾಗಿದ್ದರೂ, ತನ್ನ ವೀರ್ಯವನ್ನು ನೋಡಿ ತಾನೇ ಹಿಗ್ಗುವವನಲ್ಲ. ಆತನು ವಿಶೇಷವಿದ್ವತ್ತ್ವವುಳ್ಳವನಾದುದರಿಂದ, ಅನೃತಾರ್ಥವನ್ನು ಹೇಳುವ ಅಸತ್ಕಾವ್ಯಗಳಿಗೆ ಎಂದಿಗೂ ಮನಸ್ಸು ಕೊಡುವವನಲ್ಲ. ಯಾವಾಗಲೂ ಸುಳ್ಳಾಡಿದವನಲ್ಲ. ಜ್ಞಾನವೃದ್ಧರನ್ನೂ, ವಯೋವೃದ್ಧರನ್ನೂ, ಶೀಲವೃದ್ಧರನ್ನೂ ಕಂಡಕಂಡ ಕಡೆಯಲ್ಲಿ ಅತಿಪ್ರೀತಿಯಿಂದ ಮನ್ನಿಸುವನು. ಪಂಡಿತಪಾಮರರೆಂಬ ತಾರತಮ್ಯವನ್ನಿಡದೆ ಸಮಸ್ತ ಪ್ರಜೆಗಳನ್ನೂ ಸಮಪ್ರೇಮದಿಂದ ರಂಜನೆಗೊಳಿಸುವನು. ಇದರಿಂದ ಪ್ರಜೆಗಳೆಲ್ಲರಿಗೂ ಅವನಲ್ಲಿ ಪರಿಪೂರ್ಣವಾದ ವಿಶ್ವಾಸವಿರುವುದು. ಆತನು ಬಹಳ ದಯಾಳು. ಕೋಪವನ್ನು ಸಂಪೂರ್ಣವಾಗಿ ನಿಗ್ರಹಿಸಿದವನು. ಬ್ರಾಹ್ಮಣರನ್ನು ಬಹುಮರ್ಯಾದೆಯಿಂದ ಪೂಜಿಸುವನು. ಬಡವರಲ್ಲಿ ಬಹಳ ಮರುಕವುಳ್ಳವನು. ಆತನಿಗೆ ತಿಳಿಯದ ಧರ್ಮಸೂಕ್ಷ್ಮವಾವುದೂ

ಇಲ್ಲ. *ಸಮಸ್ತ ಪ್ರಾಣಿಗಳಿಗೂ ಅಭಯದಾನವನ್ನು ಮಾಡುವುದೇ ಅವನ ಮುಖ್ಯವಾದ ವ್ರತವು. †ಪರಸ್ವತ್ತಿಗೆ ಎಂದಿಗೂ ಆಸೆಪಡದ ಪರಿಶುದ್ಧ ಸ್ವಭಾವವುಳ್ಳವನು. ಇಕ್ಷ್ವಾಕುರಾಜರಿಗೆ ಉಚಿತವಾದ ದಯಾದಾಕ್ಷಿಣ್ಯಾದಿ ಧರ್ಮಗಳಲ್ಲಿಯೇ ಸ್ಥಿರವಾದ ಬುದ್ಧಿಯುಳ್ಳವನು. ‡ನಿಜಧರ್ಮವಾದ ಕ್ಷತ್ರಿಯ ಧರ್ಮವನ್ನು ಬಹಳ ಅಕ್ಕರೆಯಿಂದ ಗೌರವಿಸುವನು. ಆ ಕ್ಷತ್ರಧರ್ಮದಿಂದ ಸಂಪಾದಿಸಿದ ಸತ್ಕೀರ್ತಿಯಿಂದಲೇ ಮಹತ್ತಾದ ಸ್ವರ್ಗಫಲವು ಸಿದ್ಧಿಸುವುದೆಂದೂ ಎಣಿಸಿರುವನು ಆತನು ಎಲ್ಲವನ್ನೂ ಬಲ್ಲವನಾದುದರಿಂದಲೇ ನಿಷ್ಫಲವಾದ ಕಾರ್ಯಗಳಿಗಾಗಲಿ, ನಿಷಿದ್ಧಕಾರ್ಯಗಳಿಗಾಗಲಿ, ಆತನ ಮನಸ್ಸು ಪ್ರವರ್ತಿಸದು. ಧರ್ಮವಿರುದ್ಧಗಳಾದ, ಅಥವಾ ಗ್ರಾಮ್ಯಗಳಾದ ಕಥೆಗಳಲ್ಲಿ ಆತನಿಗೆ ಅಭಿರುಚಿಯೇ ಇಲ್ಲವು. ಲೌಕಿಕವೈದಿಕವಿಷಯಗಳಲ್ಲಿ ಮೇಲೆ ಮೇಲೆ ಯುಕ್ತಿವಾದಗಳು ಸಂಭವಿಸಿದಾಗ, ತನ್ನ ಅರ್ಥವನ್ನು ಸಾಧಿಸುವುದಕ್ಕಾಗಿ, ಬೃಹಸ್ಪತಿಯಂತೆ ತಡೆಯಿಲ್ಲದ ವಾಗ್ಧೋರಣೆಯಿಂದ, ಸಪ್ರಮಾಣವಾಗಿ ಉಪನ್ಯಸಿಸುವನು. ಆತನಿಗೆ ಆಧಿವ್ಯಾಧಿಗಳೆಂಬ ರೋಗಗಳ ಸಂಬಂಧವೇ ಇಲ್ಲ. § ಆತನು ತುಂಬಿದ ಯೌವನವುಳ್ಳವನು ಪ್ರಶಸ್ತವಾದ

---

* "ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ" ಎಂಬಂತೆ ಅಭಯದಾನವೇ ರಾಮನಿಗೆ ವ್ರತವು.

† "ಯೋಽರ್ಥೇ ಶುಚಿಸ್ಸಹಿ ಶುಚಿರ್ನ ಮೃದಾದಿಶುಚಿಃ॥" ಎಂಬ ಮನುಸ್ಮೃತಿವಾಕ್ಯದಂತೆ ಪರಸ್ವತ್ತಿಗೆ ಆಸೆಪಡದಿರುವುದೇ ದೊಡ್ಡಶುದ್ಧಿಯು.

‡ "ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮೋ ಭಯಾವಹಃ" ಎಂಬಂತೆ ತಮ್ಮತಮ್ಮ ವರ್ಣಾಶ್ರಮಗಳಿಗೆ ಯೋಗ್ಯವಾದ ಧರ್ಮಗಳನ್ನೇ ನಡೆಸಿ, ಅವರಿಂದ ಸಂಪಾದಿಸಿದ ಕೀರ್ತಿಯಿಂದಲೇ ಸ್ವರ್ಗವನ್ನು ಸಂಪಾದಿಸಬೇಕೆಂದು ಸಂಕಲ್ಪಿಸಿರುವನೆಂದು ಭಾವವು.

§ ಈ ವಿಶೇಷಣಗಳು ಅಧ್ಯಯನಸದ್ಧರ್ಮಾನುಷ್ಠಾನಗಳಿಗೆ ಬೇಕಾದ ಸಾಮರ್ಥ್ಯಗಳನ್ನು ಸೂಚಿಸುವುವು. ಹೇಗೆಂದರೆ, "ಯುವಾ ಸ್ಯಾತ್ಸಾಧು ಯುವಾಽಧ್ಯಾಯಕಃ ಆಶಿಷ್ಠೋ ದ್ರಢಿಷ್ಠೋ ಬಲಿಷ್ಠಃ॥" ಎಂಬ ಶ್ರುತ್ಯರ್ಥವನ್ನು ಪ್ರತಿಪಾದಿಸುತ್ತಿವೆ. (ಆಶಿಷ್ಠಃ) ಎಂಬುದಕ್ಕೆ ರೋಗಸಂಬಂಧವಿಲ್ಲದವನೆಂಬುದೂ, 'ಯುವಾಧ್ಯಾಯಕಃ' ಎಂಬುದಕ್ಕೆ ಪ್ರಶಸ್ತವಾಕ್ಕುಳ್ಳವನೆಂಬುದೂ, 'ಯುವಾ' ಎಂಬುದಕ್ಕೆ ಯೌವನವುಳ್ಳವನೆಂಬುದೂ,

ವಾಕ್ಕುಳ್ಳವನು. ದೃಢವಾದ ಮೈಕಟ್ಟುಳ್ಳವನು. ದೇಶಕಾಲ ಸ್ಥಿತಿಗಳನ್ನು ಚೆನ್ನಾಗಿ ಬಲ್ಲವನು. ಒಂದಾವರ್ತಿ ನೋಡಿದಮಾತ್ರದಿಂದಲೇ ಇತರರ ಮನೋಧರ್ಮಗಳನ್ನು ಗ್ರಹಿಸತಕ್ಕ ಸೂಕ್ಷ್ಮಬುದ್ಧಿಯುಳ್ಳವನು. ಸಾಧುಗಳಲ್ಲಿ ಈತನಿಗೆ ಸಮಾನರಾದವರೊಬ್ಬರೂ ಇಲ್ಲ. ಲೋಕದಲ್ಲಿ ಈತನೊಬ್ಬನೇ ಸಾಧುತ್ವಕ್ಕಾಗಿ ನಿರ್ಮಿಸಲ್ಪಟ್ಟವನೆಂದು ಜನಗಳೆಲ್ಲರೂ ಎಣಿಸುವರು. ಈ ಮೇಲೆಹೇಳಿದ ಗುಣಗಳೇ ಅಲ್ಲದೆ, ಇನ್ನೂ ಅನೇಕಸುಗುಣಗಳಿಂದ ಕೂಡಿರುವ ಆ ರಾಜಕುಮಾರನು, ತನ್ನ ಸದ್ಗುಣಗಳಿಂದ ಪ್ರಜೆಗಳ ಹೊರಗಿನಪ್ರಾಣವೋ ಎಂಬಂತೆ ಸರ್ವಜನಪ್ರಿಯನಾಗಿರುವನು. ಕೇವಲವಿದ್ಯೆಯಿಂದಾಗಲಿ, ಕೇವಲವ್ರತಗಳಿಂದಾಗಲಿ ಸಮಾವರ್ತನವನ್ನು ಹೊಂದಿರುವವರಂತಲ್ಲದೆ, ವಿದ್ಯಾವ್ರತಗಳೆರಡರಿಂದಲೂ ಸಮಾವರ್ತನವನ್ನು ಹೊಂದಿದವನು. ಚತುರ್ವೇದಗಳನ್ನೂ ಅರ್ಥದೊಡನೆ ಸಾಂಗವಾಗಿ ಅಧ್ಯಯನ ಮಾಡಿರುವನು. * ಶಸ್ತ್ರಾಸ್ತ್ರಗಳೆರಡರಲ್ಲಿಯೂ ತನ್ನ ತಂದೆಯಾದ ದಶರಥನನ್ನೂ ಮೀರಿಸಿರುವನು. ಆತನ ತಂದೆತಾಯಿಗಳ ವಂಶವೆರಡೂ ಬಹಳ ಶುದ್ಧವಾದುದರಿಂದ, ಆತನೂ ನಿರ್ದೋಷಿಯಾಗಿರುವನು. ಎಂತಹ ವಿಪತ್ತಿನಲ್ಲಿಯೂ ಆತನ ಮನಸ್ಸು ಕದಲದು. ಎಂತಹ ಕಷ್ಟದಶೆಯಲ್ಲಿಯೂ ಆತನು ಸತ್ಯವನ್ನು ತಪ್ಪುವವನಲ್ಲ. ಮನೋವಾಕ್ಕಾಯಗಳೆಂಬ ತ್ರಿಕರಣಗಳಲ್ಲಿಯೂ ಏಕರೀತಿಯಾಗಿ ವರ್ತಿಸುವವನು. ಧರ್ಮಾರ್ಥಗಳನ್ನು ತಿಳಿಸತಕ್ಕ ಬ್ರಾಹ್ಮಣರಿಂದ ಚೆನ್ನಾಗಿ ಶಿಕ್ಷಿಸಲ್ಪಟ್ಟು, ಮನಶ್ಶುದ್ಧಿಯನ್ನು ಹೊಂದಿರತಕ್ಕವನು. †ಧರ್ಮಾರ್ಥಕಾಮಗಳನ್ನು ಕಾಲೋಚಿತವಾಗಿ ಉಪಯೋಗಿಸುವ ಕ್ರಮವನ್ನು ಚೆನ್ನಾಗಿ ಬಲ್ಲವನು. ಆತನಿಗೆ ಯಾವುದರಲ್ಲಿಯೂ ಮಮತೆಯಿಲ್ಲ.

---

'ಬಲಿಷ್ಠಃ' ಎಂಬುದಕ್ಕೆ, ಬಲವಾದ ಮೈಕಟ್ಟುಳ್ಳವನೆಂಬುದೂ, 'ಸಾಧುಃ' ಎಂಬುದಕ್ಕೆ ದೇಶಕಾಲಜ್ಞನೆಂಬುದೂ ಪರ್ಯಾಯಗಳೆಂದು ಗ್ರಹಿಸಬೇಕು.

* ಅಮಂತ್ರಕವಾದುದು ಶಸ್ತ್ರವು. ಮಂತ್ರವತ್ತಾದುದು ಅಸ್ತ್ರವು.

† 'ನಪೂರ್ವಾಹ್ಣಮಧ್ಯಾಹ್ನಾ ಪರಾಹ್ಣಾನಪರಾನ್ ಕುರ್ಯಾತ್' ಎಂಬ ಸ್ಮೃತಿಯಂತೆ ಪೂರ್ವಾಹ್ಣಾದಿಕಾಲಗಳಲ್ಲಿಯೇ ಆಯಾ ಧರ್ಮಾರ್ಥಕಾಮಗಳನ್ನು ನಡೆಸಬೇಕೆಂದು ವಿಧಿಯು.

ಬಹಳಸ್ಮರಣ ಶಕ್ತಿಯುಳ್ಳವನು. ಹೊಸಹೊಸದಾಗಿ ವಿಕಾಸಹೊಂದುವ ಬುದ್ಧಿಮಹಿಮೆಯುಳ್ಳವನು. ಜನಗಳಲ್ಲಿ ಸಾಂಕೇತಿಕವಾಗಿ ಅನುಸರಿಸಿಬಂದ ಆಚಾರಸಂಪ್ರದಾಯಗಳ ನ್ಯಾಯಗಳನ್ನರಿತವನು. ಎಲ್ಲಾವಿಷಯಗಳಲ್ಲಿಯೂ ಸಂಪೂರ್ಣವಾದ ತಿಳುವಳಿಕೆಯುಳ್ಳವನಾಗಿರುವನು. ಬಹಳ ವಿನೀತನು. ತನ್ನ ಮನೋವಿಕಾರಗಳನ್ನೂ, ಇಂಗಿತಗಳನ್ನೂ ಹೊರಪಡಿಸದ ಗಂಭೀರಸ್ವಭಾವವುಳ್ಳವನು. ಆತನ ಕಾರ್ಯಾಲೋಚನೆಗಳು ಫಲಸಿದ್ಧಿಯಾಗುವಾಗಲೇ ಹೊರಕ್ಕೆಬರುವುವೇಹೊರತು,ಅದಕ್ಕೆ ಮೊದಲು ಯಾರಿಂದಲೂ ತಿಳಿಯಲು ಸಾಧ್ಯವಲ್ಲ. ಆತನಿಗೆ ಪ್ರಶಸ್ತರಾದ ಮಂತ್ರಿಗಳಿರುವರು.ಆತನಿಗೆ ಒಬ್ಬರಮೇಲೆ ಕೋಪವಾಗಲಿ, ಅಥವಾ ಅನುಗ್ರಹವಾಗಲಿ ಹುಟ್ಟಿದರೆ, ಅದು ಫಲಪರ್ಯಂತವಾಗಿ ಕೊನೆಮುಟ್ಟದೆ ಬಿಡದು. ತನ್ನಲ್ಲಿರುವ ಧನವನ್ನಾಗಲಿ,ಅಥವಾ ಇತರವಸ್ತುಗಳನ್ನಾಗಲಿ, ಯಾವಾಗ ಧಾರಾಳವಾಗಿ ಹೊರಕ್ಕೆ ಬಿಡಬೇಕೋ,ಯಾವಾಗ ಕೈತಡೆಯಬೇಕೋ,ಆಸೂಕ್ಷ್ಮಾಂಶಗಳನ್ನೆಲ್ಲಾ ಆತನು ಚೆನ್ನಾಗಿಬಲ್ಲನು.ಗುರುಜನಗಳಲ್ಲಿಯೂ ದೇವತೆಗಳಲ್ಲಿಯೂ ದೃಢಭಕ್ತಿಯುಳ್ಳವನು. ಅಂತಹ ಭಕ್ತಿಯಿಂದುಂಟಾದ ಆತನ ಜ್ಞಾನವೂ ಸ್ಥಿರವಾದುದು. ಆತನು ಕೆಟ್ಟವಸ್ತುಗಳನ್ನಾಗಲಿ,ಕೆಟ್ಟದ್ರವ್ಯಗಳನ್ನಾಗಲಿ ಪರಿಗ್ರಹಿಸತಕ್ಕವನಲ್ಲ. ಕೆಟ್ಟಮಾತೆಂಬುದು ಆತನ ಬಾಯಿಂದ ಎಂದಿಗೂ ಹೊರಟುದಿಲ್ಲ. ಯಾವ ಕಾರ್ಯಗಳಲ್ಲಿಯೂ ಬೇಸರಪಡತಕ್ಕವನಲ್ಲ ಎಲ್ಲಾವಿಷಯಗಳನ್ನೂ ಬಹಳಜಾಗರೂಕತೆಯಿಂದ ನೋಡುವನು, ಪರರದೋಷಗಳನ್ನುಮಾತ್ರವೇ ಅಲ್ಲದೆ ತನ್ನದೋಷಗಳನ್ನೂ ತಾನು ಚೆನ್ನಾಗಿತಿಳಿದುಕೊಂಡು ಅದನ್ನು ತಿದ್ದಿಕೊಳ್ಳುವ,ಅದ್ಭುತವಾದ ಒಂದುಗುಣವು ಆತನಿಗುಂಟು. ಸಮಸ್ತಶಾಸ್ತ್ರಗಳನ್ನೂ ಬಲ್ಲವನು.ಇತರರು ತನಗೆ ಮಾಡಿದ ಎಳ್ಳಷ್ಟುಪಕಾರವನ್ನೂ ಬೆಟ್ಟದಂತೆ ಭಾವಿಸತಕ್ಕವನು. ಇತರರನ್ನು ನೋಡಿದಾಗಲೇ ಅವರ ಸುಗುಣದುರ್ಗುಣಗಳನ್ನು ತಿಳಿದುಕೊಳ್ಳತಕ್ಕವನು. ಮಿತ್ರರನ್ನು ಸ್ವೀಕರಿಸುವುದರಲ್ಲಿಯೂ, ಹಾಗೆ ಸ್ವೀಕರಿಸಲ್ಪಟ್ಟವರನ್ನು ಕಾಪಾಡುವವಿಷಯದಲ್ಲಿಯೂ, ಶಾಸ್ತ್ರಮರ್ಯಾದೆಯನ್ನನುಸರಿಸಿಯೇ ನಡೆದುಕೊಳ್ಳತಕ್ಕ ಮಹಾನಿಪುಣನು. ಸತ್ಪುರುಷರನ್ನು ಸಂಗ್ರಹಿಸುವುದಕ್ಕೂ, ಅವರನ್ನು ಪಾಲಿಸುವುದಕ್ಕೂ, ದು

ಷ್ಟರನ್ನು ನಿಗ್ರಹಿಸುವುದಕ್ಕೂ, ತಕ್ಕ ಸಮಯಗಳನ್ನು ಚೆನ್ನಾಗಿ ತಿಳಿಯಬಲ್ಲವನು.* ಪ್ರಜೆಗಳ ಮನಸ್ಸಿಗೆ ನೋವುಂಟುಮಾಡದೆ, ನ್ಯಾಯವಿರೋಧವಿಲ್ಲದೆ, ದ್ರವ್ಯವನ್ನಾರ್ಜಿಸುವ ಉಪಾಯವಾವುದೆಂಬುದನ್ನೂ, † ಯಾವಯಾವ ಭಾಗಗಳಲ್ಲಿ ಅದನ್ನು ಹೇಗೆ ವ್ಯಯಮಾಡಬೇಕೆಂಬುದನ್ನೂ ಆತನು ಚೆನ್ನಾಗಿ ತಿಳಿದಿರುವನು. ಶಾಸ್ತ್ರಸಮೂಹಗಳನ್ನೂ, ಕಾವ್ಯನಾಟಕಾಲಂಕಾರಗಳನ್ನೂ ತಿಳಿದವರಲ್ಲಿ ಆತನೇ ಮೇಲೆನಿಸಿಕೊಂಡಿರುವನು. ಆತನು ಧರ್ಮಾರ್ಥಗಳಿಗೆ ವಿರೋಧಬಾರದಂತೆಯೇ ಕಾಮೋಪಭೋಗಗಳನ್ನನುಭವಿಸತಕ್ಕವನು ಅರ್ಥಾರ್ಜನೆಯಲ್ಲಿಯಾಗಲಿ, ಧರ್ಮಾರ್ಜನೆಯಲ್ಲಿಯಾಗಲಿ ಎಂದಿಗೂ ಬೇಸರಗೊಳ್ಳುವವನಲ್ಲ. ವಿನೋದಾರ್ಥಗಳಾದ ಸಂಗೀತ ಚಿತ್ರಕರ್ಮಾದಿಶಿಲ್ಪಗಳವಿಷಯದಲ್ಲಿಯೂ, ಆತನಿಗೆ ಬಹಳ ನೈಪುಣ್ಯವುಂಟು. ಸಂಪಾದಿಸಿದ ಹಣವನ್ನು ಯಾವಯಾವ ಭಾಗಗಳಲ್ಲಿ ಹೇಗೆ ಉಪಯೋಗಿಸಬೇಕೆಂಬುದನ್ನು ಆತನು ಚೆನ್ನಾಗಿ ಬಲ್ಲನು. ಆನೆಕುದುರೆಗಳನ್ನೇರುವುದರಲ್ಲಿಯೂ, ಅವುಗಳನ್ನು ವಿಧವಿಧವಾದ ಗತಿಗಳಿಂದ ನಡೆಸುವುದರಲ್ಲಿಯೂ ಆತನು ಬಹಳನಿಪುಣನು. ಧನುರ್ವೇದವನ್ನು ತಿಳಿದವರಲ್ಲಿ ಆತನನ್ನು ಮೀರಿಸಿದವರೊಬ್ಬರೂ ಇಲ್ಲ! ಲೋಕದಲ್ಲಿ ಅತಿರಥರೆಂದು ಖ್ಯಾತಿಗೊಂಡವರೂಕೂಡ ಆತನಿಗೆ ವಿಧೇಯರಾಗಿ ಪೂಜಿಸುವರು. ಯುದ್ಧಕಾಲಗಳಲ್ಲಿ ಸೈನಿಕರ ಸಹಾಯವನ್ನೂ ನಿರೀಕ್ಷಿಸದೆ, ತಾನೇ ಮುಂದಾಗಿ ಹೋಗಿ ಹಗೆಗಳನ್ನು ಹೊಡೆಯುವನು. ಹೀಗೆ ಶತ್ರುಗಳನ್ನಡಗಿಸುವುದುಮಾತ್ರವೇ ಅಲ್ಲದೆ, ತನ್ನ

---

* 'ಧರ್ಮಾಯ ಯಶಸೇರ್ಥಾಯ ಆತ್ಮನೇ ಸ್ವಜನಾಯಚ । ಪಂಚಧಾ ವಿಭಜೇದ್ವಿತ್ತಮಿಹಾಮುತ್ರಚ ಶೋಭತೇ॥' ಧರ್ಮಾರ್ಥವಾಗಿಯೂ, ಕೀರ್ತಿಸಂಪಾದನೆಗಾಗಿಯೂ, ಇದ್ದಹಣವನ್ನು ವೃದ್ಧಿಗೊಳಿಸುವುದಕ್ಕಾಗಿಯೂ, ತನ್ನ ಸ್ವಂತಕ್ಕಾಗಿಯೂ, ಸ್ವಜನರಿಗಾಗಿಯೂ, ಹೀಗೆ ಐದುಭಾಗವಾಗಿ ಮಾಡಿ ಹಣವನ್ನು ವೃದ್ಧಿಮಾಡಬೇಕು. ಹೀಗೆ ಮಾಡುವುದರಿಂದ ಇಹಪರಸೌಖ್ಯಗಳೆರಡಕ್ಕೂ ಸಹಾಯಕವಾಗುವುದೆಂದು ಸ್ಮೃತಿವಾಕ್ಯವುಂಟು.

† 'ಕಚ್ಚಿದಾಯಸ್ಯಚಾರ್ಧೇನ ಚತುರ್ಭಾಗೇನ ವಾ ಪುನಃ । ಪಾದಭಾಗೈಸ್ತ್ರಿಭಿರ್ವಾಪಿ ವ್ಯಯಸ್ಸಂಶೋಧ್ಯತೇ ಬುಧೈಃ॥' ಎಂದು, ಆದಾಯದಲ್ಲಿ ಕಾಲುಭಾಗವನ್ನಾಗಲಿ, ಅಥವಾ ಅರ್ಧಭಾಗವನ್ನಾಗಲಿ, ಕೊನೆಗೆ ಮುಕ್ಕಾಲುಪಾಲನ್ನಾಗಲಿ, ವೆಚ್ಚಮಾಡಬೇಕೇ ಹೊರತು, ಅದಕ್ಕೆಮೇಲೆ ವ್ಯಯಮಾಡಕೂಡದೆಂದು ಶಾಸ್ತ್ರವಿಧಿಯು.

ಸೈನಿಕರಿಗೆಕೂಡ ಸ್ವಲ್ಪವೂ ಅಪಾಯವುಂಟಾಗದಂತೆ ರಕ್ಷಿಸುವುದಕ್ಕಾಗಿ ಅವುಗಳನ್ನು ಚಕ್ರವ್ಯೂಹಾದ್ಯಾಕಾರರಳಿಂದ ನಿಲ್ಲಿಸಿ ನಡೆಸುವುದರಲ್ಲಿ ಬಹಳ ನೈಪುಣ್ಯವುಳ್ಳವನು. ಆತನನ್ನಿದಿರಿಸುವುದಕ್ಕೆ ಲೋಕದಲ್ಲಿ ಯಾರಿಂದಲೂ ಸಾಧ್ಯವಲ್ಲ. ಈ ಲೋಕದವರ ಮಾತೂ ಹಾಗಿರಲಿ! ಒಂದುವೇಳೆ ದೇವಾಸುರರಿಬ್ಬರೂ ತಮ್ಮೊಳಗೆ ಪರಸ್ಪರವೈರಬುದ್ಧಿಯನ್ನು ಬಿಟ್ಟು, ಒಂದಾಗಿ ಬಂದು ಕೋಪದಿಂದಿರಿಸಿದರೂ ಅವನನ್ನು ಜಯಿಸಲಾರರು. ಆತನಲ್ಲಿ ಅಸೂಯೆಯೆಂಬುದು ಸ್ವಲ್ಪವೂ ಇಲ್ಲ. ಮದಮಾತ್ಸರ್ಯಾದಿದುರ್ಗುಣಗಳನ್ನೆಲ್ಲಾ ತ್ಯಜಿಸಿದವನು. ಕೋಪವನ್ನು ಸ್ವಾಧೀನದಲ್ಲಿ ಅಡಗಿಸಿಟ್ಟುಕೊಂಡಿರುವವನು. ಯಾವ ಪ್ರಾಣಿಗಳನ್ನಾಗಲಿ ತಿರಸ್ಕರಿಸಿ ಅವಮಾನಪಡಿಸತಕ್ಕವನಲ್ಲ. ಕಾಲವಶದಿಂದುಂಟಾಗತಕ್ಕ ರಾಜಸತಾಮಸಾದಿಗುಣಗಳಿಗೆ ಒಳಗಾಗದೆ, ಯಾವಾಗಲೂ ಸತ್ವಮೂರ್ತಿಯಾಗಿಯೇ ಇರುವನು. ಹೀಗೆ ಲೋಕೋತ್ತರಗುಣಗಳಿಂದ ಕೂಡಿದ ಆ ರಾಮನು, ಮೂರುಲೋಕಗಳಿಗೂ ಇಷ್ಟನಾಗಿ ಪ್ರಕಾಶಿಸುತಿದ್ದನು. ಮತ್ತು ಆತನು, ತಾಳ್ಮೆಯಲ್ಲಿ ಭೂದೇವಿಗೂ, ಬುದ್ಧಿಯಲ್ಲಿ ಬೃಹಸ್ಪತಿಗೂ, ಪರಾಕ್ರಮದಲ್ಲಿ ಇಂದ್ರನಿಗೂ ಸಮನಾದವನು! ಹೀಗೆ ಆ ರಾಮನು, ಹೆಂಗಸರು, ಮಕ್ಕಳು, ಮುದುಕರು, ಮೊದಲುಗೊಂಡು ಸಮಸ್ತಪ್ರಜೆಗಳ ಮನಸ್ಸನ್ನೂ ಆಕರ್ಷಿಸತಕ್ಕವುಗಳಾಗಿಯೂ, ತಂದೆಗೂ ಇತರಗುರುಜನಗಳಿಗೂ ಆಹ್ಲಾದಕಾರಿಗಳಾಗಿಯೂ ಇರುವ ಕಲ್ಯಾಣಗುಣಗಳಿಂದ ಪರಿಪೂರ್ಣನಾಗಿ, ಸೂರ್ಯನು ಕಿರಣಗಳಿಂದ ಹೇಗೋ ಹಾಗೆ, ಲೋಕಾಭಿನಂದ್ಯನಾಗಿರುತಿದ್ದನು. * ಇಂತಹ ಲೋಕೋತ್ತರಕಲ್ಯಾಣಗುಣಸಮ್ಪ

* "ತಮೇವಂ ವ್ರತಸಂಪನ್ನಮಪ್ರಧೃಷ್ಯಪರಾಕ್ರಮಂ । ಲೋಕಪಾಲೋಪಮಂ ನಾಥಮಕಾಮಯತ ಮೇದಿನೀ" ಎಂಬುದು ಇದಕ್ಕೆ ಮೂಲವು. ಇದರ ವಿಶೇಷಾರ್ಥಗಳೇನೆಂದರೆ, (ಏವಂ) ಹೀಗೆ, ಎಂದರೆ, ಹಿಂದೆ ಬಾಲಕಾಂಡದಲ್ಲಿ ಹೇಳಿದ ಪ್ರಕಾರವಾಗಿ (ವ್ರತಸಂಪನ್ನಂ) ಪತ್ನೀವ್ರತದೊಡಗೂಡಿದ, "ರಾಮಸ್ತು ಸೀತಯಾ ಸಾರ್ಧಂ" ಎಂಬಂತೆ ಸೀತೆಯೊಡನೆ ಕ್ರೀಡಾರಸಸಂಪನ್ನನಾದ, (ಅಪ್ರಧೃಷ್ಯಪರಾಕ್ರಮಂ) ವಿರೋಧಿವರ್ಗನಿರಸನಪೂರ್ವಕವಾಗಿ ತನ್ನೊಡನೆ ಸೇರಿಸಿಕೊಂಡು ಭೋಗವನ್ನುಂಟುಮಾಡತಕ್ಕ (ಲೋಕಪಾಲೋಪಮಂ) ಇಲ್ಲಿ ವಿಶೇಷಣೋಭಯಪದಸಮಾಸವು ಹೇಗೆಂದರೆ, ಲೋಕವನ್ನು ಪಾಲಿಸತಕ್ಕವನಾಗಿ, ಮತ್ತು (ಉಪ, ಸಮೀಪೇ, ಮಾ, ಯಸ್ಯಸ, ಉಪಮಃ)

ದ್ಧಿಯನ್ನು ಹೊಂದಿರುವಂತೆಯೇ,ಆಶ್ರಿತರಕ್ಷಣವೆಂಬ ತನ್ನ ಮುಖ್ಯವ್ರತವ ನ್ನೂ ಕೈಕೊಂಡು, ಇತರರಿಂದ ಇದಿರಿಸುವುದಕ್ಕಸಾಧ್ಯವಾದ ಪರಾಕ್ರಮ ವುಳ್ಳವನಾಗಿ, ದಿಕ್ಪಾಲಕರಿಗೆ ಸಮಾನನಾಗಿದ್ದ ಆರಾಮನನ್ನು ಭೂಮಿಯು (ಭೂಜನವು)ತನಗೆ ನಾಥನನ್ನಾಗಿ ಅಪೇಕ್ಷಿಸಿತು. ಆಗ ದಶರಥನಿಗೆ,ತನ್ನ ಮ ಗನಾದ ರಾಮನು ಹೀಗೆ ಎಣೆಯಿಲ್ಲದ ಗುಣಾತಿಶಯಗಳಿಂದ ಕೂಡಿರುವುದ ನ್ನೂ,ಇದುವರೆಗೆ ತಾನು ಶತ್ರುಗಳನ್ನು ನಿಗ್ರಹಿಸಿ ರಾಜ್ಯವನ್ನು ನಿಷ್ಕಂಟಕ ವಾಗಿಮಾಡಿ ರಾಜ್ಯಭಾರಮಾಡುತಿದ್ದುದರಿಂದ ಬಹಳವಾಗಿ ಬಳಲಿ ಬೇಸತ್ತಿ ರುವುದನ್ನೂ ನೋಡಿ, ಮನಸ್ಸಿನಲ್ಲಿ ಒಂದುವಿಧವಾದ ಆಲೋಚನೆಯು ಹುಟ್ಟಿತು. ಬಹುಕಾಲದಿಂದ ಬಾಳಿ ಬದುಕಿ ಮುದುಕನಾದ ಆತನಿಗೆ,ತಾನು ಬದುಕಿರುವಾಗಲೇ ರಾಮನನ್ನು ರಾಜ್ಯದಲ್ಲಿರಿಸಬೇಕೆಂಬ ಶಂಕೆಯುಂಟಾಯಿ ತು. ಅದೇ ಚಿಂತೆಯಿಂದ ಅವನು. “ನನ್ನ ಮೋಹದ ಕುಮಾರನಾದ ರಾಮನು ರಾಜ್ಯವಾಳುತ್ತಿರುವುದನ್ನು ಕಣ್ಣೆದಿರಿಗೆ ನೋಡಿ ಸಂತೋಷಿಸುವ ಭಾಗ್ಯವು ನನಗೆ ಎಂದಿಗೆ ಲಭಿಸುವುದೋ? ರಾಮನಾದರೋ ಲೋಕದ ಜನ ಗಳ ಶ್ರೇಯೋಭಿವೃದ್ಧಿಯನ್ನೇ ಯಾವಾಗಲೂ ಹಾರೈಸತಕ್ಕವನು.ಪ್ರಾಣಿಗ ಳಲ್ಲಿ ಬಹಳ ದಯೆಯುಳ್ಳವನು. ಮಳೆಯನ್ನು ಸುರಿಸುತ್ತಿರುವ ಮೇಘದಂತೆ ವಿಶೇಷವಾದ ಔದಾರ್ಯಗುಣವುಳ್ಳವನಾಗಿಯೂ, ಸಂತಾಪಹಾರಕನಾಗಿಯೂ ಇರುವುದರಿಂದ, ಪ್ರಜೆಗಳಿಗೆ ನನ್ನಲ್ಲಿರುವುದಕ್ಕಿಂತಲೂ ಆತನಲ್ಲಿ ವಿಶ್ವಾಸವು ಹೆಚ್ಚಾಗಿರುವುದು. ಆತನು ಪರಾಕ್ರಮದಲ್ಲಿ ಇಂದ್ರಯಮರಂತೆಯೂ,ಬುದ್ಧಿ ಯಲ್ಲಿ ಬೃಹಸ್ಪತಿಯಂತೆಯೂ, ಧೈರ್ಯದಲ್ಲಿ ಬೆಟ್ಟದಂತೆಯೂ ಇರುವನು. ನನಗಿಂತಲೂ ಹೆಚ್ಚುಗುಣಾತಿಶಯವುಳ್ಳವನು. ಹೀಗೆ ಪ್ರಭುತ್ವಕ್ಕೆ ತಕ್ಕ ಸ ಮಸ್ತಕಲ್ಯಾಣಗುಣಗಳನ್ನೂ ಹೊಂದಿರುವ ಆ ರಾಮನಿಗೆ, ಈ ವಯಸ್ಸಿ ನಲ್ಲಿಯೇ ಸಮಸ್ತಭೂಭಾರವನ್ನೂ ವಹಿಸಿ,ಅದನ್ನು ನೋಡಿ ಸಂತೋಷಿಸಿದ ಮೇಲೆ, ಪರಲೋಕವನ್ನು ಹೊಂದತಕ್ಕ ಭಾಗ್ಯವು ನನಗೆ ಲಭಿಸುವುದೇ?”

---

**ಸಮೀಪದಲ್ಲಿ ಸೀತಾರೂಪವಾದ ಲಕ್ಷ್ಮಿಯೊಡಗೂಡಿದವನಾಗಿರುವವನೆಂದರ್ಥವು. ಇಂತ ಹ ರಾಮನನ್ನು (ಮೇದಿನೀ) ಭೂಮಿಯು (ನಾಥಂ ಅಕಾಮಯತ) ಲಕ್ಷ್ಮ್ಯಂಶಭೂತೆ ಯಾದ ಸೀತೆಯಂತೆ, ತಾನೂ ಆತನ ಕಂಠದಲ್ಲಿ ಪುಷ್ಪಮಾಲಿಕೆಯನ್ನು ಹಾಕಿ ವರಿಸ ಲೆಳಸಿದಳೆಂದು ಭಾವವು.**

ಎಂದು ನಾನಾವಿಧವಾಗಿ ಯೋಚಿಸುತ್ತಾ, ಕೊನೆಗೆ ರಾಮನಲ್ಲಿ ಇತರರಾಜರಿಗೆ ದುರ್ಲಭವಾಗಿಯೂ, ಎಣಿಸುವುದಕ್ಕಸಾಧ್ಯವಾಗಿಯೂ, ಲೋಕೋತ್ತರಗಳಾಗಿಯೂ ಇರುವ ಗುಣಗಳು ತುಂಬಿರುವುದನ್ನು ನೋಡಿ, ತನ್ನ ಕೆಲವು ಮುಖ್ಯಮಂತ್ರಿಗಳೊಡನೆ ಆಲೋಚಿಸಿ, ರಾಮನನ್ನು ಯುವರಾಜನನ್ನಾಗಿ ಮಾಡುವುದಾಗಿಯೇ ನಿಶ್ಚಯಿಸಿಕೊಂಡನು. ಮತ್ತು ಆ ಕಾಲಕ್ಕೆ ಸರಿಯಾಗಿ * ಆಕಾಶದಲ್ಲಿಯೂ, ಭೂಮಿಯಲ್ಲಿಯೂ, ಅಂತರಿಕ್ಷದಲ್ಲಿಯೂ ಭಯಂಕರವಾದ ಕೆಲವು ಮಹೋತ್ಪಾತಗಳನ್ನೂ ಕಂಡನು. ತನ್ನ ದೇಹದಲ್ಲಿ ದಿನದಿನಕ್ಕೆ ವಾರ್ಧಕವು ಹೆಚ್ಚುತ್ತಿರುವುದನ್ನೂ ನೋಡಿದನು. ಕೊನೆಗೆ ಮಂತ್ರಿಗಳನ್ನು ಕರೆದು ಅವರಿಗೆ ಈ ವಿಷಯವನ್ನು ತಿಳಿಸಿ, ‘‘ಎಲೈ ಅಮಾತ್ಯರೆ! ಈಗ ಅತಿಭಯಂಕರಗಳಾದ ಮಹೋತ್ಪಾತಗಳು ಕಾಣುತ್ತಿರುವುವು. ನನ್ನ ಈ ದೇಹವೂ ಜರೆಯಿಂದ ಬಹಳ ಝರ್ಝರಿತವಾಯಿತು. ಇದೆಲ್ಲವನ್ನೂ ನೋಡಿದರೆ, ಕೂಡಿದಮಟ್ಟಿಗೆ ಶೀಘ್ರದಲ್ಲಿಯೇ ರಾಮನಿಗೆ ಪಟ್ಟವನ್ನು ಕಟ್ಟುವುದು ಮೇಲೆಂದು ತೋರುವುದು." ಎಂದನು. ಹೀಗೆ ದಶರಥನು, ಪೂರ್ಣಚಂದ್ರನಂತೆ ಸಮಸ್ತ ಸಂತಾಪಗಳನ್ನೂ ಹೋಗಲಾಡಿಸಿ, ನೋಡುವವರಿಗೆ ಆಹ್ಲಾದವನ್ನುಂಟುಮಾಡತಕ್ಕ ಮುಖವುಳ್ಳ ಮಹಾತ್ಮನಾದ ರಾಮನು, ಲೋಕದ ಜನಗಳಿಗೆ ಬಹಳ ಪ್ರಿಯನಾಗಿರುವುದನ್ನು ನೋಡಿ, ಮಂತ್ರಿಗಳೊಡನೆಯೂ ಆಲೋಚಿಸಿ,

---

* ಜ್ಯೋತಿಶ್ಶಾಸ್ತ್ರದಲ್ಲಿ ಈಮೂರುವಿಧವಾದ ಉತ್ಪಾತಗಳೂ ವಿವರಿಸಲ್ಪಟ್ಟಿರುವುವು. ಹೇಗೆಂದರೆ ‘‘ಸ್ವರ್ಭಾನುಕೇತು ನಕ್ಷತ್ರಗ್ರಹ ತಾರಾರ್ಕಚಂದ್ರಜಂ । ದಿವಿ ಚೋತ್ಪದ್ಯತೇ ಯಚ್ಚ ತದ್ದಿವ್ಯಮಿತಿ ಕೀರ್ತಿತಂ" ಗ್ರಹತಾರೆಗಳಲ್ಲಿ ಕಾಣತಕ್ಕ ಉತ್ಪಾತವು ದಿವ್ಯೋತ್ಪಾತವೆನಿಸುವುದು. ‘‘ವಾಯ್ವಭ್ರಸಂಧ್ಯಾ ದಿಗ್ದಾಹ ಪರಿವೇಷತಮಾಂಸಿಚ । ಖಪುರಂ ಚೇಂದ್ರಚಾಪಂ ಚ ತದ್ವಿದ್ಯಾದಂತರಿಕ್ಷಜಂ॥"ಭಯಂಕರವಾದ ಗಾಳಿ, ಮೇಘಪರಂಪರೆ, ಕತ್ತಲೆ, ಇಂದ್ರಧನುಸ್ಸು, ಅಕಾಲಸಂಧ್ಯೆ, ಮುಂತಾದುವೆಲ್ಲವೂ ಅಂತರಿಕ್ಷಜನ್ಯವಾದ ಉತ್ಪಾತಗಳು. ‘‘ಭೂಮಾವುತ್ಪದ್ಯತೇ ಯಚ್ಚ ಸ್ಥಾವರಂವಾಥ ಜಂಗಮಂ । ತದೇಕದೇಶಿಕಂ ಭೌಮಮುತ್ಪಾತಂ ಪರಿಚಕ್ಷತೇ" ಭೂಮಿಯ ಮೇಲಿರತಕ್ಕ ಚರಾಚರಾತ್ಮಕಗಳಾದ ವಸ್ತುಗಳಲ್ಲಿ ಕಾಣತಕ್ಕ ಉತ್ಪಾತಗಳು ಭೂಮ್ಯುತ್ಪಾತಗಳೆಂದು ಹೇಳಲ್ಪಡುವುವು.

ಈಗಲೇ ರಾಮನಿಗೆ ಪಟ್ಟವನ್ನು ಕಟ್ಟಿಬಿಡಬಹುದೆಂದೇ ನಿಶ್ಚಯಿಸಿಕೊಂಡನು. ಧರ್ಮಾತ್ಮನಾದ ಆ ರಾಜನು ತನ್ನ ಮತ್ತು ತನ್ನ ಪ್ರಜೆಗಳ ಶ್ರೇಯೋಭಿವೃದ್ಧಿಗೂ, ರಾಮನಿಗೆ ಪಟ್ಟವನ್ನು ಕಟ್ಟಬೇಕೆಂಬ ತನ್ನ ಆಸೆಯನ್ನು ತೀರಿಸಿಕೊಳ್ಳುವುದಕ್ಕೂ, ಇದೇ ತಕ್ಕಕಾಲವೆಂದು ನಿರ್ಧರಿಸಿ ಆತುರಪಡುತಿದ್ದನು. ಅದಕ್ಕಾಗಿ ಪಟ್ಟಣವಾಸಿಗಳನ್ನೂ, ದೇಶವಾಸಿಗಳನ್ನೂ, ಅಲ್ಲಲ್ಲಿ ಮುಖ್ಯಮುಖ್ಯರಾದ ರಾಜರನ್ನೂ ಬೇರೆ ಬೇರೆಯಾಗಿ ಕರೆಸಿದನು. ಜನಕರಾಜಕೇಕಯರಾಜರಿಬ್ಬರೂ, ಬಹುದೂರದೇಶವಾಸಿಗಳಾಗಿದ್ದುದರಿಂದ ಅವರನ್ನು ಕರೆಸುವುದಕ್ಕೆಮಾತ್ರ ತಕ್ಕಷ್ಟು ಅವಕಾಶವಿಲ್ಲದೆ ಹೋಯಿತು.

ಈ ಶುಭಕಾರ್ಯವು ಅತ್ಯಾತುರದಿಂದ ನಡೆಯಬೇಕಾದುದರಿಂದ, ಇಲ್ಲಿನ ಕಾರ್ಯವು ನಡೆದು ಹೋದಮೇಲೆ, ಆ ಶುಭವೃತ್ತಾಂತವನ್ನು ಅವರಿಗೆ ತಿಳಿಸಿಬಿಟ್ಟರೆ ಸಾಕೆಂದು ನಿಶ್ಚಯಿಸಿಕೊಂಡು ಸುಮ್ಮನಾದನು. ಹೀಗೆ ಕರೆಸಲ್ಪಟ್ಟ ರಾಜರಿಗೂ, ಪ್ರಜೆಗಳಿಗೂ, ಅವರವರ ಯೋಗ್ಯತಾನುಸಾರವಾಗಿ ವಾಸಸ್ಥಳಗಳನ್ನು ಕಲ್ಪಿಸಿ, ಅವರನ್ನು ನಾನಾವಿಧವಾದ ವಸ್ತ್ರಾಭರಣಾದಿಗಳಿಂದ ಮನ್ನಿಸುವಹಾಗೆ ಹೇಳಿ, ಆಮೇಲೆ ತಾನೂ ರಾಜಯೋಗ್ಯವಾದ ಅಲಂಕಾರವನ್ನು ಧರಿಸಿ ಬಂದು, ಬ್ರಹ್ಮನು ತನ್ನ ಪ್ರಜೆಗಳನ್ನು ನೋಡುವಂತೆ ಅವರೆಲ್ಲರನ್ನೂ ತನ್ನ ಪ್ರಸನ್ನದೃಷ್ಟಿಯಿಂದ ನೋಡಿದನು. ಜನಕಕೇಕಯರಾಜರು ಹೊರತು, ಅಲ್ಲಿ ಬಂದಿದ್ದ ಲೋಕಪೂಜ್ಯರಾದ ಉಳಿದ ರಾಜರೆಲ್ಲರೂ ಶತ್ರುನಾಶಕನಾದ ಆ ದಶರಥನು ಪೀಠದಲ್ಲಿ ಕುಳಿತುಕೊಂಡಮೇಲೆ. ಮುಂದೆ ಬಂದು, ರಾಜದತ್ತವಾದ ತಮ್ಮತಮ್ಮ ಉಚಿತಾಸನದ ಸಮೀಪವನ್ನು ಸೇರಿ, ರಾಜನಿಗೆ ಇದಿರಾಗಿಯೇ ಬಹಳ ನಮ್ರಭಾವದಿಂದ ಕುಳಿತರು, ಹೀಗೆ ತನ್ನಿಂದ ವಿಶೇಷವಾಗಿ ಸತ್ಕರಿಸಲ್ಪಟ್ಟು ಸಂತೋಷಯುಕ್ತರಾದ ರಾಜಾಧಿರಾಜರೂ, ಪಟ್ಟಣವಾಸಿಗಳೂ, ದೇಶವಾಸಿಗಳೂ ಬಂದು, ತನ್ನ ಸುತ್ತಲೂ ನೆರೆದಿರಲು, ಅವರಿಂದ ಪರಿವೇಷ್ಟಿತನಾಗಿ, ನಡುವೆ ತನ್ನ ರಾಜಪೀಠದಲ್ಲಿ ಕುಳಿತಿದ್ದ ದಶರಥರಾಜನು, ದೇವತೆಗಳಿಂದ ಪರಿವೃತನಾದ ದೇವೇಂದ್ರನಂತೆ ಪ್ರಕಾಶಿಸುತಿದ್ದನು. ಇಲ್ಲಿಗೆ ಮೊದಲನೆಯ ಸರ್ಗವು.

## ದಶರಥನು ರಾಮಾಭಿಷೇಕಕ್ಕಾಗಿ ಪ್ರಜೆಗಳೊಡನೆ ಆಲೋಚಿಸಿದುದು.

ಆಮೇಲೆ ದಶರಥರಾಜನು, ಗಂಭೀರವಾದ ಅರ್ಥವುಳ್ಳುದಾಗಿಯೂ, ಭೇರೀಧ್ವನಿಯಂತೆ ದಿಕ್ಕುಗಳನ್ನು ವೊಳಗಿಸತಕ್ಕುದಾಗಿಯೂ, ಬಹಳ ಮೃದುವಾಗಿಯೂ, ತನ್ನ ರಾಜಪದವಿಗೆ ಅನುರೂಪವಾಗಿಯೂ, ಎಣೆಯಿಲ್ಲದ ಮಾಧುರ್ಯವುಳ್ಳುದಾಗಿಯೂ ಇರುವ ಕಂಠಸ್ವರದಿಂದ ಮಹಾಮೇಘದಂತೆ ಗಂಭೀರವಾಗಿ, ತನ್ನ ಇದಿರಾಗಿದ್ದ ರಾಜಾಧಿರಾಜರನ್ನು ನೋಡಿ, ಆ ಸಭಿಕರಿಗೆ ಹಿತಕರವಾಗಿಯೂ, ಉತ್ಸಾಹ ಹುಟ್ಟಿಸತಕ್ಕುದಾಗಿಯೂ, ರಸಯುಕ್ತವಾಗಿಯೂ ಇರುವಂತೆ ಒಂದಾನೊಂದು ಮಾತನ್ನು ಹೇಳುವನು. “ಎಲೈ ರಾಜರೆ! ವಿಶಾಲವಾದ ಈ ರಾಜ್ಯವನ್ನು ನಮ್ಮ ಹಿರಿಯರಾದ ರಘು ವೆ ವೊದಲಾದ ರಾಜಶ್ರೇಷ್ಠರು, ಪುತ್ರವಾತ್ಸಲ್ಯವನ್ನಿಟ್ಟು ಬಹಳಪ್ರೇಮದಿಂದ ಕಾಪಾಡುತ್ತ ಬಂದರೆಂಬುದು ನಿಮ್ಮೆಲ್ಲರಿಗೂ ತಿಳಿದೇ ಇರುವುದು. ನಾನೂ ಅದೇವಂಶದಲ್ಲಿ ಹುಟ್ಟಿದವನಾದುದರಿಂದ, ವಂಶಪರಂಪರೆಯಿಂದ ಪರಿಪಾಲಿತವಾಗಿ ಬಂದ ಸುಖಾಶ್ರಯವಾದ ಈ ಭೂಮಂಡಲಕ್ಕೆ, ಮೇಲೆಮೇಲೆ ಶ್ರೇಯಸ್ಸನ್ನುಂಟುಮಾಡಬೇಕೆಂಬುದೇ ನನ್ನ ಕೋರಿಕೆ! ನಾನೂ ನಮ್ಮ ಹಿರಿಯರು ನಡೆದ ಮಾರ್ಗವನ್ನೇ ಅನುಸರಿಸಿ,ಬಹುಜಾಗರೂಕನಾಗಿ ನನ್ನಿಂದ ಸಾಧ್ಯವಾದಮಟ್ಟಿಗೂ ಪ್ರಜೆಗಳನ್ನು ಕಾಪಾಡುತ್ತ ಬಂದಿರುವೆನು. ಪ್ರಜಾಕ್ಷೇಮಚಿಂತೆಯಲ್ಲಿಯೇ ನಿರತನಾಗಿದ್ದ ನನ್ನ ಈ ದೇಹವು,ನಮ್ಮ ರಾಜ್ಯಚಿಹ್ನವಾದ ಶ್ವೇತಚ್ಛತ್ರದ ನೆರಳಿನಲ್ಲಿಯೇ ಇಷ್ಟು ಮುಪ್ಪನ್ನಹೊಂದಿತು. ಅನೇಕ ಸಹಸ್ರವರ್ಷಗಳ ಆಯುಸ್ಸನ್ನು ಪಡೆದುಬಂದು ಜೀವಿಸುತ್ತಿರವ ನನ್ನದೇಹವೆಲ್ಲವೂ ಬಹಳಜೀರ್ಣವಾಗಿ ಹೋಯಿತು.ಮುಂದೆಯಾದರೂ ಸ್ವಲ್ಪವಿಶ್ರಾಂತಿಸುಖವನ್ನನುಭವಿಸಬೇಕೆಂದಿರುವೆನು. ರಾಜ್ಯದಲ್ಲಿ ಧರ್ಮಸಂಸ್ಥಾಪನವೆಂಬ ಕಾರ್ಯವು ಸಾಮಾನ್ಯವಲ್ಲ. ಬಹಳ ಮಹತ್ತಾದುದು. ಇಂದ್ರಿಯಗಳನ್ನು ನಿಗ್ರಹಿಸುವ ಸಾಮರ್ಥ್ಯವಿಲ್ಲದವರು ಇದನ್ನು ತಡೆದು ನಿಲ್ಲಲಾರರು. ರಾಜಯೋಗ್ಯವಾದ ಶೌರ್ಯಾದಿಪ್ರಭಾವವುಳ್ಳವರೇ ಇದಕ್ಕೆ ಅರ್ಹರೇಹೊರತು, ಸಾಮಾನ್ಯರಿಂದ ಸಾಧ್ಯವಲ್ಲ. ನಾನು ಈ ಭಾರವನ್ನು ಇದುವರೆಗೂ ಹೊತ್ತು,



೨೮೮. ದಶರಥನು ರಾಮಾಭಿಷೇಕಕ್ಕಾಗಿ ಪ್ರಜೆಗಳೊಡನೆ ಸೇರಿ ಆಲೋಚಿಸಿದುದು.

ಬಹಳವಾಗಿ ಬಳಲಿರುವೆನು. ಆದುದರಿಂದ ಈ ಪ್ರಜಾಕ್ಷೇಮಕಾರ್ಯಕ್ಕಾಗಿ ನನ್ನ ಹಿರಿಯಮಗನನಿಟ್ಟು, ನಾನು ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕೆಂದಿರುವೆನು. ಇದಕ್ಕಾಗಿ ಇಲ್ಲಿರತಕ್ಕ ಬ್ರಾಹ್ಮಣಶ್ರೇಷ್ಠರ ಅನುಮತಿಯನ್ನೇ ಇದಿರುನೋಡುತ್ತಿರುವೆನು. ನನ್ನ ಜ್ಯೇಷ್ಠಪುತ್ರನಾದ ರಾಮನ ಅರ್ಹತೆಯ ವಿಷಯದಲ್ಲಿ, ನಾನು ನಿಮಗೆ ಹೇಳಿ ತಿಳಿಸಬೇಕಾದುದೇನೂ ಇಲ್ಲ! ಇತರಗುಣಗಳ ವಿಷಯದಲ್ಲಿಯೂ, ಆತನು ನನಗಿಂತಲೂ ಯಾವಭಾಗದಲ್ಲಿಯೂ ಕಡಿಮೆಯಾದವನಲ್ಲ! ವೀರ್ಯದಲ್ಲಿ ಇಂದ್ರನಿಗೆ ಸಮಾನನಾಗಿರುವನು! ಶತ್ರುಪಟ್ಟಣಗಳನ್ನು ಜಯಿಸುವುದರಲ್ಲಿ ಅಸಾಧಾರಣವಾದ ಪರಾಕ್ರಮವುಳ್ಳವನು. ಧರ್ಮಜ್ಞರಲ್ಲಿ ಶಿರೋರತ್ನಪ್ರಾಯನಾಗಿರುವನು. ಪುರುಷಶ್ರೇಷ್ಠನೆನಿಸಿಕೊಂಡು, ಪುಷ್ಯನಕ್ಷತ್ರದೊಡಗೂಡಿದ ಚಂದ್ರನಂತೆ,. ಸರ್ವಲೋಕಾಹ್ಲಾದಕನಾದ ಆ ರಾಮನನ್ನು ಈಗಲೇ ಯೌರಾಜ್ಯದಲ್ಲಿರಿಸಬೇಕೆಂದು ಉದ್ದೇಶಿಸಿರುವೆನು. *ಅಪ್ರಮೇಯವಾದ ಮಹಾತೇಜಸ್ಸುಳ್ಳವನಾಗಿ, ಲಕ್ಷ್ಮೀವರ್ಧನನಾಗಿ,

---

* ಇದಕ್ಕೆ "ಅನುರೂಪಸ್ಸವೈ ನಾಥೋ ಲಕ್ಷ್ಮೀವಾನ್ ಲಕ್ಷ್ಮಣಾಗ್ರಜಃ । ತ್ರೈಲೋಕ್ಯಮಪಿ ನಾಥೇನ ಯೇನ ಸ್ಯಾನ್ನಾಥವತ್ತರಂ॥" ಎಂಬುದು ಮೂಲಶ್ಲೋಕವು. ಶ್ರೀರಾಮನ ಗುಣಾನುವರ್ಣನರೂಪವಾದ ಈ ಶ್ಲೋಕಕ್ಕೆ ಆತನಲ್ಲಿರುವ ಭಗವದಂಶವನ್ನು ಸೂಚಿಸುವಂತೆ ಭಗವತ್ಪರವಾದ ಕೆಲವು ವಿಶೇಷಾರ್ಥಗಳು ಹೇಳಲ್ಪಟ್ಟಿರುವುವು. ಹೇಗೆಂದರೆ:- (ಸಃ) ಆ ರಾಮನು (ಅನುರೂಪಃ ನಾಥಃ) ಸಹಜವಾದ ಪ್ರಭುವು, ಎಂದರೆ ಇತರ ರಾಜಾಧಿರಾಜರಂತೆ ತಮ್ಮ ಪೂರ್ವಕರ್ಮಾನುಗುಣವಾಗಿ ಪ್ರಭುಪದವಿಯನ್ನು ಪಡೆದವನಲ್ಲ. ಈತನೇ ತ್ರೈಲೋಕ್ಯಕ್ಕೂ ಸಹಜವಾದ (ನಿಜವಾದ) ಪ್ರಭುವೆಂದರ್ಥವು. ಇತರದೇವತೆಗಳೂ, ರಾಜರೂ, ಔಪಾಧಿಕವಾದ ಮತ್ತು ನಶ್ವರವಾದ ಪ್ರಭುತ್ವವನ್ನು ಪಡೆದವರೆಂದೂ, ಈತನೇ ಚರಾಚರಾತ್ಮಕವಾದ ಸಕಲಪ್ರಪಂಚಕ್ಕೂ ಸ್ವತಸ್ಸಿದ್ಧನಾದ ಪ್ರಭುವೆಂದೂ ಭಾವವು. ಅಥವಾ (ಅನುರೂಪಃ) ಅನುಕೂಲವಾದ ರೂಪವುಳ್ಳವನು ಆನಂದಮಯವಾದ ದಿವ್ಯಸುಂದರವಿಗ್ರಹವುಳ್ಳವನು. ಅಥವಾ, (ಅನುರೂಪಃ) ಅನುಗತವಾದ (ಒಳಗಡಗಿದ) ರೂಪವುಳ್ಳವನು. ಸಮಸ್ತವಸ್ತುವನ್ನೂ ವ್ಯಾಪಿಸಿರುವ ರೂಪವುಳ್ಳವನು. ಸರ್ವಾಂತರ್ಯಾಮಿಯೆಂದು ಭಾವವು. ಅಥವಾ (ಅನುರೂಪಃ) ಅನುಪ್ರವಿಷ್ಟವಾದ ರೂಪವುಳ್ಳವನು. ಎಂದರೆ ಎಲ್ಲವನ್ನೂ ಅನುಸರಿಸಿದ ರೂಪವುಳ್ಳವನು. ಸರ್ವಶರೀರಿಯೆಂದು ಭಾವವು. ಅಥವಾ (ಅನುರೂಪಃ) ಅನುಸ್ಯೂತವಾದ ನಾನಾರೂಪವುಳ್ಳವನು. ಪರವ್ಯೂಹಾ

ಲಕ್ಷ್ಮಣನಿಗೆ ಅಣ್ಣನಾಗಿಯೂ,ಇರುವ ಆರಾಮನೇ ನಿಮಗೆ ಅನುರೂಪನಾದ ಪ್ರಭುವೆಂದೆನಿಸುವನು. ಈ ಮೂರುಲೋಕವೂ ಇದುವರೆಗೆ ಅನೇಕರಾಜರಿಂದ ಸನಾಥವೆಂದೆನಿಸಿಕೊಂಡಿದ್ದರೂ,ಈ ನಮ್ಮ ರಾಮನಿಂದ ಅದರ ಸನಾಥತ್ವವು ಇನ್ನೂ ಹೆಚ್ಚು ಶೋಭಾಸ್ಪದವಾಗುವುದು. ಆದುದರಿಂದ ಈ ಭೂಮಿಗೆ ರಾಮನ ಆಳ್ವಿಕೆಯಿಂದುಂಟಾಗತಕ್ಕ ಶ್ರೇಯಸ್ಸನ್ನುಂಟುಮಾಡುವುದಕ್ಕಾಗಿ, ನಾನು ಹೊತ್ತಿರುವ ರಾಜ್ಯದ ಭಾರವನ್ನು ಆತನಮೇಲೆ ಹೊರಿಸಿ, ನಿಶ್ಚಿಂತನಾಗಿ ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕೆಂದಿರುವೆನು. ಈಗ ಹೇಳಿದ ವಿಷಯಗಳೆಲ್ಲವೂ ನಿಮ್ಮ ಮನಸ್ಸಿಗೆ ತೃಪ್ತಿಕರವಾಗಿದ್ದರೆ,

---

ದ್ಯನೇಕ ರೂಪಗಳನ್ನು ಹೊಂದಿ ಅವತರಿಸಿದವನೆಂದರ್ಥವು. ಅಥವಾ (ಅನುರೂಪ:, ಅನ್-ಉ.ರೂಪ:) "ಉ" ಎಂದರೆ ರುದ್ರನು. ರುದ್ರಾದಿ ಇತರದೇವತೆಗಳಂತೆ ಈತನನ್ನೆಣಿಸಕೂಡದೆಂದರ್ಥವು. ದೇವದೇವನೆಂದು ಮುಖ್ಯಭಾವವು. ಮತ್ತು (ಸ ವೈನಾಥ:)"ವಿ"ಎಂದರೆ ಪಕ್ಷಿಗಳು. ವಿನಾಥವೆಂದರೆ ಪಕ್ಷಿಶ್ರೇಷ್ಠವಾದ ಹಂಸವು.ವೈನಾಥನೆಂದರೆ ಬ್ರಹ್ಮನು. ಆ ಬ್ರಹ್ಮನೊಡಗೂಡಿದವನು. ನಾಭಿಕಮಲದಲ್ಲಿ ಬ್ರಹ್ಮನನ್ನು ಧರಿಸಿರುವನೆಂದರ್ಥವು.ಅಥವಾ, ವಿನಾಥವೆಂದರೆ ಪಕ್ಷಿಶ್ರೇಷ್ಠನಾದ ಗರುಡನು. ಅವನನ್ನು ವಾಹನವಾಗಿ ಉಳ್ಳವನು ವೈನಾಥನು. ಗರುಡವಾಹನನೆಂದರ್ಥವು (ಲಕ್ಷ್ಮೀವಾನ್) ಲಕ್ಷ್ಮೀಪತಿಯು(ಲಕ್ಷ್ಮಣಾಗ್ರಜ:)ಇಲ್ಲಿ ಲಕ್ಷ್ಮಣಶಬ್ದಕ್ಕೆ ಕೈಂಕರ್ಯಪರತ್ವವನ್ನುಮಾತ್ರವೇ ಗ್ರಹಿಸಬೇಕು. ಲಕ್ಷ್ಮಣನಂತೆ ಕೈಂಕರ್ಯಪರರಾಗಿರುವವರಿಗೆ, ಅಥವಾ ಆಶ್ರಿತಲಕ್ಷಣಗಳುಳ್ಳವರಿಗೆ (ಅಗ್ರಜ:) ಅಣ್ಣನಂತೆ ಇರುವವನು.ಆಶ್ರಿತವತ್ಸಲನು. (ತ್ರೈಲೋಕ್ಯಮಪಿ) ಊರ್ಧ್ವಾಧೋಮಧ್ಯಲೋಕಗಳೆಂಬ ಮೂರೂ, ಅಥವಾ ನಿತ್ಯ, ಅನಿತ್ಯ, ನಿತ್ಯಾನಿತ್ಯಗಳೆಂಬ ಮೂರುವಿಧವಾದ ಲೋಕಗಳೂ,(ಯೇನ ನಾಥೇನ)ಯಾವ ನಾಥನಿಂದ, (ಇದರಿಂದ ಈತನ ನಾಥತ್ವವು ಎಂದಿಗೂ ನಿತ್ಯವಾದುದೆಂದು ಸೂಚಿತವಾಗುವುದು.)ಇಂತವನಿಂದ (ನಾಥವತ್ತರಂ ಸ್ಯಾತ್) ಉತ್ತಮನಾಥನುಳ್ಳುದಾಗುವುದು. ಇದರಿಂದ ಇಂದ್ರಾದಿದೇವತೆಗಳ ನಾಥತ್ವವು ಅನಿತ್ಯವಾದುದೆಂದೂ, ಈತನೇ ನಿಯತವಾದ ನಾಥನೆಂದೂ ಸೂಚಿತವಾಗುವುದು. ಬ್ರಹ್ಮರುದ್ರಾದಿಗಳ ನಾಥತ್ವವೂ ಸಾಮಾನ್ಯವಾದುದೇಹೊರತು ಅಷ್ಟುಮೇಲಾದುದಲ್ಲವೆಂಬ ಭಾವವು.ಇದೇ ಅರ್ಥವು "ಯುಗಕೋಟಿ ಸಹಸ್ರಾಣಿ ವಿಷ್ಣುಮಾರಾಧ್ಯ ಪದ್ಮಭೂ:। ಪುನಸ್ತ್ರೈಲೋಕ್ಯನಾಥತ್ವಂ ಪ್ರಾಪ್ತವಾನಿತಿ ಶುಶ್ರುಮ:॥" ಬ್ರಹ್ಮನು ಅನೇಕಕೋಟಿ ಸಹಸ್ರಯುಗಗಳವರೆಗೆ ವಿಷ್ಣುವನ್ನಾರಾಧಿಸಿ, ಲೋಕಾಧಿಪತ್ಯವನ್ನು ಹೊಂದಿದನೆಂದೂ, "ಮಹಾದೇವೋ ಮಹಾತ್ಮಾನಂ ಹುತ್ವಾದೇವದೇವೋ ಬಭೂವ"ರುದ್ರನು ಸರ್ವಮೇಧವೆಂಬ ಯಾಗಮು

ಮತ್ತು ನನ್ನ ಈ ಆಲೋಚನೆಗಳೆಲ್ಲವೂ ನಿಮಗೆ ಉಚಿತವಾಗಿ ತೋರಿದರೆ, ನೀವೆಲ್ಲರೂ ಈ ವಿಷಯದಲ್ಲಿ ಅನುಮತಿಯನ್ನು ಕೊಡಬೇಕು. ಅಥವಾ ನಾನು ಮುಂದೆ ಮಾಡಬೇಕಾದುದೇನೆಂಬುದನ್ನಾದರೂ ತಿಳಿಸಬೇಕು. ಈಗ ನಾನು ನನ್ನ ಮನಸ್ಸಿನ ಆಸೆಯನ್ನು ನಿಮಗೆ ತಿಳಿಸಿಬಿಟ್ಟಿರುವೆನು. ಇದರಮೇಲೆ ಹಿತಕರವಾದ ಬೇರೆ ಯಾವುದಾದರೂ ಮಾರ್ಗವು ನಿಮಗೆ ತೋರಿದ್ದಪಕ್ಷದಲ್ಲಿ ಆಲೋಚಿಸಿ ಹೇಳಬಹುದು. ಒಂದುವೇಳೆ ರಾಮನಲ್ಲಿ ನನಗಿರುವ ಪ್ರೀತಿವಿಶೇಷದಿಂದ ನನ್ನ ಮನಸ್ಸಿನಲ್ಲಿ ಈ ಆಲೋಚನೆಯು ಹುಟ್ಟಿದ್ದರೂ ಹುಟ್ಟಿರಬಹುದು. ಸಾಮಾನ್ಯವಾಗಿ ಲೋಕದಲ್ಲಿ ಮನುಷ್ಯರಿಗೆ ಪಕ್ಷಪಾತಬುದ್ಧಿಯಿಂದ ! ಯುಕ್ತಾಯುಕ್ತವಿಚಾರವಿಲ್ಲದೆ ಒಂದೊಂದಾಲೋಚನೆಯು ಹುಟ್ಟಬಹುದಾದುದರಿಂದ, ಆ ವಿಷಯವನ್ನು ಮಧ್ಯಸ್ಥರಾದವರ ಆಲೋಚನೆಗೆ ಬಿಟ್ಟರೆ, ಅವರು, ರಾಗದ್ವೇಷಾದಿಗಳೊಂದೂ ಇಲ್ಲದೆ, ನಿಷ್ಪಕ್ಷಪಾತಿಗಳಾಗಿ, ಪೂರ್ವಾಪರಪಕ್ಷಗಳನ್ನು ಚೆನ್ನಾಗಿ ವಿಮರ್ಶಿಸಿ ಹೇಳಬಹುದಲ್ಲವೆ! ಆದುದರಿಂದ ಯಾವ ಕಾರ್ಯಕ್ಕೂ ಮಧ್ಯಸ್ಥರಾದವರ ಆಲೋಚನೆಯೇ ಮೇಲು." ಎಂದನು. ದಶರಥನು ಹೀಗೆ ಹೇಳುತ್ತಿರುವದನ್ನು ಕೇಳಿ, ರಾಜರೆಲ್ಲರೂ ವರ್ಷಿಸುತ್ತಿರುವ ಮೇಘವನ್ನು ನೋಡಿ ನವಿಲುಗಳು ಸಂತೋಷಾತಿಶಯದಿಂದ ಕೇಕಾಧ್ವನಿಯನ್ನು ಮಾಡುವಂತೆ, ಆ ದಶರಥನನ್ನು ಬಹಳವಾಗಿ ಕೊಂಡಾಡಿದರು. ಆ ಸಭೆಯಲ್ಲಿದ್ದ ಇತರಜನಸಮೂಹವೂಕೂಡ, ಮಿತಿಮೀರಿದ ಸಂ

---

ಶದಿಂದ ಮಹಾತ್ಮನಾದ ವಿಷ್ಣುವನ್ನು ಉಪಾಸಿಸಿ, ದೇವದೇವತ್ವವನ್ನು ಪಡೆದನೆಂದೂ ಪ್ರಮಾಣಗಳಿಂದ ವ್ಯಕ್ತಪಡಿಸಲ್ಪಟ್ಟಿದೆ.

ಇದಕ್ಕೆ ಶೈವಮತಾನುಯಾಯಿಗಳ ಅರ್ಥಭೇದಗಳೇನೆಂದರೆ: - (ಸ:) ಆ ರಾಮನು, (ಅನುರೂಪ:, ಅ-ಉ-ರೂಪ:) ರುದ್ರಸ್ವರೂಪವುಳ್ಳವನಲ್ಲ. ಎಂದರೆ, ಸರ್ವೇಶ್ವರನಾದ ಶಿವನೊಬ್ಬನುಹೊರತು, ಉಳಿದ ಎಲ್ಲಾ ದೇವತೆಗಳಿಗೂ ಈತನು ಮೇಲಾದವನೆಂದು ಭಾವವು. ಅದರಂತೆಯೇ (ನಾಥವತ್ತರಂ) ಎಂಬುದರಿಂದ, ತ್ರೈಲೋಕ್ಯವು ಇಂದ್ರಾದಿಗಳಿಂದ ನಾಥವಂತವೆಂದೂ, ಅವರಿಗಿಂತ ಮೇಲಾದ ಈ ರಾಮನಿಂದ ನಾಥವತ್ತರವೆಂದೂ, ಅದಕ್ಕೆಮೇಲೆ ಸರ್ವೇಶ್ವರನಾದ ರುದ್ರನಿಂದ ನಾಥವತ್ತಮವಾಗುವುದೆಂದೂ ವ್ಯಂಜಿತವಾಗುವುದೆಂದು ವ್ಯಾಖ್ಯಾನಗಳನ್ನು ಮಾಡಿರುವರು.

ತೋಷದಿಂದ ರಾಜನನ್ನು ನೋಡಿ "ಭಲೆ! ಭಲೆ!" ಎಂದು ಉದ್ಘೋಷಿಸುತ್ತಿರಲು, ಅವರಿಗೆ ರಾಮನಲ್ಲಿರುವ ವಿಶ್ವಾಸಾತಿಶಯಕ್ಕೆ ಸೂಚಕವಾದ ಆ ಮಹಾಧ್ವನಿಯು, ನಾಲ್ಕುಕಡೆಗಳಿಂದಲೂ ಉಂಟಾದ ಪ್ರತಿಧ್ವನಿಯೊಡಗೂಡಿ, ಆ ಸಭಾಸ್ಥಾನಮಂಟಪವೆಲ್ಲವನ್ನೂ ನಡುಗಿಸುವಂತೆ ವ್ಯಾಪಿಸಿತು. ಆಗ ಅಲ್ಲಿದ್ದ ವಸಿಷ್ಠರೇ ಮೊದಲಾದ ಮಹರ್ಷಿಗಳೂ, ರಾಜರೂ, ಇತರಪುರಜನರೊಡಗೂಡಿ,ಯುಕ್ತಾಯುಕ್ತವಿಮರ್ಶನಪೂರ್ವಕವಾಗಿ ತಮ್ಮೊಳಗೆ ತಾವು ಚೆನ್ನಾಗಿ ಚರ್ಚಿಸಿ, ತಮ್ಮತಮ್ಮ ಮನಸ್ಸಿನಲ್ಲಿಯೂ ಬೇರೆಬೇರೆ ಚೆನ್ನಾಗಿ ಪರ್ಯಾಲೋಚಿಸಿ, ಏಕಾಭಿಪ್ರಾಯದಿಂದ ನಿರ್ಧಾರಮಾಡಿಕೊಂಡು, ದಶರಥರಾಜನನ್ನು ಕುರಿತು "ಎಲೈ ರಘುವಂಶೋತ್ತಮನೆ! ನೀನು ಅನೇಕಸಹಸ್ರವರ್ಷಗಳವರೆಗೆ ಬದುಕಿ, ಈಗ ಬಹಳವಾರ್ಧಕದಶೆಯನ್ನು ಹೊಂದಿರುವೆ. ಆದುದರಿಂದ ಈಗ ರಾಮನಿಗೆ ಯೌವರಾಜ್ಯಾಭಿಷೇಕವನ್ನು ಮಾಡುವದೇ ಉತ್ತಮವು. * ಮಹಾಬಾಹುವಾಗಿ, ರಘುವಂಶದ ವೀರರಲ್ಲಿ ಪ್ರಮುಖನಾಗಿ, ಮಹಾಬಲಾಢ್ಯನೆನಿಸಿಕೊಂಡಿರುವ

---

* ಇದಕ್ಕೆ "ಇಚ್ಛಾಮೋ ಹಿ ಮಹಾಬಾಹುಂ ರಘುವೀರಂ ಮಹಾಬಲಂ। ಗಜೇನ ಮಹತಾ ಯಾಂತಂ ರಾಮಂ ಛತ್ರಾವೃತಾನನಂ॥" ಎಂಬುದು ಮೂಲಶ್ಲೋಕವು. ಇದರಲ್ಲಿರುವ ವಿಶೇಷಾರ್ಥಗಳೇನೆಂದರೆ:-"ನಾನೇ ರಕ್ಷಕನಾಗಿರುವಾಗ ರಾಮನಿಗೆ ಅಭಿಷೇಕ ಮಾಡುವುದೇಕೆ?" ಎಂದು ದಶರಥನು ಶಂಕಿಸಬಹುದೋ ಎಂಬ ಸಂದೇಹದಿಂದ, ಅಲ್ಲಿದ್ದವರೆಲ್ಲರೂ "ನಾವು ರಕ್ಷಣಾರ್ಥವಾಗಿ ರಾಮಾಭಿಷೇಕವನ್ನು ಕೋರತಕ್ಕವರಲ್ಲ! ರಾಮನ ಸ್ವಾಭಾವಿಕಸೌಂದರ್ಯವನ್ನು ಈಗ ಕಣ್ಣಾರೆ ಕಂಡನುಭವಿಸುತ್ತಿರುವೆವು. ಮುಂದೆ ಆತನು ಪಟ್ಟಾಭಿಷಿಕ್ತನಾದಮೇಲೆ, ಆಗಿನ ಸೌಂದರ್ಯವಿಶೇಷವನ್ನೂ ಅನುಭವಿಸಬೇಕೆಂದಿರುವೆವು" ಎಂಬ ಅಭಿಪ್ರಾಯವನ್ನು ಈ ಶ್ಲೋಕದಿಂದ ತಿಳಿಸುವರೆಂದು ಗ್ರಹಿಸಬೇಕು. (ಇಚ್ಛಾಮಃ) ಅಪೇಕ್ಷಿಸುವೆವು" ಎಂಬ ಬಹುವಚನದಿಂದ ತಾವೆಲ್ಲರೂ ಐಕಕಂಠ್ಯದಿಂದ ಒಪ್ಪಿರುವೆವೆಂಬ ಭಾವವು ಸೂಚಿತವಾಗುವುದು. ಮತ್ತು (ಇಚ್ಛಾಮೋಹಿ) ಅಭಿಷೇಕಪಟ್ಟಬಂಧಾದಿಗಳಿಂದ ಕೂಡಿರುವ ರಾಮನನ್ನು ನೋಡಬೇಕೆಂಬ ಇಚ್ಛಾಮಾತ್ರವೇ ನಮಗಿರುವುದೇಹೊರತು, ಆ ಕಾರ್ಯನಿರ್ವಹಣವು ನಿನಗಧೀನವಾಗಿರುವುದು! ಮತ್ತು (ಇಚ್ಛಾಮೋಹಿ) "ಶ್ರಿಯಾಂಸಿ ಬಹುವಿಘ್ನಾನಿ" ಎಂಬಂತೆ, ಸತ್ಕಾರ್ಯಗಳಿಗೆ ಅನೇಕ ವಿಘ್ನಗಳು ಬರುವುದುಂಟು! ವಿಘ್ನಗಳು ಬಂದರೂ, ಬಾರದಿದ್ದರೂ, ನಮ್ಮ ಮನಸ್ಸಿನಕೋ

ನಮ್ಮ ರಾಮನು, ದೊಡ್ಡ ಆನೆಯಮೇಲೆ ಕುಳಿತು, ರಾಜಚಿಹ್ನವಾದ ಶ್ವೇತ ಚ್ಛತ್ರವು ನೆತ್ತಿಯಮೇಲೆ ಪ್ರಕಾಶಿಸುತ್ತಿರಲು, ಬೀದಿಯಲ್ಲಿ ಮೆರವಣಿಗೆ ಬರುವದನ್ನು ಕಣ್ಣಾರೆಕಂಡು ತೃಪ್ತಿಹೊಂದಬೇಕೆಂದು ನಮಗೂ ಬಹಳ ಆಸೆಯುಂಟು."ಎಂದರು. ಹೀಗೆ ಅವರೆಲ್ಲರೂ ಹೇಳುತ್ತಿರುವುದನ್ನು ಕೇಳಿ,ದಶ ರಥನು,ಅವರ ಮನಸ್ಸಿನ ಸಂತೋಷವನ್ನು ಚೆನ್ನಾಗಿ ಕಂಡುಕೊಂಡಿದ್ದರೂ, ತಿಳಿಯದಂತೆಯೇ ನಟಿಸುತ್ತ, ಅವರ ಬಾಯಿಯಿಂದ ಅದನ್ನು ಇನ್ನೂ ಸ್ಪ ಷ್ಟವಾಗಿ ಹೊರಡಿಸಬೇಕೆಂದುದ್ದೇಶಿಸಿ, "ಎಲೈರಾಜರೆ! ನಾನು ರಾಮನಿಗೆ ಅಭಿಷೇಕವನ್ನು ಮಾಡಬೇಕೆಂಬ ಮಾತನ್ನು ಸೂಚಿಸಿದೊಡನೆಯೇ, ನೀವು ಹಿಂದುಮುಂದನ್ನಾಲೋಚಿಸದೆ, ರಾಮನೇ ಪ್ರಭುವಾಗಿರಬೇಕೆಂಬ ಏಕಾಭಿ ಪ್ರಾಯವನ್ನು ಸೂಚಿಸಿಬಿಟ್ಟಿರಲ್ಲವೆ? ಇದರಿಂದ ನನಗೆ ಸ್ವಲ್ಪಸಂದೇಹ

---

ರಿಕೆಗಳಿಗೆ ಯಾವ ತಡೆಯೂ ಇಲ್ಲವಲ್ಲವೆ? ಎಂದು ಭಾವವು. (ಇಚ್ಛಾಮೋಹಿ)" ನಮಗೆ ಮೊದಲೇ ಈ ಅಭಿಪ್ರಾಯವು ಹುಟ್ಟಿದ್ದರೂ, ನಿನ್ನ ಧರ್ಮಪರಿಪಾಲನಕ್ಕೊಳಪಟ್ಟಿರುವ ನಾವು,ನಿನ್ನ ಅಭಿಪ್ರಾಯವನ್ನು ತಿಳಿದುಕೊಳ್ಳದೆ,ಯಾವ ಮಾತನ್ನೂ ಆಡಬಾರದೆಂದು ನಮ್ಮ ಆಸೆಯನ್ನು ಇದುವರೆಗೂ ಮರೆಸಿಕೊಂಡಿದ್ದೆವು. ಈಗ ನಿನ್ನ ಇಷ್ಟವು ನಮಗೆ ಚೆ ನ್ನಾಗಿ ತಿಳಿದುದರಿಂದ,ನಮ್ಮ ಇಷ್ಟವನ್ನೂ ತಿಳಿಸಿಬಿಟ್ಟಿರುವೆ"ವೆಂದಭಿಪ್ರಾಯವು.(ಮಹಾ ಬಾಹುಂ) ಆತನ ಬಾಹುಬಲಕ್ಕೆ ಈ ಭೂಮಿಯನ್ನು ಭರಿಸುವುದೊಂದು ಅಸಾಧ್ಯವಲ್ಲ ವೆಂದಭಿಪ್ರಾಯವು. (ಮಹಾಬಲಂ)ದೇಹಬಲಮನೋಬಲಗಳೆರಡೂ ಆತನಲ್ಲಿ ಸಂಪೂರ್ಣ ವಾಗಿರುವುದರಿಂದ, ರಾಜ್ಯಪರಿಪಾಲನಕಾರ್ಯಕ್ಕೆ ಆತನೇ ತಕ್ಕವನು. (ಗಜೇನ ಮಹತಾ ಯಾಂತಂ)ಮಹಾಗಜದಂತೆ.ಗಂಭೀರವಾದ ನಡೆಯುಳ್ಳ ಆ ರಾಮನು, ತನ್ನ ಸೌಂದರ್ಯ ವನ್ನು ಪುರಜನರಲ್ಲಿ ಅಬಾಲವೃದ್ಧರೂ ನೋಡಿ ಮನಸ್ತೃಪ್ತಿಯಾಗುವವರೆಗೆ ಅನುಭವಿಸ ಬೇಕಾದುದರಿಂದ, ಗಂಭೀರವಾದ ನಡೆಯುಳ್ಳ ಶತ್ರುಂಜಯವೆಂಬ ಪಟ್ಟದಾನೆಯಲ್ಲಿ ಕುಳಿತು ಬರುವಾಗ, ಆ ಆನಂದವನ್ನು ನಾವೆಲ್ಲರೂ ಅನುಭವಿಸಲೆಳಸುವೆವೆಂದಭಿಪ್ರಾ ಯವು (ರಾಮಂ ಛತ್ರಾವೃತಾನನಂ) ನಿಜಸೌಂದರ್ಯದಿಂದ ಜನಮನೋರಂಜಕನಾದ ಆ ರಾಮನಿಗೆ, ಆಕಾಲದಲ್ಲಿ ಹಿಡಿಯತಕ್ಕ ಶ್ವೇತಛತ್ರವು,ಏಕಾಧಿಪತ್ಯವನ್ನು ಸೂಚಿಸತಕ್ಕ ರಾಜಚಿಹ್ನವಾಗಿದ್ದರೂ, ಜನಗಳ ದೃಷ್ಟಿದೋಷವು ತಾಗದಂತೆ, ಆತನ ಮುಖವನ್ನು ಕಂ ಡೂಕಾಣದಹಾಗೆ ಮರೆಸತಕ್ಕುದಾಗಿಯೂ ಇರುವುದೆಂದು ಭಾವವು. ಇವೇ ಮೊದಲಾದ ಇನ್ನೂ ಅನೇಕಾರ್ಥಗಳು ವಿವರಿಸಲ್ಪಟ್ಟಿರುವುವು.

ವುಂಟಾಗಿರುವುದು. ನೀವು ಇಷ್ಟು ಆತುರದಿಂದ ಆ ಮಾತನ್ನು ಹೇಳುವುದಕ್ಕೆ ಕಾರಣವೇನು? ನಾನು ಎಷ್ಟೋ ಧರ್ಮದಿಂದ ನಿಮ್ಮನ್ನು ಪಾಲಿಸುತ್ತಿರುವಾಗಲೂ,ಏನೂ ಕಂಡರಿಯದ ಬಾಲನಾದ ರಾಮನಿಗೆ ಪಟ್ಟವನ್ನು ಕಟ್ಟಬೇಕೆಂದು ನೀವು ಅಪೇಕ್ಷಿಸುವುದೇಕೆ? ನನ್ನಲ್ಲಿರತಕ್ಕ ದೋಷಗಳೇನು! ನಿಮ್ಮ ಮನೋಭಿಪ್ರಾಯವನ್ನು ಮುಚ್ಚುಮರೆಯಿಲ್ಲದೆ ಯಥಾರ್ಥವಾಗಿ ತಿಳಿಸಿರಿ!" ಎಂದನು. ಅದನ್ನು ಕೇಳಿ,ಅಲ್ಲಿದ್ದ ರಾಜರೂ, ಪೌರಜಾನಪದರೂ,ಮಹಾತ್ಮನಾದ ದಶರಥನನ್ನು ನೋಡಿ, * "ರಾಜೇಂದ್ರಾ! ನಿನ್ನ ಮಗನ ಕಲ್ಯಾಣಗುಣಗಳು ಅಪರಿಮಿತವಾಗಿರುವುವು. ಆರೋಪಿತಗಳಲ್ಲದ ಸ್ವಾಭಾವಿಕಗುಣಗಳುಳ್ಳವನಾಗಿ, ದೇವತೆಗಳಿಗೆ ಸಮಾನನಾಗಿ, ಮಹಾಬುದ್ಧಿಶಾಲಿಯಾಗಿ ಪ್ರಕಾಶಿಸುತ್ತಿರುವ ಆ ರಾಮನ ಗುಣಗಳು ಸರ್ವಲೋಕಪ್ರಿಯಗಳಾಗಿಯೂ, ಸಂತೋಷಜನಕಗಳಾಗಿಯೂ ಇರುವುವು. ಈಗ ನೀನಾಗಿ ಕೇಳಿದುದರಿಂದ ಆ ಗುಣಗಳೆಲ್ಲವನ್ನೂ ನಾವು ಸಂಪೂರ್ಣವಾಗಿ ವಿವರಿಸಬೇಕಾಯಿತು.

---

* "ಬಹವೋ ನೃಪ ಕಲ್ಯಾಣಾ ಗುಣಾ: ಪುತ್ರಸ್ಯ ಸಂತಿತೇ" ಎಂಬುದೇ ಇದಕ್ಕೆಮೂಲವು. ಇದರಲ್ಲಿರುವ ವಿಶೇಷಾರ್ಥಗಳೇನೆಂದರೆ:—(ನೃಪ) "ಎಲೈ ಪ್ರಜಾಪಾಲಕನೆ!" ಈ ಸಂಬೋಧನೆಯಿಂದಲೇ ದಶರಥನಿಗೂ ರಾಮನಿಗೂ ಇರುವ ತಾರತಮ್ಯವು ಸೂಚಿತವಾಗುವುದು.ಪ್ರಜಾಪಾಲನವೆಂಬ ಗುಣವೊಂದುಮಾತ್ರವೇ ನಿನ್ನಲ್ಲಿ ಸಂಪೂರ್ಣವಾಗಿರಬಹುದಾದರೂ, ರಾಮನಲ್ಲಿರತಕ್ಕ ಕಲ್ಯಾಣಗುಣಗಳು ಇನ್ನೂ ಅಪರಿಮಿತವೆಂದು ಭಾವವು. (ತೇ ಪುತ್ರಸ್ಯ ಗುಣಾ:) ನಿನ್ನ ಮಗನ ಗುಣಗಳೆಂಬುದರಿಂದ "ಬೇರೆ ಯಾರಲ್ಲಿಯಾದರೂ ನಿನಗಿಂತಲೂ ಹೆಚ್ಚಾದ ಗುಣಾಧಿಕ್ಯವನ್ನು ಹೇಳಿದರೆ, ನಿನ್ನ ಮನಸ್ಸಿಗೆ ಕಿಂಕ್ರಿಯುಂಟಾಗಬಹುದು. "ಪುತ್ರಾದಿಚ್ಛೇತ್ಪರಾಜಯಂ" ಎಂಬ ನ್ಯಾಯದಿಂದ, ನಿನ್ನ ಮಗನ ಗುಣಾತಿಶಯಗಳನ್ನೇ ನಾವು ಹೇಳುವುದರಿಂದ, ನೀನು ಅಂಗೀಕರಿಸಬೇಕಾದುದೆಂದೇ ಭಾವವು. ಮತ್ತು ನಿನ್ನ ಪುತ್ರನಾದುದರಿಂದಲೇ ಆತನಿಗೆ ಈ ಗುಣಗಳುಂಟಾದುವೆಂದೂ ಸೂಚಿತವು. (ಕಲ್ಯಾಣಾ:) ಎಂದರೆ,ಸಕಲವಿಧವಾದ ಹೇಯಗುಣಗಳಿಗೂ ವಿರೋಧಿಗಳೆಂದರ್ಥವು. ಇದರಿಂದ ಆತನ ಗುಣಗಳು ಸ್ವತ: ಶುಭಕರಗಳಾದುವಲ್ಲದೆ ದುರ್ಗುಣಗಳನ್ನು ಪರಿಹರಿಸತಕ್ಕವುಗಳೂ ಆಗಿರುವುವೆಂದಭಿಪ್ರಾಯವು ಈ ಗುಣಾತಿಶಯಗಳಿಗಾಗಿಯೇ ಆತನು ಅಭಿಷೇಕಾರ್ಹನೆಂದು ಹೇಳುವೆವೇಹೊರತು, ಬೇರೆ ಕಾರಣಗಳಿಂದ ನಾವು ಹೇಳಿದವರಲ್ಲವೆಂದು ಜನಗಳ ಆಶಯವು.

ಆತನು ಅಮಾನುಷಗಳಾದ ತನ್ನ ವೀರ್ಯಶೌರ್ಯಾದಿಗುಣಗಳಿಂದ ಸಾಕ್ಷಾದ್ವೇವೇಂದ್ರನನ್ನು ಹೋಲುತ್ತಿರುವನು. ಎಣೆಯಿಲ್ಲದ ಪರಾಕ್ರಮವುಳ್ಳವನಾಗಿ, ಇಕ್ಷ್ವಾಕುವಂಶೀಯರಲ್ಲಿ ತಾನೇ ಬಹಳ ಮೇಲೆನಿಸಿರುವನು. ಲೋಕದಲ್ಲಿ ಸತ್ಪುರುಷನೆಂಬ ಖ್ಯಾತಿಯು ಆತನೊಬ್ಬನಿಗೇ ಸಲ್ಲುವುದು. ಸತ್ಯಧರ್ಮಗಳೆರಡಕ್ಕೂ ಆತನೇ ನಿತ್ಯಾಶ್ರಯನಾದವನು. ಧರ್ಮವೂ, ಅದಕ್ಕೆ ಫಲರೂಪವಾದ ಸಂಪತ್ತೂ, ಆ ರಾಮನೊಬ್ಬನಿಂದಲೇ ಸಂಪೂರ್ಣವಾದ ಶೋಭಾತಿಶಯವನ್ನು ಹೊಂದಿರುವುವು. ಇತರಾಪೇಕ್ಷೆಯಿಲ್ಲದೆ ರಾಮನೊಬ್ಬನೇ ಅವುಗಳನ್ನು ನಿರ್ವಹಿಸಬಲ್ಲನು ಆತನು ಲೋಕಾಹ್ಲಾದಕತ್ವದಲ್ಲಿ ಚಂದ್ರನಿಗೂ, ತಾಳ್ಮೆಯಲ್ಲಿ ಭೂದೇವಿಗೂ, ಬುದ್ಧಿಯಲ್ಲಿ ಬೃಹಸ್ಪತಿಗೂ, ವೀರ್ಯದಲ್ಲಿ ಇಂದ್ರನಿಗೂ ಎಣೆಯೆನಿಸಿಕೊಂಡಿರುವನು. ಸಮಸ್ತಧರ್ಮಗಳನ್ನೂ ಚೆನ್ನಾಗಿ ಬಲ್ಲವನು. ಸತ್ಯಸಂಧನು. ತನಗಿಂತಲೂ ನಿಕೃಷ್ಟರಾದವರಲ್ಲಿಕೂಡ ವಿಶೇಷಸ್ನೇಹಭಾವದಿಂದ ಕಲೆತಿರತಕ್ಕ ಸುಸ್ವಭಾವವುಳ್ಳವನು. ಅಸೂಯೆಯಿಲ್ಲದವನು. ಬಹುಳತಾಳ್ಮೆಯುಳ್ಳವನು. ಕುಪಿತರನ್ನಾಗಲಿ, ದುಃಖಿತರನ್ನಾಗಲಿ, ತನ್ನ ಮೃದುವಾಕ್ಯಗಳಿಂದ ನಿಮಿಷಮಾತ್ರದಲ್ಲಿ ಸಮಾಧಾನಪಡಿಸುವನು. ಆತನ ಮಾತುಗಳಲ್ಲಿ ಯಾವಾಗಲೂ ಇಂಪು ಸೋರುತ್ತಿರುವುದು. ಇತರರು ಮಾಡಿದ ಉಪಕಾರವನ್ನು ಎಂದಿಗೂ ಮರೆಯತಕ್ಕವನಲ್ಲ. ಜಿತೇಂದ್ರಿಯನು. ಬಹುಮೃದುಸ್ವಭಾವವುಳವನು. ಸ್ಥಿರಮನಸ್ಸುಳ್ಳವನು. ಯಾವಾಗಲೂ ಶುಭಾಶಯವುಳ್ಳವನು.*ಯಾವ ಪ್ರಾಣಿಗಳೊಡನೆಯೂ ಪ್ರಿಯವನ್ನಾಡತಕ್ಕವನು.

---

* "ಪ್ರಿಯವಾದೀ ಚ ಭೂತಾನಾಂ ಸತ್ಯವಾದೀ ಚ ರಾಘವಃ" ಎಂಬುದೇ ಇದಕ್ಕೆ ಮೂಲವು. ಇಲ್ಲಿ "ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾನ್ನ ಬ್ರೂಯಾತ್ಸತ್ಯಮಪ್ರಿಯಂ । ಪ್ರಿಯಂಚ ನಾನೃತಂ ಬ್ರೂಯಾತ್ ಏಷ ಧರ್ಮಸ್ಸನಾತನಃ॥" ಎಂಬವಾಕ್ಯಲಕ್ಷಣಾನುಸಾರವಾಗಿ, ಇತರರಿಗೆ ಕೆಡುಕನ್ನುಂಟುಮಾಡದೆ, ಹಿತಕರವಾಗಿಯೂ ಸತ್ಯವಾಗಿಯೂ ಇರುವ ಮಾತುಗಳನ್ನೇ ನುಡಿಯಬೇಕೇಹೊರತು, ಸತ್ಯವಾಗಿದ್ದರೂ ಇತರರಿಗೆ ಅಪ್ರಿಯವಾದುದನ್ನಾಗಲಿ, ಇತರರಿಗೆ ಪ್ರಿಯವಾದುದೆಂಬುದಕ್ಕಾಗಿ ಅಸತ್ಯವನ್ನಾಗಲಿ ಹೇಳಕೂಡದೆಂಬ ಧರ್ಮಸೂಕ್ಷ್ಮವನ್ನರಿತೇ, ರಾಮನು ಮಾತಾಡತಕ್ಕವನೆಂಬ ಭಾವವು ಇಲ್ಲಿ ಸೂಚಿತವಾಗುವುದು. ಮತ್ತು ಹಿರಿಯರಲ್ಲಿ ದಾಕ್ಷಿಣ್ಯದಿಂದಲಾಗಲಿ, ಗುರುಗಳಲ್ಲಿ ಭಯದಿಂದಲಾಗಲಿ, ಅಂತಃಪುರಸ್ತ್ರೀಯರಲ್ಲಿ ಮೋಹದಿಂದಲಾಗಲಿ ಸಹ

ಆದರೆ ಎಂದಿಗೂ ಸತ್ಯವನ್ನು ಬಿಡತಕ್ಕವನಲ್ಲ. * ಬಹುಶ್ರುತರೆನಿಸಿಕೊಂಡಿರುವ ವೃದ್ಧರಾದ ಬ್ರಾಹ್ಮಣರಲ್ಲಿಗೆ ತಾನಾಗಿ ಹೋಗಿ, ಅವರನ್ನು ಉಪಾಸನೆಮಾಡಿ, ಸಾರಗ್ರಹಣವನ್ನು ಮಾಡತಕ್ಕವನು. ಇದರಿಂದಲೇ ಆತನಿಗೆ ಮಹಾಗುಣಾಢ್ಯನೆಂಬ ಕೀರ್ತಿಯೂ, ಬಹಳ ಪರಾಕ್ರಮಿಯೆಂಬ ಖ್ಯಾತಿಯೂ, ಶತ್ರುಗಳನ್ನಡಗಿಸತಕ್ಕ ಮಹಾವೀರ್ಯವೂ ದಿನದಿನಕ್ಕೆ ಹೆಚ್ಚುತ್ತಿರುವುದು. ದೇವತೆಗಳೂ, ರಾಕ್ಷಸರೂ, ಮನುಷ್ಯರೂ ಉಪಯೋಗಿಸತಕ್ಕ ಅಸ್ತ್ರವಿಶೇಷಗಳೆಲ್ಲವನ್ನೂ ಆತನು ಚೆನ್ನಾಗಿ ತಿಳಿದಿರುವನು. ಆತನು †ಸಾಂಗವಾಗಿ ವೇದಾಧ್ಯಯನವನ್ನು ಮಾಡಿ, ಅನೇಕವ್ರತಗಳನ್ನು ನಡೆಸಿ, ‡ಸಮಾವರ್ತನವನ್ನು ಹೊಂದಿರುವನು. ಗಾನಶಾಸ್ತ್ರದಲ್ಲಿ ಈ ಲೋಕದಲ್ಲಿ ಆತನನ್ನು ಮೀರಿಸಿದವರೊಬ್ಬರೂ ಇಲ್ಲ. ಈತನ ಮಾತೃಪಿತೃವಂಶಗಳೆರಡೂ ಬಹಳ ಪರಿಶುದ್ಧವಾದುವು. ಬಹಳ ಸಾಧುವೆನಿಸಿದ್ದರೂ ದೈನ್ಯವನ್ನು ತೋರಿಸದ

---

ಯೋಚಿತವಾಗಿಮಾತ್ರವೇ ರಾಮನು ಈ ನಿಯಮಂದಿದ ಮಾತಾಡತಕ್ಕವನಲ್ಲ. (ಭೂತಾನಾಂ) ಸಾಮಾನ್ಯವಾಗಿ ಯಾವಪ್ರಾಣಿಗಳಲ್ಲಿಯೂ ಈ ನಿಯಮವನ್ನೇ ಅನುಸರಿಸಿ ಮಾತಾಡುವವನೆಂದು ಭಾವವು. (ರಾಘವಃ) ರಘುವಂಶದಲ್ಲಿ ಹುಟ್ಟಿದವರಿಗೆ, ಪ್ರಿಯವಾಗಿಯೂ, ಸತ್ಯವಾಗಿಯೂ ಮಾತಾಡುವುದೇ ಕುಲಕ್ರಮಾಗತವಾದ ಧರ್ಮವೆಂದು ರಘುರಾಕ್ಷಸಸಂವಾದಗಳಲ್ಲಿ ವ್ಯಕ್ತವಾಗಿರುವುದರಿಂದ, ಆ ವಂಶದವನಾದ ಈತನಿಗೆ ಅದು ಸಹಜಧರ್ಮವೆಂದೂ ಭಾವವು.

* ಇಲ್ಲಿ ಬಹುಶ್ರುತರೆಂದರೆ ಅನೇಕಾಚಾರ್ಯರಲ್ಲಿ, ಅನೇಕ ಕಾಲಗಳವರೆಗೆ, ಅನೇಕ ಶಾಸ್ತ್ರಗಳನ್ನು, ಅನೇಕವಿಧವಾಗಿ ಕೇಳಿ ತಿಳಿದವರೆಂದೂ, ವೃದ್ಧರೆಂದರೆ, ಜ್ಞಾನವೃದ್ಧರಾಗಿಯೂ, ವಯೋವೃದ್ಧರಾಗಿಯೂ, ಅನುಭವವೃದ್ಧರಾಗಿಯೂ ಇರುವವರೆಂದೂ ಅರ್ಥವು.

† "ಶಿಕ್ಷಾ ವ್ಯಾಕರಣಂ ಛಂದೋ ನಿರುಕ್ತಂ ಜ್ಯೋತಿಷಂ ತಥಾ । ಕಲ್ಪಶ್ಚೇತಿ ಷಡಂಗಾನಿ ವೇದಸ್ಯ" ಎಂಬಂತೆ ಆರು ವೇದಾಂಗಗಳನ್ನು ತಿಳಿದವನೆಂದರ್ಥವು.

‡ "ವಿದ್ಯಾವ್ರತಸ್ನಾತಃ" ಎಂದರೆ, "ವೇದಮಧೀತ್ಯ ಸ್ನಾಯಾತ್" ಎಂಬ ಸ್ಮೃತಿಪ್ರಮಾಣದಿಂದ, ಸಮಸ್ತವೇದಾಧ್ಯಯನವ್ರತಾಚರಣವಾದಮೇಲೆ ಮಾಡಬೇಕಾದ ಸ್ನಾನಕರ್ಮಗಳನ್ನು ಮಾಡಿದವನೆಂದರ್ಥವು.

ಗಂಭೀರಸ್ವಭಾವವುಳ್ಳವನು. ಅತಿತೀಕ್ಷ್ಣವಾದ ಬುದ್ಧಿವಿಕಾಸವುಳ್ಳವನು. ಧರ್ಮಾರ್ಥಗಳನ್ನು ಪ್ರತಿಪಾದಿಸುವುದರಲ್ಲಿ ಸಮರ್ಥರಾದ ಬ್ರಾಹ್ಮಣಶ್ರೇಷ್ಠರಿಂದ ಚೆನ್ನಾಗಿ ಶಿಕ್ಷಿಸಲ್ಪಟ್ಟವನು ಆತನುತನ್ನ ದೇಶದಲ್ಲಿರುವ ಗ್ರಾಮಗಳ, ಅಥವಾ ಪಟ್ಟಣದ ರಕ್ಷಣೆಗಾಗಿ ಶತ್ರುಗಳೊಡನೆ ಯುದ್ಧವು ಸಂಭವಿಸಿದಾಗ ; ಲಕ್ಷ್ಮಣನೊಡನೆ ಹೊರಟು, ಅಲ್ಲಿ ಜಯವನ್ನು ಹೊಂದದೆ ಹಿಂತಿರುಗತಕ್ಕವನಲ್ಲ. ಹೀಗೆ ಜಯವನ್ನು ಹೊಂದಿದಮಾತ್ರದಲ್ಲಿಯೇ ತೃಪ್ತನಾಗದೆ, ಆನೆಯನ್ನೋ, ರಥವನ್ನೋ ಏರಿ, ಪುರಪ್ರವೇಶ ಮಾಡಿದಮೇಲೆ, ಪುರವಾಸಿಗಳಲ್ಲಿ ಒಬ್ಬೊಬ್ಬರನ್ನೂ ತನ್ನ ಬಂಧುಜನರಂತೆ ಪ್ರೀತಿಯಿಂದ ಭಾವಿಸುವುದು, ಅವರ ಕ್ಷೇಮಲಾಭಗಳನ್ನು ವಿಚಾರಿಸುವುದು, ಮತ್ತು ತಂದೆಯು ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನು ಕಾಣುವಂತೆ ಅವರನ್ನು ಕಾಣುವುದು,ಅವರ ಪುತ್ರ ಮಿತ್ರ ಕಳತ್ರ ಪರಿಜನಾದಿಗಳೆಲ್ಲರ ಯೋಗಕ್ಷೇಮಗಳನ್ನೂ ,ಅವರ ಅಗ್ನಿಹೋತ್ರಾದಿಕಾರ್ಯಗಳ ನಿರ್ವಿಘ್ನಪರಿಸಮಾಪ್ತಿಯನ್ನೂ ಒಂದೊಂದಾಗಿ ವಿಚಾರಿಸುವುದು,ಇವೆಲ್ಲವೂ ಆದಮೇಲೆತೃಪ್ತನಾಗುವನು.ಮತ್ತು ಆಗಾಗ ನಮ್ಮನ್ನು ಕುರಿತು “ನಿಮ್ಮ ಆಶ್ರಿತರೆಲ್ಲರೂ ಅವರವರ ಕೆಲಸಗಳಲ್ಲಿ ಶ್ರದ್ಧೆಯಿಟ್ಟು ನಿಮ್ಮನ್ನು ಉಪಚರಿಸುತ್ತಿರುವರೆ?” ಎಂದು ವಿಚಾರಿಸುತ್ತಿರುವನು. ಇತರರ ದುಃಖವನ್ನು ನೋಡಿದಾಗ ಅವರಿಗಿಂತಲೂ ತಾನು ಹೆಚ್ಚಾಗಿ ದುಃಖಿಸುವನು. ಅವರಿಗೆ ಯಾವುದಾದರೂ ಅಭ್ಯುದಯಗಳುಂಟಾದುದನ್ನು ನೋಡಿದಾಗ, ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳ ಅಭ್ಯುದಯವನ್ನು ನೋಡಿ ತಂದೆಯು ಎಷ್ಟು ಸಂತೋಷಪಡುವನೋ, ಅಷ್ಟು ಸಂತೋಷಹೊಂದುವನು. ಎಂತಹ ವಿಪತ್ತಿನಲ್ಲಿಯಾಗಲಿ ಸತ್ಯವನ್ನು ಬಿಡದೆ ನುಡಿಯುವನು. ಮಹಾಧನುಸ್ಸನ್ನು ಧರಿಸತಕ್ಕವನು. ವೃದ್ಧರನ್ನು ಬಹುವಿಶ್ವಾಸದಿಂದ ಸೇವಿಸತಕ್ಕವನು. ಇಂದ್ರಿಯಗಳನ್ನು ಜಯಿಸಿದವನು. ಯಾವಾಗಲೂ ಹಸನ್ಮುಖನಾಗಿಯೇ ಮಾತಾಡತಕ್ಕವನು. ಎಂತಹ ಕಷ್ಟಕಾಲಗಳಲ್ಲಿಯೂ ಧರ್ಮವನ್ನು ಬಿಡತಕ್ಕವನಲ್ಲ. ಆಶ್ರಿತರ ಶ್ರೇಯಸ್ಸನ್ನು ಅಕ್ಕರೆಯಿಟ್ಟು ನಡೆಸುವನು. ಕಿರುಕುಳದ ಮಾತುಗಳನ್ನಾಗಲಿ, ಇತರವಿಧವಾದ ದುರ್ಭಾಷೆಗಳನ್ನಾಗಲಿ ಕಿವಿಗೊಟ್ಟು ಕೇಳತಕ್ಕವನಲ್ಲ. ವಾದಪ್ರಸಕ್ತಿಯು ಬಂದಾಗ,ಮೇ

ಲುಮೇಲಿನ ಯುಕ್ತಿವಾದಗಳಿಂದ ಬೃಹಸ್ಪತಿಯಂತೆ ಮಾತಾಡುವನು. ಅಂದವಾದ ಹುಬ್ಬುಗಳಿಂದಲೂ,ವಿಸ್ತಾರವಾದ ಮತ್ತು ಕೆಂಪಾದ ಕಣ್ಣುಗಳಿಂದಲೂ, ಲೋಕಾಭಿರಾಮನೆನಿಸಿಕೊಂಡ ಆ ರಾಮನು, ಸಾವಿಗಂಜದ ಶೌರ್ಯದಿಂದಲೂ, ತಾನು ಯಾವ ಅಪಾಯಕ್ಕೂ ಸಿಕ್ಕದೆ ಶತ್ರುಗಳನ್ನಾಕ್ರಮಿಸತಕ್ಕ ಪರಾಕ್ರಮದಿಂದಲೂ, ಸಾಕ್ಷಾದ್ವಿಷ್ಣುದೇವನಂತೆಯೇ ತೋರುವನು.ಪ್ರಜೆಗಳನ್ನು ಪಾಲಿಸತಕ್ಕ ರೀತಿಯನ್ನು ಅವನು ಚೆನ್ನಾಗಿ ಬಲ್ಲನು.ಇಂದ್ರಿಯಚಾಪಲ್ಯಗಳಿಗೆ ಆತನು ಎಂದಿಗೂ ಎಡೆಗುಡತಕ್ಕವನಲ್ಲ. ಎಲೈ ರಾಜನೆ! ಹೆಚ್ಚಾಗಿ ಹೇಳಿದುದರಿಂದೇನು? ಆ ರಾಮನು ಮೂರು ಲೋಕಗಳನ್ನೂ ತಾನೊಬ್ಬನೇ ಪಾಲಿಸತಕ್ಕ ಸಾಮರ್ಥ್ಯವುಳ್ಳವನು! ಅವುಗಳಲ್ಲಿ ಏಕದೇಶವಾದ ಈ ಭೂಮಿಯನ್ನು ಪಾಲಿಸುವುದು ಅವನಿಗೆಷ್ಟುಮಾತ್ರವೆಂದೆಣಿಸಿರುವೆ? ಆತನ ಕೋಪವಾಗಲಿ, ಅಥವಾ ಆತನ ಅನುಗ್ರಹವಾಗಲಿ ನಿರರ್ಥಕವಾಗಿ ಹೋಗತಕ್ಕವುಗಳಲ್ಲ. ಅವುಗಳ ಫಲವನ್ನು ಸಂಪೂರ್ಣವಾಗಿ ತೋರಿಸಿಯೇಬಿಡುವುವು. ಅವನು ನ್ಯಾಯರೀತಿಯಿಂದ ಯಾರು ವಧ್ಯರೆಂದು ಕಾಣಿಸುವರೋ ಅವರನ್ನು ಕೊಂದೇಬಿಡುವನು. ಅವಧ್ಯರೆಂದು ತೋರಿಬಂದರೆ ಅಂತವರಲ್ಲಿ ಕೋಪವನ್ನು ಕೂಡ ತೋರಿಸತಕ್ಕವನಲ್ಲ. ತನಗೆ ಯಾರಲ್ಲಿ ಅನುಗ್ರಹವುಂಟಾಗುವುದೋ ಅಂತವರ ಇಷ್ಟಾರ್ಥಗಳೆಲ್ಲವನ್ನೂ ತಪ್ಪದೆ ಕೈಗೂಡಿಸುವನು. ಶಮಪ್ರಧಾನಗಳಾಗಿ, ಸಮಸ್ತಪ್ರಜೆಗಳೂ ಅಭಿನಂದಿಸತಕ್ಕವುಗಳಾಗಿ, ಸರ್ವಲೋಕಪ್ರಿಯಗಳಾಗಿರುವ ಇಂತಹ ಕಲ್ಯಾಣಗುಣಗಳಿಂದ, ಸಹಸ್ರಕಿರಣಗಳಿಂದ ಸೂರ್ಯನು ಹೇಗೋ ಹಾಗೆ ಪ್ರಕಾಶಿಸುತ್ತಿರುವನು. ಹೀಗೆ ಲೋಕೋತ್ತರಗುಣಗಳಿಂದ ಕೂಡಿದವನಾಗಿಯೂ, ಸತ್ಯಪರಾಕ್ರಮವುಳ್ಳವನಾಗಿಯೂ, ದಿಕ್ಪಾಲಕರಿಗೆ ಸಮಾನನಾಗಿಯೂ ಇರುವ ರಾಮನನ್ನು ಈ ಭೂಮಿಯೇ (ಭೂಪ್ರಜೆಗಳೆಲ್ಲರೂ) ತನಗೆ ನಾಥನನ್ನಾಗಿ ಅಪೇಕ್ಷಿಸುವುದು. ಎಲೈರಘುವಂಶೋತ್ತಮನೆ?ಈತನು ನಿನ್ನ,ಮತ್ತು ಪ್ರಜೆಗಳ ಶ್ರೇಯಸ್ಸಿಗಾಗಿಯೇ ಇಲ್ಲಿ ಹುಟ್ಟಿರುವನೆಂದು ತಿಳಿ! ಮರೀಚಿಪುತ್ರನಾದ ಕಶ್ಯಪನಂತೆ ಈತನು ನಿನ್ನ ಹೊಟ್ಟೆಯಲ್ಲಿ ಹುಟ್ಟಿ, ಸಮಸ್ತವಿಧಗಳಾದ ಸತ್ಪುತ್ರಲಕ್ಷಣಗಳಿಂದ ಕೂಡಿರುವುದು, ನಿನ್ನ ಜನ್ಮಾಂ

ತರಭಾಗ್ಯವಿಶೇಷವಲ್ಲದೆ ಮತ್ತೆ ಬೇರೆಯಲ್ಲ! ಎಲೈ ರಾಜನೆ! ನಮ್ಮ ಅಭಿಪ್ರಾಯವೂ ಹಾಗಿರಲಿ! ದೇವಜಾತಿಯವರಾಗಲಿ, ರಾಕ್ಷಸಜಾತಿಯವರಾಗಲಿ, ಮನುಷ್ಯರಾಗಲಿ, ಗಂಧರ್ವರಾಗಲಿ, ನಾಗರಾಗಲಿ,ನಿನ್ನ ದೇಶದಲ್ಲಿ ಇರತಕ್ಕವರೊಬ್ಬೊಬ್ಬರೂ ಪ್ರಸಿದ್ಧಶೀಲನಾದ ಆ ರಾಮನಿಗೆ ಯಾವಾಗಲೂ ಶ್ರೇಯಸ್ಸನ್ನೇ ಕೋರುತ್ತ, ಆತನ ಆಯುರಾರೋಗ್ಯವೀರ್ಯಾದಿಗಳನ್ನೇ ಬಯಸುತ್ತಿರುವರು. ನಿನ್ನ ದೇಶದೊಳಗಿನ ಪೌರಜಾನಪದರುಮಾತ್ರವೇ ಅಲ್ಲದೆ, ಹೊರದೇಶದವರೂಕೂಡ ನಿನ್ನ ರಾಮನ ಅಭ್ಯುದಯಕಾಲವನ್ನೇ ಅತ್ಯಾತುರದಿಂದ ಇದಿರುನೋಡುತ್ತಿರುವರು. . * ಸ್ತ್ರೀಯರಲ್ಲಿ ವಯಸ್ಸುಕಳೆದವರಾಗಿದ್ದರೂ,ನಡುಪ್ರಾಯದವರಾಗಿದ್ದರೂ,ಯಶಸ್ವಿಯಾದ ನಿನ್ನ ರಾಮನ ಶ್ರೇಯಸ್ಸಿಗಾಗಿ,ಹಗಲುರಾತ್ರಿಯೂ ಕಂಡಕಂಡ ದೇವತೆಗಳಿಗೆಲ್ಲಾ ಅಕ್ಕರೆಯಿಂದ ಕೈಮುಗಿಯುತ್ತಿರುವರು. ಎಲೈಸ್ವಾಮಿಯೇ! ಅವರ ಈಕೋರಿ

---

* ಇಲ್ಲಿ ಸ್ತ್ರೀಯರೆಂಬುದರಿಂದ, ಅವರು ಯಾವಾಗಲೂ ತಮ್ಮ ಅಂತರಂಗಾಭಿಪ್ರಾಯವನ್ನು ಹೊರಕ್ಕೆ ಕಾಣಿಸದ ಗಂಭೀರಸ್ವಭಾವವುಳ್ಳವರಾಗಿದ್ದರೂ, ರಾಮನಲ್ಲಿರತಕ್ಕ ಪ್ರೇಮಕ್ಕೆ ಪರವಶರಾಗಿ, ತಮ್ಮ ಅಂತರಂಗವನ್ನು ದೇವತಾನಮಸ್ಕಾರಾದಿಗಳಿಂದ ಹೊರಬೀಳಿಸಬೇಕಾಯಿತೆಂದು ಭಾವವು.

ಇದರಂತೆಯೇ ಅವಯವಪಾಟವವಿಲ್ಲದ ಸೋಮಾರಿಗಳಾಗಿ, ಯಾವ ಕೆಲಸದಲ್ಲಿಯೂ ಆದರವಿಲ್ಲದಷ್ಟು ವೃದ್ಧರಾದವವರೂ,ಪ್ರಾಯದ ಮದದಿಂದ ವಿವೇಕಶೂನ್ಯರಾಗಿ ಮುಂದುಗಾಣದಿರುವವರೂಕೂಡ, ರಾಮನಲ್ಲಿರುವ ಪ್ರೇಮಾತಿಶಯಕ್ಕೆ ಕಟ್ಟುಬಿದ್ದು, ಆತನ ಶ್ರೇಯಸ್ಸಿಗಾಗಿ ಮಾಡಬೇಕಾದ ದೇವತಾನಮಸ್ಕಾರಗಳನ್ನು ಮಾಡುತಿದ್ದರೆಂದೂ ಗ್ರಹಿಸಬೇಕು. ''ಕಂಡಕಂಡ ದೇವತೆಗಳಿಗೆಲ್ಲಾ ಕೈಮುಗಿಯುತ್ತಿರುವ" ರೆಂಬುದರಿಂದ, ಇವರಿಗೆ ರಾಮನಲ್ಲಿರುವ ಪ್ರೇಮದ ಪರಾಕಾಷ್ಠೆಯು, "ಯಾವ ದೇವತೆಯನ್ನು ಭಜಿಸಬಹುದು? ಯಾವ ದೇವತೆಯನ್ನು ಭಜಿಸಬಾರದು? ಯಾವ ದೇವತೆಯನ್ನು ಭಜಿಸುವುದು ತಮ್ಮ ಸ್ವರೂಪಾನುರೂಪವಾದುದು?" ಎಂಬ ಯುಕ್ತಾಯುಕ್ತವಿವೇಚನೆಯನ್ನೇ ತಪ್ಪಿಸುವಷ್ಟು ಪರವಶರನ್ನಾಗಿ ಮಾಡಿತೆಂದು ಭಾವವು. ಅಥವಾ (ಯಶಸ್ವಿನಃ) ಎಂಬುದನ್ನು ದೇವತೆಗಳಿಗೆ ವಿಶೇಷಣವನ್ನಾಗಿ ಮಾಡಿದರೂ ಮಾಡಬಹುದು. ಆಗ ಬಯಸಿದ ಕೋರಿಕೆಗಳೆಲ್ಲವನ್ನೂ ಕೊಡುವುದರಿಂದ ಖ್ಯಾತಿಹೊಂದಿದ ದೇವತೆಗಳನ್ನು ಭಜಿಸುತ್ತಿದ್ದರೆಂದು ಭಾವವು.

ಕೆಯು ನಿನ್ನ ಅನುಗ್ರಹದಿಂದಲೇ ಈಗ ಕೈಗೂಡಬೇಕಾಗಿರುವುದರಿಂದ, ಅದ ನ್ನು ಸಫಲಗೊಳಿಸು! ಎಲೈ ರಾಜಶ್ರೇಷ್ಠನೆ! ಕನ್ನೈದಿಲೆಯ ಹೂವಿನಂತೆ ಶ್ಯಾಮವರ್ಣದಿಂದ ಶೋಭಿಸುತ್ತ, ಸಮಸ್ತಶತ್ರುಗಳನ್ನೂ ಹುಟ್ಟಗಿಸತಕ್ಕ ಸಾಮರ್ಥ್ಯವುಳ್ಳ ನಿನ್ನ ಮಗನಾದ ರಾಮನು, ಯೌವರಾಜ್ಯಪದವಿಯಲ್ಲಿರು ವುದನ್ನು ನಾವೂ ನೋಡಬೇಕೆಂದಿರುವೆವು. ನೀನೂ ಆಶ್ರಿತರ ಕೋರಿಕೆಯನ್ನು ಸಲಿಸತಕ್ಕವನೆಂಬ ಖ್ಯಾತಿಹೊಂದಿದವನಾದುದರಿಂದ, ನಿಜವಾಗಿ ನಮ್ಮ ಹಿತ ವನ್ನು ಬಯಸುವನಾಗಿದ್ದರೆ, ದೇವದೇವನಾದ ಸಾಕ್ಷಾದ್ವಿಷ್ಣುವಿಗೆ ಸಮಾ ನವಾಗಿ, ಸರ್ವಲೋಕಗಳಿಗೂ ಹಿತವನ್ನುಂಟುಮಾಡುವುದರಲ್ಲಿಯೇ ಬದ್ಧ ದೀಕ್ಷನಾಗಿ, ಮಹೌದಾರ್ಯಗುಣವಿಶಿಷ್ಟನೆನಿಸಿಕೊಂಡಿರುವ ರಾಮನಿಗೆ ಈಗಲೇ ಪಟ್ಟಾಭಿಷೇಕವನ್ನು ಮಾಡಿಬಿಡು" ಎಂದರು. ಇಲ್ಲಿಗೆ ಎರಡ ನೆಯ ಸರ್ಗವು.

---

## ಪಟ್ಟಾಭಿಷೇಕಸಾಮಗ್ರಿಗಳನ್ನು ಸಿದ್ಧಪಡಿಸಿದುದು.

ಹೀಗೆ ಆ ಸಭಿಕರು ಬದ್ಧಾಂಜಲಿಗಳಾಗಿ ನಿಂತು ವಿಜ್ಞಾಪಿಸಿದ ಮಾತುಗಳನ್ನು, ದಶರಥನು ಅಂಗೀಕರಿಸಿ, ಪುನಃ ಅವರಿಗೆ ಪ್ರಿಯವಾಗಿಯೂ, ಹಿತಕರವಾಗಿಯೂ ಇರುವ ಒಂದಾನೊಂದು ಮಾತನ್ನು ಹೇಳುವನು. "ಎಲೈ ಪ್ರಜೆಗಳೆ! ನೀವು ಸರ್ವಜನಪ್ರಿಯನಾದ, ನನ್ನ ಜ್ಯೇಷ್ಠಪುತ್ರನಾದ ರಾಮನನ್ನು ಯುವರಾಜನನ್ನಾಗಿ ಬಯಸಿದುದಕ್ಕಾಗಿ ನನ್ನ ಸಂತೋ ಷಕ್ಕೆ ಪಾರವಿಲ್ಲದಂತಿದೆ? ಆಹಾ! ಇನ್ನು ನನ್ನ ಭಾಗ್ಯಕ್ಕೆ ಎಣೆಯೇನು?" ಎಂದು ಹೇಳಿ, ಅವರೆಲ್ಲರನ್ನೂ ಗೌರವಿಸಿ, ಆ ಸಭೆಯಲ್ಲಿದ್ದ ಜನರೆಲ್ಲರೂ ಕೇ ಳುತ್ತಿರುವಾಗಲೇ, ವಸಿಷ್ಠವಾಮದೇವರಿಬ್ಬರನ್ನೂ ಕುರಿತು "ಎಲೈ ಬ್ರಾಹ್ಮ ಣೋತ್ತಮರೆ! ಈಗ ಪ್ರಾಪ್ತವಾಗಿರುವ* ಚೈತ್ರಮಾಸವು ಬಹಳ ರಮಣೀಯ

---

* ಇದಕ್ಕೆ "ಚೈತ್ರಶ್ಶ್ರೀಮಾನಯಂ ಮಾಸಃ ಪುಣ್ಯಃ ಪುಷ್ಪಿತಕಾನನಃ" ಎಂಬುದೇ ಮೂಲಶ್ಲೋಕವು. ಇದರಲ್ಲಿ ಕಾಣಿಸಲ್ಪಟ್ಟಿರುವ ವಿಶೇಷಾರ್ಥಗಳೇನೆಂದರೆ:—(ಚೈತ್ರಃ) ಮನುಷ್ಯರಲ್ಲಿ ರಾಮನು ಹೇಗೋಹಾಗೆ, ಮಾಸಗಳಲ್ಲಿ ಮೇಲೆನಿಸಿಕೊಂಡ ಚೈತ್ರಮಾಸ ವೆಂದು ಭಾವವು. (ಶ್ರೀಮಾನ್) ರಾಜ್ಯಲಕ್ಷ್ಮಿಯೊಡನೆ ಕೂಡತಕ್ಕ ರಾಮನಂತೆಯೇ ಈ ಮಾಸವೂ ಕೂಡ ಲಕ್ಷ್ಮೀ (ಕಾಂತಿ) ವಿಶಿಷ್ಟವಾದುದೆಂದರ್ಥವು. (ಅಯಂ ಮಾಸಃ) ಈ

ವಾಗಿ ಸೊಂಪೇರುತ್ತಿರುವುದು. ಮಂಗಳಕಾರ್ಯಕ್ಕೆ ತಕ್ಕಂತೆ ಬಹುಪವಿತ್ರವಾದುದು. ಉಪವನವೆಲ್ಲವೂ ಪುಷ್ಪಭರಿತವಾಗಿರುವುದು. ರಾಮನ ಯೌವರಾಜ್ಯಾಭಿಷೇಕಕ್ಕೆ ಬೇಕಾದ ಸಾಮಗ್ರಿಗಳೆಲ್ಲವೂ ಈಗಲೇ ಸಿದ್ಧವಾಗಲಿ!" ಎಂದನು. ರಾಜನು ಈಮಾತನ್ನು ಹೇಳಿ ಮುಗಿಸಿದೊಡನೆಯೇ,ಅಲ್ಲಿದ್ದ ಸಭಿಕರೆಲ್ಲರೂ ಸಂತೋಷದಿಂದ ಉಬ್ಬಿದವರಾಗಿ "ಆಃ! ನಾವು ಬಹುಕಾಲದಿಂದ ಕೋರುತಿದ್ದ ಬಯಕೆಯು ಈಗ ಕೈಗೂಡಿತು!" ಎಂದು ಅಟ್ಟಹಾಸದಿಂದ ಉದ್ಘೋಷಿಸುತಿದ್ದರು. ಈ ಆನಂದಘೋಷವು ಮೆಲ್ಲಮೆಲ್ಲಗೆ ಶಾಂತವಾದಕೂಡಲೆ,ದಶರಥನು ವಸಿಷ್ಠವಾಮದೇವರಿಬ್ಬರನ್ನೂ ನೋಡಿ "ಎಲೈ ಮಹಾತ್ಮರೆ! ರಾಮಾಭಿಷೇಕಕ್ಕಾಗಿ ಯಾವಯಾವ ಕರ್ಮಗಳನ್ನು ನಡೆಸಬೇಕೋ,ಅವುಗಳಿಗಾಗಿ ಯಾವಯಾವ ಉಪಕರಣಗಳು ಅವಶ್ಯಕಗಳೋ, ಅವೆಲ್ಲವನ್ನೂ ಆಜ್ಞಾಪಿಸಬೇಕು." ಎಂದನು. ಇದನ್ನು ಕೇಳಿ ವಸಿಷ್ಠನು, ರಾಜನ ಮುಂದೆ ಕೈಜೋಡಿಸಿ ನಿಂತಿದ್ದ ಯೋಗ್ಯರಾದ ಅಧಿಕಾರಿಗಳನ್ನೂ ಸುಮಂತ್ರನೇ ಮೊದಲಾದ ಮಂತ್ರಿಗಳನ್ನೂ ಕುರಿತು "ಎಲೈ ಮಂತ್ರಿಶ್ರೇಷ್ಠರೆ! ಸುವರ್ಣವೇಮೊದಲಾದ ರತ್ನಗಳನ್ನೂ,ಉಪಹಾರಸಾಮಗ್ರಿಗಳನ್ನೂ, ಧಾನ್ಯಗಳನ್ನೂ, ಬಿಳೀಬಣ್ಣವುಳ್ಳ ಪುಷ್ಪಮಾಲಿಕೆಗಳನ್ನೂ, ಅರಳು, ಜೇನುತುಪ್ಪ, ನೂತನವಸ್ತ್ರಗಳು, ರಥಗಳು, ಸಮಸ್ತಶಸ್ತ್ರಾಸ್ತ್ರಗಳು. ಮುಂತಾದ ಸಾಮಗ್ರಿಗಳೆಲ್ಲವನ್ನೂ ಸಿದ್ಧಪಡಿಸಿಡಬೇಕು. ಚತುರಂಗಸೈನ್ಯವನ್ನೂ, ಶುಭಲಕ್ಷಣವುಳ್ಳ ಆನೆಯನ್ನೂ, ಬಿಳೀಚಾಮರಗಳನ್ನೂ, ಶ್ವೇತಚ್ಛತ್ರವನ್ನೂ

---

ಮಾಸವು 'ಎಂಬುದರಿಂದ' ನಾವು ರಾಮಾಭಿಷೇಕವನ್ನಪೇಕ್ಷಿಸಿದಸಮಯಕ್ಕೆ ಸರಿಯಾಗಿ,ಆ ರಾಮನಿಗೆ ಅನುರೂಪವಾದ ಗುಣವುಳ್ಳ ಈ ಮಾಸವೇ ಸನ್ನಿಹಿತವಾಗಿರುವುದೆಂದು ಭಾವವು. (ಪುಣ್ಯ:) ರಾಮನಂತೆಯೇ ಇದು ಪುಣ್ಯವರ್ಧಕವು. (ಪುಷ್ಪಿತಕಾನನ:) ಪುಷ್ಪಿಸಿದ ತೋಟಗಳುಳ್ಳುದು. ಮನುಷ್ಯರು ವಿಶೇಷಪ್ರಯತ್ನದಿಂದ ನಗರಗಳನ್ನಲಂಕರಿಸುವಂತಲ್ಲದೆ, ಈ ಮಾಸವು ರಾಮಾಭಿಷೇಕಕ್ಕಾಗಿ ತನ್ನನ್ನು ತಾನೇ ಪುಷ್ಪಾದಿಗಳಿಂದಲಂಕರಿಸಿಕೊಂಡು ಬಂದಿರುವುದೆಂದು ಭಾವವು. ಅಥವಾ ರಾಮನು ಕನಕಕಿರೀಟವನ್ನು ಧರಿಸುವನೆಂಬುದಕ್ಕಾಗಿ ಅವನಿಗೆ ಅನುರೂಪವಾಗಿರುವಂತೆ, ತಾನೂ ಪುಷ್ಪಕಿರೀಟವನ್ನು ಧರಿಸಿ ಬಂದಿರುವುದೆಂದೂ ಅಭಿಪ್ರಾಯವು.

ಧ್ವಜವನ್ನೂ, ಅಗ್ನಿಯಂತೆ ಜ್ವಲಿಸುತ್ತಿರುವ ನೂರುಸುವರ್ಣಕುಂಭಗಳ ನ್ನೂ ಸಿದ್ಧಪಡಿಸಿರಿ! ಬಂಗಾರದಿಂದಲಂಕರಿಸಲ್ಪಟ್ಟ ಕೊಂಬುಗಳುಳ್ಳ ವೃಷಭಗಳನ್ನೂ, ಸಂಪೂರ್ಣವಾಗಿ ಅವಯವಗಳೆಲ್ಲವನ್ನೂ ಹೊಂದಿರುವ ಹುಲಿಯ ಚರ್ಮವನ್ನೂ ಸಿದ್ಧಪಡಿಸಿರಿ! ಈ ಸಾಮಗ್ರಿಗಳೆಲ್ಲವೂ ಬೆಳಗಾ ಗಾಗುವಷ್ಟರರಲ್ಲಿಯೇ ದಶರಥನ ಅಗ್ನಿಹೋತ್ರಶಾಲೆಯಲ್ಲಿ ಸಿದ್ಧವಾಗಿರ ಬೇಕು! ಇವಲ್ಲದೆ ಗಂಧಪುಷ್ಪಾದಿಮಂಗಳದ್ರವ್ಯಗಳು ಯಾವಯಾವುವುಂ ಟೋ ಅವೆಲ್ಲವನ್ನೂ ತಂದಿರಿಸಿರಿ! ಅರಮನೆಯ ಬಾಗಿಲುಗಳನ್ನೂ, ಊರಬಾ ಗಿಲುಗಳನ್ನೂ ಗಂಧಪುಷ್ಪಾದಿಗಳಿಂದಲೂ, ಸುಗಂಧ ಧೂಪದೀಪಗಳಿಂ ದಲೂ ಅಲಂಕರಿಸಿರಿ! ಬ್ರಾಹ್ಮಣರು ಲಕ್ಷಲಕ್ಷಸಂಖ್ಯೆಯಿಂದ ಬಂದರೂ ಅವರೆಲ್ಲರಿಗೂ ಸಂಪೂರ್ಣವಾಗಿ ತೃಪ್ತಿಯುಂಟುಮಾಡುವುದಕ್ಕೆ ಸಾಕಾದ ಷ್ಟು ಪ್ರಶಸ್ತವಾದ ಅನ್ನರಾಶಿಯನ್ನು ಹಾಲು, ಮೊಸರು, ಮುಂತಾದುವು ಗಳಿಂದಲೂ, ವ್ಯಂಜನೋಪಕರಣಗಳಿಂದಲೂ ಚೆನ್ನಾಗಿ ಪರಿಷ್ಕರಿಸಿಟ್ಟು, ನಾಳೆ ಬೆಳಗಾದಕೂಡಲೆ ಆಬ್ರಾಹ್ಮಣೋತ್ತಮರೆಲ್ಲರನ್ನೂ ಕರೆಸಿ,ಅವರನ್ನು ಚೆನ್ನಾಗಿ ಸತ್ಕರಿಸಿ ಭೋಜನಮಾಡಿಸಬೇಕು. ಮತ್ತು ಆ ಬ್ರಾಹ್ಮಣ ರಿಗೆ ಬೇಕಾದ ತುಪ್ಪ, ಮೊಸರು, ಅರಳು, ಪುಷ್ಕಲವಾದ ದಕ್ಷಿಣೆ, ಇವೆಲ್ಲ ವನ್ನೂ ಅವರವರ ಮನಸ್ತೃಪ್ತಿಯಾಗುವಂತೆ ಕೊಡಬೇಕು! ನಾಳೆ ಸೂ ರ್ಯನು ಉದಿಸಿದ ಉತ್ತರಕ್ಷಣದಲ್ಲಿಯೇ,ಸ್ವಸ್ತಿವಾಚನವು ನಡೆಯಬೇಕಾಗಿರು ವುದರಿಂದ,ಬ್ರಾಹ್ಮಣರೆಲ್ಲರನ್ನೂ ಕರೆಸಿರಿ! ಅಲ್ಲಲ್ಲಿ ಮಂಗಳಧ್ವಜಗಳು ನಡಲ್ಪ ಡಲಿ! ರಾಜಮಾರ್ಗಗಳೆಲ್ಲವೂ ಸುಗಂಧಶೀತಲವಾದ ನಿರೀನಿಂದ ಸೇಚನ ಮಾಡಲ್ಪಡಲಿ! ಅರಮನೆಯ ಮೊದಲನೆಯ ತೊಟ್ಟಿಯಲ್ಲಿ, ಸ್ವಸ್ತಿವಾಚನ ಮೊದಲಾದ ವೇದೋಕ್ತಕರ್ಮಗಳನ್ನು ನಡೆಸುವುದಕ್ಕಾಗಿ,ಬ್ರಾಹ್ಮಣರ ಗೋ ಷ್ಠಿಯು ನೆರೆಯಬೇಕಾದುದರಿಂದ, ಎರಡನೆಯತೊಟ್ಟಿಯಲ್ಲಿ ನಟರೂ, ಗಾ ಯಕರೂ, ವೇಶ್ಯೆಯರೂ ಚೆನ್ನಾಗಿ ಅಲಂಕರಿಸಿಕೊಂಡು ಬಂದು ಸಿದ್ಧರಾಗಿ ರಲಿ! ದೇವಾಲಯಗಳಲ್ಲಿಯೂ, ನಾಲ್ಕು ಬೀದಿಗಳು ಕೂಡತಕ್ಕಸ್ಥಳಗಳಲ್ಲಿ ಯೂ, ಬೇರೆಬೇರೆಯಾಗಿ ಪುರುಷರನ್ನು ನಿಯಮಿಸಿ, ಅವರ ವಶದಲ್ಲಿ ಅನ್ನಗ

ಳನ್ನೂ, ಭಕ್ಷಣಗಳನ್ನೂ, ದಕ್ಷಿಣೆಗಳನ್ನೂ, ಪುಷ್ಪಹಾರಗಳನ್ನೂ ಕೊಟ್ಟು ಅಲ್ಲಲ್ಲಿ ನಿಲ್ಲಿಸಿ, ಅಭ್ಯಾಗತರಾಗಿ ಬಂದವರನ್ನು ಆದರಿಸುವಂತೆ ಮಾಡಿರಿ! ವೀರಭಟರೆಲ್ಲರೂ ನಡುವಿನಲ್ಲಿ ಕತ್ತಿಗಳನ್ನು ಕಟ್ಟಿಕೊಂಡು, ಕವಚಗಳನ್ನು ಧರಿಸಿ, ಮಡಿಬಟ್ಟೆಗಳನ್ನುಟ್ಟು, ಶ್ರೀರಾಮನ ಅಭಿಷೇಕಕ್ಕಾಗಿ ಏರ್ಪಟ್ಟಿರುವ ಕಲ್ಯಾಣಮಂಟಪದಲ್ಲಿ ಸಿದ್ಧರಾಗಿ ನಿಲ್ಲುವಹಾಗೆ ಹೇಳಿರಿ!" ಎಂದರು. ಹೀಗೆ ಕಾರ್ಯದಕ್ಷರಾಗಿರುವ ವಸಿಷ್ಠವಾಮದೇವರಿಬ್ಬರೂ,ಅಲ್ಲಿ ನಡೆಸಬೇಕಾದ ಕಾರ್ಯಗಳನ್ನು ನಿಯಮಿಸಿ, ಇನ್ನೂ ಉಳಿದ ಬೇರೆಬೇರೆ ಕಾರ್ಯಗಳನ್ನೂ ದಶ ರಥರಾಜನಿಗೆ ತಿಳಿಯಪಡಿಸಿ, ಅವೆಲ್ಲವೂ ಸಿದ್ಧವಾದಮೇಲೆ, ತಾವು ಕೃತಕೃ ತ್ಯರಾದೆವೆಂದು ಮನಸ್ಸಿನಲ್ಲಿ ಸಂತೋಷಿಸಿದರು. ಹೀಗೆ ಸಮಸ್ತ ಸನ್ನಾಹಗ ಳೂ ಸಿದ್ಧವಾದಮೇಲೆ, ರಾಜನಿಗೂ ಆ ವಿಷಯವನ್ನು ವಿಜ್ಞಾಪಿಸಿದರು. ಆ ಮೇಲೆ ರಾಜನೂಕೂಡ ಹೀಗೆ ಅಭಿಷೇಕಸನ್ನಾಹಗಳೆಲ್ಲವೂ ಸಿದ್ಧವಾದುದ ನ್ನು ಕೇಳಿ, ಸಂತೋಷದಿಂದ ಉಬ್ಬಿದವನಾಗಿ,ಸುಮಂತ್ರನನ್ನು ಕುರಿತು,"ಎ ಲೈ ಮಂತ್ರಿಯೆ! ನೀನು ಹೋಗಿ ಸುಶಿಕ್ಷಿತವಾದ ಬುದ್ಧಿಯುಳ್ಳ ರಾಮನನ್ನು ಈಗಲೇ ಕರೆದುಕೊಂಡುಬಾ" ಎಂದನು. ಸುಮಂತ್ರನು ಹಾಗೆಯೇ ಆಗಲೆಂ ದು ಹೇಳಿ, ರಾಮನ ಸಮೀಪಕ್ಕೆ ಹೋಗಿ, ಅವನಿಗೆ ರಾಜಾಜ್ಞೆಯನ್ನು ತಿಳಿ ಸಿ, ರಥಿಕಶ್ರೇಷ್ಠನಾದ ಆ ರಾಮನನ್ನು ರಥದಮೇಲೆ ಏರಿಸಿ ಕರೆತಂದನು. ಆ ಮೇಲೆ ಅಲ್ಲಿ ನೆರೆದಿದ್ದ ಪೂರ್ವ, ದಕ್ಷಿಣ, ಪಶ್ಚಿಮೋತ್ತರ ದೇಶದ ರಾಜರೂ, ಮತ್ತು ಮ್ಲೇಚ್ಛದೇಶಾಧಿಪತಿಗಳೂ, ಕಾಡುಗಳಲ್ಲಿಯೂ, ಬೆಟ್ಟಗಳಲ್ಲಿಯೂ ವಾಸಮಾಡುತ್ತಿರುವ ಆಟವಿಕರೂ ಸೇರಿ, ದೇವತೆಗಳು ದೇವೇಂದ್ರನನ್ನು ಹೇಗೋಹಾಗೆ ದಶರಥನನ್ನು ಓಲೈಸುತಿದ್ದರು. ದೇವತೆಗಳನಡುವೆ ಪ್ರಕಾಶಿ ಸುವ ಇಂದ್ರನಂತೆ, ಆ ರಾಜಸಮೂಹಗಳ ಮಧ್ಯದಲ್ಲಿ ರಾಜಋಷಿಯಾದ ದ ಶರಥನು ಪ್ರಕಾಶಿಸುತ್ತಾ, ತನ್ನ ಅರಮನೆಯ ಉಪ್ಪರಿಗೆಯಲ್ಲಿ ನಿಂತುಕೊಂಡಿ ದ್ದಾಗಲೇ ರಾಮನು ರಥದಲ್ಲಿ ಕುಳಿತು, ತನಗೆ ಇದಿರಾಗಿ ಬರುತ್ತಿರುವುದನ್ನು ನೋಡಿದನು. ಗಂಧರ್ವರಾಜನಿಗೆ ಸಮನಾಗಿ, ಮೂರುಲೋಕದಲ್ಲಿಯೂ ಪ್ರಸಿ ದ್ಧಪರಾಕ್ರಮವುಳ್ಳವನಾಗಿ, ಮಹಾಪುರುಷಲಕ್ಷಣವನ್ನು ಸೂಚಿಸು

ವಂತೆ ಉದ್ದವಾದ ತೋಳುಗಳುಳ್ಳವನಾಗಿ, ಮಹಾಬಲವುಳ್ಳವನಾಗಿ, ಮದ ದಾನೆಯಂತೆ ಗಂಭೀರವಾದ ನಡೆಯುಳ್ಳವನಾಗಿ,ಚಂದ್ರನಂತೆ ಆಹ್ಲಾದಕರ ವಾದ ಮುಖಕಮಲವುಳ್ಳವನಾಗಿ, ನೋಡುತಿದ್ದಷ್ಟೂ ಮೇಲೆಮೇಲೆ ಆಶೆ ಯನ್ನು ಹೆಚ್ಚಿಸುವ ಪ್ರಿಯದರ್ಶನವುಳ್ಳವನಾಗಿ, ರೂಪೌದಾರ್ಯಗಳೇ ಮೊ ದಲಾದ ಗುಣಾತಿಶಯಗಳಿಂದ ತನ್ನನ್ನು ನೋಡತಕ್ಕ ಹೆಂಗಸರಿಗೆಮಾತ್ರವೇ ಅಲ್ಲದೆ, ಪುರುಷರಿಗೂಕೂಡ ಮೋಹವನ್ನು ಹುಟ್ಟಿಸಿ. ಅವರ ಕಣ್ಣುಗಳನ್ನೂ, ಮನಸ್ಸನ್ನೂ ಆಕರ್ಷಿಸತಕ್ಕ ಮಹಾಮಹಿಮೆಯುಳ್ಳ ರಾಮನನ್ನು, ಅಲ್ಲಿ ನೆರೆದಿದ್ದ ಪ್ರಜೆಗಳೆಲ್ಲರೂ ನೋಡಿದರು. ಬೇಸಗೆಯಿಂದ ತಪಿಸುತ್ತಿರುವವರಿಗೆ ವರ್ಷೋನ್ಮುಖಗಳಾದ ಮೇಘಗಳು ಹೇಗೋಹಾಗೆ, ಅಲ್ಲಿದ್ದ ಪ್ರಜೆಗಳೆಲ್ಲ ರಿಗೂ ರಾಮನ ದರ್ಶನವು ಬಹಳ ಆಹ್ಲಾದವನ್ನುಂಟುಮಾಡಿತು. ಹೀಗೆ ಬರು ತ್ತಿರುವ ರಾಮನನ್ನು ದಶರಥನು ಎಡೆಬಿಡದೆ ಎಷ್ಟೆಷ್ಟುನೋಡುತಿದ್ದರೂ ತೃಪ್ತಿಪಡದೆ, ಕ್ಷಣಕ್ಷಣಕ್ಕೂ ಮೇಲುಮೇಲಿನ ಪ್ರೇಮರಸದಿಂದ ಉಕ್ಕುತಿದ್ದ ನು. ಆಮೇಲೆ ಸುಮಂತ್ರನು,ರಾಮನನ್ನು ರಥದಿಂದ ಕೈಗೊಟ್ಟು ಕೆಳಗಿಳಿಸಿ, ಆತನು ತಂದೆಯ ಸಮೀಪಕ್ಕೆ ಹೋಗುತ್ತಿರುವಾಗ, ಅವನ ಹಿಂದೆ ತಾ ನೂ ಬಹಳವಿನಯದಿಂದ ಬದ್ಧಾಂಜಲಿಯಾಗಿ ಹಿಂಬಾಲಿಸಿಹೋದನು. ಹೀಗೆ ರಾಮನು" ತಂದೆಯನ್ನು ನೋಡುವುದಕ್ಕಾಗಿ ಸುಮಂತ್ರನೊಡಗೂಡಿ ಹೊರಟು, ಕೈಲಾಸಶಿಖರದಂತೆ ಬಿಳುಪಾಗಿಯೂ ಮಹೋನ್ನತವಾಗಿಯೂ ಇರುವ ಉಪ್ಪರಿಗೆಯನ್ನೇರಿ, ತಂದೆಯ ಸಮೀಪಕ್ಕೆ ಬಂದು, ವಿನಯದಿಂದ ಕೈಮುಗಿದು "ಇದೋ ! ರಾಮವರ್ಮನಾದ ನಾನು ನಮಸ್ಕರಿಸುವೆನು" ಎಂ ದು ತನ್ನಹೆಸರನ್ನು ತಿಳಿಸುತ್ತ, ತಂದೆಯ ಕಾಲುಗಳನ್ನು ಹಿಡಿದು ನಮ ಸ್ಕರಿಸಿದನು. ಹೀಗೆ ವಿನಯದಿಂದ ಸಾಷ್ಟಾಂಗಪ್ರಣಾಮವನ್ನು ಮಾಡಿ, ಪಕ್ಕದಲ್ಲಿ ಕೈಮುಗಿದು ನಿಂತಿರುವ ರಾಮನನ್ನು ನೋಡಿ, ದಶರ ಥನು ಜೋಡಿಸಿದ್ದ ಆರಾಮನ ಕೈಯ್ಯನ್ನು ಹಿಡಿದು,ತನ್ನ ಸಮೀಪಕ್ಕೆ ಕರೆದು ಆತನನ್ನು ಅಪ್ಪಿಕೊಂಡು, ಅವನಿಗಾಗಿ ರತ್ನಖಚಿತವಾದ ಒಂದು ದಿವ್ಯಾಸನ ವನ್ನು ಕೊಟ್ಟನು. ರಾಮನು ಆ ಪೀಠವನ್ನು ಅಲಂಕರಿಸಿದಾಗ,ಸೂರ್ಯನು ಉದ

ಯ ಕಾಲದಲ್ಲಿ*ಮೇರುಪರ್ವತವನ್ನೇರಿ, ತನ್ನ ಕಾಂತಿಯಿಂದ ಆ ಪರ್ವತಪ್ರಾಂತವೆಲ್ಲವನ್ನೂ ಬೆಳಗುವಂತೆ, ತನ್ನ ದಿವ್ಯತೇಜಸ್ಸಿನಿಂದ ಆ ಪೀಠವನ್ನು ಅಲಂಕರಿಸುತಿದ್ದುದಲ್ಲದೆ, ಶರತ್ಕಾಲದಲ್ಲಿ ಸ್ಪಷ್ಟವಾದ ನಕ್ಷತ್ರರಾಶಿಯಿಂದಲೂ, ಗ್ರಹಗಳಿಂದಲೂ ಕೂಡಿದ ಆಕಾಶವನ್ನು, ಚಂದ್ರನು ತನ್ನ ಕಾಂತಿಯಿಂದ ಮತ್ತಷ್ಟು ಪ್ರಕಾಶಪಡಿಸುವಂತೆ,ಆ ಸಭಾಸ್ಥಾನವನ್ನೆಲ್ಲಾ ತನ್ನ ತೇಜಸ್ಸಿನಿಂದಬೆಳಗುತ್ತಿದ್ದನು. ದಶರಥನೂಕೂಡ ತನ್ನ ಪ್ರಿಯಪುತ್ರನಾದ ರಾಮನ ಆಕಾರವನ್ನು ನೋಡಿದಾಗ, ಚೆನ್ನಾಗಿ ಅಲಂಕೃತರಾದವರು, ಕನ್ನಡಿಯಲ್ಲಿ ತಮ್ಮ ಪ್ರತಿಬಿಂಬವನ್ನು ನೋಡಿ ತಮ್ಮ ಮನಸ್ಸಿನಲ್ಲಿಯೇ ತಾವು ಸಂತೋಷಿಸುವಂತೆ ಆನಂದಿಸುತಿದ್ದನು.ಮಕ್ಕಳನ್ನು ಪಡೆದವರಲ್ಲಿ ಮೇಲೆನಿಸಿಕೊಂಡ ದಶರಥನು, ಮುಗುಳುನಗೆಯಿಂದ ಆ ಮಗನನ್ನು ನೋಡಿ, ಕಾಶ್ಯಪನು ತನ್ನ ಮಗನಾದ ದೇವೇಂದ್ರನೊಡನೆ ಸಲ್ಲಪಿಸುವಂತೆ ಒಂದಾನೊಂದು ವಾಕ್ಯವನ್ನು ಹೇಳುವನು. “ಎಲೆ ವತ್ಸ ರಾಮಾ ! ನನಗೆ ಅನುರೂಪಳಾದ ನನ್ನ ಜ್ಯೇಷ್ಠಪತ್ನಿಯಲ್ಲಿ ನೀನೂ ತಕ್ಕ ಮಗನಾಗಿ ಹುಟ್ಟಿರುವೆ!ಗುಣಗಳಲ್ಲಿ ನಿನ್ನನ್ನು ಮೀರಿಸಿದವರು ಬೇರೆ ಯಾರೂ ಇಲ್ಲವು. ನೀನು ನನಗೆ ಪ್ರಿಯಪುತ್ರನಾಗಿದ್ದು, ನಿನ್ನ ಕಲ್ಯಾಣಗುಣಗಳಿಂದ ನನ್ನ ಮನಸ್ಸನ್ನುಮಾತ್ರವೇಅಲ್ಲದೆ ನಮ್ಮ ರಾಷ್ಟ್ರದ ಪ್ರಜೆಗಳೆಲ್ಲರ ಮನಸ್ಸನ್ನೂ ಆಕರ್ಷಿಸಿರುವೆ. ಈ ಕಾರಣದಿಂದ ಈಗ ನೀನು ಯುವರಾಜಪದವಿಗೆ ಅರ್ಹನು! ನಾಳೆ ಪುಷ್ಯನಕ್ಷತ್ರದಲ್ಲಿಯೇ ನೀನು ಯುವರಾಜಪಟ್ಟವನ್ನು ವಹಿಸಬೇಕು. ವಿನಯಾದಿಗುಣಗಳೆಲ್ಲವೂ ಸ್ವಾಭಾವಿಕವಾಗಿಯೇ ನಿನ್ನಲ್ಲಿ ಸಂಪೂರ್ಣವಾಗಿ ನೆಲೆಗೊಂಡಿರುವುದರಿಂದ, ನಿನಗೆ ಉಪದೇಶಿಸಿ ತಿಳಿಸಬೇಕಾದ ವಿಷಯಗಳೊಂದೂ ಇಲ್ಲ.

---

* ಸೂರ್ಯನು ಪ್ರಧಾನವಾದ ಮೇರುಪರ್ವತವನ್ನು ಸುತ್ತಿ ಬರುವನೇಹೊರತು, ಅದರಲ್ಲಿ ಸೇರಿ ನಿಲ್ಲುವುದಿಲ್ಲವಾದುದರಿಂದ,ಇಲ್ಲಿ ಮೇರುವೆಂದರೆ ಅಸ್ತಗಿರಿಯ ಸಮೀಪದಲ್ಲಿರುವ ಸಾವರ್ಣಿಮೇರುವೆಂದು ಗ್ರಹಿಸಬೇಕು. ಇಲ್ಲಿ ಉದಯಕಾಲವನ್ನು ಹೇಳುವಾಗ ಅಸ್ತಗಿರಿಸಾನ್ನಿಧ್ಯವನ್ನು ಹೇಳುವುದು ಹೇಗೆ ಸಮಂಜಸವಾಗುವುದೆಂದು ಆಕ್ಷೇಪವುಂಟಾಗಬಹುದು ಉತ್ತರವರ್ಷದಲ್ಲಿರುವ ಸಿದ್ಧಪುರವಾಸಿಗಳಿಗೆ ಅಸ್ತಾದ್ರಿಯ ಸಮೀಪದಲ್ಲಿಯೇ ಸೂರ್ಯನು ಉದಿಸುವನಾದುದರಿಂದ, ಅವರ ವಿಷಯವಾಗಿ ಗ್ರಹಿಸುವಾಗ, ಆ ಕಡೆಯಲ್ಲಿ ಸೂರ್ಯೋದಯವಾಯಿತೆಂದು ಹೇಳಿದುದು ಸಮಂಜಸವೆಂದೇ ಗ್ರಾಹ್ಯವು.

ಆದರೂ ಪುತ್ರಸ್ನೇಹದಿಂದ ನಿನಗೆ ಒಂದೆರಡು ಹಿತವಾಕ್ಯಗಳನ್ನು ಹೇಳ ಬೇಕೆಂದಿರುವೆನು. ಸಾವಧಾನದಿಂದ ಕೇಳು! ನೀನು ಎಲ್ಲರಲ್ಲಿಯೂ ಯಾವಾ ಗಲೂ ವಿನೀತನಾಗಿದ್ದು ಇಂದ್ರಿಯಗಳನ್ನು ನಿಗ್ರಹಿಸಿಡಬೇಕು. ಜೂಜು, ಮದ್ಯಪಾನ, ಮುಂತಾದ ವ್ಯಸನಗಳೆಲ್ಲವೂ ಮನುಷ್ಯರಿಗೆ ಸ್ವಾಭಾವಿಕವಾಗಿ ಕಾಮಕ್ರೋಧಾದಿದುರ್ಗುಣಗಳಿಂಧಲೇ ಸಂಭವಿಸುವುದುಂಟು. ಅವುಗಳಿಗೆ ನೀನು ಸ್ವಲ್ಪವೂ ಅವಕಾಶಕೊಡಬಾರದು. ಮತ್ತು ಕ್ರೂರವಾಕ್ಯಗಳ ನ್ನಾಡುವುದು, ಕ್ರೂರವಾಗಿ ದಂಡಿಸುವುದು, ಇವೇ ಮೊದಲಾದ ದುರ್ವ್ಯ ಸನಗಳೆಲ್ಲವೂ ಕೋಪದಿಂದುಂಟಾಗುವುದರಿಂದ, ಆ ಕೋಪವನ್ನು ಸಂಪೂರ್ಣ ವಾಗಿ ತ್ಯಜಿಸಬೇಕು. ಸಾಮಾನ್ಯರಾದ ಸೇವಕರಲ್ಲಿ ವಿಶೇಷವಾಗಿ ಸಲಿ ಗೆಯನ್ನು ತೋರಿಸುತ್ತಾ, ಅವರೊಡನೆ ಪ್ರತ್ಯಕ್ಷಸಂಭಾಷಣಗಳಿಗೆ ಅವಕಾಶ ಕೊಡಬಾರದು ! ಪರೋಕ್ಷದಲ್ಲಿದ್ದುಕೊಂಡು, ಬೇರೆ ಅಧಿಕಾರಿಗಳ ಮೂಲಕ ವಾಗಿಯೇ ಅವರಿಗೆ ಆಜ್ಞೆಯನ್ನುಕೊಟ್ಟು, ಅವರಿಂದ ಕೆಲಸವನ್ನು ನಡೆಸು! ನಡೆಸಬೇಕಾದ ಕಾರ್ಯಗಳನ್ನು ಮಂತ್ರಿಗಳೇ ಮೊದಲಾದ ಮುಖ್ಯಾಧಿಕಾರಿ ಗಳೊಡನೆ ಚೆನ್ನಾಗಿ ಆಲೋಚಿಸಿ ನಡೆಸಬೇಕು. ಪರೋಕ್ಷದಲ್ಲಿದ್ದುಕೊಂಡೇ ಚಾರರ ಮೂಲಕವಾಗಿ ಇತರದೇಶವೃತ್ತಾಂತವನ್ನು ತಿಳಿದುಕೊಳ್ಳುತ್ತಿರ ಬೇಕು. ಸ್ವದೇಶವೃತ್ತಾಂತಗಳನ್ನು ಪ್ರತ್ಯಕ್ಷದಲ್ಲಿ ಹೋಗಿ ಕಂಡು ಕೊಳ್ಳಬೇಕು! ಮಂತ್ರಿಗಳಿಗೂ, ಪ್ರಜೆಗಳಿಗೂ ಮನಸ್ಸಿಗೆ ನೋವುಂಟಾಗ ದಂತೆ, ಅವರಿಗೆ ತೃಪ್ತಿಕರವಾದ ಮಾತುಗಳನ್ನು ನುಡಿಯುತ್ತಾ, ಅವರನ್ನು ಸಂತೋಷಪಡಿಸಬೇಕು. ಯಾವಾಗಲೂ ಧಾನ್ಯಸಮೃದ್ಧಿಯೂ, ಆಯುಧ ಸಮೃದ್ಧಿಯೂ ಇರುವಂತೆ, ಧಾನ್ಯಶಾಲೆಗಳನ್ನೂ, ಆಯುಧಶಾಲೆಗಳನ್ನೂ ವೃದ್ಧಿಪಡಿಸುತ್ತಿರು ! ಯಾವನು ಪ್ರಜೆಗಳಿಗೆ ಸಂತೋಷವನ್ನುಂಟುಮಾಡು ತ್ತಾ, ಅವರನ್ನು ತನ್ನಲ್ಲಿ ವಿಶೇಷ ಅನುರಕ್ತರನ್ನಾಗಿ ಮಾಡಿ, ಭೂಮಿಯನ್ನು ಆಳುವನೋ, ಆ ರಾಜನನ್ನು ನೋಡಿ ಸಮಸ್ತಸಾಮಂತರಾಜರೂ ಅಮೃತ ವನ್ನು ಕಂಡ ದೇವತೆಗಳಂತೆ ಸಂತೋಷಿಸುವರು. ಆದುದರಿಂದ ವತ್ಸರಾ ಮಾ ! ನೀನೂ ಈ ವಿಷಯಗಳಲ್ಲಿ ಸಂಪೂರ್ಣವಾದ ಗಮನವನ್ನಿಟ್ಟು, ಮನ ಸ್ಸನ್ನು ನಿಗ್ರಹಿಸಿ, ಉಚಿತರೀತಿಯಲ್ಲಿ ನಡೆಯುತ್ತಿರು." ಎಂದನು.

ಹೀಗೆ ದಶರಥನು, ತನ್ನ ಪ್ರಿಯಪುತ್ರನಾದ ರಾಮನಿಗೆ ಪಟ್ಟಾಭಿಷೇಕವನ್ನು ನಡೆಸಬೇಕೆಂದು ಸಿದ್ಧನಾಗಿರುವುದನ್ನು ನೋಡಿ, ಆ ರಾಮನ ಮಿತ್ರರೆಲ್ಲರೂ ಮಿತಿಮೀರಿದ ಸಂತೋಷದಿಂದ ಉಬ್ಬಿದವರಾಗಿ, ಅತ್ಯುತ್ಸಾಹದಿಂದ ಓಡಿಬಂದು, ಈ ಪ್ರಿಯವೃತ್ತಾಂತವನ್ನು ಕೌಸಲ್ಯೆಗೆ ತಿಳಿಸಿದರು. ಇದನ್ನು ಕೇಳಿ ಕೌಸಲ್ಯೆಯು, ಆ ಪ್ರಿಯವಾಕ್ಯವನ್ನು ನುಡಿದವರೆಲ್ಲರಿಗೂ ಬೇಕಾದಷ್ಟು ಸುವರ್ಣಗಳನ್ನೂ, ಗೋವುಗಳನ್ನೂ, ನಾನಾವಿಧಗಳಾದ ರತ್ನಗಳನ್ನೂ ಕೊಟ್ಟಳು. ಇತ್ತಲಾಗಿ ರಾಮನು ದಶರಥನಿಗೆ ನಮಸ್ಕರಿಸಿ, ಹಿಂತಿರುಗಿ ರಥವನ್ನೇರಿ, ಅಲ್ಲಿ ನೆರೆದಿದ್ದ ಜನಗಳಿಂದ ವಿಶೇಷವಾಗಿ ಸತ್ಕರಿಸಲ್ಪಟ್ಟು, ತನ್ನ ಅರಮನೆಗೆ ಬಂದು ಸೇರಿದನು. ಆ ಸಭೆಯಲ್ಲಿ ನೆರೆದಿದ್ದ ಪುರಜನರೆಲ್ಲರೂ ದಶರಥನ ವಾಕ್ಯವನ್ನು ಕೇಳಿ, ತಾವು ಬಹುಕಾಲದಿಂದ ಬಯಸುತಿದ್ದ ರಾಮಾಭಿಷೇಕವು ಕೈಗೂಡುವಸಮಯವು ಬಂದೊದಗಿದುದಕ್ಕಾಗಿ ಬಹಳ ಸಂತೋಷಭರಿತರಾಗಿ, ಆ ದಶರಥನ ಅನುಮತಿಯನ್ನು ಪಡೆದು ಹಿಂತಿರುಗಿ ತಮ್ಮತಮ್ಮ ಮನೆಗಳನ್ನು ಸೇರಿದರು. ಆ ರಾಮಾಭಿಷೇಕಕಾರ್ಯವು ನಿರ್ವಿಘ್ನವಾಗಿ ನೆರವೇರಬೇಕೆಂಬ ಉದ್ದೇಶದಿಂದ ಒಬ್ಬೊಬ್ಬರೂ ತಮ್ಮತಮ್ಮ ಇಷ್ಟದೇವತೆಗಳನ್ನು ಭಕ್ತಿಯಿಂದ ಪೂಜಿಸುತಿದ್ದರು. ಇಲ್ಲಿಗೆ ಮೂರನೆಯ ಸರ್ಗವು.

---

### ದಶರಥನು ಅಭಿಷೇಕಾರ್ಥವಾಗಿ ರಾಮನನ್ನು ತ್ವರೆಪಡಿಸಿದುದು.

ಅತ್ತಲಾಗಿ ಪುರಜನರೆಲ್ಲರೂ ಹೊರಟುಹೋದಮೇಲೆ, ಕಾರ್ಯಾಕಾರ್ಯವಿವೇಚನೆಯಲ್ಲಿ ಚತುರನಾದ ದಶರಥನು, ಪುನಃ ಮಂತ್ರಿಗಳೊಡನೆ ಆಲೋಚಿಸಿ, ಕೊನೆಗೆ ಮನಸ್ಸಿನಲ್ಲಿ ದೃಢವಾದ ನಿಶ್ಚಯವನ್ನು ಮಾಡಿಕೊಂಡನು. ನಾಳೆಯೇಪುಷ್ಯನಕ್ಷತ್ರವಾಗಿರುವುದರಿಂದ,ಕೆಂದಾವರೆಯಂತೆ ಕಣ್ಣುಗಳುಳ್ಳ ತನ್ನ ಮುದ್ದುಮಗನಾದ ರಾಮನಿಗೆ ಯೌವರಾಜ್ಯಪಟ್ಟವನ್ನು ಕಟ್ಟಿಬಿಡಬೇಕೆಂದು ಸಂಕಲ್ಪಿಸಿಕೊಂಡನು. ಆಮೇಲೆ ಅಂತಃಪುರಕ್ಕೆ ಹೋಗಿ ಸುಮಂತ್ರನನ್ನು ನೋಡಿ "ಎಲೈ ಮಂತ್ರಿಯೆ! ಪುನಃ ರಾಮನನ್ನು ಇಲ್ಲಿಗೆ ಕರೆದುಕೊಂಡುಬಾ"ಎಂದನು.ಅದರಂತೆಯೇ ಸುಮಂತ್ರನು ಬಹುವೇಗದಿಂದ ರಾಮನನ್ನು ಕರೆತರುವುದಕ್ಕಾಗಿ ಆತನ ಅರಮನೆಯ ಬಾಗಿಲಿಗೆ ಬಂದನು.

ದ್ವಾರಪಾಲಕರು ಈ ವಿಷಯವನ್ನು ರಾಮನಿಗೆ ತಿಳಿಸಿದರು. ಸುಮಂತ್ರನು ಪುನಃ ತನ್ನಲ್ಲಿಗೆ ಬರಲುಕಾರಣವೇನಿರಬಹುದೆಂದು ರಾಮನು ಮನಸ್ಸಿನಲ್ಲಿಯೇ ಸ್ವಲ್ಪಹೊತ್ತು ಶಂಕಿಸುತಿದ್ದು, ಕೊನೆಗೆ ಆತನನ್ನು ಕರೆತರುವಂತೆ ದ್ವಾರಪಾಲಕರಿಗೆ ಹೇಳಿ, ಆತನನ್ನು ಬರಮಾಡಿಕೊಂಡು "ಎಲೈ ಮಂತ್ರಿಶ್ರೇಷ್ಠನೆ! ಪುನಃ ನೀನು ಇಲ್ಲಿಗೆ ಬರಲು ಕಾರಣವೇನು? ವಿವರವಾಗಿ ತಿಳಿಸು" ಎಂದನು. ಸುಮಂತ್ರನು ನಗುತ್ತ, "ವತ್ಸ ರಾಮಾ! ದಶರಥನು ತಿರುಗಿ ನಿನ್ನನ್ನು ನೋಡಬೇಕೆಂದು ಅಪೇಕ್ಷಿಸುವನು. ರಾಜಾಜ್ಞೆಯನ್ನು ನಾನು ತಿಳಿಸಿರುವೆನು. ಇದರ ಮೇಲೆ ಅಲ್ಲಿ ಹೋಗುವುದೂ, ಅಥವಾ ಬಿಡುವುದೂ, ನಿನ್ನ ಇಷ್ಟಕ್ಕೆ ಅಧೀನವಾಗಿರುವುದು" ಎಂದನು. ಸುಮಂತ್ರನು ಹೀಗೆ ಹೇಳಿದುದನ್ನು ಕೇಳಿ, ರಾಮನು, ಒಡನೆಯೇ ತಂದೆಯನ್ನು ನೋಡುವುದಕ್ಕಾಗಿ ಪಟ್ಟಣಕ್ಕೆ ಹೊರಟನು. ದಶರಥನು, ರಾಮನು ಬಂದಿರುವ ಅಂಶವನ್ನು ದ್ವಾರಪಾಲಕರಿಂದ ಕೇಳಿ, ತಾನು ಉದ್ದೇಶಿಸಿದ್ದ ಶುಭವಾರ್ತೆಯನ್ನು ಹೇಳುವುದಕ್ಕಾಗಿ ಆತನನ್ನು ಒಳಮನೆಗೆ ಕರೆತರಿಸಿದನು. ರಾಮನು ತಂದೆಯ ಒಳಮನೆಯನ್ನು ಪ್ರವೇಶಿಸುತ್ತ, ದೂರದಿಂದಲೇ ಅವನಿಗೆ ಕೈಮುಗಿದು ನಮಸ್ಕರಿಸಿದನು. ಹಾಗೆ ಪ್ರಣಾಮ ಮಾಡುತಿದ್ದ ರಾಮನನ್ನು ದಶರಥನು ಕೈಹಿಡಿದು ಮೇಲಕ್ಕೆಬ್ಬಿಸಿ, ಆತನನ್ನು ಪ್ರೀತಿಯಿಂದಾಲಿಂಗಿಸಿ, ಆಸನವನ್ನು ಕೊಟ್ಟುಕುಳ್ಳಿರಿಸಿ ಒಂದಾನೊಂದು ಮಾತನ್ನು ಹೇಳುವನು. "ವತ್ಸ ರಾಮಾ! ನಾನು ಬಹುಕಾಲದವರೆಗೆ ಬದುಕಿ ಮುದುಕನಾಗಿರುವೆನು. ಬೇಕಾದ ಭೋಗಗಳೆಲ್ಲವನ್ನೂ ಅನುಭವಿಸಿದುದಾಯಿತು. ವಿಶೇಷವಾದ ಅನ್ನದಾನಗಳಿಂದಲೂ, ಭೂರಿದಕ್ಷಿಣೆಗಳಿಂದಲೂ, ಅನೇಕಬ್ರಾಹ್ಮಣರನ್ನು ತೃಪ್ತಿಪಡಿಸಿ, ನೂರಾರು ಯಾಗಗಳನ್ನು ಮಾಡಿದೆನು. ಲೋಕದಲ್ಲಿ ಎಣೆಯಿಲ್ಲದ ಕಲ್ಯಾಣಗುಣಗಳಿಂದ ಕೂಡಿದ ನೀನು ನನಗೆ ಪುತ್ರರತ್ನವಾಗಿ ಜನಿಸಿರುವೆ. ನಾನು ಇದುವರೆಗೆ ಅನೇಕದಾನಗಳನ್ನು ಮಾಡಿದೆನು. ಅನೇಕ ಯಜ್ಞಗಳನ್ನು ನಡೆಸಿರುವೆನು. ಸಮಸ್ತ ವೇದಾಧ್ಯಯನಗಳನ್ನೂ ಮಾಡಿರುವೆನು. ಇದುವರೆಗೆ ನಾನು ಶಾಸ್ತ್ರವಿರುದ್ಧಗಳಲ್ಲದ ಸುಖಗಳೆಲ್ಲವನ್ನೂ ಅನುಭವಿಸಿದುದಾಯಿತು. ಯಾಗಕಾರ್ಯಗಳಿಂದ ದೇವತೆಗಳ ಋಣವನ್ನೂ, ಅಧ್ಯಯನಗಳಿಂದ ಋಷಿಗಳಿಗೆ ಸಲ್ಲಿಸಬೇಕಾದ ಋಣವ

ನ್ನೂ, ನಿನ್ನನ್ನು ಪಡೆದುದರಿಂದ ಪಿತೃಗಳಿಗೆ ಸಲ್ಲಿಸಬೇಕಾದ ಋಣವನ್ನೂ, ದಾನಾದಿಗಳಿಂದ ಬ್ರಾಹ್ಮಣರ ಋಣವನ್ನೂ ತೀರಿಸಿ,*ಸಮಸ್ತಋಣಗಳಿಂದ ಲೂ ಮುಕ್ತನಾಗಿರುವೆನು. ನಿನಗೆ ರಾಜ್ಯಾಭಿಷೇಕವನ್ನು ಮಾಡುವುದು ಹೊರತು,ಇನ್ನು ಮೇಲೆ ನಾನು ನಡೆಸಬೇಕಾದ ಕಾರ್ಯವು ಯಾವುದೊಂದೂ ಇಲ್ಲ. ಸಮಸ್ತಸುಖಾನುಭವಗಳಿಂದ ನನ್ನ ಈ ದೇಹದ ಋಣವನ್ನೂ ಸಂಪೂರ್ಣವಾಗಿ ತೀರಿಸಿಕೊಂಡಂತಾಯಿತು. ವತ್ಸ ರಾಮಾ! ಇನ್ನು ಮೇಲೆ ನಾನು ನಿನಗೆ ಹೇಳಬೇಕಾದ ಮಾತನ್ನು ಲಾಲಿಸಿ,ಅದು ನಿನಗೆ ಸಮ್ಮತವಾಗಿದ್ದರೂ, ಅಸಮ್ಮತವಾಗಿದ್ದರೂ, ನನಗಾಗಿ ನೀನು ಅದನ್ನು ನಡೆಸಿಯೇ ತೀರಬೇಕು. ಈಗಲಾದರೋ ನಮ್ಮ ಪ್ರಜೆಗಳೆಲ್ಲರೂ ನೀನೇ ರಾಜನಾಗಿರಬೇಕೆಂದು ಕೋರುತ್ತಿರುವರು. ಆದುದರಿಂದ ನಿನಗೆ ಈಗಲೇ ಯುವರಾಜಪಟ್ಟವನ್ನು ಕಟ್ಟಬೇಕೆಂದಿರುವೆನು. ಪ್ರಜೆಗಳ ಕೋರಿಕೆಯೂ, ನನ್ನ ಉದ್ದೇಶವೂ ಹಾಗಿರಲಿ! ಈಗಲೇ ನಿನಗೆ ಪಟ್ಟವನ್ನು ಕಟ್ಟಬೇಕೆಂಬುದಕ್ಕೆ ಮತ್ತೊಂದು ಕಾರಣವೂ ಉಂಟು. ಈಗೀಗ ನನಗೆ ಸ್ವಪ್ನದಲ್ಲಿ ಭಯಂಕರಗಳಾದ ಉತ್ಪಾತಗಳು ಕಾಣುತ್ತಿರುವುವು. ಈಗ ನನ್ನ ನಕ್ಷತ್ರಕ್ಕೆ ಗ್ರಹಗತಿಯು ಬಹಳ ಕ್ರೂರವಾಗಿರುವುದು. ನನ್ನ 'ನಕ್ಷತ್ರವನ್ನು ಕ್ರೂರರಾದ ಸೂರ್ಯಾಂಗಾರಕರಾಹುಗ್ರಹಗಳು ಆಕ್ರಮಿಸಿರುವುವೆಂದು ಜ್ಯೋತಿಷ್ಕರು ಹೇಳಿರುವರು. ಇಷ್ಟು ದುರ್ನಿಮಿತ್ತಗ

---

* ಮನುಷ್ಯನು ಹುಟ್ಟುವಾಗಲೇ ಐದುವಿಧದಲ್ಲಿ ಋಣಗ್ರಸ್ತನಾಗಿರುವನು. ಬ್ರಾಹ್ಮನಿಗೆ ಬ್ರಹ್ಮಚರ್ಯಾದಿಮೂರುಋಣಗಳುಮಾತ್ರ ಶ್ರುತಿಸಿದ್ಧಗಳಾಗಿರುವುವು. "ಜಾಯಮಾನೋ ವೈ ಬ್ರಾಹ್ಮಣಸ್ತ್ರಿಭಿ: ಋಣವಾ್ ಜಾಯತೇ ಬ್ರಹ್ಮಚರ್ಯೇಣರ್ಷಿಭ್ಯೋ ಯಜ್ಞೇನದೇವೇಭ್ಯಃ ಪ್ರಜಯಾಪಿತೃಭ್ಯ:"ಎಂಬಂತೆ,ಇವು ಮೂರೂ ಪ್ರಸಿದ್ಧಗಳಾಗಿದ್ದರೂ ವಿಪ್ರರಿಗೂ ಆತ್ಮನಿಗೂ ಸಲ್ಲಿಸತಕ್ಕ ಋಣಗಳು ಬೇರೇ ಎರಡಿರುವುದರಿಂದ, ಋಣಪಂಚಕವೆಂಬುದು ಮತಾಂತರಸಿದ್ಧವು. ಈ ಐದುಋಣಗಳ ವಿವರವು ಹೇಗೆಂದರೆ:--ಇಂದ್ರಿಯಾಧಿಷ್ಠಾತೃಗಳಾದ ದೇವತೆಗಳಿಗೂ, ವಾಗುಪಕಾರಿಗಳಾದ ಋಷಿಗಳಿಗೂ, ದೇಹವನ್ನು ಕೊಟ್ಟು ಉಪಕಾರಮಾಡಿದ ಪಿತೃಗಳಿಗೂ, ಕರ್ಮಾಧೀನಗಳಾದ ಸಕಲಸಂಸ್ಕಾರಗಳನ್ನೂ ಸಾಧಿಸಿ ಪಾಪನಾಶಕರಾಗಿರುವ ಬ್ರಾಹ್ಮಣರಿಗೂ, ಶರೀರೇಂದ್ರಿಯಸಂಘಾತರೂಪನಾಗಿ ಜ್ಞಾನಪ್ರಕಾಶವನ್ನುಂಟುಮಾಡುವುದಕ್ಕೆ ಹೇತುವಾದ ಆತ್ಮನಿಗೂ ಮಾಡಬೇಕಾದ ಪ್ರತ್ಯುಪಕಾರಗಳೇ ಮನುಷ್ಯನಿಗೆ ಐದುಋಣಗಳೆಂದು ಗ್ರಹಿಸಬೇಕು.

ಳುಂಟಾದಾಗ,ಪ್ರಾಯಿಕವಾಗಿ ರಾಜ್ಯಾಧಿಪತಿಯಾದವನಿಗೆಮರಣವೇಉಂಟಾಗಬೇಕು. ಅಥವಾ ಮಹಾವಿಪತ್ತಾದರೂ ಸಂಭವಿಸುವುದು. ಅದರಿಂದ ಈಗಲೇ ನಿನಗೆ ಯೌವರಾಜ್ಯಾಭಿಷೇಕವನ್ನು ಮಾಡಬೇಕೆಂಬ ಬುದ್ಧಿ ಹುಟ್ಟಿರುವುದು. ಮನುಷ್ಯನ ಮನಸ್ಸು ಕ್ಷಣಕ್ಷಣಕ್ಕೆ ವ್ಯತ್ಯಾಸಪಡತಕ್ಕ ಚಂಚಲಸ್ವಭಾವವುಳ್ಳುದಾದುದರಿಂದ, ಈಗ ನನಗೆ ಹುಟ್ಟಿರುವ ಈ ಉದ್ದೇಶವು ವ್ಯತ್ಯಾಸಹೊಂದುವುದಕ್ಕೆ ಮೊದಲೇ, ಆ ಕಾರ್ಯವನ್ನು ನಡೆಸಿಬಿಡಬೇಕು. ಈಗ ಚಂದ್ರನು ಪುಷ್ಯಪೂರ್ವವಾದ ಪುನರ್ವಸುನಕ್ಷತ್ರದೊಡಗೂಡಿರುವನು. ಪುಷ್ಯನಕ್ಷತ್ರದ ಸಂಬಂಧವು ನಾಳೆಯೇ ಪ್ರಾಪ್ತವಾಗುವುದೆಂದು ಜ್ಯೋತಿಷ್ಕರು ಹೇಳುವರು. ಆದುದರಿಂದ ಈ ಪುಷ್ಯನಕ್ಷತ್ರದಲ್ಲಿಯೇ ನೀನು ಅಭಿಷೇಕವನ್ನು ಹೊಂದುವನಾಗು! ನನ್ನ ಮನಸ್ಸೇ ನನ್ನನ್ನು ಆತುರಪಡಿಸುತ್ತಿರುವಂತೆ ತೋರುವುದು. ನಾಳೆಯೇ ನಿನಗೆ ಅಭಿಷೇಕವನ್ನು ಮಾಡುವೆನು. ಇದು ಮೊದಲುಗೊಂಡು,ನೀನು ಈ ರಾತ್ರಿಯೆಲ್ಲವೂ ದರ್ಭಾಸನದಲ್ಲಿದ್ದು,ಸಪತ್ನೀಕನಾಗಿ ಉಪವಾಸವಿರಬೇಕು.ಪ್ರಾಯಿಕವಾಗಿ ಇಂತಹ ಶ್ರೇಯಸ್ಕರವಾದ ಕಾರ್ಯಗಳಿಗೆ ನಡುವೆ ಅನೇಕವಿಘ್ನಗಳು ಸಂಭವಿಸುವುದುಂಟು. ಆದುದರಿಂದ ನಿನ್ನ ಮಿತ್ರರೆಲ್ಲರೂ ಎಚ್ಚರಿಕೆಯಿಂದ ನಿನ್ನ ಸಮೀಪದಲ್ಲಿಯೇ ಇದ್ದುಕೊಂಡು ನಿನ್ನನ್ನು ರಕ್ಷಿಸುತ್ತಿರಲಿ! ಭರತನು ಈಗ ದೇಶಾಂತರಕ್ಕೆ ಹೋಗಿರುವನು. * ಆತನು ಈ ಪಟ್ಟಣಕ್ಕೆ ಬಂದುಸೇರುವುದಕ್ಕೆ ಮೊದಲೇ,ಈ ಅಭಿಷೇಕಕಾರ್ಯವನ್ನು ನಡೆಸಿಬಿಡಬೇಕಾಗಿರುವುದು. ಈ ಮಹೋತ್ಸವಕ್ಕೆ ಆತನನ್ನು ಕರೆತರಿಸುವುದಕ್ಕೆ ತಕ್ಕಷ್ಟು ಸಾವಕಾಶವಿಲ್ಲ. ಇದಲ್ಲದೆ ನಿನ್ನ ತಮ್ಮನಾದ ಭರತನು ಬಹಳ ಸೌಜನ್ಯವುಳ್ಳವನಾಗಿಯೂ, ಜ್ಯೇಷ್ಠಭ್ರಾತೃವಾದ ನಿನ್ನಲ್ಲಿ ಭಕ್ತಿಯನ್ನಿಟ್ಟು ನಿನ್ನ ಮನಸ್ಸನ್ನನುಸರಿಸಿ ನಡೆಯತಕ್ಕವನಾಗಿಯೂ,ಧರ್ಮಾತ್ಮನಾಗಿಯೂ,ದ

---

* ದಶರಥನು ಕೇಕಯರಾಜನಿಗೆ ರಾಜ್ಯವನ್ನೇ ಶುಲ್ಕವಾಗಿಟ್ಟು ಕೈಕೇಯಿಯನ್ನು ವಿವಾಹಮಾಡಿಕೊಂಡುದಾಗಿ ಪ್ರಸಿದ್ಧಿಯುಂಟು.ಈಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡೇ ದಶರಥನು, ಭರತನು ಹಿಂತಿರುಗಿ ಬಂದುಬಿಟ್ಟರೆ ರಾಜ್ಯವನ್ನು ಅವನಿಗೇ ಕೊಡಬೇಕಾಗಿ ಬರುವುದೆಂಬ ಶಂಕೆಯಿಂದ ಈ ಮಾತನ್ನು ಹೇಳಿದುದಾಗಿ ಗ್ರಹಿಸಬೇಕು. ಇದೇ ವೃತ್ತಾಂತವು ಈ ಕಾಂಡದ ನೂರೇಳನೆಯ ಸರ್ಗದಲ್ಲಿ ವಿವರಿಸಲ್ಪಡುವುದು.

ಯಾವಂತನಾಗಿಯೂ,ಜಿತೇಂದ್ರಿಯನಾಗಿಯೂ ಇದ್ದರೂ,ಮನುಷ್ಯನ ಮನಸ್ಸು ಪ್ರಾಯಕವಾಗಿ ಚಂಚಲಸ್ವಭಾವವುಳ್ಳುದೆಂದು ನನಗೆ ತೋರಿರುವುದರಿಂದ, ಆತನು ಇಲ್ಲಿಗೆ ಬಂದುಸೇರುವುದಕ್ಕೆ ಮೊದಲೇ ಈಶುಭಕಾರ್ಯವನ್ನು ನಡೆಸಿಬಿಡುವುದೇ ಒಂದು ಪಕ್ಷದಲ್ಲಿ ಉತ್ತಮವೆಂದೆಣಿಸಿರುವೆನು. ಅಥವಾ *ಯಾವಾಗಲೂ ಧರ್ಮನಿರತರಾದ ಸತ್ಪುರುಷರ ಮನಸ್ಸು ಇತರರ ಶ್ರೇಯಃಕಾರ್ಯಗಳಲ್ಲಿ ಅನುಕೂಲಭಾವದಿಂದ ಪರಸ್ಪರೋಪಕಾರಕ್ಕಾಗಿಯೇ ಪ್ರವರ್ತಿಸುವುದೇಹೊರತು,ಭೇದವನ್ನು ಹೊಂದುವುದಲ್ಲ. ರಘುವಂಶೋತ್ಪನ್ನನಾದ ನಿನಗೆ ಇವೆಲ್ಲವೂ ತಿಳಿಯದ ವಿಷಯವಲ್ಲ" ಎಂದನು.ಹೀಗೆ ದಶರಥನು ನಾಳೆ ನಡೆಯಬೇಕಾದಪಟ್ಟಾಭಿಷೇಕದ ವಿಷಯವನ್ನು ತಿಳಿಸಿದಮೇಲೆ,ರಾಮನು ಆತನ ಅನುಮತಿಯನ್ನು ಪಡೆದು, ತಂದೆಗೆ ನಮಸ್ಕರಿಸಿ, ಬಾಯೆತ್ತದೆ ಹೊರಟುಹೋದನು. ಮತ್ತು ತನ್ನತಂದೆಗೆ ಉಂಟಾಗಿರುವ ಈ ಉದ್ದೇಶವನ್ನು ತಾಯಿಯಾದ ಕೌಸಲ್ಯೆಗೆ ತಿಳಿಸುವುದಕ್ಕಾಗಿ, ಒಡನೆಯೇ ಆಕೆಯ ಅಂತಃಪುರಕ್ಕೆ ಬಂದು ಸೇರಿದನು. ಅಷ್ಟರೊಳಗಾಗಿಯೇ ಕೌಸಲ್ಯೆಯು, ಅಲ್ಲಿ ಪಟ್ಟೆಮಡಿಯನ್ನುಟ್ಟು, ಗೃಹದೇವತೆಯ ಸಾನ್ನಿಧ್ಯದಮುಂದೆ ಕುಳಿತು, ಮೌನವ್ರತದಿಂದ ತನ್ನ ಇಷ್ಟದೇವತೆಯನ್ನು ಧ್ಯಾನಿಸುತ್ತಾ, ತನ್ನ ಮಗನಾದ ರಾಮನ ಶ್ರೇಯೋಭಿವೃದ್ಧಿಯನ್ನೇ ಪ್ರಾರ್ಥಿಸುತ್ತಿದ್ದಳು.ಇಷ್ಟರಲ್ಲಿ ಸುಮಿತ್ರೆಯೂಕೂಡ, ರಾಮನಿಗೆ! ಅಭಿಷೇಕವು ನಡೆಯುವುದೆಂಬ ಸು

* "ಸತಾಂತು ಧರ್ಮನಿತ್ಯಾನಾಂ ಕೃತಶೋಭಿಚ ರಾಘವ" ಎಂಬುದೇ ಇದಕ್ಕೆ ಮೂಲವು. ಕೆಲವರು ಇದಕ್ಕೆ ಬೇರೆಬೇರೆ ವ್ಯಾಖ್ಯಾನಗಳನ್ನು ಕಲ್ಪಿಸಿರುವರು. ಧರ್ಮನಿರತರಾದ ಸತ್ಪುರುಷರ ಮನಸ್ಸೂ ಕೂಡ "ಕೃತಶೋಭಿ". "ಇತರರು ಮಾಡಿದ ಮಿತ್ರಭೇದಾದಿ ಕೃತ್ಯಗಳಿಗನುಸಾರವಾಗಿ ಹೋಗುವುದುಂಟು" ಎಂದರ್ಥವು. ಅಥವಾ ಧರ್ಮನಿರತರಾದವರ ಮನಸ್ಸು "ಕೃತಶೋಭಿ". ನಡೆದುಹೋದ ಕಾರ್ಯವನ್ನು ಅನುಮೋದಿಸತಕ್ಕ ಸ್ವಭಾವವುಳ್ಳುದು. ಎಂದರೆ, ಇಲ್ಲಿ ಭರತನು ಎಷ್ಟೋ ಧರ್ಮನಿರತನಾದ ಸತ್ಪುರುಷಸ್ವಭಾವವುಳ್ಳವನಾದರೂ, ತಾನು ಬಂದಮೇಲೆ ಒಂದುವೇಳೆ ಅಡ್ಡಿ ಮಾಡಿದರೂಮಾಡಬಹುದು. ತಾನು ಬರುವುದಕ್ಕೆ ಮೊದಲೇ ನಿನ್ನ ಅಭಿಷೇಕವು ನಡೆದುಹೋಗಿರುವ ಸಂದರ್ಭದಲ್ಲಿ, ಅದನ್ನನುಮೋದಿಸಿ ಸಂತೋಷಿಸಬಹುದಾದುದರಿಂದ, ಅವನ ಆಗಮನಕ್ಕೆ ಮೊದಲೇ ಅಭಿಷೇಕವನ್ನು ನಡೆಸಿಬಿಡುವುದುತ್ತಮವೆಂದು ಭಾವವು.

ಜ್ಞೆಯನ್ನು ಕೇಳಿ ಮೊದಲೇ ಅಲ್ಲಿಗೆ ಬಂದಿದ್ದಳು. ಆಗ ಲಕ್ಷ್ಮಣನೂ ಬಂದು ಸೇರಿದನು. ಸೀತೆಯೂಕೂಡ ದಾಸೀಜನರಿಂದ ಆಗಲೇ ಅಲ್ಲಿಗೆ ಕರೆತರಿಸಲ್ಪಟ್ಟಳು. ನಾಳೆ ಪುಷ್ಯನಕ್ಷತ್ರದಲ್ಲಿ, ತನ್ನ ಪ್ರಿಯಪುತ್ರನಾದ ರಾಮನಿಗೆ ಯುವರಾಜಪಟ್ಟವು ಕಟ್ಟಲ್ಪಡುವುದನ್ನು ಕೇಳಿ ಕೌಸಲ್ಯೆಯು, ಸುಮಿತ್ರಾಲಕ್ಷ್ಮಣರೊಡನೆಯೂ, ಸೀತೆಯೊಡನೆಯೂ ಪರಿವೃತಳಾಗಿ, ತನ್ನ ಮಗನ ಶ್ರೇಯೋಭಿವೃದ್ಧಿಗಾಗಿ ಕಣ್ಮುಚ್ಚಿಕೊಂಡು ಪ್ರಾಣಾಯಾಮಪೂರ್ವಕವಾಗಿ ಶ್ರೀಮನ್ನಾರಾಯಣನನ್ನು ಧ್ಯಾನಿಸುತ್ತಿದ್ದಳು. ಹೀಗೆ ನಿಯಮನಿಷ್ಠೆಳಾದ ತಾಯಿಯನ್ನು ನೋಡಿ, ರಾಮನು, ಆಕೆಗೆ ಸಾಷ್ಟಾಂಗಪ್ರಣಾಮವನ್ನು ಮಾಡಿ "ಅಮ್ಮಾ! ತಂದೆಯು ನನ್ನನ್ನು ಪ್ರಜಾಪರಿಪಾಲನಕಾರ್ಯಕ್ಕಾಗಿ ನಿಯಮಿಸಿರುವನು. ಆತನ ಆಜ್ಞೆಯಿಂದ ನಾಳೆಯೇ ನನಗೆ ಯೌವರಾಜ್ಯಾಭಿಷೇಕವು ನಡೆಯುವಂತಿದೆ! ಈ ದಿವಸದ ರಾತ್ರಿಯೆಲ್ಲವೂ ಸೀತೆಯೊಡನೆ ನಾನು ಉಪವಾಸವಿರಬೇಕೆಂದು ತಂದೆಯ ಆಜ್ಞೆಯಾಗಿರುವುದು ಋತ್ವಿಕ್ಕುಗಳೂ, ಉಪಾಧ್ಯಾಯರೂ, ಹಾಗೆಯೇ ನಿಯಮಿಸಿರುವರು. ನಾಳೆ ಅಭಿಷೇಕವು ನಡೆಯುವಾಗ ಮಾಡಬೇಕಾದ ಮಂಗಳಕಾರ್ಯಗಳೆಲ್ಲವನ್ನೂ ನೀನು ನನಗೂ, ಸೀತೆಗೂ ಈಗಲೇ ಮಾಡಿಸು" ಎಂದನು. ಇದನ್ನು ಕೇಳಿ ಕೌಸಲ್ಯೆಯು, ಬಹುಕಾಲದಿಂದ ತಾನು ಅಪೇಕ್ಷಿಸುತ್ತಿದ್ದ ಕೋರಿಕೆಯು ಈಗ ನೆರವೇರಿತೆಂಬ ಮಿತಿಮೀರಿದ ಸಂತೋಷದಿಂದ ಉಬ್ಬಿ, ಆ ಆನಂದದಿಂದ ಕುಗ್ಗಿದ ಧ್ವನಿಯುಳ್ಳವಳಾಗಿ, ರಾಮನನ್ನು ಕುರಿತು, "ವತ್ಸ ರಾಮಾ! ಚಿರಂಜೀವಿಯಾಗಿರು! ನಿನ್ನ ಶತ್ರುಗಳೆಲ್ಲರೂ ನಾಶಹೊಂದಲಿ! ನೀನು ರಾಜ್ಯಲಕ್ಷ್ಮಿಯೊಡಗೂಡಿ,ನನ್ನ ಮತ್ತು ಈ ಸುಮಿತ್ರೆಯ ಬಂಧುಗಳೆಲ್ಲರನ್ನೂ ಆನಂದಪಡಿಸು!ಎಲೆವತ್ಸನೆ! ನನ್ನ ಸಂತೋಷವನ್ನು ಏನೆಂದುಹೇಳಲಿ! ಶುಭನಕ್ಷತ್ರದಲ್ಲಿ ನೀನು ನನ್ನ ಗರ್ಭದಿಂದ ಉದಿಸಿರುವೆ.ನಿನ್ನ ಕಲ್ಯಾಣಗುಣಗಳಿಂದ ತಂದೆಯನ್ನು ಅನೇಕವಿಧದಲ್ಲಿ ಸಂತೋಷಪಡಿಸಿರುವೆ.ಎಲೈಕುಮಾರನೆ! ಇಕ್ಷ್ವಾಕುವಂಶದ ರಾಜ್ಯಲಕ್ಷ್ಮಿಯು ಈಗ ನಿನ್ನನ್ನು ಬಂದು ಸೇರುವಳು. ನಾನು ಇದುವರೆಗೆ ಪುಂಡರೀಕಾಕ್ಷನಾದ ಶ್ರೀಮನ್ನಾರಾಯಣನನ್ನು ಕುರಿತು ವ್ರತೋಪವಾಸಾದಿನಿಯಮಗಳಿಂದ ನಡೆಸಿದ ಶ್ರಮವೆಲ್ಲವೂ ಈಗ ಸಫಲವಾಯಿತು! ಆಹಾ! ಇನ್ನು ನನ್ನ ಭಾಗ್ಯಕ್ಕೆ ಎಣೆಯೇನು?" ಎಂದಳು. ಆಮೇಲೆ ರಾಮನು

ತನಗಿದಿರಾಗಿ ವಿನಯದಿಂದ ಕೈಮುಗಿದು ನಿಂತಿದ್ದ ಲಕ್ಷ್ಮಣನನ್ನು ನೋಡಿ, ಮಂದಹಾಸದಿಂದ ಕೂಡಿದವನಾಗಿ, "ವತ್ಸಲಕ್ಷ್ಮಣಾ! ನೀನೂ ನನ್ನೊಡನೆ ಸೇರಿ ಈ ಭೂಮಿಯನ್ನು ಪಾಲಿಸಬೇಕು.ನೀನು ನನಗೆ ಎರಡನೆಯಪ್ರಾಣದಂತೆಯೇ ಇರುವುದರಿಂದ,ರಾಜ್ಯಲಕ್ಷ್ಮಿಯು ನನ್ನನ್ನು ಯಾವಾಗ ಸೇರುವಳೋ, ಆಗಲೇ ನಿನ್ನನ್ನೂ ಸೇರಿದಹಾಗೆಯೇ ಅಲ್ಲವೇ! ಎಲೆ ವತ್ಸನೆ!ನಿನಗೆ ಬೇಕಾದ ಭೋಗಗಳನ್ನೂ, ಮತ್ತು ರಾಜ್ಯಫಲಗಳನ್ನೂ ಯಥೇಷ್ಟವಾಗಿ ಅನುಭವಿಸಬಹುದು. ನಾನು ನನ್ನ ಪ್ರಾಣವನ್ನೂ, ರಾಜ್ಯವನ್ನೂ ನಿನಗಾಗಿಯೇ ಬಯಸುವೆನೆಂದು ತಿಳಿ! ಇನ್ನು ನಾನು ಹೇಳಬೇಕಾದುದೊಂದೂ ಇಲ್ಲ" ಎಂದು ಹೇಳಿ,ಜನನಿಯರಾದ ಕೌಸಲ್ಯಾಸುಮಿತ್ರೆಯರಿಬ್ಬರಿಗೂ ನಮಸ್ಕರಿಸಿ, ಸೀತೆಯನ್ನು ಕಳುಹಿಸಿಕೊಡುವಂತೆ ಅವರನ್ನು ಪ್ರಾರ್ಥಿಸಿ, ಅವರ ಅನುಮತಿಯನ್ನು ಪಡೆದು, ಪ್ರಿಯಪತ್ನಿಯಾದ ಸೀತೆಯನ್ನು ಕರೆದುಕೊಂಡು, ತನ್ನ ಮನೆಗೆ ಹೊರಟುಹೋದನು. ಇಲ್ಲಿಗೆ ನಾಲ್ಕನೆಯ ಸರ್ಗವು.

---

**{ವಸಿಷ್ಠನು ರಾಮನನ್ನು ಉಪವಾಸವಿರುವಂತೆ ನಿಯಮಿಸಿದುದು.}**

ದಶರಥನು ಮಾರನೆಯದಿವಸದಲ್ಲಿ ನಡೆಯಬೇಕಾದ ಅಭಿಷೇಕಕ್ಕಾಗಿ. ಉಪವಾಸಾದಿವ್ರತಗಳನ್ನು ನಡೆಸುವಂತೆ ರಾಮನಿಗೆ ಆಜ್ಞಾಪಿಸಿ, ವಸಿಷ್ಠನನ್ನು ಕರೆಸಿ,"ಎಲೈ ತಪಸ್ವಿಯೆ! ನೀನು ಹೋಗಿ ಈಗಲೇ ರಾಮನಿಗೆ ಪತ್ನಿಯೊಡನೆ ಉಪವಾಸವನ್ನು ಮಾಡಿಸು! ಈ ಉಪವಾಸವನ್ನು ನಡೆಸುವುದರಿಂದ, ಐಶ್ವರ್ಯಕ್ಕೂ, ಕೀರ್ತಿಗೂ, ರಾಜ್ಯಲಾಭಕ್ಕೂ ಕಾರಣವಾಗುವುದು." ಎಂದು ಪ್ರಾರ್ಥಿಸಲು, ವೇದವಿತ್ತಾದ ಆ ಮಹರ್ಷಿಯು, ಹಾಗೆಯೇ ಆಗಲೆಂದು ಹೇಳಿ, ಮಂತ್ರೋಕ್ತವಾಗಿ ರಾಮನಿಂದ ಉಪವಾಸವನ್ನು ಮಾಡಿಸುವುದಕ್ಕಾಗಿ, ತಾನಾಗಿಯೇ ರಾಮನ ಅರಮನೆಗೆ ಹೊರಟನು. ಬ್ರಾಹ್ಮಣರು ಏರುವುದಕ್ಕೆ ಯೋಗ್ಯವಾಗಿರುವಂತೆ ಸಿದ್ಧಪಡಿಸಲ್ಪಟ್ಟ ರಥವನ್ನೇರಿ, ಶರತ್ಕಾಲದ ಮೇಘಗಳಂತೆ ಬಿಳುಪಾದ ರಾಮಗೃಹದ್ವಾರಕ್ಕೆ ಬಂದು, ಆ ರಥದಿಂದಲೇ ಆ ಮನೆಯ ಮೂರುತೊಟ್ಟಿಗಳನ್ನೂ ದಾಟಿ, ಒಳಕ್ಕೆ ಪ್ರವೇಶಿಸಿದ

ಸು. ಹೀಗೆ ಮಹರ್ಷಿಶ್ರೇಷ್ಠನಾದ ವಸಿಷ್ಠನು, ತನ್ನ ಮನೆಗೆ ಬಂದುದನ್ನು ನೋಡಿ, ರಾಮನು ಆತನನ್ನು ಗೌರವಿಸುವುದಕ್ಕಾಗಿ, ಬಹುಸಂಭ್ರಮದಿಂದ ಲೂ, ಆತುರದಿಂದಲೂ ಇದಿರುಗೊಂಡು ಹೊರಕ್ಕೆ ಬಂದು, ರಥದ ಬಳಿಯ ಲ್ಲಿ ನಿಂತು,ತಾನಾಗಿಯೇ ಕೈಗೊಟ್ಟು ಆ ಮಹರ್ಷಿಯನ್ನು ರಥದಿಂದ ಕೆಳಕ್ಕಿ ಳಿಸಿದನು. ಆರಾಮನ ವಿನಯಾತಿಶಯವನ್ನು ನೋಡಿ, ವಸಿಷ್ಠನಿಗೆ ಆತ ನಲ್ಲಿ ಮೇಲೆಮೇಲೆ ಪ್ರೀತಿರಸವು ಉಕ್ಕುತ್ತಿತ್ತು. ಆತನನ್ನು ಕುಶಲಪ್ರಶ್ನಾ ದಿಗಳಿಂದ ಸಂತೋಷಪಡಿಸಿ, ಅವನನ್ನು ಕುರಿತು, “ವತ್ಸರಾಮಾ ! ನೀನು ತಂದೆಯ ಪೂರ್ಣಾನುಗ್ರಹಕ್ಕೆ ಪಾತ್ರನಾಗಿರುವೆ!ನಾಳೆ ನಿನಗೆ ಯೌವರಾಜ್ಯಾ ಭಿಷೇಕವು ನಡೆಯುವುದು! ಅದಕ್ಕಾಗಿ ಈಗ ನೀನು ಸೀತಾಸಮೇತನಾಗಿ ಉಪವಾಸವಿರಬೇಕು! ನಹುಷನು ಯಯಾತಿಗೆ ಪಟ್ಟವನ್ನು ಕಟ್ಟಿದಂತೆ, ನಾಳೆ ಪ್ರಾತಃಕಾಲದಲ್ಲಿ ನಿನ್ನ ತಂದೆಯು ನಿನಗೆ ಪ್ರೀತಿಪುರಸ್ಸರವಾಗಿ ಯೌವರಾಜ್ಯಾಭಿಷೇಕವನ್ನು ನಡೆಸುವ ಉದ್ದೇಶವುಳ್ಳವನಾಗಿರುವನು.” ಎಂದು ಹೇಳಿ, ಸೀತಾಸಮೇತನಾದ ಆ ರಾಮನನ್ನು ಮಂತ್ರವತ್ತಾಗಿ ಉಪ ವಾಸವಿರಿಸಿದನು. ಆಮೇಲೆ ವಸಿಷ್ಠನು ಅಲ್ಲಿ ಯಥೋಚಿತವಾಗಿ ಸತ್ಕ ರಿಸಲ್ಪಟ್ಟು, ರಾಮನ ಅನುಮತಿಯನ್ನು ಪಡೆದು, ಅಲ್ಲಿಂದ ಹಿಂತಿರುಗಿ ಹೊರಟುಬಂದನು. ಇತ್ತಲಾಗಿ ರಾಮನು, ತನ್ನ ಸನ್ಮಿತ್ರರೊಡಗೂಡಿ ವಿನೋದವಾಕ್ಯಗಳನ್ನಾಡುತ್ತಿದ್ದು, ಕೊನೆಗೆ ಅವರಿಂದ ಸತ್ಕೃತನಾಗಿ, ಅವ ರ ಅನುಮತಿಯನ್ನು ಪಡೆದು ಅಂತಃಪುರವನ್ನು ಸೇರಿದನು. ಆಕಾಲದಲ್ಲಿ ರಾಮಾಭ್ಯುದಯವನ್ನು ಕೇಳಿ ಮಹಾಸಂತೋಷಯುಕ್ತರಾಗಿರುವ ಸ್ತ್ರೀಪುರು ಷಸಮೂಹದಿಂದ ಕೂಡಿದ ಆ ಅಂತಃಪುರವು,ಕಲಕಲಧ್ವನಿ ಮಾಡುತ್ತಿರುವ ಪಕ್ಷಿಸಮೂಹದಿಂದಕೂಡಿದ ತಾವರೆಗೊಳದಂತೆ ಶೋಭಿಸುತಿತ್ತು. ಅತ್ತಲಾ ಗಿ ವಸಿಷ್ಠನು ವಿಶಾಲವಾಗಿಯೂ ಸುಂದರವಾಗಿಯೂ ಇರುವ ರಾಮನ ಅರಮನೆಯನ್ನು ಬಿಟ್ಟು ಹೊರಟುಬರುವಾಗ, ರಾಜಮಾರ್ಗವೆಲ್ಲವೂ ಹರ್ಷ ಯುಕ್ತರಾದ ಜನಗಳಿಂದ ತುಂಬಿರುವುದನ್ನು ನೋಡಿದನು. ರಾಮಾಭಿಷೇಕ ವನ್ನು ನೋಡಬೇಕೆಂಬ ಕುತೂಹಲದಿಂದ, ನಾನಾದಿಕ್ಕುಗಳಿಂದಲೂ ಗುಂ ಪುಗುಂಪಾಗಿ ಬಂದು ನೆರೆದಿರುವ ಜನಗಳಿಂದ ಆ ಅಯೋಧ್ಯಾಪಟ್ಟಣದ

ರಾಜಮಾರ್ಗಗಳೆಲ್ಲವೂ ನಿಬಿಡವಾಗಿ ತುಂಬಿದ್ದುವು. ಅಲೆಗಳ ಪರಂಪರೆಯಂತೆ ಜನಗಳು ಮೇಲೆಮೇಲೆ ಬಂದು ಸೇರಿ, ಸಂತೋಷಸಲ್ಲಾಪಗಳನ್ನು ಮಾಡುತಿದ್ದಾಗ, ಆ ರಾಜಮಾರ್ಗದಲ್ಲಿ ಹುಟ್ಟಿದ ಮಹಾಧ್ವನಿಯು ಉಲ್ಲೋಲಕಲ್ಲೋಲವಾದ ಸಮುದ್ರದ ಘೋಷದಂತೆ ತೋರುತಿತ್ತು. ಆ ರಾಜಮಾರ್ಗಗಳೆಲ್ಲವೂ ಜಲಸೇಚನಾದಿಗಳಿಂದ ಚೆನ್ನಾಗಿ ಅಲಂಕರಿಸಲ್ಪಟ್ಟಿದ್ದುವು. ಅಲ್ಲಲ್ಲಿ ಪುಷ್ಪೋಪಹಾರಗಳು ಚೆಲ್ಲಲ್ಪಟ್ಟಿದ್ದುವು. ಮನೆಮನೆಗೂ ಧ್ವಜಗಳನ್ನು ಎತ್ತಿ ಕಟ್ಟಿದ್ದರು. ಅಯೋಧ್ಯೆಯಲ್ಲಿ ವಾಸಮಾಡುತಿದ್ದ ಸ್ತ್ರೀಬಾಲವೃದ್ಧರೂ ಮಾರನೆಯದಿವಸದಲ್ಲಿ ನಡೆಯಬೇಕಾದ ರಾಮಾಭಿಷೇಕವನ್ನೇ ನಿರೀಕ್ಷಿಸುತ್ತ, ಸೂರ್ಯೋದಯವಾಗುವುದನ್ನು ಅತ್ಯಾತುರದಿಂದ ಇದಿರುನೋಡುತಿದ್ದರು. ರಾಮಾಭಿಷೇಕಕ್ಕಾಗಿ ಅಲ್ಲಿನ ಪ್ರಜೆಗಳೆಲ್ಲರೂ ಅಲಂಕರಿಸಿಕೊಂಡಿದ್ದರು. ಹೀಗೆ ವಸಿಷ್ಠನು ಜನಭರಿತವಾಗಿರುವ ರಾಜಮಾರ್ಗದಲ್ಲಿ ಆ ಉತ್ಸವದ ಕೊಂಡಾಟಗಳನ್ನು ನೋಡುತ್ತಾ, ವ್ಯೂಹಬಂಧವನ್ನು ಮಾಡುವಂತೆ, ಆ ಜನರನ್ನು ಅಲ್ಲಲ್ಲಿ ಒತ್ತರಿಸಿಕೊಂಡು, ಬಹುಪ್ರಯತ್ನದಿಂದ ಅರಮನೆಗೆ ಬಂದು ಸೇರಿದನು. ಬಿಳೀಮೇಘಗಳಿಂದ ಕೂಡಿದ ಪರ್ವತಶಿಖರದಂತೆ ಶುಭ್ರವರ್ಣವಾಗಿ ಕಾಣುವ ಉಪ್ಪರಿಗೆಯನ್ನೇರಿ, ಬೃಹಸ್ಪತಿಯು ಇಂದ್ರನ ಬಳಿಗೆ ಬರುವಂತೆ ದಶರಥನಬಳಿಗೆ ಬಂದನು. ಹೀಗೆ ಬಂದ ವಸಿಷ್ಠನನ್ನು ನೋಡಿ ದಶರಥನು, ಥಟ್ಟನೆ ಇದಿರೆದ್ದು, ಆ ಮಹರ್ಷಿಯನ್ನು ಕುರಿತು "ರಾಮನಿಗೆ ಉಪವಾಸವು ನಿಯಮಿಸಲ್ಪಟ್ಟಿತೆ?" ಎಂದು ಪ್ರಶ್ನೆಮಾಡಲು, ವಸಿಷ್ಠನು "ಆಯಿತೆಂದು" ಪ್ರತ್ಯುತ್ತರಕೊಟ್ಟನು. ಆಗ ಆ ರಾಜಾಸ್ಥಾನದಲ್ಲಿದ್ದ ಸಭಿಕರೆಲ್ಲರೂ ಪ್ರತ್ಯುತ್ಥಾನಗಳಿಂದ ವಸಿಷ್ಠನನ್ನು ಗೌರವಿಸಿದರು. ಆಮೇಲೆ ದಶರಥನು ಆ ಸಭಿಕರೆಲ್ಲರನ್ನೂ ಕಳುಹಿಸಿ, ವಸಿಷ್ಠನ ಅನುಮತಿಯನ್ನು ಪಡೆದು, ಸಿಂಹವು ಪರ್ವತಗುಹೆಯನ್ನು ಪ್ರವೇಶಿಸುವಂತೆ ತನ್ನ ಅಂತಃಪುರಕ್ಕೆ ಪ್ರವೇಶಿಸಿದನು. ಅಲ್ಲಿನ ಸ್ತ್ರೀಯರೆಲ್ಲರೂ ರಾಮೋತ್ಸವಕ್ಕಾಗಿ ವಿಶೇಷವಾಗಿ ಅಲಂಕರಿಸಿಕೊಂಡು, ಆ ಅಂತಃಪುರಪ್ರದೇಶವನ್ನೆಲ್ಲಾ ತಮ್ಮ ಕಾಂತಿಯಿಂದ ಬೆಳಗುತ್ತಿರಲು, ಅದು ಇಂದ್ರಭವನದಂತೆ ಕಾಣಿಸಿತು. ನಕ್ಷತ್ರಸಮೂಹಗಳಿಂದ ಕೂಡಿದ ಆಕಾಶವನ್ನು ಚಂದ್ರನು ಹೇಗೋ ಹಾಗೆ, ದಶರಥ

ನು ಆ ಪ್ರದೇಶವನ್ನು ತನ್ನ ತೇಜಸ್ಸಿನಿಂದ ಮತ್ತಷ್ಟು ಕಾಂತಿವಿಶೇಷವುಳ್ಳು ದನ್ನಾಗಿ ಮಾಡುತ್ತ ಅಲ್ಲಿಗೆ ಪ್ರವೇಶಿಸಿದನು. ಇಲ್ಲಿಗೆ ಐದನೆಯ ಸರ್ಗವು.

---

## ರಾಮಾಭಿಷೇಕದ ಸನ್ನಾಹವು.

*ಪುರೋಹಿತನಾದ ವಸಿಷ್ಠನು ಹೊರಟುಹೋದೊಡನೆಯೇ, ರಾಮನು ಸ್ನಾನಮಾಡಿ, ವಿಶಾಲಾಕ್ಷಿಯಾದ ತನ್ನ ಪ್ರಿಯಪತ್ನಿಯಾದ ಸೀತೆಯೊಡಗೂಡಿ ಭಗವತ್ಸಾನ್ನಿಧ್ಯಕ್ಕೆ ಹೋಗಿ, ನಿಶ್ಚಲಮನಸ್ಸುಳ್ಳವನಾಗಿ, ಅಲ್ಲಿ ಶ್ರೀಮನ್ನಾರಾಯಣನನ್ನು ಉಪಾಸನೆಮಾಡುತಿದ್ದನು. ಮತ್ತು ಅಲ್ಲಿ ಶಾಸ್ತ್ರೋಕ್ತವಾಗಿ †ಹವಿಃಪಾತ್ರವನ್ನು ತಲೆಯಮೇಲಿಟ್ಟುಕೊಂಡು, ಜ್ವಲಿಸುತ್ತಿರುವ ಅಗ್ನಿಕುಂಡದಲ್ಲಿ ‡ದೇವದೇವೋತ್ತಮನಾದ ಶ್ರೀಮನ್ನಾರಾಯಣನಿ

---

* ಇದಕ್ಕೆ "ಗತೇ ಪುರೋಹಿತೇ ರಾಮಾಸ್ನಾತೋ ನಿಯತಮಾನಸಃ । ಸಹಪತ್ನ್ಯಾ ವಿಶಾಲಾಕ್ಷ್ಯಾ ನಾರಾಯಣಮುಪಾಗಮತ್" ಎಂಬುದೇ ಮೂಲವು. ಇಲ್ಲಿ "ಸ್ನಾತಃ" ಎಂಬುದರಿಂದ ಕಾಯಶುದ್ಧಿಯೂ, "ನಿಯತಮಾನಸಃ" ಎಂಬುದರಿಂದ ಮನಶ್ಶುದ್ಧಿಯೂ ಸೂಚಿಸಲ್ಪಡುವುದು. (ಸಹಪತ್ನ್ಯಾ) "ಪತ್ಯುರ್ನೋ ಯಜ್ಞಸಂಯೋಗೇ" ಎಂಬಂತೆ ದೀಕ್ಷಾನಿಯಮಕ್ಕೆ ಪತ್ನಿಯೊಡಗೂಡಿದ್ದು ಅವಳ ಸಹಾಯವನ್ನು ಹೊಂದಿರಬೇಕಾದುದು ಶಾಸ್ತ್ರವಿಹಿತವು. ಇಲ್ಲಿ ರಾಮನು ಭಗವದುಪಾಸನವನ್ನು ಮಾಡುವಾಗ ಸೀತೆಯು ಉಪಕರಣಗಳನ್ನು ಒದಗಿಸಿಕೊಡುತಿದ್ದಳೆಂದು ಸೂಚಿತವಾಗುವುದು. (ವಿಶಾಲಾಕ್ಷ್ಯಾ) ಎಂಬುದರಿಂದ "ಋತೇ ಮಾಯಾಂ ವಿಶಾಲಾಕ್ಷೀಂ ತವ ಪೂರ್ವಪರಿಗ್ರಹಂ" ಎಂಬಂತೆ, ವಿಶಾಲಾಕ್ಷೀಶಬ್ದವು ಮಹಾಲಕ್ಷ್ಮಿಯಲ್ಲಿಯೇ ರೂಢವಾಗಿರುವುದರಿಂದ, ಸೀತೆಯು ಸಾಕ್ಷಾಲ್ಲಕ್ಷ್ಮಿಯೆಂಬುದು ವ್ಯಕ್ತವಾಗುವುದು (ನಾರಾಯಣಂ) ಇಲ್ಲಿ ನಾರಾಯಣನೆಂದರೆ ಶ್ರೀರಂಗನಾಥನೆಂದು ಗ್ರಹಿಸಬೇಕು. ರಾಮನು ತನಗೆ ಗೃಹಾರಾಧನದಲ್ಲಿದ್ದ ಶ್ರೀರಂಗನಾಥನನ್ನು ವಿಭೀಷಣನಿಗೆ ಕೊಟ್ಟುದಾಗಿ ಮುಂದೆ ವ್ಯಕ್ತವಾಗುವುದು.

† "ಉಪರಿ ದೇವೇಭ್ಯೋ ಧಾರಯತಿ" ಎಂಬಂತೆ, ದೇವತೆಗಳಿಗಾಗಿ ಹವಿಃ ಪಾತ್ರೆವನ್ನು ಮೇಲಾಗಿ ಎತ್ತಿಹಿಡಿಯಬೇಕೆಂದು ಶ್ರುತಿಪ್ರಮಾಣವು.

‡ "ತಂ ದೇವತಾನಾಂ ಪರಮಂ ಚ ದೈವತಂ" ಎಂಬ ಶ್ರುತಿಪ್ರಮಾಣದಿಂದ ದೇವದೇವೋತ್ತಮನೆಂದು ಹೇಳಲ್ಪಟ್ಟಿದೆ.



೩೧೬. ಶ್ರೀವಿಷ್ಣುದೇವಾಲಯದಲ್ಲಿ ವಸಿಷ್ಠನು ಸೀತಾಸಮೇತನಾದ ರಾಮನಿಂದ
ಉಪವಾಸಹೋಮಾದಿಗಳನ್ನು ಮಾಡಿಸಿದುದು.

ಗಾಗಿ ಆಜ್ಯಾಹುತಿಯನ್ನು ಮಾಡಿದನು. ಆಮೇಲೆ ಹೋಮಶೇಷವನ್ನು ಪ್ರೀತಿಯಿಂದ ಭುಜಿಸಿದನು. ಇಷ್ಟಾರ್ಥಪ್ರಾಪ್ತಿಯನ್ನು ಕೋರಿ, ಮನಸ್ಸಿನಲ್ಲಿ ನಾರಾಯಣನನ್ನು ಧ್ಯಾನಿಸುತ್ತಾ, ತನ್ನ ಕೈಯಿಂದಲೇ ಸಿದ್ಧಪಡಿಸಿಕೊಂಡ ದರ್ಭಾಸನದಲ್ಲಿ ಕುಳಿತನು. ಮೌನದಿಂದ ಮನಸ್ಸನ್ನು *ನಿಶ್ಚಲಮಾಡಿಕೊಂಡು ಸೀತೆಯೊಡನೆ ಆ ವಿಷ್ಣುಸಾನ್ನಿಧ್ಯದಲ್ಲಿಯೇ ಮಲಗಿದ್ದನು. ಆ ರಾತ್ರಿಯಲ್ಲಿ ಒಂದು ಯಾಮಮಾತ್ರವು ಉಳಿದಿರುವಾಗಲೇ ಎಚ್ಚರಗೊಂಡು, ಆ ದೇವಗೃಹಕ್ಕೆ ಮಾಡಬೇಕಾದ ಅಲಂಕಾರಕಾರ್ಯಗಳನ್ನು ಮಾಡಿಸಿದನು. ಅಲ್ಲಿ ಸೂತಮಾಗಧವಂದಿಗಳೇ ಮೊದಲಾದವರ ಸುಖಲಾಪಗಳನ್ನು ಕೇಳುತಿದ್ದು ಪ್ರಾತಸ್ಸಂಧ್ಯೆಗೆ ಅಧಿದೇವತೆಯಾದ ಸೂರ್ಯನನ್ನು ಉಪಾಸನೆಮಾಡಿ, ನಿಶ್ಚಲವಾದ ಮನಸ್ಸಿನಿಂದ ಗಾಯತ್ರೀಜಪವನ್ನು ಮುಗಿಸಿದನು. ಶ್ರೀಮನ್ನಾರಾಯಣನನ್ನು ಸ್ತುತಿಸುತ್ತಾ ಸಾಷ್ಟಾಂಗಪ್ರಣಾಮವನ್ನು ಮಾಡಿದನು. ತಿರುಗಿ ಸ್ನಾನಮಾಡಿ, ಬಿಳೀಪಟ್ಟೆಯನ್ನುಟ್ಟು, ಬ್ರಾಹ್ಮಣರಿಂದ ಪುಣ್ಯಾಹವಾಚನವನ್ನು ಮಾಡಿಸಿದನು. ಇಂಪಾಗಿಯೂ, ಗಂಭೀರವಾಗಿಯೂ ಇರುವ ಆ ವೇದಘೋಷವು, ಮಂಗಳವಾದ್ಯಧ್ವನಿಗಳೊಡಗೂಡಿ ಅಯೋಧ್ಯಾನಗರವೆಲ್ಲವನ್ನೂ ತುಂಬಿತು. ಆಗ ಅಯೋಧ್ಯಾವಾಸಿಗಳೆಲ್ಲರೂ ಹೀಗೆ ರಾಮನು ಸೀತೆಯೊಡಗೂಡಿ ಉಪವಾಸವನ್ನು ನಡೆಸಿದನೆಂಬ ವೃತ್ತಾಂತವನ್ನು ಕೇಳಿ, ಮಹೋತ್ಸವಕಾಲವು ಸನ್ನಿಹಿತವಾಯಿತೆಂದು ನಿಶ್ಚಯಿಸಿ, ಸಂತೋಷಭರಿತರಾಗಿದ್ದರು. ಹಾಗೆಯೇ ಅವರೆಲ್ಲರೂ ಬೆಳಗಾದುದನ್ನು ನೋಡಿ ಪಟ್ಟಣವನ್ನು ಅಲಂಕರಿಸತೊಡಗಿದರು. ಬಿಳೀಮೇಘಗಳಂತೆ ಶೋಭಿಸುತ್ತಿರುವ ದೇವಾಲಯಗಳಲ್ಲಿಯೂ, ಚತುಷ್ಪ

* "ನಿಶ್ಚಲಮನಸ್ಕನಾಗಿ ಸೀತೆಯೊಡಗೂಡಿ ಮಲಗಿದ್ದನೆಂಬುದರಿಂದ, ಪತ್ನೀಸಾನ್ನಿಧ್ಯದಲ್ಲಿಯೂಕೂಡ ರಾಮನ ಜಿತೇಂದ್ರಿಯತ್ವವು ಸೂಚಿತವಾಗುವುದು. "ಶ್ರೀಮತ್ಯಾಯತನೇ ವಿಷ್ಣೋಃ" ಎಂದು ಮೂಲದಲ್ಲಿ ಹೇಳಲ್ಪಟ್ಟಿರುವುದರಿಂದ. ಇಲ್ಲಿ "ಶ್ರೀಮತಿ" ಎಂದರೆ, "ಋಚಸ್ಸಾಮಾನಿ ಯಜೂಂಷಿ ಸಾಹಿ ಶ್ರೀರಮೃತಾ ಸತಾಂ" ಎಂಬ ಶ್ರುತಿಪ್ರಮಾಣವನ್ನನುಸರಿಸಿ, ವೇದತ್ರಯಸಾರಭೂತವಾದ ಪ್ರಣವಸ್ವರೂಪವೆಂದು ಗ್ರಹಿಸಬೇಕು. ಆದುದರಿಂದಲೇ "ವಿಮಾನಂ ಪ್ರಣವಾಕಾರಂ" ಎಂಬುದಾಗಿ ಪ್ರಣವಾಕಾರವಾದ ದಿವ್ಯವಿಮಾನವೆಂದು ಸಿದ್ಧವಾಗುವುದು. ಶ್ರೀರಂಗನಾಥನ ದಿವ್ಯವಿಮಾನಕ್ಕೆ ಮಾತ್ರವೇ ಈ ಪ್ರಸಿದ್ಧಿಯುಂಟು.

ಥಗಳಲ್ಲಿಯೂ, ರಾಜಬೀದಿಗಳಲ್ಲಿಯೂ, ಬೌದ್ಧದೇವಾಲಯಗಳಲ್ಲಿಯೂ, ಅ ಟ್ಟಲೆಗಳಲ್ಲಿಯೂ, ಪದಾರ್ಥಸಮೃದ್ಧಿಯಿಂದ ಶೋಭಿಸುತ್ತಿರುವ ಅಂಗಡಿಗಳ ಲ್ಲಿಯೂ, ಭಾಗ್ಯಶಾಲಿಗಳಾದ ಗೃಹಸ್ಥರ ಮನೆಗಳಲ್ಲಿಯೂ, ಪಟ್ಟಣದೊ ಳಗಿನ ದೊಡ್ಡದೊಡ್ಡ ಸಭಾಮಂಟಪಗಳಲ್ಲಿಯೂ, ಅಲ್ಲಲ್ಲಿ ಕಾಣುವ ಗಿಡಗಳ ಮೇಲೆಯೂ ವಿಚಿತ್ರಗಳಾದ ಮಂಗಳಧ್ವಜಗಳು ಎತ್ತಿ ಕಟ್ಟಲ್ಪಟ್ಟುವು. ವಿಚಿತ್ರವರ್ಣಗಳುಳ್ಳ ಪತಾಕೆಗಳು ನಡಲ್ಪಟ್ಟುವು. ಅಲ್ಲಲ್ಲಿ ನಟವಿಟಗಾಯ ಕಾದಿಗಳೆಲ್ಲರೂ ಸೇರಿ ನರ್ತನಗಳನ್ನೂ, ಗಾನಗಳನ್ನೂ ನಡೆಸುತ್ತಿರಲು, ಮನ ಸ್ಸಿಗೂ ಕಿವಿಗಳಿಗೂ ಆನಂದಕರವಾಗಿರುವ ಆವರ ಧ್ವನಿಯು ಪಟ್ಟಣಪ್ರದೇ ಶವನ್ನೆಲ್ಲಾ ವ್ಯಾಪಿಸಿತು. ಈ ರಾಮಾಭಿಷೇಕೋತ್ಸವವು ಸಮೀಪಿಸಲು, ಅಲ್ಲಲ್ಲಿ ಜನರು ಅಂಗಳಗಳಲ್ಲಿಯೂ,ಮನೆಮನೆಗಳಲ್ಲಿಯೂ ಆ ಉತ್ಸವಸಂಭ್ರ ಮವನ್ನುಕುರಿತೇ ಪರಸ್ಪರಸಲ್ಲಾಪಗಳನ್ನು ಮಾಡುತ್ತಿದ್ದರು. ಬೀದಿಗಳ ಲ್ಲಿ ಆಡುತ್ತಿದ್ದ ಎಳಮಕ್ಕಳೂಕೂಡ, ಅಲ್ಲಲ್ಲಿ ಗುಂಪುಕೂಡಿ ಒಬ್ಬರಿಗೊಬ್ಬರು ಈ ಪ್ರಸ್ತಾವವನ್ನೇ ಹೇಳಿ ಕೊಂಡಾಡುತ್ತಿದ್ದರು. ಪಟ್ಟಣವಾಸಿಗಳು ಬೀ ದಿಗಳೆಲ್ಲವನ್ನೂ ಪುಷ್ಪೋಪಹಾರಗಳಿಂದಲೂ, ಧೂಪದೀಪಗಳಿಂದಲೂ ಅಲಂಕರಿಸಿಟ್ಟರು. ರಾಮನು ಪಟ್ಟಾಭಿಷಿಕ್ತನಾಗಿ ಆನೆಯಮೇಲೇರಿ ಮೆರೆ ವಣಿಗೆಬರುವ ಸಮಯಕ್ಕೆ, ಹೊತ್ತುಮೀರಿ ರಾತ್ರಿಯಾಗಬಹುದೆಂಬ ಶಂಕೆ ಯಿಂದ, ಬೀದಿಬೀದಿಗಳಲ್ಲಿ ದೊಡ್ಡದೊಡ್ಡ ವೃಕ್ಷಾಕಾರವಾದ ದೀಪಸ್ತಂ ಭಗಳನ್ನು ಬೆಳಗಿಸಿಟ್ಟರು. ಹೀಗೆ ಪುರಜನರೆಲ್ಲರೂ ಪಟ್ಟಣವನ್ನಲಂಕರಿಸಿ ಆಭಿ ಷೇಕಸಮಯವನ್ನೇ ನಿರೀಕ್ಷಿಸುತ್ತ, ಅಲ್ಲಲ್ಲಿ ಗುಂಪುಗೂಡಿ, ಒಬ್ಬರಿಗೊಬ್ಬರು ಈ ವಿಷಯವನ್ನೇ ಕುರಿತು ಮಾತನಾಡುತಿದ್ದರು. ದಶರಥನಿಗೆ ಈಸದುದ್ದೇಶ ವುಂಟಾದುದಕ್ಕಾಗಿ ಆತನನ್ನು ಕೊಂಡಾಡುತ್ತ, "ಭಲೆ! ಲೋಕದಲ್ಲಿ ನಮ್ಮ ದಶರಥರಾಜನಂತೆ ಧರ್ಮಜ್ಞರು ಬೇರೆ ಯಾರುಂಟು? ಈತನಗೆ ವಾರ್ಧಕದಶೆ ಯುಂಟಾದುದನ್ನು ತಾನೇ ತಿಳಿದುಕೊಂಡು, ರಾಮನಿಗೆ ಪಟ್ಟವನ್ನು ಕಟ್ಟುವು ದಾಗಿ ಉದ್ದೇಶಿದನಲ್ಲವೆ? ಲೋಕದಲ್ಲಿರುವ ವಸ್ತುಗಳ ತಾರತಮ್ಯವನ್ನು ಚೆ ನ್ನಾಗಿಬಲ್ಲ ಶ್ರೀರಾಮನು ನಮಗೆ ರಾಜನಾಗಿರಬೇಕೆಂದು ನಾವು ಬಹುಕಾಲ ದಿಂದ ಹಾರೈಸುತಿದ್ದೆವು. ದೈವಾನುಗ್ರಹದಿಂದ ಈಗ ನಮಗೆ ಆಕೋರಿಕೆಯು ಕೈಗೂಡಿತು. ರಾಮನ ಕಲ್ಯಾಣಗುಣಗಳನ್ನು ಹೇಳತಕ್ಕುದೇನು! ರಾಜಕುಮಾರ



ನಾಗಿದ್ದರೂ ಆತನಲ್ಲಿ ಗರ್ವವೆಂಬುದು ಸ್ವಲ್ಪವೂ ಇಲ್ಲ. ಮತ್ತು ಅವನು ಧರ್ಮಸ್ವರೂಪನು. ಒಡಹುಟ್ಟಿದವರಲ್ಲಿ ವಿಶೇಷವಾತ್ಸಲ್ಯವುಳ್ಳವನು. ಒಡ ಹುಟ್ಟಿದವರಲ್ಲಿ ಹೇಗೋ ಹಾಗೆಯೇ ನಮ್ಮಲ್ಲಿಯೂ ಪ್ರೀತಿಯನ್ನು ತೋರಿ ಸುತ್ತಿರುವನು. ಹೀಗೆ ಲೋಕೋತ್ತರಗುಣವುಳ್ಳ ರಾಮನನ್ನು ರಾಜ್ಯದಲ್ಲಿರಿಸಿ, ಆತನ ಪಟ್ಟಾಭಿಷೇಕೋತ್ಸವವನ್ನು ನಾವೆಲ್ಲರೂ ಕಣ್ಣಾರೆ ಕಂಡನುಭವಿಸು ವಂತೆ ನಮ್ಮನ್ನು ಅನುಗ್ರಹಿಸಿದ ಧರ್ಮಾತ್ಮನಾದ ದಶರಥರಾಜನು, ಚಿರಜೀವಿ ಯಾಗಿರಲಿ"ಎಂದು ಒಬ್ಬರಿಗೊಬ್ಬರು ಮಾತನಾಡುತ್ತಿರುವರು. ಈ ಮಹೋ ತ್ಸವಕ್ಕಾಗಿ ನಾನಾದಿಕ್ಕುಗಳಿಂದಲೂ ಬಂದು ಸೇರಿದ್ದ ದೇಶವಾಸಿಗಳೆಲ್ಲರೂ, ಈಕೊಂಡಾಟದ ಧ್ವನಿಗಳನ್ನು ಅಕ್ಕರೆಯಿಂದ ನಿಂತು ಕೇಳುತ್ತಿರುವರು. ಹೀಗೆ ಹೊರಗಿನಿಂದ ಬಂದ ಜನಸಮೂಹದಿಂದ * ಆ ರಾಮನ ಪುರವೆಲ್ಲವೂ ಕಿಕ್ಕಿರಿಸಿ ತುಂಬಿ ಹೋಯಿತು. ಈ ಜನರ ಕೋಲಾಹಲಧ್ವನಿಯು ಪರ್ವಕಾ ಲದ ಸಮುದ್ರಘೋಷದಂತೆ ಸಮಸ್ತದಿಕ್ಕುಗಳನ್ನೂ ವ್ಯಾಪಿಸಿತು. ಮಹೇಂ ದ್ರಭವನದಂತೆ ಅತಿರಮಣೀಯವಾದ ಆ ಪಟ್ಟಣದ ಬೀದಿಬೀದಿಗಳಲ್ಲಿಯೂ ರಾಮಾಭಿಷೇಕೋತ್ಸವಕ್ಕಾಗಿ ಕಾದಿದ್ದ ಜನಸಮೂಹವು ನಿಬಿಡವಾಗಿ ತುಂ ಬಿರಲು, ಅವರ ಕೋಲಾಹಲಧ್ವನಿಯು ತಿಮಿತಿಮಿಂಗಿಲಾದಿಜಲಜಂತುಗಳ ಕೋಲಾಹಲಧ್ವನಿಯಿಂದ ಕೂಡಿದ 'ಮಹಾಸಮುದ್ರದಂತೆ ಶೋಭಿಸುತಿ ತ್ತು. ಇಲ್ಲಿಗೆ ಆರನೆಯ ಸರ್ಗವು.

---

## { ಮಂಥರೆಯು ಕೈಕೇಯಿಗೆ ದುರ್ಬೋಧನೆಯನ್ನು ಮಾಡಿದುದು. }

ಹೀಗೆ ಮಹೋತ್ಸವಸನ್ನಾಹಗಳೆಲ್ಲವೂ ಪರಮವೈಭವದಿಂದ ಜರು ಗುತಿದ್ದುವು. ಇಷ್ಟರೊಳಗಾಗಿ ಕೈಕೇಯಿಗೆ ಅವಳ ಬಂಧುಗಳಿಂದ ಒಪ್ಪಿ

---

* ಇದಕ್ಕೆ ಮೊದಲುದಿನವೇ ಸಮಸ್ತಸಭಾಸದರ ಮುಂದೆ ರಾಮಾಭಿಷೇಕವು ನಿಶ್ಚ ಯಿಸಲ್ಪಟ್ಟುದರಿಂದ, ಇನ್ನು ಅಯೋಧ್ಯೆಗೆ ರಾಮನೇ ಅಧಿಪತಿಯೆಂಬ ಭಾವವನ್ನಿಟ್ಟು, ಇಲ್ಲಿ ರಾಮನ ಪಟ್ಟಣವೆಂದು ಹೇಳಲ್ಪಟ್ಟಿದೆ.

ಸಲ್ಪಟ್ಟು, ಯಾವಾಗಲೂ ಅವಳ ಸಂಗಡಲೇ ಇರುತ್ತಿದ್ದ ಗೂನುಬೆನ್ನಿನ ದಾಸಿಯೊಬ್ಬಳು, ಹಠಾತ್ತಾಗಿ ಉಪ್ಪರಿಗೆಯನ್ನೇರಿದಳು. ಈ ದಾಸಿಯು *ಎಲ್ಲಿ ಹುಟ್ಟಿದಳೆಂದು ಯಾರಿಗೂ ತಿಳಿಯದು. ಇವಳು, ಚಂದ್ರನಂತೆ ಬಿಳುಪಾಗಿ ಹೊಳೆಯುತಿದ್ದ ಆ ಉಪ್ಪರಿಗೆಯ ಮೇಲೆ ನಿಂತು ನೋಡುತ್ತ, ಆ ಅಯೋಧ್ಯಾಪಟ್ಟಣದ ಬೀದಿಗಳೆಲ್ಲವೂ ಜಲಸೇಚನಾದಿಗಳಿಂದಲೂ, ಪುಷ್ಪೋಪಹಾರಗಳಿಂದಲೂ ಅಲಂಕರಿಸಲ್ಪಟ್ಟಿದ್ದುದನ್ನು ಕಂಡಳು. ಎಲ್ಲೆಲ್ಲಿ ನೋಡಿದರೂ ವಿಚಿತ್ರವರ್ಣವುಳ್ಳ ಧ್ವಜಪತಾಕೆಗಳು ಕಟ್ಟಲ್ಪಟ್ಟಿದ್ದುವು. ನಾನಾದೇಶಗಳಿಂದಲೂ ಅನೇಕಜನರು ಗುಂಪುಗುಂಪಾಗಿ ಬಂದು ಅಯೋಧ್ಯಾಪಟ್ಟಣದಲ್ಲಿ ನೆರೆದಿದ್ದುದರಿಂದ, ಅವರ ಸಂಚಾರಕ್ಕೆ ಅನುಕೂಲಿಸುವಂತೆ ಅಲ್ಲಲ್ಲಿ ಹೊಸಹೊಸದಾಗಿ ಅಡ್ಡದಾರಿಗಳು ಏರ್ಪಡಿಸಲ್ಪಟ್ಟಿದ್ದುವು. ಅಲ್ಲಿನ ಜನರೆಲ್ಲರೂ ಅಭ್ಯಂಗನಸ್ನಾನಾದಿಗಳನ್ನು ಮಾಡಿ ಪರಿಶುದ್ಧರಾಗಿದ್ದರು. ಬ್ರಾಹ್ಮಣರೆಲ್ಲರೂ ಕೈಯಲ್ಲಿ ಪುಷ್ಪಮಾಲಿಕೆಗಳನ್ನೂ, ಕಡುಬು ಮೊದಲಾದ ಭಕ್ಷಣಗಳನ್ನೂ ಹಿಡಿದುಕೊಂಡು, ಅಲ್ಲಲ್ಲಿ ಸಂಭ್ರಮದಿಂದ ಕೋಲಾಹಲಗಳನ್ನು ಮಾಡುತಿದ್ದರು. ಅಲ್ಲಿನ ದೇವಾಲಯಗಳೆಲ್ಲವೂ ಸುಣ್ಣದಿಂದ ಅಲಂಕರಿಸಲ್ಪಟ್ಟಿದ್ದುವು. ಎಲ್ಲೆಲ್ಲಿ ನೋಡಿದರೂ ಮಂಗಳವಾದ್ಯಗಳು ಮೊಳಗುತಿದ್ದುವು,

---

* "ಜ್ಞಾತಿದಾಸೀ ಯತೋ ಜಾತಾ" ಎಂಬುದೇ ಇದಕ್ಕೆ ಮೂಲವು. (ಯತೋ ಜಾತಾ) ಎಲ್ಲಿಯೋ ಹುಟ್ಟಿದವಳು. ಅವಳು ಹುಟ್ಟಿದ ಸ್ಥಳವಾಗಲಿ, ಅವಳ ತಾಯಿತಂದೆಗಳಾಗಲಿ ಯಾರಿಗೂ ತಿಳಿದಿಲ್ಲವೆಂದರ್ಥವು. ಇದರ ವಿಶೇಷಾರ್ಥವೇನೆಂದರೆ:—ಸರ್ವಲೋಕಪ್ರಿಯವಾದ ರಾಮಾಭಿಷೇಕವನ್ನು ತಪ್ಪಿಸುವ ಇಂತಹ ದುರ್ಬುದ್ಧಿಯುಳ್ಳವರು ಮಹಾಪುಣ್ಯಸ್ಥಳವಾದ ಅಯೋಧ್ಯೆಯಲ್ಲಿ ಎಂದಿಗೂ ಹುಟ್ಟಿರಲಾರರು. ಅದರಿಂದ ಇವಳು ಎಲ್ಲಿಯೋ ಹುಟ್ಟಿರಬೇಕೆಂದುಭಾವವು. ಮತ್ತು ಇಂತಹ ಪಾಪಾತ್ಮರ ಹೆಸರು, ಜಾತಿ, ಮುಂತಾದುವುಗಳನ್ನು ಬಾಯಿಂದ ಉಚ್ಚರಿಸುವುದೂ ಕೂಡ ಮಹಾದೋಷವೆಂಬುದಕ್ಕಾಗಿ, ಮಂಥರೆಯೆಂದೂ ಹೇಳದೆ, "ಎಲ್ಲಿಯೋ ಹುಟ್ಟಿದವಳೊಬ್ಬಳು" ಎಂದು ಹೇಳಿಪುದಾಗಿಯೂ ಗ್ರಹಿಸಬಹುದು. ಅಥವಾ ರಾಮನಿಂದ ನಡೆಯಬೇಕಾದ ರಾವಣವಧಾರ್ಥವಾಗಿ ದೇವತೆಗಳಿಂದಲೇ ಈ ವ್ಯಕ್ತಿಯು ಸೃಷ್ಟಿಸಲ್ಪಟ್ಟಿರುವುದೆಂಬುದಕ್ಕಾಗಿ, ಆ ದೇವರಹಸ್ಯವನ್ನು ಹೊರಪಡಿಸಕೂಡದೆಂಬ ಭಾವದಿಂದ, ಅವಳ ಕುಲಾದಿಗಳನ್ನು ಹೇಳದೆ ಎಲ್ಲಿಯೋ ಹುಟ್ಟಿದವಳೊಬ್ಬಳೆಂದು ಹೇಳಿದುದಾಗಿಯೂ ಭಾವವು.

ಜನರೆಲ್ಲರೂ ಸಂತೋಷಭರಿತರಾಗಿ ಅಲ್ಲಲ್ಲಿ ಗುಂಪುಗೂಡಿದ್ದರು. ಅಲ್ಲಲ್ಲಿ ಬ್ರಾಹ್ಮಣರು ವೇದಘೋಷಗಳನ್ನು ನಡೆಸುತಿದ್ದರು. ಆನೆಗಳು, ಕುದುರೆಗಳು, ಗೋವುಗಳು,ಮುಂತಾದ ಮೃಗಜಾತಿಗಳುಕೂಡ, ಸಂತೋಷಸೂಚಕವಾದ ಧ್ವನಿಯನ್ನು ಮಾಡುತ್ತ, ಉತ್ಸಾಹದಿಂದ ತಿರುಗುತಿದ್ದುವು. ಪಟ್ಟಣವಾಸಿಗಳೆಲ್ಲರೂ ಪರಮಸಂತೋಷಯುಕ್ತರಾಗಿ, ಮನೆಮನೆಯ ಬಾಗಿಲುಗಳಲ್ಲಿಯೂ ಧ್ವಜತೋರಣಾದಿಗಳನ್ನು ಕಟ್ಟಿ ಅಲಂಕರಿಸಿದ್ದರು. ಹೀಗೆ ಸರ್ವಾಲಂಕಾರಭೂಷಿತವಾದ ಆ ಪಟ್ಟಣದ ಅಂದವನ್ನು ನೋಡಿದೊಡನೆಯೇ, ಮಂಥರೆಯೆಂಬ ಆ ದಾಸಿಗೆ, ಮನಸ್ಸಿನಲ್ಲಿ ಪರಮಾಶ್ಚರ್ಯವುಂಟಾಯಿತು. ಅವಳು ಸ್ವಲ್ಪಹೊತ್ತಿನವರೆಗೆ ಆಶ್ಚರ್ಯಭರಿತಳಾಗಿ ನೋಡುತಿದ್ದಳು. ಆಮೇಲೆ ಆ ಉಪ್ಪರಿಗೆಯ ಮತ್ತೊಂದುಕಡೆಯಲ್ಲಿ, ತನಗೆ ಸ್ವಲ್ಪದೂರವಾಗಿ ಬಿಳೀದುಕೂಲವನ್ನುಟ್ಟುಕೊಂಡು, ಸಂತೋಷದಿಂದರಳಿದ ಕಣ್ಣುಳ್ಳವಳಾಗಿ ನಿಂತಿದ್ದ ರಾಮನ ದಾದಿಯೊಬ್ಬಳನ್ನು ಕಂಡಳು. ಮೆಲ್ಲಗೆ ಅವಳ ಸಮೀಪಕ್ಕೆ ಹೋಗಿ ಅವಳನ್ನು ಕುರಿತು “ಏನಮ್ಮ! ಈ ಸಂಭ್ರಮಗಳಿಗೆ ಕಾರಣವೇನು? ರಾಮನ ತಾಯಿಯಾದರೋ ಪರಮಕೃಪಣಳು! * ಹಣದಾಸೆಯು ಆಕೆಗೆ ಮಿತಿಮೀರಿರುವುದು. ಹೀಗಿದ್ದರೂ ಅಂತವಳು, ಈಗ ಇಲ್ಲಿನ ಜನರಿಗೆಲ್ಲಾ ಅಪರಿಮಿತವಾಗಿ ಹಣವನ್ನು ಕೊಡುವಂತಿದೆ! ಅವಳಿಗೆ ;ಹಾಗೆ ಮೈಮರೆಯುವಷ್ಟು ಸಂತೋಷವುಂಟಾಗುವುದಕ್ಕೆ ಕಾರಣವೇನು? ಇಲ್ಲಿನ ಜನರೆಲ್ಲರೂ ಇಷ್ಟು ಸಂತೋಷಭರಿತರಾಗಿರುವುದೇಕೆ? ಈಗ ದಶರಥರಾಜನು ಇಷ್ಟು ಸಂತೋಷದಿಂದ ನಡೆಸಬೇಕಾದ ಕಾರ್ಯವೇನು?” ಎಂದು ಕೇಳಿದಳು. ಹೀಗೆ ಕೇಳಿದೊಡನೆಯೇ, ಆ ದಾದಿಯು, ರಾಮಾಭ್ಯುದಯವನ್ನು ತಿಳಿಸುವೆನೆಂಬ ಪರಮಸಂತೋಷದಿಂದ ಮೆಯ್ಯೊಡೆಯುವಂತೆ ಉಬ್ಬಿದಳು. ಅಸೂಯಾಸ್ವಭಾವವುಳ್ಳ ಮಂಥರೆಯು ಈ ಶುಭಕಾರ್ಯಕ್ಕೆ ಅಡ್ಡಿಮಾಡಬಹುದೆಂದು ತಿಳಿದಿದ್ದರೂ, ಆಗ ಅವಳಿಗುಂಟಾದ ಸಂತೋಷವು

* ಕೌಸಲ್ಯೆಯಲ್ಲಿ ಅಸೂಯೆಯಿಂದಲೇ ಮಂಥರೆಯು ಈ ದೋಷವನ್ನು ಹೇಳಿದುದಾಗಿ ಗ್ರಹಿಸಬೇಕು. ಅದಕ್ಕಾಗಿಯೇ ಇಲ್ಲಿ ಮಂಥರೆಯು ಕೌಸಲ್ಯೆಯೆಂದು ಹೆಸರು ಹಿಡಿದು ಹೇಳುವುದಕ್ಕೂ ಇಷ್ಟಪಡದೆ, ರಾಮನ ತಾಯಿಯೆಂದು ಹೇಳಿರುವಳು.

ಅವಳನ್ನು ಮೈಮರೆಯುವಂತೆ ಮಾಡಿತು. ಆಗ ಆ ಗೂನಿಯನ್ನು ನೋಡಿ, ‘‘ಇದೇನು! ನೀನು ಇದುವರೆಗೂ ಕೇಳಲಿಲ್ಲವೆ? ನಾಳೆ ನಮ್ಮ ರಾಮನಿಗೆ ಯುವರಾಜಪಟ್ಟವು ಕಟ್ಟಲ್ಪಡುವುದು. ರಾಮನು ಶಾಂತ್ಯಾದಿಸದ್ಗುಣಗಳಿಂದ ಕೂಡಿ, ದೋಷರಹಿತನಾಗಿರುವುದನ್ನು ನೋಡಿ, ದಶರಥರಾಜನು ಆತನಿಗೆ ನಾಳೆಯೇ ಪಟ್ಟವನ್ನು ಕಟ್ಟುವುದಾಗಿ ನಿಶ್ಚಯಿಸಿರುವನು?” ಎಂದಳು. ದಾದಿಯು ಹೇಳಿದ ಈ ಮಾತು ಕಿವಿಗೆ ಬಿದ್ದೊಡನೆಯೇ ಮಂಥರೆಗೆ ಸಹಿಸಲಾರದ ಸಂಕಟವುಂಟಾಯಿತು. ಕೈಲಾಸದಿಂದ ಕೆಳಕ್ಕೆ ಬೀಳುವಂತೆ ಆ ಉಪ್ಪರಿಗೆಯನ್ನು ಬಿಟ್ಟು ಥಟ್ಟನೆ ಕೆಳಕ್ಕಿಳಿದಳು. ಸಹಜವಾಗಿ ಪಾಪಬುದ್ಧಿಯುಳ್ಳ ಆ ಮಂಥರೆಗೆ, ರಾಮನ ಪಟ್ಟಾಭಿಷೇಕವಾರ್ತೆಯು ಎದೆಯಲ್ಲಿ ಬೆಂಕಿಯಿಟ್ಟಂತಾಯಿತು. ಅಲ್ಲಿಂದ ನೆಟ್ಟನೆ ಹೊರಟುಬಂದು, ಕೈಕೇಯಿಯನ್ನು ನೋಡಿ, ‘‘ಅಯ್ಯೋ! ಬುದ್ಧಿಯಿಲ್ಲದವಳೆ! ಏಳೇಳು! ಇನ್ನೂ ಮಲಗಿರುವೆಯಾ? ಈಗ ನಿನಗೆ ಬಹಳ ಭಯಂಕರವಾದ ಮಹಾವಿಪತ್ತೊಂದು ಬಂದೊದಗಿರುವುದಲ್ಲವೆ! ಈಗ ನಿನ್ನನ್ನು ಸುತ್ತಿರುವ ಕಷ್ಟಪರಂಪರೆಗಳನ್ನೇ, ಇನ್ನೂ ನೀನು ತಿಳಿಯದೆ ಹೋದೆಯೆಂದರೆ ಹೇಳತಕ್ಕುದೇನು? ಯಾವಾಗಲೂ ನೀನು ನಮ್ಮೆಲ್ಲರ ಮುಂದೆ ‘‘ಪತಿಗೆ ನನ್ನಲ್ಲಿ ಪರಮಪ್ರೀತಿ”ಯೆಂದೂ, ‘‘ನನ್ನ ಭಾಗ್ಯಕ್ಕೆ ಎಣೆಯೇ ಇಲ್ಲ” ವೆಂದೂ ಹೇಳಿಕೊಳ್ಳುತಿದ್ದ ಹೆಮ್ಮೆಯೆಲ್ಲವೂ ಈಗ ಏನಾಯಿತು? ನಿನ್ನ ಸುಳ್ಳುಸೌಭಾಗ್ಯವೆಲ್ಲವೂ ಎಲ್ಲಿ ಹೋಯಿತು? ರಾಜನಿಗೆ ನಿನ್ನಲ್ಲಿ ಸ್ವಲ್ಪವೂ ಪ್ರೇಮವಿಲ್ಲವೆಂಬುದು ಈಗ ಚೆನ್ನಾಗಿ ಸ್ಪಷ್ಟವಾಯಿತಲ್ಲವೆ? ಬೇಸಗೆಯಲ್ಲಿ ನದೀಪ್ರವಾಹವು ಹೇಗೋ ಹಾಗೆ, ನಿನ್ನ ಸೌಭಾಗ್ಯಗಳೆಲ್ಲವೂ ಈಗ ಬತ್ತಿ ಹೋಗುತ್ತಿರುವುವು” ಎಂದಳು. ಮಂಥರೆಯು ಬಹುಕೋಪದಿಂದ ಈ ಕ್ರೂರವಾಕ್ಯವನ್ನು ಹೇಳಲು, ಅದನ್ನು ಕೇಳಿದೊಡನೆಯೇ ಕೈಕೇಯಿಯ ಮನಸ್ಸು ಸ್ವಲ್ಪವಾಗಿ ಕಳವಳಿಸಿತು. ಪಾಪಬುದ್ಧಿಯುಳ್ಳ ಮಂಥರೆಯನ್ನು ಕುರಿತು ಕೈಕೇಯಿಯು ಮೃದುವಾಕ್ಯದಿಂದ ‘‘ಎಲೆ ಮಂಥರೆ! ಇದೇನು ಹೀಗೆ ಹೇಳುವೆ? ಈಗ ನನ್ನ ಕ್ಷೇಮಕ್ಕೆ ಬಂದ ವಿಘಾತವೇನು? ನಿನ್ನ ಮುಖವು ಕಂದಿರುವುದನ್ನು ನೋಡಿದರೆ, ಬಹಳ ದುಃಖಿತೆಯಾದಂತೆ ಕಾಣುವೆಯಲ್ಲಾ! ಇದರ ಕಾರಣವೇನು!”ಎಂದಳು. ಹೀಗೆ ಮೃದುವಾಕ್ಯದಿಂದ ಪ್ರಶ್ನೆ

ಮಾಡಿದ ಕೈಕೇಯಿಯ ಮಾತನ್ನು ಕೇಳಿ, ಸಮಯೋಚಿತವಾಗಿ ಮಾತಾಡು ವುದರಲ್ಲಿ ಚತುರೆಯಾದ ಮಂಥರೆಯು, ಮತ್ತಷ್ಟು ದುಃಖವನ್ನೂ, ಕೋಪವ ನ್ನೂ ತೋರಿಸಿ, ಆ ಕೈಕೇಯಿಗೆ ತಾನು ಬಹಳ ಹಿತೈಷಿಣಿಯಂತೆ ನಟಿ ಸುತ್ತಾ, ಅವಳಿಗೆ ರಾಮನಲ್ಲಿರುವ ಸ್ವಾಭಾವಿಕವಾದ ಪ್ರೀತಿಯನ್ನು ತಪ್ಪಿಸಿ ಕೋಪವನ್ನುಂಟುಮಾಡುವಂತೆ ಒಂದಾನೊಂದು ಮಾತನ್ನು ಹೇಳುವಳು. "ಅಮ್ಮ ಕೈಕೇಯಿ! ನಾನೇನು ಹೇಳಲಿ! ನಿನ್ನನ್ನು ಕೆಡಿಸುವುದಕ್ಕಾಗಿ ದೊ ಡ್ಡಪ್ರಯತ್ನವು ನಡೆಯುತ್ತಿದೆ. ಅದಕ್ಕೆ ಪ್ರತೀಕಾರವೇನೆಂದು ಯೋಚಿಸು ವುದಕ್ಕೂ ದಾರಿಯಿಲ್ಲ. ಅಯ್ಯೋ! ಅತ್ತಲಾಗಿ ರಾಜ್ಯವೇ ಸೂರೆಹೋಗುತ್ತಿರು ವುದಲ್ಲಾ ! ನಾಳೆ ದಶರಥನು ರಾಮನಿಗೆ ಪಟ್ಟವನ್ನು ಕಟ್ಟುವನಂತೆ! ಇದನ್ನು ಕೇಳಿದೊಡನೆ ನನ್ನ ಎದೆಯಲ್ಲಿ ಬೆಂಕಿಯಿಟ್ಟಂತಾಯಿತು. ಕರ್ಣಕಠೋರ ವಾದ ಈ ಮಾತನ್ನು ಕೇಳಿ ನಾನು ಅಪಾರವಾದ ಭೀತಿಸಾಗರದಲ್ಲಿ ಮುಳುಗಿ, ಸಂಕಟವನ್ನು ತಡೆಯಲಾರದೆ, ಈ ವಿಷಯವನ್ನು ನಿನಗೆ ತಿಳಿಸಬೇಕೆಂದೇ ಬಂದೆನು. ಅಮ್ಮ ಕೈಕೇಯಿ! ನಿನ್ನ ದುಃಖವೇ ನನ್ನ ದುಃಖವು! ನಿನ್ನ ಶ್ರೇಯ ಸ್ಸೇ ನನ್ನ ಶ್ರೇಯಸ್ಸು ! ಮುಖ್ಯವಾಗಿ ಈ ಭಾಗದಲ್ಲಿ ನಿನ್ನ ದುಃಖಕ್ಕಿಂತ ಲೂ ನನ್ನ ದುಃಖವೇ ಅಧಿಕವೆಂದು ತಿಳಿ! ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಆಹಾ! ರಾಜಕುಲದಲ್ಲಿ ಹುಟ್ಟಿ,ಇದುವರೆಗೆ ರಾಜಮಹಿಷಿಯಾಗಿ ಬಳೆದಿದ್ದರೂ, ನಿನಗೆ ರಾಜನಲ್ಲಿರುವ ಕ್ರೂರಸ್ವಭಾವವು ತಿಳಿಯದೆಹೋಯಿತೆ? ಮುಖ್ಯವಾ ಗಿ ನಿನ್ನ ಗಂಡನು,ಮೇಲೆಮೇಲೆ ಧರ್ಮಗಳನ್ನು ನುಡಿಯುತಿದ್ದರೂ, ಅಂತರಂಗ ದಲ್ಲಿ ಬಹಳ ಕಪಟಸ್ವಭಾವವುಳ್ಳವನು! ಬಾಯಲ್ಲಿ ಮೃದುವಾದ ಮಾತು ಗಳನ್ನಾಡುತಿದ್ದರೂ, ಅತನ ಮನಸ್ಸು ಬಹಳ ಕಠಿಣವಾದುದು! ನೀನು ಬಹಳ ಋಜುಸ್ವಭಾವವುಳ್ಳವಳಾದುದರಿಂದ, ಬೆಳ್ಳಗಿರುವುದೆಲ್ಲಾ ಹಾಲೆಂದು ನಂಬುವವರಂತೆ,ಅತನ ಕಪಟವನ್ನೂ ಅರಿಯದೆ ಹೋದೆಯಲ್ಲಾ! ರಾಜನು ಆ ಗಾಗ ನಿನ್ನಲ್ಲಿಗೆ ಬಂದು ಕೇವಲನಿರರ್ಥಕಗಳಾದ ಸವಿನುಡಿಗಳಿಂದ ನಿನ್ನನ್ನು ಮರುಳುಮಾಡುತ್ತಿರುವನೇಹೊರತು, ತನ್ನ ನಿಜವಾದ ಪ್ರೀತಿಗೆ ಫಲವನ್ನು ಕೌಸಲ್ಯೆಯಲ್ಲಿ ತೋರಿಸುತ್ತಿರುವನು. ಅಯ್ಯೋ ! ಇನ್ನೊಂದು ರಹಸ್ಯವುಂ ಟು! ದಶರಥನು ನಿನ್ನ ಮಗನಾದ ಭರತನನ್ನು ಉಪಾಯದಿಂದ ನಿನ್ನ ತೌರು

ರಾಜಮಾರ್ಗಗಳೆಲ್ಲವೂ ನಿಬಿಡವಾಗಿ ತುಂಬಿದ್ದುವು. ಅಲೆಗಳ ಪರಂಪರೆಯಂತೆ ಜನಗಳು ಮೇಲೆಮೇಲೆ ಬಂದು ಸೇರಿ, ಸಂತೋಷಸಲ್ಲಾಪಗಳನ್ನು ಮಾಡುತಿದ್ದಾಗ, ಆ ರಾಜಮಾರ್ಗದಲ್ಲಿ ಹುಟ್ಟಿದ ಮಹಾಧ್ವನಿಯು ಉಲ್ಲೋಲಕಲ್ಲೋಲವಾದ ಸಮುದ್ರದ ಘೋಷದಂತೆ ತೋರುತಿತ್ತು. ಆ ರಾಜಮಾರ್ಗಗಳೆಲ್ಲವೂ ಜಲಸೇಚನಾದಿಗಳಿಂದ ಚೆನ್ನಾಗಿ ಅಲಂಕರಿಸಲ್ಪಟ್ಟಿದ್ದುವು. ಅಲ್ಲಲ್ಲಿ ಪುಷ್ಪೋಪಹಾರಗಳು ಚೆಲ್ಲಲ್ಪಟ್ಟಿದ್ದುವು. ಮನೆಮನೆಗೂ ಧ್ವಜಗಳನ್ನು ಎತ್ತಿ ಕಟ್ಟಿದ್ದರು. ಅಯೋಧ್ಯೆಯಲ್ಲಿ ವಾಸಮಾಡುತಿದ್ದ ಸ್ತ್ರೀಬಾಲವೃದ್ಧರೂ ಮಾರನೆಯದಿವಸದಲ್ಲಿ ನಡೆಯಬೇಕಾದ ರಾಮಾಭಿಷೇಕವನ್ನೇ ನಿರೀಕ್ಷಿಸುತ್ತ, ಸೂರ್ಯೋದಯವಾಗುವುದನ್ನು ಅತ್ಯಾತುರದಿಂದ ಇದಿರುನೋಡುತಿದ್ದರು. ರಾಮಾಭಿಷೇಕಕ್ಕಾಗಿ ಅಲ್ಲಿನ ಪ್ರಜೆಗಳೆಲ್ಲರೂ ಅಲಂಕರಿಸಿಕೊಂಡಿದ್ದರು. ಹೀಗೆ ವಸಿಷ್ಠನು ಜನಭರಿತವಾಗಿರುವ ರಾಜಮಾರ್ಗದಲ್ಲಿ ಆ ಉತ್ಸವದ ಕೊಂಡಾಟಗಳನ್ನು ನೋಡುತ್ತಾ, ವ್ಯೂಹಬಂಧವನ್ನು ಮಾಡುವಂತೆ, ಆ ಜನರನ್ನು ಅಲ್ಲಲ್ಲಿ ಒತ್ತರಿಸಿಕೊಂಡು, ಬಹುಪ್ರಯತ್ನದಿಂದ ಅರಮನೆಗೆ ಬಂದು ಸೇರಿದನು. ಬಿಳೀಮೇಘಗಳಿಂದ ಕೂಡಿದ ಪರ್ವತಶಿಖರದಂತೆ ಶುಭ್ರವರ್ಣವಾಗಿ ಕಾಣುವ ಉಪ್ಪರಿಗೆಯನ್ನೇರಿ, ಬೃಹಸ್ಪತಿಯು ಇಂದ್ರನ ಬಳಿಗೆ ಬರುವಂತೆ ದಶರಥನಬಳಿಗೆ ಬಂದನು. ಹೀಗೆ ಬಂದ ವಸಿಷ್ಠನನ್ನು ನೋಡಿ ದಶರಥನು, ಥಟ್ಟನೆ ಇದಿರೆದ್ದು, ಆ ಮಹರ್ಷಿಯನ್ನು ಕುರಿತು "ರಾಮನಿಗೆ ಉಪವಾಸವು ನಿಯಮಿಸಲ್ಪಟ್ಟಿತೆ?" ಎಂದು ಪ್ರಶ್ನೆಮಾಡಲು, ವಸಿಷ್ಠನು "ಆಯಿತೆಂದು" ಪ್ರತ್ಯುತ್ತರಕೊಟ್ಟನು. ಆಗ ಆ ರಾಜಾಸ್ಥಾನದಲ್ಲಿದ್ದ ಸಭಿಕರೆಲ್ಲರೂ ಪ್ರತ್ಯುತ್ಥಾನಗಳಿಂದ ವಸಿಷ್ಠನನ್ನು ಗೌರವಿಸಿದರು. ಆಮೇಲೆ ದಶರಥನು ಆ ಸಭಿಕರೆಲ್ಲರನ್ನೂ ಕಳುಹಿಸಿ, ವಸಿಷ್ಠನ ಅನುಮತಿಯನ್ನು ಪಡೆದು, ಸಿಂಹವು ಪರ್ವತಗುಹೆಯನ್ನು ಪ್ರವೇಶಿಸುವಂತೆ ತನ್ನ ಅಂತಃಪುರಕ್ಕೆ ಪ್ರವೇಶಿಸಿದನು. ಅಲ್ಲಿನ ಸ್ತ್ರೀಯರೆಲ್ಲರೂ ರಾಮೋತ್ಸವಕ್ಕಾಗಿ ವಿಶೇಷವಾಗಿ ಅಲಂಕರಿಸಿಕೊಂಡು, ಆ ಅಂತಃಪುರಪ್ರದೇಶವನ್ನೆಲ್ಲಾ ತಮ್ಮ ಕಾಂತಿಯಿಂದ ಬೆಳಗುತ್ತಿರಲು, ಅದು ಇಂದ್ರಭವನವಂತೆ ಕಾಣಿಸಿತು. ನಕ್ಷತ್ರಸಮೂಹಗಳಿಂದ ಕೂಡಿದ ಆಕಾಶವನ್ನು ಚಂದ್ರನು ಹೇಗೋ ಹಾಗೆ, ದಶರಥ

ಷ್ಟು ಸಂಕಟವುಂಟಾಗಿದ್ದರೂ, ನಿನ್ನ ಅವಿವೇಕದ ಮಾತನ್ನು ಕೇಳಿ ನನಗೆ ಒಳಗೊಳಗೆ ನಗೆಯುಂಟಾಗುತ್ತಿರುವುದು. ಸಂಕಟಕರವಾದ ಈ ಮಹಾವ್ಯಸನದಲ್ಲಿಯೂ ನೀನು ಹೀಗೆ ಸಂತೋಷಪಡುವುದನ್ನು ನೋಡಿದರೆ,ನನಗೆ ಪರಮಾಶ್ಚರ್ಯವಾಗಿದೆ!ರಾಮನ ಪಟ್ಟಾಭಿಷೇಕವಾರ್ತೆಗಿಂತಲೂ ಈ ನಿನ್ನ ಹುಚ್ಚುಮಾತನ್ನು ಕೇಳಿ ನನಗೆ ಹೆಚ್ಚು ಸಂಕಟವುಂಟಾಗುತ್ತಿದೆ. ಲೋಕದಲ್ಲಿ ಸವತಿಯ ಮಗನಿಗಿಂತಲೂ ಬೇರೊಬ್ಬ ಶತ್ರುವುಂಟೆ! ಅಂತವರಿಗೆ ಶ್ರೇಯಸ್ಸನ್ನು ಕೋರುವುದು ಮೃತ್ಯುವನ್ನು ಬಯಸಿದಹಾಗೆಯೇಹೊರತು ಬೇರೆಯಲ್ಲ. ವಿವೇಕವುಳ್ಳ ಯಾವ ಹೆಂಗಸು ತಾನೇ ಈ ವಿಷಯದಲ್ಲಿ ಸಂತೋಷಪಡುವಳು? ರಾಜ್ಯದಲ್ಲಿ ರಾಮನಿಗೂ ಭರತನಿಗೂ ಸಮವಾದ ಬಾಧ್ಯತೆಯುಂಟು. ಆದುದರಿಂದ, ರಾಮನಿಗೆ ಮುಖ್ಯವಾಗಿ ಭರತನ ಭಯವು ಬಹಳವಾಗಿದೆ. ಈ ಭಯಕ್ಕಾಗಿ ರಾಮನು ಅವನಿಗೆ ಕೇಡನ್ನೇ ಕೋರುತ್ತ, ಅವನ ಮೇಲೆ ಯಾವಾಗಲೂ ಕಣ್ಣಿಟ್ಟು ಕಾದಿರುವನು! ಹುಲಿ, ಹಾವು, ಮೊದಲಾದುವುಗಳನ್ನು ನೋಡಿ ನಮಗೆ ಭಯವುಂಟಾಗುವುದರಿಂದಲೇ,ಅವುಗಳನ್ನು ನಾವೂ ಕಂಡಕಂಡಲ್ಲಿ ಕೊಲ್ಲುತ್ತಿರುವೆವಲ್ಲವೆ ! ಇದೆಲ್ಲವನ್ನೂ ಯೋಚಿಸಿಯೇ ನನಗೆ ಮನಸ್ಸಿನಲ್ಲಿ ಬಹಳ ಸಂಕಟವುಂಟಾಗಿರುವುದು. “ಲಕ್ಷ್ಮಣಶತ್ರುಘ್ನರಿಗೂಕೂಡ ರಾಜ್ಯದಲ್ಲಿ ಸಮವಾದ ಬಾಧ್ಯತೆಯಿರುವಾಗ, ಅವರಿಬ್ಬರಿಗೂ ಈ ಭಯವಿಲ್ಲವೆ?” ಎಂದು ನೀನು ತಿಳಿಯಬೇಡ! ಮಹಾಧನುರ್ಧಾರಿಯಾದ ಲಕ್ಷ್ಮಣನಾದರೋ, ತ್ರಿಕರಣಶುದ್ಧಿಯಿಂದ ರಾಮನನ್ನೇ ಆಶ್ರಯಿಸಿಕೊಂಡಿರುವನು ಅದರಂತೆಯೇ ಶತ್ರುಘ್ನನು ಭರತನನ್ನು ಆಶ್ರಯಿಸಿರುವನು. ಹೀಗೆ ಅವರಿಬ್ಬರೂ ಪರತಂತ್ರರಾಗಿರುವುದರಿಂದ, ಅವರಿಬ್ಬರಿಗೂ ಭೀತಿಗೆ ಕಾರಣವಿಲ್ಲ. ಭರತನವಿಷಯದಲ್ಲಿ ರಾಮನಿಗೆ ಯಾವಾಗಲೂ ಭೀತಿಯುಂಟೆಂಬುದಕ್ಕೆ ಮತ್ತೊಂದುಕಾರಣವೂ ಉಂಟು. ಈ ನಾಲ್ವರು ಕುಮಾರರ ಜನ್ಮಕ್ರಮವನ್ನು ನೋಡಿದರೆ. ಭರತನ ಜನನವು ರಾಮನ ಜನ್ಮಕ್ಕೆ ಬಹಳ ಸಮೀಪವಾಗಿರುವುದು. ಆದುದರಿಂದ ರಾಜ್ಯಪ್ರಾಪ್ತಿಯ ವಿಷಯದಲ್ಲಿಯೂ, ರಾಮನಿಂದೀಚೆಗೆ ಭರತನಿಗೆಮಾತ್ರವೇ ಹೆಚ್ಚು ಬಾಧ್ಯತೆಯು ಸಲ್ಲುವುದು. ಭರತನಿಗಿಂತಲೂ ಲಕ್ಷ್ಮಣಶತ್ರುಘ್ನರು ಕಿರಿಯವರಾಗಿ ಹುಟ್ಟಿ

ದುದರಿಂದ, ರಾಜ್ಯದಲ್ಲಿ ಅವರಿಗೆ ಬಾಧ್ಯತೆಯು ಕಡಿಮೆ! ಲಕ್ಷ್ಮಣಶತ್ರುಘ್ನರಿಬ್ಬರೂ ಪರತಂತ್ರರಾಗಿದ್ದರೂ, ರಾಜ್ಯಾಭಿಲಾಷೆಯೆಂಬುದು ಎಲ್ಲರಿಗೂ ಸಮನಾಗಿಯೇ ಇರಬಹುದು. ಆದರೂ ರಾಮನಾದಮೇಲೆ ವಯಸ್ಸಿನಲ್ಲಿ ಭರತನೇ ಹಿರಿಯನಾದುದರಿಂದ, ಮುಖ್ಯವಾಗಿ ರಾಮನಿಗೆ ಭರತನಲ್ಲಿಯೇ ಬಲವಾದ ಕಣ್ಣಿರಬೇಕು! ಆದುದರಿಂದ ರಾಮನು, ಮೊದಲು ಭರತನನ್ನು ಕೊಲ್ಲುವ ಯೋಚನೆಯಲ್ಲಿಯೇ ಇರುವನು. ಅದಕ್ಕಾಗಿ ಭರತನು ರಾಮನಿಗೇ ಭಯಪಡಬೇಕಾಗಿರುವುದು. "ವಯಸ್ಸಿನ ತಾರತಮ್ಯವನ್ನು ನೋಡಿದರೂ, ರಾಜ್ಯಪ್ರಾಪ್ತಿಗೆ ರಾಮನೇ ಮುಖ್ಯಬಾಧ್ಯನಾಗಿರುವಾಗ ಭರತನಿಗೆ ಆ ರಾಜ್ಯವು ಹೇಗೆ ಬಂದೀತು?" ಎಂದು ನೀನು ಆಕ್ಷೇಪಿಸಬಹುದು. ರಾಜ್ಯವು ಹೇಗಾದರೂ ಹೋಗಲಿ! ಮತ್ತೊಂದು ವಿಷಯವನ್ನು ಹೇಳುವೆನು ಕೇಳು? ಸ್ವಾಭಾವಿಕವಾಗಿಯೇ ರಾಮನು ಬಹಳಬುದ್ಧಿವಂತನು. ರಾಜನೀತಿಯಲ್ಲಿ ಬಹಳ ನಿಪುಣನು. ಯಾವಾಗ ಯಾವಯಾವ ಕೆಲಸಗಳನ್ನು ಮಾಡಬೇಕೋ, ಅವುಗಳನ್ನು ಆಗಲೇ ತಪ್ಪದೆಮಾಡಿ ಮುಗಿಸುವನು. ನಿನ್ನ ಮಗನಾದರೋ ಅಷ್ಟುಸಮರ್ಥನಲ್ಲ. ಯಾವಾಗಲೂ ರಾಮನಿಗೆ ಭಯಪಟ್ಟು ನಡುಗುತ್ತಿರುವನು. ಇದೆಲ್ಲವನ್ನೂ ಯೋಚಿಸಿದರೆ ಮಹಾತಂತ್ರಿಯಾದರಾಮನು ರಾಜ್ಯಾಧಿಕಾರವನ್ನು ವಹಿಸಿದಮೇಲೆ, ಏನೂತಿಳಿಯದ ಭರತನನ್ನು ತನ್ನ ಕೈಕೆಳಗೆ ಅಡಗಿಸಿಟ್ಟುಕೊಂಡು ಆತನನ್ನು ಯಾವ ಅಪಾಯಕ್ಕೆ ಗುರಿಮಾಡುವನೋ ಎಂದು ನನ್ನ ಎದೆಯು ನಡುಗುತ್ತಿರುವುದು. ಇವುಗಳೆಲ್ಲವನ್ನೂ ನೀನು ಚೆನ್ನಾಗಿ ಯೋಚಿಸಿ, ಈಗಲೇ ತಕ್ಕ ಪ್ರತೀಕಾರವನ್ನು ಮಾಡಬೇಡವೆ! ನಿನ್ನ ಮಗನ ವಿಷಯವೂ ಹಾಗಿರಲಿ! ನಿನ್ನ ಸವತಿಯಾದ ಕೌಸಲ್ಯೆಯ ಭಾಗ್ಯವನ್ನು ನೋಡಿದೆಯಾ! ಆಕೆಯ ಮಗನನ್ನು ನಾಳೆ ಪುಷ್ಯನಕ್ಷತ್ರದಲ್ಲಿ ರಾಜಸಿಂಹಾಸನದಮೇಲೆ ಕುಳ್ಳಿರಿಸಿ ಬ್ರಾಹ್ಮಣರೆಲ್ಲರೂ ಸೇರಿ ಪಟ್ಟಾಭಿಷೇಕವನ್ನು ನಡೆಸುವರು ! ಅವಳ ಭಾಗ್ಯಕ್ಕೆ ಮೇಲೆ ಭಾಗ್ಯವುಂಟೆ? ತನ್ನ ಮಗನು ಯುವರಾಜನಾಗಿಬಿಟ್ಟಮೇಲೆ, ಅವಳ ಅಧಿಕಾರಕ್ಕೆ ತಡೆಯುಂಟೆ? ನಿನ್ನಂತಹ ಸವತಿಯರ ಹೆಮ್ಮೆ ಯನ್ನೆಲ್ಲಾ ನಿಮಿಷಮಾತ್ರದಲ್ಲಿ ಮುರಿದಿಟ್ಟು, ನಿರಂಕುಶವಾಗಿ ನಡೆಯುವಳು. ಆಗ ಅವಳ ಹೆಮ್ಮೆಗೂ, ಅವಳ ಸಂತೋಷಕ್ಕೂ ಪಾರವುಂಟೆ ? ನೀನು ದಾಸಿಯಂತೆ ಕೈಕಟ್ಟಿ

ನಿಂತು, ಅವಳ ಸೇವಾವೃತ್ತಿಯಲ್ಲಿರಬೇಕು! ನಿನ್ನೊಡನೆ ನಾವೆಲ್ಲರೂ ಅವಳಿಗೆ ಗೌಡಿಯರಾಗಿದ್ದು ಕೆಲಸಮಾಡಬೇಕು. ನೀನು ಕೌಸಲ್ಯೆಗೆ ದಾಸಿಯಾಗಿರುವಂತೆ, ಭರತನು ರಾಮನಿಗೆ ದಾಸಭೂತನಾಗಿರಬೇಕು.ಇವೆಲ್ಲವೂ ಹಾಗಿರಲಿ! ರಾಮನು ಪಟ್ಟಕ್ಕೆ ಬಂದಮೇಲೆ *ಆತನ ಸ್ತ್ರೀಯರ ಅಟ್ಟಹಾಸವನ್ನು ಕೇಳಬೇಕೆ? ಅವರ ಸಂತೋಷಕ್ಕೂ ಅವರ ಅಧಿಕಾರಕ್ಕೂ ತಡೆಯೇ ಇರುವುದಿ

---

* "ಹೃಷ್ಟಾ: ಖಲು ಭವಿಷ್ಯಂತಿ ರಾಮಸ್ಯ ಪರಮಾಃಸ್ತ್ರಿಯಃ । ಅಪ್ರಹೃಷ್ಟಾ ಭವಿಷ್ಯಂತಿ ಸ್ನುಷಾಸ್ತೇ ಭರತಕ್ಷಯೇ" ಎಂಬುದೇ ಈ ವಾಕ್ಯದ ಮೂಲಶ್ಲೋಕವು. ಇಲ್ಲಿ ('ರಾಮಸ್ಯ ಪರಮಾಃ ಸ್ತ್ರೀಯಃ') "ರಾಮನ ಉತ್ತಮಸ್ತ್ರೀಯರು" ಎಂದು ಬಹುವಚನವನ್ನು ಹೇಳಿರುವುದರಿಂದಲೂ, ಸ್ನುಷಾಸ್ತೇ) ನಿನ್ನ ಸೊಸೆಯರೆಂದು ಅಲ್ಲಿಯೂ ಬಹುವಚನವನ್ನು ಹೇಳಿರುವುದರಿಂದಲೂ, ಈ ಸಾಹಚರ್ಯಗಳನ್ನು ನೋಡಿದರೆ, ರಾಮನಿಗೆ ಅನೇಕಪತ್ನಿಯರಿದ್ದಂತೆ ಊಹಿಸಬೇಕಾಗುವುದು. ಇದನ್ನನುಸರಿಸಿಯೇ ಸುಂದರಕಾಂಡದಲ್ಲಿ ("ಪಿತುರ್ನಿದೇಶಂ ಸಮಯೇನ ಕೃತ್ವಾ ವನಾನ್ನಿವೃತ್ತಶ್ಚರಿತವ್ರತಶ್ಚ । ಸ್ತ್ರೀಭಿಶ್ಚ ಮನ್ಯೇ ವಿಪುಲೇಕ್ಷಣಾಭಿಸ್ತ್ವಂರಂಸ್ಯಸೇ ವೀತಭಯಃ ಕೃತಾರ್ಥಃ")"ನೀನು ಪಿತೃವಾಕ್ಯಪರಿಪಾಲನವನ್ನು ಮುಗಿಸಿಕೊಂಡು,ಕಾಡಿನಿಂದ ಹಿಂತಿರುಗಿಬಂದಮೇಲೆ, ನಿರ್ಭಯನಾಗಿ ಕೃತಾರ್ಥನಾಗಿ, ವಿಸ್ತಾರವಾದ ಕಣ್ಣುಳ್ಳ ಸ್ತ್ರೀಯರೊಡಗೂಡಿ ಕ್ರೀಡಾಸುಖಗಳನ್ನು ಅನುಭವಿಸುವೆ" ಎಂದು ಸೀತೆಯು ರಾಮನನ್ನುಕುರಿತು ಹೇಳಿದುದಾಗಿ ಕಾಣಿಸಲ್ಪಟ್ಟಿದೆ. ಮತ್ತು ಯುದ್ಧಕಾಂಡದಲ್ಲಿ ದರ್ಭಶಯನವನ್ನು ವರ್ಣಿಸುವಾಗ, (ಭುಜೈಃ ಪರಮನಾರೀಣಾಮಭಿಮೃಷ್ಟಮನೇಕಧಾ) "ರಾಮನ ಕೈಯು ಉತ್ತಮಸ್ತ್ರೀಯರ ಭುಜಗಳಿಂದ ಒರೆಸಲ್ಪಟ್ಟದು" ಎಂದು ಹೇಳಲ್ಪಟ್ಟಿರುವುದು. ಮತ್ತು ಉತ್ತರಕಾಂಡದಲ್ಲಿ ಅಶ್ವಮೇಧಯಾಗಾರಂಭದಲ್ಲಿ,(ಮಾತರಶ್ಚೈವ ಸರ್ವಾಮೇ ಕುಮಾರಾನ್ತಃಪುರಾಣಿಚ। ಅಗ್ರತೋ ಭರತಂ ಕೃತ್ವಾ ಗಚ್ಛಂತ್ವಗ್ರೇ ಸಮಾಹಿತಾ:) ಎಂಬ ರಾಮನ ವಾಕ್ಯದಲ್ಲಿ ಸ್ತ್ರೀಗಣಗಳೆಂದು ಹೇಳಲ್ಪಟ್ಟಿದೆ. ರಾಮನಿಗೆ ಸೀತೆಯುಹೊರತು ಬೇರೆ ಹೆಂಡತಿಯರೊಬ್ಬರೂ ಇಲ್ಲದಿದ್ದಪಕ್ಷದಲ್ಲಿ, ಈ ಸಂದರ್ಭದಲ್ಲಿ "ನನ್ನ ಮಕ್ಕಳೆಂದೂ, ನನ್ನ ಸ್ತ್ರೀಯರೆಂದೂ ಹೇಳುವುದಕ್ಕೆ ಅವಕಾಶವಿರದು. ಮತ್ತು ಧರ್ಮಪತ್ನಿಯಿಲ್ಲದವರಿಗೆ ಯಜ್ಞಮಾಡುವುದಕ್ಕೂ ಅಧಿಕಾರವಿಲ್ಲ! ರಾಮನು ಸೀತೆಯನ್ನು ಅರಣ್ಯಕ್ಕೆ ಕಳುಹಿಸಿಬಿಟ್ಟಮೇಲೆಯೇ ಅಶ್ವಮೇಧವನ್ನು ಆರಂಭಿಸಿದುದರಿಂದ, ಆ ಕಾಲದಲ್ಲಿ ಬೇರೆ ಧರ್ಮಪತ್ನಿಯರಿದ್ದೇ ಇರಬೇಕೆಂದು ಅನುಮಾನದಿಂದ ಸಿದ್ಧವಾಗುವುದು. ಹಾಗಿದ್ದರೆ ರಾಮನಿಗೆ ಏಕಪತ್ನೀವ್ರತವು ಹೇಗೆ ಸಲ್ಲುವುದೆಂಬುದಕ್ಕೆ,ಇವನಿಗಿದ್ದ ಪತ್ನಿಯರಲ್ಲಿ ಯಾರೂ ಭೋಗಿನಿಯರಲ್ಲವೆಂದೂ,

ಲ್ಲ. ಆಗ ನಿನ್ನ ಸೊಸೆಯರೂ ಭರತನ ದುರ್ದಶೆಯನ್ನು ನೋಡಿ ಬಾಯಿ ಮುಚ್ಚಿಕೊಂಡು ಮನಸ್ಸಿನಲ್ಲಿಯೇ ಕೊರಗುತ್ತಿರಬೇಕಲ್ಲವೆ? ಈ ವಿಷಯಗಳೆ

---

ಇದ್ದವರೆಲ್ಲರೂ ಸಹಧರ್ಮಚಾರಿಣಿಗಳೇ ಆಗಿದ್ದುದರಿಂದ, ಆತನಿಗೆ ಏಕಪತ್ನೀವ್ರತವೆಂಬುದು ಸಲ್ಲುವುದೆಂದೂ ಸಮಾಧಾನಹೇಳುವರು. ರಾಮನು ಸೀತೆಯನ್ನು ಅಗಲಿರುವಾಗ, ಬೇರೆ ಪತ್ನಿಯರಿದ್ದಪಕ್ಷದಲ್ಲಿ,ಅವನಿಗೆ ಭಾರ್ಯಾವಿಯೋಗವುಂಟಾಗಬೇಕೆಂಬ ಭೃಗುಶಾಪವು ಹೇಗೆ ಸಲ್ಲುವುದೆಂಬುದಕ್ಕೂ, ಆತನಿಗೆ ಸೀತೆಯಲ್ಲಿರುವ ಪ್ರೇಮಾತಿಶಯದಿಂದ,ಆ ಕಾಲದಲ್ಲಿ ಇತರಭಾರ್ಯೆಯರಿದ್ದರೂ ಇಲ್ಲದಂತೆಯೇ ಭಾವಿಸಿ, ಬಹಳವಾದ ವಿಯೋಗದುಃಖವನ್ನನುಭವಿಸಿದನೆಂದರೆ ಆ ಶಾಪವೂ ಪರಿಪಾಲಿತವಾಗುವುದೆಂದು ಹೇಳುವರು. ಮತ್ತು ರಾಮನು ಅಶ್ವಮೇಧಯಾಗದಲ್ಲಿ ಸುವರ್ಣಮಯವಾದ ಸೀತಾಪ್ರತಿಮೆಯನ್ನಿಟ್ಟುಕೊಂಡಿದ್ದುದೂಕೂಡ, ಅವಳಲ್ಲಿ ಪ್ರೇಮಾತಿಶಯದಿಂದಲೇಹೊರತು, ಇತರಧರ್ಮಪತ್ನಿಯರಿಲ್ಲದುದರಿಂದಲ್ಲ! ಆದುದರಿಂದ ರಾಮನು ಬಹುಪತ್ನೀಕನೇಹೊರತು ಏಕಪತ್ನೀಕನಲ್ಲವೆಂದು ಕೆಲವರ ಪೂರ್ವಪಕ್ಷವುಂಟು. ಇದಕ್ಕೆ ಸಮಾಧಾನವೇನೆಂದರೆ, ರಾಮನು ಏಕಪತ್ನೀವ್ರತವುಳ್ಳವನೆಂಬುದೇ ಸಿದ್ಧಾಂತವು. ಆತನಿಗೆ ಇತರಭಾರ್ಯೆಯರಿದ್ದರೆ, ಆ ವ್ರತವು ಎಂದಿಗೂ ಸಿದ್ಧಿಸದು. ಸೀತಾಪ್ರತಿಮೆಯನ್ನು ಇಟ್ಟುಕೊಂಡೇ ಯಾಗಮಾಡುವುದಕ್ಕೆ ಅಧಿಕಾರವು ಸಲ್ಲುವುದರಿಂದ ಸೀತಾವಿಯೋಗದಲ್ಲಿ ಇತರ ಭಾರ್ಯೆಯರೂ ಇಲ್ಲದಿದ್ದರೆ, ಯಜ್ಞಮಾಡುವುದೇ ನ್ಯಾಯವಲ್ಲವೆಂದು ತಿಳಿಯಕೂಡದು. ಇದಕ್ಕಾಗಿಯೇ ಉತ್ತರಕಾಂಡದಲ್ಲಿ, ''ಕಾಂಚನೀಂ ಮಮ ಪತ್ನೀಂ ಚ ದೀಕ್ಷಾರ್ಹಾಂ ಯಜ್ಞಕರ್ಮಣಿ। ಅಗ್ರತೋ ಭರತಃ ಕೃತ್ವಾ ಗಚ್ಛತ್ವಗ್ರೇ ಮಹೀಪತಿಃ" ಯಜ್ಞಕಾರ್ಯದಲ್ಲಿ ದೀಕ್ಷೆಗೆ ಯೋಗ್ಯವಾದ ಸುವರ್ಣಮಯವಾದ ನನ್ನ ಪತ್ನಿಯ ಪ್ರತಿಮೆಯನ್ನು ಮುಂದಿಟ್ಟುಕೊಂಡು ಭರತನು ಮುಂದಾಗಿ ಹೋಗಲಿ! ಎಂದು ಯಾಗದೀಕ್ಷೆಗೆ ಸೀತಾಪ್ರತಿಮೆಯೂಕೂಡ ಪತ್ನಿಗೆ ಸಮಾನವಾದುದೆಂದೇ ಸೂಚಿಸಲ್ಪಟ್ಟಿದೆ. ಮತ್ತು ''ನ ಸೀತಾಯಾಃಪರಾಂ ಭಾರ್ಯಾಂ ವವ್ರೇ ಸ ರಘುನಂದನಃ। ಯಜ್ಞೇ ಯಜ್ಞೇಚಪತ್ನ್ಯರ್ಥಂ ಕಾಂಚನೀ ಜಾನಕೀ ಭವೇತ್॥" ರಾಮನು ಸೀತೆಯನ್ನುಹೊರತು ಬೇರೆ ಪತ್ನಿಯರನ್ನು ವರಿಸದುದರಿಂದ, ಪ್ರತಿಯಾಗದಲ್ಲಿಯೂ ಸುವರ್ಣಮಯವಾದ ಸೀತಾಪ್ರತಿಮೆಯೇ ಇದ್ದುದಾಗಿ ತಿಳಿಯುತ್ತಿದೆ. ಇದರಿಂದ ರಾಮನು ಪತ್ನಿಯ ಪ್ರತಿಮೆಯನ್ನೇ ಪ್ರಧಾನವಾಗಿಟ್ಟುಕೊಂಡು ಯಾಗಮಾಡಿದುದಾಗಿರುವುದರಿಂದ, ಈ ಯಾಗಕಾಲದಲ್ಲಿ ಬೇರೆ ಪತ್ನಿಯರು ಇದ್ದೇಇರಬೇಕೆಂಬ ಅನುಮಾನಪ್ರಮಾಣಕ್ಕೆ ಅವಕಾಶವಿಲ್ಲ. ಇದರಿಂದ ''ವಿದೂರಭಾರ್ಯೋಽನನುಕೂಲಭಾರ್ಯಶ್ಚ ಭಾರ್ಯಾಪ್ರತಿಕೃತ್ವಾ ಶ್ರೌತಸ್ಮಾರ್ತಕರ್ಮಾಣಿ ಕುರ್ವೀತ"

ಲ್ಲವನ್ನೂ ನೀನು ಚೆನ್ನಾಗಿ ಪರ್ಯಾಲೋಚಿಸು" ಎಂದು ಬಹಳ ಅತೃಪ್ತಿಯಿಂದ ಹೇಳಲು, ಆ ಮಂಥರೆಯನ್ನು ನೋಡಿ, ಕೈಕೇಯಿಯು ಅವಳ ಮಾತಿಗೆ

---

ಎಂಬ ವಿಧಿಯು ಉತ್ಥಾಪಿತವಾಗುವುದು. ಹಾಗೆಯೇ "ದೂರಭಾರ್ಯೋನನುಕೂಲ ಭಾರ್ಯಶ್ಚ ದರ್ಭಪುಂಜೀಲ್ಯೈಃ ಭಾರ್ಯಾಪ್ರತಿನಿಧಿಂ ವಿಧಾಯ ಪಾರ್ವಣಂ ಕುರ್ಯಾತ್" ಹೆಂಡತಿಯು ದೂರದಲ್ಲಿದ್ದರೂ, ತನ್ನ ಕಾರ್ಯಕ್ಕೆ ಅನುಕೂಲೆಯಾಗದಿದ್ದರೂ, ದರ್ಭೆಗಳಿಂದ ಅವಳ ಆಕೃತಿಯನ್ನು ಮಾಡಿ, ಪಾರ್ವಣವನ್ನು ಮಾಡಬೇಕೆಂದು ಹೇಮಾದ್ರಿಸ್ಮೃತಿಯಲ್ಲಿರುವುದು. ಆಗ ಪತ್ನಿಯು ಮಾಡಬೇಕಾದ ಕಾರ್ಯವನ್ನು ಯಜಮಾನನಾಗಲಿ, ಅಧ್ವರ್ಯುವಾಗಲಿ ಮಾಡಬೇಕು. ಪತ್ನಿಯು ಜೀವಿಸಿರುವವರೆಗೂ ಅಗ್ನಿಯು ಜೀವಿಸುತ್ತಿದ್ದಂತೆಯೇ ಎಣಿಸಬೇಕು. ಆದರೆ ಸೀತಾಪ್ರತಿಮೆಯನ್ನಿಟ್ಟುಕೊಂಡುದು,ರಾಮನಿಗೆ ಅವಳಲ್ಲಿರತಕ್ಕ ಸ್ನೇಹಬಹುಮಾನಗಳಿಗಾಗಿಯೇ, ಎಂದ: ಊಹಿಸುವುದೂ ಸಮಂಜಸವಲ್ಲ.ದುಷ್ಟೆಯೆಂದು ತಿರಸ್ಕರಿಸಲ್ಪಟ್ಟ ಪತ್ನಿಯಲ್ಲಿ ಸ್ನೇಹಬಹುಮಾನಗಳನ್ನು ತೋರಿಸುವುದು ಹೇಗೆ ಯುಕ್ತವಾದೀತು" ಮತ್ತು (ಮಾತರಶ್ಚ ವಸರ್ವಾಮೇ ಕುಮಾರಾಸ್ತ್ರೀಗಣಾನಿಚ) ಎಂಬ ಸ್ಥಳದಲ್ಲಿ, "ಮೇ" ಎಂದರೆ "ನನ್ನ" ಎಂಬುದು, "ಮಾತರ:" ಎಂಬುದರೊಡನೆಮಾತ್ರವೇ ಅನ್ವಯಿಸುವುದು. "ಕುಮಾರಾಃ, ಸ್ತ್ರೀಗಣಾಃ," ಎಂಬಿವುಗಳೆಲ್ಲವೂ ಭರತನಿಗೆ ಸಂಬಂಧಿಸಿದುದಾಗಿಯೇ ಗ್ರಹಿಸಬೇಕು. ಇದರಿಂದ ನನ್ನ ಮಾತೆಯರೂ ಭರತನ ಹೆಂಡಿರುಮಕ್ಕಳೂ,ಆತನನ್ನು ಮುಂದಿಟ್ಟುಕೊಂಡು ಹೋಗಲಿ" ಎಂದು ರಾಮನು ಹೇಳಿದುದಾಗಿ ಸ್ಪಷ್ಟಪಡುವುದು. ಮತ್ತು ರಾಮನಿಗೆ ಒಂದುವೇಳೆ ಬೇರೆ ಪತ್ನಿಯರಿದ್ದರೆಂದು ಊಹಿಸಿದರೂ, ಅವರು ಧರ್ಮಾರ್ಥವಾಗಿಯೇಹೊರತು ಪ್ರಜಾರ್ಥವಾಗಿ ಇರಲಿಲ್ಲವಾದುದರಿಂದ, ರಾಮನಿಗೆ ಆಗ ಬೇರೆ ಮಕ್ಕಳು ಇರಲಿಲ್ಲವೆಂದೂ ಸಿದ್ಧವಾಗುವುದು. ಈ ಕಾರಣಗಳಿಂದ ಆ ಶ್ಲೋಕದಲ್ಲಿ ಭರತನ ಹೆಂಡಿರುಮಕ್ಕಳೆಂದೇ ಸಿದ್ಧವಾಗುವುದು' ಹೀಗೆ ಅರ್ಥಗಳನ್ನು ಮಾಡಿದರೆ, ರಾಮನಿಗೆ ಇತರಭಾರ್ಯೆಯರಿದ್ದಂತೆ ಎಣಿಸುವುದಕ್ಕೆ ಅವಕಾಶವಿಲ್ಲ. ಮತ್ತು "ರಂಸ್ಯಸೇ, ಭುಜ್ಯೈರಭಿಮೃಷ್ಟಾಃ" ಇತ್ಯಾದಿಗಳಲ್ಲಿ ಭೋಗಪ್ರಸಕ್ತಿಮಾತ್ರವೇ ಸೂಚಿಸಲ್ಪಟ್ಟಿರುವುದರಿಂದ,ಅವರೆಲ್ಲರೂ ಧರ್ಮಾರ್ಥವಾದ ಭಾರ್ಯೆಯರಲ್ಲವೆಂದೇ ತಿಳಿದುಬರುವುದರಿಂದಲೂ, ರಾಮನು ಕೇವಲಭೋಗಾರ್ಥವಾದ ಸ್ತ್ರೀಯರನ್ನು ಪರಿಗ್ರಹಿಸಿದಂತೆ ಶಂಕಿಸುವುದಕ್ಕೆ ಬೇರೆ ಎಲ್ಲಿಯೂ ಅವಕಾಶವಿಲ್ಲದುದರಿಂದಲೂ, ರಾಮನಿಗೆ ಸೀತೆಯೊಬ್ಬಳುಹೊರತು, ಬೇರೆ ಧರ್ಮಪತ್ನಿಯರಾಗಲಿ, ಭೋಗಿನಿಯರಾಗಲಿ ಇಲ್ಲವೆಂದೇ ಸಿದ್ಧಿಸುವುದು.ಇದರಂತೆಯೇ(ರಾಮಸ್ಯ ಪರಮಾಃಸ್ತ್ರಿಯಃ) (ಪರಮನಾರೀಣಾಂ ಸ್ತ್ರೀಭಿಶ್ಚ ಮನ್ಯೇ)ಇತ್ಯಾದಿಗಳಲ್ಲಿಯೂ,ಅರ್ಥಾಂತರವನ್ನು ಮಾಡಿಕೊಳ್ಳಬೇಕು.ಹೇಗೆಂ

ಆಗಲೂ ಮರುಳಾಗದೆ, ರಾಮನ ಗುಣಾತಿಶಯಗಳನ್ನೇ ಪುನಃಪುನಃ ಪ್ರಸಂಸೆಮಾಡಲುಪಕ್ರಮಿಸಿದಳು. “ಎಲೆ ಮಂಥರೆ! ರಾಮನು ಧರ್ಮಗಳೆಲ್ಲವನ್ನೂ ಬಲ್ಲವನು? ಗುರುಗಳಿಂದ ಚೆನ್ನಾಗಿ ಶಿಕ್ಷಿಸಲ್ಪಟ್ಟಿರುವನು. ಆತನ ಕೃತಜ್ಞತೆಯೂ, ಆತನ ಸತ್ಯಸಂಧತೆಯೂ, ಆತನ ಶುದ್ಧಸ್ವಭಾವವೂ, ಲೋಕಾಭಿನಂದ್ಯವಾಗಿರುವುದು. ದಶರಥನಿಗೆ ಆತನೇ ಹಿರಿಯಮಗನಲ್ಲವೆ? ಆತನಿಗಲ್ಲದೆ ಈ ರಾಜ್ಯಾಭಿಷೇಕವು ಮತ್ತಾರಿಗೆ ಸಲ್ಲುವುದು? ಭರತನೇ ಮೊದಲಾದವರಿಗೆ ರಾಜ್ಯದಲ್ಲಿ ಈಗ ಬಾಧ್ಯತೆಯೇನಿರುವುದು? ಆ ರಾಮನು ತನ್ನ ತಮ್ಮಂದಿರನ್ನೂ, ತನ್ನ ಭೃತ್ಯರನ್ನೂ, ಹೆತ್ತತಂದೆಯಂತೆ ಬಹುಪ್ರೀತಿಯಿಂದ ಪಾಲಿಸುವನು. ಆತನು ದೀರ್ಘಾಯುಷ್ಮಂತನಾಗಿರಬೇಕೆಂಬುದೇ ನನ್ನ ಕೋರಿಕೆ! ಆಹಾ! ಇದೇನು? ನಿನಗೆ ಈ ವಿಧವಾದ ವಿಪರೀತಬುದ್ಧಿಯು ಹುಟ್ಟಿತು? ರಾಮಾಭಿಷೇಕವನ್ನು ಕೇಳಿ ಸಂಕಟಪಡುವುದುಂಟೆ? ರಾಮನು ನೂರಾರುವರ್ಷಗಳವರೆಗೆ ರಾಜ್ಯವನ್ನು ಪಾಲಿಸಿ, ತಾನಾಗಿಯೇ ವಿಶ್ರಾಂತಿಯನ್ನು ಹೊಂದಬೇಕೆಂದು ಅಪೇಕ್ಷಿಸಿದಾಗ, ನಮ್ಮ ಭರತನು ಕುಲಕ್ರಮಾಗತವಾದ ಆ ರಾಜ್ಯವನ್ನನುಭವಿಸಲಿ! ಎಲೆ ಮಂಥರೆ! ಈಗ ರಾಮಾಭಿಷೇಕವೆಂಬ ಅಭ್ಯುದಯಕಾಲವು ಸನ್ನಿಹಿತವಾಗಿರುವುದು. ಮುಂದೆ ಭರತನಿಗೆ ಯೌವರಾಜ್ಯಾಭಿಷೇಕವೆಂಬ ಕಲ್ಯಾಣಕಾರ್ಯವೂ ನಡೆಸಲ್ಪಡಬೇಕಾಗಿರುವುದು. ಹೀಗೆ ಮೇಲೆಮೇಲೆ ಒಂದರಮೇಲೊಂದು ಅಭ್ಯುದಯಪರಂಪರೆಯು ಬಂದೊದಗಿರುವಾಗಲೂ, ನೀನು ಹೀಗೆ ದುಃಖಿಸುವುದುಂಟೆ? ನನಗೆ ಭರತನಲ್ಲಿರುವುದಕ್ಕಿಂತಲೂ ಹೆಚ್ಚಾಗಿ ರಾಮನಲ್ಲಿ ಪ್ರೀತಿಯುಂಟು. ರಾಮನೂ ತನ್ನ ಹೆತ್ತತಾಯಿ

---

ದರೆ “ಪರಮಾಃಸ್ತ್ರಿಯಃ” ಎಂಬಲ್ಲಿ ಪರಿಚಾರಿಕೆಯರೇ ಮೊದಲಾದವರೆಂದರ್ಥವು. “ಪರಮನಾರೀಣಾಂ” ಎಂಬಲ್ಲಿ, ಲಕ್ಷ್ಮೀದೇವಿ, ಭೂದೇವಿ, ಸೀತೆ, ಈ ಮೂವರ ಭುಜಗಳಿಂದ ಒರೆಸಲ್ಪಟ್ಟುದೆಂದು ಭಾವವು. “ಸ್ತ್ರೀಭಿಶ್ಚ ಮನ್ಯೇ” ಎಂಬ ಸುಂದರಕಾಂಡದೊಳಗಿನ ಸೀತಾವಾಕ್ಯದಲ್ಲಿಯೂಕೂಡ, ರಾಮವಿಯೋಗದುಃಖದಿಂದಲೇ ತಾನು ಒಂದುವೇಳೆ ನಾಶಹೊಂದಿದಪಕ್ಷದಲ್ಲಿ, ಆಮೇಲೆ ರಾಮನು ಬೇರೆ ಅನೇಕಭಾರ್ಯೆಯರನ್ನು ವರಿಸಿ ಸುಖಿಸಬಹುದೆಂದೂಹಿಸಿ, ದುಃಖದಿಂದ ಹೇಳಿದುದಾಗಿಯೂ ಗ್ರಹಿಸಬೇಕು. ಆದುದರಿಂದ ಸಂಪ್ರದಾಯಸಿದ್ಧಾಂತಾನುಸಾರವಾಗಿ ವಿಮರ್ಶಿಸಿದರೆ, ರಾಮನಿಗೆ ಸೀತೆಯು ಹೊರತು ಬೇರೆ ಭಾರ್ಯೆಯರಿಲ್ಲವೆಂದೇ ಸಿದ್ಧವಾಗುವುದು.

ಯಾದ ಕೌಸಲ್ಯೆಗಿಂತಲೂ ನನ್ನನ್ನೇ ಹೆಚ್ಚಾಗಿ ಪ್ರೀತಿಸುತ್ತಿರುವನೆಂಬ ನಂಬಿಕೆಯೂ ಆತನಲ್ಲಿ ನನಗೆ ಸಂಪೂರ್ಣವಾಗಿರುವುದು. ಆ ರಾಮನು ತನ್ನ ತಮ್ಮಂದಿರೆಲ್ಲರನ್ನೂ ತನ್ನಂತೆಯೇಭಾವಿಸಿರುವನೇಹೊರತು,ಅವರಲ್ಲಿ ಸ್ವಲ್ಪವಾದರೂ ಭೇದಬುದ್ಧಿಯನ್ನು ಎಣಿಸತಕ್ಕವನಲ್ಲ. ಆದುದರಿಂದ ಈಗ ರಾಮನು ಅನುಭವಿಸತಕ್ಕ ರಾಜ್ಯವನ್ನು, ಭರತನು ಅನುಭವಿಸುವಂತೆಯೇ ಎಣಿಸಬೇಕಲ್ಲವೆ!" ಎಂದಳು. ಈ ಮಾತನ್ನು ಕೇಳಿ ಮಂಥರೆಗೆ ಮತ್ತಷ್ಟು ದುಃಖವು ಹೆಚ್ಚಿತು. ಆ ದುಃಖವನ್ನು ತಡೆಯಲಾರದೆ, ಬಿಸಿಬಿಸಿಯಾಗಿ ನಿಟ್ಟುಸಿರನ್ನು ಬಿಡುತ್ತಾ ಪುನಃ ಕೈಕೇಯಿಯನ್ನು ಕುರಿತು "ಅಯ್ಯೋ! ಇನ್ನೂ ನಿನಗೆ ವಿವೇಕವು ಹುಟ್ಟಲಿಲ್ಲ? ದೊಡ್ಡ ಅನರ್ಥಗಳನ್ನೇ ಇಷ್ಟಾರ್ಥಗಳನ್ನಾಗಿ ತಿಳಿದಿರುವೆಯಲ್ಲಾ! ನಿನ್ನ ಮೌಢ್ಯವನ್ನೇನೆಂದು ಹೇಳಲಿ! ಭರತನು ರಾಜ್ಯಭ್ರಷ್ಟನಾಗಿ ಕಾಡುಪಾಲಾಗುವ ವ್ಯಸನವೊಂದು; ನೀನು ರಾಜಭೋಗಗಳೆಲ್ಲವನ್ನೂ ಬಿಟ್ಟು ಸವತಿಗೆ ಊಳಿಗವನ್ನು ಮಾಡಬೇಕಾದ ಮಹಾಪಿಪತ್ತೊಂದು; ಇವೆಲ್ಲವೂ ಅಪಾರವಾದ ಸಮುದ್ರದಂತೆ ನಿನ್ನನ್ನು ಇದಿರುನೋಡುತ್ತಿರುವುವು. ಅಂತಹ ದುಃಖಸಮುದ್ರದಲ್ಲಿ ನೀನು ಮುಳುಗಿದಮೇಲೆ, ಎದ್ದು ಬರುವ ಬಗೆ ಹೇಗೆ? ನೂರಾರುವರ್ಷಗಳ ಮೇಲಾದರೂ ಭರತನಿಗೆ ರಾಜ್ಯವುಬರುವುದೆಂಬ ಆಶೋತ್ತರವು ನಿನಗಿರುವಂತಿದೆ! ಈ ಹುಚ್ಚುತನವನ್ನು ಬಿಡು! ರಾಮನು ಈಗ ರಾಜನಾಗಿಬಿಟ್ಟರೆ, ಆರಾಜ್ಯವು ಅವನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗಲ್ಲದೆ ಭರತನಿಗೆ ಸಿಕ್ಕುವುದೆಂದರೇನು? ಭರತನ ಮಕ್ಕಳಿಗೆತಾನೇ ಆ ರಾಜ್ಯವು ಸೇರುವ ಬಗೆ ಹೇಗೆ? ಆದರಿಂದ ರಾಜವಂಶದಲ್ಲಿ ಭರತನ ಹೆಸರೇ ಇರದು! ಭರತನು ಇಲ್ಲಿಂದ ಮುಂದೆ ರಾಜವಂಶದಿಂದ ಬಹಿಷ್ಕೃತನಾದಂತೆಯೇ ತಿಳಿಯಬೇಕೇ ಹೊರತು ಮತ್ತೆ ಬೇರೆಯಲ್ಲ. ಒಬ್ಬ ರಾಜನಿಗೆ ಅನೇಕಪುತ್ರರು ಹುಟ್ಟಿದ್ದರೂ, ಆ ಮಕ್ಕಳೆಲ್ಲರಿಗೂ ರಾಜ್ಯದಲ್ಲಿ ಬಾಧ್ಯತೆಯಿರುವುದಿಲ್ಲ. ಅಥವಾ ಒಂದುವೇಳೆ ರಾಜ್ಯವನ್ನು ಎಲ್ಲರಿಗೂ ಹಂಚಿಕೊಟ್ಟರೆ, ಅದರಿಂದ ಅನೇಕವಿಧವಾದ ಅನರ್ಥಗಳುಂಟಾಗುವುವು. ಆದುದರಿಂದ ರಾಜರು ತಮಗೆ ಅನೇಕಪುತ್ರರಿದ್ದರೂ ತಮ್ಮ ಹಿರಿಯಮಗನಿಗೆ ರಾಜ್ಯವನ್ನು ಒಪ್ಪಿಸುವರೇಹೊರತು ಇತರರು ಎಷ್ಟೇ ಗುಣವಂತರಾಗಿದ್ದರೂ, ಅವರನ್ನು ರಾಜ್ಯಕ್ಕೆ ಅಧಿಕಾರಿಗಳ

ನ್ನಾಗಿ ಮಾಡಲಾರರು. ಆದುದರಿಂದ ನಿನ್ನ ಮಗನಿಗೆ ಇನ್ನುಮೇಲೆ ರಾಜ್ಯವು ಲಭಿಸುವುದೆಂಬ ಆಶೋತ್ತರವನ್ನೇ ಬಿಡು. ಅಯ್ಯೋ!ಯಾವಾಗಲೂ ಕಷ್ಟವನ್ನೇ ಕಂಡರಿಯದ ನಿನಗೂ ಇಂತಹ ದುರವಸ್ಥೆಯುಂಟಾಗಬಹುದೇ?‹‹ಭರತನಿಗೆ ರಾಜ್ಯವಿಲ್ಲದಿದ್ದರೂ ಇದ್ದಂತೆಯೇ" ಎಂದು ಹೇಳಿದೆಯಲ್ಲವೆ?ಹೌದು! ನಿನಗೆ ಎಲ್ಲಾಮಕ್ಕಳಮೇಲೆಯೂ ಸಮವಾದ ಪ್ರೀತಿಯಿರಬಹುದು. ಆದರೆ ನಿನ್ನ ಮಗನಿಗೆ ಬರುವ ಅನರ್ಥವನ್ನಾದರೂ ನೀನು ಯೋಚಿಸಬೇಡವೆ?ಹೇಗೂ ನಿನ್ನಮಗನು ರಾಜ್ಯಸುಖಗಳನ್ನೆಲ್ಲಾ ಬಿಟ್ಟು,ರಾಜವಂಶೀಯರ ಗಣನೆಗೆ ಬಾರದೆ ಅನಾಥನಾಗಿ ಅಲೆಯುವ ಕಾಲವು ಬಂದಿದೆ.‹‹ಹಿರಿಯ ಮಗನಾದ ರಾಮನಿರುವಾಗ ಭರತನಿಗೆ ರಾಜ್ಯವು ಹೇಗೆ ಸಿಕ್ಕುವುದು ?" ಎಂದು ನೀನು ಶಂಕಿಸಿದೆಯಲ್ಲವೆ.ಅದನ್ನು ಯೋಚಿಸಿಯೇ ನಾನೂ ಈಗ,ಭರತನಿಗೆ ರಾಜ್ಯವನ್ನು ಕೊಡಿಸುವುದಕ್ಕೆ ತಕ್ಕಉಪಾಯವನ್ನು ಮಾಡಬೇಕೆಂದು ಇಲ್ಲಿಗೆ ಬಂದೆನು. ಅದು ನಿನಗೆ ತಿಳಿಯದೇ ಹೋಯಿತಲ್ಲಾ! ಅಯ್ಯೋ!ನಿನ್ನ ಸವತಿಯ ಪುರೋವೃದ್ಧಿಯನ್ನು ಕೇಳಿ, ನನಗೆ ಪಾರಿತೋಷಿಕವನ್ನು ಕೊಡುವುದಕ್ಕೆ ಬಂದೆಯಲ್ಲಾ ! ನಿನ್ನ ವಿವೇಕವನ್ನೇನೆಂದು ಹೇಳಲಿ ! ಮುಖ್ಯವಾಗಿ ಒಂದು ವಿಷಯವನ್ನು ಹೇಳುವೆನು ಕೇಳು. ರಾಮನಿಗೆ ರಾಜ್ಯಪ್ರಾಪ್ತಿಯಾದೊಡನೆಯೇ, ಅವನು ಸಮಯವನ್ನು ನೋಡಿಕೊಂಡಿದ್ದು, ನಿನ್ನ ಮಗನಾದ ಭರತನನ್ನು ದೇಶಾಂತರಕ್ಕೋ, ಅಥವಾ ಲೋಕಾಂತರಕ್ಕೋ ಕಳುಹಿಸದೆ ಬಿಡನು!ಇದು ನಿಜವು! ರಾಮನು ಭರತನಿಗೆ ಅನರ್ಥಗಳನ್ನು ತಂದಿಡುವುದರಲ್ಲಿ ಸಂದೇಹವೇ ಇಲ್ಲ. ಅಯ್ಯೋ ಪಾಪವೆ ! ಸಣ್ಣ ಮಗುವಾದ ಆ ಭರತನನ್ನು , ಈ ಬಾಲ್ಯವಯಸ್ಸಿನಲ್ಲಿಯೇ ಮಾವನ ಮನೆಗೆ ಕಳುಹಿಸಿಬಿಟ್ಟೆಯಲ್ಲಾ ? ಅದರ ಫಲವೇ ಇದು ! ಲೋಕದಲ್ಲಿ ಸಾಮಾನ್ಯವಾಗಿ ವೃಕ್ಷಗಳೇ ಮೊದಲಾದ ಸ್ಥಾವರವರ್ಗಗಳುಕೂಡ, ತನಗೆ ಬಹಳ ಸನ್ನಿಹಿತವಾಗಿರುವುದರೊಡನೆ ಸೇರಿಕೊಳ್ಳುವುವು. ಹೀಗಿರುವಲ್ಲಿ ಸಚೇತನರಾದ ಮನುಷ್ಯರ ವಿಷಯವನ್ನು ಹೇಳತಕ್ಕುದೇನು ? ಯಾರಿಗೂ ಕೂಡಾಟದಿಂದ ಪ್ರೇಮವು ಹೆಚ್ಚುವುದೇನೋ ಸ್ವಾಭಾವಿಕವು!ಭರತನು ಒಂದುವೇಳೆ ಇಲ್ಲಿಯೇ ಇದ್ದಿದ್ದರೆ, ಸ್ವಲ್ಪಮಟ್ಟಿಗಾದರೂ ದಶರಥನ ಪ್ರೀತಿಯನ್ನು ಸಂಪಾದಿಸಬಹುದಾಗಿತ್ತು ! ಅನ್ಯಾಯವಾಗಿ ಆತನನ್ನು ನೀನೇ

ಕೆಡಿಸಿದಂತಾಯಿತು! ಅದೂ ಹೋಗಲಿ! ಶತ್ರುಘ್ನನನ್ನಾದರೂ ಇಲ್ಲಿರಿಸಿದೆಯಾ? ಅದೂ ಇಲ್ಲ! ಅವನಿಗೆ ಭರತನಲ್ಲಿ ನಿಜವಾದಪ್ರೇಮವುಂಟು. ಲಕ್ಷ್ಮಣನು ರಾಮನನ್ನಾಶ್ರಯಿಸಿರುವಂತೆ, ಶತ್ರುಘ್ನನು ಭರತನನ್ನೇ ಅನುಸರಿಸಿ ಹೊರಟುಹೋದನು. ಆ ಶತ್ರುಘ್ನನಾದರೂ ಇಲ್ಲಿಯೇ ಇದ್ದಿದ್ದರೆ ದಶರಥನ ಪ್ರೇಮಕ್ಕೆ ಸ್ವಲ್ಪಮಟ್ಟಿಗಾದರೂ ಭಾಗಿಯಾಗಿ, ಸಮಯಬಂದಾಗ ಭರತನಿಗೂ ಸಹಾಯಮಾಡಬಹುದಾಗಿತ್ತು. ಅದೂ ಇಲ್ಲದೆ ಹೋಯಿತು. ಕಾಡಿನಲ್ಲಿ ಕಟ್ಟಿಗೆಗಳನ್ನು ಕಡಿದು ಜೀವಿಸುವವನೊಬ್ಬನು, ಒಂದು ಮರವನ್ನು ಕಡಿಯುವುದಕ್ಕಾಗಿ ಅಲ್ಲಿಗೆ ಬಂದಾಗ, ಸುತ್ತಲಿದ್ದ ಮುಳ್ಳುಗಿಡಗಳೆಲ್ಲವೂ ಆ ಮರವನ್ನು ಸುತ್ತಿಕೊಂಡು, ಅದಕ್ಕೆ ಆ ಭಯವನ್ನು ತಪ್ಪಿಸಿತೆಂಬ ಕಥೆಯನ್ನಾದರೂ ಕೇಳಿ ತಿಳಿಯೆಯಾ? ಅದರಂತೆಯೇ ರಾಮಲಕ್ಷ್ಮಣರಿಬ್ಬರೂ ಒಬ್ಬರಿಗೊಬ್ಬರು ಬೆಂಬಲವಾಗಿ ಇತರರಿಗೆ ಸ್ವಲ್ಪವೂ ಅವಕಾಶಕೊಡದಂತಿರುವರು. ಅಶ್ವಿನಿದೇವತೆಗಳಿಗಿರುವಂತೆ ಅವರಿಬ್ಬರಿಗೂ ಇರುವ ಪರಸ್ಪರ ಪ್ರೇಮವು ಲೋಕಪ್ರಸಿದ್ಧವಾಗಿರುವುದು. ರಾಮನು ಲಕ್ಷ್ಮಣನಿಗೆ ಸ್ವಲ್ಪಮಾತ್ರವೂ ಕೇಡನ್ನು ಕೋರುವವನಲ್ಲ. ರಾಮನಿಂದ ಭರತನಿಗೆ ಕೇಡುಂಟಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ! ಆದುದೇನೋ ಆಯಿತು! ಈಗಲೂ ನಾನೊಂದುಪಾಯವನ್ನು ಹೇಳುವೆನು ಕೇಳು. ನಿನ್ನ ಮಗನನ್ನು ಈದೇಶದಲ್ಲಿಯೇ ಇರಿಸಬೇಡ! ಆತನನ್ನು ಈಗಲೇ ಕಾಡಿಗೆ ಕಳುಹಿಸಿಬಿಡುಮೇಲು! ಇಲ್ಲದಿದ್ದರೆ ಆತನಿಗೆ ಉಳಿಗಾಲವಿಲ್ಲ. ಈಗಲೂ ನಿನ್ನ ಮಗನು ಇನ್ನೂ ಕೆಲವು ಕಾಲಬದುಕಿರಬೇಕೆಂಬ ಆಸೆಯು ನಿನಗಿದ್ದರೆ, ಮಿಂಚಿಹೋದ ಕೆಲಸಕ್ಕೆ ಇದೇ ಮೇಲಾದ ಉಪಾಯವೆಂದು ನನಗೆ ತೋರಿರುವುದು. ಇದು ನಿನಗೂ ಶ್ರೇಯಸ್ಕರವು! ಆತನನ್ನು ಇಲ್ಲಿಗೆ ಪುನಃ ಬರಗೊಳಿಸದೆ, ಅಲ್ಲಿಂದ ಹಾಗೆಯೇ ಕಾಡಿಗೆ ಕಳುಹಿಸಿಬಿಡು! ಹಾಗೆ ಅವನನ್ನು ಕಾಡಿಗೆ ಕಳುಹಿಸುವುದು ನಿನಗೆ ಇಷ್ಟವಿಲ್ಲದಪಕ್ಷದಲ್ಲಿ, ಅವನಿಗೆ ರಾಜ್ಯವನ್ನಾದರೂ ಕೊಡಿಸುವ ಉಪಾಯವನ್ನು ಮಾಡು! ಭರತನು ತಂದೆಯ ಅನುಮತಿಯಿಂದ ರಾಜ್ಯವನ್ನು ಪಡೆದಾಗಮಾತ್ರವೇ, ನಿನಗೂ, ನಿನ್ನ ಬಂಧುವರ್ಗಕ್ಕೂ ಶ್ರೇಯಸ್ಸುಂಟು. ಮುಖ್ಯವಾಗಿ ಭರತನನ್ನು ರಾಮನ ಅಧೀನದಲ್ಲಿಮಾತ್ರ ಇರಿಸಬೇಡ. ಯಾವಾ

ಗಲೂ ಸುಖದಲ್ಲಿಯೇ ಬಳೆದು, ಕಷ್ಟವನ್ನೇ ಕಂಡರಿಯದ ಭರತ ನನ್ನು ಮತ್ತೊಬ್ಬರ ಅಧೀನದಲ್ಲಿಟ್ಟರೆ ಅವನಿಗೆ ಸುಖವೆಲ್ಲಿಯದು ? ಸವತಿಯ ಮಕ್ಕಳಲ್ಲಿ ಯಾರಿಗೂ ಪ್ರೇಮವು ಹುಟ್ಟದು. ಆದುದರಿಂದ ರಾಮನಿಗೆ ನಿನ್ನ ಮಗನು ಸಹಜಶತ್ರುವೆಂದೇ ತಿಳಿ! ರಾಜ್ಯಸಂಪತ್ತನ್ನು ಅನುಭವಿಸುತ್ತಿರುವ ರಾಮನ ವಶದಲ್ಲಿ ಅಸಹಾಯನಾದ ಭರತನು ಹೇಗೆ ಜೀವಿಸುವನು? ಕಾಡಿನಲ್ಲಿ ಸಿಂಹದಿಂದೋಡಿಸಲ್ಪಟ್ಟ ಆನೆಯ ಮರಿಯಂತೆ ನಿನ್ನ ಮಗನು ರಾಮನ ಕೈಕೆಳಗೆ ಸಿಕ್ಕಿ ನರಳಬೇಕಾಗುವುದು. ಅವನನ್ನು ಕಾಪಾಡುವ ಉಪಾಯವನ್ನು ಯೋಚಿಸು. ಇದಲ್ಲದೆ ಪೂರ್ವದಲ್ಲಿ ನೀನು ನಿನ್ನ ಸೌಭಾಗ್ಯದ ಮದದಿಂದ ನಿನ್ನ ಸವತಿಯಾದ ಕೌಸಲ್ಯೆಯನ್ನು ಅನೇಕವೇಳೆಗಳಲ್ಲಿ ತಿರಸ್ಕರಿಸಿರುವೆ! ಈಗ ಅವಳು ಅದನ್ನೇ ಮನಸ್ಸಿನಲ್ಲಿಟ್ಟುಕೊಂಡಿದ್ದು, ತನ್ನ ಮಗನಿಗೆ ಪಟ್ಟವಾದಮೇಲೆ ಹಗೆತೀರಿಸಿಕೊಳ್ಳದೆ ಬಿಡಳು! ಇದರಲ್ಲಿ ಸಂದೇಹವಿಲ್ಲ. ಅವಳು ನಿನ್ನ ಕೈಯಿಂದ ಊಳಿಗವನ್ನೇ ಮಾಡಿಸಿಕೊಳ್ಳುವಳು. ವಿಸ್ತಾರವಾದ ಸಮುದ್ರಗಳಿಂದಲೂ, ಪರ್ವತಗಳಿಂದಲೂ, ಪಟ್ಟಣಗಳಿಂದಲೂ, ಸಮೃದ್ಧವಾದ ಈ ಭೂಮಿಗೆ, ರಾಮನು ರಾಜನಾದೊಡನೆಯೇ, ನಿನಗೂ ನಿನ್ನ ಮಗನಿಗೂ ಅನೇಕವಿಧದಲ್ಲಿ ಹಾನಿಯೂ, ತಿರಸ್ಕಾರವೂ, ಉಂಟಾಗುವುದರಲ್ಲಿ ಸಂದೇಹವಿಲ್ಲ. ರಾಮನು ರಾಜನಾದರೆ, ಭರತನ ಹಣೆಯ ಬರಹವು ಅಲ್ಲಿಗೆ ತೀರಿತು! ಆದುದರಿಂದ ಎಲೆ ಕೈಕೇಯಿ ! ನೀನೇ ಚೆನ್ನಾಗಿ ಆಲೋಚಿಸಿ ನೋಡು. ಭರತನಿಗೆ ರಾಜ್ಯಪ್ರಾಪ್ತಿಯಾಗುವುದಕ್ಕೂ, ಅವನ ಆ ಜನ್ಮಶತ್ರುವಾದ ರಾಮನನ್ನು ದೇಶದಿಂದ ಹೊರಡಿಸುವುದಕ್ಕೂ, ತಕ್ಕ ಉಪಾಯವನ್ನು ಈಗಲೇ ಯೋಚಿಸು” ಎಂದಳು. ಇಲ್ಲಿಗೆ ಎಂಟನೆಯ ಸರ್ಗವು.

---

## ಕೈಕೇಯಿಯು ಮಂಥರೆಯ ದುರ್ಬೋಧನೆಗೆ ಒಳಗಾದುದು.

ಮಂಥರೆಯ ಮಾತನ್ನು ಕೇಳಿ ಕೈಕೇಯಿಗೆ ಮನಸ್ಸಿನಲ್ಲಿ ಸ್ವಲ್ಪ ಸ್ವಲ್ಪವಾಗಿ ಕೋಪವು ಅಂಕುರಿಸುತ್ತಬಂದಿತು. “ಆಃ ನಾನು ನನ್ನ ಸವತಿಗೆ ದಾಸಿಯಾಗಿರಬೇಕಾದ ಸಂಭವವು ಬಂದರೂ ಬರಬಹುದು” ಎಂದು ಯೋಚಿಸಿ, ಕೊನೆಕೊನೆಗೆ ಆ ಕೋಪವೇ ಹೆಚ್ಚುತ್ತಿರಲು, ಕೆಂಪಾದ ಮುಖವುಳ್ಳ

ವಳಾಗಿ, ತಡೆಯಲಾರದ ದುಃಖದಿಂದ, ಉದ್ಧವಾದ ನಿಟ್ಟುಸಿರನ್ನು ಬಿಟ್ಟು, ಮಂಥರೆಯನ್ನು ಕುರಿತು ''ಎಲೆ ಮಂಥರೆ! ನೀನು ಹೇಳಿದುದು ನಿಜ! ಈಗಲೇ ರಾಮನನ್ನು ಕಾಡಿಗೆ ಕಳುಹಿಸುವ ಪ್ರಯತ್ನವನ್ನು ಮಾಡಬೇಕಾದುದೇ ಸಹಜವು. ಹೇಗಾದರೂ ಆ ಕೆಲಸವನ್ನು ಮಾಡಿಬಿಡುವೆನು. ಭರತನಿಗೆ ಈಗಲೇ ಪಟ್ಟಾಭಿಷೇಕವನ್ನೂ ಮಾಡಿಸುವೆನು. ಎಲೆ ಮಂಥರೆ ! ಈಗ ಅದಕ್ಕೆ ಏನುಪಾಯವನ್ನು ಮಾಡಬಹುದು ? ರಾಮನಿಗೆ ರಾಜ್ಯವನ್ನು ತಪ್ಪಿಸಿ, ಭರತನಿಗೆ ಅಭಿಷೇಕಮಾಡಿಸುವುದಕ್ಕೆ ತಕ್ಕ ಯುಕ್ತಿಯೇನಾದರೂ ನಿನಗೆ ತಿಳಿದಿದ್ದರೆ ಹೇಳು" ಎಂದಳು. ಇದನ್ನು ಕೇಳಿ ಪಾಪಬುದ್ಧಿಯುಳ್ಳ ಆ ಮಂಥರೆಯು, ರಾಮನ ಅಭಿಷೇಕವನ್ನು ತಪ್ಪಿಸುವುದಕ್ಕೆ ಉಪಾಯವಾವುದೆಂದು ಯೋಚಿಸಿ, ''ಭಲೆ! ಅಮ್ಮ ಕೈಕೇಯಿ! ಭರತನಿಗೆ ರಾಜ್ಯವನ್ನು ಕೊಡಿಸುವುದಕ್ಕೆ ಒಂದುಪಾಯವುಂಟು.ಅದನ್ನು ಈಗಲೇ ಹೇಳುವೆನು ಕೇಳು! ಇದೇನು! ನಿನಗೆ ಜ್ಞಾಪ್ತಿಯಿಲ್ಲವೆ? ಅಥವಾ ಜ್ಞಾಪ್ತಿಯಿದ್ದೂ ನನ್ನ ಬಾಯಿಯಿಂದಲೇ ಕೇಳಬೇಕೆಂದು ಮರೆಸಿಟ್ಟಿರುವೆಯೋ? ಹಾಗೆ ನನ್ನ ಬಾಯಿಂದಲೇ ಕೇಳಬೇಕೆಂಬ ಆಸೆಯು ನಿನಗಿದ್ದಪಕ್ಷದಲ್ಲಿ,ನಾನೇ ಹೇಳುವೆನು ಕೇಳು! ಆಮೇಲೆ ನಿನ್ನ ಆಲೋಚನೆಯಿದ್ದಂತೆ ನಡೆಸು"ಎಂದಳು. ಇದನ್ನು ಕೇಳಿ ಕೈಕೇಯಿಯು,ಆದರದಿಂದ ಸ್ವಲ್ಪ ಮೇಲಕ್ಕೆ ಎದ್ದು,''ಎಲೆ ಮಂಥರೆ! ರಾಮನಿಗೆ ರಾಜ್ಯವನ್ನು ತಪ್ಪಿಸಿ ಭರತನಿಗೆ ಕೊಡಿಸುವುದಕ್ಕೆ ತಕ್ಕ ಉಪಾಯವೇನು ?" ಎಂದಳು. ಈ ಮಾತನ್ನು ಕೇಳಿ ಪಾಪಬುದ್ಧಿಯುಳ್ಳ ಆ ಗೂನಿಯು, ರಾಮನ ಶ್ರೇಯಸ್ಸಿಗೆ ವಿಘಾತವನ್ನುಂಟುಮಾಡಬೇಕೆಂಬುದನ್ನೇ ದೃಢಸಂಕಲ್ಪವಾಗಿಟ್ಟುಕೊಂಡು, ಕೈಕೇಯಿಯನ್ನು ಕುರಿತು ''ಎಲೆ ದೇವಿ ! ಹಿಂದೆ ದೇವಾಸುರಯುದ್ಧದಲ್ಲಿ ನಿನ್ನ ಪತಿಯಾದ ದಶರಥನು,ಇಂದ್ರನ ಸಹಾಯಕ್ಕಾಗಿ ಹೊರಟಾಗ, ಅನೇಕರಾಜರೊಡನೆ ನಿನ್ನನ್ನೂ ಸಂಗಡ ಕರೆದುಕೊಂಡು ಹೋಗಲಿಲ್ಲವೆ ? ಹೀಗೆ ಸಪರಿವಾರನಾಗಿ ದಕ್ಷಿಣದಿಕ್ಕಿಗೆ ಹೊರಟು,ದಂಡಕಾರಣ್ಯವನ್ನು ಸೇರಿ,ಅಲ್ಲಿ ತಿಮಿಧ್ವಜನು ಆಳುತಿದ್ದ ವೈಜಯಂತವೆಂಬ ಪಟ್ಟಣವನ್ನು ಸೇರಲಿಲ್ಲವೆ ಆ ತಿಮಿಧ್ವಜನೆಂಬವನು ಅನೇಕಮಾಯೆಗಳನ್ನು ತಿಳಿದ ದೊಡ್ಡರಾಕ್ಷಸನು ! ಆತನಿಗೆ ಶಂಬರಾಸುರನೆಂದೂ ಹೆಸರು. ಅವನು ಅನೇಕಾವರ್ತಿ ದೇವತೆಗಳೊಡನೆ ಯುದ್ಧ

ಮಾಡಿ, ಅವರೆಲ್ಲರನ್ನೂ ಜಯಿಸಿ, ಕೊನೆಗೆ ಇಂದ್ರನೊಡನೆಯೂ ಯುದ್ಧಕ್ಕೆ ನಿಂತನು. ಈ ದೊಡ್ಡಯುದ್ಧದಲ್ಲಿ, ಬಾಣಗಳಿಂದ ಹೊಡೆಯಲ್ಪಟ್ಟವರೂ, ಖಡ್ಗಾದ್ಯಾಯುಧಗಳಿಂದ ಕತ್ತರಿಸಲ್ಪಟ್ಟವರೂ, ರಾತ್ರಿಯಲ್ಲಿ ತಮ್ಮತಮ್ಮ ಬಿಡಾರಗಳೊಳಗೆ ಮಲಗಿರುವಾಗ, ಆ ರಾಕ್ಷಸನ ಕಡೆಯವರು ಬಂದು, ಅಲ್ಲಿಯೂ ಅವರನ್ನು ಕೊಲ್ಲುತ್ತಿದ್ದರು. ಈ ಸಂದರ್ಭದಲ್ಲಿ ನಿನ್ನಪತಿಯಾದ ದಶರಥನು, ಅವರೊಡನೆ ಯುದ್ಧಕ್ಕೆ ನಿಂತನು. ಈ ಯುದ್ಧಕಾಲದಲ್ಲಿ ರಾಕ್ಷಸರೆಲ್ಲರೂ ಒಟ್ಟುಗೂಡಿ ಆತನ ಮೈಯೆಲ್ಲವೂ ಜರ್ಝರಿತವಾಗುವಂತೆ, ನಾನಾವಿಧಶಸ್ತ್ರಾಸ್ತ್ರಗಳಿಂದ ಗಾಯಪಡಿಸಿದರು. ಕೊನೆಗೆ ದಶರಥನು ಮೂರ್ಛೆಬಿದ್ದು ರಥದಮೇಲೆಯೇ ಮಲಗಿದನು. ಆಗ ನೀನೇ ಆತನಿಗೆ ಸಾರಥ್ಯವನ್ನು ಮಾಡುತ್ತಿದ್ದವಳಾದುದರಿಂದ, ಮೂರ್ಛಿತನಾಗಿದ್ದ ಆ ದಶರಥನನ್ನು ಯುದ್ಧಭೂಮಿಯಿಂದ ತಪ್ಪಿಸಿ ಕರೆದುಕೊಂಡುಹೋಗಿ, ಆತನಿಗೆ ಶೈತ್ಯೋಪಚಾರಗಳನ್ನು ಮಾಡುತಿದ್ದೆ! ಅಲ್ಲಿಗೂ ರಾಕ್ಷಸರು ಬೆನ್ನಟ್ಟಿ ಬಂದು, ಆತನಮೇಲೆ ಬಾಣಗಳನ್ನು ಪ್ರಯೋಗಿಸುವುದಕ್ಕೆ ತೊಡಗಿದರು. ಅದನ್ನೂ ನೀನು ತಪ್ಪಿಸಿ, ರಥವನ್ನು ಬೇರೊಂದುಕಡೆಗೆ ತಿರುಗಿಸಿ, ನಿನ್ನ ಪತಿಯ ಪ್ರಾಣರಕ್ಷಣೆಯನ್ನು ಮಾಡಿದೆ! ‹ಎಲೆ ಮಂಗಳಾಂಗಿ! ಹೀಗೆ ನೀನು ಎರಡಾವರ್ತಿಯೂ ಆತನಿಗೆ ಸಂಭವಿಸಿದ ಅಪಮೃತ್ಯುವನ್ನು ತಪ್ಪಿಸಿದುದಕ್ಕಾಗಿ, ಅವನು ನಿನ್ನಲ್ಲಿ ಪ್ರಸನ್ನನಾಗಿ, ಎರಡುವರಗಳನ್ನು ಕೇಳಿಕೊಳ್ಳುವಹಾಗೆ ನಿನಗೆ ಹೇಳಿದ್ದನು. ಆಗ ನೀನು ಆ ವರಗಳನ್ನು ಅವಶ್ಯವಿದ್ದಾಗ ಕೇಳಿ ತೆಗೆದುಕೊಳ್ಳುವುದಾಗಿ ಹೇಳಿರುವೆ! ಅದಕ್ಕವನೂ ಹಾಗೆಯೇ ಆಗಲೆಂದು ಒಪ್ಪಿಕೊಂಡಿರುವನು. ಈ ವಿಷಯವೆಲ್ಲವನ್ನೂ ನೀನೇ ನನಗೆ ಹಿಂದೆ ಯಾವಾಗಲೋ ಒಮ್ಮೆ ಹೇಳಿರುವೆ. ನಾನುಬೇರೆ ಇದನ್ನು ಕಣ್ಣಾರೆ ನೋಡಿದವಳಲ್ಲ. ನಿನ್ನಲ್ಲಿ ನನಗಿರುವ ಪ್ರೇಮಾತಿಶಯದಿಂದ ಈಗಲೂ ಮರೆಯದೆ ಸ್ಮರಣೆಯಲ್ಲಿಟ್ಟುಕೊಂಡಿರುವೆನು. ಈಗ ದಶರಥನು ರಾಮಾಭಿಷೇಕಕ್ಕಾಗಿ ಬೇಕಾದ ಸನ್ನಾಹಗಳೆಲ್ಲವನ್ನೂ ಮಾಡಿಕೊಂಡಿರುವನು. ಆ ಪ್ರಯತ್ನವನ್ನು ನೀನು ಇದರಿಂದ ತಪ್ಪಿಸಬಹುದು. ಈಗ ಆ ಎರಡುವರಗಳನ್ನೂ ಯಾಚಿಸು! ಅವುಗಳಲ್ಲಿ ಒಂದಕ್ಕೆ ಭರತನಿಗೆ ಅಭಿಷೇಕಮಾಡಬೇಕೆಂದೂ, ಮತ್ತೊಂದಕ್ಕೆ ರಾಮ

ನನ್ನು ಹದಿನಾಲ್ಕುವರ್ಷಗಳವರೆಗೆ ಕಾಡಿಗೆ ಕಳುಹಿಸಬೇಕೆಂದೂ ನಿನ್ನಗಂಡ ನನ್ನು ಕೇಳು! ರಾಮನನ್ನು ದೇಶಭ್ರಷ್ಟನನ್ನಾಗಿ ಮಾಡಿಬಿಟ್ಟರೆ, ಅಷ್ಟ ರೊಳಗಾಗಿ ಪ್ರಜೆಗಳಿಗೆ ನಿನ್ನ ಮಗನಾದ ಭರತನಮೇಲೆ ಸಂಪೂರ್ಣವಾದ ಅನುರಾಗವು ಬೇರೂರುವುದು. ಆಮೇಲೆ ರಾಮನು ಹಿಂತಿರುಗಿ ಬಂದು ರಾಜ್ಯ ಕ್ಕಾಗಿ ಎಷ್ಟುಪಾಡುಪಟ್ಟರೂ,ಪ್ರಜೆಗಳಿಗೆ ಆತನಲ್ಲಿ ಅನುರಾಗವು ಹುಟ್ಟದು. ಅವನ ಪ್ರಯತ್ನವೆಲ್ಲವೂ ವಿಫಲವಾಗಿ,ಭರತನಿಗೇ ರಾಜ್ಯವು ಸ್ಥಿರಪಡುವುದು. ನೀನು ಕೇಳಬೇಕಾದ ವರಗಳೇನೆಂಬುದನ್ನು ಮಾತ್ರ ಈಗ ತಿಳಿಸಿದೆನು ಈಪ್ರ ಯತ್ನವನ್ನು ಕೈಗೂಡಿಸಿಕೊಳ್ಳುವುದಕ್ಕೆಬೇರೊಂದುದಾರಿಯನ್ನು ಸೂಚಿಸು ವೆನು ಕೇಳು!ನೀನು ಈಗಲೇ ಬಹುಕೋಪಗೊಂಡವಳಂತೆ ನಟಿಸುತ್ತ, *ಕೋ ಪಗೃಹಕ್ಕೆ ಹೋಗಿ,ಕೊಳೆಬಟ್ಟೆಯನ್ನುಟ್ಟು, ಬರೀನೆಲದಮೇಲೆ ಮಲಗಿಬಿಡು! ದಶರಥನು ನಿನ್ನಬಳಿಗೆ ಬಂದಾಗ,ಮಿತಿಮೀರಿದ ದುಃಖವನ್ನು ತೋರಿಸುತ್ತಿರು! ಆತನನ್ನು ಕಣ್ಣೆತ್ತಿಯೂ ನೋಡಬೇಡ. ಆತನಿಗೆ ಮುಖಕೊಟ್ಟು ಮಾತ ನಾಡಬೇಡ. ಸ್ವಾಭಾವಿಕವಾಗಿ ನಿನ್ನ ಗಂಡನಿಗೆ ಇತರಪತ್ನಿಯರಲ್ಲಿರುವುದ ಕ್ಕಿಂತಲೂ ನಿನ್ನಲ್ಲಿ ಹೆಚ್ಚುಪ್ರೀತಿಯಿರುವುದೇನೋ ನಿಜವು. ಆದುದರಿಂದ ನೀನೇನುಮಾಡಿದರೂ ನಿನ್ನಲ್ಲಿ ಅವನಿಗೆ ಕೋಪವುಂಟಾಗದು. ಆತನು ನಿನ್ನ ಸಮೀಪಕ್ಕೆ ಬಂದೊಡನೆಯೇ ಗಟ್ಟಿಯಾಗಿ ಅಳುವುದಕ್ಕಾರಂಭಿಸು! ನಿನ್ನಲ್ಲಿ ಆತನಿಗಿರುವ ಪ್ರೀತಿಯನ್ನು ನೋಡಿದರೆ,ನಿನಗಾಗಿ ಅವನು ಅಗ್ನಿಪ್ರವೇ ಶವನ್ನು ಮಾಡುವುದಕ್ಕೂ ಹಿಂಜರಿಯುವವನಲ್ಲ. ನಿನ್ನಲ್ಲಿ ಆತನಿಗೆ ಕೋಪವೆಂ ಬುದು ಎಂದಿಗೂ ಹುಟ್ಟದು. ನಿನ್ನ ಮಾತನ್ನು ಸ್ವಲ್ಪವೂ ಮೀರತಕ್ಕವನಲ್ಲ. ಆತನು ನಿನ್ನ ಕೋಪವನ್ನು ನೋಡಿ ಸ್ವಲ್ಪವೂ ಸಹಿಸಲಾರನು. ನಿನ್ನನ್ನು ಸಂತೋಷಪಡಿಸುವುದಕ್ಕಾಗಿ ತನ್ನ ಪ್ರಾಣವನ್ನಾದರೂ ಬಿಟ್ಟುಬಿಡು ವನು. ಎಲೆ ಮಂದಬುದ್ಧಿಯುಳ್ಳವಳೆ ! ನಿನ್ನ ಶಕ್ತಿಯನ್ನೇ ನೀನರಿಯೆ ! ರಾಜನು ನಿನ್ನನ್ನು ಸಮಾಧಾನಪಡಿಸುವುದಕ್ಕಾಗಿ, ಬೇಕಾದಷ್ಟುರತ್ನಾಭರಣ ಗಳನ್ನೂ, ಸುವರ್ಣಗಳನ್ನೂ,ಇನ್ನೂ ನಾನಾವಿಧಗಳಾದ ಉತ್ತಮಪದಾರ್ಥ

* ಕೋಪಗೃಹವೆಂದರೆ, ಪ್ರಣಯಕಲಹಾದಿಗಳಿಂದ ಕೋಪಗೊಂಡವರು ಹೋಗಿ ವಿವಿಕ್ತವಾಗಿ ಮಲಗುವ ಪ್ರತ್ಯೇಕವಾದ ಮನೆ.

ಗಳನ್ನೂ ಕೊಡುವುದಕ್ಕೆ ಬರುವನು. ಅದರಲ್ಲಿ ನೀನು ಸ್ವಲ್ಪವೂ ಆಸೆಯನ್ನು ತೋರಿಸಕೂಡದು. ಹಿಂದೆ ನಡೆದ ದೇವಾಸುರಯುದ್ಧದಲ್ಲಿ,ಆತನು ನಿನಗೆ ಕೊಟ್ಟಿರುವ ವರಗಳನ್ನೇ ಈಗ ಕೊಡಬೇಕೆಂದು ಕೇಳು. ಈ ಅವಕಾಶವನ್ನು ತಪ್ಪಿಸಿಕೊಳ್ಳಬೇಡ! ನಿನ್ನ ಕೋರಿಕೆಯು ಕೈಗೂಡುವಂತೆ ಪ್ರಯತ್ನಿಸು! ದಶರಥನು ಯಾವಾಗ ತಾನಾಗಿ ನಿನ್ನ ಸಮೀಪಕ್ಕೆ ಬಂದು, ತನ್ನ ಕೈಯಿಂಪಲೇ ನಿನ್ನನ್ನು ಎತ್ತಿ ಕುಳ್ಳಿರಿಸಿ, ಆ ವರಗಳನ್ನು ಕೊಡುವುದಾಗಿ ಸತ್ಯಮಾಡಿಕೊಡುವನೋ, ಆಗಲೇ ನೀನು ಏಳಬೇಕು! ಅವನ ಬಾಯಿಂದಲೇ ಅವನನ್ನು ಕಟ್ಟಿಹಾಕಿ,ಆಮೇಲೆ ಆ ಎರಡುವರಗಳಲ್ಲಿ ಒಂದಕ್ಕೆ ರಾಮನನ್ನು ಹದಿನಾಲ್ಕುವರ್ಷಗಳವರೆಗೆ ಕಾಡಿಗೆ ಕಳುಹಿಸಬೇಕೆಂದೂ, ಮತ್ತೊಂದಕ್ಕೆ ಭರತನಿಗೆ ರಾಜ್ಯವನ್ನು ಕೊಡಿಸಬೇಕೆಂದೂ ಕೇಳು! ಹೀಗೆ ರಾಮನನ್ನು ಹದಿನಾಲ್ಕುವರ್ಷಗಳವರೆಗೆ ಕಾಡಿನಲ್ಲಿರುವಹಾಗೆ ಮಾಡಿಬಿಟ್ಟರೆ,ಅಷ್ಟರೊಳಗಾಗಿ ಭರತನಿಗೆ ರಾಜ್ಯವು ಸ್ಥಿರಪಟ್ಟುಹೋಗುವುದು. ಪ್ರಜೆಗಳಿಗೂ ಆತನಲ್ಲಿ ಪೂರ್ಣವಾದ ಪ್ರೇಮವುಂಟಾಗಿಬಿಡುವುದು. ಸೈನ್ಯಗಳೆಲ್ಲವೂ ಆತನಿಗೆ ವಶವಾಗುವುವು. ಆಮೇಲೆ ರಾಮನು ಹಿಂತಿರುಗಿಬಂದರೂ ಆತನಿಗೆ ರಾಜ್ಯವು ಸಿಕ್ಕದು. ಮುಂದಕ್ಕೂ ಭರತನೇ ರಾಜಾಧಿರಾಜನಾಗಿ ರಾಜ್ಯವನ್ನಾಳುತ್ತಿರುವನು. ರಾಮನು ಪುನಃ ಹಿಂತಿರುಗಿ ಕಾಡಿಗೇ ಹೋಗಬೇಕಾಗುವುದು. ಎಲೆ ಕೈಕೇಯಿ ! ಮುಖ್ಯವಾಗಿ ಈ ಒಂದಂಶವನ್ನುಮಾತ್ರ ಮನಸ್ಸಿನಲ್ಲಿ ಚೆನ್ನಾಗಿ ನೆನಪಿಟ್ಟುಕೊಂಡಿರು! ಭರತನಿಗೆ ಪಟ್ಟವನ್ನು ಕಟ್ಟಿಸುವುದರಿಂದಮಾತ್ರವೇ ಪ್ರಯೋಜನವಿಲ್ಲ. ಮೊದಲು ರಾಮನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿಸಿದಹೊರತು, ಭರತನಿಗೆ ರಾಜ್ಯವು ಸ್ಥಿರಪಡದು. ಅವನ ಕೋರಿಕೆಗಳೆಲ್ಲವೂ ವಿಫಲವಾಗುವುವು. ರಾಮನನ್ನು ಮೊದಲು ಕಾಡಿಗೆ ಓಡಿಸಿಬಿಟ್ಟರೆ, ಆಮೇಲೆ ಆತನ ಹೆಸರೇ ಇರದು ! * ಆ ರಾಮನು ಇನ್ನು ಮುಂದೆ ರಾಮ

---

* ಇಲ್ಲಿ''ರಾಮೋ ರಾಮೋ ಭವಿಷ್ಯತಿ''ಎಂದು ಮೂಲವು. ರಾಮನು''ರಾಮನೊಬ್ಬನೇ ಆಗುವನು''ಎಂದರ್ಥವು. ರಾಮನು ಸಹಾಯಸಂಪತ್ತಿಲ್ಲದೆ ಕೇವಲ ಏಕಾಕಿಯಾಗಿಯೇ ನಿಲ್ಲಬೇಕಾದುದೆಂದು ಭಾವವು. ಅಥವಾ "ರಮಯತೀತಿ ರಾಮಃ" ಎಂಬ ವ್ಯುತ್ಪತ್ತಿಯಿಂದ "ರಾಮಃ ಅರಾಮಃ ಭವಿಷ್ಯತಿ" ಎಂದು ಪದಚ್ಛೇದವನ್ನು ಮಾಡಿ, ಈ

ನೊಬ್ಬನಾಗಿಯೇ ಇರಬೇಕೇಹೊರತು, ಅವನನ್ನು ಕಣ್ಣೆತ್ತಿಯೂ ನೋಡುವವರಿಲ್ಲ. ಆಮೇಲೆ ರಾಜ್ಯವು ನಿಷ್ಕಂಟಕವಾಗುವುದರಿಂದ, ಭರತನು ರಾಜಾಧಿರಾಜನಾಗಿ ನೆಮ್ಮದಿಯಿಂದಿರಬಹುದು. ನಿನ್ನ ಮಗನೇನು ಸಾಮಾನ್ಯನೆಂದು ತಿಳಿಯಬೇಡ! ಬಹಳಬುದ್ಧಿವಂತನು! ರಾಮನು ಕಾಡಿನಿಂದ ಹಿಂತಿರುಗಿಬರುವಷ್ಟರೊಳಗಾಗಿ, ಅವನು ತನ್ನ ಮೂಲಬಲವನ್ನೂ, ಮಿತ್ರಬಲವನ್ನೂ ಹೆಚ್ಚಿಸಿಕೊಂಡು, ಪೂರ್ಣವಾದ ಪ್ರಜಾನುರಾಗವನ್ನೂ ಸಂಪಾದಿಸಿ, ರಾಜ್ಯದಲ್ಲಿ ಸ್ಥಿರಪಡುವನು. ನಿನ್ನ ಕೋರಿಕೆಗಳನ್ನು ತೀರಿಸಿಕೊಳ್ಳುವುದಕ್ಕೆ ಇದಕ್ಕಿಂತಲೂ ಬೇರೆ ಅವಕಾಶವು ಸಿಕ್ಕದು. ಈಗ ನೀನು ಭಯದಿಂದ ಹಿಂಜರಿದರೆ,ಕೆಲಸವೇ ಕೆಡುವುದು. ಸ್ವಲ್ಪವೂ ಭಯಪಡದೆ ರಾಮನನ್ನು ಕಾಡಿಗೆ ಕಳುಹಿಸಿ, ಭರತನಿಗೇ ಪಟ್ಟವನ್ನು ಕಟ್ಟಬೇಕೆಂದು ಧೈರ್ಯವಾಗಿ ಹಠಹಿಡಿದು, ಈಗ ರಾಜನು ಮಾಡಿರುವ ಪ್ರಯತ್ನವನ್ನು ತಪ್ಪಿಸು” ಎಂದಳು. ಹೀಗೆ ಮಂಥರೆಯು ಕೈಕೇಯಿಗೆ ಪ್ರತಿಕೂಲವಾದ ಕಾರ್ಯಗಳನ್ನೇ ಅನುಕೂಲಗಳಾಗಿರುವಂತೆ ತಿಳಿಸಿ,ದುರ್ಬೋಧನೆಯನ್ನು ಮಾಡಲು, ಅವೆಲ್ಲವನ್ನೂ ಕೈಕೇಯಿಯು ನಿಜವೆಂದೇ ಗ್ರಹಿಸಿದಳು. ಅವಳ ಮನಸ್ಸು ಸಂಪೂರ್ಣವಾಗಿ ಕದಲಿತು.ಕೈಕೇಯಿಗೆ ಮಂಥರೆಯ ಮಾತಿನಲ್ಲಿಯೇ ಪೂರ್ಣವಾದ ನಂಬಿಕೆಯುಂಟಾಯಿತು. ಮಂಥರೆಯು ತೋರಿಸಿಕೊಟ್ಟ ಉಪಾಯಕ್ಕಾಗಿ ಅವಳ ಮನಸ್ಸಿನಲ್ಲಿ ಸಂತೋಷವೂ ಆಶ್ಚರ್ಯವೂ ನೆಲೆಗೊಂಡಿತು. ಇವಳು ಹಿಂದೆ ಯಾವಾಗಲೂ ಅನುಚಿತವಾದ ಮಾರ್ಗಕ್ಕೆ ಪ್ರವರ್ತಿಸಿದವಳಲ್ಲ. ಯಾವ ವಿಷಯವನ್ನಾದರೂ ಯುಕ್ತಾಯುಕ್ತವಿವೇಚನೆಯಿಂದ ಚೆನ್ನಾಗಿ ಪರೀಕ್ಷಿಸಿನೋಡದೆ ಬಿಡಳು.ಅಂತವಳು ಈಗ ಆ ಗೂನಿಯ ದುರ್ಬೋಧನೆಗೊಳಪಟ್ಟು, ಬೆದರಿದ ಕುದುರೆಯಂತೆ ತಪ್ಪುದಾರಿಯನ್ನು ಹಿಡಿದೋಡುವುದಕ್ಕೆ ಆರಂಭಿಸಿದಳು!ಹೀಗೆ ತನಗೆ ಪ್ರತಿಕೂಲವಾದ ಕಾರ್ಯವನ್ನೇ ಅನುಕೂಲವೆಂಬ ಭ್ರಾಂತಿಯಿಂದ,ಮಂಥರೆಯ ಮಾತಿಗೆ ಮರುಳಾಗಿ, ಸಂತೋಷಗೊಂಡು, ಅವಳನ್ನು ಕುರಿತು “ಎಲೆ ಮಂಥರೆ! ನಿನ್ನ ಮಹಿಮೆಯು ನನಗೆ ಇದುವರೆಗೆ ತಿಳಿಯದೆಹೋಯಿತು ! ನೀನು ಹೇಳಿದ ಅತ್ಯುತ್ತ

---

ತನು ಬಹುಕಾಲದವರೆಗೆ ಕಾಡಿನಲ್ಲಿಯೇ ಇದ್ದುಬಿಡುವುದರಿಂದ, ಈಗಿನಂತೆ ಪ್ರಜೆಗಳ ಮನೋರಂಜಕನಾಗಿರಲಾರನೆಂದೂ ಅರ್ಥಾಂತರಗಳನ್ನು ಹೇಳುವರು.

ಮವಾದ ಬುದ್ಧಿವಾದಗಳೆಲ್ಲವನ್ನೂ ನಾನು ವಿಪರೀತವಾಗಿ ಎಣಿಸಿದ್ದೆನು. ಪ್ರಾಯಕವಾಗಿ ಕುಬ್ಜರಾದವರು ಬಹಳ ತಂತ್ರಿಗಳೆಂದು ಲೋಕಪ್ರಸಿದ್ಧಿಯುಂಟು.ಅಂತವರಲ್ಲಿಯೂ ನಿನ್ನನ್ನು ಮೀರಿಸಿದವರೊಬ್ಬರೂ ಇಲ್ಲ! ನಿನ್ನಬುದ್ಧಿಯೇ ಬುದ್ಧಿ!ಪೂರ್ವಾಪರಗಳನ್ನು ವಿಚಾರಿಸಿ ಕಾರ್ಯಗಳನ್ನು ನಿಶ್ಚಯಿಸುವುದರಲ್ಲಿ ನಿನ್ನ ಸಾಮರ್ಥ್ಯವು ಯಾರಿಗುಂಟು? ಎಲೆಸಖಿ! ನನಗೆ ಎಷ್ಟುಮಂದಿ ನಂಟರಿದ್ದರೇನು?ಎಷ್ಟು ಪರಿಜನರಿದ್ದರೇನು?ನೀನೊಬ್ಬಳೇ ನನಗೆ ನಿಜವಾಗಿಮೇಲನ್ನು ಕೋರುವವಳು.ನಿನಗೊಬ್ಬಳಿಗೆಮಾತ್ರವೇ ನನ್ನ ಕಾರ್ಯದಲ್ಲಿ ಸಂಪೂರ್ಣವಾದ ಅಕ್ಕರೆಯಿರುವುದು.ನನ್ನ ಭಾಗಕ್ಕೆ ನಿನ್ನನ್ನು ದೇವರಂತೆಯೇ ಎಣಿಸಬೇಕಾಗಿದೆ. ಈ ಸಮಯದಲ್ಲಿ ನೀನಿಲ್ಲದಿದ್ದರೆ, ರಾಜನು ರಾಮನಿಗೆ ಪಟ್ಟವನ್ನು ಕಟ್ಟಿ, ನನ್ನನ್ನು ಪೂರ್ಣವಾಗಿ ಕೆಡಿಸಿಯೇ ಬಿಡುತಿದ್ದನಲ್ಲವೆ! ಲೋಕದಲ್ಲಿ ಅಂಗಹೀನರಾಗಿಯೂ, ಕುರೂಪಿಗಳಾಗಿಯೂ ಇರುವವರು ಎಷ್ಟೋಮಂದಿಯುಂಟು. ಅಸಹ್ಯಕರವಾದ ಅವರರೂಪವು,ನೋಡವುದಕ್ಕೂ ಎಷ್ಟೋ ಭಯಂಕರವಾಗಿರುವುದು. ನಿನ್ನವಿಷಯವಾದರೋ ಹಾಗಲ್ಲ. ಗಾಳಿಯಿಂದ ಬಗ್ಗಿದ ತಾವರೆಬಳ್ಳಿಯಂತೆ, ಏನೋ ವಾತದೋಷದಿಂದ ನಿನ್ನ ಬೆನ್ನು ಸ್ವಲ್ಪ ಬಗ್ಗಿಹೋಗಿದ್ದರೂ, ನಿನಗೆ ಅದೂ ಒಂದು ಅಂದವಾಗಿಯೇ ಇರುವುದು. ನಿನ್ನ ಆಕಾರವು ನೋಡುವವರಿಗೆ ಎಷ್ಟೋ ರಮ್ಯವಾಗಿ ಕಾಣುವುದು. ಎಲೆ ಸುಂದರಾಂಗಿ! ನಿನ್ನ ಒಂದೊಂದು ಅವಯವದ ಸೌಂದರ್ಯವನ್ನೂ ನಾನೇನುಹೇಳಲಿ ! ನಿನ್ನ ಎದೆಯು ಮಹೋನ್ನತವಾದ ನಿನ್ನ ಹೆಗಲಿನೊಡನೆ ಹೋರಾಡುವಂತೆ, ಆ ಹೆಗಲಿಗೆ ಸಮನಾಗಿ ಉಬ್ಬಿಕೊಂಡಿರುವುದು ! ಅದರಕೆಳಗೆ ಅಂದವಾದ ಹೊಕ್ಕುಳಿಂದ ಕೂಡಿದ ನಿನ್ನ ಉದರಪ್ರದೇಶವು, ಆ ಎದೆಯ ಮಹೋನ್ನತಿಯನ್ನು ನೋಡಿ ನಾಚಿಕೆಗೊಂಡು ಕುಗ್ಗಿಹೋದಂತೆ ಕೃಶವಾಗಿರುವುದು ! ತುಂಬಿದ ನಿನ್ನ ಜಘನವೂ, ಉಬ್ಬಿದ ಸ್ತನಗಳೂ,ಪೂರ್ಣಚಂದ್ರನಂತೆ ಹೊಳೆಯುವ ನಿನ್ನ ಮುಖವೂ, ನಿನ್ನ ಅಸಾಧಾರಣಸೌಂದರ್ಯಕ್ಕೆ ಕಳೆಯೇರಿಸುವುವು. ನಿನ್ನ ಅಂದವನ್ನು ಏನೆಂದುವರ್ಣಿಸಲಿ. ನಿನ್ನ ಜಘನಪ್ರದೇಶದಲ್ಲಿ ಕಿರುಜೆಜ್ಜೆಗಳಿಂದ ಘುಲಘುಲನೆ ಧ್ವನಿಮಾಡುತ್ತಲಿರುವ ಕಾಂಚೀದಾಮವು, ಅತ್ಯಿ

ತ್ತ ಹೋಗುವವರನ್ನು ತನ್ನ ಕಡೆಗೆ ಕೂಗಿ ಕರೆಯುವಂತಿರುವುದು! ನಿನ್ನ ಮೊಳಕಾಲುಗಳೆರಡೂ ಒಂದಕ್ಕೊಂದಕ್ಕೆ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಸಮವಾಗಿರುವುವು. ಉದ್ದವಾದ ನಿನ್ನ ಕಾಲುಗಳೆರಡೂ ನಿನಗೆ ಎಷ್ಟೋ ಅಂದವನ್ನು ಕೊಡುತ್ತಿರುವುವು. ಎಲೆ ಸಖಿ! ನೀನು ಬಿಳೀದುಕೂಲವನ್ನುಟ್ಟು, ವಿಸ್ತಾರವಾದ ನಿನ್ನ ತೋಳನ್ನಾಡಿಸುತ್ತಾ, ನನ್ನ ಮುಂದೆ ನಡೆಯುತ್ತಿದ್ದರೆ, ರಾಜಹಂಸಿಯಂತೆಯೇ ಶೋಭಿಸುವೆ! ನಿನ್ನ ರೂಪಾತಿಶಯವೂ ಹಾಗಿರಲಿ! ನಿನ್ನ ಅದ್ಭುತವಾದ ಬುದ್ಧಿಶಕ್ತಿಯನ್ನೇನೆಂದು ಹೇಳಲಿ! ಪ್ರಸಿದ್ಧಮಾಯಾವಿಯಾದ ಶಂಬರಾಸುರನಲ್ಲಿ ಕಾಣುತಿದ್ದ ಸಾವಿರಾರು ಮಾಯೆಗಳೂ ನಿನ್ನಲ್ಲಿರುವುವು. ಅಷ್ಟುಮಾತ್ರವೇ ಅಲ್ಲ! ಲೋಕದಲ್ಲಿರುವ ಇತರವಿಧವಾದ ಸಾವಿರಾರು ಲೌಕಿಕಮಾಯೆಗಳನ್ನೂ ನೀನು ಚೆನ್ನಾಗಿ ಬಲ್ಲೆ. ರಥದ ಮೂತಿಯಂತೆ ಉದ್ದವಾಗಿ ಉಬ್ಬಿಕಾಣುತ್ತಿರುವ ಈ ನಿನ್ನ ಎದೆಯ ಗಂಟು, ನೋಡುವವರ ಕಣ್ಣಿಗೆ ಒಂದು ಸೊಗಸನ್ನು ಬೀರುತ್ತಿರುವುದು. ಅಪಾರವಾದ ಬುದ್ಧಿಯೂ, ಇತರರಿಗೆ ತಿಳಿಯದ ರಾಜನೀತಿಗಳೂ, ಹೀಗೆ ವಿಚಿತ್ರವಾದ ಮಾಯೆಗಳೂ ನಿನ್ನೊಳಗೆ ತುಂಬಿಕೊಂಡಿರುವುದರಿಂದಲೇ, ಸ್ಥಳಸಂಕೋಚದಿಂದ ಈ ನಿನ್ನ ಅವಯವವು ಉಬ್ಬಿಕೊಂಡಿರುವುದೆಂದು ಊಹಿಸಬೇಕಾಗಿದೆ. ಎಲೆಕುಬ್ಜೆ! ಭರತನು ಪಟ್ಟಾಭಿಷಿಕ್ತನಾಗಿ, ರಾಮನು ಕಾಡಿಗೆ ಕಳುಹಿಸಲ್ಪಟ್ಟೊಡನೆಯೇ, ಈ ನಿನ್ನ ಗಂಟಿಗೆ ಒಂದುಬಂಗಾರದ ಮಾಲಿಕೆಯನ್ನಿಟ್ಟು ಅಲಂಕರಿಸುವೆನು. ನಿಜವಾಗಿ, ಈಗ ನಾನು ಉದ್ದೇಶಿಸಿರುವ ಕಾರ್ಯವು ಕೈಗೂಡಿದೊಡನೆ, ಪುಟಹಾಕಿದ ಅಪರಂಜಿಯ ಭಂಗಾರದಿಂದ ಈ ನಿನ್ನ ಗೂನನ್ನು ಅಲಂಕರಿಸುವೆನು! ಮತ್ತು ನಿನ್ನ ಮುಖಕ್ಕೆ ಬಂಗಾರದ ತಿಲಕವೊಂದನ್ನು ಮಾಡಿಸಿಡುವೆನು. ಇನ್ನೂ ನಿನ್ನ ಅವಯವಗಳಿಗೆಲ್ಲಾ ಉತ್ತಮವಾದ ಅನೇಕಭೂಷಣಗಳನ್ನು ಮಾಡಿಸಿ ಹಾಕುವೆನು. ಈ ನಿನ್ನ ಗೂನಿನಮೇಲೆ ಘುಮಘುಮಿಸುತ್ತಲಿರುವಗಂಧವನ್ನು ನನ್ನ ಕೈಯಿಂದತೊಡೆಯುವೆನು. ನಾನು ಮಾಡಿಸಿಕೊಟ್ಟ ದಿವ್ಯಾಭರಣಗಳನ್ನು ತೊಟ್ಟು, ದುಕೂಲಗಳನ್ನುಟ್ಟು, ನೀನು ಬೀದಿಯಲ್ಲಿ ಸಂಚರಿಸುತಿದ್ದರೆ, ದೇವತಾಸ್ತ್ರೀಯಂತೆಯೇ ಕಾಣುವೆ! ಪೂರ್ಣಚಂದ್ರನೊಡನೆ ಹೋರಾಡುವಂತಿರುವ ಈ ನಿನ್ನ ಮುಖದಿಂದ, ನಾಲ್ಕುದಿಕ್ಕು

ಗಳಿಗೂ ಕಳೆಯೇರಿಸುತ್ತಾ, ನೀನು ಅಲ್ಲಲ್ಲಿ ತಿರುಗುತ್ತಿರುವಾಗ, ನನ್ನ ಸವತಿಯರೆಲ್ಲರೂ ನಿನ್ನನ್ನು ನೋಡಿ ಮನಸ್ಸಿನಲ್ಲಿ ಮಾತ್ಸರ್ಯವನ್ನು ಹೊಂದದಿರಲಾರರು. ಆಗ ಅವರನ್ನು ನೀನು ಲಕ್ಷ್ಯಮಾಡದೆ, ಹೆಮ್ಮೆಯಿಂದ ಕಣ್ಣೆತ್ತಿಯೂ ನೋಡದೆ ಸಂಚರಿಸಬಹುದು. ನೀನು ನನಗೆ ಎಡೆಬಿಡದೆ ಪಾದಸೇವೆಯನ್ನು ಮಾಡುವಂತೆಯೇ, ನಿನಗೂ ಆಗ ಅನೇಕಕುಬ್ಜೆಯರು ಸರ್ವಾಲಂಕಾರಭೂಷಿತರಾಗಿ ಬಂದು ಪಾದಸೇವೆಯನ್ನು ಮಾಡುವರು.” ಎಂದಳು. ಹೀಗೆ ಕೈಕೇಯಿಯು ತನ್ನನ್ನು ಬಹಳವಾಗಿ ಸ್ತೋತ್ರಮಾಡುತ್ತ, ವೇದಿಕೆಯಲ್ಲಿ ಜ್ವಲಿಸುವ ಅಗ್ನಿಶಿಖೆಯಂತೆ, ಹಾಸಿಗೆಯಮೇಲೆಯೇ ಮಲಗಿರಲು, ಅವಳನ್ನು ನೋಡಿ ಮಂಥರೆಯು “ಎಲೆ ಮಂಗಳಾಂಗಿ! ಪ್ರವಾಹವು ಇಳಿದುಹೋದಮೇಲೆ ಸೇತುವೆಯನ್ನು ಕಟ್ಟುವಂತೆ, ಈಗ ನೀನು ತಡೆಮಾಡಿದರೆ ಕೆಲಸವೇ ಕೆಡುವುದು! ಏಳು! ಏಳು! ಈಗಲೇ ಹೋಗಿ ಕೋಪಗೃಹವನ್ನು ಸೇರಿ ರಾಜನನ್ನು ಇದಿರುನೋಡುತ್ತಿರು! ರಾಮಾಭಿಷೇಕವು ನಡೆದುಹೋದಮೇಲೆ, ನೀನು' ವರಗಳನ್ನು ಕೇಳಿದರೂ ಪ್ರಯೋಜನವಿಲ್ಲ” ಎಂದಳು. ಹೀಗೆ ಮಂಥರೆಯಿಂದ ಪ್ರೋತ್ಸಾಹಿಸಲ್ಪಟ್ಟ ಕೈಕೇಯಿಯು, ಆಕೆಯೊಡನೆಯೇ ಕೋಪಗೃಹವನ್ನು ಪ್ರವೇಶಿಸಿದಳು. ಅಲ್ಲಿ ತನ್ನ ಸೌಭಾಗ್ಯದ ಮದದಿಂದ ಕೊಬ್ಬಿದವಳಾಗಿ, ಲಕ್ಷವರಹಗಳ ಬೆಲೆಬಾಳುವ ಮುಕ್ತಾಹಾರಗಳನ್ನೂ, ತಾನು ತೊಟ್ಟಿದ್ದ ಇತರದಿವ್ಯಾಭರಣಗಳನ್ನೂ ಕಳೆದುಹಾಕಿದಳು! ಆ ಗೂನಿಯ ಮಾತಿಗೆ ಮರುಳಾಗಿ, ಆ ಗೃಹದಲ್ಲಿ ನೆಲದಮೇಲೆ ಮಲಗಿಕೊಂಡಿದ್ದಳು. ಸ್ವಾಭಾವಿಕವಾದ ಸೌಂದರ್ಯವುಳ್ಳ ಇವಳ ದೇಹವು ಆಭರಣಗಳೊಂದೂ ಇಲ್ಲದಿದ್ದರೂ, ನೋಡತಕ್ಕವರಿಗೆ ಸುವರ್ಣಪ್ರತಿಮೆಯಂತೆ ಕಾಣುತಿತ್ತು. ಹೀಗೆ ಅವಳು ನೆಲದಮೇಲೆ ಮಲಗಿಕೊಂಡು, ಮಂಥರೆಯನ್ನು ಕುರಿತು. “ಎಲೆ ಮಂಥರೆ! ಒಂದುವೇಳೆ ಈಗ ನಾನು ಕೇಳುವ ವರವನ್ನು ನನ್ನ ಪತಿಯು ಕೊಡದೆಹೋದಪಕ್ಷದಲ್ಲಿ, ನಾನು ಇಲ್ಲಿಯೇ ಪ್ರಾಣತ್ಯಾಗವನ್ನು ಮಾಡುವುದೂ ನಿಜವು! ಹಾಗಾದರೆ ಆಗ ನೀನು ರಾಜನಿಗೆ (ದಶರಥನಿಗೆ, ಅಥವಾ ಕೇಕಯರಾಜನಿಗೆ) ನಾನು ಸತ್ತಸುದ್ದಿಯನ್ನು ತಿಳಿಸಿಬಿಡಬೇಕು! ಹಾಗಿಲ್ಲದೆ ದಶರಥನು ನನ್ನ ದಾರಿಗೆ ಬಂದಪಕ್ಷದಲ್ಲಿ,

ರಾಮನಿಗೆ ವನವಾಸಪ್ರಾಪ್ತಿಯೂ, ಭರತನಿಗೆ ರಾಜ್ಯಾಭಿಷೇಕವೂ ಆಗುವು ದರಲ್ಲಿ ಸಂದೇಹವಿಲ್ಲ. ಇದುಹೊರತು, ರಾಜನು ನನ್ನ ಮನಸ್ತೃಪ್ತಿಗಾಗಿ ಬಂಗಾರಗಳನ್ನೂ, ರತ್ನಗಳನ್ನೂ, ಆಭರಣಗಳನ್ನೂ ತಂದು ಮುಂದಿ ಟ್ಟರೂ,ನಾನು ಅದಕ್ಕೆ ಕೈನೀಡತಕ್ಕವಳಲ್ಲ. ಅದರಿಂದ ನನ್ನ ಆಸೆಯೂ ತೀರು ವುದಿಲ್ಲ. ಅತ್ತಲಾಗಿ ರಾಮನಿಗೆ ಅಭಿಷೇಕವಾದರೆ, ಇತ್ತಲಾಗಿ ನನ್ನ ಪ್ರಾಣ ಕ್ಕೆ ಅದೇ ಕೊನೆಯೆಂದು ತಿಳಿ!" ಎಂದಳು. ಆಮೇಲೆ ಮಂಥರೆಯು, ರಾಜಮ ಹಿಷಿಯಾದ ಆ ಭರತನ ತಾಯನ್ನು ನೋಡಿ, ಮತ್ತಷ್ಟು ಕೋಪವನ್ನು ಹುಟ್ಟಿಸುವ ಕ್ರೂರವಾಕ್ಯಗಳಿಂದ, ಪುನಃ ಅವಳನ್ನು ಕುರಿತು, ಅವಳ ಕಿವಿಗಿಂಪಾಗಿಯೂ, ರಾಮನ ಶ್ರೇಯಸ್ಸಿಗೆ ವಿಘಾತವನ್ನುಂಟುಮಾಡುವು ದಾಗಿಯೂ ಇರುವಂತೆ ಒಂದಾನೊಂದು ಮಾತನ್ನು ಹೇಳುವಳು. "ಎಲೆ ಕೈಕೇಯಿ! ಒಂದು ವಿಷಯವನ್ನು ಮಾತ್ರ ನೀನು ಚೆನ್ನಾಗಿ ಮನಸ್ಸಿನಲ್ಲಿಡು. ರಾಮನಿಗೆ ಈಗ ಅಭಿಷೇಕವು ನಡೆದುಹೋದುದರೆ, ಆಮೇಲೆ ನೀನೂ ನಿನ್ನ ಮಗನೂ ಜೀವಾವಧಿ ಸಂಕಟಕ್ಕೆ ಸಿಕ್ಕಿ ನರಳಬೇಕಾದುದೇನೋ ನಿಜವು. ಆದುದರಿಂದ ಮುಖ್ಯವಾಗಿ ಭರತನಿಗೇ ಅಭಿಷೇಕವು ನಡೆಯುವಂತೆ ಪ್ರಯ ತ್ನಿಸಬೇಕಾದುದು ಮೊದಲನೆಯ ಕೆಲಸವು," ಎಂದಳು. ಹೀಗೆ ಆ ಗೂನಿಯು ಮೇಲೆಮೇಲೆ ಕೋಪಗೊಳಿಸುತ್ತ, ಬಾಣಗಳಂತೆ ಅತಿಕ್ರೂರವಾದ, ಮತ್ತು ಮರ್ಮಭೇದಕಗಳಾದ ಮಾತಿನಿಂದ ಕೈಕೇಯಿಯನ್ನು ರೇಗಿಸುತ್ತಿರಲು, ಅವು ಗಳನ್ನು ಕೇಳಿ ಕೈಕೇಯಿಯು, ಸಹಿಸಲಾರದಷ್ಟು ಸಂಕಟದಿಂದಲೂ, ಕೋ ಪದಿಂದಲೂ ಆಗಾಗ ತನ್ನ ಎದೆಯಮೇಲೆ ಕೈಯ್ಯನ್ನಿಟ್ಟುಕೊಂಡು "ಆಹಾ ಕೈಹಿಡಿದ ಗಂಡನೇ ಹೀಗೆ ಮಾಡುವುದುಂಟೆ!"ಎಂದು ಆಶ್ಚರ್ಯಪಡುತ್ತಾ,ಬಾ ರಿಬಾರಿಗೂ ಆ ಮಂಥರೆಯನ್ನು ಸ್ತೋತ್ರಮಾಡುತ್ತಿದ್ದಳು,ಆಗಾಗ ರಾಮನ ಹೆಸರನ್ನು ಹೇಳಿ ಕೋಪದಿಂದ ಹಲ್ಲುಕಡಿಯುತ್ತಿದ್ದಳು. ಕೊನೆಗೆ ಮಂಥರೆ ಯನ್ನು ಕುರಿತು, "ಎಲೆ ಮಂಥರೆ! ಮುಂದೆ ಈ ಎರಡರಲ್ಲಿ ಒಂದು ಕೆಲಸವು ನಡೆಯುವುದೇನೋ ನಿಜವು. ನಾನು ಇಲ್ಲಿಯೇ ಪ್ರಾಣತ್ಯಾಗವನ್ನು ಮಾಡಬೇ ಕಾದ ಸಂಭವವು ಬಂದರೆ, ಅದನ್ನು ಕೇಳಿದೊಡನೆಯೇ ನೀನು ರಾಜನಿಗೆ ತಿಳಿ ಸಬೇಕಾದುದೊಂದು? ಅಥವಾ ರಾಮನು ಕಾಡಿಗೆ ಹೋಗಿ ನಿಷ್ಕಂಟಕವಾದ

ರಾಜ್ಯವನ್ನು ಭರತನು ನೆಮ್ಮದಿಯಿಂದ ಆಳುತ್ತಿರುವುದು ಮತ್ತೊಂದು! ಇವೆರಡರಲ್ಲಿ ಯಾವುದೋ ಒಂದು ನಡೆಯುವುದು ಸಿದ್ಧವು. ನಾನಾದರೋ ನನ್ನ ಕೋರಿಕೆಯು ಕೈಗೂಡುವವರೆಗೂ ಹಾಸಿಗೆಯಮೇಲೆ ಮಲಗುವವಳಲ್ಲ! ಹೂಗಳನ್ನು ಮುಡಿಯುವವಳಲ್ಲ! ಗಂಧವನ್ನು ತೊಡೆಯುವವಳಲ್ಲ! ಅಭ್ಯಂಗನವನ್ನಾಗಲಿ, ಅನ್ನಪಾನಗಳನ್ನಾಗಲಿ ಕೈಕೊಳ್ಳುವವಳಲ್ಲ! ಎಲ್ಲವನ್ನೂ ಬಿಟ್ಟುಬಿಡುವೆನು. ಹೆಚ್ಚಾಗಿ ಹೇಳಿದುದರಿಂದೇನು? ಎಲೆ ಮಂಥರೆ! ದಶರಥನು ರಾಮನನ್ನು ಕಾಡಿಗೆ ಕಳುಹಿಸದಿದ್ದರೆ ಮಾತ್ರ, ನನ್ನ ಪ್ರಾಣವನ್ನೇ ನಾನು ಇಟ್ಟುಕೊಂಡಿರುವವಳಲ್ಲ. ಇದು ನಿಜವಾದ ಮಾತು!" ಎಂದಳು. ಹೀಗೆ ಕೈಕೇಯಿಯು ಅತಿಕ್ರೂರವಾದ ಮಾತುಗಳನ್ನಾಡಿ, ತಾನು ಧರಿಸಿದ್ದ ಒಡವೆಗಳೆಲ್ಲವನ್ನೂ ತೆಗೆದುಹಾಕಿ, ಪುಣ್ಯವು ಕ್ಷಯಿಸಿಹೋದಮೇಲೆ ಆಕಾಶದಿಂದ ಕೆಳಗೆ ಬಿದ್ದಿರುವ ಕಿನ್ನರಸ್ತ್ರೀಯಂತೆ ಬರೀನೆಲದಮೇಲೆ ಬಿದ್ದು ಹೊರಳುತಿದ್ದಳು. ಮಹಾಂಧಕಾರದಂತೆ ಮುಖದಲ್ಲಿ ಕೋಪವು ಆವರಿಸಿಕೊಂಡಿರಲು, ಪುಷ್ಪಮಾಲ್ಯಾಭರಣಾದಿಗಳೆಲ್ಲವನ್ನೂ ತೆಗೆದು ನೆಲದಮೇಲೆ ಮಲಗಿದ್ದ ಆ ಕೈಕೇಯಿಯು, ನಕ್ಷತ್ರಗಳೆಲ್ಲವೂ ಅಸ್ತಂತವಾದಮೇಲೆ ಕತ್ತಲೆಯಿಂದ ಮರೆಸಲ್ಪಟ್ಟ ಗಗನಲಕ್ಷ್ಮಿಯಂತೆ ತೋರುತಿದ್ದಳು ಇಲ್ಲಿಗೆ ಒಂಭತ್ತನೆಯ ಸರ್ಗವು.

---

{ ದಶರಥನು ಕೈಕೇಯಿಯನ್ನು ನೋಡುವುದಕ್ಕಾಗಿ ಬಂದು, ಅವಳ ಕೋಪವನ್ನು ಸಮಾಧಾನಪಡಿಸಿದುದು. }

ಹೀಗೆ ಕೈಕೇಯಿಯು ಪಾಪಬುದ್ಧಿಯುಳ್ಳ ಆ ಮಂಥರೆಯ ದುರ್ಬೋಧನೆಗೊಳಗಾಗಿ, ಕೋಪಗೃಹಕ್ಕೆ ಹೋಗಿ, ಅಲ್ಲಿ ಉದ್ವೇಗಕ್ಕೆ ನೆಲದಮೇಲೆ ಮಲಗಿಬಿಟ್ಟಳು. ಆಗ ಅವಳು ವಿಷದಿಗ್ಧವಾದ ಬಾಣದಿಂದ ನೊಂದು, ಮೂರ್ಛಿತಳಾಗಿ ಬಿದ್ದಿರುವ ಕಿನ್ನರಸ್ತ್ರೀಯಂತೆ ಕಾಣಿಸುತಿದ್ದಳು. ಚತುರೆಯಾದ ಆ ಕೈಕೇಯಿಯು, ಮುಂದೆ ರಾಜನು ತನ್ನ ಬಳಿಗೆ ಬಂದಾಗ ತಾನು ನಡೆಸಬೇಕಾದ ಕೃತ್ಯಗಳೇನೆಂಬುದನ್ನು ಚೆನ್ನಾಗಿ ಆಲೋಚಿಸಿ, ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಳು. ಅವೆಲ್ಲವನ್ನೂ ಕ್ರಮವಾಗಿ ಮಂಥರೆಯ

ಕಿವಿಯಲ್ಲಿ ಹೇಳಿದಳು. ಮಂಥರೆಯ ಮಾತಿಗೆ ಮರುಳಾದ ಆ ಕೈಕೇಯಿಗೆ ನಿಜವಾಗಿಯೇ ಮೇಲೆಮೇಲೆ ದುಃಖವು ಹೆಚ್ಚುತಿತ್ತು. ಹಾವಿನಂತೆ ಬಿಸಿಬಿಸಿಯಾಗಿ ನಿಟ್ಟುಸಿರನ್ನು ಬಿಡುತ್ತಿದ್ದಳು. ಹೀಗೆ ದುಃಖಿತೆಯಾದ ಕೈಕೇಯಿಯು ತಾನು ಮಾಡಬೇಕಾದ ಮುಂದಿನ ಕಾರ್ಯವೇನೆಂಬುದನ್ನು ಸ್ವಲ್ಪಹೊತ್ತಿನವರೆಗೆ ಚೆನ್ನಾಗಿ ಆಲೋಚಿಸಿ, ತನ್ನ ಕೋರಿಕೆಯು ಕೈಗೂಡುವುದಕ್ಕೆ ಅನುಕೂಲವಾದ ದಾರಿಯನ್ನೂ ನಿಶ್ಚಯಿಸಿಟ್ಟುಕೊಂಡಳು. ಮಂಥರೆಯು ಸ್ವಾರ್ಥಪರಳಾಗಿ ಹಣದಾಸೆಯಿಂದಮಾತ್ರವೇ ಕೈಕೇಯಿಗೆ ಈ ದುರ್ಬೋಧನೆಯನ್ನು ಮಾಡಿದವಳಲ್ಲ. ಅವಳಿಗೆ ಕೈಕೇಯಿಯಲ್ಲಿ ಸಹಜವಾದ ಸ್ನೇಹವೂ ಇತ್ತು. ಈ ಎರಡುದ್ದೇಶಗಳಿಂದ ಮಾಡಿದ ದುರ್ಬೋಧನೆಯು ಸಾರ್ಥಕವಾಗಿ, ಅವಳು ತನ್ನ ದಾರಿಗೆ ಬಂದುದನ್ನು ನೋಡಿ ಮಂಥರೆಗೆ ಪರಮಾನಂದವುಂಟಾಯಿತು. ಅವಳು ಆಗಲೇ ಸಿದ್ಧಿಯನ್ನು ಪಡೆದವಳಂತೆ ತನ್ನಲ್ಲಿತಾನು ಹಿಗ್ಗುತಿದ್ದಳು. ಕೈಕೇಯಿಯು ಹೀಗೆ ಮನಸ್ಸಿನಲ್ಲಿ ನಿಶ್ಚಯಮಾಡಿಕೊಂಡ ಮೇಲೆ, ಕೋಪಸೂಚಕವಾದ ಹುಬ್ಬನ್ನು ಗಂಟುಹಾಕಿ, ನೆಲದಮೇಲೆ ಮಲಗಿದಳು. ತಾನು ಮುಡಿದಿದ್ದ ವಿಚಿತ್ರವರ್ಣವುಳ್ಳ ಪುಷ್ಪಮಾಲಿಕೆಗಳನ್ನೂ, ತೊಟ್ಟಿದ್ದ ದಿವ್ಯಾಭರಣಗಳನ್ನೂ ಕಿತ್ತು, ಅಲ್ಲಲ್ಲಿ ನೆಲದಮೇಲೆ ಬಿಸುಟಿದ್ದಳು. ಹೀಗೆ ಅಲ್ಲಲ್ಲಿ ಬಿಸಾಡಿದ ಪುಷ್ಪಮಾಲ್ಯಾಭರಣಗಳೆಲ್ಲವೂ ನಕ್ಷತ್ರಸಮೂಹಗಳಿಂದ ಕೂಡಿದ ಗಗನಪ್ರದೇಶದಂತೆ ಆಸ್ಥಳಕ್ಕೆ ಒಂದು ಅಂದವನ್ನು ಕೊಡುತಿತ್ತು. ಮುಂಗುರುಳುಗಳನ್ನು ತಿದ್ದಿಕೊಳ್ಳದೆ, ಮಾಸಿದ ಬಟ್ಟೆಯನ್ನುಟ್ಟು, ಕೂದಲನ್ನು ಒಂದೇಜಡೆಯಾಗಿ ಎತ್ತಿಕಟ್ಟಿ, ಆ ಕೋಪಗೃಹದಲ್ಲಿ ಅಳ್ಳಾಡದೆ ಉದ್ದಕ್ಕೆ ಮಲಗಿದ್ದ ಆ ಕೈಕೇಯಿಯು, ಉಸಿರಾಡದೆ ಪ್ರಜ್ಞೆತಪ್ಪಿ ಕೆಳಗೆ ಬಿದ್ದಿರುವ ಕಿನ್ನರಸ್ತ್ರೀಯಂತೆ ತೋರುತಿದ್ದಳು. ಇಷ್ಟರಲ್ಲಿ ಇತ್ತಲಾಗಿ ದಶರಥನು, ರಾಮಾಭಿಷೇಕಕ್ಕೆ ಬೇಕಾದ ಸನ್ನಾಹಗಳನ್ನು ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಆಜ್ಞಾಪಿಸಿ, ಸಭಿಕರ ಅನುಮತಿಯನ್ನೂ ಪಡೆದು, ಸಭಾಸ್ಥಾನದಿಂದ ಹಿಂತಿರುಗಿ ಬರುತ್ತ, "ಈಗಲೀಗ ರಾಮನಿಗೆ ಪಟ್ಟಾಭಿಷೇಕವು ನಿಶ್ಚಿತವಾಯಿತು! ಇನ್ನುಮೇಲೆ ಏನೂ ಸಂದೇಹವಿಲ್ಲ" ವೆಂದು ಮನಸ್ಸಿನಲ್ಲಿ ನಿರ್ಧರಿಸಿಕೊಂಡನು. ಕೈಕೇಯಿಯು ತನಗೆ ಬಹಳ

ಪ್ರಿಯಳಾಗಿದ್ದುದಲ್ಲದೆ, ಆಕೆಗೆ ಮೊದಲಿನಿಂದ ರಾಮನಲ್ಲಿಯೂ ಅಸಾಧಾರಣವಾದ ಪ್ರೇಮವಿದ್ದುದರಿಂದ, ಅವಳಿಗೆ ಈ ಪ್ರಿಯವೃತ್ತಾಂತವನ್ನು ತಾನಾಗಿಯೇ ಹೋಗಿ ತಿಳಿಸಬೇಕೆಂದು ನಿಶ್ಚಯಿಸಿಕೊಂಡು, ಅವಳ ಅಂತಃಪುರದಕಡೆಗೆ ಹೊರಟನು.ಚಂದ್ರನು, ತನ್ನನ್ನು ನುಂಗುವುದಕ್ಕಾಗಿ ನಿರೀಕ್ಷಿಸುತ್ತಿರುವ ರಾಹುವನ್ನೊಳಗಡಗಿಸಿಕೊಂಡು, ಮೇಲೆ ಬಿಳೀಮೇಘಗಳಿಂದ ತುಂಬಿದ ಆಕಾಶವನ್ನು ಪ್ರವೇಶಿಸುವಂತೆ,ದಶರಥನು ತನಗೆ ಮೃತ್ಯುಹೇತುವಾದ ಆ ಅಂತಃಪುರವನ್ನು ಪ್ರವೇಶಿಸಿದನು.ಆಹಾ! ದೈವಗತಿಯವೈಚಿತ್ರ್ಯವನ್ನು ಹೇಳತಕ್ಕುದೇನು? ಈ ಕಾಲಕ್ಕೆ ಸರಿಯಾಗಿ ಆ ಅಂತಃಪುರದ ಸುತ್ತಲೂ, ಈತನಿಗೆ ಕಾಮೋದ್ದೀಪನವನ್ನುಂಟುಮಾಡುವಂತೆ, ಗಿಳಿಗಳು, ನವಿಲುಗಳು, ಕ್ರೌಂಚಗಳು, ಹಂಸಗಳು, ಇವೇ ಮೊದಲಾದ ಉಪವನಪಕ್ಷಿಗಳೆಲ್ಲವೂ ಕಿವಿಗಿಂಪಾದ ಸ್ವರದಿಂದ ಕೂಗಲಾರಂಭಿಸಿದುವು. ನಾಲ್ಕುಕಡೆಗಳಿಂದಲೂ ಕರ್ಣಾನಂದಕರಗಳಾದ ವಾದ್ಯಧ್ವನಿಗಳು ಕೇಳಿಸುತಿದ್ದುವು. ನಾಯಿಕಾನಾಯಕರ ಪರಸ್ಪರಪ್ರೇಮವನ್ನು ಹೆಚ್ಚಿಸುವ ವಾಕ್ಚಾತುರ್ಯವುಳ್ಳ ಗುಜ್ಜಾರಿಗಳು, ಗೂನಿಯರು, ಮೊದಲಾದ ಅಂತಃಪುರಪರಿಚಾರಿಕೆಯರೆಲ್ಲರೂ ಅಲ್ಲಲ್ಲಿ ಸಲ್ಲಪಿಸುತಿದ್ದರು. ಸಂಪಗೆ, ಚೆನ್ನಸುಗೆ, ಮುಂತಾದ ಮರಗಳ ಸಾಲಿನಿಂದ ಅಲಂಕರಿಸಲ್ಪಟ್ಟ ಎಲೆಮನೆಗಳೂ, ಚಿತ್ರಶಾಲೆಗಳೂ, ಅಲ್ಲಲ್ಲಿ ನೇತ್ರಾನಂದಕರಗಳಾಗಿದ್ದುವು. ದಂತದಿಂದಲೂ, ಬೆಳ್ಳಿಯಿಂದಲೂ ಬಂಗಾರದಿಂದಲೂ ಮಾಡಲ್ಪಟ್ಟ ಜಗುಲಿಗಳೂ, ಯಾವಾಗಲೂ ಪುಷ್ಪಫಲಭರಿತಗಳಾದ ಗಿಡಗಳೂ, ಜಲಸಮೃದ್ಧವಾದ ನಡೆಬಾವಿಗಳೂ, ಅಲ್ಲಲ್ಲಿ ಶೋಭಿಸುತಿದ್ದುವು. ಬೆಳ್ಳಿಬಂಗಾರಗಳಿಂದಲೂ, ದಂತದಿಂದಲೂ ನಿರ್ಮಿತಗಳಾದ ಆಸನಗಳು ಅಲ್ಲಲ್ಲಿ ಕಾಣುತಿದ್ದುವು. ಅಲ್ಲಲ್ಲಿ ನಾನಾವಿಧವಾದ ಅನ್ನಪಾನಗಳೂ,ವಿಧವಿಧವಾದ ಭಕ್ಷ್ಯಗಳೂ ತುಂಬಿದ್ದುವು. ಸ್ತ್ರೀಯರ ದಿವ್ಯಾಭರಣಕಾಂತಿಗಳಿಂದ ಶೋಭಿಸುತಿದ್ದ ಆ ಪ್ರದೇಶವೆಲ್ಲವೂ ಸ್ವರ್ಗಲೋಕದಂತೆಯೇ ಕಾಣಿಸುತಿತ್ತು.ಹೀಗೆ ಸಮಸ್ತಸಂಪತ್ಸಮೃದ್ಧಿಯುಳ್ಳ ಆ ಅಂತಃಪುರವನ್ನು ದಶರಥರಾಜನು ಪ್ರವೇಶಿಸಿ ನೋಡಿದಾಗ,ಶಯನಸ್ಥಳದಲ್ಲಿ ಕೈಕೇಯಿಯು ಕಾಣಿಸಲಿಲ್ಲ. ಈತನು ಅಂತಃಪುರದ ಬಾಗಿಲಿಗೆ ಬಂದೊಡನೆಯೇ ಕಾಮೋದ್ದೀಪಕ

ಗಳಾದ ಸಾಮಗ್ರಿಗಳಿಂದ ಈತನ ಮನಸ್ಸಿನಲ್ಲಿ ಕಾಮವಿಕಾರವು ಅಂಕುರಿಸಿತು. ಅಲ್ಲಿಗೆ ಬಂದು ಕೈಕೇಯಿಯನ್ನು ಕಾಣದೆ ಹೋಗಲು, ಆ ಕಾಮಾತುರವು ಮತ್ತಷ್ಟು ಹೆಚ್ಚಿತು. ಇದರಮೇಲೆ ಅದು ರತಿಕೇಳಿಗೆ ಉಚಿತಕಾಲವೂ ಆಗಿದ್ದುದರಿಂದ, ವಿಶೇಷಕಾಮಪೀಡಿತನಾಗಿ, ಹಾಸಿಗೆಯಮೇಲೆ ತನ್ನ ಪ್ರಿಯೆಯಿಲ್ಲದುದನ್ನು ಕಂಡು, ಆಶಾಭಂಗದಿಂದ ದುಃಖಿತನಾಗಿದ್ದನು. ಇದುವರೆಗೆ ಹಿಂದೆ ಯಾವಾಗಲೂ ಕೈಕೇಯಿಯು ಅಷ್ಟುಹೊತ್ತಿನಲ್ಲಿ ಹಾಸಿಗೆಯನ್ನು ಬಿಟ್ಟುಹೋದವಳಲ್ಲ! ದಶರಥನೂಕೂಡ ಹಿಂದೆ ಯಾವಾಗಲೂ ಹೀಗೆ ಶೂನ್ಯವಾದ ಅಂತಃಪುರವನ್ನು ನೋಡಿದವನಲ್ಲ. ಅದೆಲ್ಲವೂ ಈಗ ವಿಪರೀತವಾಗಿದ್ದುದರಿಂದ, ಅವನ ಮನಸ್ಸಿನಲ್ಲಿ ವಿಶೇಷವಾದ ಕಳವಳವು ಹುಟ್ಟಿತು. ದಶರಥನು ಇದುವರೆಗೆ ಕೈಕೇಯಿಯಲ್ಲಿ,ಸ್ವಾರ್ಥಪರತೆ, ಕೋಪ, ಅವಿವೇಕ, ಮುಂತಾದ ದುರ್ಗುಣಗಳೊಂದನ್ನೂ ಕಂಡವನಲ್ಲ. ಈಗ ಅವಳಿಗೆ ಹೀಗೆ ವಿಪರೀತಬುದ್ಧಿಯು ಹುಟ್ಟಿರುವುದನ್ನು ಹೇಗೆ ಬಲ್ಲನು ? ಅವನಿಗೆ ಕೈಕೇಯಿಯು ಕೋಪಗೊಂಡು ಅಂತಃಪುರವನ್ನು ಬಿಟ್ಟುಹೋಗಿರುವಳೆಂಬ ಶಂಕೆಯು ಸ್ವಲ್ಪವೂ ಇರಲಿಲ್ಲ.ಆದುದರಿಂದ ಎಂದಿನಂತೆ ಅವನು ಅಲ್ಲಿದ್ದ ಪ್ರತಿಹಾರಿಗಳನ್ನು ನೋಡಿ “ಕೈಕೇಯಿಯೆಲ್ಲಿ?” ಎಂದು ವಿಚಾರಿಸಿದನು. ಅಲ್ಲಿದ್ದ ಪ್ರತಿಹಾರಿಯು ಈ ಮಾತಿಗೆ ಒಡನೆಯೇ ಪ್ರತ್ಯುತ್ತರವನ್ನು ಕೊಡುವುದಕ್ಕೆ ಹಿಂಜರಿದು, ಭಯದಿಂದ ಗಡಗಡನೆ ನಡುಗುತ್ತ,ಕೈಮುಗಿದು,ಕೊನೆಗೆ ರಾಜನನ್ನು ಕುರಿತು, “ಎಲೈ ಮಹಾರಾಜನೆ ! ದೇವಿಯು ಯಾವ ಕಾರಣದಿಂದಲೋ ಬಹಳ ಕೋಪಗೊಂಡು ಕೋಪಗೃಹದಲ್ಲಿ ಹೋಗಿ ಸೇರಿರುವಳು ” ಎಂದು ವಿನಯದಿಂದ ವಿಜ್ಞಾಪಿಸಿದಳು. ಇದನ್ನು ಕೇಳಿದೊಡನೆ ರಾಜನು ಬೆಚ್ಚರಬಿದ್ದು “ ಹಾ ! ಕೋಪಕ್ಕೆ ಕಾರಣವೇನು?” ಎಂದು ಕೇಳುತ್ತ, ಹಾಗೆಯೇ ದಿಗ್ಭ್ರಾಂತನಾಗಿದ್ದನು. ಇಂದ್ರಿಯಗಳೆಲ್ಲವೂ ಪರವಶವಾಗಲು, ಒಡನೆಯೇ ಅವಳಿದ್ದ ಸ್ಥಳಕ್ಕೆ ಬಂದನು. ಅಲ್ಲಿ ರಾಜಮಹಿಷಿಯಾದ ಕೈಕೇಯಿಯು, ತನಗೆ ಯೋಗ್ಯವಲ್ಲದ ಬರೀನೆಲದಮೇಲೆ ಬಿದ್ದು ಮಲಗಿದ್ದಳು. ಅವಳ ದುರವಸ್ಥೆಯನ್ನು ನೋಡಿದಾಗ ರಾಜನಿಗೆ ಬಹಳ ಮರುಕವುಂಟಾಯಿತು. ಆತನ ಮುಖವೆಲ್ಲವೂ ದುಃಖಾಗ್ನಿಯಿಂದ ಬೆಂದುಹೋದಂತೆ ವಿವರ್ಣವಾಯಿತು.

ಸಾಮಾನ್ಯವಾಗಿ ಲೋಕದಲ್ಲಿ ಮುದುಕರಿಗೆ ಹೆಂಡತಿಯರಲ್ಲಿ ಮೋಹವು ಹೆಚ್ಚು! ಅದರಲ್ಲಿಯೂ ಆ ಹೆಂಡತಿಯರು ಯೌವನವತಿಯರಾಗಿದ್ದರೆ ಹೇಳ ತಕ್ಕುದೇನು? ವೃದ್ಧನಾದ ದಶರಥನು, ತನಗೆ ಪ್ರಾಣಕ್ಕಿಂತಲೂ ಹೆಚ್ಚು ಪ್ರಿಯಳಾದ ಕೈಕೇಯಿಯು ನೆಲದಮೇಲೆ ಬಿದ್ದಿರುವುದನ್ನು ನೋಡಿದನು. ಈ ದಶರಥನು ಯಾವ ಕಪಟವನ್ನೂ ತಿಳಿಯದ ಋಜುಸ್ವಭಾವವುಳ್ಳವನಾದು ದರಿಂದ, ಕೈಕೇಯಿಗೆ ಆಗ ಉಂಟಾಗಿದ್ದ ವಿಪರೀತಬುದ್ಧಿಯನ್ನು ತಿಳಿಯ ಲಿಲ್ಲ. ಅವಳು ಅಲ್ಲಿ ಮುರಿದುಹಾಕಿದ ಬಳ್ಳಿಯಂತೆಯೂ, ಗಂಧರ್ವಲೋಕದಿಂ ದ ಕೆಳಕ್ಕೆ ಬಿದ್ದ ಕಿನ್ನರಿಯಂತೆಯೂ, ಸ್ವರ್ಗದಿಂದ ಜಾರಿಬಿದ್ದ ಅಪ್ಸರ ಸ್ತ್ರೀಯಂತೆಯೂ, ಪರರನ್ನು ವಂಚಿಸುವುದಕ್ಕಾಗಿ ಬಂದು ಪರಾಜಿತಳಾದ ಮಾಯೆಯಂತೆಯೂ, ಕಟ್ಟುಬಿದ್ದ ಹೆಣ್ಣುಹುಲ್ಲೆಯಂತೆಯೂ, ಮಲಗಿರುವು ದನ್ನು ನೋಡಿ, ಕಾಡಿನಲ್ಲಿ ಬೇಟೆಗಾರನ ವಿಷದಿಗ್ಧವಾದ ಬಾಣದಿಂದ ಹತ ವಾಗಿ ಬಿದ್ದಿರುವ ಹೆಣ್ಣಾನೆಯನ್ನು ನೋಡಿ ಮದದಾನೆಯು ಅದನ್ನು ಸುಂಡಿಲಿನಿಂದ ಸವರುವಂತೆ, ಮೆಲ್ಲಗೆ ಬಂದು ಅವಳ ಮೈಮೇಲೆ ಕೈಯನ್ನಿಟ್ಟು ಸವರಿದನು. ಸ್ವಾಭಾವಿಕವಾಗಿಯೇ ವೃದ್ಧರಾದವರಿಗೆ ಹೆಂಡತಿಯರಲ್ಲಿ ಪ್ರೇ ಮವು ಹೆಚ್ಚಾದುದರಿಂದ, ಆ ಹೆಂಡತಿಯರು ಇಟ್ಟ ಗೆರೆಯನ್ನು ಸ್ವಲ್ಪವೂ ಮೀ ರುವವರಲ್ಲ. ಅದರಲ್ಲಿಯೂ ಈಗ ದಶರಥನು ಕಾಮಾತುರದಿಂದಲೂ ಬಂದಿ ರುವನು. ಹೀಗಿರುವಾಗ ಆತನಿಗೆ, ತಾವರೆಯೆಸಳುಗಳಂತೆ ಅಂದವಾದ ಕಣ್ಣು ಗಳಿಂದ ಲೋಕಮೋಹಕಳಾದ ಆ ಕೈಕೇಯಿಯನ್ನು ಕಂಡಮೇಲೆ, ಹೇಳತಕ್ಕು ದೇನು? ಅವನು ಬಹಳಭಯದಿಂದ ಬಂದು, ಅವಳ ಮೈಯನ್ನು ಕೈಯಿಂದ ಸ ವರಿ, ಅವಳನ್ನು ಕುರಿತು ಬಹಳ ಅನುನಯದಿಂದ ಒಂದಾನೊಂದು ಮಾತನ್ನು

---

* ಇಲ್ಲಿ ಬಳ್ಳಿ ಮೊದಲಾದುವುಗಳ ಸಾಮ್ಯವನ್ನು ಹೇಳಿರುವುದರಿಂದ, ಆಗ ಕೈಕೇ ಯಿಯು ಅನುಭವಿಸುತ್ತಿದ್ದ ಅವಸ್ಥಾವಿಶೇಷಗಳು ಸೂಚಿಸಲ್ಪಡುವುವು. ಬಳ್ಳಿಯಂತೆ ಭೂಮಿಯನ್ನು ಬಲವಾಗಿ ಅಪ್ಪಿಕೊಂಡು, ದೇವತಾಸ್ತ್ರೀಯಂತೆ ಆಶ್ಚರ್ಯವನ್ನುಂಟು ಮಾಡುತ್ತ, ಭಯದಿಂದ ನಡುಗುತ್ತಿರುವ ಕಿನ್ನರಿಯಂತೆ ಶೋಚನೀಯಸ್ಥಿತಿಯನ್ನು ಹೊಂದಿ, ಅಪ್ಸರಸಿಯಂತೆ ಸೌಂದರ್ಯಾತಿಶಯವುಳ್ಳವಳಾಗಿ, ಬಲೆಯಲ್ಲಿ ಕಟ್ಟುಬಿದ್ದ ಹುಲ್ಲೆಯಂತೆ ನಿಶ್ಚೇಷ್ಟಳಾಗಿದ್ದಳೆಂದಭಿಪ್ರಾಯವು.

ಹೇಳುವನು. "ಎಲೆ ದೇವಿ! ಇದೇನು! ನನ್ನ ಮೇಲೆ ನಿನಗೆ ಕೋಪಕ್ಕೆ ಕಾರಣವೇನು? ನಿನ್ನನ್ನು ಬಯ್ದವರಾರು? ಅಥವಾ ನಿನ್ನನ್ನು ಅವಮಾನಪಡಿಸಿದವರಾರು? ಎಲೆ ಮಂಗಳಾಂಗಿ! ನೀನು ನೆಲದಮೇಲೆ ಬಿದ್ದು ಹೊರಳುವುದನ್ನು ನೋಡಿ ನನಗೆ ಸಹಿಸಲಾರದ ದುಃಖವುಂಟಾಗಿದೆ! ಏಳು! ಏಳು! ನೀನು ಯಾವಾಗಲೂ ನನಗೆ ಶ್ರೇಯಸ್ಸನ್ನು ಕೋರುವವಳಲ್ಲವೆ? ಹೀಗಿದ್ದರೂ ನಾನು ಬದುಕಿರುವಾಗ ನೀನು ಹೀಗೆ ನೆಲದಮೇಲೆ ಉರುಳುವುದೆಂದರೇನು ? ಇದು ನನ್ನ ಅಶ್ರೇಯಸ್ಸಿಗೆ ಕಾರಣವಲ್ಲವೆ? ನಿನ್ನನ್ನು ನೋಡಿದರೆ, ದೈವಮೆಟ್ಟಿದವರನ್ನು ನೋಡಿದಂತೆ, ನನ್ನ ಮನಸ್ಸಿಗೆ ಬಹಳ ಸಂಕಟವಾಗುತ್ತಿರುವುದು ! ನಿನ್ನ ದೇಹದಲ್ಲಿ ಏನಾದರೂ ವ್ಯಾಧಿಯಿದ್ದರೆ ತಿಳಿಸು! ಈಗಲೇ ಚಿಕಿತ್ಸೆಮಾಡಿಸುವೆನು. ನಮ್ಮಲ್ಲಿ ಬಹಳ ಸಮರ್ಥರಾದ ವೈದ್ಯರಿರುವರು. ಅವರನ್ನು ನಾನು ಬಹುವಿಧದಲ್ಲಿ ಸತ್ಕರಿಸಿ ತೃಪ್ತಿಪಡಿಸಿರುವುದರಿಂದ, ನನ್ನಲ್ಲಿ ಅವರಿಗೆ ಬಹಳವಿಶ್ವಾಸವುಂಟು. ಎಷ್ಟೇ ಕ್ರೂರವ್ಯಾಧಿಯನ್ನಾದರೂ ನಿಮಿಷಮಾತ್ರದಲ್ಲಿ ಗುಣಪಡಿಸುವರು. ಅಥವಾ ನಿನಗೆ ಪ್ರಿಯವನ್ನು ಮಾಡಿದವರಾರಾದರೂ ಇದ್ದರೆ, ಅವರಿಗೆ ನಾನು ಮಾಡಬೇಕಾದ ಪ್ರತಿಫಲವೇನು ? ಇಲ್ಲವೇ ನಿನಗೆ ಅಹಿತವನ್ನುಂಟುಮಾಡಿದವರಾರು? ಅದಕ್ಕಾಗಿ ಯಾರನ್ನು ಈಗ ನಾನು ದಂಡಿಸಬೇಕು ? ಎಲೆ ದೇವಿ ! ಹೀಗೆ ಅಳುವವರುಂಟೆ? ಅಯ್ಯೋ! ಅನ್ಯಾಯವಾಗಿ ನೀನೇಕೆ ದೇಹವನ್ನು ಬಳಲಿಸುವೆ? ನಿನ್ನ ಮನಸ್ಸಿನಲ್ಲಿ ಯಾರನ್ನಾದರೂ ಕೊಲ್ಲಬೇಕೆಂಬ ಉದ್ದೇಶವಿದ್ದರೂ, ಧಾರಾಳವಾಗಿ ತಿಳಿಸು! ನ್ಯಾಯವಾಗಿಕೊಲೆಗೆ ಅರ್ಹನಲ್ಲದಿದ್ದರೂ ಅವನನ್ನು ಈಗಲೇ ಕೊಲ್ಲಿಸುವೆನು. ಕೊಲೆಗೆ ಅರ್ಹನಾಗಿರುವ ಯಾವನನ್ನಾದರೂ ನೀನು ಬಿಡಿಸಬೇಕೆಂದಿದ್ದರೆ ಅದನ್ನಾದರೂ ಹೇಳು. ಈಕ್ಷಣದಲ್ಲಿಯೇ ಬಿಡಿಸುವೆನು. ನಿನಗಾಗಿ ಯಾವ ದರಿದ್ರನನ್ನು ಧನವಂತನನ್ನಾಗಿ ಮಾಡಬೇಕು ? ಅಥವಾ ಯಾವ ಧನಿಕನನ್ನು ನಿರ್ಗತಿಕನನ್ನಾಗಿ ಮಾಡಬೇಕೆಂದು ನಿನ್ನ ಅಪೇಕ್ಷೆಯುಂಟು? ಎಲೆ ಪ್ರಿಯೆ! ಹೆಚ್ಚಾಗಿ ಹೇಳಿದುದರಿಂದೇನು ? ನಾನು ನಿನ್ನ ಅಧೀನನಲ್ಲವೆ ? ನಾನು ಮಾತ್ರವೇ ಅಲ್ಲ! ನನ್ನವರೆಲ್ಲರೂ ನಿನಗೆ ವಶವರ್ತಿಗಳಾಗಿರುವರು. ಎಷ್ಟು ಹೇಳಿದರೇನು? ನನ್ನ ಪ್ರಾಣವೇ ಹೋಗುವ ಸಂಭವವಿದ್ದರೂ, ನಿನ್ನ ಅಭೀಷ್ಟವನ್ನು ತಪ್ಪಿಸುವುದ

ಕ್ಕೆ ನಾನು ಪ್ರವರ್ತಿಸತಕ್ಕವನಲ್ಲ. ಜೀವವನ್ನಾದರೂ ಒತ್ತೆಯಿಟ್ಟು, ನಿನ್ನ ಇಷ್ಟವನ್ನು ನಡೆಸಿಕೊಡುವೆನು. ಪ್ರಾಣಕ್ಕಿಂತಲೂ ನೀನು ನನಗೆ ಪ್ರಿಯಳಲ್ಲವೆ? ನಿನ್ನ ಮನಸ್ಸಿನಲ್ಲಿರುವುದನ್ನು ಹೇಳು! ನೀನು ಪ್ರೇಮಪಾಶದಿಂದ ನನ್ನನ್ನು ಬಲವಾಗಿ ಕಟ್ಟಿಹಾಕಿರುವೆ ಈ ಶಕ್ತಿಯು ನಿನ್ನಲ್ಲಿರುವುದನ್ನು ನೀನು ಚೆನ್ನಾಗಿ ತಿಳಿದೂ, ಹೀಗೆ ನನ್ನಲ್ಲಿ ಸಂದೇಹಪಡುವುದುಂಟೆ? ಇದು ಸರಿಯಲ್ಲ! ನಿನ್ನ ಇಷ್ಟವನ್ನು ಹೇಳು! ನಡೆಸಿ ಕೊಡುವೆನು. ಇದರಲ್ಲಿ ಸಂದೇಹವಿಲ್ಲ. ನನ್ನ ಪುಣ್ಯದಮೇಲೆ ಆಣೆಯಿಟ್ಟು ನಿನಗೆ ಶಪಥಮಾಡಿ ಕೊಡುವೆನು. ಸೂರ್ಯನ ರಥಚಕ್ರವು ಎಷ್ಟುದೂರದವರೆಗೆ ಹೋಗಿ ತಿರುಗುವುದೋ, ಅಲ್ಲಿನವರೆಗಿರುವ ಸಮಸ್ತಭೂಮಂಡಲವೂ ನನ್ನ ಅಧೀನವಾಗಿರುವುದು. ಅಲ್ಲಿನವರೆಗೆ ನನ್ನ ಆಜ್ಞಾಚಕ್ರವು ತಡೆಯಿಲ್ಲದೆ ಸುತ್ತುತ್ತಿರುವುದು ! ಆದುದರಿಂದ ನನ್ನ ಅಧೀನದಲ್ಲಿ, ಪೂರ್ವದೇಶಗಳೂ, ಸಿಂಧು ಸೌವೀರ ಸೌರಾಷ್ಟ್ರದಕ್ಷಿಣಾಪಥಗಳೆಂಬ ಅನೇಕದೇಶಗಳೂ, ಅಂಗ ವಂಗ ಕಳಿಂಗ ಮಗಧ ಮತ್ಸ್ಯ ಕಾಶೀ ಕೋಸಲಗಳೆಂಬ ದೇಶಗಳೂ ಅನೇಕವಾಗಿರುವುವು. ಇವೆಲ್ಲವೂ ಧನಧಾನ್ಯಪಶುಸಮೃದ್ಧಗಳಾಗಿರುವುವು. ಇವುಗಳಲ್ಲಿ ನಿನ್ನ ಮನಸ್ಸಿಗೆ ತೋರಿದುದನ್ನು ಕೇಳು ! ವ್ಯರ್ಥವಾಗಿ ಆಯಾಸಪಡುವುದೇಕೆ ? ಭಯಪಡಬೇಡ ! ಎಲೆ ಮಂಗಳಾಂಗಿ ! ಏಳು ಏಳು ! ಈಗ ನಿನಗೆ ಉಂಟಾಗಿರುವ ಭಯಕ್ಕೆ ಕಾರಣವೇನು ? ಸೂರ್ಯನು ಮಂಜನ್ನೋಡಿಸುವಂತೆ, ಈಗಲೇ ಅದನ್ನು ನಿರ್ಮೂಲಮಾಡುವೆನು." ಎಂದನು. ಹೀಗೆ ಅನುನಯದಿಂದ ಸಮಾಧಾನಪಡಿಸುತ್ತಿರುವ ರಾಜನ ಮಾತನ್ನು ಕೇಳಿ, ಆ ಕೈಕೇಯಿಯು, ಮೊದಲೇ ತನ್ನ ದುರವಸ್ಥೆಯನ್ನು ನೋಡಿ ಸಂಕಟಪಡುತ್ತಿರುವ ಆತನನ್ನು ಮತ್ತಷ್ಟು ಸಂಕಟಪಡಿಸುವುದಕ್ಕಾಗಿ, ಅತಿಕ್ರೂರವಾದ ತನ್ನ ವಾಗ್ಬಾಣಗಳನ್ನು ಪ್ರಯೋಗಿಸುವುದಕ್ಕೆ ಉಪಕ್ರಮಿಸಿದಳು. ಇಲ್ಲಿಗೆ ಹತ್ತನೆಯಸರ್ಗವು.

---

—•••◆ ಕೈಕೇಯಿಯು ಭರತನಿಗೆ ರಾಜ್ಯವನ್ನು ಕೊಟ್ಟು ರಾಮನನ್ನು ಕಾಡಿಗೆ ಕಳುಹಿಸುವಂತೆ ರಾಜನನ್ನು ನಿರ್ಬಂಧಿಸಿದುದು. ◆•••—

ಹೀಗೆ ದಶರಥನು ಮನ್ಮಥಬಾಣಗಳಿಗೆ ವಶನಾಗಿ ಮೈತಿಳಿಯದ ಕಾಮಾತುರದಿಂದ, ತಾನು ಎಳೆದ ದಾರಿಗೆ ಬರುವಂತಿರುದನ್ನು ತಿಳಿದು, ಕೈಕೇಯಿಯು, ರಾಜನನ್ನು ಕುರಿತು ಕ್ರೂರವಾಕ್ಯದಿಂದ 'ಅಯ್ಯೋ! ಈ ಅನುನಯವು ಸಾಕು ! ಈಗ 'ನನಗೆ ಯಾವ ರೋಗವೂ ಇಲ್ಲ! ನಾನು ಧನವನ್ನೂ ಅಪೇಕ್ಷಿಸುವವಳಲ್ಲ ! ನನ್ನನ್ನು ಯಾರೂ ಅವಮಾನಪಡಿಸಲೂ ಇಲ್ಲ ! ನನ್ನ ಕೋರಿಕೆಯೇ ಬೇರೆ ! ಅದು ಈಗಲೇ ಆಗಬೇಕಾಗಿರುವುದು. ಈಗ ನೀನು ಅದನ್ನು ಮಾಡಿಕೊಡುವುದಾಗಿ ಬರೀಮಾತಿನಿಂದ ಹೇಳಿಟ್ಟರೆ ಸಾಲದು. ನಡೆಸಿಕೊಡುವುದಾದರೆ ಈಗಲೇ ಆಣೆಯಿಟ್ಟು ಸತ್ಯವನ್ನು ಮಾಡಬೇಕು. ನೀನು ಮೊದಲು ಸತ್ಯವನ್ನು ಮಾಡಿಕೊಟ್ಟರೆ ಆಮೇಲೆ ತಿಳಿಸುವೆನು." ಎಂದಳು. ಆಗ ದಶರಥನಿಗೆ ಮನಸ್ಸಿನಲ್ಲಿ ಕೊಂಚಮಟ್ಟಿಗೆ ಆಪ್ಯಾಯನವುಂಟಾಗಲು. "ಆಹಾ! ನನಗೆ ಅವಳಲ್ಲಿರುವ ಪ್ರೇಮಾತಿಶಯವನ್ನು ಚೆನ್ನಾಗಿ ತಿಳಿದೂ ನಂಬದೆ, ಇವಳು ಸತ್ಯವನ್ನು ಮಾಡಿಕೊಡಬೇಕೆಂದು ಕೇಳುವಳು." ಎಂದು ಮಂದಹಾಸದಿಂದ ನಕ್ಕು, ತನ್ನ ಕೈಯಿಂದ ಅವಳ ತಲೆಯ ತುರುಬನ್ನು ಹಿಡಿದು, ತನ್ನ ಕಡೆಗೆ ತಿರುಗಿಸಿಕೊಂಡು "ಎಲೆ ಗರ್ವಶೀಲೆ ! ನಿನಗಿಂತಲೂ ನನಗೆ ಪ್ರಿಯತಮರಾದವರು ಬೇರೊಬ್ಬರೂ ಇಲ್ಲ. ಇದು ನಿನಗೆ ತಿಳಿಯದ ವಿಷಯವಲ್ಲ. ಹಾಗೆಯೇ ಪುರುಷರಲ್ಲಿ ರಾಮನಿಗಿಂತಲೂ ನನಗೆ ಪ್ರಿಯರಾದವರು ಮತ್ತೊಬ್ಬರೂಇಲ್ಲವೆಂಬುದೂ ನಿನಗೆ ಚೆನ್ನಾಗಿ ತಿಳಿದೇ ಇರುವುದು. ನಿನ್ನ ಸೌಭಾಗ್ಯದ ಮದದಿಂದ ನೀನು ಇದನ್ನು ಮರೆತಿದ್ದರೂ ಇರಬಹುದು! ಮುಖ್ಯವಾಗಿ ಯಾರಿಂದಲೂ ಜಯಿಸುವುದಕ್ಕೆ ಅಸಾಧ್ಯನಾಗಿ, ಲೋಕದಲ್ಲಿ ಎಣೆಯಿಲ್ಲದವನಾಗಿ, ಪ್ರಾಣಕ್ಕಿಂತಲೂ ಪೂಜ್ಯನಾಗಿ, ಮಹಾತ್ಮನೆನಿಸಿಕೊಂಡಿರುವ ನನ್ನ ಮುದ್ದುಮಗನಾದ ರಾಮನಮೇಲೆಯೇ ಆಣೆಯಿಟ್ಟು ನಿನಗೆ ಪ್ರತಿಜ್ಞೆಮಾಡಿಕೊಡುವೆನು. ನಿನ್ನ ಮನಸ್ಸಿನ ಕೋರಿಕೆಯನ್ನು ತಿಳಿಸು. ಯಾವನನ್ನು ನಿಮಿಷಮಾತ್ರದವರೆಗೆ ಕಾಣದಿದ್ದರೂ, ನನ್ನ ಪ್ರಾಣವು ನಿಲ್ಲಲಾರದೋ, ಆರಾಮನ ಮೇಲೆಯೇ ಆಣೆಯಿಟ್ಟು ಹೇಳುವೆನು! ನಿನ್ನ ಕೋರಿಕೆ

ಯಂತೆ ನಡೆಸಿಕೊಡುವುದರಲ್ಲಿ ಸಂದೇಹವಿಲ್ಲ. ನನ್ನ ದೇಹವನ್ನಾದರೂ ಬಿಟ್ಟು, ಉಳಿದ ಮಕ್ಕಳನ್ನಾದರೂ ಅನಾದರಿಸಿ, ಯಾವ ರಾಮನನ್ನು ಪೋಷಿಸಬೇಕೆಂದಿರುವೆನೋ, ಆ ರಾಮನಾಣೆಗೂ ನಿನ್ನ ಇಷ್ಟವನ್ನು ನಡೆಸಿಕೊಡುವೆನು. ಎಲೆ ಕಲ್ಯಾಣಿ! ಪ್ರಾಣಕ್ಕಿಂತಲೂ ಮೇಲಾದ ರಾಮನಮೇಲೆಯೇ ಆಣೆಯಿಟ್ಟು ಪ್ರಮಾಣಮಾಡಿಕೊಡುವೆನಲ್ಲವೆ? ಇಷ್ಟುಮಟ್ಟಿಗೆ ಮೋಹದಿಂದ ನಿನಗೆ ವಶವಾಗಿರುವ ನನ್ನ ಮನಸ್ಸನ್ನು ನೀನು ತಿಳಿದೂ,ಹೀಗೆ ಶಂಕಿಸಿ, ನನ್ನನ್ನು ದುಃಖಪಡಿಸಬಹುದೆ ? ಈಗಲಾದರೂ ನಿನ್ನ ಮಾತಿಗೆ ನಾನು ತಪ್ಪುವವನಲ್ಲವೆಂದು ನಿರ್ಧರಿಸಿಕೊಂಡು, ನನ್ನನ್ನು ದುಃಖದಿಂದ ಬಿಡಿಸಿ ಬದುಕಿಸು. ನಿನ್ನ ದುಃಖವನ್ನು ನೋಡಿ ನಾನು ಹೇಗೆತಾನೇ ಸಹಿಸುವೆನು ? ತ್ರಿಕರಣಶುದ್ಧಿಯಿಂದ ನಾನು,ನಿನಗೆ ಅಧೀನನೇ ಅಲ್ಲವೇ ಎಂಬುದನ್ನು ನಿನ್ನ ಮನಸ್ಸಾಕ್ಷ್ಯದಿಂದ ನೀನೇ ಆಲೋಚಿಸಿ ನೋಡು! ಸಂದೇಹಪಡದೆ ಉಚಿತರೀತಿಯನ್ನರಿತು ನಿನ್ನಿಷ್ಟವನ್ನು ಹೇಳು! ನನ್ನನ್ನು ಮೋಹಪಾಶದಲ್ಲಿ ಸಿಕ್ಕಿಸಿಕೊಂಡಿರುವ ನಿನ್ನ ಮಹಿಮೆಯನ್ನೇ ನೀನು ತಿಳಿಯೆಯಾ ! ಇನ್ನು ನನ್ನಲ್ಲಿ ನಿನಗೆ ಸಂದೇಹವೇಕೆ ? ಸತ್ಯವಾಗಿ ನಿನ್ನ ಇಷ್ಟವನ್ನು ನಡೆಸಿಕೊಡುವೆನು. ನನ್ನ ಪುಣ್ಯದಮೇಲೆ ಆಣೆಯಿಟ್ಟು ಸತ್ಯಮಾಡುವೆನು! ಸಂಕೋಚಪಡದೆ ನಿನ್ನ ಇಷ್ಟವನ್ನು ಹೇಳು." ಎಂದನು. ಇದನ್ನು ಕೇಳಿ ಕೈಕೇಯಿಯು, ದಶರಥನು ತನ್ನ ಪಾಶಕ್ಕೆ ಸಿಕ್ಕಿಬಿದ್ದನೆಂದು ಸಂತೋಷಗೊಂಡು, ಮಂಥರೆಯ ದುರ್ಬೋಧನೆಯನ್ನೇ ಮನಸ್ಸಿನಲ್ಲಿಟ್ಟುಕೊಂಡಿದ್ದು, ಯುಕ್ತಾಯುಕ್ತವನ್ನೂ ವಿಚಾರಿಸದೆ, ಕೇವಲಪಕ್ಷಪಾತಬುದ್ಧಿಯಿಂದ ಸ್ವಾರ್ಥಪರಳಾಗಿ, ತನ್ನ ಹಗೆಗಳೊಡನೆಯೂ ಆಡಬಾರದ ಮಾತನ್ನು ಆಡುವುದಕ್ಕೆ ಉಪಕ್ರಮಿಸಿದಳು. ರಾಜನು ಸತ್ಯಕ್ಕೆ ತಪ್ಪುವವನಲ್ಲವಾದುದರಿಂದ, ಆತನು ಪ್ರತಿಜ್ಞೆಮಾಡಿಕೊಟ್ಟಾಗಲೇ ತನ್ನ ಕೋರಿಕೆಯು ಕೈಗೂಡಿತೆಂದು ನಿಶ್ಚಯಿಸಿ ಮನಸ್ಸಿನಲ್ಲಿಯೇ ಆನಂದಪಡುತ್ತಿದ್ದಳು. ಆದರೆ ಆ ಸಂತೋಷವನ್ನು ಹೊರಕ್ಕೆ ಕಾಣಿಸಿಕೊಳ್ಳದೆ, ಕ್ರೌರ್ಯವನ್ನೇತೋರಿಸುತ್ತ, ರಾಜನನ್ನು ಕುರಿತು,ಮೃತ್ಯುವನ್ನೇ ಆತನ ಮುಂದೆ ತಂದಿಡುವಂತೆ ಮಹಾಘೋರವಾದ ಒಂದಾನೊಂದು ಮಾತನ್ನು ಹೇಳುವಳು. “ಎಲೆ ನಾಥಾ ! ನೀನು ಇದುವ

ರೆಗೆ ನಿನ್ನ ಮಗನಮೇಲೆಯೂ, ನಿನ್ನ ಪುಣ್ಯದಮೇಲೆಯೂ, ನಿನ್ನ ಪ್ರಾಣದ ಮೇಲೆಯೂ,ಕ್ರಮವಾಗಿ ಆಣೆಯಿಟ್ಟು,ನನ್ನ ಮಾತನ್ನು ನಡೆಸಿಕೊಡುವು ದಾಗಿ ಒಪ್ಪಿರುವೆ! ಅಗ್ನಿ ಮೊದಲಾದ ಮೂವತ್ತುಮೂರುಕೋಟಿ ದೇವತೆಗಳೂ ಅದನ್ನು ಕೇಳಿರಲಿ! ಚಂದ್ರಸೂರ್ಯರೂ, ಆಕಾಶವೂ, ಇತರ ಗ್ರಹಗಳೂ, ಅಹೋರಾತ್ರಿಗಳೂ, ಹತ್ತುದಿಕ್ಕುಗಳೂ, ಸ್ವರ್ಗಲೋಕವೂ, ಭೂಮಿಯೂ, ಗಂಧರ್ವರೂ, ರಾಕ್ಷಸರೂ, ರಾತ್ರಿಯಲ್ಲಿ ಸಂಚಾರಮಾಡತ ಕ್ಕ ಸಮಸ್ತಭೂತಗಳೂ, ಈ ಮನೆಯಲ್ಲಿರುವ ಗೃಹದೇವತೆಗಳೂ, ಇನ್ನೂ ಉಳಿದ ಇತರಭೂತಗಳೆಲ್ಲವೂ ಈಗ ನೀನು ನನಗೆ ಮಾಡಿಕೊಟ್ಟಿರುವ ಪ್ರತಿ ಜ್ಞೆಗೆ ಸಾಕ್ಷಿಗಳಾಗಿರಲಿ! ಎಲೈ ದೇವತೆಗಳಿರಾ! ನೀವೆಲ್ಲರೂ ಕೇಳಿರಿ! ಸತ್ಯ ಸಂಧನಾಗಿ, ಮಹಾತೇಜಸ್ವಿಯಾಗಿ, ಸಮಸ್ತಧರ್ಮಗಳನ್ನೂ ಬಲ್ಲವನಾಗಿ, ಪ್ರಮಾದರಹಿತನಾಗಿರುವ ಈ ನನ್ನ ಪತಿಯು, ನನಗೆ ವರವನ್ನು ಕೊಡುವು ದಾಗಿ ಪ್ರತಿಜ್ಞೆಮಾಡಿಕೊಟ್ಟಿರುವನು. ಇದಕ್ಕೆ ನೀವೆಲ್ಲರೂ ಸಾಕ್ಷೀಭೂತ ರಾಗಿರಬೇಕು.” ಎಂದು ಉದ್ಘೋಷಿಸಿ, ತಾನು ಅಬಲೆಯಾಗಿದ್ದರೂ ಮಹಾ ಧನುರ್ಧಾರಿಯಾದ ದಶರಥನನ್ನು ಧರ್ಮಪಾಶಕ್ಕೆ ಕಟ್ಟಿಬೀಳಿಸಿಕೊಂಡಳು. ನಡುನಡುವೆ ಆತನ ಸತ್ಯಸಂಧತೆಯನ್ನು ಶ್ಲಾಘಿಸುತ್ತಾ ಆತನನ್ನು ಉಬ್ಬಿಸು ತ್ತಿದ್ದಳು. ಅವನು ಕಾಮಪರವಶನಾಗಿ ಮುಂದುಗಾಣದಿರುವಸಮಯದಲ್ಲಿ ಅವನನ್ನು ನೋಡಿ, “ಎಲೆ ಆರ್ಯನೆ!ಪೂರ್ವದಲ್ಲಿ ದೇವಾಸುರಯುದ್ಧದಲ್ಲಿ ಜರು ಗಿದ ವೃತ್ತಾಂತಗಳೆಲ್ಲವನ್ನೂ ನೀನು ಮೊದಲು ನಿನ್ನ ಸ್ಮರಣೆಗೆ ತಂದುಕೊಳ್ಳು ವನಾಗು! ಆ ಯುದ್ಧವು ನಡೆಯುತ್ತಿರುವಾಗ, ನಡುವೆ ನಿನ್ನ ಹಗೆಯಾದ ಶಂ ಬರಾಸುರನು,ನಿನ್ನನ್ನು ಮೂರ್ಛೆಬೀಳಿಸಿ, ಸಂಪೂರ್ಣವಾಗಿ ನಿನ್ನನ್ನು ಕೊಲ್ಲ ದಿದ್ದರೂ,ಮೃತಪ್ರಾಯನನ್ನಾಗಿಯೇ ಮಾಡಿದ್ದನು.ಆಸಮಯದಲ್ಲಿ ನಾನು ನಿನ್ನನ್ನು ಪ್ರಯತ್ನದಿಂದ ರಕ್ಷಿಸಿ ತಂದೆನು. ಆಗ ನೀನು ನನ್ನ ಸಾಮ ರ್ಥ್ಯಕ್ಕೆ ಮೆಚ್ಚಿ ಎರಡುವರಗಳನ್ನು ಕೊಟ್ಟಿರುವೆ. ಅವುಗಳನ್ನು ನಾನು ಇದು ವರೆಗೆ ನಿಕ್ಷೇಪದಂತೆ ಬಚ್ಚಿಟ್ಟಿದ್ದೆನು. ಈಗ ಅವುಗಳನ್ನು ಉಪಯೋಗಿಸಿಕೊ ಳ್ಳುವುದಕ್ಕೆ ತಕ್ಕ ಸಮಯವು ಬಂದೊದಗಿರುವುದು. ತನ್ನಲ್ಲಿ ಕೊಟ್ಟ ಸ್ವತ್ತ ನ್ನು ಕಾಪಾಡಿಟ್ಟು, ಕೇಳಿದಾಗ ಅವರವರಿಗೆ ಕೊಡಬೇಕಾದುದು ರಾಜಧ

ರ್ಮವಲ್ಲವೆ? ನೀನು ರಾಜರಲ್ಲಿ ಬಹಳ ಸತ್ಯಸಂಧನೆಂದು ಖ್ಯಾತಿಹೊಂದಿರುವೆ! ಅದರಮೇಲೆ ನನಗೆ ಪ್ರಾಣಪ್ರಿಯನಾಗಿಯೂ ಇರುವೆ! ನಾನು ಬೇರೆ ಯಾವು ದನ್ನೂ ಕೇಳುವವಳಲ್ಲ. ನೀನು ಪ್ರತಿಜ್ಞೆಮಾಡಿಕೊಟ್ಟಿರುವ ಆ ಎರಡುವರ ಗಳನ್ನು ಕೊಟ್ಟರೆ ಸಾಕು! ನೀನು ಪ್ರತಿಜ್ಞೆಗೆ ತಪ್ಪಿದರೆ, ಆ ಅವಮಾನವನ್ನು ಸಹಿಸಿಕೊಂಡು ನಾನು ಬದುಕಿರಲಾರೆನು. ಪ್ರಾಣತ್ಯಾಗವನ್ನು ಮಾಡುವು ದೇ ನಿಜವು" ಎಂದಳು. ಹೀಗೆ ಕೈಕೇಯಿಯು ದಶರಥನನ್ನು ಮಾತಿಗೆ ಸಿಕ್ಕಿಸಿಕೊಳ್ಳಲು, ಬೇಟೆಗಾರನ ಬಲೆಗೆ ಸಿಕ್ಕಿಬಿದ್ದ ಜಿಂಕೆಯಂತೆ, ದಶರಥನು ತನ್ನಬಾಯಿಂದ ತಾನೇ ಸಿಕ್ಕಿಬಿದ್ದು, ಅತ್ತಿತ್ತ ಅಲುಗಲಾರದೆ, ಅಪಮೃ ತ್ಯುವಿಗೊಳಗಾಗುವ ಸಮಯವು ಬಂದೊದಗಿತು. ಕಾಮಾ[illegible]ರದಿಂದ ಬುದ್ಧಿಗೆಟ್ಟು ತನಗೆ ವರವನ್ನು ಕೊಡುವುದಾಗಿ ಒಪ್ಪಿರುವ ದಶರ[illegible]ನನ್ನು ನೋಡಿ, ಕೈಕೇಯಿಯು "ಎಲೈ ಪ್ರಾಣನಾಥನೆ! ಆಗ ನೀನು ನನಗೆ ವಾಗ್ದಾನ ಮಾಡಿರುವ ವರಗಳಿಗಾಗಿ, ಈಗ ನಾನು ಅಪೇಕ್ಷಿಸುವ ಎರಡುವಿಷಯಗಳನ್ನು ತಿಳಿಸುವೆನು ಕೇಳು. ಈಗ ನೀನು ರಾಮನ ಪಟ್ಟಾಭಿಷೇಕಾರ್ಥವಾಗಿ ಸಮಸ್ತ ಸನ್ನಾಹಗಳನ್ನೂ ಸಿದ್ಧಪಡಿಸಿರುವೆಯಲ್ಲವೆ? ಅವುಗಳಿಂದಲೇ ಭರತನಿಗೆ ಪ ಟ್ಟಾಭಿಷೇಕವನ್ನು ನಡೆಸಬೇಕು. ಇದೇ ನಾನು ಕೇಳುವ ಮೊದಲನೆಯವರವು! ನೀನು ನನ್ನಲ್ಲಿ ಪ್ರೀತಿಯಿಟ್ಟು ಕೊಟ್ಟಿರುವ ಎರಡನೆಯ ವರಕ್ಕೂ ಈಗ ತಕ್ಕ ಸಮಯವು ಒದಗಿರುವುದು. ಆ ವರಕ್ಕಾಗಿ, ರಾಮನು ಹದಿನಾಲ್ಕುವರ್ಷಗಳ ವರೆಗೆ ನಾರುಬಟ್ಟೆಯನ್ನುಟ್ಟು, ಜಟಾಧಾರಿಯಾಗಿ ಕೃಷ್ಣಾಜಿನವನ್ನು ಧರಿಸಿ ತಾಪಸನಂತೆ ದಂಡಕಾರಣ್ಯದಲ್ಲಿರಬೇಕು. ಎಲೆ ರಾಜನೆ! ಆಗ ಭರತನಿಗೆ ಯೌವರಾಜ್ಯವು ನಿಷ್ಕಂಟಕವಾಗಿ ಸ್ಥಿರಪಡುವುದು. ಭರತನು ನೆಮ್ಮದಿಯಿಂ ದ ರಾಜ್ಯವನ್ನು ಆಳುತ್ತಿರಬೇಕೆಂಬುದೇ ನನ್ನ ಕೋರಿಕೆ! ನೀನು ಕೊಟ್ಟ ವರಗ ಳನ್ನೇ ನಾನು ಈಗ ಯಾಚಿಸಿದೆನೇ ಹೊರತು, ಹೊಸದಾಗಿ ಬೇರೊಂದನ್ನೂ ಕೇಳುವವಳಲ್ಲ. ಭರತನಿಗೆ ಮಾಡುವ ರಾಜ್ಯಾಭಿಷೇಕವನ್ನು ನೋಡಬೇಕೆಂಬ ನನ್ನಸಂತೋಷವು ಹಾಗಿರಲಿ! ಮುಖ್ಯವಾಗಿ ರಾಮನು ಈಗಲೇ ಕಾಡಿಗೆ ಹೊರಡುವುದನ್ನು ಮನಸ್ತೃಪ್ತಿಯಿಂದನೋಡಿ ಸಂತೋಷಪಡಬೇಕೆಂಬುದೇ

ನನ್ನ ಮುಖ್ಯವಾದ ಅಭಿಲಾಷೆ! ಎಲೈ ರಾಜನೆ! ನೀನು ರಾಜಾಧಿರಾಜನೆಂದೂ, ಸತ್ಯಸಂಧನೆಂದೂ ಲೋಕದಲ್ಲಿ ಖ್ಯಾತಿಗೊಂಡಿರುವೆ. ಈ ಖ್ಯಾತಿಯನ್ನು ತಪ್ಪಿಸಿಕೊಳ್ಳಬೇಡ! ನಿನ್ನ ಕುಲೀನತೆಯನ್ನೂ, ನಿನ್ನ ಶೀಲವನ್ನೂ ನಿನ್ನ ಜನ್ಮವನ್ನೂ ರಕ್ಷಿಸಿಕೊಳ್ಳುವನಾಗು! ತಪಸ್ವಿಗಳಾದವರು ಪುಣ್ಯಲೋಕಪ್ರಾಪ್ತಿಗೆ, ಸತ್ಯಕ್ಕಿಂತಲೂ ಬೇರೆಯಾದ ಸಾಧನವೇ ಇಲ್ಲವೆಂದು ಹೇಳಿರುವುದನ್ನು ನೀನೂ ತಿಳಿಯದವನಲ್ಲ. ನಿನ್ನ ಕೀರ್ತಿಯನ್ನು ಕಾಪಾಡಿಕೊಳ್ಳುವುದು ನಿನ್ನ ಭಾರವಾಗಿದೆ" ಎಂದಳು. ಇಲ್ಲಿಗೆ ಹನ್ನೊಂದನೆಯ ಸರ್ಗವು.

---

## ದಶರಥನ ದುಃಖವು.

ಈ ಮಾತುಗಳು ಕಿವಿಗೆ ಬಿದ್ದೊಡನೆ ರಾಜನು, ವಿಭ್ರಾಂತನಾಗಿ, ಹಾಗೆಯೇ ಕ್ಷಣಕಾಲದವರೆಗೆ ಮೂರ್ಛಿತನಾಗಿ ಬಿದ್ದನು. ಆಮೇಲೆ ಮೆಲ್ಲಗೆ ಚೇತರಿಸಿಕೊಂಡು, ತನ್ನ ಮನಸ್ಸಿನಲ್ಲಿ ತಾನು "ಇದೇನು? ಸ್ವಪ್ನವೋ? ಅಥವಾ ಮೋಹವೋ? ಕೈಕೇಯಿಯು ನಿಜವಾಗಿ ಹೀಗೆ ಹೇಳಿರುವಳೆ? ಎಂದಿಗೂ ಹೇಳಲಾರಳು. ಅವಳಿಗೆ ರಾಮನಲ್ಲಿರುವ ವಾತ್ಸಲ್ಯಕ್ಕೆ ಪಾರವೇ ಇಲ್ಲ! ನಾನೇ ಭ್ರಾಂತಿಗೊಂಡಿರಬಹುದೆ? ಅಥವಾ ನಾನು ನನ್ನ ಪೂರ್ವಜನ್ಮದಲ್ಲಿ ಅನುಭವಿಸಿದ ಕಷ್ಟಗಳು ಈಗ ನನ್ನ ಭಾವನೆಗೆ ಬಂದಿರಬಹುದೆ? ಜನ್ಮಾಂತರದಲ್ಲಿಯೂ ಈ ವಿಧವಾದ ಅವಸ್ಥೆಯನ್ನು ನಾನು ಅನುಭವಿಸಿರಲಾರೆನು. ನನಗೆ ಈಗ ಯಾವುದಾದರೂ ಚಿತ್ತವಿಕಾರವುಂಟಾಗಿ ಈ ವಿಧವಾದ ಭಾವನೆಯುಂಟಾಗಿರಬಹುದೆ? ಅದಕ್ಕೂ ಕಾರಣವಿಲ್ಲ! ಇದೇನಾಗಿರಬಹುದು?" ಎಂದು ತನ್ನಲ್ಲಿಯೇ ತಾನು ಪರಿತಪಿಸುತಿದ್ದನು. ಆಗ ಅವನಿಗೆ ಯಾವುದೊಂದು ನಿಶ್ಚಯವೂ ತೋರಲಿಲ್ಲ. ಮನಸ್ಸಿಗೆ ಸ್ವಲ್ಪವಾದರೂ ನೆಮ್ಮದಿಯಿರಲಿಲ್ಲ. ಕೈಕೇಯಿಯ ಮಾತನ್ನು ಸ್ಮರಿಸಿಕೊಂಡು ಕ್ಷಣಕ್ಷಣಕ್ಕೂ ಮೂರ್ಛಿತನಾಗುವನು! ಬಹಳ ಹೊತ್ತಿನಮೇಲೆ ಮೆಲ್ಲಗೆ ಚೇತರಿಸಿಕೊಳ್ಳುವನು! ಇದಿರಾಗಿ ಬಂದು ನಿಂತಿರುವ ಹೆಣ್ಣುಹುಲಿಯನ್ನು ನೋಡಿದ ಜಿಂಕೆಯುಮರಿಯು ಹೇಗೋ ಹಾಗೆ, ಹಿಂದುಮುಂದುತೋರದೆ ವಿಭ್ರಾಂತನಾಗಿಕಳವಳಿಸುವನು! ಕೊನೆಗೆ ದಶರಥನು ಅಲ್ಲಿ ನಿಲ್ಲಲಾರದೆ, ಹೊರಕ್ಕೆ ಬಂದು

ಬರೀನೆಲದಮೇಲೆ ಕುಳಿತುಬಿಟ್ಟನು. ಹಾವಾಡಿಗನು ಮಂತ್ರಬಲದಿಂದ ಬರೆದಿಟ್ಟ ಮಂಡಲದಲ್ಲಿ ಕಟ್ಟುಬಿದ್ದ ವಿಷಸರ್ಪದಂತೆ, ಅತ್ತಿತ್ತ ಚಲಿಸಲಾರದೆ, ಬಿಸಿಬಿಸಿಯಾಗಿ ಉದ್ದವಾದ ನಿಟ್ಟುಸಿರನ್ನು ಬಿಡುತ್ತ. “ಹಾ! ದೈವವೆ! ಇದೇನು ವಿಪರೀತವು?” ಎಂದು ಮನಸ್ಸಿನಲ್ಲಿ ತನ್ನ ದೌರ್ಭಾಗ್ಯವನ್ನು ತಾನೇ ನಿಂದಿಸಿಕೊಳ್ಳುತಿದ್ದನು. ಮೇಲೆಮೇಲೆ ಸಂಕಟವನ್ನು ತಡೆಯಲಾರದೆ, ಪುನಃ ಮೂರ್ಛೆಹೊಂದಿದನು. ತಿರುಗಿ ಬಹುಕಾಲದಮೇಲೆ ಚೇತರಿಸಿಕೊಂಡು, ದುಃಖದಿಂದ ತಪಿಸುತ್ತ, ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ, ಕೈಕೇಯಿಯನ್ನು ಸುಟ್ಟುಬಿಡುವಂತೆ ಕ್ರೂರದೃಷ್ಟಿಯಿಂದ ನೋಡಿ, ಒಂದಾನೊಂದು ಮಾತನ್ನು ಹೇಳುವನು. “ಎಲೆ ಘಾತುಕಿ! ಇದೇನು? ನಿನಗೆ ಈ ದುರ್ಬುದ್ಧಿಯು ಹುಟ್ಟಿತು! ಛೀ ಪಾಪಿನಿಯೆ! ನಮ್ಮ ಕುಲಕ್ಕೇ ಮೃತ್ಯುವಾದೆಯಲ್ಲಾ! ರಾಮನು ನಿನಗೆ ಮಾಡಿದ ಅಪರಾಧವೇನು? ಅಥವಾ ನಾನು ಮಾಡಿದ ತಪ್ಪೇನು? ರಾಮನು! ನಿನ್ನನ್ನು ಹೆತ್ತ ತಾಯಂತೆ ನೋಡುತಿದ್ದನಲ್ಲವೆ? ಆತನಲ್ಲಿಯೇ ನೀನು ಈ ವಿಧವಾದ ವಿಪರೀತ ಬುದ್ಧಿಯನ್ನು ತೋರಿಸಬಹುದೆ? ನಿನಗೆ ಈ ದುರ್ಬುದ್ಧಿಯುಂಟಾಗುವುದಕ್ಕೆ ಕಾರಣರಾರು? ಕೊಳ್ಳಿಯಿಂದ ತಲೆಯನ್ನು ತುರಿಸಿಕೊಳ್ಳುವಂತೆ, ನಿನ್ನನ್ನು ಕೈಹಿಡಿದು ತಂದುದು, ಮನೆಗೆ ಮಾರಿಯನ್ನು ತಂದಂತಾಯಿತು! ಅಜ್ಞತೆಯಿಂದ ಕ್ರೂರವಾದ ವಿಷಸರ್ಪವನ್ನು ಮನೆಗೆ ತಂದಿಟ್ಟಂತೆ, ನಿನ್ನನ್ನು ರಾಜಕನ್ನಿಕೆಯೆಂದು ಭ್ರಾಂತಿಪಟ್ಟು ಕೈಹಿಡಿದೆನಲ್ಲವೆ? ಎಲೆ ಮೂಢೆ! ಲೋಕದಲ್ಲಿರುವ ಪಶುಪಕ್ಷಿಮೃಗಾದಿಜೀವರಾಶಿಗಳೆಲ್ಲವೂ ನಮ್ಮ ರಾಮನ ಗುಣಕ್ಕೆ ಆನಂದಿಸುತ್ತಿರುವಾಗ, ನಾನು ಯಾವ ತಪ್ಪಿಗಾಗಿ ಅಂತಹ ಪುತ್ರರತ್ನವನ್ನು ತೊರೆದುಬಿಡಲಿ? ಕೌಸಲ್ಯೆಯನ್ನಾಗಲಿ, ಸುಮಿತ್ರೆಯನ್ನಾಗಲಿ, ರಾಜ್ಯಲಕ್ಷ್ಮಿಯನ್ನಾಗಲಿ, ಕೊನೆಗೆ ನನ್ನ ಪ್ರಾಣವನ್ನೇ ಆಗಲಿ ನಾನು ತೊರೆದುಬಿಡಬಲ್ಲೆನೇಹೊರತು, ಪಿತೃವತ್ಸಲನಾದ ಆ ರಾಮನನ್ನು ಎಂದಿಗೂ ಬಿಟ್ಟಿರಲಾರೆನು. ಆ ನನ್ನ ಮುದ್ದುಮಗನನ್ನು ಕಣ್ಣಾರೆ ಕಾಣುತಿದ್ದಷ್ಟೂ, ನನ್ನ ದೇಹವು ಸಂತೋಷದಿಂದ ಉಬ್ಬುತ್ತಿರುವುದು. ಆತನನ್ನು ಕಾಣದಿದ್ದರೆ ನನ್ನ ಪ್ರಾಣವೇ ನಿಲ್ಲದು. ಒಂದುವೇಳೆ ಸೂರ್ಯನಿಲ್ಲದಿದ್ದರೂ ಲೋಕವು ಬದುಕಿರ

ಬಹುದು! ನೀರಿಲ್ಲದೆಯೂ ಪೈರುಗಳು ಜೀವಿಸಿರಬಹುದು ! ರಾಮನಿಲ್ಲದೆ ಒಂದು ಕ್ಷಣವಾದರೂ ನನ್ನ ಪ್ರಾಣವು ನಿಲ್ಲಲಾರದು ! ಎಲೆ ಪಾಪಿನಿ ಇನ್ನು ಸಾಕು! ಈ ನಿನ್ನ ದುರಾಲೋಚನೆಯನ್ನು ಬಿಟ್ಟುಬಿಡು! ಈ ನಿನ್ನ ನಿಶ್ಚಯವು ನನ್ನ ಪ್ರಾಣಹಾನಿಗೆ ಕಾರಣವೇಹೊರತು ಬೇರೆಯಲ್ಲ ! ನಾನು ನಿನಗೆ ಪತಿಯೆನಿಸಿಕೊಂಡಿದ್ದರೂ ಚಿಂತೆಯಿಲ್ಲ! ಇದೋ! ತಲೆಯನ್ನು ಬಗ್ಗಿಸಿ ನಿನ್ನ ಕಾಲಿಗೆ ಬೀಳುವೆನು! ನನ್ನಲ್ಲಿ ಪ್ರಸನ್ನಳಾಗು! ಆಹಾ! ಇಂತಹ ಕ್ರೂರವಾದ ಆಲೋಚನೆಯು ನಿನಗೆಲ್ಲಿ ಹುಟ್ಟಿತು? ಇದೇನು? ಒಂದುವೇಳೆ ನೀನು ನಿನ್ನ ಮಗನಾದ ಭರತನಲ್ಲಿ ನನಗೆ ಪ್ರೀತಿಯಿರುವುದೋ ಇಲ್ಲವೋ ಎಂಬುದನ್ನು ಕಂಡುಕೊಳ್ಳಬೇಕೆಂದು ಪರೀಕ್ಷಾರ್ಥವಾಗಿ ಹೀಗೆ ಹೇಳಿರಬಹುದೆ? ಸರಿ! ಹಾಗಿದ್ದರೆ ನೀನು ಭರತನಿಗೆ ಪಟ್ಟಾಭಿಷೇಕವನ್ನು ನಡೆಸಬೇಕೆಂದು ಕೇಳಿದುದೇನೋ ಸಹಜವೇ! ಆದರೆ ನೀನು ಪೂರ್ವದಿಂದ ರಾಮನಲ್ಲಿಟ್ಟಿದ್ದ ಪ್ರೇಮವು ನಿನ್ನ ಸ್ಮರಣೆಯಲ್ಲಿಲ್ಲವೆ? ರಾಮನೇ ನನ್ನ ಹಿರಿಯಮಗನೆಂದೂ, ಧರ್ಮಜ್ಞರಲ್ಲಿ ಆತನೇ ಮೇಲಾದವನೆಂದೂ, ನಿನ್ನ ಬಾಯಿಯಿಂದ ನೀನೇ ಹೇಳುತಿದ್ದೆಯಲ್ಲಾ! ಈಗ ಅವೆಲ್ಲವೂ ಎಲ್ಲಿಹೋದುವು? ಒಂದುವೇಳೆ ನೀನು ಆಮಾತನ್ನು ! ನನ್ನ ಮುಖಸ್ತೋಲ್ಲಾಸಕ್ಕಾಗಿಯೋ, ಅಥವಾ ರಾಮನು ನಿನಗೆ ಮಾಡುತಿದ್ದ ಶುಶ್ರೂಷೆಯಿಂದ ಸಂತೋಷಹೊಂದಿಯೋ ಹೇಳಿರಬಹುದು. ಈಗ ನಿನಗೆ ಭರತನಲ್ಲಿ ವಿಶೇಷವಾತ್ಸಲ್ಯವು ನೆಲೆಗೊಂಡಿದ್ದರೂ, ರಾಮನಲ್ಲಿ ದ್ವೇಷಬುದ್ಧಿಯು ಹುಟ್ಟುವುದಕ್ಕೆ ಕಾರಣವೇನು? ನೀನು ಹಿಂದೆ ರಾಮನ ವಿಷಯವಾಗಿ ಹೇಳುತಿದ್ದ ಶ್ಲಾಘನೆಯ ಮಾತುಗಳೆಲ್ಲವೂ, ಕೇವಲಮುಖಸ್ತುತಿಯ ಮಾತುಗಳೇಹೊರತು ನಿಜವಾದುವುಗಳಲ್ಲವೆಂದೇ ಊಹಿಸಬೇಕಾಗಿದೆ. ಒಂದುವೇಳೆ ರಾಮನನ್ನು ಕಾಡಿಗೆ ಕಳುಹಿಸಬೇಕೆಂಬುದನ್ನು ಕೂಡ, ನನ್ನ ಮನಸ್ಸನ್ನು ಪರೀಕ್ಷಿಸುವುದಕ್ಕಾಗಿಯೇ ನೀನು ಹೇಳಿರಬಹುದೆ ? ಅದಕ್ಕೂ ಅವಕಾಶವಿಲ್ಲ! ಹಾಗಿದ್ದರೆ ನೀನು ಇಷ್ಟು ಸಂಕಟಪಡುತ್ತಿರಲಿಲ್ಲ! ಎಲೆ ಪಾಪಿನಿ ! ಹೀಗೆ ನೀನು ದುಃಖದಿಂದ ಕೊರಗುವುದಲ್ಲದೆ, ನನಗೂ ಇಷ್ಟುಸಂಕಟವನ್ನುಂಟುಮಾಡಬಹುದೆ ? ಯಾರ ದುರ್ಬೋಧನೆಗೊಳಪಟ್ಟು ಈ ಶೂನ್ಯಗೃಹದಲ್ಲಿ ಬಂದು ಸೇರಿರುವೆ? ನಿನ್ನ ಸ್ವಬುದ್ಧಿಯಿಂದ ನೀನು ಹೀಗೆ ಮಾಡಿರುವುದಾಗಿ ತೋರಲಿಲ್ಲ! ಅಯ್ಯೋ! ನೀತಿಗೆ ನೆಲೆಯಾದ ಈ ನಮ್ಮ



೩೫೮. ದಶರಥನು ಕೈಕೇಯಿಯನ್ನು ಪ್ರಸನ್ನಳಾಗಿಸುವುದಕ್ಕಾಗಿ
ಬಹುದೈನ್ಯದಿಂದ ಬೇಡಿದುದು.

ಇಕ್ಷ್ವಾಕುವಂಶದಲ್ಲಿ, ಇಂತಹ ಅನ್ಯಾಯಕ್ಕೆ ಅವಕಾಶಕೊಡಬಹುದೆ? ಈ ನಿನ್ನ ವಿಪರೀತಬುದ್ಧಿಯು ನಮ್ಮ ವಂಶದ ಅನರ್ಥಕ್ಕಾಗಿಯೇಹೊರತು ಬೇರೆಯಲ್ಲ! ಎಲೆ ! ಪ್ರಿಯೆ ! ಅದೆಲ್ಲವೂ ಹಾಗಿರಲಿ ! ನೀನು ಇದುವರೆಗೆ ನನ್ನ ವಿಷಯದಲ್ಲಿ ಅನುಚಿತವನ್ನಾಗಲಿ, ಅಪ್ರಿಯವನ್ನಾಗಲಿ ನಡೆಸಿದುದಿಲ್ಲ! ಆದುದರಿಂದ ನೀನು ಹೇಳುವ ಮಾತಿನಲ್ಲಿ ನನಗೆ ಈಗಲೂ ನಂಬಿಕೆಯೇ ಹುಟ್ಟಲಿಲ್ಲ! ನಿನಗೆ ರಾಮನೂ, ಮಹಾತ್ಮನಾದ ಭರತನೂ, ಇವರಿಬ್ಬರೂ ಸಮಾನವಾದ ಪ್ರೀತಿಗೆ ಪಾತ್ರರಲ್ಲವೆ? ಈ ಮಾತನ್ನು ನಾನು ನಿನ್ನ ಬಾಯಿಂದಲೇ ಅನೇಕಾವೃತ್ತಿ ಕೇಳಿರುವೆನು. ಎಲೆ ದೇವಿ! ಇದೇನಾಶ್ಚರ್ಯವು! ಧರ್ಮಾತ್ಮನಾಗಿ, ಮಹಾಯಶಸ್ವಿಯೆಂದು ಖ್ಯಾತಿಗೊಂಡಿರುವ ಆ ರಾಮನನ್ನು--ಅಬ್ಬಾ! ಒಂದಲ್ಲ! ಎರಡಲ್ಲ—ಹದಿನಾಲ್ಕುವರ್ಷಗಳವರೆಗೆ ಕಾಡಿನಲ್ಲಿರಿಸುವುದು ನಿನಗೆ ಹೇಗೆ ತಾನೇ ಸಮ್ಮತವಾಯಿತು ! ಲೋಕದಲ್ಲಿ ಧರ್ಮಮೂರ್ತಿಯೆನಿಸಿಕೊಂಡು, ಬಹುಸುಕುಮಾರವಾದ ಮೈಯ್ಯುಳ್ಳ ಆರಾಮನನ್ನು ,ಮಹಾಭಯಂಕರವಾದ ಕಾಡಿನಲ್ಲಿರಿಸಬೇಕೆಂದು ಹೇಳುವುದಕ್ಕೆ ನಿನಗೆ! ಹೇಗೆ ಬಾಯಿ ಬಂತು? ಒಂದುವೇಳೆ ಆತನ ಧರ್ಮಬುದ್ಧಿಗಾಗಲಿ, ಆತನ ದೇಹದ ಸೌಕುಮಾರ್ಯಕ್ಕಾಗಲಿ, ನಿನ್ನ ಮನಸ್ಸು ಕರಗದೆ ಇದ್ದರೂ ಇರಲಿ! ಆತನು ನಿನಗೆ ಎಡೆಬಿಡದೆ ಶುಶ್ರೂಷೆಮಾಡುತಿದ್ದವನಲ್ಲವೆ? ಅದನ್ನಾದರೂ ಸ್ಮರಿಸಬಾರದೆ? ಲೋಕಾಭಿರಾಮನೆನಿಸಿಕೊಂಡಿರುವ ಆರಾಮನನ್ನು ಕಾಡಿಗೆ ಕಳುಹಿಸಬೇಕೆಂದು ಹೇಳುವೆಯಲ್ಲಾ! ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ಭರತನಿಗಿಂತಲೂ ರಾಮನು ನಿನ್ನನ್ನು ಹೆಚ್ಚಾಗಿ ಶುಶ್ರೂಷೆ ಮಾಡುತಿದ್ದವನಲ್ಲವೆ ? ಹೀಗಿರುವಾಗ ರಾಮನಿಗಿಂತಲೂ ಭರತನಲ್ಲಿ ನನಗೆ ಯಾವವಿಶೇಷವೂ ಕಾಣಲಿಲ್ಲ. ರಾಮನು ಎಡೆಬಿಡದೆ ನಿನಗೆ ಶುಶ್ರೂಷೆಮಾಡುತಿದ್ದುದುಮಾತ್ರವೇ ಅಲ್ಲ. ಆ ರಾಮನಿಗಿಂತಲೂ ನಿನ್ನಲ್ಲಿ ಹೆಚ್ಚು ಗೌರವವನ್ನೂ ಭಕ್ತಿವಿಶ್ವಾಸಗಳನ್ನೂ ತೋರಿಸುತಿದ್ದವರು ಬೇರೆ ಯಾರುಂಟು? ಹೇಳಿದ ಕೆಲಸಗಳನ್ನು ಆಗಾಗಲೇ ನಡೆಸುತಿದ್ದ ಕಾರ್ಯೋತ್ಸಾಹವು ಅವನಲ್ಲಿರುವಂತೆ ಮತ್ತಾರಲ್ಲಿರುವುದು ? ಈ ವಿಧವಾದ ಶುಶ್ರೂಷೆಗಳೆಲ್ಲವನ್ನೂ ಪುರುಷಶ್ರೇಷ್ಠನಾದ ರಾಮನಿಗಿಂತಲೂ ಅಧಿಕವಾಗಿ ನಿನಗೆ ನಡೆಸಿದವರಾರು ? ಇಲ್ಲಿ ಎಷ್ಟೋ ಸಾವಿರಮಂದಿ ಸ್ತ್ರೀಯರಿರುವರು! ಅನುಜೀವಿಗಳಾದ ಅನೇಕ ಭೃತ್ಯರಿರುವರು!

ಇವರಲ್ಲಿ ಒಬ್ಬರಾದರೂಅಸೂಯೆಯಿಂದ ಅವನನ್ನು ನಿಂದಿಸಿದವರಿಲ್ಲ.ರಾಮನು ನಿಷ್ಕಪಟವಾದಮನಸ್ಸುಳ್ಳವನು! ಸಮಸ್ತಭೂತಗಳನ್ನೂ ಪ್ರಿಯವಾಕ್ಯಗಳಿಂದ ಲಾಲಿಸುವನು.ತನ್ನ ದೇಶದ ಪ್ರಜೆಗಳೆಲ್ಲರನ್ನೂ ಅಭೀಷ್ಟದಾನಾದಿಗಳಿಂದ ಸಂತೋಷಪಡಿಸಿ, ಅವರ ಮನಸ್ಸನ್ನು ಆಕರ್ಷಿಸಿಕೊಂಡಿರುವನು. ಸತ್ಯದಿಂದಲೇಸಮಸ್ತಪುಣ್ಯಲೋಕಗಳನ್ನೂ ತನಗೆ ಈಡುಮಾಡಿಕೊಂಡಿರುವನು. ದಾನದಿಂದ ದರಿದ್ರರೆಲ್ಲರನ್ನೂ ವಶಪಡಿಸಿಕೊಂಡಿರುವನು. ಶುಶ್ರೂಷೆಯಿಂದ ಸಮಸ್ತಗುರುಜನಗಳನ್ನೂ ಸ್ವಾಧೀನಪಡಿಸಿಕೊಂಡಿರುವನು. ಯುದ್ಧದಲ್ಲಿ ತನಗಿದಿರಾಗಿ ಬಂದ ಹಗೆಗಳೆಲ್ಲರನ್ನೂ ತನ್ನ ಧನುಸ್ಸಿನಿಂದ ಸಾಧಿಸಿಕೊಳ್ಳುವನು. ಹೀಗೆ ಕ್ಷತ್ರಿಯಜಾತಿಯೋಗ್ಯವಾದ ಭುಜವೀರ್ಯವೊಂದುಮಾತ್ರವೇ ಅಲ್ಲದೆ, ಸತ್ಯ ದಾನ ದಯಾದಿ ಗುಣಗಳಿಂದ ಸಮಸ್ತಲೋಕವನ್ನೂ ತನಗೆ ಈಡಾಗಿಮಾಡಿಕೊಳ್ಳತಕ್ಕ ಅದ್ಭುತವಾದ ಒಂದು ಮಹಾವೀರ್ಯವೂ ಉಂಟು. ಸಮಸ್ತಗುಣಗಳಲ್ಲಿಯೂ ಮೇಲೆನಿಸಿಕೊಂಡ ಸತ್ಯವೂ, ಪರಲೋಕಸಾಧಕವಾದ ದಾನವೂ, ಇಂದ್ರಿಯನಿಗ್ರಹಕವಾದ ತಪಸ್ಸೂ, ಲೋಕದ ಜನರ ಪ್ರೀತಿಯನ್ನು ಸಂಪಾದಿಸುವುದಕ್ಕೆ ಸಾಧನವಾದ ತ್ಯಾಗವೂ,ಸಮಸ್ತಜನರಲ್ಲಿಯೂ ಸೌಹಾರ್ದವೂ, ಬಾಹ್ಯಾಭ್ಯಂತರಶುದ್ಧಿಯೂ, ಪರರ ಮನಸ್ಸನ್ನು ಅನುವರ್ತಿಸತಕ್ಕ ಋಜುಸ್ವಭಾವವೂ, ತತ್ವಜ್ಞಾನವೂ, ಗುರುಶುಶ್ರೂಷೆಯೂ, ಇವೇ ಮೊದಲಾದ ಸದ್ಗುಣಗಳೆಲ್ಲವೂ ಎಡೆಬಿಡದೆ ರಾಮನಲ್ಲಿ ನೆಲೆಗೊಂಡಿರುವುವು. ಹೀಗೆ ಋಜುಸ್ವಭಾವವುಳ್ಳವನಾಗಿ, ದೇವತೆಗಳಿಗೆ ಸಮಾನನಾಗಿ,ಮಹರ್ಷಿಗಳಂತೆ ದಿವ್ಯತೇಜಸ್ಸುಳ್ಳ ರಾಮನನ್ನು ಕಾಡಿಗೆ ಕಳುಹಿಸಿಬಿಡಬೇಕೆಂಬ ಈ ಪಾಪಬುದ್ಧಿಯು ನಿನಗೆ ಹೇಗೆತಾನೇ ಉಂಟಾಯಿತು?

---

* ಪೂರ್ವದಲ್ಲಿ ಚೋಳರಾಜನು ಮಧ್ಯಮವೀಧಿಭಟ್ಟಾರಕರೆಂಬವರನ್ನು ಕುರಿತು "ಆತ್ಮಾನಂ ಮಾನುಷಂ ಮನ್ಯೇ" ಎಂದು ಹೇಳುತಿದ್ದ ರಾಮನು,ಜಟಾಯುವಿಗೆ ಪುಣ್ಯಲೋಕಗಳನ್ನು ಕೊಟ್ಟುದು ಹೇಗೆ" ಎಂದು ಆಕ್ಷೇಪಿಸಲು, ಅದಕ್ಕಾ ಭಟ್ಟಾರಕರು "ಸತ್ಯೇನ ಲೋಕಾಞ್ ಜಯತಿ" ಆತನು ತನ್ನ ಸತ್ಯದಿಂದಲೇ ಸಮಸ್ತ ಪುಣ್ಯಲೋಕಗಳನ್ನೂ ತನಗೆ ಈಡುಮಾಡಿಕೊಂಡಿರುವನೆಂದು ಸಮಾಧಾನಹೇಳಿ, ದೊಡ್ಡ ಬಹುಮಾನವನ್ನು ಪಡೆದುದಾಗಿ ಐತಿಹ್ಯವುಂಟು.

ಲೋಕಸಾಮಾನ್ಯಕ್ಕೂ ಪ್ರಿಯವನ್ನೇ ನುಡಿಯುವ ಸುಸ್ವಭಾವವುಳ್ಳ ರಾಮ ನಿಗೆ ಮನಸ್ಸಿನಲ್ಲಿಯಾದರೂ ನಾನು ಅಪ್ರಿಯವನ್ನು ನೆನೆಸಲಾರೆನು. ಹೀಗಿರು ವಾಗ ಕ್ರೂರಸ್ವಭಾವವುಳ್ಳ ಈ ನಿನ್ನ ದುರಾಲೋಚನೆಗೊಳಗಾಗಿ, ನಾನು ಹೇಗೆತಾನೇ ಆ ರಾಮನನ್ನು ಕರೆದು ಕಾಡಿಗೆ ಹೋಗೆಂದು ಬಾಯಿಬಿಟ್ಟು ಹೇ ಳಲಿ ! ತಾಳ್ಮೆ, ಇಂದ್ರಿಯನಿಗ್ರಹ, ಸತ್ಯ, ಧರ್ಮ, ಕೃತಜ್ಞತೆ, ಅಹಿಂಸೆ, ಮುಂ ತಾದ ಸರ್ವೋತ್ತಮಗುಣಗಳೆಲ್ಲವೂ ಯಾವನಲ್ಲಿರುವುವೋ, ಆ ರಾಮನನ್ನು ತೊರೆದು ಬಿಟ್ಟಮೇಲೆ,ನನಗೆ ಬೇರೆ ಗತಿಯೇನು ? ನನಗೆ ಮುಂದಕ್ಕೆ ದಿಕ್ಕಾಗಿ ರುವ ರಾಮನನ್ನು ಹೇಗೆ ಬಿಟ್ಟುಬಿಡಲಿ ? ಎಲೆ ಕೈಕೇಯಿ ! ನನ್ನ ಈ ಮುಪ್ಪ ನ್ನಾದರೂ ನೋಡಿ ನಿನಗೆ ಮರುಕವು ಹುಟ್ಟಬೇಡವೆ ? ಇನ್ನೇನು ? ನನಗೆ ಕೊನೆಗಾಲವು ಸಮೀಪಿಸಿರುವುದು. ಬಹಳ ಶೋಚನೀಯವಾದ ಸ್ಥಿತಿಯ ಲ್ಲಿರುವೆನು! ಹೀಗೆ ದಿಕ್ಕಿಲ್ಲದವನಂತೆ ಗೋಳಿಡುತ್ತಿರುವ ಈ ನನ್ನ ಸ್ಥಿತಿಯನ್ನು ನೋಡಿಯೂ ನಿನಗೆ ನನ್ನಲ್ಲಿ ಕರುಣೆ ಹುಟ್ಟಲಿಲ್ಲವೆ ? ನನ್ನಲ್ಲಿ ಕೃಪೆಮಾಡು! ಸಾಗರಾಂತವಾದ ಈ ಭೂಮಿಯಲ್ಲಿ ರಾಜಬಾ ಯರೂಪವಾಗಿ ನನಗೆ ಏನೇನು ಸಿಕ್ಕುತ್ತಿರುವುದೋ, ಅದೆಲ್ಲವನ್ನೂ ನಿನಗೇ ಒಪ್ಪಿಸಿಬಿಡುವೆನು. ನಿನ್ನ ಕೋಪವನ್ನು ಬಿಟ್ಟು ಪ್ರಸನ್ನಳಾಗು ! ಇದೋ ಕೈಮುಗಿದು ಬೇಡುವೆನು! ಕೊನೆಗೆ ನಿನ್ನ ಕಾಲಿಗಾದರೂ ಬೀಳುವೆನು! ರಾಮ ನನ್ನು ರಕ್ಷಿಸಿ, ನನ್ನನ್ನೂ ಅಧರ್ಮದಲ್ಲಿ ಬೀಳದಂತೆ ಮಾಡು!" ಹೀಗೆಂದು ದಶರಥನು ದುಃಖದಿಂದ ಬೇಯುತ್ತಾ, ಮೈಮೇಲೆ ಪ್ರಜ್ಞೆಯಿಲ್ಲದೆ ಗೋಳಿಡು ತ್ತಿದ್ದನು. ನಿಂತ ಕಡೆಯಲ್ಲಿ ನಿಲ್ಲದೆ ಸಂಕಟಪಡುತ್ತಿದ್ದನು "ದುಃಖಸಾಗರದ ಲ್ಲಿ ಮುಳುಗಿ ಹೋಗುತ್ತಿರುವ ನನ್ನನ್ನು ಎತ್ತಿ ದಡಕ್ಕೆ ಮುಟ್ಟಿಸಬಾರದೆ?" ಎಂದು ಎರಡುಕೈಗಳನ್ನೂ ನೀಡಿ, ಬಾರಿಬಾರಿಗೂ ಪ್ರಾರ್ಥಿಸುತಿದ್ದನು. ಇಷ್ಟಾ ದರೂ ಕ್ರೂರಹೃದಯಳಾದ ಕೈಕೇಯಿಗೆ ಮರುಕವೇ ಹುಟ್ಟಲಿಲ್ಲ. ಅವಳು ಮತ್ತಷ್ಟು ರೌದ್ರಾವೇಶವನ್ನೇ ತೋರಿಸುತ್ತಾ, ರಾಜನನ್ನು ನೋಡಿ, ಮೊದಲಿ ಗಿಂತಲೂ ಕ್ರೂರವಾದ ಮಾತನ್ನಾಡುವಳು. "ಎಲೈ ರಾಜನೆ! ಇದೀಗ ಬಹ ಳ ಚೆನ್ನಾಯಿತು ! ಹಿಂದೆ ವರಗಳನ್ನು ಕೊಡುವುದಾಗಿ ವಾಗ್ದಾನಮಾಡಿ, ಅದಕ್ಕಾಗಿ ಈಗ ಇಷ್ಟು ಸಂಕಟಪಡುವುದು ನ್ಯಾಯವೆ? ಇನ್ನುಮೇಲೆ ನಿನಗೆ

ಧಾರ್ಮಿಕನೆಂದು ಹೇಳಿಕೊಳ್ಳುವುದಕ್ಕೆ ಹೇಗೆತಾನೇ ಬಾಯಿ ಬಂದೀತು ? ನೀನು ಧರ್ಮಜ್ಞರಾದ ಅನೇಕರಾಜರ್ಷಿಗಳೊಡನೆ ಕಲೆತು ಮಾತಾಡುತ್ತಿರುವಾಗ, ಒಂದುವೇಳೆ ಅವರು ನಿನ್ನನ್ನು ಮಾತಿಗೆ ತಪ್ಪಿದವನೆಂದು ಹೇಳಿದರೆ, ಆಗ ನೀನು ಅವರಿಗೆ ಯಾವ ಪ್ರತ್ಯುತ್ತರವನ್ನು ಕೊಡಬಲ್ಲೆ ? ಅಯ್ಯೋ ! ನೀನು ರಾಜಕುಲಕ್ಕೇ ಒಂದು ಕಳಂಕವನ್ನು ತರುವಹಾಗಿದೆ." "ನನ್ನನ್ನು ಬದುಕಿಸಿ ಪ್ರಾಣದಾನವನ್ನು ಮಾಡಿದ ಆ ಕೈಕೇಯಿಗೆ, ನಾನು ಮೋಸಮಾಡಿದುದುಂಟು" ಎಂದು ಎಲ್ಲರ ಮುಂದೆಯೂ ನಿನ್ನ ಬಾಯಿಂದ ನೀನೇ ಒಪ್ಪಿಕೊಳ್ಳಬೇಕಾಗುವುದಲ್ಲವೆ ? ಎಲೆ ರಾಜನೆ ! ಸತ್ಯವಾಗಿ ನೀನು ರಾಜವಂಶಕ್ಕೆ ದೊಡ್ಡ ಅವಮಾನವನ್ನು ತರುವುದರಲ್ಲಿ ಸಂದೇಹವಿಲ್ಲ. ಮೊದಲು ವರವನ್ನು ಕೊಡುವುದಾಗಿ ಒಪ್ಪಿ, ಈಗ ಮಾತಿಗೆ ತಪ್ಪುವೆಯಾ ? * ಶಿಬಿಚಕ್ರವರ್ತಿಯ ಕಥೆಯನ್ನಾದರೂ ಕೇಳಿಲ್ಲವೆ ? ಅವನು ಕೇವಲಸಾಧಾರಣವಾದ ಒಂದು ಪಾರಿವಾಳದ ಹಕ್ಕಿಯನ್ನು ಕಾಪಾಡುವುದಕ್ಕಾಗಿ, ಅದನ್ನು ಬೆನ್ನಟ್ಟಿ ಬಂದ ಗಿಡುಗನಿಗೆ, ತನ್ನ ದೇಹದ ಮಾಂಸವನ್ನೇ ಕೊಟ್ಟುಬಿಟ್ಟನು. †ಅಲರ್ಕನು ತನ್ನ ಕಣ್ಣುಗಳನ್ನು ಕಿತ್ತುಕೊಟ್ಟು, ಸರ್ವೋತ್ತಮ

---

*ಪೂರ್ವದಲ್ಲಿ ಶೈಬ್ಯನೆಂಬ ರಾಜನು ಬಹಳ ದಾನಶೀಲನೆಂದು ಖ್ಯಾತಿಹೊಂದಿದ್ದನು. ಅವನ ದಾತೃತ್ವವನ್ನು, ಪರೀಕ್ಷಿಸುವುದಕ್ಕಾಗಿ, ಇಂದ್ರನು ಗಿಡುಗನಂತೆಯೂ, ಅಗ್ನಿಯು ಪಾರಿವಾಳದಂತೆಯೂ ರೂಪವನ್ನು ಧರಿಸಿ, ಗಿಡುಗನು ಪಾರಿವಾಳವನ್ನು ತಿನ್ನುವುದಕ್ಕಾಗಿ ಬೆನ್ನಟ್ಟಿಬರುವಂತೆ ನಟಿಸುತ್ತ ಶೈಬ್ಯನ ಸಭೆಗೆ ಬಂದರು. ಪಾರಿವಾಳವು ತನ್ನ ಪ್ರಾಣದಾನಕ್ಕಾಗಿ ಅವನ ಕಾಲಮೇಲೆ ಬಿದ್ದು ಮರೆಹುಗಲು, ಅವನು ಅದನ್ನು ರಕ್ಷಿಸುವುದಾಗಿ ಅಭಯಕೊಟ್ಟನು. ಗಿಡುಗವು ತನಗೆ ದೈವವಿಹಿತವಾದ ಆಹಾರವನ್ನು ತಪ್ಪಿಸುವುದು ಅಧರ್ಮವೆಂದೂ, ಆ ಪಾರಿವಾಳವನ್ನು ಬಿಟ್ಟುಕೊಡಬೇಕೆಂದೂ ಕೇಳಿತು. ಅದಕ್ಕಾರಾಜನು "ಬೇಕಾದರೆ ಆಹಾರಾರ್ಥವಾಗಿ ಬೇರೆ ಮಾಂಸವನ್ನು ಕೊಡುವೆನೇ ಹೊರತು, ತನ್ನಲ್ಲಿ ಮರೆಹೊಕ್ಕ ಪಾರಿವಾಳವನ್ನು ಬಿಡುವುದಿಲ್ಲ" ವೆಂದು ಉತ್ತರಕೊಟ್ಟನು. ಅದಕ್ಕಾ ಗಿಡುಗವು "ಪಾರಿವಾಳದ ತೂಕಕ್ಕೆ ಸರಿಯಾಗಿ ನಿನ್ನ ದೇಹದ ಮಾಂಸವನ್ನೇ ಕೊಡಬೇಕು" ಎಂದು ರಾಜನನ್ನು ಕೇಳಲು, ಅವನು ತನ್ನ ದೇಹವನ್ನೇ ಕತ್ತರಿಸಿ ತೂಗಿಕೊಟ್ಟು, ಪಾರಿವಾಳವನ್ನು ಕಾಪಾಡಿದುನಾಗಿ ಪುರಾಣಪ್ರಸಿದ್ಧವು.

† ಕುರುಡನಾದ ಬ್ರಾಹ್ಮಣನೊಬ್ಬನು ಅಲರ್ಕನೆಂಬ ರಾಜನ ಬಳಿಗೆ ಬಂದು, ತನಗೆ

ವಾದ ಗತಿಯನ್ನು ಪಡೆದನು. *ಸಮುದ್ರವೂಕೂಡ ಕೊಟ್ಟ ಭಾಷೆಗೆ ಕಟ್ಟು ಬಿದ್ದು, ಈಗಲೂ ತನ್ನ ಎಲ್ಲೆಯನ್ನು ತಾನು ದಾಟಿಹೋಗಲಾರದೆ ನಿಂತಿರುವುದು.ಎಲೈ ರಾಜನೆ! ಹಿಂದೆ ನಡೆದುದನ್ನು ಚೆನ್ನಾಗಿ ಜ್ಞಾಪಿಸಿಕೊಂಡು,ಕೊಟ್ಟಮಾತನ್ನು ನಡೆಸು. ಆಡಿದಮಾತಿಗೆ ತಪ್ಪಬೇಡ!ನೀನು ಸತ್ಯಧರ್ಮಗಳನ್ನಾದರೂ ಬಿಟ್ಟು, ರಾಮನಿಗೆ ರಾಜ್ಯಾಭಿಷೇಕವನ್ನು ಮಾಡಿ, ಕೌಸಲ್ಯೆಯೊಡಗೂಡಿ ನಿತ್ಯಭೋಗಗಳನ್ನು ಅನುಭವಿಸಬೇಕೆಂದು ಉದ್ದೇಶಿಸಿರುವಹಾಗೆ ತೋರುವುದು. ಈ ವಿಧವಾದ ದುರ್ಬುದ್ಧಿಯು ನಿನಗೆ ಹುಟ್ಟಬಹುದೆ? ಈಗ ನಾನು ಕೇಳಿಕೊಳ್ಳುವುದು ಧರ್ಮವಾಗಿದ್ದರೂ,ಅಧರ್ಮವಾಗಿದ್ದರೂ, ಅಥವಾ ನಿಜವಾಗಿದ್ದರೂ, ಸುಳ್ಳಾಗಿದ್ದರೂ, ನೀನು ಈಗ ಸ್ವಲ್ಪಹಿಂದೆ ಸತ್ಯಮಾಡಿಕೊಟ್ಟಂತೆ ನಡೆಯುವುದಕ್ಕೆ ತಡೆಯೇನಿದೆ! ಎಲೈ ರಾಜನೆ! ಸುಮ್ಮನೆ ಉತ್ತರಪ್ರತ್ಯುತ್ತರಗಳನ್ನು ಬಳೆಸುವುದರಿಂದ ಪ್ರಯೋಜನವಿಲ್ಲ! ರಾಮನಿಗೆ ನೀನು ಪಟ್ಟಾಭಿಷೇಕವನ್ನು ಮಾಡಿದಪಕ್ಷದಲ್ಲಿ,ಆಕ್ಷಣವೇ ನಾನು ನಿನ್ನ ಕಣ್ಣೆದುರಿಗೆ ವಿಷವನ್ನು ಕುಡಿದು ಪ್ರಾಣಬಿಡುವೆನು. ಇದು ಸತ್ಯವು! ರಾಮನ ತಾಯಿಗೆ ಪ್ರಜೆಗಳೆಲ್ಲರೂಕೈಮುಗಿದು ಸೇವೆಮಾಡುವುದನ್ನು ನೋಡುತ್ತ,ನಾನು ಬದುಕಿರುವುದಕ್ಕಿಂತ ಸಾಯುವುದೇಮೇಲು!ಒಂದು ದಿವಸವಾದರೂ ಅವಳ ಉಚ್ಚಸ್ಥಿತಿಯನ್ನು ನೋಡಿ ನಾನು ಸಹಿಸಲಾರೆನು!ಇದೋ! ಶಪಥಮಾಡಿ ಹೇಳುವೆನು! ಭರತನಮೇಲೆಯೂ, ನನ್ನಮೇಲೆಯೂ ಆಣೆಯಿಟ್ಟು ಸತ್ಯಮಾಡುವೆನು. ರಾಮನನ್ನು ಕಾಡಿಗೆ ಕಳುಹಿಸುವುದಕ್ಕಿಂತಲೂ,ನನಗೆ ತೃಪ್ತಿಕರವಾದ ಕಾರ್ಯವು ಬೇರೊಂದಿಲ್ಲ!" ಹೀಗೆಂದು ಹೇಳಿ ಕೈಕೇಯಿಯು ಸುಮ್ಮನಾದಳು. ದಶರಥನು ಮಾತಾಡಿಸಿಕೊಂಡುಬಂದರೂ ಅವನಿಗೆ ಪ್ರತ್ಯುತ್ತರವನ್ನೇ ಕೊಡಲಿಲ್ಲ. ರಾಮನನ್ನು ಕಾಡಿಗೆ ಕಳುಹಿಸಿ, ಭರತನಿಗೆ

---

ಕಣ್ಣುಗಳನ್ನು ಕೊಡಬೇಕೆಂದು ಯಾಚಿಸಲು, ಆ ರಾಜನು ತನ್ನ ಕಣ್ಣುಗಳನ್ನೇ ಕಿತ್ತುಕೊಟ್ಟನೆಂದು ಕಥೆಯು.

* ಪೂರ್ವದಲ್ಲಿ ದೇವತೆಗಳು ಸಮುದ್ರರಾಜನನ್ನು ಕುರಿತು "ನೀನು ನಿನ್ನ ಎಲ್ಲೆಕಟ್ಟನ್ನು ದಾಟಿ ಬಾರದಂತೆ ಅಭಯವನ್ನು ಕೊಡಬೇಕು" ಎಂದು ಪ್ರಾರ್ಥಿಸಲು, ಹಾಗೆಯೇ ಆಗಲೆಂದು ಸಮುದ್ರನು ಅವರಿಗೆ ಪ್ರತಿಜ್ಞೆಮಾಡಿಕೊಟ್ಟುದಾಗಿ ಪೂರ್ವಕಥೆಯು.

ಪಟ್ಟವನ್ನು ಕಟ್ಟಬೇಕೆಂಬ ಕರ್ಣಕಠೋರವಾದ ಈ ಎರಡುವರಗಳನ್ನೇ ಕೇಳುತಿದ್ದಳು ಕೈಕೇಯಿಯ ಮಾತನ್ನು ಕೇಳಿ ದಶರಥನಿಗೆ ಸ್ವಲ್ಪಹೊತ್ತಿನವರೆಗೆ ಏನೂ ತೋರಲಿಲ್ಲ. ಕ್ರೂರವಾಕ್ಯವನ್ನಾಡಿದ ಆಕೆಯನ್ನು ರೆಪ್ಪೆಮುಚ್ಚದೆ ಕ್ರೂರದೃಷ್ಟಿಯಿಂದ ನೋಡುತಿದ್ದನು. ಸಿಡಿಲಿನಂತೆ ಮಹಾಕ್ರೂರವಾಗಿಯೂ, ಮನಸ್ಸಿಗೆ ಸಂಕಟಕರವಾಗಿಯೂ, ದುಃಖಪ್ರಚುರವಾಗಿಯೂ ಇರುವ ಆ ಕೈಕೇಯಿಯ ಮಾತನ್ನು ಕೇಳಿದಮೇಲೆ, ದಶರಥನ ಮನಸ್ಸು ಒಂದು ಸ್ವಮಿತದಲ್ಲಿ ಇಲ್ಲಿ. ಕೈಕೇಯಿಯು ತನ್ನ ದುರುದ್ದೇಶವನ್ನು ಬಿಡದೆ ಆಣೆಯಿಟ್ಟು ಶಪಥಮಾಡಿದುದನ್ನು ಮನಸ್ಸಿನಲ್ಲಿ ನೆನೆಸಿಕೊಂಡಹಾಗೆಲ್ಲಾ ಸಂಕಟವನ್ನು ತಡೆಯಲಾರದೆ, "ಹಾ ರಾಮಾ!" ಎಂದು ಗಟ್ಟಿಯಾಗಿ ಕೂಗಿ, ಉದ್ದವಾದ ನಿಟ್ಟುಸಿರನ್ನು ಬಿಟ್ಟು, ಬುಡವನ್ನು ಕಡಿದ ಮರದಂತೆ ಹಾಗೆಯೇ ಪ್ರಜ್ಞೆತಪ್ಪಿ ಕೆಳಕ್ಕೆ ಬಿದ್ದನು. ಆಮೇಲೆ ಮೆಲ್ಲಗೆ ಚೇತರಿಸಿಕೊಂಡರೂ, ಹುಚ್ಚನಂತೆ ಬುದ್ಧಿಶೂನ್ಯನಾಗಿ, ಸನ್ನಿಪಾತಹಿಡಿದವನಂತೆ ಪ್ರಜ್ಞೆಯಿಲ್ಲದವನಾಗಿ, ಮಂತ್ರಬಲದಿಂದ ಕಟ್ಟಲ್ಪಟ್ಟ ಹಾವಿನಂತೆ ಶಕ್ತಿಗುಂದಿದವನಾಗಿಯೂ ಇದ್ದನು. ಕೊನೆಗೆ ಕೈಕೇಯಿಯನ್ನು ನೋಡಿ, ಬಹುದೈನ್ಯವನ್ನು ತೋರಿಸುತ್ತ, ಕುಗ್ಗಿದ ಸ್ವರದಿಂದ ಒಂದಾನೊಂದು ಮಾತನ್ನು ಹೇಳುವನು. "ಎಲೆ ಕೈಕೇಯಿ! ನಿನಗೆ ಈ ದುರಾಲೋಚನೆಯನ್ನು ಯಾರು ಹೇಳಿಕೊಟ್ಟರು! ಮಹಾನರ್ಥಕ್ಕೆ ಕಾರಣವಾದ ಈ ವ್ಯವಸಾಯವನ್ನು ಶ್ರೇಯಸ್ಕರವೆಂದು ನಿನಗೆ ದುರ್ಬೋಧನೆಮಾಡಿದವರಾರು? ಪಿಶಾಚಗ್ರಸ್ತಳಂತೆ ನಾಚಿಕೆಯಿಲ್ಲದೆ, ಪತಿಯಾದ ನನ್ನೊಡನೆಯೇ ಹೀಗೆ ಕ್ರೂರವಾಕ್ಯವನ್ನಾಡುವೆಯಲ್ಲಾ! ಹಿಂದೆ ಯಾವಾಗಲೂ ನಾನು ನಿನ್ನಲ್ಲಿ ಈ ದುರ್ಬುದ್ಧಿಯನ್ನು ನೋಡಿರಲಿಲ್ಲ! ಎಲ್ಲವೂ ಈಗ ವಿಪರೀತವಾಗಿ ಕಾಣುತ್ತಿದೆ! ಭರತನಿಗೆ ರಾಜ್ಯವನ್ನು ಕೊಟ್ಟು, ರಾಮನನ್ನು ಕಾಡಿಗೆ ಕಳುಹಿಸಬೇಕೆಂದು ಕೇಳುವೆಯಲ್ಲವೆ? ಯಾವ ಕಾರಣಕ್ಕಾಗಿ ನೀನು ಹೀಗೆ ಭಯಪಡುವೆ? ಈಗ ನಿನಗೆ ಹುಟ್ಟಿರುವ ಈ ದುರ್ಬುದ್ಧಿಯು ನಿಜವಾಗಿದ್ದರೂ ಅಥವಾ ಸುಳ್ಳಾಗಿದ್ದರೂ, ಅದನ್ನು ಇಷ್ಟಕ್ಕೇ ಬಿಟ್ಟುಬಿಡು! ನೀನು ಪತಿಯಾದ ನನಗೂ, ಪ್ರಜೆಗಳಿಗೂ ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ಭರತನಿಗೂ, ನಿಜವಾಗಿ ಶ್ರೇಯಸ್ಸನ್ನು ಕೋರು

ವವಳಾದರೆ, ಈ ಸಂಕಲ್ಪವನ್ನು ಇಷ್ಟಕ್ಕೇ ನಿಲ್ಲಿಸು ! ಎಲೆ ಘಾತುಕಿ! ಎಲೆ ಪಾಪಿನಿ ! ಎಲೆ ನೀಚೆ ! ದುಷ್ಕಾರ್ಯಗಳಿಗಂಜದ ಮಹಾಕ್ರೂರೆ ! ನನ್ನಲ್ಲಿಯಾಗಲಿ, ಅಥವಾ ರಾಮನಲ್ಲಿಯಾಗಲಿ, ಯಾವ ತಪ್ಪನ್ನು ಕಂಡಿರುವೆ ?ನಮ್ಮಿಂದ ನಿನಗುಂಟಾಗತಕ್ಕ ಅನರ್ಥವೇನು ? ಧರ್ಮಸೂಕ್ಷ್ಮವನ್ನು ವಿಚಾರಿಸುವುದರಲ್ಲಿ ರಾಮನಿಗಿಂತಲೂ ಭರತನೇನು ಕಡಿಮೆಯಾದವನೆಂದೆಣಿಸಬೇಡ ! ರಾಮನನ್ನು ಬಿಟ್ಟು ಭರತನು ನಿಮಿಷಮಾತ್ರವಾದರೂ ರಾಜ್ಯದಲ್ಲಿ ನಿಲ್ಲುವನೆ ? ನಾನು ಕಾಡಿಗೆ ಹೋಗೆಂದು ಹೇಳಿದಾಗ, ಆ ರಾಮನಮುಖವು ಗ್ರಹಣಹಿಡಿದ ಚಂದ್ರನಂತೆ ಬಣ್ಣಗುಂದಿದರೆ, ಅದನ್ನು ನೋಡಿ ನಾನು ಹೇಗೆ ಸಹಿಸಲಿ ? ನಾನು ನನ್ನ ಸ್ವೇಚ್ಛೆಯಿಂದಲೇ ರಾಮನಿಗೆ ಪಟ್ಟವನ್ನು ಕಟ್ಟಬೇಕೆಂದು ನಿಶ್ಚಯಿಸಿದವನಲ್ಲ! ಮಂತ್ರಿಗಳೊಡನೆಯೂ, ಮಿತ್ರರೊಡನೆಯೂ ಪುರಜನರೊಡನೆಯೂ ಕಲೆತು, ಯುಕ್ತಾಯುಕ್ತಗಳನ್ನು ಚೆನ್ನಾಗಿ ವಿಚಾರಿಸಿ, ಅವರ ಮನಃಪೂರ್ವಕವಾದ ಅಭಿಪ್ರಾಯವನ್ನು ತೆಗೆದುಕೊಂಡೇ ಈ ಕಾರ್ಯವನ್ನು ನಿಶ್ಚಯಿಸಿರುವೆನು. ಹೀಗೆ ಸ್ಥಿರಪಡಿಸಲ್ಪಟ್ಟ ಈ ನನ್ನ ಉದ್ದೇಶವನ್ನು ಈಗ ನಾನು ಹೇಗೆ ಹಿಂತಿರುಗಿಸಲಿ ! ಸುಶಿಕ್ಷಿತವಾದ ತನ್ನ ಸೈನ್ಯವು ಶತ್ರುಗಳಿಂದ ಪರಾಜಿತವಾಗಿ ಹಿಂದಕ್ಕೆ ಓಡಿಹೋಗುತ್ತಿರುವುದನ್ನು ನೋಡಿ, ಕೈಲಾಗದೆ ನಾಚಿಕೆಯಿಂದ ತಲೆಯನ್ನು ತಗ್ಗಿಸಿಕೊಂಡು ಸಂಕಟಪಡುವಂತೆ, ಇದುವರೆಗೆ ನಾನು ನಡೆಸಿರುವ ಪ್ರಯತ್ನಗಳೆಲ್ಲವೂ ವಿಮುಖವಾಗುವುದನ್ನು ನೋಡಿ ನಾನು ಹೇಗೆ ಸಹಿಸಲಿ! ರಾಮಾಭಿಷೇಕಕ್ಕಾಗಿ ನಾನಾದಿಕ್ಕುಗಳಿಂದಲೂ ಕರೆಸಲ್ಪಟ್ಟಿರುವ ರಾಜರು ನನ್ನನ್ನು ಏನೆಂದು ಹೇಳುವರು ! ಅವರೆಲ್ಲರೂ ನನ್ನನ್ನು ನೋಡಿ, "ಈ ದಶರಥನಿಗೆ ಎಷ್ಟು ವಯಸ್ಸಾದರೇನು ? ಇವನು ಇಷ್ಟು ದಿವಸಗಳವರೆಗೆ ರಾಜ್ಯಭಾರಮಾಡಿ ಫಲವೇನು? ಈತನಿಗೆ ಬಾಲಯೋಗ್ಯವಾಗ ಚಪಲಬುದ್ಧಿಯು ಇನ್ನೂ ಬಿಡಲಿಲ್ಲ" ವೆಂದು ಹೀಗಳೆಯುವರಲ್ಲವೆ ? ಈಗ ಈ ಉತ್ಸವಕ್ಕಾಗಿ ಗುಣವಂತರಾಗಿಯೂ, ವಿದ್ಯಾವಂತರಾಗಿಯೂ ಇರುವ ಅನೇಕವೃದ್ಧರು ಬಂದುಸೇರಿರುವರು. ಅವರೆಲ್ಲರೂ "ರಾಮನೆಲ್ಲಿ?" ಎಂದು ಕೇಳಿದರೆ, ನಾನು ಅವರಿಗೆ ಯಾವಪ್ರತ್ಯುತ್ತರವನ್ನು ಕೊಡಲಿ ! "ಕೈಕೇಯಿಯ ಮಾತಿಗಾಗಿ ಧರ್ಮಕ್ಕೆ ಕಟ್ಟುಬಿದ್ದು ರಾ

ಮನನ್ನು ನಾನು ಕಾಡಿಗೆಕಳುಹಿಸಿದೆ”ನೆಂದರೆ, ಅವರೆಲ್ಲರೂ ಅದನ್ನು ನಿಜವೆಂದು ನಂಬುವರೆ? ಅದೂ ಹೋಗಲಿ! ಕೌಸಲ್ಯೆಯು ನನ್ನನ್ನು ನೋಡಿ ಏನೆಂದು ಹೇಳುವಳು? ಇಷ್ಟು ಅಪಕಾರವನ್ನು ಮಾಡಿದಮೇಲೆ,ನಾನು ಅವಳಿಗೆ ಏನೆಂದು ಪ್ರತ್ಯುತ್ತರವನ್ನು ಕೊಡಬಲ್ಲೆನು?ಕೌಸಲ್ಯೆಯು ಯಾವಾಗಲೂ ನನಗೆ ಪ್ರಿಯವನ್ನೇ ಕೋರತಕ್ಕವಳು! ರಾಮನಲ್ಲಿ ಅವಳಿಗಿರತಕ್ಕ ಪ್ರೇಮಾತಿಶಯವೋ ಅಷ್ಟಿಷ್ಟಲ್ಲ! ಅವಳು ನನಗೆ ಉಪಚಾರಮಾಡತಕ್ಕ ಕಾಲಗಳಲ್ಲಿ ದಾಸಿಯಂತೆ ಉಪಚರಿಸುವಳು! ದ್ಯೂತಾದಿವಿನೋದಕಾಲಗಳಲ್ಲಿ ಪ್ರಿಯಸಖಿಯಂತೆ ಸಲಿಗೆಯಿಂದಿರುವಳು! ನನ್ನ ಶ್ರೇಯಃಕಾರ್ಯಗಳಲ್ಲಿ ಒಡಹುಟ್ಟಿದವಳಂತೆ ಅತ್ಯುತ್ಸಾಹವನ್ನು ತೋರಿಸುತ್ತಿರುವಳು' ನನ್ನ ದೇಹಪೋಷಣೆಯ ವಿಷಯದಲ್ಲಿ ಹೆತ್ತತಾಯಂತೆ ಅಕ್ಕರೆಯಿಟ್ಟು ನಡೆಸುವಳು. ತಾನು ಪಟ್ಟದರಾಣಿಯೆಂಬ ಗರ್ವವನ್ನು ಒಂದುದಿನವಾದರೂ ತೋರಿಸಿಕೊಂಡವಳಲ್ಲ. ಅಯ್ಯೋ! ಅವಳಿಂದ ನಾನು ಇಷ್ಟು ಮಹೋಪಕಾರಗಳನ್ನು ಹೊಂದಿದ್ದರೂ, ಅದಕ್ಕೆ ತಕ್ಕಂತೆ ನಾನು ಅವಳನ್ನು ಒಂದುದಿನವಾದರೂ ಸತ್ಕರಿಸಲಿಲ್ಲ. ಮಹಾಪಾಪಿನಿಯಾದ ನಿನ್ನ ಕೋಪಕ್ಕೆ ಹೆದರಿ, ನ್ಯಾಯವಾಗಿ ಸತ್ಕಾರಾರ್ಹಳಾದ ಅವಳನ್ನೂ ಸತ್ಕರಿಸದೆ ಹೋದೆನು. ವ್ಯಾಧಿಗ್ರಸ್ತನಾದ ಮನುಷ್ಯನು, ಬಾಯಿ ಚಾಪಲ್ಯಕ್ಕಾಗಿ ಸಿಕ್ಕಿದುದನ್ನೆಲ್ಲಾ ತಿಂದು,ಅಪಥ್ಯವನ್ನು ಮಾಡಿ, ಆಮೇಲೆ ಮತ್ತಷ್ಟುರೋಗಬಾಧೆಯಿಂದ ನರಳುವಂತೆ, ನಾನು ನಿನ್ನ ಕ್ರೂರಸ್ವಭಾವವನ್ನರಿಯದೆ,ಇದುವರೆಗೆ ನಿನ್ನನ್ನು ಪುರಸ್ಕರಿಸುತಿದ್ದೆನು. ಈಗ ಅದನ್ನು ನೆನೆಸಿಕೊಂಡು ಪಶ್ಚಾತ್ತಾಪಪಡಬೇಕಾಗಿದೆ. ನಾನು ರಾಮಾಭಿಷೇಕಕ್ಕಾಗಿ ಇದುವರೆಗೆ ಬೇಕಾದ ಸನ್ನಾಹಗಳೆಲ್ಲವನ್ನೂ ಮಾಡಿರುವೆನು. ಈಗ ಅದನ್ನು ತಪ್ಪಿಸಿ, ರಾಮನನ್ನು ಕಾಡಿಗೆ ಕಳುಹಿಸಿಬಿಟ್ಟರೆ, ನನ್ನಲ್ಲಿ ಸುಮಿತ್ರೆಗೆತಾನೇ ಹೇಗೆ ನಂಬಿಕೆ ಹುಟ್ಟುವುದು? ಅವಳು ನನ್ನ ಈ ಚಪಲಬುದ್ಧಿಯನ್ನು ನೋಡಿ, ತನ್ನ ಮಕ್ಕಳಾದ ಲಕ್ಷ್ಮಣಶತ್ರುಘ್ನರಿಗೂ ಯಾವಕಾಲಕ್ಕೆ ಏನಪಾಯವುಂಟಾಗಬಹುದೋ ಎಂಬ ಶಂಕೆಯಿಂದ ಭಯಪಡುವಳಲ್ಲವೆ! ಅತ್ತಲಾಗಿ ರಾಮನು ಅಯೋಧ್ಯೆಯನ್ನು ಬಿಟ್ಟು ಹೊರಟಕೂಡಲೆ,ಇತ್ತಲಾಗಿ ನನ್ನ ಪ್ರಾಣವು ದೇಹವನ್ನು ಬಿಟ್ಟು ಹೊರಡುವುದೇನೋ ಸಿದ್ಧವು! ಈ ಎರಡು ದುಃಖವಾರ್ತೆಗಳೂ ಸೀತೆಗೆ ಏಕ

ಕಾಲದಲ್ಲಿಯೇ ಕಿವಿಗೆ ಬೀಳುವುವು. ಅವುಗಳನ್ನು ಕೇಳಿ ಸೀತೆಯು ಹೇಗೆತಾನೇ ಪ್ರಾಣವನ್ನು ಧರಿಸಿಕೊಂಡಿರಬಲ್ಲಳು ? ಹಿಮವತ್ಪಾರ್ಶ್ವದಲ್ಲಿ ಕಿನ್ನರನನ್ನು ಕಾಣದ ಕಿನ್ನರಸ್ತ್ರೀಯಂತೆ, ಅವಳು ಸ್ವಲ್ಪಕಾಲದವರೆಗೆ ತತ್ತಳಿಸಿ, ಕೊನೆಗೆ ಪ್ರಾಣತ್ಯಾಗವನ್ನು ಮಾಡದೆ ಬಿಡಳು!ಹಾಕಷ್ಟವೆ! ರಾಮನ ವಿಯೋಗದಿಂದ ಗೋಳಿಡುತ್ತಿರುವ ಸೀತೆಯ ದುಃಖವನ್ನು ಕಣ್ಣಾರೆ ನೋಡುತ್ತಾ ನಾನು ಹೇಗೆ ಬದುಕಿರಬಲ್ಲೆನು! ಎಲೆ ಪಾಪಿನಿ ! ರಾಮನು ಕಾಡಿಗೆ ಹೋದಮೇಲೆ ನಾನು ಬದುಕಿರಲಾರೆನೆಂಬುದೇನೋ ನಿಜವು! ಆಗ ನೀನು ಗಂಡಸಿಲ್ಲದ ಮುಂಡೆಯಾಗಿ, ನಿನ್ನ ಮಗನೊಡಗೂಡಿ ರಾಜ್ಯಸುಖವನ್ನು ಅನುಭವಿಸ ಬೇಕೆಂದಿರುವೆಯಾ? ಅಯ್ಯೋ! ಇದುವರೆಗೆ ನಿನ್ನ ಮೃದುವಾಕ್ಯಗಳಿಗೆ ಮರು ಳಾಗಿ,ನಾನು ನಿನ್ನನ್ನು ಮಹಾಸಾಧುಸ್ವಭಾವೆಯೆಂದು ತಿಳಿದಿದ್ದನಲ್ಲಾ!ಈಗ ನಿನ್ನ ಕ್ರೂರಸ್ವಭಾವವೆಲ್ಲವೂ ಚೆನ್ನಾಗಿ ವ್ಯಕ್ತವಾಯಿತು ! ಕಣ್ಣಿಗೆ ಅಂದವಾಗಿ ಕಾಣುವ ವಿಷಮಿಶ್ರವಾದ ಮದ್ಯವನ್ನು ಕುಡಿದ ಮನುಷ್ಯನು, ಅದರ ದುರ್ಗುಣವನ್ನು ತಿಳಿದಮೇಲೆ, ತತ್ತಳಿಸುವಂತೆ, ಈಗ ನಾನು ಪಶ್ಚಾತ್ತಾಪಪಡಬೇಕಾಗಿದೆ! ಇದುವರೆಗೂ ನೀನು ನನ್ನಲ್ಲಿ ಕಪಟಪ್ರೇಮವ ನ್ನು ತೋರಿಸುತ್ತಾ, ಕಿವಿಗಿಂಪಾದ ಸುಳ್ಳುಮಾತುಗಳಿಂದಲೇ ನನ್ನನ್ನು ಮ ರುಳುಮಾಡುತಿದ್ದೆ ! ಬೇಡನು, ಇಂಪಾದ ಗಾನಧ್ವನಿಯಿಂದ ಜಿಂಕೆ ಗಳನ್ನು ಸಮೀಪಕ್ಕೆ ಬರಮಾಡಿಕೊಂಡು, ಅವುಗಳನ್ನು ಕೊಲ್ಲುವಂತೆ, ಈಗ ನೀನು ನನ್ನನ್ನು ಕೊಲ್ಲಬೇಕೆಂದಿರುವೆಯಲ್ಲಾ? ನಾನು ಸ್ತ್ರೀಸುಖಕ್ಕಾಗಿ ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನೂ ಮಾರಿಬಿಟ್ಟರ,ನೋಡಿದವರೆಲ್ಲರೂಬೀದಿ ಬೀದಿಗಳಲ್ಲಿ, ಮದ್ಯಪಾನವನ್ನು ಮಾಡಿದ ಬ್ರಾಹ್ಮಣನನ್ನು ಛೀಗಳೆಯುವಂತೆ ನನ್ನನ್ನು ನಿಂದಿಸದಿರುವರೆ? ಹಾ! ಎಂತಹ ಮಹಾವಿಪತ್ತು ಬಂದೊದಗಿತು ! ಈ ಕಷ್ಟಪರಂಪರೆಗಳನ್ನು ನಾನು ಎಂದೂ ಕಂಡಿರಲಿಲ್ಲ!ವಿಪತ್ತೆಂಬುದು ಹೀ ಗೂ ಉಂಟೆ? ಎಲೆ ಕೈಕೇಯಿ ! ನಿನ್ನ ಕ್ರೌರ್ಯವು ಹಾಗಿರಲಿ ! ನೀನು ರಾಮ ನನ್ನು ಕಾಡಿಗೆ ಕಳುಹಿಸಬೇಕೆಂದು ಕೇಳಿದ ಕರ್ಣಕಠೋರವಾದ ಘೋರ ವಾಕ್ಯವನ್ನು ಕೇಳಿಯೂ ನಾನು ಸಹಿಸಿಕೊಂಡಿರುವೆನಲ್ಲವೆ? ಈ ನನ್ನ ಹೃದ ಯಕಾಠಿನ್ಯಕ್ಕಾಗಿ ನಾನೇ ಆಶ್ಚರ್ಯಪಡಬೇಕಾಗಿದೆ ! ಪೂರ್ವಜನ್ಮದಲ್ಲಿ ಮಾ

ಡಿದ ಪಾಪದ ಫಲದಿಂದಲೇ,ನಾನು ಅಪ್ರತೀಕಾರಾರ್ಹವಾದ ಇಂತಹ ಮಹಾದುಃಖವನ್ನು ಅನುಭವಿಸಬೇಕಾಗಿ ಬಂದಿರುವುದು. ಎಲೆ ಘಾತುಕಿ! ಲೋಕಕಂಟಕೆಯಾದ, ಮಹಾಪಾಪಿಸಿಯಾದ, ನಿನ್ನನ್ನು ಬಹುಕಾಲದಿಂದ ಇದುವರೆಗೆ ಕಾಪಾಡಿಟ್ಟ ಮಹಾಪಾತಕವೊಂದು ನನಗೆ ಬಂದೊದಗಿದೆ! ನಿನ್ನ ದುಸ್ಸ್ವಭಾವವನ್ನು ತಿಳಿಯದೆ, ಅಜ್ಞಾನದಿಂದ ನಾನು, ನೇಣುಹಾಕಿಕೊಳ್ಳುವ ಹಗ್ಗವನ್ನು ಕಾಪಾಡಿಟ್ಟಂತೆ,ಬಹುಪ್ರೇಮದಿಂದ ನಿನ್ನನ್ನು ಕೊರಳಿನಲ್ಲಿ ಕಟ್ಟಿಕೊಂಡು ಲಾಲಿಸುತಿದ್ದೆನು. ಕೊನೆಗೆ ನೀನೇ ನನಗೆ ಆ ಕಂಠಪಾಶದಂತೆ ಮೃತ್ಯುಹೇತುವಾದೆಯಲ್ಲಾ? ಅಯ್ಯೋ! ಮೃತ್ಯುದೇವತೆಯೆಂಬುದನ್ನರಿಯದೆ ನಾನು ನಿನ್ನೊಡನೆ ಇದುವರೆಗೆ ರಮಿಸುತಿದ್ದೆನಲ್ಲಾ! ನಾನು ನಿನ್ನ ಅಂಗಸ್ಪರ್ಶವನ್ನು ಮಾಡಿದುದುಕೂಡ, ಸಣ್ಣಮಗುವು ಯಾರೂ ಇಲ್ಲದವೇಳೆಯಲ್ಲಿ,ಅಜ್ಞಾನದಿಂದ ಕೃಷ್ಣಸರ್ಪವನ್ನು ಕೈಯಿಂದ ಮುಟ್ಟಿದಂತಾಯಿತು! ಮಹಾತ್ಮನಾದ ರಾಮನು, ಮಹಾಪಾಪಿಯಾದ ನನ್ನ ಹೊಟ್ಟೆಯಲ್ಲಿ ಹುಟ್ಟಿದುದರಿಂದ, ನಾನು ಬದುಕಿರುವಾಗಲೇ ತಂದೆಯಿಲ್ಲದ ತಬ್ಬಲಿಯಂತಾದನು. ದುರಾತ್ಮನಾದ ನನ್ನನ್ನು ನೋಡಿದವರೆಲ್ಲರೂ ದಶರಥನು, ಕೇವಲಕಾಮಪರವಶನಾಗಿ ಹೆಂಡತಿಯ ಮಾತಿಗಾಗಿ ತನ್ನ ಮುದ್ದು ಮಗನನ್ನು ಕಾಡಿಗೆ ಕಳುಹಿಸಿದನಲ್ಲಾ! ಇವನಷ್ಟು ಅವಿವೇಕಿಗಳೊಬ್ಬರೂ ಇಲ್ಲ" ವೆಂದು ನನ್ನನ್ನು ನಿಂದಿಸುವರಲ್ಲಾ? ರಾಮನು ಇದುವರೆಗೂ ಬ್ರಹ್ಮಚರ್ಯಾದಿವ್ರತಗಳಿಂದಲೂ, ಗುರುಶುಶ್ರೂಷೆಯಿಂದಲೂ, ಕಾಲವನ್ನು ಕಳೆಯುತಿದ್ದನೇಹೊರತು, ಸ್ವಲ್ಪಮಾತ್ರವಾದರೂ ರಾಜ್ಯಭೋಗಗಳನ್ನು ಅನುಭವಿಸಲಿಲ್ಲ. ಈಗ ಸುಖವನ್ನು ಅನುಭವಿಸುವಕಾಲದಲ್ಲಿ,ಅವನಿಗೆ ಇಂತಹ ಮಹಾವಿಪತ್ತು ಬಂದೊದಗಿತು! ಗುಣಾಢ್ಯನಾದ ಆ ರಾಮನು, ನನ್ನ ಮಾತನ್ನು ಸ್ವಲ್ಪವೂ ಮೀರಿ ನಡೆಯಲಾರನು. ಕಾಡಿಗೆ ಹೋಗೆಂದು ನಾನು ಹೇಳಿದೊಡನೆಯೇ ಬದಲುಮಾತನ್ನಾಡದೆ ಒಪ್ಪಿಕೊಳ್ಳುವುದರಲ್ಲಿ ಸಂದೇಹವೇ ಇಲ್ಲ! ಈ ವಿಷಯದಲ್ಲಿ ಆತನು ನನ್ನ ಮಾತನ್ನು ಮೀರಿ ನಡೆದರೂ ನನಗೆ ಇಷ್ಟವೇಹೊರತು ಅಸಮಾಧಾನವಿಲ್ಲ. ಅವನು ಎಂದಿಗೂ ಹಾಗೆ ನಡೆಯಲಾರನು! ಆತನು ಕಪಟವನ್ನರಿಯದ ಋಜುಸ್ವಭಾವವುಳ್ಳವನಾದುದ

ರಿಂದ, ನನ್ನ ಮನಸ್ಸಿನಲ್ಲಿರುವ ಅಭಿಪ್ರಾಯವನ್ನೇ, ನಾನು ಬಾಯಿಂದ ಹೇಳಿ ರುವೆನೆಂದು ತಿಳಿದುಕೊಳ್ಳುವನು. ನನ್ನ ಬಾಯಿಂದ ಹೊರಟುದನ್ನೇ ನಿಜ ವೆಂದು ಗ್ರಹಿಸಿ ಕಾಡಿಗೆ ಹೊರಡುವನು. ಅತ್ತಲಾಗಿ ರಾಮನು ಕಾಡಿಗೆ ಹೋದಕೂಡಲೇ, ಸಮಸ್ತಲೋಕವೂ ನನ್ನನ್ನು ಧಿಕ್ಕರಿಸದೆ ಬಿಡದು. ಈ ಲೋಕಾಪವಾದವೊಂದರಿಂದಲೇ, ಪರ್ಯವಸಾನವಾಗಲಾರದು. ಅಂತಹ ಮಹಾತ್ಮನಾದ ರಾಮನನ್ನು ಕಾಡಿಗೆ ಕಳುಹಿಸಿದರೆ, ಮೃತ್ಯುದೇವತೆಗೂ ಕೂಡ ನನ್ನಲ್ಲಿ ಕೋಪವುಂಟಾಗಿ, ನನ್ನನ್ನು ಒಡನೆಯೇ ಯಮಪುರಿಗೆ ಕರೆ ದುಯ್ಯದೆ ಬಿಡದು ! ಎಲೆ ಪಾಪೆ ! ಪುರುಷಶ್ರೇಷ್ಠನಾದ ರಾಮನೂ ಕಾ ಡಿಗೆ ಹೊರಟು, ನಾನೂ ಮೃತಿಹೊಂದಿದಮೇಲೆ, ನನ್ನ ಕಡೆಯವರಾಗಿ ಉಳಿದ ಇಷ್ಟಬಂಧುಗಳವಿಷಯದಲ್ಲಿ ನೀನು ಯಾವ ಕೇಡನ್ನು ಮಾಡುವೆ ಯೋ ಕಾಣೆನು ! ಅಥವಾ ಕೌಸಲ್ಯೆಯು ನನ್ನನ್ನೂ ರಾಮನನ್ನೂ, ಲಕ್ಷ್ಮ ಣಶತ್ರುಘ್ನರೆಂಬ ಮಕ್ಕಳನ್ನೂ ಕಳೆದುಕೊಂಡಮೇಲೆ, ಆ ದುಃಖವನ್ನು ಸಹಿಸಲಾರದೆ,ನನ್ನೊಡನೆಯೇ ಸಹಗಮನಮಾಡಿ ಪ್ರಾಣವನ್ನು ಬಿಟ್ಟುಬಿಡು ವಳು. ಸುಮಿತ್ರೆಯೂ ಆ ಮಾರ್ಗವನ್ನೇ ಅನುಸರಿಸುವಳು. ಹೀಗೆ ಕೌಸಲ್ಯೆ ಯನ್ನೂ, ಸುಮಿತ್ರೆಯನ್ನೂ, ನನ್ನನ್ನೂ ರಾಮಲಕ್ಷ್ಮಣಶತ್ರುಘ್ನರೆಂಬ ಮೂವರು ಮಕ್ಕಳನ್ನೂ ಏಕಕಾಲದಲ್ಲಿಯೇ ಕೆಡಿಸಿ, ನೀನೊಬ್ಬಳೇ ಸುಖಪಡಬೇಕೆಂದಿರುವೆಯಾ ? ಇದುವರೆಗೂ ಗುಣವಂತರಾದ ಅನೇಕರಾಜ ಶ್ರೇಷ್ಠರಿಂದ ಆದರಿಸಲ್ಪಟ್ಟು, ಯಾವ ಅಪವಾದಕ್ಕೂ ಸಿಕ್ಕದೆ, ಶಾಶ್ವತ ವಾಗಿದ್ದ ನಮ್ಮ ಇಕ್ಷ್ವಾಕುವಂಶದಿಂದ, ನನ್ನನ್ನೂ, ರಾಮನನ್ನೂ ಬಹಿಷ್ಕರಿ ಸಿದಮೇಲೆ, ಅಪವಾದಕ್ಕೆಡೆಯಾದ ಆ ವಂಶವನ್ನು ನೀನೊಬ್ಬಳೇ ನಿರಾತಂಕ ವಾಗಿ ಆಳಬೇಕೆಂದಿರುವೆಯಾ ? ಎಲೆ ನೀಚಳೆ ! ರಾಮನನ್ನು ಕಾಡಿಗೆ ಕಳು ಹಿಸುವುದು ಭರತನಿಗೆ ಸಮ್ಮತವಾಗುವಪಕ್ಷದಲ್ಲಿ, ನಾನು ಸತ್ತಮೇಲೆ, ಭರ ತನು ನನಗೆ ಪ್ರೇತಕೃತ್ಯವನ್ನೇ ಮಾಡಬೇಕಾದುದಿಲ್ಲ ! ಅಂತವನ ಕೈಯಿಂದ ಅಪರಕ್ರಿಯೆಗಳನ್ನು ಮಾಡಿಸಿಕೊಳ್ಳುವುದಕ್ಕೂ ನನಗೆ ಸಮ್ಮತವಿ ಲ್ಲ! ಎಲೆ ಅನಾರ್ಯೆ! ನೀನೇ ನನಗೆ ಶತ್ರುವಾಗಿ ಜನಿಸಿದೆಯಲ್ಲೆ ? ನಿನ್ನ ಕೋರಿಕೆಯು ಕೈಗೂಡಲಿ ! ನಾನೂ ಸತ್ತು, ಪುರುಷಶ್ರೇಷ್ಠನಾದ ರಾಮ

ನೂ ಕಾಡಿಗೆ ಹೊರಟುಹೋದಮೇಲೆ, ನೀನು ಗಂಡನಿಲ್ಲದ ಮುಂಡೆಯಾಗಿ, ನಿನ್ನ ಮಗನೊಡಗೂಡಿ ಇಷ್ಟಬಂದ ಭೋಗಗಳನ್ನು ಅನುಭವಿಸಬಹುದು. ಮನೆಗೆ ಮಾರಿಯಾದ ನೀನು,ರಾಜಕುಮಾರಿಯೆಂಬ ವ್ಯಾಜದಿಂದ ನಮ್ಮ ಮನೆಗೆ ಬಂದು ಸೇರಿದೆ! ಇದರಿಂದ ನಾನು ಮಹಾಪಾತಕವನ್ನು ಮಾಡಿದವನಂತೆ ಮಹತ್ತಾದ ಅಪಕೀರ್ತಿಗೂ, ತಿರಸ್ಕಾರಕ್ಕೂ, ಅವಮಾನಕ್ಕೂ ಪಾತ್ರನಾಗಬೇಕಾಯಿತು! ಅದೆಲ್ಲವೂ ಹೋಗಲಿ! ಆಗಾಗ, ರಥಗಜತುರಗಾದಿವಾಹನಗಳಮೇಲೆ ಮಹಾವೈಭವದಿಂದ ಸಂಚರಿಸುತಿದ್ದ ಸುಕುಮಾರಾಂಗನಾದ ರಾಮನು, ಈಗ ಆ ಮಹಾರಣ್ಯದಲ್ಲಿ ಕಾಲುನಡೆಯಿಂದ ಸಂಚರಿಸಬೇಕೆಂದರೆ, ಹೇಗೆ ತಾನೇ ಸಾಧ್ಯವು? ಯಾವನ ಭೋಜನಕಾಲಗಳಲ್ಲಿ, ಪ್ರಶಸ್ತವಾದ ಅನ್ನಪಾನಗಳನ್ನು ಒದಗಿಸುವುದಕ್ಕಾಗಿ, ಅಡಿಗೆಯವರೆಲ್ಲರೂ ಕುಂಡಲಾದ್ಯಾಭರಣಗಳನ್ನಿಟ್ಟುಕೊಂಡು, ಸರ್ವಾಲಂಕಾರಭೂಷಿತರಾಗಿ, ನಾನುತಾನೆಂದು ಮುಂದಾಗಿ ಬಂದು ಪಾಕಮಾಡುತಿದ್ದರೋ, ಅಂತಹ ರಾಮನು, ಈಗ ಕಾಡಿನಲ್ಲಿ ಸುತ್ತುತ್ತ, ಕಹಿ, ಒಗರು, ಕಾರ, ಮುಂತಾದುವುಗಳನ್ನೆಣಿಸದೆ, ಅಲ್ಲಲ್ಲಿ ಸಿಕ್ಕಿದ ಆಹಾರಗಳನ್ನು ತಿಂದು ಹೇಗೆ ಜೀವಿಸಬಲ್ಲನು? ಅಮೂಲ್ಯವಾದ ವಸ್ತ್ರಗಳನ್ನುಟ್ಟು ಬಹುಕಾಲದಿಂದ ರಾಜೋಪಭೋಗದಲ್ಲಿ ಬಳೆದ ರಾಮನು, ಈಗ ಕಾಡಿನಲ್ಲಿ ಕಾವೀಬಟ್ಟೆಗಳನ್ನುಟ್ಟು,ನೆಲದಮೇಲೆ ಮಲಗುವುದುತಾನೇ ಹೇಗೆ? ರಾಮನನ್ನು ಕಾಡಿಗೆ ಕಳುಹಿಸಿ ಭರತನಿಗೆ ಅಭಿಷೇಕವನ್ನು ಮಾಡಬೇಕೆ? ಹಾ! ಮನಸ್ಸಿನಲ್ಲಿ ಚಿಂತಿಸುವುದಕ್ಕೂ ಯೋಗ್ಯವಲ್ಲದ ಈ ಕಠಿನವಾರ್ತೆಯು ನಿನ್ನ ಬಾಯಿಂದ ಹೇಗೆ ಬಂದಿತು? ಯಾವಾಗಲೂ ಸ್ವಾರ್ಥಪರರಾಗಿ,ಬಹಳ ಮೂರ್ಖಸ್ವಭಾವವುಳ್ಳ ಈ ಸ್ತ್ರೀಜಾತಿಯನ್ನೇ ಸುಡಬೇಕು! ಛೀ! ನಾನು ನಿಷ್ಕಾರಣವಾಗಿ ಸ್ತ್ರೀಸಾಮಾನ್ಯವನ್ನೇ ಏಕೆ ನಿಂದಿಸಲಿ! ಮುಖ್ಯವಾಗಿ ಈಗ ಈ ಭರತನ ತಾಯಿಯನ್ನು ಹೇಳಬೇಕಾಗಿದೆ. ಎಲೆ ಕೇಡಾಳಿ! ಎಲೆ ಸ್ವಾರ್ಥಪರಳೆ! ಎಲೆ ಘಾತುಕಿ! ನನ್ನನ್ನು ಸಂಕಟಪಡಿಸೇಕೆಂದೇ ನೀನು ದೃಢಸಂಕಲ್ಪವನ್ನು ಮಾಡಿರುವಹಾಗೆ ಕಾಣುತ್ತಿದೆ! ನಾನು ನಿನಗೆ ಯಾವವಿಧದಲ್ಲಿ ಅಪ್ರಿಯವನ್ನು ಮಾಡಿರುವೆನು? ಯಾವಾಗಲೂ ನಿನ್ನ ಹಿತವನ್ನೇ ಬಯಸುತಿದ್ದ ರಾಮನಲ್ಲಿಯಾದರೂ ನೀನು ಯಾವ ತಪ್ಪನ್ನು

ನೋಡಿದೆ? ಎಲೆ ನೀಚೆ! ಲೋಕದಲ್ಲಿ ತಂದೆತಾಯಿಗಳು ಬಹುಪ್ರೀತಿಯಿಂದ ಬೆಳೆಸಿದ ತಮ್ಮ ಮುದ್ದುಮಕ್ಕಳನ್ನು ಬಿಟ್ಟುಬಿಡುವುದುಂಟು! ಹಾಗೆಯೇ ಒಂದುವೇಳೆ ಅನುರಕ್ತರಾದ ಗಂಡಹೆಂಡಿರೂ ಕಾರಣಾಂತರದಿಂದ ಒಬ್ಬರ ನ್ನೊಬ್ಬರು ತೊರೆದುಬಿಡುವುದುಂಟು. ಆ ವಿಷಯದಲ್ಲಿ ಇತರರಿಗೆ ಯಾವ ಹಾನಿಯೂ ಇರದು. ಅದಕ್ಕೆ ಯಾರೂ ಬಾಯಿಹಾಕಲಾರರು! ಈಗ ರಾಮನಿ ಗೆ ಈ ವ್ಯಸನವು ಪ್ರಾಪ್ತವಾದುದನ್ನು ನೋಡಿದರೆ, ಈ ಸಮಸ್ತ ಪ್ರಪಂ ಚವೂ ಮರುಗದೆ ಇರಲಾರದು. ನಾನು ಈ ಅಕೃತ್ಯವನ್ನು ಮಾಡಿದುದೇ ಆದರೆ, ಈ ಲೋಕಕ್ಕೇ ವಿರೋಧಿಯಾಗುವೆನು. ಸರ್ವಾಲಂಕಾರಭೂ ಷಿತನಾಗಿ, ದೇವಕುಮಾರನಂತೆ ಬರುತ್ತಿರುವ ರಾಮನನ್ನು ನೋಡಿದ ಮಾತ್ರಕ್ಕೆ ನನ್ನ ಮೈಯೆಲ್ಲವೂ ಸಂತೋಷದಿಂದ ಉಬ್ಬುತ್ತಿರುವುದು. ಆತ ನನ್ನು ನೋಡುತಿದ್ದಹಾಗೆಲ್ಲಾ ನನ್ನ ದೇಹದಲ್ಲಿ ಒಂದು ಹೊಸಯೌವನ ವುಂಟಾದಂತೆ ಕಾಣುವುದು. ಒಂದುವೇಳೆ ಸೂರ್ಯನು ಉದಿಸದಿದ್ದರೂ, ಇಂದ್ರನು ಮಳೆಯನ್ನು ಸುರಿಸದಿದ್ದರೂ, ಈ ಪ್ರಪಂಚವು ಬದುಕಿರಬ ಹುದು! ರಾಮನು ಈ ಸ್ಥಳವನ್ನು ಬಿಟ್ಟುಹೊರಟರೆ, ಒಬ್ಬರಾದರೂ ಜೀವಿಸಿರಲಾರರೆಂದೇ ನನ್ನ ನಿಶ್ಚಯವು! ಎಲೆ ಕೇಡಾಳಿ! ಯಾವಾಗಲೂ ಕೇಡನ್ನೇ ಕೋರುವವಳಾಗಿ, ನನಗೆ ಹಗೆಯಾಗಿ, ಮೃತ್ಯುಸ್ವರೂಪಳಾದ ನಿನ್ನನ್ನು ನಾನು ಬಹುಕಾಲದಿಂದ ಇದುವರೆಗೂ ತೊಡೆಯಮೇಲಿಟ್ಟು ಲಾಲಿಸುತಿದ್ದುದೆಲ್ಲವೂ, ಮಹಾವಿಷವುಳ್ಳ ಕಾಳಸರ್ಪವನ್ನು ತೊಡೆಯಲ್ಲಿ ಟ್ಟುಕೊಂಡಂತಾಯಿತು! ಈಗ ನೀನು ಅದಕ್ಕೆ ತಕ್ಕ ಫಲವನ್ನು ತೋರಿಸಿ ದೆ! ನನ್ನ ಅಜ್ಞಾತೆಯಿಂದಲೇ ನಾನು ಕೆಟ್ಟೆನು! ನನ್ನನ್ನೂ, ರಾಮನನ್ನೂ, ಲಕ್ಷ್ಮಣನನ್ನೂ ತೊರೆದು ಭರತನು ನಿನ್ನೊಡಗೂಡಿ ನೆಮ್ಮದಿಯಿಂದ ಈರಾಷ್ಟ್ರವನ್ನೂ, ಪಟ್ಟಣಗಳನ್ನೂ ಆಳಲಿ! ನೀನೂ ನನ್ನ ಇಷ್ಟಬಂಧುಗಳೆ ಲ್ಲರನ್ನೂ ಕೊಂದು, ನನ್ನ ವೈರಿಗಳನ್ನು ಸಂತೋಷಪಡಿಸುತ್ತಿರು! ಎಲೆಪೂತು ಕಸ್ವಭಾವವುಳ್ಳವಳೆ! ಮೊದಲೇ ರಾಮನನ್ನು ಬಿಡಲಾರದ ಮಹಾವ್ಯಸನದಿಂ ದ ನೊಂದಿರುವ ನನ್ನನ್ನು, ಮೇಲೆಮೇಲೆ ಕ್ರೂರವಾಕ್ಯಗಳಿಂದಲೂ ಹೊಡ ಯುತ್ತಿರುವೆಯಲ್ಲಾ! ಈ ಕ್ರೂರವಾಕ್ಯಗಳನ್ನಾಡುತ್ತಿರುವ ನಿನ್ನ ನಾಲಗೆಯು

ಇನ್ನೂ ಏಕೆ ಸಹಸ್ರಭಾಗವಾಗಿ ಸೀಳಿಹೋಗಲಿಲ್ಲ! ನಿನ್ನ ಹಲ್ಲುಗಳೇಕೆ ಪುಡಿಪುಡಿಯಾಗಿ ಉದಿರಿಹೋಗಲಿಲ್ಲ? ರಾಮನು ನಿನ್ನೊಡನೆ ಯಾವಾಗಲೂ ಒಂದು ದುರ್ವಾಕ್ಯವನ್ನಾದರೂ ಆಡಿದವನಲ್ಲ. ಒಂದುದಿನವಾದರೂ ನಿನಗೆ ಅಪ್ರಿಯವನ್ನು ನುಡಿದವನಲ್ಲ. ಕ್ರೂರವಾಕ್ಯಗಳನ್ನು ನುಡಿಯುವುದು ಹೇಗೆಂಬುದೇ ಆತನಿಗೆ ತಿಳಿಯದು. ಹೀಗೆ ಸಮಸ್ತಪ್ರಾಣಿಗಳೊಡನೆಯೂ ಪ್ರಿಯವನ್ನೇ ನುಡಿಯುವ ಸುಸ್ವಭಾವವುಳ್ಳ ಗುಣಾಢ್ಯನಾದ ಆ ರಾಮನಲ್ಲಿ, ನೀನು ಹೇಗೆ ತಾನೇ ದೋಷವನ್ನಾರೋಪಿಸಿದೆ? ಎಲೆ ಪಾಪೆ! ಕೇಕಯವಂಶಕ್ಕೆ ಕಳಂಕಪ್ರಾಯಳಾಗಿ ಹುಟ್ಟಿರುವೆಯಲ್ಲವೆ? ನೀನು ಅನ್ನಪಾನಗಳನ್ನೆಲ್ಲಾ ಬಿಟ್ಟು, ದೇಹಕ್ಷಯವನ್ನು ಮಾಡಿದರೂ ಸರಿ! ದುಃಖಾಗ್ನಿಯಿಂದ ಹೇಗೆಯೋ ಬೆಂದುಹೋದರೂ ಸರಿ! ಸತ್ತರೂ ಸರಿ! ಸಹಸ್ರಭಾಗವಾಗಿ ತಲೆಯೊಡೆಯುವಂತೆ ಬೆಟ್ಟದ ಮೇಲಿಂದ ಬಿದ್ದರೂ ಸರಿ! ನಾನು ಅಂಜುವವನಲ್ಲ! ನಿನ್ನ ಮಾತಿನಂತೆ ನಾನು ಎಂದಿಗೂ ನಡೆಸಲಾರೆನು! ಈಗ ನೀನು ಅಪೇಕ್ಷಿಸಿರುವ ಕೋರಿಕೆಯು ಇವೆಲ್ಲಕ್ಕಿಂತಲೂ ಮಹಾನರ್ಥಹೇತುವಾಗಿರುವುದು. ಕತ್ತಿಯ ಅಲಗಿನಂತೆ ಮಹಾತೀಕ್ಷ್ಣಸ್ವಭಾವಳಾಗಿ, ಯಾವಾಗಲೂ ಪರರಿಗೆ ಕೇಡನ್ನೇ ಬಯಸುವಳಾಗಿ, ಮೇಲೆ ಮಾತ್ರ ಮೃದುವಾಕ್ಯಗಳಿಂದ ಮೋಹಗೊಳಿಸುವ ಕಪಟಸ್ವಭಾವೆಯಾಗಿ, ನಮ್ಮ ಕುಲಕ್ಕೇ ಹಾನಿಯನ್ನುತರುವ ನೀನುಬದುಕಿರುವುದಕ್ಕಿಂತಲೂ ಸಾಯುವುದು ಮೇಲು ! ನೀನು ನನ್ನ ಮನಸ್ಸನ್ನು ತದಾಶ್ರಯವಾದ ಪ್ರಾಣದೊಡನೆಯೇ ಸುಡಬೇಕೆಂದಿರುವೆಯಾ ! ನನ್ನ ಜೀವದಲ್ಲಿಯೇ ನನಗೆ ಜಿಹಾಸೆಯುಂಟಾಗಿರುವಾಗ, ಇನ್ನು ಸುಖದಾಸೆಯೇನು? ಅಥವಾ ಒಂದುವೇಳೆ ಬದುಕಿದ್ದರೂ, ಮಗನನ್ನು ತೊರೆದುಬಿಟ್ಟಮೇಲೆ, ನನ್ನ ಮನಸ್ಸಿಗೆ ಹರ್ಷವೆಲ್ಲಿಯದು ! ಎಲೆ ಪ್ರಿಯೆ! ಬೇಡ! ನೀನು ನನ್ನ ಕೈಹಿಡಿದ ಪ್ರಿಯಪತ್ನಿಯಲ್ಲವೆ! ನನಗೆ ನೀನು ಕೇಡನ್ನು ಬಯಸಬಹುದೆ? ನಿನ್ನ ಹಠವನ್ನು ಬಿಡು! ಇದೋ! ನಿನ್ನ ಕಾಲಿಗೆ ಬೀಳುವೆನು. ನನ್ನಲ್ಲಿ ಪ್ರಸನ್ನಳಾಗು !" ಎಂದು ಹೇಳಿ, ರಾಜನು ದಿಕ್ಕಿಲ್ಲದವನಂತೆ ಗಟ್ಟಿಯಾಗಿ ಗೋಳಿಡುತ್ತ, ಗರ್ವದಿಂದ ಉನ್ಮಾರ್ಗಗಾಮಿನಿಯಾದ ಆ ಕೈಕೇಯಿಗೆ ವಶ್ಯನಾಗಿ, ವ್ಯಾಧಿಗ್ರಸ್ತನಾದವನು ಶಕ್ತಿಗುಂದಿ ಪ್ರಜ್ಞೆತಪ್ಪಿ ಬೀಳುವಂತೆ, ಅವಳ ಎರಡುಕಾಲುಗಳಮೇಲೆಯೂ ಬಿದ್ದನು. ಆದರೆ ಇವ

ನು ಬೀಳುವುದನ್ನು ನೋಡಿ ಕೈಕೇಯಿಯು,ನೀಡಿದ್ದ ತನ್ನ ಕಾಲುಗಳೆರಡನ್ನೂ ಮತ್ತೊಂದುಕಡೆಗೆ ಒತ್ತರಿಸಿಕೊಂಡುದರಿಂದ,ಈತನು ನೆಲದಮೇಲೆ ಬಿದ್ದನೇ ಹೊರತು ಅವಳ ಪಾದಗಳನ್ನು ಸ್ಪರ್ಶಿಸಲಿಲ್ಲ.ಇಲ್ಲಿಗೆ ಹನ್ನೆರಡನೆಯ ಸರ್ಗವು.

---

{ದಶರಥನು ಪುನಃ ಕೈಕೇಯಿಯನ್ನು ಸಮಾಧಾನಪಡಿಸಿದುದು.}

ದಶರಥನು ಇಂತಹ ಮಹಾವ್ಯಸನವನ್ನು ಎಂದೂ ಅನುಭವಿಸಿದವನಲ್ಲ. ರಾಜಾಧಿರಾಜನಾಗಿದ್ದು ನೆಲದಮೇಲೆ ಉರುಳುವುದೆಂದರೇನು ? ಹೆಂಡತಿಯ ಕಾಲಿಗೆ ಬೀಳುವುದೆಂದರೇನು ? ಹೀಗೆ ತನ್ನ ಸ್ಥಿತಿಗೆ ಯೋಗ್ಯವಲ್ಲದ ಮಹಾದು ರ್ದಶೆಯನ್ನು ಹೊಂದಿ, ಗಳಿಸಿಟ್ಟ ಪುಣ್ಯದ ಫಲಗಳೆಲ್ಲವೂ ತೀರಿಹೋದಮೇ ಲೆ ಸ್ವರ್ಗದಿಂದ ಕೆಳಗೆ ಬಿದ್ದ ಯಯಾತಿಯಂತೆ, ಶೋಚನೀಯಾವಸ್ಥೆಯಲ್ಲಿ ದ್ದನು. ಆತನಲ್ಲಿ ಇಂತಹ ದುರವಸ್ಥೆಯನ್ನು ನೋಡುತ್ತಿರುವಾಗಲೂ, ಅನರ್ಥ ಸ್ವರೂಪಿಣಿಯಾದ ಕೈಕೇಯಿಗೆ, ಆತನಲ್ಲಿ ಎಳ್ಳಷ್ಟು ಮರುಕವಾಗಲಿ, ಕರು ಣವಾಗಲಿ ಹುಟ್ಟಲಿಲ್ಲ. ಅತ್ಯಂತಭಯಜನಕವಾದ ರಾಜನ ದುಸ್ಸ್ಥಿತಿಯನ್ನು ನೋಡಿಯೂ, ಆಕೆಗೆ ಭಯವುಂಟಾಗಲಿಲ್ಲ. ತನ್ನ ಕೋರಿಕೆಯು ಇನ್ನೂ ಕೈಗೂ ಡಲಿಲ್ಲವೆಂಬ ಒಂದೇ ಹಠದಿಂದ,ತಿರುಗಿ ತನ್ನ ವರಗಳನ್ನು ಕೊಟ್ಟೇತೀರಬೇಕೆಂ ದು ನಿರ್ಬಂಧಿಸುತ್ತ, ರಾಜನನ್ನು ಕುರಿತು “ಎಲೆ ಮಹಾರಾಜನೆ! ಇದೇನು? ನೀನು ಆಗಾಗ ಇತರರಮುಂದೆ “ನಾನೇ ಸತ್ಯಸಂಧ” ನೆಂದೂ “ನಾನೇ ವ್ರತನಿಷ್ಠ” ನೆಂದೂ ಹೇಳಿಕೊಳ್ಳುತ್ತಿದ್ದ ಆತ್ಮಸ್ತುತಿಯೆಲ್ಲವೂ ಈಗ ಎಲ್ಲಿ ಹೋಯಿತು ? ನನಗೆ ಮೊದಲು ಪ್ರತಿಜ್ಞೆಮಾಡಿಕೊಟ್ಟ ವರಗಳನ್ನು ಈಗ ತಪ್ಪಿಸಬೇಕೆಂದಿರುವೆಯಾ ? ಯಾವಕಾರಣದಿಂದ ನಿನಗೆ ಈ ದುರ್ಬುದ್ಧಿ ಯು ಹುಟ್ಟಿತು?”ಎಂದಳು. ಇದನ್ನು ಕೇಳಿ ದಶರಥನು, ಮಿತಿಮೀರಿದ ಕೋ ಪದಿಂದ ಒಂದುಕ್ಷಣಕಾಲದವರೆಗೆ ಪ್ರಜ್ಞೆತಪ್ಪಿದಂತಿದ್ದು, ಕೈಕೇಯಿಯ ನ್ನುನೋಡಿ, ಎಲೆ ದುಶ್ಶೀಲೆ ! ನೀನು ನನಗೆ ಶತ್ರುವಾಗಿಯೇ ಹುಟ್ಟಿ ರುವೆ! ನಾನೂ ಸತ್ತು, ಪುರುಷಶ್ರೇಷ್ಠನಾದ ರಾಮನೂ ಕಾಡಿಗೆಹೊರಟು ಹೋದಮೇಲೆ,ನೀನು ಸುಖವಾಗಿರಬಹುದು!ನಿನ್ನ ಕೋರಿಕೆಯು ಕೈಗೂಡಲಿ! ಒಂದುವೇಳೆ ನಾನು ಸ್ವರ್ಗಕ್ಕೆ ಹೋದರೂ, ಅಲ್ಲಿದೇವತೆಗಳು ನನ್ನನ್ನುನೋ

ಡಿ, “ಆಹಾ ! ಕೇವಲಸ್ತ್ರೀವ್ಯಾಮೋಹಕ್ಕಾಗಿ, ಈ ರಾಜನು ತನ್ನ ಮುದ್ದುಮಗನಾದ ರಾಮನನ್ನು ಕಾಡಿಗೆ ಕಳುಹಿಸಿ, ಆತನಿಗೆ ಮಹಾವ್ಯಸನವನ್ನು ತಂದಿಟ್ಟ” ನೆಂದು ನಿಂದಿಸಿದರೆ, ಅದನ್ನು ಕೇಳಿ ನಾನು ಹೇಗೆ ಸಹಿಸಲಿ! ಅವರು ಈವಿಷಯದಲ್ಲಿ ನನ್ನನ್ನೇ ಪ್ರಶ್ನೆಮಾಡಿದರೆ ಅವರಿಗೆ ನಾನು ಏನೆಂದು ಸಮಾಧಾನಹೇಳಲಿ ! “ಕೈಕೇಯಿಯಲ್ಲಿ ಮಾತಿಗೆ ಕಟ್ಟುಬಿದ್ದು, ಅವಳ ಇಷ್ಟಕ್ಕಾಗಿ ನಾನು ರಾಮನನ್ನು ತೊರೆದುಬಿಡಬೇಕಾಯಿತು” ಎಂಬ ಯಥಾರ್ಥವಾದ ಅಂಶವನ್ನೇ ನಾನು ಅವರಿಗೆ ಹೇಳಬಹುದು. ಆಗಲೂ ನಾನು ಅಸತ್ಯವನ್ನೇ ನುಡಿದಂತಾಗುವುದಲ್ಲವೆ? ನಿನ್ನೆ ನಾನು ರಾಮನನ್ನು ಕರೆದು, ಪ್ರತ್ಯಕ್ಷದಲ್ಲಿ ನಿಲ್ಲಿಸಿಕೊಂಡು, ಆತನೊಡನೆ “ನಾಳೆ ನಿನಗೆ ಪಟ್ಟವನ್ನು ಕಟ್ಟುವೆನು” ಎಂದು ಘಂಟಾಘೋಷವಾಗಿ ಹೇಳಿದ ಮಾತಿಗೆ ತಪ್ಪಿದಂತಾಗುವುದಿಲ್ಲವೆ? ಎಲೆ ಕೈಕೇಯಿ ! ಬಹುಕಾಲದಿಂದ ಸಂತಾನವಿಲ್ಲದಿದ್ದ ನಾನು ಬಹುಶ್ರಮಪಟ್ಟು ವ್ರತೋಪವಾಸಗಳನ್ನೂ, ಯಜ್ಞಗಳನ್ನೂ ಮಾಡಿ, ಮಹಾತ್ಮನಾದ ಈ ರಾಮನೆಂಬ ಪುತ್ರರತ್ನವನ್ನು ಪಡೆದೆನು ಅಂತವನನ್ನು ಹೇಗೆ ಬಿಟ್ಟುಬಿಡಲಿ ! ಹಾ ಕಷ್ಟವೆ! ಮಹಾಶೂರನಾಗಿ, ಬಾಲ್ಯದಲ್ಲಿಯೇ ಸಮಸ್ತವಿದ್ಯೆಗಳನ್ನೂ ಓದಿತಿಳಿದವನಾಗಿ, ಬಹುಕಾಲದವರೆಗೆ ಯೋಗನಿಷ್ಠೆಯಲ್ಲಿದ್ದು ಜಿತೇಂದ್ರಿಯತ್ವವನ್ನು ಸಾಧಿಸಿದ ಮಹರ್ಷಿಗಳಂತೆ ಕೋಪವನ್ನು ನಿಗ್ರಹಿಸಿದವನಾಗಿ ಕೆಂದಾವರೆಯಂತೆ ಅಂದವಾದ ಕಣ್ಣುಗಳುಳ್ಳ ಮುದ್ದುಮಗನಾದ ರಾಮನನ್ನು ನಾನು ಹೇಗೆ ಅಗಲಿರಲಿ! ನೀಲಮೇಘಶ್ಯಾಮನಾಗಿ, ಆಜಾನುಬಾಹುವಾಗಿ, ಮಹಾಬಲಾಢ್ಯನಾಗಿ, ಲೋಕೈಕಸುಂದರನಾದ ಆ ರಾಮನನ್ನು ನಾನು ಹೇಗೆ ಆಮಹಾರಣ್ಯಕ್ಕೆ ಕಳುಹಿಸಲಿ! ಅಯ್ಯೋ! ರಾಮನು ಹುಟ್ಟಿದಂದಿನಿಂದ ರಾಜಭೋಗದಲ್ಲಿಯೇ ಬೆಳೆದವನು! ಕಷ್ಟವೆಂಬುದನ್ನು ಯಾವಾಗಲೂ ಕಂಡವನಲ್ಲ! ಇಂತಹ ಸುಕುಮಾರಾಂಗನಾದ ರಾಮನು ಕಷ್ಟಪಡುವುದನ್ನು ಕಂಡು ನಾನು ಹೇಗೆ ಸಹಿಸಲಿ! ಯಾವಾಗಲೂ ದುಃಖವೆಂಬುದನ್ನೇ ಕಂಡರಿಯದ ಆ ರಾಮನನ್ನು ಕರೆದು, ನನ್ನ ಬಾಯಿಂದ ನಾನೇ ಆತನಿಗೆ ಈ ಮಹಾಘೋರವಾದ ವ್ಯಸನಕಾರ್ಯವನ್ನು ನಿಯಮಿಸಬೇಕೆ? ಅದಕ್ಕೆ ಮೊದಲೇ, ನನ್ನ ಈ ಪ್ರಾಣವು ಹೊರಟುಹೋಗಿಬಿಟ್ಟರೆ, ಅದೇ ನನಗೆ ಪರಮಸುಖವೆಂದೆಣಿಸುವೆನು!” ಎಲೆ ಘಾತುಕಿ! ಎಲೆ

ಕೇಡಾಳಿ! ಕುಂದದ ಪರಾಕ್ರಮವುಳ್ಳ, ಮತ್ತು ನನಗೆ ಪ್ರಾಣಪದಕದಂತಿರುವ ರಾಮನನ್ನು ಹೀಗೆ ವ್ಯಸನದಲ್ಲಿರಿಸಬೇಕೆಂಬ ಬುದ್ಧಿಯು ನಿನಗೇಕೆ ಹುಟ್ಟಿತು? ಲೋಕದಲ್ಲಿ ಇದಕ್ಕಿಂತ ಬೇರೆ ಅಪಖ್ಯಾತಿಯೂ, ಅವಮಾನವೂ ನನಗೆ ಬೇರೊಂದೂ ಇಲ್ಲ" ಹೀಗೆಂದು ದಶರಥನು, ಹುಚ್ಚನಂತೆ ಬುದ್ಧಿಭ್ರಮವುಳ್ಳವನಾಗಿ, ಗಟ್ಟಿಯಾಗಿ ಗೋಳಿಡುತ್ತಿದ್ದನು. ಅಷ್ಟರೊಳಗಾಗಿ ಸೂರ್ಯನು ಅಸ್ತಂಗತನಾದನು. ರಾತ್ರಿಯಾಯಿತು. ಮೂರು ಜಾವವುಳ್ಳ ಆ ರಾತ್ರಿಯು ಪೂರ್ಣಚಂದ್ರನಿಂದ ಲೋಕರಂಜಕವಾಗಿದ್ದರೂ, ದುಃಖಿತನಾದ ಆ ರಾಜನ ಮನಸ್ಸಿಗೆ ಸ್ವಲ್ಪವಾದರೂ ಆಪ್ಯಾಯನವನ್ನುಂಟುಮಾಡಲಿಲ್ಲ. ವೃದ್ಧನಾದ ರಾಜನು, ಕೇವಲದುಃಖಪ್ರಲಾಪಗಳಿಂದಲೇ ಆ ಮೂರು ಯಾಮಗಳನ್ನೂ ಕಳೆದನು. ಬಿಸಿಬಿಸಿಯಾಗಿ ನಿಟ್ಟುಸಿರನ್ನು ಬಿಡುತಿದ್ದನು. ವ್ಯಾಧಿಪೀಡಿತರಾದವರು ನರಳುವಂತೆ, ದೀನಧ್ವನಿಯಿಂದ ಆಕಾಶವನ್ನು ನೋಡಿ "ನಕ್ಷತ್ರಗಳಿಂದ ಅಲಂಕರಿಸಲ್ಪಟ್ಟ ಎಲೈ ರಾತ್ರಿಯೆ! ನೀನು ಮುಂದುವರಿಯದಿರು! ಬೆಳಗಾಗಬೇಡ! ಇದೋ! ಕೈಮುಗಿದು ಬೇಡಿಕೊಳ್ಳುವೆನು! ನನ್ನಲ್ಲಿ ಇಷ್ಟುಮಾತ್ರ ದಯೆಯನ್ನು ತೋರಿಸು! ಹಾಗಿಲ್ಲವೇ ನೀನು ಬೇಗನೆ ಕಳೆದುಹೋಗು! ನನಗೆ ಈ ಮಹಾವ್ಯಸನವನ್ನು ತಂದಿಟ್ಟ ಕ್ರೂರೆಯಾದ, ನಿರ್ಘೃಣೆಯಾದ, ಪರಮಘಾತುಕಿಯಾದ ಈ ಕೈಕೇಯಿಯನ್ನು ನಾನು ನೋಡುತ್ತಿರಲಾರೆನು. ಆದುದರಿಂದ ಬೇಗನೆ ಬೆಳಗಾಗು!" ಎಂದು ಗೋಳಿಡುತ್ತ, ಮನಸ್ಸನ್ನು ಒಂದು ಸ್ತಿಮಿತದಲ್ಲಿರಿಸಿಕೊಳ್ಳಲಾರದೆ, ಪುನಃ ಕೈಕೇಯಿಯಮುಂದೆ ಕೈಮುಗಿದು ಅವಳನ್ನು ಸಮಾಧಾನಪಡಿಸುತ್ತ. ಅವಳನ್ನು ಕುರಿತು "ಎಲೆ ದೇವಿ! ನನ್ನ ಸಾಧುಸ್ವಭಾವವನ್ನು ನೀನು ಚೆನ್ನಾಗಿ ಕಂಡಿರುವೆ! ನನ್ನ ಮನಸ್ಸೆಲ್ಲವೂ ನಿನ್ನಲ್ಲಿಯೇ ಅಡಗಿರುವುದೆಂಬುದನ್ನೂ ನೀನು ಬಲ್ಲೆ! ಈಗ ನನ್ನ ಮನಸ್ಸನ್ನೂ, ನನಗೆ ಬಂದೊದಗಿರುವ ಮಹಾವ್ಯಸನವನ್ನೂ ಪರ್ಯಾಲೋಚಿಸಿ ನೋಡು! ಆದರಲ್ಲಿಯೂ ನಾನು ರಾಜನಾಗಿದ್ದು, ಸಾಯುವ ಕಾಲದಲ್ಲಿ ಪ್ರತಿಜ್ಞೆಗೆ ತಪ್ಪಿ, ಲೋಕಾಪವಾದಕ್ಕೆ ಸಿಕ್ಕಿ, ದುಃಖದಿಂದಲೂ, ಅವಮಾನದಿಂದಲೂ ಪ್ರಾಣವನ್ನು ಬಿಡದಹಾಗೆ ನನ್ನಲ್ಲಿ ಅನುಗ್ರಹವಿಟ್ಟು ಕಾಪಾಡುವ ಭಾರವು ನಿನ್ನದಾಗಿದೆ! ಎಲೆ ಸುಂದ

ದೇಹದಲ್ಲಿ, ತಾನು ಎಂಬ ಪ್ರಜ್ಞೆ (ಅರಿವು) ಜಾಗೃತವಿರುವುದರಿಂದ ಅದು ಕ್ಷೇತ್ರಜ್ಞ. ಗೀತೆಯು ಹೇಳುವ ಮೂರು ಪುರುಷರ ಅರ್ಥವನ್ನೂ ಅದರ ಔಚಿತ್ಯವನ್ನೂ ಸಾಮಾಜಿಕ-ಮಾನಸಶಾಸ್ತ್ರ ದೃಷ್ಟಿಯಿಂದ ಚೆನ್ನಾಗಿ ಅರಿತುಕೊಳ್ಳಬಹುದಾಗಿದೆ. ಕ್ಷರಪುರುಷ ವ್ಯಕ್ತಿ; ಅಕ್ಷರ ಪುರುಷ ಸಮಾಜ; (ವ್ಯಕ್ತಿಯ ಅಂತರಾಳದಲ್ಲಿ ಅನುಭವಕ್ಕೆ ಬರುವ, ಮುಂಡಕದ ಋಷಿಯು ವರ್ಣಿಸಿದ ಹಣ್ಣು ತಿನ್ನದೆ ಸಾಕ್ಷಿಯಾಗಿರುವ ಹಕ್ಕಿ ಅಕ್ಷರಪುರುಷ. ಏಕೆಂದರೆ ಇದು ಸಮಾಜದ ಸೂಕ್ಷ್ಮರೂಪ;) ಇವೆರಡಕ್ಕೂ ಆಧಾರವಾಗಿ ಎರಡನ್ನೂ ಅಂಕೆಯಲ್ಲಿರಿಸಿಕೊಂಡಿರುವ ಮಹಾಂತಪ್ರಭು, ಸಾಕ್ಷಿ, ಅನುಮಂತೃವಾಗಿ ಗುಹಾಂತರಾಳದ ಆಳದಲ್ಲಿರುವ ಸರ್ವ-ಗುಣ-ಪೂರ್ಣ-ಅನಂತ. ಅಲ್ಲಮಪ್ರಭುವಿನ ಆರಾಧ್ಯ ದೈವತ ಗುಹೇಶ್ವರ.

"ಒಂದು ತಾಳಮರದ ಮೇಲೆ ಮೂರು ರತ್ನವಿಹುದನು ನಾಬಲ್ಲೆ. ಒಂದು ರತ್ನ ಉತ್ಪತ್ತಿ-ಸ್ಥಿತಿ-ಲಯಕ್ಕೆ ಒಳಗು. ಒಂದು ಹದಿನಾಲ್ಕು ಭುವನಕ್ಕೆ ಬೆಲೆಯಾಯಿತ್ತು. ಇನ್ನೊಂದು ರತ್ನಕ್ಕೆ ಬೆಲೆಯಿಲ್ಲವೆಂದು ಗುಹೇಶ್ವರ ಲಿಂಗೈಕ್ಯರು 'ನಿಃಶಬ್ದಂ ಬ್ರಹ್ಮ ಉಚ್ಯತೇ' ಎಂಬರು." ಅಲ್ಲಮಪ್ರಭುವು ಈ ವಚನದಲ್ಲಿ 'ನಾ ಬಲ್ಲೆ' ಎಂದು ಇತ್ತ ಸಾಕ್ಷಿಯು ಬಹಳ ಮಹತ್ವದ್ದಾಗಿದೆ. ಕೆಲರು ವ್ಯಕ್ತಿಯು ಆತ್ಮನಾದೊಡನೆ ಪರಮಾತ್ಮವೊಂದು ಪರಿಗಣಿಸಿ ನಡುವಣ ಸಾಮಾಜಿಕ ಆತ್ಮವನ್ನು ಮರೆತುಬಿಡುತ್ತಾರೆ. ಮಹತ್ವದ ನಡುವಣ ಸಂಗತಿಯನ್ನು ಎಣಿಕೆಗೆ ಹಿಡಿಯದ್ದರಿಂದ ನಮ್ಮ ಲೆಕ್ಕವೆಲ್ಲ ತಪ್ಪಿಹೋಗಿ, ಈ ವರೆಗೆ ಹಾನಿಗೆ ಈಡಾಗಿದ್ದೇವೆ. ವ್ಯಕ್ತಿಗೆ ಸಮಾಜವೇ ಆಧಾರ, ವ್ಯಕ್ತಿಯ ಆತ್ಮಕ್ಕೆ ಸಾಮಾಜಿಕ ಆತ್ಮವೇ ಭರ್ತೃ Sustenance; ಅನುಮಂತೃ, ಪ್ರಭು. ಇದರ ಆಡಳಿತಕ್ಕೆ ವ್ಯಕ್ತಿಯು ಒಳಪಟ್ಟಿದೆ. ಸಮಾಜ ಪುರುಷನು ಗುಹೇಶ್ವರನ ಅಧಿಕಾರಕ್ಕೆ ಒಳಪಟ್ಟಿದ್ದಾನೆ. ಈ ತಾರತಮ್ಯವನ್ನು ಮೀರಿನಡೆದರೆ ಆಗುವ ಘೋರ ಶಿಕ್ಷೆಯನ್ನು ನಮ್ಮ ದೇಶವು ಈ ವರೆಗೆ ಅನುಭವಿಸಿದೆ. ಸಾಮಾಜಿಕ ಆತ್ಮವನ್ನು ಕಡೆಗಣಿಸಿ ಓಡಿಹೋಗುವ ವಿರಕ್ತಿಯ ಹುಚ್ಚು ಇದೆಲ್ಲ ಕಷ್ಟಪರಂಪರೆಗಳನ್ನು ತಂದಿದೆ.

ದ್ದನು. ಪರಮಸಾಧುವಾದ ಆ ರಾಜನು, ನೋಡುವವರಿಗೆ ಭಯವಾಗುವಂತೆ ದುಃಖಾತಿಶಯದಿಂದ ಆಗಾಗ ನಿಟ್ಟುಸಿರುಬಿಡುತ್ತ ಪರಿತಪಿಸುತ್ತಿದ್ದನು. ಹಾಗೆಯೇ ಆ ರಾತ್ರಿಯೆಲ್ಲವೂ ಕಳೆಯುತ್ತ ಬಂದಿತು. ಬೆಳಗಿನ ಜಾವದಲ್ಲಿ ವೈತಾಳಿಕರು ಬಂದು, ಎಂದಿನಂತೆ ರಾಜನನ್ನು ಎಚ್ಚರಗೊಳಿಸುವುದಕ್ಕಾಗಿ ಸುಪ್ರಭಾತಸ್ತುತಿಗಳನ್ನು ಹೇಳಲಾರಂಭಿಸಿದರು. ಅಷ್ಟರಲ್ಲಿ ರಾಜನು "ಬೇಡ" ವೆಂದು ಅವರನ್ನು ತಡೆಯುವಂತೆ ಆಜ್ಞೆಮಾಡಿ ಕಳುಹಿಸಿದನು. ಇಲ್ಲಿಗೆ ಹದಿಮೂರನೆಯ ಸರ್ಗವು

---

(ದಶರಥನು ರಾಮನನ್ನು ಕಾಡಿಗೆ ಕಳುಹಿಸುವುದಾಗಿ ನಿಶ್ಚಯಿಸಿದುದು. ಸುಮಂತ್ರನು ದಶರಥನ ಬಳಿಗೆ ಬಂದುದು. ರಾಮನನ್ನು ಕರೆಯಿಸಿದುದು.)

ಹೀಗೆ ಪುತ್ರಶೋಕದಿಂದ ಪೀಡಿತನಾಗಿ, ಪ್ರಜ್ಞೆಯಿಲ್ಲದೆ ನೆಲದಮೇಲೆ ಬಿದ್ದು ಹೊರಳುತ್ತಿರುವ ರಾಜನನ್ನು ನೋಡಿ,ಪಾಪಬುದ್ಧಿಯುಳ್ಳ ಕೈಕೇಯಿಯು ಪುನಃ ಅವನನ್ನು ಕುರಿತು "ಎಲೆ ರಾಜನೆ! ಇದೀಗ ಬಹಳಚೆನ್ನಾಯಿತು! ನನಗೆ ಮೊದಲು ಸತ್ಯವನ್ನು ಮಾಡಿಕೊಟ್ಟು, ಈಗ ಅದನ್ನು ತಪ್ಪಿಸಿಕೊಳ್ಳಬೇಕೆಂದು ಪ್ರಯತ್ನಿಸುವ ಹಾಗಿದೆ? ಹೀಗೆ ಭಾಷೆಗೆ ತಪ್ಪಿದವನೆಂಬ ಮಹಾಪಾತಕಕ್ಕೊಳಗಾಗಿಯೂ ನೀನು, ಏನೋ ಬಹಳ ದುಃಖಿತನಾದಂತೆ ನೆಲದಮೇಲೆ ಬಿದ್ದು ಹೊರಳುವೆಯಾ? ದುರ್ಮಾರ್ಗದಲ್ಲಿ ವರ್ತಿಸದೆ, ಉಚಿತವಾದ ದಾರಿಯಲ್ಲಿ ಹೋಗು! ಧರ್ಮಜ್ಞರಾದವರು ಸತ್ಯಕ್ಕಿಂತಲೂ ಬೇರೆ ಧರ್ಮವಿಲ್ಲವೆಂದು ಹೇಳಿರುವರಲ್ಲವೆ?ಆ ಸತ್ಯವನ್ನು ಬಿಡದೆ ಧರ್ಮದಲ್ಲಿ ನಡೆಯುವಂತೆ ನಾನು ನಿನ್ನನ್ನು ನಿರ್ಬಂಧಿಸುವೆನೇ ಹೊರತು, ನಾನು ತಪ್ಪುದಾರಿಗೆ ಹೋದವಳಲ್ಲ. ಇಂತಹ ಪ್ರಾಣಸಂಕಟದಲ್ಲಿ ಸತ್ಯವನ್ನು ಹೇಗೆ ಮೀರದಿರಬಹುದೆಂದು ನೀನು ಕೇಳಬಹುದು? ಹಿಂದೆ ಶೈಬ್ಯನೆಂಬ ರಾಜನು,ತನ್ನ ಮಾತಿಗೆ ಕಟ್ಟುಬಿದ್ದು,ಜೀವದ ಮೇಲೆಯೂ ಆಶೆಯಿಡದೆ, ಬಂದುಗಿಡುಗನಿಗೆ ತನ್ನ ದೇಹವನ್ನೇ ಒಪ್ಪಿಸಿ, ಸರ್ವೋತ್ತಮವಾದ ಗತಿಯನ್ನು ಪಡೆಯಲಿಲ್ಲವೆ? ಹಾಗೆಯೇ ಮಹಾತೇಜಸ್ವಿಯಾದ ಅಲರ್ಕನೆಂಬ ರಾಜನು, ವೇದಪಾರಂಗತನಾದ ಒಬ್ಬ ಬ್ರಾಹ್ಮಣನು ಬಂದು ಕೇಳಿದಾಗ, ಸ್ವಲ್ಪವೂ ಹಿಂಜರಿಯದೆ ತನ್ನ ಕಣ್ಣುಗಳೆ

ರಡನ್ನೂ ಕಿತ್ತುಕೊಡಲಿಲ್ಲವೆ ? ಹಾಗೆಯೇ ಸಮಸ್ತನದಿಗಳಿಗೂ ಒಡೆಯ ನಾದ ಸಮುದ್ರರಾಜನು ಸತ್ಯಕ್ಕೆ ಕಟ್ಟುಬಿದ್ದು, ಈಗಲೂ ತನ್ನ ಎಲ್ಲೆಯನ್ನು ಮೀರಲಾರದೆ ಇದ್ದಲ್ಲಿಯೇ !ಇರುವನಲ್ಲವೆ? ಪರ್ವಕಾಲಗಳಲ್ಲಿ ಉಕ್ಕಿಬರು ವಾಗಲೂ ಅವನು ಎಲ್ಲೆಯನ್ನು ದಾಟುವುದಿಲ್ಲ. ಸತ್ಯವೆಂಬುದೇ ಬ್ರಹ್ಮ ವಾಚಕವಾದ ಪ್ರಣವಸ್ವರೂಪವು. ಸತ್ಯದಲ್ಲಿಯೇ ಸಮಸ್ತಧರ್ಮಗಳೂ ಅಡ ಗಿರುವುವು. ಸತ್ಯವೇ ಸಮಸ್ತವೇದಗಳೆನಿಸುವುವು. ಸತ್ಯವೇ ಸಮಸ್ತಫಲಗ ಳನ್ನೂ ಕೊಡತಕ್ಕುದು. ಸತ್ಯವೇ ಪರಬ್ರಹ್ಮವು. ನಿನಗೆ ಧರ್ಮದಲ್ಲಿ ಬುದ್ಧಿ ಯು ಪ್ರವರ್ತಿಸುವುದಾದರೆ, ಆ ಸತ್ಯವನ್ನೇ ಅನುಸರಿಸಿ ನಡೆ ! ನೀನು ಕೇಳಿದ ವರಿಗೆ ಕೇಳಿದ ವರಗಳನ್ನೆಲ್ಲಾ ಕೊಡುವವನೆಂದು ಖ್ಯಾತಿಹೊಂದಿದವನಲ್ಲವೆ ? ಈಗ ನಾನು ಕೇಳುವ ವರಗಳನ್ನೂ ಸಫಲಗೊಳಿಸು ! ಧರ್ಮಪರಿಪಾಲನ ಕ್ಕಾಗಿಯೋ, ನನ್ನ ನಿರ್ಬಂಧಕ್ಕಾಗಿಯೋ, ರಾಮನನ್ನು ಹೊರಡಿಸಲೇಬೇಕು, ಇದೋ! ನಾನು ಸಾರಿಸಾರಿ ಹೇಳುವೆನು? ರಾಮನನ್ನು ಹೊರಡಿಸು! ಧರ್ಮವ ನ್ನು ಪಾಲಿಸು!! ನನ್ನ ಮಾತನ್ನು ನಡೆಸು !!! ಎಲೈ ರಾಜನೆ! ಈಗ ನೀನು ನನಗೆ ಶಪಥಮಾಡಿಕೊಟ್ಟಿರುವಂತೆ ನಡೆಸದಿದ್ದರೆ, ನಿನ್ನಿಂದ ತಿರಸ್ಕೃತಳಾದ ನಾ ನು ಈಗಲೇ ನಿನ್ನ ಕಣ್ಣೆದುರಿಗೆ ಪ್ರಾಣವನ್ನು ಬಿಡುವೆನು" ಎಂದಳು. ಹೀಗೆ ನಿ ರ್ಭಯಳಾಗಿ ಕೈಕೇಯಿಯು ತನ್ನನ್ನು ನಿರ್ಬಂಧಿಸುತ್ತಿರಲು,* ಹಿಂದೆ ವಾಮನ ರೂಪಿಯಾದ ಮಹಾವಿಷ್ಣುವು, ಇಂದ್ರನ ಪ್ರಾರ್ಥನೆಯಿಂದ ತನ್ನನ್ನು ವಂಚಿ ಸುವುದಕ್ಕಾಗಿ ಬಂದಾಗ, ಬಲಿಚಕ್ರವರ್ತಿಯು,ಕೊಟ್ಟಮಾತಿಗೆ ಕಟ್ಟುಬಿದ್ದು, ತಪ್ಪಿಸಿಕೊಳ್ಳಲಾರದೆ ಕಷ್ಟಕ್ಕೆ ಸಿಕ್ಕಿಕೊಂಡಂತೆ, ಈಗ ದಶರಥನು ಕೈಕೇಯಿ

---

* ಹಿಂದೆ ಬಲಿಯೆಂಬ ರಾಕ್ಷಸನು, ಇಂದ್ರನನ್ನು ಓಡಿಸಿ ಸ್ವರ್ಗಾಧಿಪತ್ಯವನ್ನಾಕ್ರ ಮಿಸಿಕೊಳ್ಳಲು, ಇಂದ್ರನ ತಾಯಿಯಾದ ಅದಿತಿಯು, ತನ್ನ ಮಗನ ಕಷ್ಟವನ್ನು ಬಿಡಿಸ ಬೇಕೆಂದು ವಿಷ್ಣುವನ್ನು ಪ್ರಾರ್ಥಿಸಿದಳು. ಆಗ ವಿಷ್ಣುವು ವಾಮನಾವತಾರವನ್ನೆತ್ತಿ, ಯಜ್ಞಮಾಡುತಿದ್ದ ಬಲಿಯ ಸಭೆಗೆ ಬಂದು, ಮೂರಡಿಯ ನೆಲವನ್ನು ಯಾಚಿಸಿದನು. ಬಲಿಯು ಅದಕ್ಕೊಪ್ಪಿ ದಾನಮಾಡಲು, ವಿಷ್ಣುವು ತನ್ನ ಎರಡಡಿಗಳಿಂದಲೇ ಮೂ ರುಲೋಕಗಳನ್ನೂ ಅಳೆದುಕೊಂಡನು. ಉಳಿದ ಮೂರನೆಯ ಅಡಿಗಾಗಿ ಬಲಿಯು ತನ್ನ ತಲೆಯನ್ನೊಡ್ಡಲು, ಆ ವ್ಯಾಜದಿಂದಲೇ ವಾಮನನು ಆ ಬಲಿಯನ್ನು ಸೆರೆಯಲ್ಲಿಟ್ಟುದಾ ಗಿ ಪುರಾಣಕಥೆಯು.

ಯು ಕಟ್ಟಿಹಾಕಿದ ಸತ್ಯಪಾಶವನ್ನು ಬಿಡಿಸಿಕೊಳ್ಳಲಾರದೆ ಹೋದನು. ಆತನ ಮನಸ್ಸಿಗೆ ದಿಗ್ಭ್ರಮವು ಹಿಡಿದಂತಾಯಿತು. ಆತನ ಮುಖವು ಬಣ್ಣಗುಂದಿತು. ರಥದ ನೊಗಕ್ಕೂ, ಚಕ್ರಗಳಿಗೂ ನಡುವೆ ಸಿಕ್ಕಿಕೊಂಡು,ಅತ್ತಿತ್ತ ಅಲುಗಲಾರದೆ ಕಟ್ಟುಬಿದ್ದಿರುವ ಎತ್ತಿನಂತೆ ಸ್ತಬ್ಧನಾಗಿದ್ದನು. ದುಃಖದಿಂದ ಕುರುಡನಂತೆ ಕಣ್ಣುಕಾಣದವನಾಗಿದ್ದು, ಆಮೇಲೆ ಬಹುಪ್ರಯಾಸದಿಂದ ಮೆಲ್ಲಗೆ ಮನಸ್ಸನ್ನು ಸಮಾಧಾನಪಡಿಸಿ, ಧೈರ್ಯವನ್ನು ತಂದುಕೊಂಡು, ಕೈಕೇಯಿಯನ್ನು ನೋಡಿ ಒಂದಾನೊಂದುಮಾತನ್ನು ಹೇಳುವನು. “ಎಲೆ ಪಾಪಿನಿ! ಹಿಂದೆ ಅಗ್ನಿಸಾಕ್ಷಿಕವಾಗಿ, ಮಂತ್ರಪುರಸ್ಸರವಾಗಿ ನಾನು ನಿನ್ನ ಕೈಯ್ಯನ್ನು ಹಿಡಿದಿದ್ದರೂ ಈಗ ಅದನ್ನು ಬಿಟ್ಟುಬಿಟ್ಟೆನು. ನೀನು ನನಗೆ ಹೆಂಡತಿಯಲ್ಲ. ಮತ್ತು ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ಭರತನೂ ನನ್ನ ಮಗನಲ್ಲ! ನಿನ್ನೊಡನೆ ಆತನನ್ನೂ ತೊರೆದುಬಿಟ್ಟೆನು. ಎಲೆ ಕೈಕೇಯಿ ! ರಾತ್ರಿಯು ಕಳೆಯುತ್ತಬಂದಿತು. ಸೂರ್ಯನು ಉದಿಸುವ ಸಮಯವಾಯಿತು. ಇನ್ನು ಗುರುಜನಗಳು ಬಂದು ರಾಮನ ಅಭಿಷೇಕಕ್ಕಾಗಿ ನನ್ನನ್ನು ತ್ವರೆಪಡಿಸುವರು. ಅಯ್ಯೋ ! ಆತನ ಅಭಿಷೇಕಕ್ಕಾಗಿ ಈಗ ಸಿದ್ಧಪಡಿಸಿರುವ ಸಾಮಗ್ರಿಗಳಿಂದಲೇ, ಅವನು ನನಗೆ ಅಪರಕ್ರಿಯೆಗಳನ್ನು ಮಾಡಬೇಕಾಗಿ ಬಂದಿರುವುದಲ್ಲಾ! ಎಲೆ ನೀಚೆ! ನೀನೂ ನಿನ್ನ ಮಗನೂ ನನಗೆ ತರ್ಪಣವನ್ನು ನಡೆಸಬೇಕಾದುದೇ ಇಲ್ಲ! ಈಗ ಮಾಡಿರುವ ಅಭಿಷೇಕಪ್ರಯತ್ನವನ್ನು ನಾನು ಮುರಿದರೆ, ಈ ಮಹೋತ್ಸವವು ನಡೆಯುವುದೆಂದು ಮೊದಲು ಸಂತೋಷಭರಿತವಾಗಿದ್ದ ಜನವೆಲ್ಲವೂ ಈಗ ಅದಕ್ಕೆ ವಿಘಾತವುಂಟಾದುದನ್ನೂ ಕೇಳಿ ಉತ್ಸಾಹಭಂಗದಿಂದ ತಲೆಯನ್ನು ತಗ್ಗಿಸಿ ದುಃಖಿತರಾದಾಗ ಅದನ್ನು ನೋಡಿ ನಾನು ಹೇಗೆ ಸಹಿಸಲಿ ?” ಎಂದನು. ಮಹಾತ್ಮನಾದ ದಶರಥರಾಜನು ಹೀಗೆ ಹೇಳುತ್ತಿರುವಾಗಲೇ, ಚಂದ್ರನಿಂದಲೂ, ನಕ್ಷತ್ರಗಳಿಂದಲೂ ಪ್ರಕಾಶಿಸುತ್ತಿದ್ದ ಆ ರಾತ್ರಿಯು ಕಳೆದು ಬೆಳಗಾಯಿತು. ಆಮೇಲೆ ಪಾಪಬುದ್ಧಿಯುಳ್ಳ ಕೈಕೇಯಿಯು ಪುನಃ ಮತ್ತಷ್ಟು ಕೋಪವನ್ನು ತೋರಿಸುತ್ತ, ಕರ್ಣಕಠೋರವಾದ ವಾಕ್ಯಗಳಿಂದ ರಾಜನನ್ನು ಕುರಿತು “ಎಲೆ ರಾಜನೆ! ವಿಷಸಂಬಂಧವಾದ ಮಹಾವ್ಯಾಧಿಯಂತೆ, ನಿನ್ನ ಮಾ

ತುಗಳು ನನಗೆ ಕೇಳಲಸಹ್ಯವಾಗಿರುವುವು. ಸುಮ್ಮನೆ ಉತ್ತರಪ್ರತ್ಯುತ್ತರಗಳಿಂದೇನು! ದುಃಖವನ್ನು ಬಿಡು! ರಾಮನನ್ನು ಉಪಾಯದಿಂದ ಈಗಲೇ ಇಲ್ಲಿಗೆ ಕರೆಸು! ಆತನನ್ನು ಕಾಡಿನಲ್ಲಿರುವಂತೆ ನಿಯಮಿಸಿ, ನನ್ನ ಮಗನನ್ನು ರಾಜ್ಯದಲ್ಲಿರಿಸು! ಹೀಗೆ ಮಾಡಿದಹೊರತು ನನ್ನ ಮನಸ್ಸಿಗೆ ನೆಮ್ಮದಿಯಿರದು ! ನೀನೂ ಕೃತಕೃತ್ಯನಾಗಲಾರೆ! ಆದುದರಿಂದ ಮೊದಲು ನನ್ನನ್ನು ನಿಷ್ಕಂಟಕವಾದ ಸ್ಥಿತಿಯಲ್ಲಿರಿಸಿ, ಆಮೇಲೆ ನೀನು ಪ್ರಾತರಾಹ್ನಿಕಾದಿಕೃತ್ಯಗಳನ್ನು ನಡೆಸುವುದಕ್ಕಾಗಿ ಹೋಗಬಹುದು" ಎಂದಳು. ತೀಕ್ಷ್ಣವಾದ ಕಶೆಯ ಪೆಟ್ಟಿನಿಂದ ನೊಂದ ಕುದುರೆಯಂತೆ, ರಾಜನು ಅವಳ ಕ್ರೂರವಾಕ್ಯದಿಂದ ನೊಂದವನಾಗಿ, ಕೈಕೇಯಿಯನ್ನು ಪುನಃ ನೋಡಿ "ಎಲೆ ಘಾತುಕಿ! ಆದುದಾಯಿತು! * ಧರ್ಮಪಾಶಕ್ಕೆ ನಾನು ಕಟ್ಟುಬಿದ್ದೆನು. ಈಗ ನನ್ನ ಬುದ್ಧಿಯೇ ನನ್ನ ಅಧೀನವಾಗಿಲ್ಲ! ಧರ್ಮಶೀಲನಾಗಿ, ನನಗೆ ಪ್ರಾಣಪ್ರಿಯನಾಗಿರುವ ರಾಮನನ್ನು ಇನ್ನೊಂದಾವೃತ್ತಿಯಾದರೂ ಮನಸ್ತೃಪ್ತಿಯಾಗುವಂತೆ ಕಣ್ಣಿಂದ ನೋಡಿಬಿಡಬೇಕೆಂದು ನನ್ನ ಆಸೆಯಿರುವುದು" ಎನ್ನುತ್ತಿರುವಾಗಲೇ, ಚೆನ್ನಾಗಿ ಬೆಳಗಾಯಿತು. ಸೂರ್ಯನೂ ಉದಿಸಿದನು. ಪರಿಶುದ್ಧವಾದ ಪುಷ್ಯನಕ್ಷತ್ರವು ಸಮೀಪಿಸಿತು. ಶುಭಮುಹೂರ್ತಕಾಲವು ಪ್ರಾಪ್ತವಾಯಿತು. ಇಷ್ಟರಲ್ಲಿ ಅತ್ತಲಾಗಿ ಗುಣಸಂಪನ್ನನಾದ ವಸಿಷ್ಠನು, ಶಿಷ್ಯರೊಡಗೂಡಿ ಸಮಸ್ತಸಾಮಗ್ರಿಗಳನ್ನೂ ಸಿದ್ಧಪಡಿಸಿಕೊಂಡು, ಪಟ್ಟಣವೊಳಕ್ಕೆ ಪ್ರವೇಶಿಸಿದನು. ಅಷ್ಟರೊಳಗಾಗಿ ಬೀದಿಗಳೆಲ್ಲವೂ ಜಲಸೇಚನದಿಂದ ತಂಪೇರಿಸಲ್ಪಟ್ಟಿದ್ದುವು. ಅಲ್ಲಲ್ಲಿ ಧ್ವಜಪತಾಕೆಗಳು ಏರಿಸಲ್ಪಟ್ಟಿದ್ದುವು. ಅಲ್ಲಲ್ಲಿ ಪುಷ್ಪಗಳನ್ನು ಚೆಲ್ಲಿದ್ದರು. ಮನೆಮನೆಯ ಬಾಗಿಲುಗಳಲ್ಲಿಯೂ ಪುಷ್ಪಮಾಲಿಕೆಗಳು ಕಟ್ಟಲ್ಪಟ್ಟಿದ್ದುವು. ಪುರವಾಸಿಗಳೆಲ್ಲರೂ ಹರ್ಷದಿಂದ ಓಡಾಡುತಿದ್ದರು. ಅಂಗಡಿಗಳೆಲ್ಲವೂ ಪದಾರ್ಥಸಮೃದ್ಧಿಗಳಿಂದ ಶೋಭಿಸುತ್ತಿದ್ದುವು. ಎಲ್ಲೆಲ್ಲಿನೋಡಿದರೂ ಈ ಮಹೋತ್ಸವದ ಕೊಂಡಾಟಗಳೇ ನಡೆಯುತಿದ್ದುವು. ರಾಮನ ಪಟ್ಟಾಭಿಷೇಕವನ್ನು ಸಮಸ್ತಜನಗಳೂ ಕುತೂಹಲದಿಂದ ಇದಿರುನೋಡುತಿದ್ದರು. ಅಲ್ಲಲ್ಲಿ ಸುವಾ

---

* ಈ ವಾಕ್ಯದಿಂದ ದಶರಥನು ರಾಮನನ್ನು ಕಾಡಿಗೆ ಕಳುಹಿಸುವುದಕ್ಕೆ ಸ್ವಲ್ಪಮಟ್ಟಿಗೆ ಅನುಜ್ಞೆಕೊಟ್ಟುದಾಗಿ ಸೂಚಿತವಾಗುವುದು.

ಸನೆಯುಳ್ಳ ಧೂಪಗಳನ್ನು ಹತ್ತಿಸಿಟ್ಟಿದ್ದರು. ಹೀಗೆ ವಸಿಷ್ಠನು ಇಂದ್ರ ಭವನದಂತೆಅತಿಮನೋಹರವಾದ ಆ ಪಟ್ಟಣದ ಬೀದಿಗಳನ್ನು ದಾಟಿಬಂದು, ಅಂತಃಪುರದ ಸಮೀಪವನ್ನು ಸೇರಿದನು. ಅಲ್ಲಿ ಅನೇಕಪಕ್ಷಿಸಮೂಹಗಳಿಂದ ಮನೋಹರವಾಗಿಯೂ, ಜನಸಮೃದ್ಧವಾಗಿಯೂ, ಬ್ರಾಹ್ಮಣಗೋಷ್ಠಿಯಿಂದ ತುಂಬಿದುದಾಗಿಯೂ, ಯಜ್ಞಕಾರ್ಯದಲ್ಲಿ ನಿಪುಣರಾದ ಋಷಿಸಮೂಹಗಳಿಂದ ಪೂರ್ಣವಾಗಿಯೂ ಇರುವ ಅಂತಃಪುರವನ್ನು ಪ್ರವೇಶಿಸಿ, ಅಲ್ಲಿದ್ದ ಜನರ ಗುಂಪನ್ನೂ ದಾಟಿಕೊಂಡು ಮುಂದೆ ಬಂದನು. ಈ ಸಂಭ್ರಮಗಳನ್ನು ನೋಡಿದಾಗ ಆ ವಸಿಷ್ಠನಿಗುಂಟಾದ ಸಂತೋಷಕ್ಕೆ ಪಾರವೇ ಇಲ್ಲಿಲ್ಲ. ಇಷ್ಟರಲ್ಲಿ ಸುಮಂತ್ರನೆಂಬ ಸಾರಥಿಯೂಕೂಡ, ಸರ್ವಾಲಂಕಾರ ಭೂಷಿತನಾಗಿ ಆ ಅಂತಃಪುರದ್ವಾರಕ್ಕೆ ಬಂದು ಸೇರಿದನು. ವಸಿಷ್ಠನು ಅಂತಃಪುರದ್ವಾರದಲ್ಲಿ ನಿಂತಿದ್ದ ಆತನನ್ನು ನೋಡಿ, "ಎಲೆ ಸೂತನೆ ! ನೀನು ಈಗಲೇ ಹೋಗಿ ನಾನು ಬಂದಿರುವೆನೆಂದು ದಶರಥನಿಗೆ ತಿಳಿಸು ! ಇದೋ! ಇಲ್ಲಿ ನೋಡು. ರಾಮಾಭಿಷೇಕಕ್ಕಾಗಿ ಗಂಗೆಯಿಂದಲೂ, ನಾಲ್ಕುಸಮುದ್ರಗಳಿಂದಲೂ ತರಿಸಲ್ಪಟ್ಟ ಪುಣ್ಯತೀರ್ಥಗಳಿಂದ ತುಂಬಿದ ಸುವರ್ಣಕುಂಭಗಳು ಸಿದ್ಧವಾಗಿರುವುವು. ಇದೋ ಇಲ್ಲಿ ಅಭಿಷೇಕಾರ್ಥವಾಗಿ, ಅತ್ತಿಯಮರದಿಂದ ಮಾಡಲ್ಪಟ್ಟ ಮಂಗಳಪೀಠವನ್ನು ತರಿಸಿಟ್ಟಿರುವೆನು. ನವಧಾನ್ಯಗಳೂ ಸಿದ್ಧವಾಗಿರುವುವು. ಸುಗಂಧದ್ರವ್ಯಗಳೆಲ್ಲವನ್ನೂ ತರಿಸಿಟ್ಟಿರುವೆನು. ನವರತ್ನಗಳೂ ಸಿದ್ಧವಾಗಿರುವುವು. ಜೇನು, ಮೊಸರು, ತುಪ್ಪ, ಹಾಲು, ದರ್ಭೆಗಳು, ಪುಷ್ಪಗಳು ಇವೆಲ್ಲವನ್ನೂ ತರಿಸಿಟ್ಟಿರುವೆನು. ಮನೋಹರಾಕಾರವುಳ್ಳ ಅಷ್ಟಕನ್ನಿಕೆಯರೂ ಸಿದ್ಧರಾಗಿರುವರು. ಇದೋ! ಇಲ್ಲಿ ಮದಿಸಿದ ಮಹಾಗಜವು ನಿಲ್ಲಿಸಲ್ಪಟ್ಟಿರುವುದು. ನಾಲ್ಕುಕುದುರೆಗಳಿಂದ ಹೂಡಿದ, ಕಾಂತಿವಿಶಿಷ್ಟವಾದ ಮಹಾರಥವು ಇಲ್ಲಿರುವುದು. ಮೇಲಾದ ಕತ್ತಿ, ಉತ್ತಮವಾದ ಬಿಲ್ಲು, ಪಲ್ಲಕ್ಕಿ, ಚಂದ್ರ

---

* "ಇಲ್ಲಿ ಚತುರಶ್ವೋ ರಥಶ್ಶ್ರೀಮಾನ್" ಎಂದು ಮೂಲಶ್ಲೋಕವು. ಇದರಲ್ಲಿ ಎರಡನೆಯ ಅಕ್ಷರವಾದ "ತು" ಎಂಬುದು, ಗಾಯತ್ರಿಯ ನಾಲ್ಕನೆಯ ಅಕ್ಷರವಾದುದರಿಂದ, ಇದುವರೆಗೆ ರಾಮಾಯಣದಲ್ಲಿ ಮೂರುಸಹಸ್ರಗ್ರಂಥಗಳು ಮುಗಿದು, ನಾಲ್ಕನೆಯಸಹಸ್ರವು ಈ ಶ್ಲೋಕದಿಂದ ಆರಂಭಿಸಲ್ಪಡುವುದೆಂದು ಗ್ರಹಿಸಬೇಕು.

ನಂತೆ ಹೊಳೆಯುವ ಬಿಳೀಕೊಡೆ, ಬಿಳೀಚಾಮರಗಳು, ಚಿನ್ನದ ಕಲಶಗಳು, ಬಂಗಾರದ ಸರಪಣಿಯಿಂದ ಕಟ್ಟಲ್ಪಟ್ಟ ಬಿಳೀಯೆತ್ತು, ಇವೆಲ್ಲವೂ ಸಿದ್ಧವಾಗಿರುವುವು. ಅಂದವಾದ ಕೇಸರಗಳಿಂದಲೂ ನಾಲ್ಕುಹಲ್ಲುಗಳಿಂದಲೂ ಕೂಡಿದ ಮಹಾಬಲಾಢ್ಯವಾದ ಕುದುರೆಯು ಇಲ್ಲಿರುವುದು. ಸಿಂಹಾಸನವೂ ಸಿದ್ಧಪಡಿಸಲ್ಪಟ್ಟಿರುವುದು. ಇದೋ ಇಲ್ಲಿ ಹುಲಿಯ ಚರ್ಮವನ್ನು ತರಿಸಿಟ್ಟಿರುವೆನು. ಹುತಮಾಡಲ್ಪಟ್ಟ ಅಗ್ನಿಯು ಅತ್ಯುತ್ಸಾಹಗೊಂಡಂತೆ ಜಾಜ್ವಲ್ಯಮಾನವಾಗಿ ಉರಿಯುತ್ತಿರುವುದು. ಸಮಸ್ತಮಂಗಳವಾದ್ಯಗಳೂ ಸಿದ್ಧವಾಗಿರುವುವು. ವೇಶ್ಯೆಯರೆಲ್ಲರೂ ಅಲಂಕೃತರಾಗಿರುವರು. ಆಚಾರ್ಯರೂ, ಬ್ರಾಹ್ಮಣರೂ ಬಂದಿರುವರು. ಗೋವುಗಳೂ, ಮೃಗಪಕ್ಷಿಗಳೂ, ಸಿದ್ಧವಾಗಿ ಬಂದು ನಿಂತಿರುವುವು ಪಟ್ಟಣವಾಸಿಗಳೂ, ದೇಶವಾಸಿಗಳೂ, ವರ್ತಕರೂ, ಇಲ್ಲಿ ತಮ್ಮ ತಮ್ಮ ಪರಿವಾರಗಳೊಡನೆ ಬಂದು ಸೇರಿರುವರು. ಇವರೆಲ್ಲರೂ ಒಬ್ಬರಿಗೊಬ್ಬರು ರಾಮಾಭಿಷೇಕವೆಂಬ ಪ್ರಿಯವಾರ್ತೆಯನ್ನೇ ಹೇಳಿಕೊಳ್ಳುತ್ತಾ, ಸಂತೋಷಭರಿತರಾಗಿ, ಇತರಸಾಮಂತರಾಜರೊಡಗೂಡಿ, ಅಭಿಷೇಕಕಾಲವನ್ನು ನಿರೀಕ್ಷಿಸುತ್ತಿರುವರು. ನೀನುಹೋಗಿ ಮಹಾರಾಜನನ್ನು ತ್ವರೆಪಡಿಸು! ಹೊತ್ತುಮೀರುವುದು! ಇದೋ! ಚೆನ್ನಾಗಿ ಬೆಳಗಾಯಿತು. ಈಗಲೇ ಪರಿಶುದ್ಧವಾದ ಪುಷ್ಯನಕ್ಷತ್ರವು ಬರುವುದು. ಆ ಮುಹೂರ್ತದಲ್ಲಿಯೇ ಅಭಿಷೇಕವನ್ನು ನಡೆಸಿಬಿಡಬೇಕು. ಇನ್ನು ನೀನು ಹೊರಡು." ಎಂದನು. ಮಹಾತ್ಮನಾದ ವಸಿಷ್ಠನು ಹೇಳಿದ ಮಾತನ್ನು ಕೇಳಿ, ಸುಮಂತ್ರನು ದಶರಥನಿಗೆ ಈ ಸದಭಿಪ್ರಾಯವು ಹುಟ್ಟಿದುದಕ್ಕಾಗಿ ಆತನನು ಮನಸ್ಸಿನಲ್ಲಿಯೇ ಕೊಂಡಾಡುತ್ತ, ಆ ರಾಜಗೃಹದೊಳಕ್ಕೆ ಪ್ರವೇಶಿಸಿದನು. ರಾಜನಿಗೆ ಪರಮಾಪ್ತನಾಗಿ ವಯೋವೃದ್ಧನಾಗಿರುವ ಆ ಸುಮಂತ್ರನನು ದ್ವಾರಪಾಲಕರು ನೋಡಿ, ಅವನನ್ನು ತಡೆಯಲಾರದೆ ಹಿಂಜರಿದು ನಿಂತರು. ಸುಮಂತ್ರನು ದಶರಥರಾಜನಿಗೆ ಬಹಳ ಆಪ್ತನಾದುದರಿಂದ, ಆತನನ್ನು ಯಾವಾಗಲೂ ಬಾಗಿಲಲ್ಲಿ ತಡೆಯಕೂಡದೆಂದು ರಾಜಾಜ್ಞೆಯಿದ್ದಿತು. ಆ ರಾಜಾಜ್ಞೆಯನ್ನನುಸರಿಸಿ ದ್ವಾರಪಾಲಕರೆಲ್ಲರೂ ಹಿಂದಾಗಿಬಿಟ್ಟರು. ಹೀಗೆ ಸುಮಂತ್ರನು ತಡೆಯಿಲ್ಲದೆ ರಾಜನ ಮನೆಯನ್ನು

ಪ್ರವೇಶಿಸಿ, ದಶರಥನ ಸಮೀಪದಲ್ಲಿ ನಿಂತನು. ಆಗಲೂ ಈತನಿಗೆ ಆ ದಶರಥನು ಅನುಭವಿಸುತಿದ್ದ ದುರವಸ್ಥೆಯು ತಿಳಿಯಲಿಲ್ಲ. ಸಂತೋಷದಿಂದ ಆತನನ್ನು ಸ್ತೋತ್ರಮಾಡುವುದಕ್ಕಾಗಿ, ಎಂದಿನಂತೆ ಪ್ರಾತಃಕಾಲದಲ್ಲಿ ತಾನು ಹೇಳಬೇಕಾದ ಮಂಗಳಾಶಾಸನಗಳನ್ನು ಪಕ್ರಮಿಸಿದನು. ವಿನಯದಿಂದ ಕೈಮುಗಿದು "ಎಲೆ ಮಹಾತ್ಮನೆ! * ಸೂರ್ಯೋದಯಕಾಲದಲ್ಲಿ ಸಮುದ್ರನು ಒಂದು ತೇಜೋವಿಶೇಷವನ್ನು ಹೊಂದಿ ಉಕ್ಕಿಬರುವಂತೆ, ನೀನೂ ಸಂತುಷ್ಟಹೃದಯನಾಗಿ ಆನಂದಿಸು! ಇಂದ್ರನನ್ನು, ಸಾರಥಿಯಾದ ಮಾತಲಿಯು, ಹೀಗೆ ಉದಯಕಾಲದಲ್ಲಿ ಸ್ತೋತ್ರಮಾಡುತಲಿದ್ದುದರಿಂದಲೇ, ಆ ಇಂದ್ರನು ತನ್ನ ವೈರಿಗಳಾದ ದೈತ್ಯರೆಲ್ಲರನ್ನೂ ಜಯಿಸಿದನು. ಅದರಂತೆ ನಾನೂ ಈಗ ನಿನ್ನ ಶ್ರೇಯಃಪ್ರಾರ್ಥನೆಮಾಡುವೆನು. † ಸ್ವತಸ್ಸಿದ್ಧನಾಗಿ, ಸರ್ವವಿಭುವಾಗಿರುವ ಪರಬ್ರಹ್ಮನನ್ನು, ಶಿಕ್ಷೆ ಮೊದಲಾದ ಆರು ಅಂಗಗಳೊಡಗೂಡಿ ವೇದಗಳೂ, ಮೀಮಾಂಸಾದಿವಿದ್ಯೆಗಳೂ, ಸೃಷ್ಟಿಕಾರ್ಯಕ್ಕಾಗಿ ಇದೇಕಾಲದಲ್ಲಿ ಉದ್ಬೋಧಿಸುವಂತೆ, ನಾನೂ ಈಗ ನಿನ್ನನ್ನು ಎಚ್ಚರಗೊಳಿಸುವೆನು. ಸೂರ್ಯನು ಚಂದ್ರನೊಡಗೂಡಿ ಸಮಸ್ತಭೂತಗಳಿಗೂ ಆಶ್ರಯವಾದ ಈ ಭೂಮಿಯನ್ನು ಎಚ್ಚರಗೊಳಿಸುವಂತೆ, ಈಗ ನಾನೂ ನಿನ್ನನ್ನು ಎಚ್ಚರಗೊಳಿಸುವೆನು. ಎಲೆ ಮಹಾರಾಜನೆ ಏಳು ! ಮುಂದೆ ನಡೆಯಬೇಕಾದ ಮಹೋತ್ಸವಕ್ಕೆ ತಕ್ಕಂತೆ ಮಂಗಳಾಲಂಕಾರಗಳನ್ನು ಮಾ

---

* ಸೂರ್ಯೋದಯದಲ್ಲಿಯೂ ಸಮುದ್ರವು ಉಕ್ಕಿಬರುವುದುಂಟು. ಅಥವಾ ಮೂಲದಲ್ಲಿರುವ ಭಾಸ್ಕರಶಬ್ದಕ್ಕೆ ಚಂದ್ರನೆಂದೇ ಅರ್ಥವನ್ನು ಹೇಳಬಹುದು.

† "ನಾಮ ರೂಪಂಚ ಭೂತಾನಾಂ ಕೃತ್ಯಾನಾಂಚ ಪ್ರಪಂಚನಂ । ವೇದಶಬ್ದೇಭ್ಯ ಏವಾದೌ ದೇವಾದೀನಾಂ ಚಕಾರ ಸಃ" ಎಂದರೆ, ಬ್ರಹ್ಮನು ದೇವತೆಗಳೇ ಮೊದಲಾದ ಪ್ರಾಣಿಗಳಿಗೆಲ್ಲಾ, ನಾಮ, ರೂಪ, ಕೃತ್ಯ ಮೊದಲಾದುವುಗಳನ್ನು ವಿಸ್ತಾರವಾಗಿ ನಿರೂಪಿಸುವುದಕ್ಕಾಗಿ, ಮೊದಲು ವೇದಗಳನ್ನೇ ಮೂಲವಾಗಿಟ್ಟುಕೊಂಡನೆಂದರ್ಥವು. ಅಥವಾ ಸೃಷ್ಟಿಗೆ ಬೇಕಾದ ಅರ್ಥಗಳನ್ನು ವೇದಗಳಿಂದಲೇ ತಿಳಿದು ಮಾಡುವನೆಂದೂ ಗ್ರಹಿಸಬಹುದು. "ವೇದೇಭ್ಯಏವ ಭೂರಾದೀನ್ ಜ್ಞಾತ್ವಾ ವೇಧಾಸ್ಸೃಜತಿ" ಬ್ರಹ್ಮನು ವೇದಗಳಿಂದಲೇ ಭೂಮ್ಯಾದಿಪದಾರ್ಥಗಳನ್ನು ತಿಳಿದು, ಅವುಗಳನ್ನು ಸೃಷ್ಟಿಸುವನು. ಎಂದರೆ ಭೂಮ್ಯಾದಿಸೃಷ್ಟಿಕ್ರಮವನ್ನು ವೇದಗಳೇ ಬ್ರಹ್ಮನಿಗೆ ಬೋಧಿಸುವುವೆಂದು ಶ್ರುತಿಯು,

ಡಿಕೊಳ್ಳುವನಾಗು. * ಮೇರುಪರ್ವತದಿಂದ ತೇಜೋವಿಶಿಷ್ಟನಾಗಿ ಹೊರಟು ಬರುವ ಸೂರ್ಯನಂತೆ, ದಿವ್ಯಾಲಂಕಾರಭೂಷಿತವಾದ ದೇಹದಿಂದ ಪ್ರಜೆಗಳನ್ನು ಸಂತೋಷಪಡಿಸು! ಎಲೈ ಕಕುತ್ಸ್ಥವಂಶಶಿಖಾಮಣಿಯೆ! ಚಂದ್ರಸೂರ್ಯರೂ, ಕುಬೇರನೂ, ವರುಣನೂ, ಇಂದ್ರಾಗ್ನಿಗಳೂ ನಿನಗೆ ಜಯವನ್ನು ಕೊಡಲಿ! ರಾಮಾಭಿಷೇಕವನ್ನು ಮುಂದಿಟ್ಟುಕೊಂಡಿರುವ, ಪೂಜ್ಯವಾದ ರಾತ್ರಿಯು ಕಳೆದುಹೋಯಿತು. ನಿನ್ನ ಉದ್ದೇಶದಂತೆ ರಾಮಾಭಿಷೇಕಕ್ಕಾಗಿ ನಡೆಸಬೇಕಾದ ಸಮಸ್ತಕಾರ್ಯಗಳೂ ಸಿದ್ಧಪಡಿಸಲ್ಪಟ್ಟಿರುವುವು. ಪುರಜನರೂ, ದೇಶದ ಜನರೂ, ವರ್ತಕರೂ, ಇನ್ನೂ ಅನೇಕಬ್ರಾಹ್ಮಣೋತ್ತಮರೂ ನಿನ್ನ ಆಜ್ಞಾನುವರ್ತಿಗಳಾಗಿ ಕೈಕಟ್ಟಿಕೊಂಡು ನಿಂತಿರುವರು. ವಸಿಷ್ಠನೂ ಬಂದು ಸಿದ್ಧನಾಗಿರುವನು. ರಾಜನೆ! ರಾಮನ ಪಟ್ಟಾಭಿಷೇಕಕ್ಕೆ ಅಪ್ಪಣೆಯನ್ನು ಕೊಡು! ಕಾವಲಿಲ್ಲದ ಮಂದೆಯಂತೆಯೂ, ನಾಯಕನಿಲ್ಲದ ಸೇನೆಯಂತೆಯೂ, ಚಂದ್ರನಿಲ್ಲದ ರಾತ್ರಿಯಂತೆಯೂ, ವೃಷಭವಿಲ್ಲದ ಗೋಸಮೂಹದಂತೆಯೂ, ರಾಜನಿಲ್ಲದ ರಾಜ್ಯವು ಹದ್ದುಮೀರಿಹೋಗುವುದು. ಆದುದರಿಂದ ಬೇಗ ಏಳು" ಎಂದನು. ಹೀಗೆ ಅರ್ಥಗರ್ಭಿತವಾದ ಸಾಂತ್ವವಾಕ್ಯಗಳಿಂದ ಎಚ್ಚರಿಸುತ್ತಿರುವ ಸುಮಂತ್ರನ ವಾಕ್ಯವನ್ನು ಕೇಳಿ ರಾಜನಿಗೆ ಮತ್ತಷ್ಟು ಶೋಕೋದ್ರೇಕವುಂಟಾಯಿತು. ಅವನು ತನ್ನ ಪ್ರಿಯಪುತ್ರನಾದ ರಾಮನ ಚಿಂತೆಯಿಂದ ರಾತ್ರಿಯೆಲ್ಲವೂ ಎಡೆಬಿಡದೆ ಅಳುತ್ತಿದ್ದುದರಿಂದ ಕೆಂಪಾದಕಣ್ಣುಳ್ಳವನಾಗಿ, ಸುಮಂತ್ರನನ್ನು ಕುರಿತು "ಎಲೈ ಸುಮಂತ್ರನೆ! ಮೊದಲೇ ಚಿಂತೆಯಿಂದ ಬಳಲಿರುವ ನನ್ನನ್ನು ಮರ್ಮಭೇದಕಗಳಾದ ಈ ಮಾತುಗಳಿಂದ ಮತ್ತಷ್ಟು ಕಷ್ಟಪಡಿಸಬೇಕೆಂದು ನೀನು ಬಂದಿರುವಹಾಗಿದೆ" ಎಂದನು. ಹೀಗೆ ದುಃಖದಿಂದಲೂ, ದೈನ್ಯದಿಂದಲೂ ಪ್ರತ್ಯುತ್ತರವನ್ನು ಕೊಟ್ಟ ರಾಜನ ಮಾತನ್ನು ಕೇಳಿ, ಸುಮಂತ್ರನು ಬೇರೆ ಯಾವ ಮಾತನ್ನೂ ಆಡದೆ, ರಾಜನಿಗೆ ಕೈಮುಗಿದು ಆ ಸ್ಥಳವನ್ನು ಬಿಟ್ಟು

---

* ಸೂರ್ಯನು ಮೇರುವನ್ನು ಸುತ್ತುವನೇಹೊರತು ಅದರಿಂದ ಉದಿಸುವುದಿಲ್ಲ. ಇಲ್ಲಿ "ಮೇರುವಿನಿಂದ ಹೊರಟ" ನೆಂದರೆ, ಅಲ್ಲಿನ ರಥಚಕ್ರದ ದಾರಿಯಿಂದ ಹೊರಟು ಬಂದವನೆಂದು ಗ್ರಾಹ್ಯವು.

ಹೊರಟನು. ಕೈಕೇಯಿಯು ಕಾಲೋಚಿತವಾದ ತಂತ್ರವನ್ನು ಚೆನ್ನಾಗಿ ಬಲ್ಲವಳಾದುದರಿಂದ, ರಾಜನು ದುಃಖದಿಂದ ಪ್ರತ್ಯುತ್ತರಕೊಡಲಾರದೆ ಸುಮ್ಮನಿರುವುದನ್ನೂ, ಸುಮಂತ್ರನು ಹಿಂತಿರುಗಿ ಹೊರಡುತ್ತಿರುವುದನ್ನೂ ನೋಡಿ, ತಾನಾಗಿಯೇ ಆ ಸಾರಥಿಯನ್ನು ಕರೆದು "ಎಲೈ ಸುಮಂತ್ರನೆ! ರಾಜನಿಗೆ ನಿನ್ನೆ ರಾತ್ರಿಯೆಲ್ಲವೂ ನಿದ್ರೆಯಿಲ್ಲ! ರಾಮನಿಗೆ ಪಟ್ಟವನ್ನು ಕಟ್ಟುವೆನೆಂಬ ಉತ್ಸಾಹದಿಂದ ಆತನಿಗೆ ನಿದ್ರೆಯೇ ಹತ್ತಲಿಲ್ಲ! ಈಗಲೇ ಸ್ವಲ್ಪ ಮಟ್ಟಿಗೆ ನಿದ್ರೆಹತ್ತಿರುವಂತಿದೆ! ಆತನು ರಾತ್ರಿ ಜಾಗರಣೆಯಿಂದ ಬಹಳವಾಗಿ ಬಳಲಿ ಈಗತಾನೇ ಮೈಮರೆತು ನಿದ್ರೆಹೋಗುತ್ತಿರುವನು. ನೀನು ಈಗ ರಾಜನನ್ನು ಎಬ್ಬಿಸುವುದುಚಿತವಲ್ಲ! ಬೇಗಹೋಗಿ ರಾಮನನ್ನೇ ಇಲ್ಲಿಗೆ ಕರೆದುಕೊಂಡುಬಾ! ಬೇರೆವಿಧವಾಗಿ ಚಿಂತಿಸಬೇಡ? ಹೋಗು! ನಿನಗೆ ಮಂಗಳವಾಗಲಿ!" ಎಂದು ಪ್ರತ್ಯುತ್ತರವನ್ನು ಕೊಟ್ಟಳು. ಕಪಟವನ್ನರಿಯದ ಆ ಸುಮಂತ್ರನು, ಕೈಕೇಯಿಯ ಮಾತನ್ನೇ ನಿಜವೆಂದು ನಂಬಿ, ಅದನ್ನೇ ರಾಜಶಾಸನವನ್ನಾಗಿ ಭಾವಿಸಿ, ಉಕ್ಕಿ ಬರುವ ಸಂತೋಷದಿಂದುಬ್ಬಿದವನಾಗಿ, ಒಡನೆಯೇ ಅಲ್ಲಿಂದ ಹೊರಟನು. ದಾರಿಯಲ್ಲಿ ಬರುತ್ತಿರುವಾಗ ತನ್ನಲ್ಲಿ ತಾನು "ಆಹಾ! ಧರ್ಮಜ್ಞನಾದ ನಮ್ಮ ರಾಜನಿಗೆ, ರಾಮನ ಅಭಿಷೇಕವನ್ನು ನಡೆಸುವುದರಲ್ಲಿ ಎಷ್ಟು ಉತ್ಸಾಹವು! ಆತನು ಬಹಳವಾಗಿಬಳಲಿರುವುದೇನೋ ನಿಜವೇ ಎಂದು ದೃಢಪಡಿಸಿಕೊಂಡು, ಸಂತೋಷಪರವಶನಾಗಿ, ರಾಮನನ್ನು ನೋಡಬೇಕೆಂಬ ಆತುರದಿಂದ ಬೇಗನೆ ಹೊರಟು ಬರುತ್ತಿದ್ದನು. ಸಮುದ್ರದೊಳಗಿನ ಮಡುವಿನಂತೆ, ಪಟ್ಟಣದ ಮಧ್ಯದಲ್ಲಿ ಪ್ರಕಾಶಿಸುತ್ತಿರುವ ಆ ಅಂತಃಪುರಮುಂದೆ ನೆರೆದಿದ್ದ ಜನಗಳ ಗುಂಪನ್ನು ಬಹುಪ್ರಯಾಸದಿಂದ ದಾಟಿಕೊಂಡು ಬಂದನು. ಇವನು ದ್ವಾರಪ್ರದೇಶವನ್ನು ನೋಡುವಷ್ಟರೊಳಗಾಗಿ, ಅಲ್ಲಿ ಅನೇಕರಾಜಾಧಿರಾಜರೂ, ಅನೇಕಪುರವಾಸಿಗಳೂ, ಧನಿಕರಾದ ವರ್ತಕರೂ, ರಾಜ್ಯಾಧಿಕಾರಿಗಳೂ ಕಾಣಿಕೆಗಳೊಡನೆ ಕಿಕ್ಕಿರಿದು ತುಂಬಿದ್ದರು. ಇಲ್ಲಿಗೆ ಹದಿನಾಲ್ಕನೆಯ ಸರ್ಗವು.

---

## ರಾಮಾಭಿಷೇಕ ಸಂಭಾರ ವರ್ಣನವು.

ಅತ್ತಲಾಗಿ ವೇದಪಾರಂಗತರಾದ ಬ್ರಾಹ್ಮಣರೆಲ್ಲರೂ ಆ ರಾತ್ರಿಯನ್ನು ಬಹುಪ್ರಯಾಸದಿಂದ ಕಳೆದು, ಬೆಳಗಾದಕೂಡಲೆ ರಾಜಪುರೋಹಿತರಾದ ವಸಿಷ್ಠರನ್ನು ಮುಂದಿಟ್ಟುಕೊಂಡು ಅಭಿಷೇಕಕಾರ್ಯವನ್ನು ನಡೆಸುವುದಕ್ಕಾಗಿ ಸಭೆಸೇರಿದ್ದರು. ಮಂತ್ರಿಗಳೂ, ಸೇನಾಧಿಪತಿಗಳೂ, ಪಟ್ಟಣದ ಅಧಿಕಾರಿಗಳೂ, ಅತ್ಯುತ್ಸಾಹದಿಂದ ಒಟ್ಟುಗೂಡಿದ್ದರು. ಸೂರ್ಯನು ಸಂಪೂರ್ಣವಾಗಿ ಉದಿಸಿಬಿಟ್ಟನು. ಪುಷ್ಯನಕ್ಷತ್ರವೂ ಸೇರಿತು! ಕರ್ಕಾಟಕಲಗ್ನವು ಪ್ರಾಪ್ತವಾಗಿ, ಪ್ರಶಸ್ತವಾದ ರಾಮನ ಜನನಲಗ್ನವೇ ಸಂಧಿಸಿತು. ರಾಮಾಭಿಷೇಕಕ್ಕಾಗಿ ಬ್ರಾಹ್ಮಣರೆಲ್ಲರೂ ಬೇಕಾದ ಸನ್ನಾಹಗಳನ್ನು ಸಿದ್ಧಪಡಿಸಿಟ್ಟರು. ಮುಂದುಗಡೆಯಲ್ಲಿ ಪುಣ್ಯತೀರ್ಥಗಳಿಂದ ಶೋಭಿಸುತ್ತಿದ್ದ ಸುವರ್ಣಕುಂಭಗಳು ಇಡಲ್ಪಟ್ಟಿದ್ದುವು. ನಡುವೆ ಸುವರ್ಣಮಯವಾದ ಭದ್ರಪೀಠವು ಶೋಭಿಸುತಿತ್ತು. ಅಂದವಾದ ಹುಲಿಯ ಚರ್ಮದಿಂದ ಹೊದೆಸಲ್ಪಟ್ಟ ರಥವು ಸಿದ್ಧಪಡಿಸಲ್ಪಟ್ಟಿತ್ತು. ಗಂಗಾಯಮುನೆಗಳ ಸಂಗಮಸ್ಥಳದಿಂದ ಪುಣ್ಯತೀರ್ಥವನ್ನು ತರಿಸಿಟ್ಟರು. ಇದಲ್ಲದೆ ಲೋಕದಲ್ಲಿ ಯಾವಯಾವ ಪುಣ್ಯನದಿಗಳುಂಟೋ, ಯಾವಯಾವ ಪುಣ್ಯಸರಸ್ಸುಗಳುಂಟೋ, ಅವೆಲ್ಲವುಗಳಿಂದಲೂ ತೀರ್ಥಜಲವನ್ನು ತರಿಸಿದ್ದರು. ಇನ್ನೂ ಲೋಕದಲ್ಲಿ ಪುಣ್ಯತೀರ್ಥಗಳೆಂದು ಪ್ರಸಿದ್ಧಿಹೊಂದಿದ ವಾಪೀಕೂಪ ತಟಾಕಗಳಿಂದಲೂ, ಪೂರ್ವದಕ್ಷಿಣಪಶ್ಚಿಮೋತ್ತರವಾಹಿನಿಗಳಾದ ಸಮಸ್ತನದಿಗಳಿಂದಲೂ, ಗಿರಿನದಿಗಳಿಂದಲೂ, ಮೇಲುಮುಖವಾಗಿ ಪ್ರವಹಿಸುವ ಬ್ರಹ್ಮಾವರ್ತರುದ್ರಾವರ್ತಾದಿಸರಸ್ಸುಗಳಿಂದಲೂ, ತೀರ್ಥಗಳು ತರಿಸಿಡಲ್ಪಟ್ಟಿದ್ದುವು. ನಾಲ್ಕು ಸಮುದ್ರಗಳಿಂದಲೂ ತೀರ್ಥಗಳನ್ನು ತರಿಸಿದ್ದರು. ಬೆಳ್ಳಿ ಬಂಗಾರಗಳಿಂದ ಮಾಡಲ್ಪಟ್ಟ ಈ ಜಲಕುಂಭಗಳೆಲ್ಲವನ್ನೂ ಅರಳುಗಳಿಂದಲೂ, ಅರಳಿ, ಅತ್ತಿ, ಮುಂತಾದ ಎಲೆಗಳಿಂದಲೂ, ತಾವರೆ, ನೈದಿಲೆ, ಮೊದಲಾದ ಹೂಗಳಿಂದಲೂ ಅಲಂಕರಿಸಿಟ್ಟರು. ಜೇನು, ಮೊಸರು, ತುಪ್ಪ, ಅರಳು, ದರ್ಭೆಗಳು, ಪುಷ್ಪಗಳು, ಹಾಲು, ಮುಂತಾದ ಸಾಮಗ್ರಿಗಳೆಲ್ಲವೂ ಸಿದ್ಧಪಡಿಸಲ್ಪಟ್ಟಿದ್ದುವು. ತಮ್ಮ ಕುಲಧರ್ಮದಲ್ಲಿ ನಿರ್ದುಷ್ಟವಾಗಿ ವರ್ತಿಸುವ

ವೇಶ್ಯಾಸ್ತ್ರೀಯರು, ಸರ್ವಾಭರಣಭೂಷಿತರಾಗಿ ಬಂದು ನಿಂತಿದ್ದರು. ರಾಮನ ಅಭಿಷೇಕಕಾಲದಲ್ಲಿ ಬೀಸುವುದಕ್ಕಾಗಿ, ಚಂದ್ರಕಿರಣದಂತೆ ಬಿಳುಪಾಗಿ, ರತ್ನಖಚಿತವಾದ ಚಿನ್ನದ ಹಿಡಿಯಿಂದ ಶೋಭಿಸುವ ದಿವ್ಯಚಾಮರವೊಂದು ಸಿದ್ಧಪಡಿಸಲ್ಪಟ್ಟಿತ್ತು. ಆತನ ಅಭಿಷೇಕಕಾಲದಲ್ಲಿ ಹಿಡಿಯುವುದಕ್ಕಾಗಿ ಚಂದ್ರಬಿಂಬದಂತೆ ಶೋಭಿಸುವ ರಾಜ್ಯಚಿಹ್ನವಾದ ಶ್ವೇತಛತ್ರವನ್ನೂ ತರಿಸಿಟ್ಟರು. ಬಿಳೀಬಣ್ಣವುಳ್ಳ ಒಂದು ವೃಷಭವೂ, ಒಂದು ಬಿಳೀಕುದುರೆಯೂ, ಮೆರೆವಣಿಗೆಯ ಕಾಲದಲ್ಲಿ ರಾಮನು ಏರಿಬರುವುದಕ್ಕಾಗಿ ಮಂಗಳಕರವಾದ ಒಂದು ಮದದಾನೆಯೂ ಸಿದ್ಧಪಡಿಸಲ್ಪಟ್ಟಿತ್ತು. ಮಂಗಳಾರ್ಥವಾದ ಅಷ್ಟಕನ್ಯಕೆಯರು, ಸರ್ವಾಭರಣಭೂಷಿತರಾಗಿ ನಿಂತಿದ್ದರು. ಸಮಸ್ತವಾದ್ಯಗಳೂ ಸಿದ್ಧವಾಗಿದ್ದುವು. ವಂದಿಮಾಗಧಾದಿಗಳೆಲ್ಲರೂ ಸಿದ್ಧರಾಗಿದ್ದರು. ಹಿಂದೆ ಇಕ್ಷ್ವಾಕುರಾಜಪರಂಪರೆಯಾಗಿ ಅಭಿಷೇಕವು ನಡೆದ ಕ್ರಮವನ್ನನುಸರಿಸಿ ಸಮಸ್ತವಸ್ತುಗಳೂ ಸಿದ್ಧಪಡಿಸಲ್ಪಟ್ಟಿದ್ದುವು.ಹಾಗೆಯೇ ಉತ್ತಮಜಾತೀಯವಾದ ಸಮಸ್ತವಸ್ತುಗಳನ್ನೂ ಕೈಕಾಣಿಕೆಯಾಗಿ ತೆಗೆದುಕೊಂಡು, ಅನೇಕರಾಜರು ರಾಮಾಭಿಷೇಕಕ್ಕಾಗಿ ದಶರಥನ ಆಜ್ಞೆಯನ್ನನುಸರಿಸಿ, ಬಾಗಿಲಲ್ಲಿ ನಿಂತಿದ್ದರು. ಅವರೆಲ್ಲರೂ ತಮ್ಮೊಳಗೆ ಒಬ್ಬರಿಗೊಬ್ಬರು "ಈಗ ನಾವು ಬಂದಿರುವ ವಿಷಯವನ್ನು ದಶರಥನಿಗೆ ಯಾರು ತಿಳಿಸುವರು ? ರಾಜನೆಲ್ಲಿರುವನೋ ತಿಳಿಯಲಿಲ್ಲ ! ಸೂರ್ಯನು ಉದಿಸಿಬಿಟ್ಟನು. ರಾಮನ ರಾಜ್ಯಾಭಿಷೇಕಕ್ಕಾಗಿ ಸಮಸ್ತಸನ್ನಾಹಗಳೂ ಸಿದ್ಧವಾಗಿರುವುವು. ಹೊತ್ತು ಮೀರುತ್ತಿರುವುದು. ಈಗ ಮಾಡುವುದೇನು?" ಎಂದು ಸಂಭ್ರಮದಿಂದ ಮಾತನಾಡುತ್ತಿರುವಾಗಲೇ, ದಶರಥರಾಜನಿಗೆ ಪ್ರೀತಿಪಾತ್ರನಾದ ಸುಮಂತ್ರನು ಅಲ್ಲಿದ್ದ ರಾಜಾಧಿರಾಜರನ್ನು ನೋಡಿ "ಎಲೈ ರಾಜರೆ ! ರಾಮನನ್ನು ಕರೆತರುವಂತೆ ರಾಜಾಜ್ಞೆಯಾಗಿರುವುದು. ಅದಕ್ಕಾಗಿಯೇ ನಾನು ಹೊರಟಿರುವೆನು. ನೀವೆಲ್ಲರೂ ನಮ್ಮ ದಶರಥರಾಜನಿಗೆ ಬಹಳ ಪ್ರೀತಿಪಾತ್ರರಾಗಿಯೂ,ಪೂಜ್ಯರಾಗಿಯೂ ಇರುವಿರಿ! ಅದರಲ್ಲಿಯೂ ಮುಖ್ಯವಾಗಿ ರಾಮನಿಗೆ ನಿಮ್ಮಲ್ಲಿ ವಿಶೇಷವಾದ ಗೌರವವುಂಟು! ಆಯುಷ್ಮಂತರಾದ ನೀವು ಆತನ ಕ್ಷೇಮಲಾಭಗಳನ್ನು ವಿಚಾರಿಸಿದುದಾಗಿ ನಾನೇ ಮಹಾರಾಜನಿಗೆ ತಿಳಿಸುವೆನು. ಆದರೆ ಆತನಿಗೆ ಇನ್ನೂ ನಿದ್ರೆತಿಳಿದಿಲ್ಲ!

ಅವನು ಎಚ್ಚರಗೊಂಡೊಡನೆ ನೀವು ಇಲ್ಲಿಗೆ ಬಂದಿರುವ ವಿಷಯವನ್ನು ತಿಳಿಸು ವೆನು."ಎಂದು ಸಮಾಧಾನವನ್ನು ಹೇಳಿ,ಬಹುಕಾಲದ ಅನುಭವವುಳ್ಳವಯೋ ವೃದ್ಧನಾದ ಆಸುಮಂತ್ರನು, ಪುನಃ ಹಿಂತಿರುಗಿದನು. ತಡೆಯಿಲ್ಲದೆ ಒಳಕ್ಕೆ ಪ್ರವೇಶಿಸಿ, ದಶರಥನು ಮಲಗಿದ್ದ ಸ್ಥಳಕ್ಕೆ ಹೋಗಿ, ಇಕ್ಷ್ವಾಕುವಂಶದ ರಾಜ ರ ವೈಭವವನ್ನು ಮನಸ್ಸಿನಲ್ಲಿ ಕೊಂಡಾಡುತ್ತ, ಅಲ್ಲಿದ್ದ ತೆರೆಯ ಹೊರಗಾಗಿ ನಿಂತು, ತನ್ನ ಕುಲಧರ್ಮಕ್ಕೆ ತಕ್ಕಂತೆ ಮೊದಲು ಆತನ ಶ್ರೇಯಃಪ್ರಾರ್ಥ ನೆಯನ್ನು ಮಾಡಿ, ಮೊದಲಿನಂತೆ ಅವನನ್ನು ಸ್ತೋತ್ರಮಾಡಲಾರಂ ಭಿಸಿದನು. "ಓ ಕಕುತ್ಸ್ಥವಂಶಶಿಖಾಮಣೀ! ನಿನಗೆ ಚಂದ್ರಸೂರ್ಯ ರೂ, ರುದ್ರನೂ, ಕುಬೇರನೂ, ವರುಣನೂ, ಇಂದ್ರಾಗ್ನಿಗಳೂ ಜಯ ವನ್ನು ಕೊಡಲಿ! ಪೂಜ್ಯವಾದ ರಾತ್ರಿಯು ಕಳೆಯಿತು! ನಿನ್ನ ಅಪ್ಪಣೆ ಯಂತೆ ನಡೆಯಬೇಕಾದ ಕಾರ್ಯವೆಲ್ಲವೂ ಸಿದ್ಧವಾಗಿರುವುದು. ಎಲೈ ರಾಜ ಶ್ರೇಷ್ಠನೆ! ಏಳು! ಮೇಲಿನ ಕಾರ್ಯವನ್ನು ನಡೆಸು! ಬ್ರಾಹ್ಮಣರೂ, ಸೇನಾ ಧಿಪತಿಗಳೂ, ವರ್ತಕರೂ ಬಂದು ಬಾಗಿಲಲ್ಲಿ ನಿಂತು ನಿನ್ನ ದರ್ಶನಕ್ಕಾಗಿ ಕಾದಿರುವರು. ಎಲೈ ರಘುವಂಶೋತ್ತಮನೆ! ಏಳು!" ಎಂದನು. ಮಂತ್ರಜ್ಞ ನಾದ ಸುಮಂತ್ರನು, ಪುನಃ ಹೀಗೆ ಸ್ತೋತ್ರಮಾಡುತ್ತಿರುವುದನ್ನು ಕೇಳಿ ದಶರಥನು "ಎಲೈ ಸುಮಂತ್ರನೆ! ರಾಮನನ್ನು ಕರೆತರುವಂತೆ ಈಕೆಯು ನಿನ ಗೆ ಹೇಳಿದಳಲ್ಲವೆ? ಇನ್ನೂ ಏಕೆ ಕರೆತರಲಿಲ್ಲ? ಇದೇನು? ನನ್ನ ಆಜ್ಞೆಯನ್ನು ಇನ್ನೂ ನೀನು ನಡೆಸದೆ ಇರುವೆ? ಅವಳು ಹೇಳುವಾಗ ನಾನು ನಿದ್ರಿಸುತ್ತಿ ದ್ದೆನೆಂದು ತಿಳಿಯಬೇಡ! ಅವಳು ಹೇಳಿದುದನ್ನು ನಾನು ನಿಷೇಧಿಸದೇ ಇದ್ದಾ ಗಲೇ ಅದಕ್ಕೆ ನಾನೂ ಅನುಮತಿಸಿದೆನೆಂದು ನೀನು ತಿಳಿಯಬೇಡವೆ? ಚಿಂತೆಯಿಲ್ಲ. ಈಗಲೂ ಹೋಗಿ ರಾಮನನ್ನು ಕರೆದುಕೊಂಡು ಬಾ!" ಎಂ ದು ಆ ಸಾರಥಿಗೆ ಅಪ್ಪಣೆಮಾಡಿದನು. ಸುಮಂತ್ರನು ಆ ರಾಜಾಜ್ಞೆಯನ್ನು ಶಿರಸಾವಹಿಸಿ, ಮಿತಿಮೀರಿದ ಸಂತೋಷದಿಂದ ಆತನನ್ನು ಗೌರವಿಸಿ, ಆಸ್ಥಳವನ್ನು ಬಿಟ್ಟು ಹೊರಟುಬರುತಿದ್ದನು.ಅಷ್ಟರಲ್ಲಿ ಬೀದಿಗಳೆಲ್ಲವೂ ಧ್ವ ಜಪತಾಕೆಗಳಿಂದ ಅಲಂಕರಿಸಲ್ಪಟ್ಟಿದ್ದುದನ್ನು ಕಂಡು, ಸಂತೋಷದಿಂದ ಅವನ ಮೈಯ್ಯಲ್ಲಿ ರೋಮಾಂಚಗಳುಂಟಾದುವು! ವೇಗದಿಂದ ಮುಂದೆ

ನಡೆಯುತಿದ್ದನು. ದಾರಿಯಲ್ಲಿ ಪ್ರತಿಯೊಬ್ಬರೂ ರಾಮನ ಗುಣಗಳನ್ನೂ, ಆತನ ಅಭಿಷೇಕದ ಸಂಭ್ರಮಗಳನ್ನೂ ಹೇಳಿ ಕೊಂಡಾಡುತಿದ್ದರು. ಅವೆಲ್ಲವನ್ನೂ ಕೇಳಿದಾಗ, ಆತನ ಸಂತೋಷಕ್ಕೆ ಪಾರವೇ ಇರಲಿಲ್ಲ. ಈ ಕೊಂಡಾಟಗಳನ್ನು ಕೇಳುತ್ತ ಹೊರಟು, ಕೈಲಾಸಶಿಖರದಂತೆ ಮನೋಹರವಾದ ರಾಮನ ಅರಮನೆಯ ಬಾಗಿಲನ್ನು ಸೇರಿದನು. ಅದು ಇಂದ್ರಭವನದಂತೆ ಕಾಂತಿಯುಕ್ತವಾಗಿ, ದೊಡ್ಡಕದಗಳಿಂದಲೂ, ನೂರಾರು ಜಗುಲಿಗಳಿಂದಲೂ, ಅನೇಕ ಸುವರ್ಣಪ್ರತಿಮೆಗಳಿಂದಲೂ ಶೋಭಿಸುತಿತ್ತು. ರತ್ನಗಳಿಂದಲೂ, ಹವಳಗಳಿಂದಲೂ ಕೆತ್ತಲ್ಪಟ್ಟ ಹೊರಬಾಗಿಲುಗಳುಳ್ಳದಾಗಿ, ಶರತ್ಕಾಲದ ಮೇಘಗಳಂತೆ ಶುಭ್ರವರ್ಣವಾಗಿ ಪ್ರಕಾಶಿಸುತಿತ್ತು. ಕೇವಲ ಸುವರ್ಣಮಯವಾದುದರಿಂದ ಮೇರುಪರ್ವತದ ಗುಹೆಯಂತೆ ರಂಜಿಸುತಿತ್ತು. ಅಲ್ಲಲ್ಲಿ ಸುವರ್ಣಪುಷ್ಪದ ಮಾಲಿಕೆಗಳನ್ನು ಮಾಡಿ ನಡುನಡುವೆ ರತ್ನಗಳನ್ನು ಸೇರಿಸಿ ಕಟ್ಟಿದ್ದರು. ಮುತ್ತು ಮೊದಲಾದ ರತ್ನರಾಶಿಗಳನ್ನು ಅಲ್ಲಲ್ಲಿಟ್ಟು ಅಲಂಕರಿಸಿದ್ದರು. ಆ ಪ್ರದೇಶವೆಲ್ಲವೂ ಅಗರುಧೂಪಗಳಿಂದ ಸುವಾಸಿತವಾಗಿ, ಘುಮಘುಮಿಸುತಿತ್ತು. ಮಲಯಪರ್ವತದ ಸಮೀಪದಲ್ಲಿ, ಚಂದನವೃಕ್ಷಗಳಿಗೆ ಜನ್ಮಸ್ಥಾನವಾದ ದರ್ದರವೆಂಬ ಬೆಟ್ಟದ ಶಿಖರದಂತೆ, ಅದರ ನಾನಾಕಡೆಗಳಿಂದಲೂ ಸುವಾಸನೆಯು ಹೊರಡುತಿತ್ತು. ಅಲ್ಲಲ್ಲಿ ಸಾರಸಪಕ್ಷಿಗಳೂ, ನವಿಲುಗಳೂ ಇಂಪಾದ ಧ್ವನಿಯನ್ನು ಮಾಡುತಿದ್ದುವು. ಗೋಡೆಗಳಲ್ಲಿಯೂ, ಕಂಬಗಳಲ್ಲಿಯೂ, ಅಂದವಾದ ತೋಳಗಳ ಆಕೃತಿಯು ರಚಿಸಲ್ಪಟ್ಟಿತ್ತು. ಚತುರರಾದ ಶಿಲ್ಪಿಗಳಿಂದ ಕೆತ್ತಲ್ಪಟ್ಟ ಅನೇಕಚಿತ್ರಕಾರ್ಯಗಳು ಅಲ್ಲಲ್ಲಿ ಶೋಭಿಸುತಿದ್ದುವು. ತನ್ನ ತೀವ್ರವಾದ ತೇಜಸ್ಸಿನಿಂದ ಚಂದ್ರಸೂರ್ಯರಂತೆ ಪ್ರಕಾಶಿಸುತ್ತಾ, ನೋಡುವವರ ಕಣ್ಣುಗಳನ್ನೂ, ಮನಸ್ಸನ್ನೂ ತನ್ನ ಕಡೆಗಾಗರ್ಷಿಸಿ, ಕುಬೇರಭವನದಂತೆ ಅತ್ಯಂತಮನೋಹರವಾಗಿಯೂ, ಇಂದ್ರನ ಅರಮನೆಯಂತೆ ಕಾಂತಿವಿಶಿಷ್ಟವಾಗಿಯೂ, ಮೇರುಪರ್ವತದ ಶಿಖರದಂತೆ ಮಹೋನ್ನತವಾಗಿಯೂ, ಬಗೆಬಗೆಯ ಪಕ್ಷಿಸಮೂಹಗಳಿಂದ ಅತಿಮನೋಹರವಾಗಿಯೂ ಇದ್ದ ಆ ಅರಮನೆಯ ಬಾಗಿಲಲ್ಲಿ, ಅನೇಕಪ್ರಜೆಗಳು ಗುಂಪುಗೂಡಿ ವಿನಯದಿಂದ ಕೈಮುಗಿದು ನಿಂತಿದ್ದರು. ಅಲ್ಲಲ್ಲಿ ಕೆಲವರು ದೇಶ

ದೇಶದಿಂದ ತಂದ ಕೈಕಾಣಿಕೆಯನ್ನು ಹಿಡಿದು ನಿಂತಿದ್ದರು. ಜನರೆಲ್ಲರೂ ಅತ್ಯುತ್ಸಾಹದಿಂದ ರಾಮಾಭಿಷೇಕವನ್ನೇ ಇದಿರುನೋಡುತ್ತಾ, ಬಾಗಿಲಲ್ಲಿ ಕಿಕ್ಕಿರಿಸಿ ತುಂಬಿದ್ದರು. ಹೀಗೆ ಜನಭರಿತವಾಗಿ, ಮಹಾಮೇಘದಂತೆ ಗಂಭೀರವಾಗಿ, ಅತ್ಯುನ್ನತವಾಗಿ, ನಾನಾವಿಧರತ್ನಗಳಿಂದಲಂಕರಿಸಲ್ಪಟ್ಟು, ಗುಜ್ಜಾರಿಗಳೇ ಮೊದಲಾದ ಅಂತಃಪುರಸೇವಕರಿಂದಲೂ, ಅಲ್ಪಶರೀರವುಳ್ಳ ಕಿರಾತಜಾತಿಜನರಿಂದಲೂ ತುಂಬಿದ ಆ ಅರಮನೆಯ ಅಂದವನ್ನು ಸುಮಂತ್ರನು ಎವೆಮುಚ್ಚದೆ ನೋಡುತಿದ್ದನು. ಪ್ರಶಸ್ತವಾದ ಕುದುರೆಗಳಿಂದಲೂ ವಿಚಿತ್ರವಾದಮೇಲುಹೊದ್ದಿಕೆಯಿಂದಲೂ ಕೂಡಿದ ತನ್ನ ರಥವನ್ನು ಮುಂದಕ್ಕೆ ನಡೆಸಿಕೊಂಡು ಆ ಅರಮನೆಗೆ ಅಭಿಮುಖವಾಗಿ ಬಂದನು. ಅಲ್ಲಿದ್ದ ಸಮಸ್ತ ಜನರೂ ಈತನನ್ನು ಅತ್ಯಾಹ್ಲಾದದಿಂದ ನೋಡುತಿದ್ದರು. ಅತಿಸಂಭ್ರಮದಿಂದ ಅಲ್ಲಲ್ಲಿ ಸಂಚರಿಸುತ್ತಿರುವ ಜನಸಮೂಹದಿಂದಲೂ, ಸಾಕಿದ ಮೃಗಗಳಿಂದಲೂ, ನವಿಲುಗಳಿಂದಲೂ ಕೂಡಿ, ಇಂದ್ರಭವನದಂತೆ ಸಂಪತ್ಸಮೃದ್ಧವಾದ ಆ ಅರಮನೆಯನ್ನು ಪ್ರವೇಶಿಸುವಾಗ ಪರಮಸಂತೋಷದಿಂದ ಆ ಸುಮಂತ್ರನ ಮೈಯಲ್ಲಿ ರೋಮಾಂಚವುಂಟಾಯಿತು. ಹಾಗೆಯೇ ಆತನು ಹೊರಬಾಗಿಲನ್ನು ದಾಟಿ, ಕೈಲಾಸಪರ್ವತದಂತೆ ವಿಶಾಲವಾಗಿಯೂ, ಸರ್ವಾಲಂಕಾರ ಭೂಷಿತಗಳಾಗಿಯೂ ಇದ್ದ ಆ ಮನೆಯ ಮೂರುತೊಟ್ಟಿಗಳನ್ನೂ ಕಳೆದು, ಅಲ್ಲಲ್ಲಿ ಅಭಿಷೇಕಕಾಲವನ್ನು ಅತ್ಯಾತುರದಿಂದ ಇದಿರುನೋಡುತ್ತಾ ಗುಂಪುಗೂಡಿದ್ದ ಜನಗಳನ್ನು ಒತ್ತರಿಸಿಕೊಂಡು, ರಾಮನ ಅಂತಃಪುರದ ಸಮೀಪವನ್ನು ಸೇರಿದನು. ಅಲ್ಲಿಯೂ ಅನೇಕಜನರು ರಾಮನ ಪಟ್ಟಾಭಿಷೇಕದ ವಿಷಯಗಳನ್ನೇ ಸಂತೋಷದಿಂದ ಕೊಂಡಾಡುತಿದ್ದರು. ಎಲ್ಲರ ಬಾಯಿಂದಲೂ ಈ ಮಂಗಳಕಾರ್ಯದ ವಿಚಾರಗಳೇ ಹೊರಡುತಿದ್ದುವು. ಇವೆಲ್ಲವನ್ನೂ ಸುಮಂತ್ರನು ಸಂತೋಷದಿಂದ ಕೇಳುತ್ತಾ ಇಂದ್ರಭವನದಂತೆ ನೇತ್ರಾನಂದಕರವಾಗಿ, ಮೃಗಪಕ್ಷಿಗಳ ಇಂಪಾದ ಧ್ವನಿಯಿಂದ ಕರ್ಣಾಹ್ಲಾದಕವಾಗಿ, ಮೇರುಪರ್ವತದ ಶಿಖರದಂತೆ ಮಹೋನ್ನತವಾಗಿ, ನೋಡುವವರ ಕಣ್ಣುಗಳು ಕೋರೈಸುವಂತೆ ದಿವ್ಯತೇಜಸ್ಸುಳ್ಳುದಾಗಿರುವ ಆ ಅಂತಃಪುರದ ಅಂದವನ್ನು ಎಡೆಬಿಡದೆ ನೋಡುತಿದ್ದನು. ದೇಶ

ವಾಸಿಗಳೆಲ್ಲರೂ ಕೈಕಾಣಿಕೆಗಳೊಡನೆ ಬದ್ಧಾಂಜಲಿಗಳಾಗಿ ನಿಂತಿದ್ದರು. ಈ ಜನರು ಏರಿಬಂದ ರಥತುರಗಾದಿವಾಹನಗಳೆಲ್ಲವೂ ಕೋಟಿಕೋಟಿಸಂಖ್ಯೆಗಳಿಂದ ದ್ವಾರದೇಶದಲ್ಲಿ ಸಾಲಾಗಿ ನಿಲ್ಲಿಸಲ್ಪಟ್ಟಿದ್ದುವು. ಮುಂಭಾಗದಲ್ಲಿ ಮಹಾಮೇಘದಂತೆಯೂ, ದೊಡ್ಡಪರ್ವತದಂತೆಯೂ ಅತ್ಯುನ್ನತವಾಗಿ, ಅಂಕುಶಕ್ಕೂ ಅಡಗದ ಮಹಾಮದವುಳ್ಳುದಾಗಿ, ಇತರರಿಂದ ತಡೆಯಲಸಾಧ್ಯವಾದ ಮಹಾಬಲವುಳ್ಳುದಾಗಿ, ಮನೋಹರವಾದ ಆಕಾರವುಳ್ಳ "ಶತ್ರುಂಜಯ" ವೆಂಬ ರಾಮನ ಪಟ್ಟದಾನೆಯೂ ನಿಲ್ಲಿಸಲ್ಪಟ್ಟಿತ್ತು. ಅಲ್ಲಲ್ಲಿ ರಾಮನಿಗೆ ಪ್ರೀತಿಪಾತ್ರರಾದ ಮಂತ್ರಿಶ್ರೇಷ್ಠರೆಲ್ಲರೂ ಚೆನ್ನಾಗಿ ಅಲಂಕರಿಸಿಕೊಂಡು ರಥ,ಗಜ, ತುರಗಾದಿವಾಹನಗಳೊಡನೆ ಗುಂಪಾಗಿ ಸೇರಿ ನಿಂತಿದ್ದರು. ಇವೆಲ್ಲವನ್ನೂ ನೋಡುತ್ತಾ ಸುಮಂತ್ರನು, ಅಲ್ಲಲ್ಲಿದ್ದ ಜನರನ್ನು ಬಹುಪ್ರಯಾಸದಿಂದೊತ್ತರಿಸಿಕೊಂಡು, ಸಕಲಸಂಪತ್ಸಮೃದ್ಧವಾಗಿ, ದಿವ್ಯವಿಮಾನಗಳಿಂದ ಕೂಡಿದ ಅನೇಕಗೃಹಗಳುಳ್ಳುದಾಗಿ, ಪರ್ವತಶಿಖರದಂತೆ ಕಾಣಿಸುತಿದ್ದ ಆ ಅಂತಃಪುರದಬಾಗಿಲಿಗೆ ಬಂದನು. ಅನೇಕರತ್ನಸಮೂಹಗಳಿಂದ ಕೂಡಿದ ಸಮುದ್ರವನ್ನು ಪ್ರವೇಶಿಸುವ ಮಹಾಮಕರದಂತೆ ಅದರೊಳಗೆ ಪ್ರವೇಶಿಸಿದನು. ಇಲ್ಲಿಗೆ ಹದಿನೈದನೆಯ ಸರ್ಗವು.

---

## ಸುಮಂತ್ರನು ರಾಮನನ್ನು ಕರೆತಂದು ಕೈಕೇಯೀ ದಶರಥರ ಬಳಿಯಲ್ಲಿ ಬಿಟ್ಟುದು.

ಪೂರ್ವಸಂಪ್ರದಾಯಗಳೆಲ್ಲವನ್ನೂ ಚೆನ್ನಾಗಿ ಬಲ್ಲ ಆ ಸುಮಂತ್ರನು, ಅಭಿಷೇಕದರ್ಶನಾರ್ಥವಾಗಿ ಬಾಗಿಲಲ್ಲಿ ನೆರೆದಿದ್ದ ಜನರನ್ನು ಒತ್ತರಿಸಿಕೊಂಡು, ರಾಮನ ಅಂತಃಪುರದ್ವಾರವನ್ನು ದಾಟಿ, ವಿಶೇಷವಾಗಿ ಜನರ ಗುಂಪಿಲ್ಲದ ಎರಡನೆಯ ತೊಟ್ಟಿಯನ್ನು ಸೇರಿದಾಗ, ಅಲ್ಲಿ ನಡುಪ್ರಾಯದ ಕೆಲವು ವೀರಪುರುಷರು, ಕತ್ತಿ, ಬಿಲ್ಲು ಮುಂತಾದ ಆಯುಧಗಳನ್ನು ಹಿಡಿದು,ಥಳಥಳಿಸುತ್ತಿರುವ ದಿವ್ಯಕುಂಡಲಗಳನ್ನಿಟ್ಟು, ಬಹುಜಾಗರೂಕತೆಯಿಂದ ಸಿದ್ಧರಾಗಿ ನಿಂತಿದ್ದರು. ಅವರ ಕಾರ್ಯಶ್ರದ್ಧೆಯನ್ನು ನೋಡುವಾಗಲೇ, ಅವರಿಗೆ ರಾಮನಲ್ಲಿರುವ ರಾಜಭಕ್ತಿಯು ಚೆನ್ನಾಗಿ ಸ್ಪಷ್ಟವಾಗುತಿತ್ತು. ಮತ್ತು

*ಅಲ್ಲಿ, ಕಾವಿಬಟ್ಟೆಯನ್ನುಟ್ಟು, ದೇಹವನ್ನು ಚೆನ್ನಾಗಿ ಅಲಂಕರಿಸಿಕೊಂಡು, ಕೈಯಲ್ಲಿ ಕಟ್ಟೆಗೆಯನ್ನು ಹಿಡಿದು, ಮುದುಕರಾದ ಕೆಲವು ಅಂತಃಪುರಾಧಿಕಾರಿಗಳು, ಬಹಳ ಎಚ್ಚರಿಕೆಯಿಂದ ಬಾಗಿಲಲ್ಲಿ ನಿಂತಿದ್ದರು. ಸುಮಂತ್ರನು ಈ ಜನರ ಸಂಭ್ರಮಗಳನ್ನು ನೋಡುತ್ತ, ಆ ಸ್ಥಳವನ್ನು ಪ್ರವೇಶಿಸಿದೊಡನೆಯೇ, ಅಲ್ಲಿದ್ದ ಸೇವಕರೆಲ್ಲರೂ ಥಟ್ಟನೆ ತಮ್ಮತಮ್ಮ ಆಸನಗಳನ್ನು ಬಿಟ್ಟು ಎದ್ದುನಿಂತು ಗೌರವಿಸಿದರು. ಆಗ ಅವರನ್ನು ನೋಡಿ ಸುಮಂತ್ರನು, ಬಹಳ ನಮ್ರಭಾವದೊಡನೆ "ಎಲೈ ದ್ವಾರಪಾಲಕರೆ! ಸುಮಂತ್ರನು ಬಂದು ಬಾಗಿಲಲ್ಲಿರುವನೆಂದು ಈಗಲೇ ಹೋಗಿ ರಾಮನಿಗೆ ತಿಳಿಸಿರಿ" ಎಂದನು.

---

* ಇಲ್ಲಿ "ತತ್ರ ಕಾಷಾಯಿಣೋ ವೃದ್ಧಾನ್ ವೇತ್ರಪಾಣೀನ್ ಸ್ವಲಂಕೃತಾನ್ । ದದರ್ಶ ನಿಷ್ಠಿತಾನ್ ದ್ವಾರಿ ಸ್ತ್ರ್ಯಧ್ಯಕ್ಷಾನ್ ಸುಸಮಾಹಿತಾನ್॥" ಎಂಬುದೇ ಮೂಲಶ್ಲೋಕವು. (ಕಾಷಾಯಿಣಃ) ಕಾವೀಬಣ್ಣದ ಅಂಗಿಯನ್ನು ಧರಿಸಿದವರು. ರಾಮನ ಪ್ರೀತ್ಯರ್ಥವಾಗಿ ವಿಚಿತ್ರಾಲಂಕಾರವನ್ನು ಧರಿಸಿದವರೆಂದು ಭಾವವು. (ವೃದ್ಧಾನ್) ತೊಂಬತ್ತೈದುವಯಸ್ಸುಳ್ಳ ಮುದುಕರನ್ನೇ ಅಂತಃಪುರಾಧಿಕಾರದಲ್ಲಿರಿಸುವ ಸಂಪ್ರದಾಯವಾದುದರಿಂದ, ಅಲ್ಲಿದ್ದವರೆಲ್ಲರೂ ಹಣ್ಣುಮುದುಕರಾಗಿದ್ದರೆಂದರ್ಥವು. (ವೇತ್ರಪಾಣೀನ್) ಬೆತ್ತವನ್ನು ಹಿಡಿದವರು. ಮಹಾಧನುಸ್ಸನ್ನು ಧರಿಸಿ ತ್ರೈಲೋಕ್ಯವನ್ನೂ ರಕ್ಷಿಸುತ್ತಿರುವ ಶ್ರೀರಾಮನನ್ನೇ, ಇವರು ವೇತ್ರಧಾರಿಗಳಾಗಿ ರಕ್ಷಿಸುತ್ತಿರುವರೆಂಬ ವಿಚಿತ್ರವಾದ ಮಹಿಮೆಯುಳ್ಳವರೆಂದು ಭಾವವು. (ಸ್ವಲಂಕೃತಾನ್; "ಸು + ಅಲಂಕೃತಾನ್" ಚೆನ್ನಾಗಿ ಅಲಂಕರಿಸಲ್ಪಟ್ಟವರೆಂದರೆ, ಚಕ್ರವರ್ತಿಕುಮಾರನಾದ ರಾಮನು ಅರಮನೆಯಲ್ಲಿ ಸುಖವಾಗಿ ಸ್ನಾನಭೋಜನಾದಿಗಳನ್ನು ಮಾಡಿಕೊಂಡು, ತನ್ನ ದಿವ್ಯಾಂತಃಪುರವನ್ನು ಪ್ರವೇಶಿಸುವಾಗ, ಈ ಅಂತಃಪುರಾಧಿಕಾರಿಗಳೂಕೂಡ ದಶರಥನಂತೆಯೇ ರಾಮನಲ್ಲಿ ಬಹಳ ಸಲಿಗೆಯುಳ್ಳವರಾಗಿಯೂ, ಅವನಿಗೆ ಅಂತರಂಗಭೂತರಾಗಿಯೂ ಇರುವುದರಿಂದ, ಈತನನ್ನು ಅಪ್ಪಿಕೊಂಡು, ತೊಡೆಯಮೇಲಿಟ್ಟು ಲಾಲಿಸಿ ಕಳುಹಿಸುವುದುಂಟು. ಅದಕ್ಕಾಗಿ ಕಸ್ತೂರಿ, ಕುಂಕುಮಕೇಸರಿ, ಮೊದಲಾದ ಸುವಾಸನಾದ್ರವ್ಯಗಳಿಂದ ಯಾವಾಗಲೂ ತಮ್ಮ ದೇಹವನ್ನು ಅಲಂಕರಿಸಿಕೊಳ್ಳುತಿದ್ದರೆಂದು ಭಾವವು. ಮತ್ತು (ಸ್ವಲಂಕೃತಾನ್) ಪಟ್ಟಾಭಿಷಿಕ್ತರಾಗುವ ಸೀತಾರಾಮರ ಅಲಂಕಾರಕ್ಕಿಂತಲೂ, ಆರಾಮಾಭಿಷೇಕದಲ್ಲಿ ತಮಗುಂಟಾದ ಉತ್ಸಾಹಕ್ಕಾಗಿ ಅಲ್ಲಿನ ಸೇವಕರು ಮಾಡಿಕೊಂಡಿದ್ದ ಅಲಂಕಾರವು ಮತ್ತಷ್ಟು ಅತಿಶಯಿತವಾಗಿತ್ತೆಂದು ಸೂಚಿತವಾಗುವುದು.

ರಾಮನ ಅಭ್ಯುದಯಕಾಲವನ್ನು ಅತ್ಯಾತುರದಿಂದ ನಿರೀಕ್ಷಿಸುತ್ತಿದ್ದ ಆ ಸೇವಕರು, ಆಗ ಸೀತೆಯೊಡನೆ ಸುಖಸಲ್ಲಾಪದಿಂದಿರುತಿದ್ದ ರಾಮನಬಳಿಗೆ ಬಂದು, ಈ ವಿಷಯವನ್ನು ಅರಿಕೆಮಾಡಿದರು. ಸುಮಂತ್ರನು ತನ್ನ ತಂದೆಗೆ ಪರಮಾಪ್ತನೆಂಬುದನ್ನು ರಾಮನು ಚೆನ್ನಾಗಿ ಬಲ್ಲನಾದುದರಿಂದ, ತಾನು ಸೀತಾಸಮೇತನಾಗಿ ಕುಳಿತಿದ್ದ *ಅಂತರಂಗಸ್ಥಳಕ್ಕೇ ಅವನನ್ನು ಬರಮಾಡಿಕೊಂಡನು. †ಅಲ್ಲಿ ರಾಮನು ಸರ್ವಾಲಂಕಾರಭೂಷಿತನಾಗಿ ಅಂದವಾದ ಮೇಲು

---

* ಅಷ್ಟು ಅಂತರಂಗಸ್ಥಲಕ್ಕೆ ಕರೆಸಿಕೊಂಡುದರಿಂದಲೇ, ರಾಮನು ಸುಮಂತ್ರನನ್ನು ತನಗೆ ಬಹಳ ಅಂತರಂಗಭೂತನೆಂದು ತಿಳಿಸಿಕೊಂಡಂತಾಯಿತು. ತಾನು ಹೀಗೆ ಸುಮಂತ್ರನನ್ನು ಗೌರವಿಸಿದುದು ತಂದೆಗೆ ತಿಳಿದರೆ, ಅವನು ಸಂತೋಷಿಸುವನೆಂಬುದೇ ರಾಮನ ಅಭಿಪ್ರಾಯವು.

† ತಂ ವೈಶ್ರವಣಸಂಕಾಶಮುಪವಿಷ್ಟಂ ಸ್ವಲಂಕೃತಂ । ದದರ್ಶ ಸೂತಃ ಪರ್ಯಂಕೇ ಸೌವರ್ಣೇ ಸೋತ್ತರಚ್ಛದೇ ॥ ವರಾಹರುಧಿರಾಭೇಣ ಶುಚಿನಾ ಚ ಸುಗಂಧಿನಾ। ಅನುಲಿಪ್ತಂ ಪರಾರ್ಧ್ಯೇನ ಚಂದನೇನ ಪರಂತಪಂ॥ ಸ್ಥಿತಯಾ ಪಾರ್ಶ್ವತಶ್ಚಾಪಿ ವಾಲವ್ಯಜನಹಸ್ತಯಾ । ಉಪೇತಂ ಸೀತಯಾ ಭೂಯಶ್ಚಿತ್ರಯಾ ಶಶಿನಂ ಯಥಾ॥" ಎಂದು ಇಲ್ಲಿ ಮೂಲಶ್ಲೋಕವು. (ವೈಶ್ರವಣಸಂಕಾಶಂ) ಕುಬೇರನಿಗೆ ಸಮಾನನಾದವನು. ''ವೈಶ್ರವಣೋ ದದಾತು" ಎಂಬ ಶ್ರುತಿಯಂತೆ ಮಹಾದಾತನೆನಿಸಿಕೊಂಡ ವೈಶ್ರವಣನ ಹಾಗೆ ಈರಾಮನೂ ದಾತೃವೆಂದು ಭಾವವು.ಅರ್ಥಾರ್ಥಿಗಳಲ್ಲದ ವಿರಕ್ತರಿಗೂಕೂಡ, ತನ್ನ ಸೌಂದರ್ಯಾತಿಶಯದ ಸರ್ವಸ್ವಾನುಭವವನ್ನೂ ಕೊಟ್ಟು ಆನಂದಪಡಿಸುವವನೆಂದು ಗ್ರಾಹ್ಯವು (ಸೌವರ್ಣೇ) ಸುವರ್ಣಮಯವಾದ,ತನಗೆ ಆಧೇಯವಾದ ವಸ್ತುವಿಗೆ (ರಾಮನಿಗೆ) ಅನುರೂಪವಾದುದೆಂದು ಭಾವವು. (ಸೋತ್ತರಚ್ಛದೇ) ಸುಕುಮಾರಾಂಗನಾದ ರಾಮನ ಮೈಗೆ ಅನುಗುಣವಾಗಿರುವಂತೆ ಮೃದುವಾದ ಮೇಲುಹೊದ್ದಿಕೆಯುಳ್ಳುದೆಂದರ್ಥವು ಇಂತಹ (ಪರ್ಯಂಕೇ) ಮಂಚದಲ್ಲಿ, ಆ ರಾಮನ ಮಹೈಶ್ವರ್ಯಕ್ಕೆ ಅನುರೂಪವಾಗಿಯೂ, ಅಪೂರ್ವರಚನೆಯುಳ್ಳ ಪ್ರತಿಮಾವಿಶೇಷಗಳಿಂದ ಕೂಡಿದುವಾಗಿಯೂ ಇರುವುದೆಂದು ಭಾವವು. ಆದುದರಿಂದಲೇ ''ಪರ್ಯಂಕಮಗ್ರ್ಯಾಸ್ತರಣಂ ನಾನಾರತ್ನವಿಭೂಷಿತಂ । ತಮಪೀಚ್ಛತಿ ವೈದೇಹೀ ಪ್ರತಿಷ್ಠಾಪಯಿತುಂ ತ್ವಯಿ" ಸರ್ವೋತ್ತಮವಾದ ಹಾಸಿಗೆಯೊಡಗೂಡಿ, ನಾನಾರತ್ನಗಳಿಂದ ಕೆತ್ತಲ್ಪಟ್ಟ ಆ ಮಂಚವನ್ನೂ ಕೂಡ ಸೀತೆಯು ನಿನಗೆ ಕೊಡಬೇಕೆಂದಿರುವಳು" ಎಂದು ಮುಂದೆ ಇದೇ ಸುಯಜ್ಞನಲ್ಲಿಡಲ್ಪಡುವುದು.

ಹೊದ್ದಿಕೆಯುಳ್ಳ ಚಿನ್ನದ ಮಂಚದಮೇಲೆ ಕುಬೇರನಂತೆ ಕುಳಿತಿದ್ದನು. ಹಂದಿಯ ಮಾಂಸದಂತೆ ಕೆಂಪಾಗಿ, ಬಹಳಸುವಾಸನೆಯುಳ್ಳ ಗಂಧವನ್ನು

---

(ಉಪವಿಷ್ಟಂ)ಉಪಾಸನಾಪೂರ್ವಕವಾಗಿ ಕುಳಿತಿರುವವನು.ಎಂದರೆ,''ಸಹಪತ್ನ್ಯಾವಿಶಾಲಾಕ್ಷ್ಯಾ ನಾರಾಯಣಮುಪಾಗಮತ್'' ಎಂದು ಹೇಳಲ್ಪಟ್ಟಿರುವಂತೆ, ಭಗವದ್ಧ್ಯಾನಪರನಾಗಿರುವವನೆಂದರ್ಥವು. (ಸ್ವಲಂಕೃತಂ) ಧ್ಯಾನಾನುಕೂಲವಾದ ಅಂಜಲಿಯಿಂದ ಅಲಂಕರಿಸಲ್ಪಟ್ಟವನು. ಅಥವಾ ದಿವ್ಯಮಾಲ್ಯಾಲಂಕೃತನಾಗಿರುವನೆಂದೂ ಹೇಳಬಹುದು. ಇಂತಹ ರಾಮನನ್ನು (ಸೂತೋ ದದರ್ಶ) ಕೇವಲಸೂತಜಾತಿಯವನೊಬ್ಬನು ಕಂಡನು. ಉತ್ತಮೋತ್ತಮನೆನಿಸಿಕೊಂಡ ಪರಸ್ವರೂಪನಾದ ರಾಮನು, ಅತಿನಿಕೃಷ್ಟರಲ್ಲಿ ಸೇರಿದ ಸೂತನೊಬ್ಬನಿಗೆ ದರ್ಶನವನ್ನು ಕೊಟ್ಟನೆಂದು ಭಗವಂತನ ಸೌಲಭ್ಯವೂ, ಸುಮಂತ್ರನ ಭಾಗ್ಯಾತಿಶಯವೂ ವ್ಯಂಜಿತವಾಗುವುದು. ಭೋಗ್ಯವಸ್ತುಗಳಲ್ಲಿ ಪ್ರಧಾನಗಳಾದ ಸ್ರಕ್ಚಂದನವನಿತಾದಿಗಳ (ಹಾರ,ಚಂದನ, ಸ್ತ್ರೀಯರು ಮೊದಲಾದುವುಗಳ) ಯೋಗವನ್ನು ರಾಮನಿಗೆ ಹೇಳಲಾರಂಭಿಸಿ, ಅವುಗಳಲ್ಲಿ ಮೊದಲು (ಸ್ವಲಂಕೃತಂ) ಎಂಬುದರಿಂದ ದಿವ್ಯಮಾಲಾಯೋಗವನ್ನು ಹೇಳಿ, ಇನ್ನುಮೇಲೆ, ದಿವ್ಯಚಂದನವನ್ನು ವರ್ಣಿಸುವರು. (ವರಾಹರುಧಿರಾಭೇಣ ಚಂದನೇನ)ಹಂದಿಯ ರಕ್ತವು ಬಹಳ ಕೆಂಪುಬಣ್ಣವುಳ್ಳುದೆಂದು ಪ್ರಸಿದ್ಧಿಯುಂಟು. ಮೊದಲೇ ರಕ್ತಚಂದನವೆನಿಸಿಕೊಂಡಿದ್ದು, ಕುಂಕುಮಕೇಸರಿಯ ಸಂಯೋಗದಿಂದ ಮತ್ತಷ್ಟು ಕೆಂಪಾಗಿಸಲ್ಪಟ್ಟು, ಅದರಮೇಲೆ ಸೀತಾದೇವಿಯ ಕೈಯಿಂದ ಲೇಪಿಸಲ್ಪಟ್ಟು, ಆ ಹಸ್ತಕಮಲದ ಕಾಂತಿಯಿಂದ ಮತ್ತಷ್ಟು ಕೆಂಪಾಗಿರುವುದೆಂದು ಗಮ್ಯಾರ್ಥವು. (ಶುಚಿನಾಚ) ಸೀತಾಕರಸ್ಪರ್ಶದಿಂದ ಪವಿತ್ರವಾದುದು. ಇಲ್ಲಿ (ಚ) ಎಂಬ ಸಮುಚ್ಚಯದಿಂದ ಆ ಕರಸ್ಪರ್ಶಸಂಜನಿತವಾದ ಶೈತ್ಯಾತಿಶಯವೂ ವ್ಯಂಜಿತವಾಗುವುದು. (ಸುಗಂಧಿನಾ) ''ಸರ್ವಗಂಧಃ''ಎಂಬಂತೆ ಸಮಸ್ತಪರಿಮಳವನ್ನೂ ಹೊಂದಿರುವುದು ಶ್ರೀದೇವಿಗೂಸಮಾನಗುಣವಾದುದರಿಂದೆ,ಶ್ರೀರೂಪಳಾದ ಸೀತಾದೇವಿಯ ಕರಸ್ಪರ್ಶದಿಂದ ಮಿತಿಮೀರಿದ ವಾಸನೆಯನ್ನು ಹೊರಡಿಸುವುದೆಂದು ಭಾವವು. (ಪರಾರ್ಧ್ಯೇನ)ಸಾಕ್ಷಾಲಕ್ಷ್ಮೀಸ್ವರೂಪಳಾದ ಸೀತೆಯ ಕರಸಂಬಂಧದಿಂದ ಬರತಕ್ಕ ಚಂದನವು, ಸಾಕ್ಷಾತ್ಪರಸ್ವರೂಪನಾದ ರಾಮನೊಬ್ಬನಿಗೇ ಸಲ್ಲತಕ್ಕುದೆಂದೂ ಭಾವವು. (ಚಂದನೇನ, ಅನುಲಿಪ್ತಃ) ''ಚಂದನದಿಂದ (ಅನು) ಆಮೇಲೆ, ಲೇಪಿಸಲ್ಪಟ್ಟವನು'' ಎಂದರೆ, ರಾಮನು ಮೊದಲು ಸೀತೆಗೆ ಗಂಧವನ್ನು ಪೂಸಿ, ಅಮೇಲೆ ಅವಳ ಕೈಯಿಂದ ತಾನೂ ಲೇಪಿಸಲ್ಪಟ್ಟನೆಂಬ ಕ್ರಮವು ಸೂಚಿತವಾಗುವುದು. ಇನ್ನು ಮೇಲೆ ಅಪ್ರಾಕೃತಸ್ತ್ರೀಯೋಗವು ಹೇಳಲ್ಪಡುವುದು. (ಸ್ಥಿತಯಾ ಪಾರ್ಶ್ವತಶ್ಚಾಪಿ)

ಮೈಗೆ ಲೇಪಿಸಿಕೊಂಡಿದ್ದನು. ಸೀತೆಯು ಪಕ್ಕದಲ್ಲಿ ಕುಳಿತು ಬೀಸಣಿಗೆಯನ್ನು ಕೈಯಲ್ಲಿ ಹಿಡಿದು ಆತನಿಗೆ ಬೀಸುತಿದ್ದಳು. ಹೀಗೆ ಚಿತ್ರಾನಕ್ಷತ್ರದೊಡಗೂಡಿದ ಚಂದ್ರನಂತೆ ಸೀತಾಸಮೇತನಾಗಿ ಪ್ರಕಾಶಿಸುತ್ತ, * ತೇಜೋವಿಶೇಷದಿಂದ ಸೂರ್ಯನಂತೆ ಜ್ವಲಿಸುತ್ತಿರುವ ರಾಮನನ್ನು ನೋಡಿ, ಸುಮಂತ್ರನು,

---

ಇಲ್ಲಿ "ಚಾಪಿ" ಎಂಬ ನಿಪಾತಗಳು ಹಿಂದಿನ ವಿಷಯಗಳೊಡನೆ ಸಮುಚ್ಚಯವನ್ನು ತಿಳಿಸುವುದು. ಇದರಿಂದ ಸೀತೆಯು ರಾಮನಿಗೆ ಮೊದಲು ಚಂದನವನ್ನು ಪೂಸಿ, ಆಮೇಲೆ ಚಾಮರವನ್ನೂ ಹಿಡಿದು.ಪಕ್ಕದಲ್ಲಿ ನಿಂತಿರುವಳೆಂದು ಭಾವವು(ಚಿತ್ರಯಾ ಶಶಿನಂಯಥಾ) ಚೈತ್ರಪೂರ್ಣಿಮೆಯಲ್ಲಿ ಚಿತ್ರಾನಕ್ಷತ್ರದೊಡಗೂಡಿ ಉದಿಸಿದ ಚಂದ್ರನಂತೆ ಸೀತಾಯೋಗದಿಂದ ಒಂದು ವಿಧವಾದ ವಿಶೇಷಶೋಭೆಯನ್ನು ಹೊಂದಿದವನೆಂದು ಭಾವವು. ಇದರಿಂದ ಚಂದ್ರನು ಉದಿಸುವಕಾಲದಲ್ಲಿ ಸಂಧ್ಯಾರಾಗದಿಂದ ಕೂಡಿ ಕೆಂಪಾಗಿರುವಂತೆ,ಈ ರಾಮನೂ ವರಾಹರಕ್ತದಂತೆ ಕೆಂಪಾದ ಗಂಧಧಿಂದ ಶೋಭಿಸುತಿದ್ದನೆಂದು ಆ ಸಾಮ್ಯಕ್ಕೆ ಪುಷ್ಟಿಯುಂಟಾಗುವುದು. (ದದರ್ಶ) ಸುಮಂತ್ರನು ನೋಡಿದನೆಂದನ್ವಯವು. ಸುಮಂತ್ರನು ತನ್ನ ದೃಷ್ಟಿಸಾಫಲ್ಯವನ್ನು ಹೊಂದಿದನೆಂದು ಭಾವವು.

* ಇಲ್ಲಿ "ತಂ ತಪನ್ತಮಿವಾದಿತ್ಯಮುಪಪನ್ನಂ ಸ್ವತೇಜಸಾ| ವವನ್ದೇ ವರದಂ ವನ್ದಿ: ವಿನಯಜ್ಞೋ ವಿನೀತವತ್||" ಎಂಬುದು ಮೂಲವು. ಇದರಲ್ಲಿ "ಆದಿತ್ಯಮಿವ" ಸೂರ್ಯನಂತೆ ಎಂಬುದಾಗಿ ಏಕವಚನವನ್ನು ಹೇಳಿದ್ದರೂ, ಒಂದೇ ಸೂರ್ಯನೆಂದು ಗ್ರಹಿಸಕೂಡದು "ದಿವಿ ಸೂರ್ಯಸಹಸ್ರಸ್ಯ" ಇತ್ಯಾದಿವಾಕ್ಯಗಳಿಗೆ ವಿರುದ್ಧವಾಗುವುದು "ಆದಿತ್ಯಂ' ಎಂಬುದರಿಂದಲೇ ಸೂರ್ಯಸಹಸ್ರವೆಂಬ ಅರ್ಥವು ಸಿದ್ಧಿಸದಿದ್ದರೂ. "ತಪನ್ತಮಾದಿತ್ಯಮಿವ" ಎಂದು ಸಾಕಲ್ಯದಿಂದ ಹೇಳುವಾಗ. ಸೂರ್ಯಸಹಸ್ರಜನ್ಯವಾದತೇಜಸ್ಸಮೂಹದಂತೆ ತಪಿಸುವವನೆಂದು ಅರ್ಥವು ಸಿದ್ಧಿಸುವುದು. (ಸ್ವತೇಜಸಾ) ಕೃತ್ರಿಮವಲ್ಲದ ಸ್ವಾಭಾವಿಕತೇಜಸ್ಸಿನಿಂದ (ಉಪಪನ್ನಂ) ಕೂಡಿದವನು (ಇಂದೀವರಶ್ಯಾಮಂ) ಶ್ಯಾಮವರ್ಣವುಳ್ಳವನು. ದೀಪದ ಕುಡಿಯಲ್ಲಿ,ನಡುವೆ ಶ್ಯಾಮಲವರ್ಣವಾದ ಜ್ಯೋತಿಯೂ.ಅದರಸುತ್ತಲೂ ತೇಜಃಪ್ರಸರಣವೂ ಕಾಣುವಂತೆ, ಶ್ರೀರಾಮನ ವಿಗ್ರಹವು ಸ್ವಭಾವಶ್ಯಾಮಲವಾಗಿದ್ದು, ಅದರಸುತ್ತಲೂ ಬಿಳುಪಾದ ತೇಜಃಪ್ರಸರಣವೂ ಕಾಣುತ್ತಿತ್ತೆಂದು ವ್ಯಕ್ತವಾಗುವುದು. ಇಲ್ಲಿ "ತಂ ವೈಶ್ರವಣ ಸಂಕಾಶಂ" ಎಂಬುದು ಮೊದಲಾಗಿ 'ಸ್ವತೇಜಸಾ" ಎಂಬವರೆಗೂ ಶುಭಾಶ್ರಯವಾದ ಶ್ರೀರಾಮನ ದಿವ್ಯವಿಗ್ರಹವಿಶೇಷವು ವ್ಯಂಜಿತವಾಗಿರುವುದು.ಇಲ್ಲಿ ಸುಮಂತ್ರನಿಗೆ "ದದರ್ಶ" ಎಂಬುದರಿಂದ ದೃಷ್ಟಿಸಾಫಲ್ಯವೂ. "ವವಂದೇ" ಎಂಬುದರಿಂದ ಶಿರಸ್ಸಾಫಲ್ಯವೂ "ವಂದೀ" ಎಂಬುದರಿಂದ ವಾಕ್ಸಾಫಲ್ಯವೂ ಹೇಳಲ್ಪಟ್ಟಿದೆ.

ಮೃಗಚರ್ಮವನ್ನುಟ್ಟು, ಜಿಂಕೆಯ ಕೊಂಬನ್ನು ಕೈಯಲ್ಲಿ ಹಿಡಿದುನಿಲ್ಲುವುದ ನ್ನು ನೋಡಿ, ನಾನು ಸಂತೋಷದಿಂದ ನಿನ್ನ ಪರಿಚರ್ಯೆಯನ್ನು ಮಾಡ ಬೇಕೆಂದು ನನಗೆ ಆಸೆಯು ಬಹಳವಾಗಿರುವುದು. ನಿನಗೆ ಪೂರ್ವದಿಕ್ಕಿನಲ್ಲಿ

---

ಯಜಮಾನವೇಷದಿಂದಿರುವವನೆಂದರ್ಥವು. "ಯನ್ನವನೀತೇನಾಭ್ಯಙ್ಕ್ತೇ ಸರ್ವಾಏವ ದೇವತಾ:ಪ್ರೀಣಾತಿ ಯನ್ನಾಙ್ಕ್ತೇ ಚಕ್ಷುರೇವ ಭ್ರಾತೃವ್ಯಸ್ಯವೃಙ್ಕ್ತೇ" ಎಂಬ ಶ್ರುತಿ ಪ್ರ ಮಾಣವನ್ನು ಇಲ್ಲಿ ಅನುಸರಿಸಬೇಕು (ವ್ರತಸಂಪನ್ನಂ) ವಸಿಷ್ಠನು ಬಂದುದಿನದ ಮ ಟ್ಟಿಗೆ ಉಪವಾಸವನ್ನು ನಿಯಮಿಸಿದಾಗ; ರಾಮನು, ತನ್ನ ಸೌಕುಮಾರ್ಯವನ್ನು ಕೆಡಿಸ ಬಾರದೆಂದೇ ವಸಿಷ್ಠನು ಹೀಗೆ ನಿಯಮಿಸಿರಬಹುದೆಂದೂಹಿಸಿ, "ತಿಸ್ರೋ ರಾತ್ರೀರ್ದೀ ಕ್ಷಿತಸ್ಸ್ಯಾತ್ ಷಡ್ರಾತ್ರೀ ರ್ದೀಕ್ಷಿತಸ್ಸ್ಯಾತ್" ಎಂಬ ಶ್ರುತಿಪ್ರಮಾಣವನ್ನನುಸರಿಸಿ ಮೂರಾರು ದಿವಸಗಳವರೆಗೆ ಉಪವಾಸವನ್ನು ನಡೆಸುವವನೆಂದು ಭಾವವು, (ವರಾಜಿನ ಧರಂ) ಈವ್ರತಾಚರಣಕ್ಕಾಗಿ ರಾಜಯೋಗ್ಯವಾದ ದುಕೂಲವನ್ನು ಬಿಟ್ಟು, ಕಠಿನವಾದ ಕೃಷ್ಣಾಜಿನವನ್ನು ಧರಿಸಿದವನೆಂದರ್ಥವು. (ಶುಚಿಂ) ಧರ್ಮಪತ್ನಿಯಾದ ಸೀತೆಯನ್ನು ಹೊರತು ಇತರಸ್ತ್ರೀಯರನ್ನು ಸ್ಪರ್ಶಿಸಿದರೆ ಮಾತ್ರವೇ ದೋಷವೆಂದು ವಸಿಷ್ಠನು ಹೇ ದ್ದರೂ ಸೀತಾಸ್ಪರ್ಶವಾದಮೇಲೆಕೂಡ ಸ್ನಾನಮಾಡತಕ್ಕ ಸಂಪ್ರದಾಯವುಳ್ಳವನೆಂದ ರ್ಥವು. (ಕುರಂಗಶೃಂಗಪಾಣಿಂ) ನವೆಯಾರಿಸಿಕೊಳ್ಳುವುದಕ್ಕಾಗಿ ಜಿಂಕೆಯಕೊಂಬನ್ನು ಕೈಯಲ್ಲಿ ಹಿಡಿದಿರುವವನು. "ಏಕವಸ್ತ್ರಧರೋ ಧನ್ವೀ" ಎಂಬಂತೆ ಬಂದೇಬಟ್ಟೆ ಯನ್ನುಟ್ಟು ಬಿಲ್ಲುಹಿಡಿದು ಬರುತಿದ್ದ ಹಿಂದಿನ ವೇಷಕ್ಕಿಂತಲೂ ಈಗಿನ ವೇಷವು ತನಗೆ ಮತ್ತಷ್ಟು ಹೃದಯಂಗಮವಾಗಿರುವೆಂದು ಭಾವವು. ಈ ಬಗೆಯಲ್ಲಿರುವ(ತ್ವಾಂ)ನಿನ್ನನ್ನು (ಪಶ್ಯನ್ತಿ) ನೋಡಬೇಕೆಂಬುದಕ್ಕಾಗಿ, (ಭಜಾಮಿ) ಭಜಿಸುವೆನು. ಎಂದು ಸೀತೆಯು ತನ್ನ ಉದ್ದೇಶವನ್ನು ತಿಳಿಸಿದುದಾಗಿ ಗ್ರಹಿಸಬೇಕು. ಭಗವಂತನನ್ನು ಭಜಿಸುವುದು ಆತನ ದರ್ಶನಾರ್ಥವಾಗಿಯೇ ಅಲ್ಲವೆ? ಅದರಂತೆಯೇ ಸೀತೆಯು ನವೀನವೇಷದರ್ಶನಾ ಪೇಕ್ಷೆಯಿಂದಲೇ ಈಗ ಭಜಿಸಿದುದಾಗಿ ಭಾವವು.

ಮುಂದೆ ಹೊಂದಬೇಕಾದ ಒಂದು ಮುಖ್ಯಫಲವನ್ನು ಕೋರಿದಾಗ, ಅದರ ನಡುವೆ ಒದಗಿ ಬರತಕ್ಕ ಅವಾಂತರಫಲಗಳನ್ನು ವಾಚ್ಯವಾಗಿ ಹೇಳದಿದ್ದರೂ ಹೇಳಿ ದಂತೆಯೇ ಆಗುವುದು. ಆದುದರಿಂದ ಸೀತೆಯು ರಾಮಾಭಿಷೇಕಕ್ಕೆ ನಿರ್ವಿಘ್ನಪರಿಸ ಮಾಪ್ತಿಯನ್ನು ಇಲ್ಲಿ ಅವಶ್ಯವಾಗಿ ಪ್ರಾರ್ಥಿಸಬೇಕಾದ ಸಂಭವವಿದ್ದರೂ, ಅದನ್ನುಬಿಟ್ಟು ಅದರಮೇಲೆ ನಡೆಯಬೇಕಾದ ರಾಜಸೂಯಯಾಗದೀಕ್ಷಿತತ್ವವನ್ನುಮಾತ್ರವೇ ರಾಮ ನಿಗೆ ಕೋರಿರುವಳು. ಇದರಿಂದ ಅಭಿಷೇಕಾಭ್ಯುದಯವನ್ನೂ ಕೋರಿದಂತೆಯೇ ತಿಳಿಯ ಬೇಕು. ಇದಕ್ಕೆ ನಿದರ್ಶನವಾಗಿ. ಪೂರ್ವದಲ್ಲಿ ಸಾವಿತ್ರಿಯು,ಮೃತಿಹೊಂದಿದ್ದ ತನ್ನ ಗಂಡ

ಇಂದ್ರನೂ, ದಕ್ಷಿಣದಿಕ್ಕಿನಲ್ಲಿ ಯಮನೂ, ಪಶ್ಚಿಮದಿಕ್ಕಿನಲ್ಲಿ ವರುಣನೂ, ಉತ್ತರದಿಕ್ಕಿನಲ್ಲಿ ಕುಬೇರನೂ ರಕ್ಷಕರಾಗಿರಲಿ!"ಎಂದಳು ರಾಮನು ಹೀಗೆ ತನಗೆ ಶ್ರೇಯಃ ಪ್ರಾರ್ಥನೆಯನ್ನು ಮಾಡುತ್ತಿರುವ ಸೀತೆಯ ಅನುಮತಿಯನ್ನು ಪಡೆದು, ತನ್ನ ಅಭಿಷೇಕಾರ್ಥವಾದ ಮಂಗಳಕಾರ್ಯಗಳನ್ನು ಮುಗಿಸಿಕೊಂಡು, ಸುಮಂತ್ರನೊಡಗೂಡಿ ಅಂತಃಪುರದಿಂದ ಹೊರಟನು. ಪರ್ವತದ ಗುಹೆಯಲ್ಲಿ ಮಲಗಿದ್ದ ಸಿಂಹವು ಹೊರಕ್ಕೆ ಹೊರಟುಬರುವಂತೆ, ರಾಮನು ಬಾಗಿಲಿಗೆಬಂದು ನಿಲ್ಲುವಷ್ಟರೊಳಗಾಗಿ,ಲಕ್ಷ್ಮಣನು ಅಲ್ಲಿ ವಿನಯದಿಂದ ಕೈಮುಗಿದು ನಿಂತಿದ್ದನು. ರಾಮನು ಅವನನ್ನೂ ಸಂಗಡಕರೆದುಕೊಂಡು ನಡುವಿನ ತೊಟ್ಟಿಗೆ ಬಂದು, ಅಲ್ಲಿ ತನ್ನ ಆಗಮನವನ್ನು ನಿರೀಕ್ಷಿಸುತಿದ್ದ ಮಿತ್ರರೊಡಗೂಡಿ ಮುಂದೆ ಬಂದನು. ಅಲ್ಲಿಯೂ ತನ್ನನ್ನು ನೋಡಬೇಕೆಂದು ಇದಿರುನೋಡುತ್ತಿರುವ ಜನಸಮೂಹವನ್ನು ಕಂಡು,ಅವರನ್ನೂ ಮನ್ನಿಸಿ, ಆಮೇಲೆ ತನಗಾಗಿ ಸಿದ್ಧಪಡಿಸಲ್ಪಟ್ಟು,ಅಗ್ನಿಯಂತೆ ಜ್ವಲಿಸುತ್ತಿರುವ ಒಂದು ರಥವನ್ನೇರಿದನು.ಆರಥವು ಹುಲಿಯಚರ್ಮದಿಂದ ಹೊದ್ದಿಸಲ್ಪಟ್ಟು, ರಜತಮಯವಾಗಿ, ನವರತ್ನಗಳಿಂದಲೂ, ಚಿನ್ನದಿಂದಲೂ ಮಾಡಿದ ಚಿತ್ರಕೆಲಸಗಳಿಂದ ಕೂಡಿ, ಮೇಘದಂತೆ ಗಂಭೀರವಾದ ಧ್ವನಿಯುಳ್ಳದಾಗಿ ವಿಶಾಲವಾಗಿತ್ತು. ಸೂರ್ಯಕಾಂತಿಯಂತಿರುವ ಅದರ ದಿವ್ಯತೇಜಸ್ಸು, ನೋಡುವವರ ಕಣ್ಣುಗಳನ್ನು ಕೋರೈಸುವಂತೆ ಮಾಡುತಿತ್ತು. ಅದಕ್ಕೆ ಕಟ್ಟಿದ ಕುದುರೆಗಳು ಆನೆಯಮರಿಗಳಂತೆ ಮಹೋನ್ನತಗಳಾಗಿಯೂ,ಬಲವುಳ್ಳವುಗಳಾಗಿಯೂ ಇದ್ದುವು. ಇಂದ್ರನು ಮಹಾವಿಷ್ಣುವಿನೊಡಗೂಡಿ ವೇಗವತ್ತಾದ ತನ್ನ ರಥವನ್ನೇರುವಂತೆ, ದಿವ್ಯತೇಜಸ್ಸಿನಿಂದ ಜ್ವಲಿಸುತ್ತಿರುವ ರಾಮನು, ಆ ರಥವನ್ನೇರಿ ಹೊರಟನು. ಕಾಂತಿವಿಶಿಷ್ಟವಾದ ಆ ರಥವು, ಆಕಾಶದಲ್ಲಿ ಗುಡುಗುತ್ತಿರುವ ಮೇಘದಂತೆ ದಿಕ್ಕುಗಳೆಲ್ಲವನ್ನೂ ತನ್ನ ಧ್ವನಿಯಿಂದ ತುಂಬುತ್ತ, ಚಂದ್ರನು ಉದಯಪರ್ವತವನ್ನು ಬಿಟ್ಟು ಹೊರಡುವಂತೆ, ಅರಮನೆಯನ್ನು ಬಿಟ್ಟುಹೊರ

---

ನನ್ನು ಯಮುನಿಗೆ ತೋರಿಸಿ,"ಇವನಿಂದ ತನಗೆ ಅನೇಕಪುತ್ರರುಂಟಾಗುವಹಾಗೆ ಅನುಗ್ರಹಿಸಬೇಕು"ಎಂದು ಪ್ರಾರ್ಥಿಸಿದಳಲ್ಲವೆ? ಇದರಿಂದ ತನ್ನಗಂಡನು ಬದುಕಿ ಚಿರಜೀವಿಯಾಗಿರಬೇಕೆಂಬುದು ಸ್ವತಸ್ಸಿದ್ಧವಾಯಿತು.ಅದರಂತೆಯೇ ಇಲ್ಲಿಯೂ ಗ್ರಹಿಸಬೇಕು.

ಟಿತು. ಲಕ್ಷ್ಮಣನು ರಾಮನ ಹಿಂದೆ ಕುಳಿತು, ಒಂದು ಕೈಯ್ಯಲ್ಲಿ ಛತ್ರವನ್ನೂ, ಮತ್ತೊಂದು ಕೈಯಲ್ಲಿ ಚಾಮರವನ್ನೂ ಹಿಡಿದು ತನ್ನಣ್ಣನನ್ನು ಸೇವಿಸು ತಿದ್ದನು. ಈ ರಥವು ವೇಗದಿಂದ ಹೊರಟುಬರುವಾಗ, ದಾರಿಯಲ್ಲಿ ಕಿಕ್ಕಿರಿಸಿ ನಿಂತಿದ್ದ ಜನಗಳು ಒಬ್ಬರಮೇಲೊಬ್ಬರು ಬಿದ್ದು ಕೋಲಾಹಲ ಧ್ವನಿಯನ್ನು ಮಾಡುತ್ತ ಆ ರಥವನ್ನೇ ಹಿಂಬಾಲಿಸಿ ಹೋಗುತ್ತಿದ್ದರು. ಉತ್ತಮಜಾತಿಯಲ್ಲಿ ಹುಟ್ಟಿದ ಕುದುರೆಗಳೂ, ಬೆಟ್ಟದಂತೆ ಮಹೋನ್ನ ತಗಳಾದ ಆನೆಗಳೂ, ಸಾವಿರಲೆಕ್ಕದಿಂದ ಆ ರಥವನ್ನು ಹಿಂಬಾಲಿಸಿ ಬರುತ್ತಿದ್ದುವು. ರಥದ ಮುಂಭಾಗದಲ್ಲಿ ಅನೇಕವೀರಭಟರು ಕತ್ತಿಗಳನ್ನೂ, ಬಿಲ್ಲುಗಳನ್ನೂ ಹಿಡಿದು, ಚಂದನಾದಿಗಳಿಂದ ಅಲಂಕರಿಸಿಕೊಂಡು, ರಾಮನ ಶ್ರೇಯಸ್ಸನ್ನೇ ಕೋರುತ್ತ ಸಿದ್ಧರಾಗಿ ಬರುತಿದ್ದರು. ಅನೇಕಮಂಗಳವಾದ್ಯ ಧ್ವನಿಗಳೂ, ಹೊಗಳುಭಟರ ಸ್ತುತಿವಾಕ್ಯಗಳೂ, ವೀರಭಟರ ಸಿಂಹನಾದ ಗಳೂ, ದಾರಿಯಲ್ಲಿ ದಿಕ್ಕುಗಳೆಲ್ಲವನ್ನೂ ತುಂಬುತಿದ್ದುವು. ರಾಮನು ಬರುತ್ತಿರು ವಾಗ, ಪುರಸ್ತ್ರೀಯರೆಲ್ಲರೂ, ತಮ್ಮತಮ್ಮ ಮನೆಯ ಉಪ್ಪರಿಗೆಗಳನ್ನೇರಿ ಸರ್ವಾಲಂಕಾರಭೂಷಿತರಾಗಿ ಗವಾಕ್ಷಗಳಲ್ಲಿ ನಿಂತು, ಪುಷ್ಪಗಳನ್ನೆರಚುತಿದ್ದ ರು. ಆಸ್ತ್ರೀಯರಲ್ಲಿ ಕೆಲವರು ಮನೆಯ ಬಾಗಿಲುಗಳಲ್ಲಿಯೂ,ಮತ್ತೆ ಕೆಲವರು ಉಪ್ಪರಿಗೆಯಮೇಲೂ ನಿಂತು ಆತನನ್ನು ಸ್ತುತಿಸಲಾರಂಭಿಸಿದರು. ಅವ ರಲ್ಲಿ ಕೆಲವರು "ಎಲೈ ರಾಮನೇ! ನಿನ್ನ ಈಗಿನ ಜಯಪ್ರಯಾಣವು ಸಾ ರ್ಥಕವಾಗಲಿ! ನಿನ್ನ ತಾಯಿಯಾದ ಕೌಸಲ್ಯೆಯು ಇನ್ನು ಸ್ವಲ್ಪಕಾಲದೊ ಳಗಾಗಿಯೇ ದಶರಥನಿಂದ ರಾಜ್ಯಾಧಿಕಾರವನ್ನು ಹೊಂದಿ ಬಂದ ನಿನ್ನನ್ನು ನೋಡಿ, ಸಂತೋಷಪಡುವುದರಲ್ಲಿ ಸಂದೇಹವಿಲ್ಲ" ಎಂದು ಕೊಂಡಾ ಡುತ್ತಿದ್ದರು. ಮತ್ತೆ ಕೆಲವರು, ಸ್ತ್ರೀಯರಲ್ಲಿ ರತ್ನಪ್ರಾಯಳಾದ ಸೀತೆ ಯನ್ನುದ್ದೇಶಿಸಿ "ಭಲೆ!, ಸೀತೆಯು ಪೂರ್ವಜನ್ಮದಲ್ಲಿ ಯಾವ ಮಹಾತಪಸ್ಸ ನ್ನು ಮಾಡಿದ್ದಳೋ! ಚಂದ್ರನೊಡಗೂಡಿದ ರೋಹಿಣಿಯಂತೆ, ರಾಮನ ಕೈ ಹಿಡಿದು, ಆತನಿಗೆ ಪ್ರಾಣಪ್ರಿಯಳೆನಿಸಿಕೊಂಡಿರುವ ಈಕೆಗಿಂತಲೂ ಲೋ ಕದಲ್ಲಿ ಉತ್ತಮಸ್ತ್ರೀಯರು ಬೇರೊಬ್ಬರುಂಟೆ? ಆಃ! ಅವಳ ಭಾಗ್ಯವೇ ಭಾಗ್ಯ ವು?" ಎಂದು ಕೊಂಡಾಡುತಿದ್ದರು. ಇದಲ್ಲದೆ ದಾರಿಯಲ್ಲಿ ನೆರೆದಿದ್ದ ಪುರ

ವಾಸಿಗಳೂ, ದೇಶವಾಸಿಗಳೂ ಸಂತೋಷದಿಂದ ತನ್ನ ವಿಷಯವನ್ನೇ ಹೇಳುತ್ತ, “ಭಲೆ! !ಈಗ ರಾಮನು ದಶರಥನ ಅನುಗ್ರಹದಿಂದ ಸಾಮ್ರಾಜ್ಯಲಕ್ಷ್ಮಿಯನ್ನು ಕೈಹಿಡಿಯುವುದಕ್ಕಾಗಿ ಹೋಗುತ್ತಿರುವನು. ಈಗಲೀಗ ನಮ್ಮ ಕೋರಿಕೆಗಳೆಲ್ಲವೂ ಕೈಗೂಡಿದಂತಾಯಿತು ಇನ್ನು ರಾಮನೇ ನಮಗೆ ಒಡೆಯನಾಗುವನು. ರಾಮನು ಸಮಸ್ತರಾಜ್ಯಭಾರವನ್ನೂ ವಹಿಸುವನೆಂಬುದಕ್ಕಿಂತಲೂ ಪ್ರಜೆಗಳಿಗೆ ಬೇರೆ ಲಾಭವೇನುಂಟು? ಈತನು ರಾಜ್ಯಕ್ಕೆ ಬಂದಮೇಲೆ ಲೋಕದಲ್ಲಿ ಯಾರಿಗೂ, ಯಾವಾಗಲೂ, ಯಾವುದೊಂದುದುಃಖವೂ ಉಂಟಾಗಲಾರದು” ಎಂದು ಶ್ಲಾಘಿಸುತ್ತಿದ್ದರು. ರಾಮನೂ ತನ್ನ ಸ್ತುತಿವಾಕ್ಯಗಳನ್ನು ಕೇಳುತ್ತ, ರಥದಮೇಲೆ ಕುಳಿತು ಬರುತ್ತಿದ್ದನು. ಆನೆಕುದುರೆಗಳ ಕೂಗಿನಿಂದಲೂ, ಜಯಘೋಷವನ್ನು ಮಾಡುತ್ತಿರುವ ಹೊಗಳುಭಟರ ಧ್ವನಿಯಿಂದಲೂ, ಚತುರರಾದ ವಾದ್ಯಗಾರರಿಂದ ನುಡಿಸಲ್ಪಡುವ ವಾದ್ಯಧ್ವನಿಗಳಿಂದಲೂ, ದಿಕ್ಕುಗಳೆಲ್ಲವೂ ತುಂಬುತ್ತಿರಲು, ಸಮಸ್ತಜನಗಳಿಂದ ಸ್ತೋತ್ರಮಾಡಲ್ಪಡುತ್ತಾ, ಕುಬೇರನಂತೆ ಬಹುವೈಭವದಿಂದ ಬರುತಿದ್ದನು. ಆನೆಗಳಿಂದಲೂ, ಕುದುರೆಗಳಿಂದಲೂ ರಥಗಳಿಂದಲೂ ಅನೇಕಜನಸಮೂಹದಿಂದಲೂ ನಿಬಿಡವಾಗಿ, ರತ್ನರಾಶಿಗಳಿಂದ ಕೂಡಿದ ಅಂಗಡಿಯ ಸಾಲುಗಳಿಂದ ಅತಿಮನೋಹರವಾಗಿದ್ದ ರಾಜಬೀದಿಯನ್ನು ಸೇರಿದನು. ಇಲ್ಲಿಗೆ ಹದಿನಾರನೆಯ ಸರ್ಗವು.

---

### ರಾಮನು ದಶರಥನಬಳಿಗೆ ಬಂದುದು.

ರಾಮನು ಹೀಗೆ ರಥವನ್ನೇರಿ, ತನ್ನಮಿತ್ರರೆಲ್ಲರೂ ಸಂತೋಷದಿಂದ ತನ್ನನ್ನು ಸುತ್ತಿಬರಲು, ಪುರವೀಥಿಯನ್ನು ಪ್ರವೇಶಿಸುವಷ್ಟರಲ್ಲಿ. ಬೀದಿಬೀದಿಗಳಲ್ಲಿ ಧ್ವಜಪತಾಕೆಗಳು ಏರಿಸಲ್ಪಟ್ಟಿದ್ದುವು. ಅಲ್ಲಲ್ಲಿ ಅಗರುಧೂಪಗಳು ಹೊಗೆಯಾಡುತಿದ್ದುವು. ನಾನಾಜಾತಿಯ ಜನರು ಬಂದು ಗುಂಪುಗೂಡಿದ್ದರು. ಶರನ್ಮೇಘದಂತೆ ಬಿಳುಪಾದ ಉಪ್ಪರಿಗೆಯ ಮನೆಗಳು ನೇತ್ರಾನಂದವನ್ನುಂಟುಮಾಡುತಿದ್ದುವು. ಆದರಲ್ಲಿಯೂ ಆಗ ರಾಮನು ಬರುವನೆಂಬುದಕ್ಕಾಗಿ, ಅಗರುಚಂದನಗಳೇ, ಮುಂತಾದ ಸುಗಂಧದ್ರವ್ಯಗಳ ಧೂ

ಸದಿಂದ ಬೀದಿಯೆಲ್ಲವೂ ಸುವಾಸಿತವಾಗಿತ್ತು. ಈ ಉತ್ಸವಕಾಲದಲ್ಲಿ ದೇಶದೇಶದ ವರ್ತಕರು ಬಂದು, ಅತ್ಯುತ್ತಮವಾದ ಸುಗಂಧಗಳನ್ನೂ, ಪಟ್ಟೆಮಡಿ ಮೊದಲಾದ ವಿಚಿತ್ರವಸ್ತ್ರಗಳನ್ನೂ, ವೆಜ್ಜಹಾಕದ ಹೊಸಮುತ್ತುಗಳನ್ನೂ, ಬೇರೆಬೇರೆ ಜಾತೀಯಗಳಾದ ಸ್ಫಟಿಕದ ಕಲ್ಲುಗಳನ್ನೂ, ಇನ್ನೂ ಅಮೂಲ್ಯಗಳಾದ ಅನೇಕವಸ್ತುಸಮೂಹಗಳನ್ನೂ ಮುಂದೆ ರಾಶಿಹಾಕಿಕೊಂಡಿದ್ದರು. ಅಲ್ಲಲ್ಲಿ ಭೋಜನಪದಾರ್ಥಗಳೂ, ಉತ್ತಮಭಕ್ಷ್ಯಗಳೂ ಸಿದ್ಧವಾಗಿ ಸೇರಿಸಿಡಲ್ಪಟ್ಟಿದ್ದುವು. ದೇವಲೋಕದ ರಾಜಬೀದಿಯಂತೆ ಸಕಲಸಂಪತ್ಸಮೃದ್ಧವಾದ ಅಜೀಟಗಳ ಅಂದವನ್ನು ನೋಡಿ ನೋಡಿ ಆನಂದಿಸುತ್ತ ರಾಮನು, ಅದರ ನಡುವೆ ತನ್ನ ರಥವನ್ನು ನಡೆಸಿಕೊಂಡು ಹೋದನು. ಅಲ್ಲಲ್ಲಿ ಮಂಗಳಾರ್ಥವಾಗಿಟ್ಟಿದ್ದ, ಮೊಸರು, ತುಪ್ಪ, ಅರಳು, ಅಕ್ಷತೆ, ಮುಂತಾದುವುಗಳು ಕಾಣುತಿದ್ದುವು. ಪ್ರತಿಯೊಬ್ಬರೂ ತಮ್ಮತಮ್ಮ ಮನೆಯ ಬಾಗಿಲಲ್ಲಿ ಗಂಧದ ನೀರನ್ನು ಚೆಲ್ಲಿ, ಧೂಪಗಳನ್ನು ಹಾಕಿದ್ದರು. ಮನೆಯಮುಂದೆ ಹೂವಿನ ಕುಚ್ಚುಗಳನ್ನು ಬಿಟ್ಟಿದ್ದರು. ಇವೆಲ್ಲವನ್ನೂ ನೋಡುತ್ತ ಬೀದಿಯಲ್ಲಿ ಬರುವಾಗ, ಆರಾಮನ ಮಿತ್ರರೆಲ್ಲರೂ ಮುಂದೆಬಂದು ಆತನಿಗೆ ಮಂಗಳಾಶಾಸನವನ್ನು ಮಾಡಿ ಹೋಗುತ್ತಿದ್ದರು. ಅವರ ಪ್ರಿಯವಾಕ್ಯಗಳೆಲ್ಲವನ್ನೂ ರಾಮನು ಪ್ರೀತಿಯಿಂದ ಸ್ವೀಕರಿಸಿ, ಅವರನ್ನು ಮನ್ನಿಸಿ, ಮುಂದೆ ಹೋಗುತ್ತಿದ್ದನು. ಆಗ ಕೆಲವರು ಮುಂದೆ ಬಂದು ರಾಮನನ್ನು ನೋಡಿ, "ಎಲೈ ಶ್ರೀಮಂತನೆ! ನಿನ್ನ ತಾತಂದಿರೂ, ಮುತ್ತಾತಂದಿರೂ, ಈ ರಾಜ್ಯವನ್ನು ಹೇಗೆ ಪಾಲಿಸುತಿದ್ದರೋ, ಅದೇ ಮಾರ್ಗವನ್ನನುಸರಿಸಿ ನೀನೂ ರಾಜ್ಯವನ್ನು ರಕ್ಷಿಸು!" ಎಂದು ಆಶೀರ್ವಚನಗಳನ್ನು ಹೇಳಿ, ಆಮೇಲೆ ತಮ್ಮೊಳಗೆ ಒಬ್ಬರಿಗೊಬ್ಬರು "ಈ ರಾಮನು ರಾಜ್ಯವನ್ನು ವಹಿಸಿದರೆ, ಇವನ ತಂದೆಯಾಗಲಿ, ತಾತನಾಗಲಿ, ಮುತ್ತಾತನಾಗಲಿ ಹಿಂದೆ ನಮ್ಮನ್ನು ಆಳುತಿದ್ದುದಕ್ಕಿಂತಲೂ ಹೆಚ್ಚು ಸೌಖ್ಯದಿಂದ ಆಳುವುದರಲ್ಲಿ ಸಂದೇಹವಿಲ್ಲ! ಈರಾಮನು ತನ್ನ ತಂದೆಯಬಳಿಗೆ ಹೋಗಿ, ರಾಜ್ಯಾಭಿಷಿಕ್ತನಾಗಿ ಹಿಂತಿರುಗಿ ಬರುವವರೆಗೂ ನಮಗೆ *ಊಟವೂ ಬೇಡ! ಉಪಚಾರವೂ ಬೇಡ! ನಿತ್ಯಾಹ್ನಿಕಗಳೂ ಬೇಡ! ಇದು

* ಇಲ್ಲಿ 'ಅಲಮದ್ಯಹಿ ಭುಕ್ತೇನ ಪರಮಾರ್ಥೈರಲಂಹಿ ನಃ." ಎಂದು ಮೂಲವು. ಇಲ್ಲಿ ವಿಶೇಷಾರ್ಥವೇನೆಂದರೆ (ಅದ್ಯಭುಕ್ತೇನ ಅಲಂ) ಈಗ ನಾವು ಅನುಭವಿಸಿದ ಐಹಿ

ವರೆಗೆ ಮಾಡಿದುದೇ ಸಾಕು! ಆತನು ಅಭಿಷಿಕ್ತನಾಗಿ ಹಿಂತಿರುಗಿ ಬರುವುದ ನ್ನು ಮನಸ್ತೃಪ್ತಿಯಾಗುವವರೆಗೆ ಕಣ್ಣಾರೆ ಕಂಡು, ಆಮೇಲೆ ನಾವು ಇತರ ಕಾರ್ಯಗಳಿಗೆ ಹೋಗಬೇಕು. ರಾಮನ ರಾಜ್ಯಾಭಿಷೇಕಕ್ಕಿಂತಲೂ ನಮಗೆ ಪ್ರಿಯವಾದುದು ಬೇರೆ ಯಾವುದೂ ಇಲ್ಲ" ಎಂಬಿವೇ ಮೊದಲಾಗಿ ನಾನಾವಿಧ ಪ್ರಿಯವಾಕ್ಯಗಳನ್ನಾಡುತಿದ್ದರು. ರಾಮನು ಬಹಳ ಗಂಭೀರ ಸ್ವಭಾವವುಳ್ಳವನಾದುದರಿಂದ, ಈ ಸ್ತುತಿವಾಕ್ಯಗಳೆಲ್ಲವೂ ಚೆನ್ನಾಗಿ ತನ್ನ ಕಿವಿಗೆ ಬಿದ್ದಿದ್ದರೂ, ಕೇಳಿಯೂ ಕೇಳದಂತೆ ಉದಾಸೀನನಾಗಿ ಮುಂದೆಮುಂ ದೆ ದಾಟಿ ಹೋಗುತ್ತಿದ್ದನು ಆತನು ಕಣ್ಮರೆಯಾಗಿ ಹೊರಟುಹೋದರೂ, ಅಲ್ಲಿದ್ದ ಜನರಲ್ಲಿ ಒಬ್ಬರಾದರೂ, ಆತನ ಮೋಹನಾಕಾರದಲ್ಲಿ ನಟ್ಟದೃಷ್ಟಿ ಯನ್ನಾಗಲಿ, ಮನಸ್ಸನ್ನಾಗಲಿ ಹಿಂತಿರುಗಿಸಿಕೊಳ್ಳಲಾರದೆ, ಆತನು ಹೋ ದ ದಾರಿಯನ್ನೇ ನೋಡುತ್ತಿದ್ದರು * ಯಾವ ಮನುಷ್ಯನು ರಾಮನನ್ನು, ನೋಡಿದುದಿಲ್ಲವೋ, ಯಾವನು ರಾಮನ ಕಣ್ಣಿಗೆ ಗೋಚರಿಸಿಲ್ಲವೋ ಅಂತ

---

ಕಾಮುಷ್ಮಿಕಭೋಗಗಳೇ ಸಾಕು! ಅಥವಾ, ಪರಪುರುಷಾರ್ಥ ಸಾಧಕಗಳಾದ ಜಪ ಹೋಮಧ್ಯಾನಾದಿಗಳೂ ಸಾಕು! ಅವಾವುವೂ ಪ್ರಯೋಜನಕರಗಳಲ್ಲ. ಕಾಮ್ಯಗಳಾದ ಇವೆಲ್ಲವನ್ನೂ ಬಿಟ್ಟು, ಪರಮಾತ್ಮಪ್ರಾಪ್ತಿಹೇತುವಾದ ರಾಮಭಕ್ತಿಯೆಂಬ ಪ್ರಪತ್ತಿ ಯೊಂದನ್ನೇ ನಾವು ಆಶ್ರಯಿಸುವೆವೆಂದು ಭಾವವು. (ಗೋವಿಂದರಾಜರು.)

* ಇಲ್ಲಿ "ಯಶ್ಚ ರಾಮಂ ನಪಶ್ಯೇತ್ತು ಯಂಚ ರಾಮೋ ನಪಶ್ಯತಿ | ನಿಂದಿತಸ್ಸವಸೇ ಲ್ಲೋಕೇ ಸ್ವಾತ್ಮಾಪ್ಯೇನಂ ವಿಗರ್ಹತೆ ||"ಎಂದು ಮೂಲವು. ಇದರಲ್ಲಿರುವ ಅರ್ಥಸ್ವಾ ರಸ್ಯಗಳೇನೆಂದರೆ: —(ಯಃ)ಯಾವನು,(ರಾಮಂಚ) ನೋಡುವಾಗಲೇ ಯಾವನು ತನ್ನ ಸೌಂದರ್ಯಾತಿಶಯವೆಂಬ ಅಮೃತಸರಸ್ಸಿನಲ್ಲಿ ಜನರ ಮನಸ್ಸನ್ನು ಮುಳುಗಿಸಿಬಿಡುವನೋ, ಅಂತಹ ರಾಮನನ್ನೂ ಕೂಡ (ನ ಪಶ್ಯೇತ್) ನೋಡುವುದಿಲ್ಲವೋ, ಬಂದುವೇಳೆ ಆತ ನನ್ನು ಸ್ತುತಿಸುವುದೂ, ಆತನೊಡನೆ ಸಲ್ಲಾಪಮಾಡುವುದೂ, ಅವನನ್ನು ಸತ್ಕರಿಸುವು ದೂ, ತನಗೆ ಪ್ರಾಪ್ಯವಲ್ಲವಿದ್ದರೂ, ಕಣ್ಣಿಂದಲಾದರೂ ಯಾವನು ನೋಡದಿರುವನೋ, ಅಂತವನೆಂದು ಭಾವವು. (ಯಂಚ ರಾಮೋ ನಪಶ್ಯತಿ) ಯಾವನನ್ನು ರಾಮನೂ ನೋಡುವುದಿಲ್ಲವೋ, ಎಂದರೆ, ತನಗೆ ಅಭಿಮುಖನಾದ ಮನುಷ್ಯನನ್ನೇ ಭಗವಂತನು ಕಟಾಕ್ಷಿಸಿ ಉದ್ಧರಿಸುವವನಾದುದರಿಂದ, ಯಾವನು ಆತನಿಗೆ ಅಭಿಮುಖನಾಗಿ ಶರಣಾ ಗತಿಯನ್ನು ಮಾಡುವುದಿಲ್ಲವೋ,ಅಂತವನನ್ನು ಆತನೂ ನೋಡುವುದಿಲ್ಲವೆಂದು ಸೂಚ



೪೦೫. ಕೈಕೇಯಿಯು ತಾನು ವರಗಳನ್ನು. ಕೇಳಿದುದಾಗಿ ರಾಮನಿಗೆ ತಿಳಿಸಲು,

ತೋರಿಸುತ್ತಿರುವನು. ಇದರಿಂದ ಅವರಲ್ಲಿ ಒಬ್ಬೊಬ್ಬರೂ ಇವನಿಗೆ ಅನುಕೂಲರಾಗಿಯೇ ಇರುವರು. ಆತನು ಹೋಗುತ್ತಿರುವಾಗ ಬೀದಿಯ ಚೌಕಗಳನ್ನೂ, ದೇವಾಲಯಗಳನ್ನೂ, ಬಲಗಡೆಗೆ ಬಿಟ್ಟುಕೊಂಡು ಪ್ರದಕ್ಷಿಣವಾಗಿ ಹೋಗುತಿದ್ದನು. ಮುಂದೆ ಮೇಘಗಳ ಸಮೂಹದಂತೆ ವಿಸ್ತಾರವಾಗಿ, ಕೈಲಾಸಶಿಖರದಂತೆ ಮಹೋನ್ನತವಾಗಿ, ವಿಚಿತ್ರವರ್ಣಗಳಿಂದ ಶೋಭಿಸುತ್ತ, ಬಿಳೀವಿಮಾನಗಳಂತೆ ಗಗನಪ್ರದೇಶವನ್ನೆಲ್ಲಾ ಆಕ್ರಮಿಸಿಕೊಂಡಿರುವ ಉಪ್ಪರಿಗೆಯ ಶಿಖರಗಳಿಂದ ಕೂಡಿದ ರಾಜಗೃಹವನ್ನು ಸೇರಿದನು. ಅದು ನಡುನಡುವೆ ನವರತ್ನಗಳಿಂದ ಕೆತ್ತಲ್ಪಟ್ಟ, ವರ್ಧಮಾನವೆಂಬ ಶಿಲ್ಪಸನ್ನಿವೇಶದಿಂದ ಇಂದ್ರಭವನದಂತೆ ಶೋಭಿಸುತಿತ್ತು. ಕೈಯ್ಯಲ್ಲಿ ಬಿಲ್ಲನ್ನು ಹಿಡಿದು ನಿಂತಿರುವ ಕಾವಲುಗಾರರಿಂದ ರಕ್ಷಿತವಾದ ಆ ಅರಮನೆಯ ಮೂರುತೊಟ್ಟಿಗಳನ್ನೂ ರಾಮನು ರಥಾರೂಢನಾಗಿಯೇ ದಾಟಿಬಂದು, ಅಲ್ಲಿ ರಥದಿಂದಿಳಿದು, ಪಾದಚಾರಿಯಾಗಿ ಉಳಿದ ಎರಡುತೊಟ್ಟಿಗಳನ್ನೂ ದಾಟಿಹೋದನು. ಅದುವರೆಗೆ ತನ್ನನ್ನು ಹಿಂಬಾಲಿಸಿ ಬಂದ ಜನರೆಲ್ಲರನ್ನೂ ಹಿಂತಿರುಗಿಸಿ, ಅಂತಃಪುರವೊಳಕ್ಕೆ ಪ್ರವೇಶಿಸಿದನು. ಆ ಜನರೆಲ್ಲರೂ ಚಂದ್ರೋದಯವನ್ನು ಇದಿರುನೋಡುತ್ತಿರುವ ಮಹಾಸಮುದ್ರದಂತೆ, ಅಲ್ಲಿಂದ ರಾಮನು ಹಿಂತಿರುಗಿ ಬರುವುದನ್ನೇ ನಿರೀಕ್ಷಿಸುತ್ತ ಅಲ್ಲಿಯೇ ನಿಂತಿದ್ದರು. ಇಲ್ಲಿಗೆ ಹದಿನೇಳನೆಯ ಸರ್ಗವು.

---

{ ಕೈಕೇಯಿಯು ತಾನು ವರಗಳನ್ನು ಕೇಳಿದ ವೃತ್ತಾಂತವನ್ನು ರಾಮನಿಗೆ ತಿಳಿಸಿದುದು }

ರಾಮನು ಒಳಗೆ ಪ್ರವೇಶಿಸಿದೊಡನೆ, ಅಲ್ಲಿ ದುಃಖದಿಂದ ಕಂದಿದ ಮುಖವುಳ್ಳವನಾಗಿ ಪೀಠದಲ್ಲಿ ಕುಳಿತಿದ್ದ ತಂದೆಯನ್ನು ಕಂಡನು. ಪಕ್ಕದಲ್ಲಿ ಕೈಕೇಯಿಯೂ ಕುಳಿತಿದ್ದಳು. ವಿನಯದಿಂದ ಮುಂದೆ ಹೋಗಿ,

---

ಕ್ತಿಗೆ ಸಾಧಕವಾದ ಉಪಾಯವು ಬಹುಸುಲಭವಾಗಿ ಕರಗತವಾಗಿದ್ದರೂ, ಅದನ್ನುಪೇಕ್ಷಿಸಿ ತನ್ನ ಜನ್ಮವನ್ನು ಉದ್ಧರಿಸಿಕೊಳ್ಳದೇ ಹೋದ" ನೆಂದು ಬಹಳವಾಗಿ ನಿಂದಿಸುವನೆಂದರ್ಥವು. (ಮಹೇಶ್ವರತೀರ್ಥ ವ್ಯಾಖ್ಯಾನವು.)

ಮೊದಲು ತಂದೆಯ ಪಾದಗಳಿಗೆ ನಮಸ್ಕರಿಸಿ, ಆಮೇಲೆ ಕೈಕೇಯಿಗೂ ನಮಸ್ಕರಿಸಿದನು. ತಡೆಯಲಾರದ ದುಃಖದಿಂದ ದಶರಥನು ಕಣ್ಣೀರನ್ನು ಸುರಿಸುತ್ತ, “ರಾಮಾ!” ಎಂದು ಕೂಗಿ, ಆತನನ್ನು ನೋಡಲಾರದೆಯೂ, ಆತನಿಗೆ ಚೆನ್ನಾಗಿ ಮುಖಕೊಟ್ಟು ಮಾತಾಡಲಾರದೆಯೂ, ಪರಿತಪಿಸುತಿದ್ದನು. ದಶರಥನು ಹೀಗೆ ದುಃಖದಿಂದ ಕೊರಗುತಿದ್ದುದನ್ನು ರಾಮನು ಹಿಂದೆ ಯಾವಾಗಲೂ ನೋಡಿದ್ದವನಲ್ಲ ಆತನ ಭಯಂಕರವಾದ ಈ ದುರವಸ್ಥೆಯನ್ನು ನೋಡಿದೊಡನೆ, ಸರ್ಪದಮೇಲೆ ಕಾಲಿಟ್ಟವನಂತೆ ರಾಮನು ಬೆಚ್ಚಿಬಿದ್ದನು. ಆಗ ದಶರಥನಿಗಿದ್ದ ದುರವಸ್ಥೆಯನ್ನು ಕೇಳಬೇಕೆ? ಆತನ ಇಂದ್ರಿಯಗಳೊಂದಾದರೂ ಸ್ವಾಧೀನವಾಗಿರಲಿಲ್ಲ! ದೇಹವೆಲ್ಲವೂ ದುಃಖದಿಂದ ಬೆಂದು ಕೃಶವಾಗಿಹೋಗಿದ್ದುವು. ಆತನ ಮನಸ್ಸೂ ಒಂದು ಸ್ಥಿಮಿತವಾಗಿರಲಿಲ್ಲ. ಆಗಾಗ ನಿಟ್ಟುಸಿರನ್ನು ಬಿಡುತ್ತಿದ್ದನು. ಸ್ವಭಾವಗಂಭೀರವಾಗಿದ್ದು ಇದಕ್ಕಿದ್ದಹಾಗೆ ಕಲಗಿಹೋದ ಮಹಾಸಾಗರದಂತೆಯೂ, ಗ್ರಹಣಹಿಡಿದ ಸೂರ್ಯನಂತೆಯೂ, ಸುಳ್ಳಾಡಿ ಸಿಕ್ಕಿಬಿದ್ದ ಮಹರ್ಷಿಯಂತೆಯೂ, ಕಾಂತಿಹೀನನಾದ ಆತನು, ಎಂದೂ ಇಲ್ಲದ ಆ ದುರವಸ್ಥೆಯನ್ನು ಹೊಂದಿ ದುಃಖದಿಂದ ತತ್ತಳಿಸುತ್ತಿರುವುದನ್ನು ನೋಡಿ, ರಾಮನೂ ಧೈರ್ಯಗುಂದಿದನು. ಪರ್ವಕಾಲದಲ್ಲಿ ಉಲ್ಲೋಲಕಲ್ಲೋಲವಾಗಿ ಕದಲಿಹೋದ ಸಮುದ್ರದಂತೆ ಆತನ ಮನಸ್ಸೂ ಕದಲಿತು. ತಂದೆಯ ಕ್ಷೇಮವನ್ನು ಯಾವಾಗಲೂ ಮನಸ್ಸಿನಲ್ಲಿಚಿಂತಿಸುತ್ತಿರುವ ಈ ರಾಮನು, ತನ್ನ ಮನಸ್ಸಿನಲ್ಲಿ ತಾನು“ಆಃ ಇದೇನು?ತಂದೆಯು ನನ್ನನ್ನು ಎಂದಿನಂತೆ ಪ್ರೀತಿಪೂರ್ವಕವಾಗಿ ಮಾತಾಡಿಸದಿರುವನಲ್ಲಾ! ಈತನು ಹಿಂದೆ ಯಾವಾಗಲೂ ನನ್ನ ವಿಷಯದಲ್ಲಿ ಹೀಗಿದ್ದವನಲ್ಲ! ಕಾರಣಾಂತರಗಳಿಂದ ಈತನಿಗೆ ಎಷ್ಟೇಕೋಪವುಂಟಾಗಿದ್ದರೂ, ನನ್ನನ್ನು ಕಂಡೊಡನೆ ಹರ್ಷಪರವಶನಾಗಿ ಕೋಪವನ್ನು ಮರೆತುಬಿಡುತಿದ್ದನು. ಈಗ ನನ್ನನ್ನು ಕಂಡು, ಈತನು ಮತ್ತಷ್ಟು ದುಃಖಿಸುವುದಕ್ಕೆ ಕಾರಣವೇನು?” ಎಂದು ಸ್ವಲ್ಪಕಾಲದವರೆಗೆ ಚಿಂತಿಸುತಿದ್ದನು. ದುಃಖದಿಂದ ರಾಮನ ಮುಖವು ಬಿಳುಪೇರಿತು! ಕೊನೆಗೆ ಕೈಕೇಯಿಯನ್ನು ನೋಡಿ ಆಕೆಗೆ ನಮಸ್ಕರಿಸಿ“ಎಲೆಮಾತೆ! ಇದೇನು? ನಾನು ತಂದೆಯ ವಿಷಯದಲ್ಲಿ ಯಾವ ಅಪರಾಧವನ್ನು ಮಾಡಿದೆನು? ನಾನು

ಪ್ರಮಾದದಿಂದಲಾದರೂ ಆತನಿಗೆ ವಿರೋಧವಾಗಿ ಪ್ರವರ್ತಿಸಿದಂತೆ ತೋರಲಿಲ್ಲ. ನಿಷ್ಕಾರಣವಾಗಿ ಈತನು ನನ್ನ ವಿಷಯದಲ್ಲಿ ಕೋಪಿಸಿಕೊಂಡಿರುವುದಕ್ಕೆ ಕಾರಣವೇನು? ನೀನಾದರೂ ಆತನಿಗೆ ಸಮಾಧಾನಹೇಳಿ ನನ್ನಲ್ಲಿ ಪ್ರಸನ್ನನಾಗುವಂತೆ ಮಾಡು! ನನ್ನಲ್ಲಿ ತಂದೆಗೆ ಸಂಪೂರ್ಣವಾದ ವಾತ್ಸಲ್ಯವಿದ್ದರೂ, ಈಗ ನನ್ನನ್ನು ಕಂಡೊಡನೆ ದುಃಖದಿಂದ ನನಗೆ ಮುಖಕೊಟ್ಟು ಮಾತಾಡದಿರುವುದಕ್ಕೆ ಕಾರಣವೇನು? ಯಾವ ಕಾರಣದಿಂದ ಇವನಿಗೆ ನನ್ನಲ್ಲಿ ಆಗ್ರಹವುಂಟಾಯಿತು? ಈತನಿಗೆ ದೇಹದಲ್ಲಿ ಏನಾದರೂ ವ್ಯಾಧಿಯುಂಟಾಗಿರಬಹುದೆ? ಅಥವಾ ಮನೋವ್ಯಾಧಿಗೇನಾದರೂ ಕಾರಣವುಂಟೆ? ಲೋಕದಲ್ಲಿ ಮನುಷ್ಯನು ಯಾವಾಗಲೂ ಸುಖಿಯಾಗಿಯೇ ಇರುವನೆಂದು ಹೇಳುವುದಕ್ಕಿಲ್ಲ! ಆದುದರಿಂದ ಈಗ ನನಗೆ ಸಂದೇಹವುಂಟಾಗಿದೆ. ಪ್ರಿಯದರ್ಶನನಾದ ಭರತನಿಗಾಗಲಿ, ಮಹಾಸತ್ತ್ವನೆನಿಸಿಕೊಂಡ ಶತ್ರುಘ್ನನಿಗಾಗಲಿ, ನಮ್ಮ ಮಾತೆಯರಲ್ಲಿ ಯಾರಿಗಾಗಲಿ, ಯಾವುದೊಂದು ಅಮಂಗಳವೂ ಇಲ್ಲವಷ್ಟೆ" ರಾಜಾಧಿರಾಜನಾದ ಈ ನನ್ನ ತಂದೆಯ ಮನಸ್ಸಿಗೆ ಸಂತೋಷವನ್ನುಂಟುಮಾಡದೆ, ಆತನಿಗೆ ಹಿತವಾದ ಕಾರ್ಯವನ್ನೂ ನಡೆಸದೆ, ನಿಮಿಷಮಾತ್ರವಾದರೂ ನಾನು ಬದುಕಿರಲಾರೆನು. ಆತನು ಹೀಗೆ ದುಃಖಿಸುತ್ತಿದ್ದಮೇಲೆ, ಆತನ ಹೊಟ್ಟೆಯಲ್ಲಿ ಹುಟ್ಟಿದ ನಾವು ಬದುಕಿದ್ದು ಫಲವೇನು? ಮನುಷ್ಯನಾಗಿ ಹುಟ್ಟಿದವನು, ಲೋಕದಲ್ಲಿ ತನ್ನ ಜನನಕ್ಕೆ ಕಾರಣನಾದ ತಂದೆಯನ್ನೇ ಪ್ರತ್ಯಕ್ಷದೈವವೆಂದೆಣಿಸಬೇಕಲ್ಲವೆ? ಅಂತಹ ಹೆತ್ತ ತಂದೆಗೆ ಯಾವನು ತಾನೇ ಪ್ರತಿಕೂಲನಾಗಿ ನಡೆಯದಿರುವನು? ಎಲೆ ಜನನಿ! ಆತನಿಗೆ ನಿನ್ನಲ್ಲಿರುವ ಅನುರಾಗದ ಬಲದಿಂದ, ನೀನೇನಾದರೂ ಸಲಿಗೆಯಿಂದಾಗಲಿ ಅಥವಾ ಕೋಪದಿಂದಾಗಲಿ, ಆತನೊಡನೆ ಕ್ರೂರವಾಕ್ಯಗಳನ್ನಾಡಿರುವೆಯಾ? ಈತನ ಮನಸ್ಸು ಇಷ್ಟು ಕಳವಳಿಸಿರುವುದಕ್ಕೆ ಕಾರಣವೇನು? ಎಲೆದೇವಿ! ಇದ್ದ ಸಂಗತಿಯನ್ನು ಯಥಾಸ್ಥಿತವಾಗಿ ನನಗೆ ತಿಳಿಸು." ಎಂದನು. ಈ ಮಾತನ್ನು ಕೇಳಿಯೂ ಕೈಕೇಯಿಯ ಮನಸ್ಸು ಕರಗಲಿಲ್ಲ. ತನ್ನ ದುರುದ್ದೇಶವನ್ನು ತಾನಾಗಿಯೇ ರಾಮನಿಗೆ ಹೇಗೆ ತಿಳಿಸುವುದೆಂಬ ನಾಚಿಕೆಯೂ ಆಕೆಗುಂಟಾಗಲಿಲ್ಲ. ಇಷ್ಟು ಕಠಿನಹೃದಯಳಾದ ಆ ಕೈಕೇಯಿಯು ನಿರ್ಭಯಳಾಗಿ

ಸ್ವಾರ್ಥಪರೆಯಾಗಿ,ರಾಮನನ್ನು ಕುರಿತು “ಎಲೆರಾಮನೆ! ಈಗ ರಾಜನಿಗೆ ವ್ಯಸನವೂಇಲ್ಲ; ಕೋಪವೂ ಇಲ್ಲ; ಆತನ ಮನಸ್ಸಿನಲ್ಲಿ ಏನೋ ಒಂದು ಉದ್ದೇಶವಿರುವುದು. ಅದು ನಿನಗೆ ಅಪ್ರಿಯವಾದ ವಿಷಯವಾದುದರಿಂದ, ನಿನ್ನ ಭಯಕ್ಕಾಗಿ ಅದನ್ನು ಹೇಳದೆ ಬಚ್ಚಿಟ್ಟುಕೊಂಡಿರುವನು. ಪ್ರಿಯಪುತ್ರನಾದ ನಿನ್ನೊಡನೆ ಅದನ್ನು ಹೇಳುವುದಕ್ಕೆ ಅವನಿಗೆ ಬಾಯಿಬರಲಿಲ್ಲವೆಂದು ತೋರುತ್ತಿದೆ. ನೀನು ಅದನ್ನು ಅವಶ್ಯವಾಗಿ ನಡೆಸುವೆನೆಂದು ಭರವಸವನ್ನು ಕೊಟ್ಟರೆ, ಆಗ ಧೈರ್ಯವಾಗಿ ತಿಳಿಸಬಹುದು. ಈತನು ಹಿಂದೆ ನನಗೆ ಕೆಲವುವಿಷಯಗಳಲ್ಲಿ ಸತ್ಯಮಾಡಿಕೊಟ್ಟಿರುವನು. ಇವನು ಪೂರ್ವದಲ್ಲಿ ನನಗೆ ಎರಡುವರಗಳನ್ನು ಕೊಟ್ಟಿದ್ದನು. ಅವುಗಳನ್ನು ಪಯೋಗಿಸಿಕೊಳ್ಳುವುದಕ್ಕೆ ಇದು ನನಗೆ ಒಳ್ಳೇಸಮಯವಾಗಿದೆ. ಮೊದಲು ಇವನು ನನ್ನನ್ನು ಬಹಳವಾಗಿ ಮನ್ನಿಸಿ, ಅಭಯಕೊಟ್ಟು, ಈಗ ನಾನು ಆ ವರಗಳನ್ನು ಕೇಳಿದುದಕ್ಕಾಗಿ ಪಶ್ಚಾತ್ತಾಪಪಟ್ಟು ಅಜ್ಞರಂತೆ ದುಃಖಿಸುತ್ತಿರುವನು. ಕ್ಷತ್ರಿಯಶ್ರೇಷ್ಠನಾದ ಈತನು ಮೊದಲು ನನಗೆ ವರವನ್ನು ಕೊಡುವುದಾಗಿ ಮಾತುಕೊಟ್ಟು, ಪ್ರವಾಹವು ಹೋದಮೇಲೆ ಸೇತುವನ್ನು ಕಟ್ಟುವವರಂತೆ, ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಈಗ ನಿರರ್ಥಕಗಳಾದ ಉಪಾಯಗಳನ್ನು ಹುಡುಕುತ್ತಿರುವನು. ಸತ್ಯವೇ ಸಮಸ್ತಧರ್ಮಗಳಿಗೂ ಮೂಲಾಧಾರವೆಂಬುದನ್ನು ವಿವೇಕವುಳ್ಳವರು ಯಾರುತಾನೇ ಒಪ್ಪಿಕೊಳ್ಳಲಾರರು? ಆದುದರಿಂದ ಈತನು ನಿನ್ನ ಮೇಲಿನ ವಾತ್ಸಲ್ಯದಿಂದ ನನಗೆ ಪ್ರತಿಕೂಲವಾಗಿ, ಸತ್ಯವನ್ನು ಬಿಡುವ ಪ್ರಯತ್ನದಲ್ಲಿರುವ ಹಾಗಿದೆ. ಆತನ ಸತ್ಯಕ್ಕೆ ಲೋಪಬಾರದಂತೆ ನೋಡಿಕೊಳ್ಳುವ ಭಾರವು ನಿನ್ನದಾಗಿದೆ. ನಿನಗೆ ಹಿತವಾಗಲಿ, ಅಥವಾ ಅಹಿತವಾಗಲಿ, ಈಗ ರಾಜನು ಯಾವ ಕೆಲಸವನ್ನು ಹೇಳಿದರೂ ನೀನು ತಪ್ಪದೆ ನಡೆಸುವುದಾದರೆ, ಮುಂದಿನ ವಿಷಯವನ್ನು ನಾನೇ ತಿಳಿಸುವೆನು. ರಾಜನು ಹೇಳಿದ ಮಾತನ್ನು ನೀನು ನಡೆಸುವುದಾಗಿ ಪ್ರತಿಜ್ಞೆಮಾಡಿಕೊಡು! ನಾನೇ ಹೇಳುವೆನು. ಈತನು ಅಂಜಿಕೆಯಿಂದ ನಿನ್ನೊಡನೆ ಹೇಳುವುದಕ್ಕೆ ಹಿಂಜರಿಯುವನು.” ಎಂದಳು. ಕೈಕೇಯಿಯ ಮಾತನ್ನು ಕೇಳಿ ರಾಮನು ಮನಸ್ಸಿನಲ್ಲಿ ಅತ್ಯಧಿಕ ದುಃಖದಿಂದ ಸಂಕಟಪಡುತ್ತಾ, ರಾಜನ ಮುಂದೆಯೇ ಅವಳನ್ನು ಕುರಿತು,

"ಎಲೆದೇವಿ! ಇದೀಗ ಚೆನ್ನಾಯಿತು! ನನ್ನೊಡನೆಯೇ ನೀನು ಈ ಮಾತುಗಳ ನ್ನಾಡಬಹುದೆ? ಹೀಗೆ ಹೇಳಬಾರದು. ತಂದೆಯ ಆಜ್ಞೆಯಾದರೆ ನಾನು ಅಗ್ನಿಪ್ರವೇಶವನ್ನು ಮಾಡುವುದಕ್ಕೂ ಹಿಂಜರಿಯುವವನಲ್ಲ! ವಿಷವನ್ನಾ ದರೂ ಕುಡಿದುಬಿಡುವೆನು. ಸಮುದ್ರದಲ್ಲಿಯಾದರೂ ಬಿದ್ದುಬಿಡುವೆನು. ನನಗೆ ಗುರುವಾಗಿ, ತಂದೆಯಾಗಿ, ದೊರೆಯಾಗಿ, ಹಿತನಾಗಿಯೂ ಇರುವ ಈತನ ಉದ್ದೇಶದಂತೆ ನಾನು ನಡೆಯುದಿದ್ದರೆ,ಇನ್ನು ನನ್ನ ಜನ್ಮವೇಕೆ? ಎಲೆ ಜನನಿ! ರಾಜನ ಇಷ್ಟವನ್ನು ತಿಳಿಸು! ತಪ್ಪದೆ ಅದನ್ನು ನಡೆಸುವೆನು. ಆಣೆ ಯಿಟ್ಟು ಸತ್ಯಮಾಡಿಕೊಡುವೆನು. ರಾಮನು ಎರಡುಮಾತಾಡತಕ್ಕವನಲ್ಲ ವೆಂದು ನೀನು ತಿಳಿಯೆಯಾ?" ಎಂದನು. ಹೀಗೆ ಋಜುಸ್ವಭಾವದಿಂದ ಪ್ರತಿ ಜ್ಞೆಮಾಡಿಕೊಟ್ಟ ಸತ್ಯಸಂಧನಾದ ಆ ರಾಮನನ್ನು ನೋಡಿ, ದುಷ್ಟೆಯಾದ ಕೈಕೇಯಿಯು, ಅತಿಕ್ರೂರವಾದ ಒಂದು ಮಾತನ್ನಾಡುವಳು. "ವತ್ಸ ರಾಮಾ! ಪೂರ್ವದಲ್ಲಿ ದೇವಾಸುರರಿಗೆ ಯುದ್ಧವು ನಡೆವಾಗ, ನಾನು ಈತನ ಪ್ರಾಣವನ್ನು ರಕ್ಷಿಸಿದೆನು. ಆಗ ಈತನ ದೇಹದಲ್ಲಿ ನಾಟಿಕೊಂಡಿದ್ದ ಬಾಣ ಗಳೆಲ್ಲವನ್ನೂ ಕಿತ್ತು ಕಾಪಾಡಿದೆನು. ಹೀಗೆ ಪ್ರಾಣದಾನವನ್ನು ಮಾಡಿದ ನನ್ನಲ್ಲಿ ಪ್ರಸನ್ನನಾಗಿ, ಈತನು ನನಗೆ ಎರಡುವರಗಳನ್ನು ಕೊಟ್ಟನು. ಆ ವರಗ ಳನ್ನು ಈಗ ನಾನು ಯಾಚಿಸಿದೆನು. ಅವುಗಳಲ್ಲಿ ಒಂದಕ್ಕೆ ಭರತನಿಗೆ ರಾಜ್ಯಾ ಭಿಷೇಕವನ್ನು ಮಾಡಬೇಕೆಂದೂ,ಮತ್ತೊಂದಕ್ಕೆ ನಿನ್ನನ್ನು ಈಗಲೇ ದಂಡಕಾ ರಣ್ಯಕ್ಕೆ ಕಳುಹಿಸಿಬಿಡಬೇಕೆಂದೂ ಕೇಳಿಕೊಂಡೆನು. ರಾಮಾ! ನಿನ್ನ ತಂದೆಯನ್ನೂ,ನಿನ್ನನ್ನೂ, ಸತ್ಯದಲ್ಲಿರಿಸಿಕೊಳ್ಳಬೇಕೆಂಬ ಆಸೆಯು ನಿನಗಿದ್ದರೆ, ಈ ಕಾರ್ಯಗಳನ್ನು ಈಗಲೇ ನಡೆಸುವ ಪ್ರಯತ್ನವನ್ನು ಮಾಡು. ನಿನ್ನ ತಂದೆ ಯು ಪ್ರತಿಜ್ಞೆಮಾಡಿಕೊಟ್ಟುದನ್ನು ನೀನು ನಡೆಸಬೇಕು! ಹದಿನಾಲ್ಕುವರ್ಷ ಗಳವರೆಗೆ ನೀನು ಕಾಡಿನಲ್ಲಿರಬೇಕು. ಈಗ ನಿನ್ನ ಅಭಿಷೇಕಕ್ಕಾಗಿ ಸಿದ್ಧಪಡಿ ಸಲ್ಪಟ್ಟಿರುವ ಸಾಮಗ್ರಿಗಳಿಂದಲೇ, ಭರತನಿಗೆ ಅಭಿಷೇಕವು ನಡೆಯುವಂತೆ ಮಾಡಬೇಕು. ನೀನು ಮನಃಪೂರ್ವಕವಾಗಿ ರಾಜ್ಯಾಭಿಷೇಕವನ್ನು ಬಿಟ್ಟು,ಜಡೆ ಗಳನ್ನು ಧರಿಸಿ, ಕೃಷ್ಣಾಜಿನವನ್ನುಟ್ಟು, ಹದಿನಾಲ್ಕುವರ್ಷಗಳವರೆಗೆ ದಂಡ ಕಾರಣ್ಯದಲ್ಲಿರುವುದಕ್ಕೆ ಅನುಮತಿಸಬೇಕು. ಭರತನು ಕೋಸಲದೇಶದಲ್ಲಿ

ರಾಜ್ಯಭಾರವನ್ನು ವಹಿಸಿ, ಈ ಭೂಮಿಯನ್ನು ಪಾಲಿಸುತ್ತಿರಲಿ! ಸಮಸ್ತರತ್ನ ಗಳಿಂದ ಸಮೃದ್ಧವಾಗಿ, ರಥ, ಗಜ, ತುರಗಾದಿ ಸೈನ್ಯಸಮೃದ್ಧಿಯಿಂದ ಕೂಡಿದ ಈ ರಾಷ್ಟ್ರವನ್ನು ಭರತನೇ ಅನುಭವಿಸಲಿ! ರಾಜನಿಗೆ ನಾನು ಇದೇ ವಿಷಯವನ್ನು ತಿಳಿಸಿದಾಗ, ನಿನ್ನಲ್ಲಿರುವ ಅಸಾಧಾರಣವಾತ್ಸಲ್ಯದಿಂದ ಈತನು ನಿನ್ನನ್ನು ಬಿಟ್ಟಿರಲಾರದೆ,ದುಃಖದಿಂದ ಕಂದಿದ ಮುಖವುಳ್ಳವನಾಗಿ ನಾಚಿಕೆಯಿಂದ ನಿನ್ನ ಮುಖವನ್ನು ನೋಡಲಾರದೆ ಇರುವನು. ಈಗ ದಶರಥನು ನಿನಗೆ ಹೇಳಬೇಕಾದ ಆಜ್ಞೆಯೇ ಇದು! ರಾಜಶ್ರೇಷ್ಠನೆನಿಸಿಕೊಂಡಿರುವ ಆತನ ಸತ್ಯಕ್ಕೆ ಲೋಪವಿಲ್ಲದಂತೆ ಮಾಡು." ಎಂದಳು. ಹೀಗೆ ಕೈಕೇಯಿಯು ಕ್ರೂರವಾಕ್ಯವನ್ನಾಡುತಿದ್ದರೂ, ರಾಮನ ಮನಸ್ಸಿನಲ್ಲಿ ದುಃಖವಾಗಲಿ, ವ್ಯಥೆಯಾಗಲಿ, ಸ್ವಲ್ಪವೂ ಉಂಟಾಗಲಿಲ್ಲ. ಮಹಾನುಭಾವನಾದ ಆತನ ಮುಖದಲ್ಲಿ ಯಾವುದೊಂದು ವಿಕಾರವಾಗಲಿ ಹುಟ್ಟಲಿಲ್ಲ. ಅತ್ತಲಾಗಿ ದಶರಥನು ಮಹಾತ್ಮನಾದ ರಾಮನ ಧೈರ್ಯಸಾಹಸಗಳನ್ನು ನೋಡಿ ಮತ್ತಷ್ಟು ವ್ಯಸನದಿಂದ ಬೇಯುತಿದ್ದನು. ಇಲ್ಲಿಗೆ ಹದಿನೆಂಟನೆಯ ಸರ್ಗವು.

---

{ ತಾನು ಕಾಡಿಗೆ ಹೋಗುವುದಾಗಿ ರಾಮನು ಕೈಕೇಯಿಗೆ ಹೇಳಿದುದು. }

ಶತ್ರುನಾಶಕನಾದ ರಾಮನು, ಮೃತ್ಯುವಿನಂತೆ ಅತಿಕ್ರೂರವಾದ ಈ ಮಾತನ್ನು ಕೇಳಿದರೂ, ಮನಸ್ಸಿನಲ್ಲಿ ಸ್ವಲ್ಪವಾದರೂ ವ್ಯಸನವನ್ನು ತಾಳದೆ ಉಲ್ಲಾಸದಿಂದ ಕೈಕೇಯಿಯನ್ನು ನೋಡಿ"ಎಲೆ ತಾಯಿ!ಅದಕ್ಕೆ ತಡೆಯೇನು? ಈ ಅಲ್ಪವಿಚಾರಕ್ಕಾಗಿ ಇಷ್ಟು ವ್ಯಸನವೇಕೆ? ಈ ರಾಜ್ಯವನ್ನು ಭರತನೇ ಅನುಭವಿಸಲಿ! ತಂದೆಯು ನಿನಗೆ ಪ್ರತಿಜ್ಞೆಮಾಡಿಕೊಟ್ಟಿರುವಂತೆಯೇ ನಡೆಸಲಿ! ನಾನು ಜಟಾವಲ್ಕಲಗಳನ್ನು ಧರಿಸಿ ಕಾಡಿಗೆ ಹೋಗುವೆನು! ಅವೆಲ್ಲವೂ ಹಾಗಿರಲಿ!ನಮ್ಮ ತಂದೆಯು ಈಗ ನನ್ನೊಡನೆ ಎಂದಿನಂತೆ ಸುಮುಖವಾಗಿಮಾತಾಡದಿರುವುದಕ್ಕೆ ಕಾರಣವೇನು? ಮೊದಲು ಆ ವಿಷಯವನ್ನು ಯಥಾರ್ಥವಾಗಿ ನನಗೆ ತಿಳಿಸು! ಎಲೆಜನನಿ! ನೀನು ಯಾವಭಾಗದಲ್ಲಿಯೂ ಚಿಂತಿಸಬೇಕಾದುದಿಲ್ಲ! ಇದೋ! ನಿನ್ನಿದಿರಾಗಿಯೇ ಹೇಳುವೆನು. ಈಗ ನಿನ್ನ ಮುಂದೆಯೇ

ನಾನು ಜಡೆಯನ್ನೂ, ನಾರುಮಡಿಗಳನ್ನೂ ಧರಿಸಿ ವನಪ್ರಯಾಣಕ್ಕೆ ಸಿದ್ಧನಾಗುವೆನು. ತಂದೆತಾಯಿಗಳಾದ ನಿಮ್ಮ ಮನಸ್ಸನ್ನು ಸಂತೋಷಪಡಿಸುವುದಕ್ಕಿಂತಲೂ ನನಗೆ ಬೇರೆ ಉತ್ತಮಧರ್ಮವಾವುದು ? ಯಾವಾಗಲೂ ನನಗೆ ಶ್ರೇಯಃಕಾಂಕ್ಷಿಯಾಗಿ, ಗುರುವಾಗಿ, ತಂದೆಯಾಗಿ, ಪ್ರಭುವಾಗಿರುವ ಈತನು ಆಜ್ಞೆಯನ್ನು ಕೊಟ್ಟಪಕ್ಷದಲ್ಲಿ ಯಾವ ಕಾರ್ಯವನ್ನು ತಾನೇ ನಾನು ಮಾಡದಿರುವೆನು? ನೀನು ಮಾಡಿದ ಉಪಕಾರವನ್ನು ಆತನು ಎಂದಿಗೂ ಮರೆಯಲಾರನು. ಆದರೆ ಭರತನಿಗೆ ರಾಜ್ಯಾಭಿಷೇಕಮಾಡಬೇಕೆಂಬ ವಿಷಯವನ್ನು, ತಂದೆಯು ತನ್ನ ಬಾಯಿಂದಲೇ ನನಗೆ ತಿಳಿಸದೆ ವ್ಯಸನಪಡುತ್ತಿರುವುದಕ್ಕಾಗಿ ನನ್ನ ಮನಸ್ಸು ಕಳವಳಿಸುತ್ತಿರುವುದು. ಪರಮಪ್ರೀತಿಗೆ ಪಾತ್ರನಾದ ನನ್ನಲ್ಲಿಯೂ ಈತನು ತನ್ನ ಮನೋಭಾವವನ್ನು ಸ್ಪಷ್ಟವಾಗಿ ತಿಳಿಸದೆ ಮರೆಸಿಟ್ಟಿರುವನೆಂಬುದೊಂದಕ್ಕಾಗಿಯೇ ನಾನು ಸಂಕಟಪಡುವೆನು. ಎಲೆ ಜನನಿ! ನನ್ನೊಡಹುಟ್ಟಿದ ಭರತನಲ್ಲಿ ನನಗೆ ಭೇದಬುದ್ಧಿಯುಂಟೆ?ಆತನಿಗೆ ಪ್ರಿಯವಾದ ಕಾರ್ಯವನ್ನು ನಡೆಸುವುದರಲ್ಲಿ ನನಗೆ ಇತರರು ಹೇಳಬೇಕಾದುದೇನು ? ಅವನಿಗಾಗಿ ನಾನು ರಾಜ್ಯವನ್ನಾಗಲಿ, ಧನವನ್ನಾಗಲಿ, ಸೀತೆಯನ್ನಾಗಲಿ, ಕೊನೆಗೆ ನನ್ನ ಪ್ರಾಣಗಳನ್ನೇ ಆಗಲಿ, ಸಂತೋಷದಿಂದ ಕೊಡಲು ಸಿದ್ಧನಾಗಿರುವೆನು. ಈ ವಿಷಯದಲ್ಲಿ ಹೆತ್ತತಂದೆಯೇ ನನಗೆ ಪ್ರೇರಿಸುವುದಾದರೆ ಹೇಳತಕ್ಕುದೇನು? ಇದಲ್ಲದೆ ಇದರಿಂದ ನಿನ್ನ ಮನಸ್ಸಿಗೂ ತೃಪ್ತಿಯುಂಟಾಗಿ, ನಮ್ಮಿಬ್ಬರ ಪ್ರತಿಜ್ಞೆಯೂ ಪರಿಪಾಲಿತವಾಗುವುದಾದರೆ, ನಾನು ಅದನ್ನು ನಡೆಸದಿರುವೆನೆ? ಇದಕ್ಕಾಗಿ ನೀನು ಸ್ವಲ್ಪವೂ ಚಿಂತಿಸಬೇಡ! ತಂದೆಯನ್ನು ಸಮಾಧಾನಪಡಿಸು! ಎಲೆ ಮಾತೆ! ಆಹಾ! ಇದೇನು ? ತಂದೆಯ ಈ ದುರವಸ್ಥೆಯನ್ನು ನೋಡಿಯೂ ನೀನು ಸುಮ್ಮನಿರಬಹುದೆ? ಅದೋ! ನೋಡು ! ರಾಜಾಧಿರಾಜನೆನಿಸಿದ ಆತನು, ತಲೆಯನ್ನು ತಗ್ಗಿಸಿಕೊಂಡು ನೆಲವನ್ನು ನೋಡುತ್ತ ಕಣ್ಣೀರನ್ನು ಸುರಿಸುತ್ತಿರುವನು ! ಈಗಲೇ ರಾಜಾಜ್ಞೆಯಿಂದ ಬಳ್ಳೇವೇಗವುಳ್ಳ ಕುದುರೆಗಳಮೇಲೆ ದೂತರನ್ನು ಕಳುಹಿಸಿ ಭರತನನ್ನು ಮಾವನ ಮನೆಯಿಂದ ಕರೆತರಿಸು. ಇದೋ? ನಾನೂ ಈಗಲೇ ದಂಡಕಾರಣ್ಯಾದಕಡೆಗೆ ಹೊರಡುವೆನು. ತಂದೆಯ ಮಾತನ್ನೂ ನಿರೀಕ್ಷಿಸುತ್ತಿರ

ಬೇಕಾದುದಿಲ್ಲ. ನಿನ್ನ ಇಷ್ಟದಂತೆ ಹದಿನಾಲ್ಕುವರ್ಷಗಳವರೆಗೆ ಅಲ್ಲಿಯೇ ಇದ್ದುಬರುವೆನು.”ಎಂದನು. ರಾಮನ ಈಮಾತನ್ನು ಕೇಳಿ ಕೈಕೇಯಿಗೆ ಪರಮ ಸಂತೋಷವುಂಟಾಯಿತು. ಆತನನ್ನು ವನಪ್ರಯಾಣಕ್ಕಾಗಿ ಮತ್ತಷ್ಟು ತ್ವರೆಪಡಿಸುತ್ತ, ರಾಮಾ! ಹಾಗೆಯೇ ಆಗಲಿ! ಈಗಲೇ ಕುದುರೆಯಮೇಲೆ ದೂತರನ್ನು ಕಳುಹಿಸಿ ಮಾವನ ಮನೆಯಿಂದ ಭರತನನ್ನು ಕರೆತರಿಸುವೆನು. ಈ ವಿಷಯದಲ್ಲಿ ನೀನೇನೂ ನನಗೆ ಹೇಳಬೇಕಾದುದಿಲ್ಲ.” ಎಂದು ಹೇಳಿ, ತನ್ನ ಮನಸ್ಸಿನಲ್ಲಿ ತಾನು“ಭರತನಿಗಾದರೋ ಅಣ್ಣನಲ್ಲಿ ಬಹಳಭಕ್ತಿಯಿರುವುದು. ಅವನು ಬರುವವರೆಗೂ ರಾಮನು ಇಲ್ಲಿಯೇ ಇದ್ದುಬಿಟ್ಟರೆ,ಇವನನ್ನು ಕಾಡಿಗೆ ಕಳುಹಿಸುವುದಕ್ಕೆ ಭರತನು ಎಂದಿಗೂ ಒಪ್ಪಲಾರನು. ಆಗ ಕೆಲಸವೇ ಕೆಡುವುದು.” ಎಂದು ಯೋಚಿಸಿ, ರಾಮನನ್ನು ಕುರಿತು ಪುನಃ“ವತ್ಸರಾಮಾ! ಕಾಡಿಗೆ ಹೋಗುವ ವಿಷಯದಲ್ಲಿ ನೀನೇ ಅತ್ಯಾತುರದಿಂದಿರುವಾಗ, ನಿನ್ನ ಆ ಅಭಿಲಾಷೆಯನ್ನು ತಪ್ಪಿಸುವುದು ನನಗೆ ಉಚಿತವಲ್ಲ. ಆದುದರಿಂದ ನಿನ್ನ ಕೆಲಸದಲ್ಲಿ ನೀನು ತ್ವರೆಪಡು! ನೀನು ಪುರುಷಶ್ರೇಷ್ಠನೆಂದೂ, ಪಿತೃಭಕ್ತಿಯುಳ್ಳವನೆಂದೂ ಖ್ಯಾತಿಹೊಂದಿರುವೆ! ಹಾಗಿದ್ದರೂ ಹೇಳಿದ ಕೆಲಸವನ್ನು ನೀನು ನಡೆಸುವೆಯೋ ಇಲ್ಲವೋ ಎಂದು ದಶರಥನಿಗೆ ನಿನ್ನಲ್ಲಿ ಸಂದೇಹವು ಹುಟ್ಟಿರುವುದರಿಂದ,ನಿನ್ನೊಡನೆ ಬಾಯಿಬಿಟ್ಟು ಹೇಳುವುದಕ್ಕೆ ಸಂಕೋಚಪಡುತ್ತಿರುವನು. ಈತನಿಗೆ ಬೇರೆವಿಧವಾದ ವ್ಯಸನವಾಗಲಿ, ಕೋಪವಾಗಲಿ, ಇಲ್ಲ! ಇದಕ್ಕಾಗಿ ನೀನು ವಿಚಾರಪಡಬೇಕಾದುದಿಲ್ಲ. ನಿನ್ನಷ್ಟಕ್ಕೆ ನೀನೇ ಇತ್ತಲಾಗಿ ಕಾಡಿಗೆ ಹೊರಟರೆ, ಆಗ ಆತನ ಮನಸ್ಸಿಗೆ ಸಮಾಧಾನವಾಗುವುದು. ಎಲೆ ವತ್ಸನೆ! ನೀನು ಈ ಪಟ್ಟಣವನ್ನು ಬಿಟ್ಟು ಹೊರಡುವವರೆಗೂ, ಆತನು ಸ್ನಾನಭೋಜನಾದಿಗಳೊಂದನ್ನೂ ಮಾಡಿಕೊಳ್ಳಲಾರನು”ಎಂದಳು ಈಕಪಟವಾಕ್ಯವನ್ನು ಕೇಳುತಿದ್ದರಾಜನು“ಹಾ! ಕಷ್ಟವೆ!”ಎಂದು ನಿಟ್ಟುಸಿರುಬಿಟ್ಟು,ದುಃಖದಿಂದ ಕಣ್ಣೀರನ್ನು ಸುರಿಸುತ್ತ, ತಾನು ಕುಳಿತಿದ್ದ ಚಿನ್ನದ ಮಂಚದಮೇಲೆಯೇ ಪ್ರಜ್ಞೆತಪ್ಪಿಬಿದ್ದನು.ರಾಮನಾದರೋ, ಕೈಕೇಯಿಯು ಹೇಳಿದ ಕ್ರೂರವಾಕ್ಯವನ್ನೂ, ದಶರಥನು ದುಃಖವನ್ನು ತಡೆಯಲಾರದೆ ಮೂರ್ಛೆಬಿದ್ದುದನ್ನೂ ನೋಡಿ, ಮುಂದೆ ಬಂದು,ತಂದೆಯನ್ನು ಮೇಲಕ್ಕೆತ್ತಿ,

ಕಶೆಯಿಂದ ಹೊಡೆಯಲ್ಪಟ್ಟ ಕುದುರೆಯಂತೆ ಬೆದರಿ. ಆ ಕ್ಷಣವೇ ಕಾಡಿಗೆ ಹೊರಡುವುಕ್ಕೆ ಯತ್ನಿಸಿದನು. ಆದರೆ ಕೈಕೇಯಿಯು ಹೇಳಿದ ವಾಕ್ಯವು ಅತ್ಯಂತ ಕಠೋರವಾಗಿದ್ದರೂ, ಮನಸ್ಸಿನಲ್ಲಿ ಸ್ವಲ್ಪವೂ ವ್ಯಥೆಯನ್ನು ಹೊಂದದೆ, ಅವಳನ್ನು ಕುರಿತು, ‚‚ಎಲೆ ಜನನಿ ! ನನಗೆ*ನಿಜವಾಗಿಯೂ ರಾಜ್ಯದಲ್ಲಿ ಆಸೆಯಿಲ್ಲ! ಕೊನೆಗೆ ಈ ಲೋಕದಲ್ಲಿರಬೇಕೆಂಬ ಆಸೆಯೂ ನನಗಿಲ್ಲ ! ನನ್ನನ್ನು ಋಷಿಗಳಿಗೆ ಸಮಾನನೆಂದು ತಿಳಿ ! ನನಗೆ ಧರ್ಮವೊಂದೇ ಉದ್ದೇಶ್ಯವೇಹೊರತು ಬೇರೊಂದರಲ್ಲಿಯೂ ದೃಷ್ಟಿಯಿಲ್ಲ! ಪೂಜ್ಯನಾದ ಈ ನನ್ನ ತಂದೆಗೆ ನನ್ನಿಂದ ನಡೆಯಬೇಕಾದ ಪ್ರಿಯಕಾರ್ಯವು ಯಾವುದಿದ್ದರೂ. ಅದನ್ನು ನಡೆಸುವುದಕ್ಕೆ ಸಿದ್ಧನಾಗಿರುವೆನು. ನನ್ನ ಪ್ರಾಣಹಾನಿಗೆ ಕಾರಣವಾಗಿದ್ದರೂ ಅದನ್ನು ನಡೆಸುವುದರಲ್ಲಿ ಸಂದೇಹವಿಲ್ಲ. ತಂದೆಯನ್ನು ಉಪಚರಿಸುವುದು, ತಂದೆಯ ಆಜ್ಞೆಯನ್ನು ನಡೆಸುವುದು, ಇವೆರಡಕ್ಕಿಂತಲೂ ಉತ್ತಮವಾದ ಧರ್ಮವು ಬೇರೊಂದಿಲ್ಲವೆಂದೇ ನನ್ನ ಅಭಿಪ್ರಾಯವು. ತಂದೆಯು ತನ್ನ ಬಾಯಿಂದ ನನಗೆ ಹೇಳದಿದ್ದರೂ ಚಿಂತೆಯಿಲ್ಲ. ನಿನ್ನ ಮಾತಿನಂತೆ ನಾನು ಹದಿನಾಲ್ಕು ವರ್ಷಗಳವರೆಗೆ ನಿರ್ಜನವಾದ ವನದಲ್ಲಿಯೇ ವಾಸಮಾಡುತ್ತಿರುವೆನು. ಎಲೆ ಜನನಿ ! ನನ್ನ ಸ್ವಭಾವವನ್ನು ನೀನು ಕಂಡಿಲ್ಲವೆ ? ಈ ನಿನ್ನ ಉದ್ದೇಶವನ್ನು ನೀನು ಮೊದಲು ನನ್ನೊಡನೆಯೇ ಹೇಳಬಹುದಾಗಿತ್ತಲ್ಲವೆ ! ನಿನ್ನ ಪುತ್ರನಾದ ನನಗೆ ಆಜ್ಞೆಮಾಡುವುದಕ್ಕೆ ನಿನಗೆ ಅಧಿಕಾರವಿಲ್ಲವೆ ? ನಿನ್ನ ಮಾತನ್ನು ನಾನು ಎಂದಾದರೂ ತಿರಸ್ಕರಿಸಿದ್ದೆನೆ ? ಇದೆಲ್ಲವನ್ನೂ ನೀನು ಸ್ಪಷ್ಟವಾಗಿ ತಿಳಿದಿದ್ದರೂ. ಭರತನಿಗೆ ಪಟ್ಟಾಭಿಷೇಕವನ್ನು ಮಾಡಬೇಕೆಂದೂ, ನನ್ನನ್ನು ಕಾಡಿಗೆ ಕಳುಹಿಸಬೇಕೆಂದೂ, ರಾಜನನ್ನು ನಿರ್ಬಂಧಿಸಿ ಕೇಳಬೇಕಾದ ಆವಶ್ಯಕವೇನಿತ್ತು ? ಇದಲ್ಲದೆ ಈ ಸ್ವಲ್ಪಕಾರ್ಯಕ್ಕಾಗಿ ನೀನು ಬಹುಕಾಲದಿಂದ

---

* ಭರತನು ಬಂದುಬಿಟ್ಟರೆ, ಆತನೇ ರಾಜ್ಯವನ್ನು ತನಗೆ ಕೊಟ್ಟುಬಿಡುವನೆಂದು ತಾನು ಅಶೋತ್ತರವನ್ನಿಟ್ಟುಕೊಂಡಿರುವುದಕ್ಕಾಗಿ ಕೈಕೇಯಿಯು ಶಂಕಿಸಬಹುದೆಂದೂಹಿಸಿ, ಈಗ ರಾಮನು ಈ ಮಾತನ್ನು ಹೇಳಿರುವನು. ಇದರಿಂದ, ಆತನಿಗೆ ಹಣದಲ್ಲಿಯಾಗಲಿ, ರಾಜ್ಯದಲ್ಲಿಯಾಗಲಿ, ಆಸೆಯೇ ಇಲ್ಲವೆಂದು ತಿಳಿದುಬಂದುದರಿಂದ, ಈಗ ಆಕೆಗೆ ಸಂಪೂರ್ಣವಾಗಿ ಆ ಶಂಕೆಯು ನಿವಾರಿತವಾಯಿತೆಂದು ತಿಳಿಯಬೇಕು.

ನಿಕ್ಷೇಪದಂತೆ ಕಾಪಾಡಿಟ್ಟಿದ್ದ ಆ ಎರಡುವರಗಳನ್ನು ಈಡುಮಾಡಬೇಕಾದ ಆವಶ್ಯಕವೇನಿತ್ತು? ನನ್ನಲ್ಲಿ ಇಷ್ಟುಮಾತ್ರವಾದರೂ ಸದ್ಗುಣವಿರುವುದೆಂದು ನೀನು ಎಣಿಸಲಿಲ್ಲವೆಂದೂ ತೋರುತ್ತಿದೆ! ಅದು ಹೇಗಾದರೂ ಹೋಗಲಿ! ಈಗಲೇ ಕಾಡಿಗೆ ಹೊರಡೆಂದು ನೀನು ನನ್ನನ್ನು ತ್ವರೆಪಡಿಸಿದೆಯಲ್ಲವೆ? ನಿನ್ನ ಆಜ್ಞೆಯನ್ನು ಶಿರಸಾವಹಿಸಿ ಈಗಲೇ ನಡೆಸುವೆನು. ಆದರೆ ನನ್ನ ಹೆತ್ತತಾಯಿಯಾದ ಕೌಸಲ್ಯೆಗೆ ಈ ವಿಷಯವನ್ನು ತಿಳಿಸಿ, ಅವಳ ಅನುಮತಿಯನ್ನು ಪಡೆದು, ನನ್ನ ಪ್ರಿಯಪತ್ನಿಯಾದ ಸೀತೆಯನ್ನೂ ಸಮಾಧಾನಪಡಿಸಿ ಬರಬೇಕೆಂದಿರುವೆನು. ಅಷ್ಟರವರೆಗೆ ನೀನು ನನ್ನನ್ನು ಬಿಟ್ಟುಕೊಡಬೇಕು. ಆ ಮೇಲೆ ನಿಮಿಷಮಾತ್ರವೂ ಇಲ್ಲಿ ನಿಲ್ಲುವವನಲ್ಲ. ಒಡನೆಯೇ*ದಂಡಕಾರಣ್ಯಕ್ಕೆ ಹೋಗುವೆನು. ಎಲೆ ಜನನಿ! ಮುಖ್ಯವಾಗಿ ನಿನ್ನಲ್ಲಿ ನಾನು ಪ್ರಾರ್ಥಿಸಿಕೇಳಿಕೊಳ್ಳಬೇಕಾದ ವಿಷಯವೊಂದಿರುವುದು! ಭರತನು ರಾಜ್ಯವನ್ನು ವಹಿಸಿದಮೇಲೆ ಧರ್ಮದಿಂದ ಪ್ರಜೆಗಳನ್ನು ಪಾಲಿಸುತ್ತಿರುವುದರೊಡನೆ, ವೃದ್ಧನಾದ ತಂದೆಗೆ ತಕ್ಕ ಶುಶ್ರೂಷೆಗಳನ್ನೂ ಮಾಡುತ್ತಿರುವಂತೆ ನೀನು ನೋಡಿಕೊಳ್ಳಬೇಕು. ಪಿತೃಶುಶ್ರೂಷೆಯೆಂಬುದಕ್ಕಿಂತಲೂ ಅನಾದಿಯಾದ ಧರ್ಮವು ಬೇರೊಂದೂ ಇಲ್ಲ." ಎಂದನು. ರಾಮನು ಹೇಳಿದ ಈ ಮಾತುಗಳು ಅತ್ತಲಾಗಿ ದಶರಥನ ಕಿವಿಗೆ ಬಿದ್ದೊಡನೆ ಅತನಿಗೆ ದುಃಖವು ಮತ್ತಷ್ಟು ಹೆಚ್ಚಿತು. ತನ್ನ ಗಂಭೀರಸ್ವಭಾವಕ್ಕೆ ತಕ್ಕಂತೆ ಆತನು ಇದುವರೆಗೆ ದುಃಖವನ್ನು ಮರೆಸಿಕೊಂಡಿದ್ದರೂ, ರಾಮನು ಹೇಳಿದ ಆ ಮೃದುವಾಕ್ಯವನ್ನು ಕೇಳಿದಮೇಲೆ, ಅದನ್ನು ಮರೆಸಿಟ್ಟುಕೊಳ್ಳಲಾರದೆ, ಧಾರೆಧಾರೆಯಾಗಿ ಕಣ್ಣೀರನ್ನು ಬಿಟ್ಟು,ಗಟ್ಟಿಯಾಗಿ ಅಳುವುದಕ್ಕಾರಂಭಿಸಿ,ಮೂರ್ಛೆಬಿದ್ದನು.ಹೀಗೆದುಃಖದಿಂದ ಮೈಗಾಣದ ದಶರಥನನ್ನು ನೋಡಿ, ರಾಮನು ಆತನಬಳಿಗೆ ಬಂದು, ಮೂರ್ಛೆಹೋಗಿದ್ದ ಆತನ ಕಾಲುಗಳನ್ನು ಹಿಡಿದು ನಮಸ್ಕರಿಸಿ, ಕೈಕೇಯಿಗೂ ಪ್ರಣಾಮಮಾಡಿ, ಅವರಿಬ್ಬರನ್ನೂ ಪ್ರದಕ್ಷಿಣಮಾಡಿ, ಅಕ್ಷಣವೇ ಆ ಅಂತಃಪುರವ

---

*ದಂಡಕನೆಂಬವನು ಇಕ್ಷ್ವಾಕುವಿನ ಮಗನು. ಆತನ ರಾಷ್ಟ್ರಕ್ಕೂ ದಂಡಕವೆಂದು ಹೆಸರು. ಶುಕ್ರಶಾಪದಿಂದ ಆತನ ರಾಷ್ಟ್ರವೆಲ್ಲವೂ ಕ್ರಮವಾಗಿ ಅರಣ್ಯವಾಯಿತು. ಅದೇ ದಂಡಕಾರಣ್ಯವೆನಿಸುವುದು.

ನ್ನು ಬಿಟ್ಟುಹೊರಟನು. ತಾನು ಹಿಂತಿರುಗಿ ಬರುವುದನ್ನೇ ನಿರೀಕ್ಷಿಸುತ್ತ,ಬಾಗಿಲಲ್ಲಿ ನಿಂತಿದ್ದ ತನ್ನ ಮಿತ್ರಮಂಡಲಿಯನ್ನು ನೋಡಿದನು. ಸುಮಿತ್ರಾದೇವಿಗೆ ಪ್ರಿಯಪುತ್ರನಾದ ಲಕ್ಷ್ಮಣನಾದರೋ, ಅಲ್ಲಿ ನಡೆದ ವ್ಯಸನಕರವಾದ ವಿಷಯಗಳೆಲ್ಲವನ್ನೂ ತಾನೂ ಪ್ರತ್ಯಕ್ಷದಲ್ಲಿ ನಿಂತುನೋಡಿದ್ದುದರಿಂದ, ದುಃಖವನ್ನು ತಡೆಯಲಾರದೆ, ಧಾರೆಧಾರೆಯಾಗಿ ಕಣ್ಣಿನಲ್ಲಿ ನೀರನ್ನು ಸುರಿಸುತ್ತಾ,ರಾಮನನ್ನು ಹಿಂಬಾಲಿಸಿಬರುತಿದ್ದನು. ಆದರೆ ಲಕ್ಷ್ಮಣನ ಮುಖದಲ್ಲಿ ವ್ಯಸನದೊಡನೆ *ಕೋಪವೂ ಕಾಣಿಸುತಿತ್ತು. ಹೀಗೆ ಅವರಿಬ್ಬರೂ ಅಲ್ಲಿಂದ ಹೊರಟು ಬರುವಾಗ, ಅಲ್ಲಿ ಅಭಿಷೇಕಕ್ಕಾಗಿ ಸಿದ್ಧಪಡಿಸಲ್ಪಟ್ಟಿದ್ದ ಉಪಕರಣಸಾಮಗ್ರಿಗಳನ್ನು ಕಂಡರು. ರಾಮನು ಅವುಗಳನ್ನು †ಪ್ರದಕ್ಷಿಣಮಾಡಿ, ಅವುಗಳಲ್ಲಿ ಸ್ವಲ್ಪವಾದರೂ ಅಪೇಕ್ಷೆಯನ್ನು ತೋರಿಸದೆ, ಅವುಗಳನ್ನು ಕಣ್ಣೆತ್ತಿಯೂ ನೋಡದೆ, ಭರತನ ಶ್ರೇಯೋಭಿವೃದ್ಧಿಯನ್ನೇ ಮನಸ್ಸಿನಲ್ಲಿ ಚಿಂತಿಸುತ್ತಾ ಮೆಲ್ಲಗೆ ಬರುತ್ತಿದ್ದನು. ಲೋಕೈಕನಾಥನಾದ ಆ ರಾಮನು ತ್ರೈಲೋಕ್ಯದ ರಾಜ್ಯಲಕ್ಷ್ಮಿಯನ್ನೇ ತನಗಧೀನವಾಗಿ ಮಾಡಿಕೊಂಡಿರುವಾಗ, ಅದರಲ್ಲಿ ಏಕದೇಶವಾದ ಕೋಸಲರಾಜ್ಯವು ತನಗೆ ತಪ್ಪಿಹೋದದಕ್ಕಾಗಿ ವ್ಯಸನಪಡುವನೆ? ಲೋಕವೆಲ್ಲವನ್ನೂ ಆನಂದಪಡಿಸತಕ್ಕ ಸ್ವಾಭಾವಿಕವಾದ ಆತನ ಮುಖಕಾಂತಿಯು, ರಾಜ್ಯಭ್ರಂಶವೆಂಬ ಈ ಸ್ವಲ್ಪಕಾರಣಕ್ಕಾಗಿ ಹೇಗೆ ಕುಂದುವುದು?ಲೋಕವೆಲ್ಲವನ್ನೂ ಆಹ್ಲಾದಪಡಿಸತಕ್ಕ ಚಂದ್ರನ ಕಾಂತಿಯು,ಅಂಧಕಾರದಿಂದ ಕೂಡಿದ ರಾತ್ರಿಯಲ್ಲಿ ಮತ್ತಷ್ಟು ಹೆಚ್ಚಿ ಬರುವಂತೆ, ರಾಮನ ಮುಖದಲ್ಲಿ ಉಲ್ಲಾಸವೇ ಉಕ್ಕುತಿತ್ತು. ರಾಜ್ಯವನ್ನು ಬಿಟ್ಟು ಕಾಡಿಗೆ ಹೊರಡುವಾಗಲೂ, ಆತನ ಮುಖವು ಕಳೆಗುಂದಲಿಲ್ಲ. ಮಾನಾವಮಾನಗಳನ್ನು ಲಕ್ಷ್ಯಮಾಡದೆ, ಲೋಕವ್ಯಾಪಾರವನ್ನೇ ಬಿಟ್ಟಿರುವ ಮಹಾಯೋಗಿಯಂತೆ,ಜಿತೇಂ

---

* ಇದರಿಂದ ರಾಮಲಕ್ಷ್ಮಣರಿಗಿರುವ ಗುಣತಾರತಮ್ಯವು ಸ್ವಲ್ಪಮಟ್ಟಿಗೆ ಸೂಚಿತವಾಗುವುದು.

† ಮಂಗಳವಸ್ತುಗಳನ್ನೂ, ದೇವಾಲಯಗಳನ್ನೂ, ಚತುಷ್ಪಥಗಳನ್ನೂ ಕಂಡಾಗ, ಅವುಗಳನ್ನು ಬಲಕ್ಕೆ ಬಿಟ್ಟುಕೊಂಡು, ಪ್ರದಕ್ಷಿಣವಾಗಿ ಹೋಗಬೇಕೆಂಬುದು ಶಾಸ್ತ್ರವಿಧಿಯು.

ಧ್ರಿಯನಾಗಿ, ಗಂಭೀರಸ್ವಭಾವವನ್ನೇ ತೋರಿಸುತಿದ್ದನು. ಹೀಗೆ ಧೀರನಾದ ರಾಮನು ಹೊರಟುಬರುವಾಗ, ಉಪಚಾರಾರ್ಥವಾಗಿ ತನಗೆ ತಂದು ಹಿಡಿದ ಛತ್ರಚಾಮರಗಳನ್ನು ತಿರಸ್ಕರಿಸಿದನು. ತನ್ನನ್ನು ಹಿಂಬಾಲಿಸಿ ಬರುತಿದ್ದ ಪುರಜನವನ್ನೂ ಪರಿಜನರನ್ನೂ ಹಿಂಪಕ್ಕೆ ಕಳುಹಿಸಿಬಿಟ್ಟನು. ಸಿದ್ಧವಾದ ರಥವನ್ನೂ ಏರಲಿಲ್ಲ. ತನಗೆ ಬಂದೊದಗಿದ ಈ ಕಷ್ಟಕ್ಕಾಗಿ ತಾನು ದುಃಖಿಸದಿದ್ದರೂ, ತನ್ನನ್ನು ಪ್ರೀತಿಸುತಿದ್ದ ಪ್ರಜೆಗಳಿಗೆ ಇದರಿಂದುಂಟಾಗಬಹುದಾದ ವ್ಯಸನವನ್ನು ಕುರಿತು ಚಿಂತಿಸುತ್ತಿದ್ದನು. ಆದರೆ ಆ ದುಃಖವನ್ನೂ ಹೊರಕ್ಕೆ ಕಾಣಿಸಿಕೊಳ್ಳದೆ, ಇಂದ್ರಿಯಗಳನ್ನು ನಿಗ್ರಹಿಸಿ, ವ್ಯಸನಕರವಾದ ಈ ವಿಷಯವನ್ನು ತಾಯಿಗೆ ತಿಳಿಸುವುದಕ್ಕಾಗಿ ಕೌಸಲ್ಯೆಯ ಅಂತಃಪುರವನ್ನು ಪ್ರವೇಶಿಸಿದನು. ರಾಮಾಭಿಷೇಕವು ನಡೆಯುವುದೆಂಬ ಸಂತೋಷಕ್ಕಾಗಿ ಅಲ್ಲಲ್ಲಿ ಅಲಂಕರಿಸಿಕೊಂಡು ಸುತ್ತಲೂ ನೆರೆದಿದ್ದ ಜನರೆಲ್ಲರೂ, ಮಹಾಧೀರನಾದ ಈ ರಾಮನ ಮುಖದಲ್ಲಿ ಯಾವ ವ್ಯಸನಚಿಹ್ನಗಳನ್ನೂ ಕಾಣದಿದ್ದುದರಿಂದ, ಸಂತೋಷಭರಿತರಾಗಿಯೇ ಇದ್ದರು. ಶರತ್ಕಾಲದ ಚಂದ್ರನಂತೆ ಸ್ವಾಭಾವಿಕವಾದ ತನ್ನ ಮುಖಕಾಂತಿಯನ್ನು ಕುಂದಿಸದೆ, ಸಂತೋಷವನ್ನೇ ಕಾಣಿಸುತ್ತ, ತನ್ನ ಸುತ್ತಲೂ ನೆರೆದಿದ್ದ ಜನರೆಲ್ಲರನ್ನೂ, ಮೃದುವಾದ ಮಾತಿನಿಂದ ಮನ್ನಿಸಿ, ತಾಯಿಯಬಳಿಗೆ ಬಂದನು. ಯಶಸ್ವಿಯಾದ ಆ ರಾಮನಿಗೆ ಸುಖದುಃಖಗಳಲ್ಲಿಯೂ, ಇತರಗುಣಗಳಲ್ಲಿಯೂ ಸಮಭಾಗಿಯಾಗಿ, ಮಹಾಪರಾಕ್ರಮಿಯೆನಿಸಿದ ಲಕ್ಷ್ಮಣನೂಕೂಡ, ತನ್ನ ವ್ಯಸನವನ್ನು ತನ್ನಲ್ಲಿಯೇ ಮರೆಸಿಕೊಂಡು,ರಾಮನನ್ನು ಹಿಂಬಾಲಿಸಿಬಂದನು. ರಾಮನು ಬಂದುನೋಡಿದಾಗ, ಇತ್ತಲಾಗಿ ತನ್ನ ಅಭಿಷೇಕಾರ್ಥವಾಗಿ ಅಂತಃಪುರವನ್ನು ಅಲಂಕರಿಸಿಟ್ಟುಕೊಂಡು ಸಂಭ್ರಮದಿಂದ ಕೂಡಿದ್ದ ಜನಸಮೂಹವನ್ನೂ, ಅತ್ತಲಾಗಿ ತನಗೆರಾಜ್ಯವು ತಪ್ಪಿ ವನವಾಸಪ್ರಾಪ್ತಿಯಾಗಿರುವುದನ್ನೂ ಚಿಂತಿಸಿ, ಅದರಿಂದ ಹೀಗೆ ಪ್ರಜೆಗಳಿಗೆ ಉತ್ಸಾಹಭಂಗವಾದುದಕ್ಕಾಗಿ ತಾನು ವ್ಯಸನಪಡುತ್ತಿದ್ದರೂ, ಆ ವ್ಯಸನವನ್ನು ಹೊರಕ್ಕೆ ತಿಳಿಸಿದರೆ, ತನ್ನಲ್ಲಿ ಅನುರಕ್ತರಾಗಿರುವ ಆ ಪ್ರಜೆಗಳು ಯಾವ ಅಪಾಯಕ್ಕೆ ಗುರಿಯಾಗುವರೋ ಎಂಬ ಶಂಕೆಯಿಂದ, ಆ ವ್ಯಸನವನ್ನೂ ಕಾಣಿಸಿಕೊಳ್ಳದೆ ಉತ್ಸಾಹವನ್ನೇ ತೋರಿಸುತಿದ್ದನು. ಇಲ್ಲಿಗೆ ಹತ್ತೊಂಭತ್ತನೆಯ ಸರ್ಗವು.

## {ರಾಮನು ಕೌಸಲ್ಯೆಗೆ ತನ್ನ ವನವಾಸವೃತ್ತಾಂತವನ್ನು ಹೇಳಿದುದು. ಕೌಸಲ್ಯೆಯ ವಿಲಾಪವು}

ಪುರುಷಶ್ರೇಷ್ಠನಾದ ರಾಮನು ಕೈಕೇಯಿಗೂ, ದಶರಥನಿಗೂ ನಮಸ್ಕರಿಸಿದಾಗ, ಅಲ್ಲಿ ಜೋಡಿಸಿದ್ದ ಕೈಗಳೊಡನೆಯೇ ಹೊರಕ್ಕೆ ಹೊರಟುಬಂದನು. ಒಡನೆಯೇ ಅತ್ತಲಾಗಿ ಅಂತಃಪುರದಲ್ಲಿ ದೊಡ್ಡಹಾಹಾಕಾರದಿಂದ ಸ್ತ್ರೀಯರ ಗೋಳಾಟವು ಕೇಳಿಸಿತು. ಅಲ್ಲಿನ ರಾಜಪತ್ನಿಯರು ರಾಮನಲ್ಲಿದ್ದ ಒಂದೊಂದು ಗುಣವನ್ನೂ ಹೇಳುತ್ತ. “ಅಯ್ಯೋ! ರಾಮನು ನಮ್ಮ ಅಂತಃಪುರದ ಜನರ ವಿಷಯದಲ್ಲಿ ಎಷ್ಟೋ ಪ್ರೇಮವುಳ್ಳವನಾಗಿ, ತಂದೆಯ ಅಪ್ಪಣೆಯನ್ನೂ ನಿರೀಕ್ಷಿಸದೆ, ನಮಗೆ ಬೇಕಾದ ಕಾರ್ಯಗಳನ್ನು ತಾನೇ ಮಾಡುತ್ತ, ನಮಗೆ ದಿಕ್ಕಾಗಿ ರಕ್ಷಿಸುತ್ತಿದ್ದನು. ಆ ರಾಮನು ಈಗ ನಮ್ಮೆಲ್ಲರನ್ನೂ ತೊರೆದು ಕಾಡಿಗೆ ಹೋಗುವನೆ ? ಈತನು ಹುಟ್ಟಿದುದುಮೊದಲು ತನ್ನ ಹೆತ್ತ ತಾಯನ್ನು ಕಂಡಂತೆಯೇ, ನಮ್ಮನ್ನೂ ಎಷ್ಟೋ ಅಭಿಮಾನದಿಂದ ಕಾಣುತಿದ್ದನು. ನಾವು ಎಷ್ಟೇ ಬಯ್ದರೂ ಕೋಪಿಸುತ್ತಿರಲಿಲ್ಲ. ನಮಗೆ ಯಾವುದಾದರೂ ವಿಷಯದಲ್ಲಿ ಕೋಪವುಂಟಾಗಬಹುದೆಂದು ತೋರಿದರೆ, ಆ ಕಾರ್ಯವನ್ನು ಅಷ್ಟಕ್ಕೇ ಬಿಟ್ಟುಬಿಡುತ್ತಿದ್ದನು. ನಮಗೆ ಕೋಪಬಂದಾಗ ತಾನೇಬಂದು ಸಮಾಧಾನಪಡಿಸುತಿದ್ದನು. ಅಂತಹ ರಾಮನು ಈಗ ದೇಶಭ್ರಷ್ಟನಾಗಿ ಹೋಗಬೇಕೆ ? ಅಯ್ಯೋ ! ನಮ್ಮ ದಶರಥನು ಸ್ವಲ್ಪವಾದರೂ ವಿವೇಕವಿಲ್ಲದೆ,ಸಮಸ್ತಜೀವರಾಶಿಗಳಿಗೂ ದಿಕ್ಕಾಗಿರುವ ರಾಮನನ್ನು ಕಾಡಿಗೆ ಕಳುಹಿಸಿ, ಈ ಲೋಕವನ್ನೇ ಹಾಳುಮಾಡಬೇಕೆಂದೆಣಿಸಿರುವಹಾಗಿದೆ.”ಎಂದು ಅಲ್ಲಿದ್ದ ರಾಜಸ್ತ್ರೀಯರೆಲ್ಲರೂ, ಕರುವನ್ನು ಕಾಣದ ಹಸುಗಳಂತೆ ಕಳವಳಿಸಿ, ಪತಿಯಾದ ದಶರಥನನ್ನೇ ನಿಂದಿಸುತ್ತ, ಗಟ್ಟಿಯಾಗಿ ಅಳುತಿದ್ದರು. ಹೀಗೆ ಅಂತಃಪುರದಲ್ಲಿ ದೊಡ್ಡ ಗೋಳಾಟವು ಹೊರಟುದನ್ನೂ, ತನ್ನ ನಿಂದೆಯನ್ನೂ ದಶರಥನೂ ಕೇಳುತಿದ್ದನು. ಮೊದಲೇ ಪುತ್ರಶೋಕದಿಂದ ಬೇಯುತಿದ್ದ ದಶರಥನಿಗೆ ಮತ್ತಷ್ಟು ವ್ಯಥೆಯೂ, ನಾಚಿಕೆಯೂ ಉಂಟಾಯಿತು. ಆ ಸಂಕಟವನ್ನು ತಡೆಯಲಾರದೆ ಪುನಃ ಪ್ರಜ್ಞೆತಪ್ಪಿ, ಹಾಗೆಯೇ ಹಾಸಿಗೆಯಮೇಲೆ ಒರಗಿಕೊಂಡನು. ಇತ್ತಲಾಗಿ ರಾಮನೂ,ಅಂತಃಪುರದ ಕಡೆಯಿಂದ ಹೊರಟುಬಂದ

ಆ ಪ್ರಲಾಪಧ್ವನಿಯನ್ನು ಕೇಳಿ, ದುಃಖಿತನಾಗಿ, ಆನೆಯಂತೆ ಗಟ್ಟಿಯಾಗಿ ನಿಟ್ಟುಸಿರನ್ನು ಬಿಡುತ್ತ, ಲಕ್ಷ್ಮಣನೊಡಗೂಡಿ ತಾಯಿಯ ಅಂತಃಪುರಕ್ಕೆಬಂದನು. ಬಾಗಿಲಲ್ಲಿ ದ್ವಾರಪಾಲಕರಿಗೆಲ್ಲಾ ಪ್ರಧಾನನಾಗಿಯೂ, ವೃದ್ಧನಾಗಿಯೂ, ಪೂಜ್ಯನಾಗಿಯೂ ಇದ್ದ ಒಬ್ಬ ಪುರುಷನೂ, ಅವನೊಡನೆ ಇನ್ನೂ ಅನೇಕಜನ ರೂಕುಳಿತಿರುವುದನ್ನು ಕಂಡನು. ಅವರೆಲ್ಲರೂ ರಾಮನು ಬಂದುದನ್ನು ನೋಡಿ, ಥಟ್ಟನೆ ಇದಿರೆದ್ದು, ಜಯಜಯಧ್ವನಿಯನ್ನು ಮಾಡುತ್ತ ಆಶೀರ್ವದಿಸಿದರು. ಮೊದಲನೆಯ ತೊಟ್ಟಿಯನ್ನು ದಾಟಿ ಎರಡನೆಯ ತೊಟ್ಟಿಗೆ ಹೋದನು. ಅಲ್ಲಿ ವೇದವಿತ್ತುಗಳಾಗಿಯೂ, ತನ್ನ ತಂದೆಯಾದ ದಶರಥನಿಗೆ ಬಹಳ ಪೂಜ್ಯರಾಗಿಯೂ ಇದ್ದ ಕೆಲವು ವೃದ್ಧಬ್ರಾಹ್ಮಣರನ್ನು ಕಂಡನು. ಅವರಿಗೂ ಭಕ್ತಿಯಿಂದ ನಮಸ್ಕರಿಸಿ, ಅಲ್ಲಿಂದ ಮುಂದೆ ಹೊರಟು, ಮೂರನೇತೊಟ್ಟಿಯನ್ನು ಸೇರಿ, ಅಲ್ಲಿ ಬಾಗಿಲುಕಾಯುತಿದ್ದ ವೃದ್ಧಸ್ತ್ರೀಯರನ್ನೂ, ಬಾಲಿಕೆಯರನ್ನೂ ಕಂಡನು. ಅವರೂ ರಾಮನನ್ನು ಕಂಡೊಡನೆ ಜಯಜಯಧ್ವನಿಯನ್ನು ಮಾಡಿ, ಒಳಗೆ ಹೋಗಿ, ರಾಮನು ಬಂದಿರುವ ವಿಷಯವನ್ನು ಕೌಸಲ್ಯೆಗೆ ತಿಳಿಸಿದರು. ಕೌಸಲ್ಯೆಯಾದರೋ ಹಿಂದಿನ ರಾತ್ರಿಯೆಲ್ಲವೂ ರಾಮನ ಶ್ರೇಯೋಭಿವೃದ್ಧಿಗಾಗಿ ನಿಯಮಗಳನ್ನು ನಡೆಸುತಿದ್ದು, ಬೆಳಗಾದಮೇಲೆ ವಿಷ್ಣುಪೂಜೆಯನ್ನು ಮಾಡಿ, ಬಿಳೀದುಕೂಲವನ್ನುಟ್ಟು, ಮಂಗಳಾಲಂಕಾರವನ್ನು ಮಾಡಿಕೊಂಡು, ಬ್ರಾಹ್ಮಣರಿಂದ ಮಂತ್ರೋಕ್ತವಾಗಿ ಹೋಮವನ್ನು ಮಾಡಿಸುತಿದ್ದಳು. ರಾಮನು ಹೀಗೆ ವ್ರತನಿಷ್ಠಳಾದ ತಾಯಿಯನ್ನೂ, ಮತ್ತು ಅಲ್ಲಿ ದೇವಕಾರ್ಯಕ್ಕಾಗಿ ಸಿದ್ಧಪಡಿಸಲ್ಪಟ್ಟ ಮೊಸರು, ಅಕ್ಷತೆ, ತುಪ್ಪ, ಕಡುಬು, ಹವಿಸ್ಸುಗಳು, ಅರಳು, ಬಿಳೀಹೂವಿನಹಾರಗಳು, ಪಾಯಸ, ತಿಲೋದನ, ಸಮಿತ್ತು, ಪೂರ್ಣಕುಂಭಗಳೇ ಮೊದಲಾದ ಸಮಸ್ತಸಾಮಗ್ರಿಗಳನ್ನೂ ನೋಡಿದನು. ಬಿಳೀಪಟ್ಟೆಮಡಿಯನ್ನುಟ್ಟು, ವಿಷ್ಣುತರ್ಪಣವನ್ನು ಮಾಡುತ್ತ, ವ್ರತೋಪವಾಸಾದಿಗಳಿಂದ ಕೃಶವಾದ ಮೈಯುಳ್ಳವಳಾಗಿದ್ದಾಗಲೂ, ದೇವತೆಯಂತೆ ಪ್ರಕಾಶಿಸುತ್ತಿದ್ದ ತಾಯಿಯ ಬಳಿಗೆ ಬಂದನು. ಕೌಸಲ್ಯೆಯೂಕೂಡ ಬಹಳ ಹೊತ್ತಿನಿಂದ ಮಗನನ್ನು ಬಿಟ್ಟು, ವ್ರತೋಪವಾಸಗಳಲ್ಲಿಯೇ ನಿರತಳಾಗಿದ್ದುದರಿಂದ, ಈಗ ರಾಮನನ್ನು ಕಂಡೊಡನೆ, ಆಗ

ಲಿದ್ದ ಮರಿಯನ್ನು ಕಂಡ ಹೆಣ್ಣುಕುದುರೆಯಂತೆ, ಬಹುಸಂಭ್ರಮದಿಂದಲೂ, ಸಂತೋಷದಿಂದಲೂ ಮುಂದೆ ಬಂದಳು. ಹೀಗೆ ತನ್ನನ್ನು ಇದಿರುಗೊಂಡು ಬರುತ್ತಿರುವ ತಾಯಿಗೆ ರಾಮನು ನಮಸ್ಕರಿಸಲು, ಕೌಸಲ್ಯೆಯು ಅತ್ಯಾನಂದದಿಂದ ಆತನನ್ನು ಎರಡುತೋಳುಗಳಿಂದಲೂ ಅಪ್ಪಿಕೊಂಡು, ವಾತ್ಸಲ್ಯದಿಂದ ಆತನ ತಲೆಯನ್ನಾಘ್ರಾಣಿಸಿದಳು. ಆಮೇಲೆ ಪುತ್ರವತ್ಸಲೆಯಾದ ಆಕೆಯು, ಆತನನ್ನುಕುರಿತು, ತನ್ನ ವಾತ್ಸಲ್ಯಾತಿಶಯಕ್ಕೆ ತಕ್ಕಂತೆ ಪ್ರಿಯವಾಕ್ಯಗಳನ್ನು ನುಡಿಯುತ್ತ "ಎಲೆ ರಾಮನೆ! ವೃದ್ಧರಾಗಿಯೂ, ಧಾರ್ಮಿಕರಾಗಿಯೂ, ಮಹಾತ್ಮರಾಗಿಯೂ ಇರುವ ರಾಜಋಷಿಗಳಂತೆ ನೀನು ದೀರ್ಘಾಯುಸ್ಸನ್ನೂ, ಸತ್ಕೀರ್ತಿಯನ್ನೂ ಹೊಂದಿ, ಕುಲಕ್ಕೆ ತಕ್ಕ ಧರ್ಮವನ್ನು ನಡೆಸುವನಾಗು! ವತ್ಸ ರಾಮಾ! ಇದೇನು? ನೀನು ಏನನ್ನೋ ಚಿಂತಿಸುವಹಾಗಿದೆ? ಈಗ ನಿನಗೆ ನಡೆಯಬೇಕಾದ ಪಟ್ಟಾಭಿಷೇಕಕಾರ್ಯವು ಇನ್ನೂ ಆರಂಭಿಸಲಿಲ್ಲವೆಂದು ಶಂಕಿಸುವೆಯಾ? ನಿನ್ನ ತಂದೆಯು ಎಂದಿಗೂ ಆಡಿದಮಾತಿಗೆ ತಪ್ಪತಕ್ಕವನಲ್ಲ. ಆಗಬೇಕಾದುದೆಲ್ಲವೂ ಸಿದ್ಧವಾಗಿರುವುದು. ಇನ್ನು ಸ್ವಲ್ಪಹೊತ್ತಿನೊಳಗಾಗಿ ನಿನಗೆ ರಾಜನು ಅಭಿಷೇಕವನ್ನು ನಡೆಸುವನು. ಇದಕ್ಕಾಗಿ ನೀನು ಶಂಕಿಸಬೇಕಾದುದಿಲ್ಲ." ಎಂದು ಹೇಳಿ, ಆಮೇಲೆ ಅವನನ್ನು ಭೋಜನಕ್ಕಾಗಿ ಕರೆದು ಆಸನವನ್ನು ಕೊಟ್ಟಳು. ರಾಮನು ಆ ಆಸನವನ್ನು *ಕೈಯ್ಯಿಂದಮಾತ್ರ ಮುಟ್ಟಿ, ತನ್ನ ಅಭಿಷೇಕಕ್ಕಾಗಿ ಎಷ್ಟೋ ಉತ್ಸಾಹದಿಂದ ಸಂಭ್ರಮಿಸುತ್ತಿರುವ ತಾಯಿಗೆ, ಆ ಅಪ್ರಿಯವಾರ್ತೆಯನ್ನು ಹೇಗೆ ತಿಳಿಸುವುದೆಂದು ಸಂಕೋಚದಿಂದ ಸ್ವಲ್ಪಹೊತ್ತಿನವರೆಗೆ ಸುಮ್ಮನಿದ್ದು,ಕೊನೆಗೆಆಕೆಗೆ ಕೈಮುಗಿಯುತ್ತ, ಲಜ್ಜೆಯಿಂದ ತಲೆಯನ್ನು ತಗ್ಗಿಸಿ,ತಾಯಿಯಲ್ಲಿ ತನಗಿರುವ ಗೌರವಕ್ಕೆ ತಕ್ಕಂತೆ, ಬಹಳ ನಮ್ರಭಾವವನ್ನು ತೋರಿಸುತ್ತ, ಮುಂದೆ ನಿಂತು "ಎಲೆ ಜನನಿ! ಹಿಂದುಮುಂದನ್ನರಿಯದೆ ಏಕೆ ಸಂಭ್ರಮಿಸುವೆ? ನಿನಗೆ ಈಗ ಮಹಾಭಯವೊಂದು ಬಂದೊದಗಿರುವುದು.ನಾನೇನೋ ಇಂತಹ ವಿಪತ್ತುಗಳಿಗೆ ಅಂಜುವವನಲ್ಲವಾದರೂ ಈಗಿನ ವಿಷಯವು ನಿನಗೂ, ಸೀತೆಗೂ, ಲಕ್ಷ್ಮಣನಿಗೂ

---

* ಇತರರು ಕೊಟ್ಟ ಆಸನದಲ್ಲಿ ಕುಳಿತುಕೊಳ್ಳದಿದ್ದರೂ ಅದನ್ನು ಕೈಯಿಂದಲಾದರೂ ಮುಟ್ಟಬೇಕೆಂಬ ವಿಧಿಯುಂಟು.

ದೊಡ್ಡ ವ್ಯಸನವನ್ನು ತಂದಿಡುವುದರಲ್ಲಿ ಸಂದೇಹವಿಲ್ಲ. ನಾನು ಈಗಲೇ ದಂಡಕಾರಣ್ಯಕ್ಕೆ ಹೋಗಬೇಕಾಗಿರುವುದು. ಇನ್ನು ನನಗೆ ಈ ರತ್ನಮಯವಾದ ಪೀಠದಿಂದೇನು ? ಕಾಡಿನಲ್ಲಿ ತಾಪಸಯೋಗ್ಯವಾದ * ವಿಷ್ಟರವೆಂಬ ದರ್ಭಾಸನದಮೇಲೆ ಕುಳಿತುಕೊಳ್ಳುವ ಕಾಲವು ಈಗ ನನಗೆ ಪ್ರಾಪ್ತವಾಗಿದೆ. ಇನ್ನೂ *ಆರೆಂಟುವರ್ಷಗಳವರೆಗೆ ನಾನು ಜನಶೂನ್ಯವಾದ ಅಡವಿಯಲ್ಲಿಯೇ ವಾಸಮಾಡಬೇಕಾಗಿ ಬಂದಿರುವುದು. ಇನ್ನು ಮೇಲೆ ನಾನು ಕಾಡಿನಲ್ಲಿ ಜೇನು, ಗೆಡ್ಡೆಗೆಣಸುಗಳು, ಹಣ್ಣುಹಂಪಲುಗಳು, ಮುಂತಾದುವನ್ನು ತಿಂದು ಜೀವಿಸುತ್ತಿರಬೇಕು. ಇನ್ನುಮೇಲೆ ನನಗೆ ಅಡಿಗೆಯುವರಿಂದ ಸಂಸ್ಕರಿಸಲ್ಪಟ್ಟ ಮಾಂಸವೂ ದುರ್ಲಭವು. ಇನ್ನು ನಾನು ಋಷಿಗಳಂತೆ ಜೀವಿಸಬೇಕಾಗಿಬಂದಿರುವುದು. ನಮ್ಮ ಮಹಾರಾಜನು ಭರತನಿಗೆ ಯೌವರಾಜ್ಯಾಭಿಷೇಕವನ್ನು ಮಾಡುವನು. ತಾಪಸನಂತೆ ದಂಡಕಾರಣ್ಯದಲ್ಲಿರಬೇಕೆಂದು ನನಗೆ ನಿಯಮಿಸಿರುವನು. ಇನ್ನು ಹದಿನಾಲ್ಕುವರ್ಷಗಳವರೆಗೆ ನಾನು ನಿರ್ಜನವಾದ ಕಾಡಿನಲ್ಲಿ ವಾನಪ್ರಸ್ಥಾಶ್ರಮಕ್ಕೆ ಯೋಗ್ಯವಾದ ಕರ್ಮಗಳನ್ನು ನಡೆಸುತ್ತ, ಹಣ್ಣುಹಂಪಲುಗಳನ್ನು ತಿಂದು ವಾಸಮಾಡುತ್ತಿರುವೆನು." ಎಂದನು. ಈ ಮಾತನ್ನು ಕೇಳಿದೊಡನೆ ಕೌಸಲ್ಯೆಯು, ಕೊಡಲಿಯಿಂದ ಕಡಿದ ಮರದ ತುಂಡಿನಂತೆ ಪ್ರಜ್ಞೆತಪ್ಪಿ ನೆಲದಮೇಲೆ ಬಿದ್ದು, ಪುಣ್ಯಕ್ಷಯವಾದಮೇಲೆ ಸ್ವರ್ಗದಿಂದ ಕೆಳಗೆಬಿದ್ದ ದೇವತಾಸ್ತ್ರೀಯಂತೆ, ಕಾಣುತ್ತಿದ್ದಳು. ಯಾವಾಗಲೂ ದುಃಖವನ್ನೇ ಕಂಡರಿಯದ ಆಕೆಯು, ಮುರಿದ ಬಾಳೇಗಿಡದಂತೆ, ಮೂರ್ಛೆಯಿಂದ ಸುಕ್ಕಿಬಿದ್ದಿರುವುದನ್ನು ನೋಡಿ, ರಾಮನು ಥಟ್ಟನೆ ಸಮೀಪಕ್ಕೆ ಬಂದು, ಅವಳನ್ನು ಕೈಹಿಡಿದು ಮೇಲಕ್ಕೆತ್ತಿ ಕುಳ್ಳಿರಿಸಿದನು. ಬಹಳಭಾರವನ್ನು ಹೊತ್ತು, ಅದರಿಂದುಂಟಾದ ಆಯಾಸವನ್ನು ಪರಿಹರಿಸಿಕೊ

---

* ಇಲ್ಲಿ (ವಿಷ್ಟರಾಸನಯೋಗ್ಯೋಮೇ ಕಾಲ:). ಎಂದು ಮೂಲವು. ವಿಷ್ಟರವೆಂದರೆ ಇಪ್ಪತ್ತೈದು ದರ್ಭಗಳಿಂದ ರಚಿತವಾದ ತಾಪಸರ ಆಸನಕ್ಕೆ ಹೆಸರು.

† ಇಲ್ಲಿ "ಷಟ್ಚಾಷ್ಟೌಚ ವರ್ಷಾಣಿ" ಎಂದು ಮೂಲವು. ಹದಿನಾಲ್ಕು ವರ್ಷಗಳೆಂದು ಹೇಳಿದರೆ ಬಹಳದೀರ್ಘಕಾಲವಾಗಿ ಕಾಣುವುದೆಂಬ ಶಂಕೆಯಿಂದ, ಆರೆಂಟು ವರ್ಷಗಳೆಂದು ಮಿತವಾದ ಸಂಖ್ಯೆಗಳನ್ನೇ ಉಪಯೋಗಿಸಿದುದಾಗಿ ಗ್ರಹಿಸಬೇಕು.

ಳ್ಳುವುದಕ್ಕಾಗಿ, ನೆಲದಮೇಲೆ ಮೈಯನ್ನು ಹೊರಳಿಸಿ,ಮೇಲೆದ್ದು ನಿಂತಿರುವ ಹೆಣ್ಣುಕುದುರೆಯಂತೆ, ಆ ಕೌಸಲ್ಯೆಯ ಮೈಯೆಲ್ಲವೂ ಧೂಳಿನಿಂದ ತುಂಬಿಹೋಗಿರಲು, ರಾಮನು ಅದೆಲ್ಲವನ್ನೂ ತನ್ನ ಕೈಯಿಂದ ಒರೆಸಿ ಸಮೀಪದಲ್ಲಿಯೇ ಕುಳಿತಿದ್ದನು. ಯಾವಾಗಲೂ ರಾಜಭೋಗದಲ್ಲಿಯೇ ಬಳೆದು, ದುಃಖವೆಂಬುದನ್ನೇ ಕಂಡರಿಯದ ಆ ಕೌಸಲ್ಯೆಯು, ಮೆಲ್ಲಗೆ ಚೇತರಿಸಿಕೊಂಡು, ಮುಂದೆ ಕುಳಿತಿರುವ ರಾಮನನ್ನು ಕುರಿತು, ಲಕ್ಷ್ಮಣನೂ ಕೇಳುವಂತೆ ಒಂದಾನೊಂದು ಮಾತನ್ನು ಹೇಳುವಳು. ವತ್ಸ "ರಾಮಾ! ಇದೇನು? ಭರತನಿಗೆ ಪಟ್ಟಾಭಿಷೇಕವೆ? ನೀನು ಕಾಡಿನಲ್ಲಿರಬೇಕೆ? ನನಗೆ ಇಂತಹ ದುಃಖಪ್ರಾಪ್ತಿಗಾಗಿಯೇ ನೀನು ಹುಟ್ಟಿದಂತಿದೆ! ನೀನು ನನ್ನ ಹೊಟ್ಟೆಯಲ್ಲಿ ಹುಟ್ಟದೆಯೇ ಇದ್ದಿದ್ದರೆ, ಮಹಾಘೋರವಾದ ಪುತ್ರವಿರಹವೆಂಬ ಈದುಃಖವನ್ನು ನಾನು ಅನುಭವಿಸದಿರಬಹುದಾಗಿತ್ತು. ನಾನು ಮಕ್ಕಳಿಲ್ಲದ ಬಂಜೆಯಾಗಿದ್ದಿದ್ದರೂ ಸಮ್ಮತವಾಗಿತ್ತು. ಬಂಜೆಯರಿಗೆ ಮಕ್ಕಳಿಲ್ಲವೆಂಬುದೊಂದೇ ಚಿಂತೆಯೇಹೊರತು, ಈ ವಿಧವಾದ ಬೇರೆ ದುಃಖಗಳಿಗೆ ಅವಕಾಶವಿಲ್ಲ. ನನ್ನ ಪತಿಯಾದ ದಶರಥನು, ತನ್ನ ಕೈಸಾಗುವಾಗಲೂ ಕೂಡ, ಜ್ಯೇಷ್ಠಪತ್ನಿಯೆಂಬ ಗೌರವದಿಂದ, ನನ್ನನ್ನು ಒಂದು ದಿವಸವಾದರೂ ಸತ್ಕರಿಸಿದವನಲ್ಲ. ನಾನು ಹೆಸರಿಗೆ ಪಟ್ಟದ ರಾಣಿಯೆನಿಸಿಕೊಂಡಿದ್ದರೂ, ಇದುವರೆಗೆ ರಾಜಮಹಿಷಿಯರಿಗೆ ಯೋಗ್ಯವಾದ ಯಾವ ಸುಖವನ್ನೂ ಕಂಡವಳಲ್ಲ! ಅದು ಹೋಗಲಿ! ಮಕ್ಕಳಾದರೂ ಹುಟ್ಟಿದರೆ, ಅದರ ಬಲದಿಂದಲಾದರೂ ಪತಿಯ ಪ್ರೀತಿಯನ್ನು ಸಂಪಾದಿಸಿ ಸರಿಯಾದ ಸ್ಥಿತಿಯಲ್ಲಿರಬಹುದೆಂದು ಎಣಿಸಿದ್ದೆನು. ಹಾ! ದೈವವೆ! ಈಗ ಅದೂ ಇಲ್ಲದೆ ಹೋಯಿತು. *ನಾನು ರಾಜನಿಗೆ ಹಿರಿಯಹೆಂಡಿತಿಯಾಗಿ, ಪಟ್ಟದ ರಾಣಿಯೆನಿಸಿಕೊಂಡಿದ್ದು

---

* ಇಲ್ಲಿ "ಸಾ ಬಹೂನ್ಯಮನೋಜ್ಞಾನಿ ವಾಕ್ಯಾನಿ ಹೃದಯಚ್ಛಿದಾಂ | ಅಹಂಶ್ರೋಷ್ಯೇ ಸಪತ್ನೀನಾಮವರಾಣಾಂ ವರಾಸತೀ||" ಎಂಬುದೇ ಮೂಲವು. (ಸಾ ಅಹಂ) ಹುಟ್ಟಿದುದುಮೊದಲು ಹೀಗೆ ಕಷ್ಟವನ್ನೇ ಅನುಭವಿಸುತಿದ್ದ ನಾನು, ಇನ್ನು ಮುಂದೆ (ಹೃದಯಚ್ಛಿದಾಂ) ನನ್ನ ಪತಿಯ ಮನಸ್ಸನ್ನು ಭೇದಿಸಿ, ನನ್ನಲ್ಲಿ ವಿರೋಧವನ್ನು ಹುಟ್ಟಿಸತಕ್ಕ, ಮತ್ತು (ಅವರಾಣಾಂ) ನನಗಿಂತಲೂ ನಿಕೃಷ್ಟರಾದ, ಪಟ್ಟದ ರಾಣಿಯಾಗಿ

ರೂ, ಇನ್ನು ಮೇಲೆ ನನಗಿಂತಲೂ ಹೀನರಾದ ನನ್ನ ಸವತಿಯರೆಲ್ಲರೂ ಬಾಯಿಗೆ ಬಂದಂತೆ ನನ್ನನ್ನು ಹೀಗಳೆದು, ನನ್ನ ಪತಿಯ ಮನಸ್ಸನ್ನೂ ಕೆಡಿಸಿ, ನನ್ನ ಮೇಲೆ ಅಧಿಕಾರವನ್ನು ಮಾಡತೊಡಗುವರು! ಆಹಾ ! ಅವರ ತಿರಸ್ಕಾರವಾಕ್ಯಗಳನ್ನು ಕೇಳಿ ನಾನು ಹೇಗೆ ಸಹಿಸಲಿ ? ಲೋಕದಲ್ಲಿ ಹೆಂಗಸರಿಗೆ ಸವತಿಯರ ಬಾಯಿಗೆ ಸಿಕ್ಕಿ ಬದುಕಿರುವುಕ್ಕಿಂತ ಬೇರೆ ದುಃಖವೊಂದೂ ಇಲ್ಲ. ಆದುದರಿಂದ ನಾನು ಈಗ ಕೊನೆಕಾಣದ ದುಃಖಕ್ಕೆ ಸಿಕ್ಕಿಕೊಳ್ಳಬೇಕಾಯಿತು. ಇನ್ನು ಮೇಲೆ ನಾನು ಅನುಭವಿಸುವ ಸಂಕಟವು ಹೀಗೆಂದು ಹೇಳುವುದಕ್ಕಿಲ್ಲ. ವತ್ಸ ರಾಮಾ ! ಮಹಾಬಲಶಾಲಿಯಾಗಿ, ಸರ್ವಲೋಕಪ್ರಿಯನಾದ ನೀನು ಸಮೀಪದಲ್ಲಿರುವಾಗಲೇ ನನ್ನ ಸವತಿಯರು ನನ್ನನ್ನು ತಿರಸ್ಕ

---

ಹಿರಿಯ ಹೆಂಡತಿಯೆನಿಸಿಕೊಂಡಿರುವುದರಿಂದ, ಒಂದುವೇಳೆ ತಾನು ಬೇರೆ ಅಂತಃಪುರಸ್ತ್ರೀಯರನ್ನು ಕುರಿತು ಬುದ್ಧಿವಾದವನ್ನು ಹೇಳಿ ದಂಡಿಸಿದರೂ ದಂಡಿಸಬಹುದು. ಹಾಗಿಲ್ಲದೆ ತನ್ನಲ್ಲಿ ವಿಧೇಯರಾಗಿ ನಡೆದುಕೊಳ್ಳಬೇಕಾದ ಅಲ್ಪಸ್ತ್ರೀಯರೆಲ್ಲರೂ ತನ್ನನ್ನು ನಿಂದಿಸಲಾರಂಭಿಸುವರೆಂದು ಭಾವವು. (ಸಪತ್ನೀನಾಂ) ಸ್ತ್ರೀಯರಿಗೆ ಸವತಿಯರಿಂದ ಬಯ್ಸಿಕೊಳ್ಳುವುದಕ್ಕಿಂತಲೂ ಹೆಚ್ಚು ವ್ಯಸನವು ಬೇರೊಂದೂ ಇಲ್ಲ. ಹೀಗಿರುವಲ್ಲಿ ಅಂತಹ ಸವತಿಯದಲ್ಲಿಯೂ ತನಗಿಂತ ಹೀನರಾದವರು ತನ್ನನ್ನು ಬಾಯಿಗೆ ಬಂದಹಾಗೆ ಬೈಯುವಪಕ್ಷದಲ್ಲಿ ಅದನ್ನು ಹೇಗೆ ಸಹಿಸುವುದೆಂದು ಭಾವವು. (ಬಹೂನಿ) ಮೊದಲೇ ಸ್ವಲ್ಪಸ್ವಲ್ಪವಾಗಿ ಹೇಳುತಿದ್ದ ಕ್ರೂರವಾಕ್ಯಗಳನ್ನು, ಇನ್ನು ಮೇಲೆ ತಡೆಯಿಲ್ಲದೆ ಬಾಯಿಗೆ ಬಂದಹಾಗೆ ಹೇಳುವರೆಂದರ್ಥವು. (ಅಮನೋಜ್ಞಾನಿ) ಇಂಪಲ್ಲದವುಗಳೆಂದರೆ, ಕಠಿನವಾದುವುಗಳೆಂದರ್ಥವು. ಮೊದಲು ಅವರು ಕ್ರೂರವಾಕ್ಯಗಳನ್ನಾಡುತಿದ್ದರೂ, ಅವುಗಳಲ್ಲಿ ನಡುನಡುವೆ ಸಲ್ಪಮಟ್ಟಿಗೆ ಮಾರ್ದವವನ್ನಾದರೂ ತೋರಿಸುತಿದ್ದರು. ಇನ್ನು ಮೇಲೆ ಅದೂ ಇಲ್ಲವೆಂದು ಭಾವವು. (ವಾಕ್ಯಾನಿ) ಇದುವರೆಗೂ ಮೇಲೆ ಮೃದುವಾಕ್ಯಗಳನ್ನು ಹೇಳುವಂತೆ ನಟಿಸುತ್ತ, ನನಗೆ ಮರ್ಮಭೇದಕವಾಗುವಂತೆ ವ್ಯಂಗಾರ್ಥವುಳ್ಳ ಪದಗಳನ್ನುಪಯೋಗಿಸುತಿದ್ದರು. ಇನ್ನು ಮೇಲೆ ಸ್ಪಷ್ಟವಾದ ವಾಕ್ಯಗಳಿಂದಲೇ ನನ್ನನ್ನು ತಿರಸ್ಕರಿಸುವರೆಂದು ಭಾವವು. (ವರಾಸತೀ) ನಾನು ಪಟ್ಟದರಾಣಿಯಾಗಿದ್ದೂ ಸಂಕಟಕ್ಕೆ ಗುರಿಯಾಗಬೇಕಾಯಿತೆಂದು ಭಾವವು.(ಸಪತ್ನೀನಾಂ) ಇಲ್ಲಿ ಬಹುವಚನವನ್ನುಪಯೋಗಿಸಿದುದು ಕೇವಲ ಕೋಪದಿಂದಲೇ ಹೊರತು, ನಿಜವಾಗಿ ಕೈಕೇಯಿಯು ಹೊರತು ಬೇರೆಯವರ ವಿಷಯದಲ್ಲಿ ಕೌಸಲ್ಯೆಗೆ ಈ ದುರಭಿಪ್ರಾಯವಿಲ್ಲ. ಆದುದರಿಂದ ಇಲ್ಲಿ ಏಕವಚನಾರ್ಥವನ್ನೇ ಮುಖ್ಯವಾಗಿ ಗ್ರಹಿಸಬೇಕು.

ರಿಸುತ್ತಿದ್ದರು. ನೀನೂ ಹೊರಟುಹೋದಮೇಲೆ ನನಗೆ ಉಳಿಗಾಲವೆಲ್ಲಿಯದು? ಪತಿಯಾದ ದಶರಥನೇ ನನ್ನನ್ನು ಅಲಕ್ಷ್ಯಭಾವದಿಂದ ಕಾಣುವನು. ಕೈಕೇಯಿಯ ಗೌಡಿಯರನ್ನು ಹೇಗೋ ಹಾಗೆ ನನ್ನನ್ನು ನೋಡುವನು. ಕೆಲವು ಸಂದರ್ಭಗಳಲ್ಲಿ ಆ ಗೌಡಿಯರಿಗಿಂತಲೂ ಕೀಳಾಗಿ ಎಣಿಸುವನು. ರಾಮಾ! ಇದುವರೆಗೆ ಅರಮನೆಯ ಪರಿಜನರಲ್ಲಿ ಒಬ್ಬರಿಬ್ಬರಾದರೂ ಬಂದು ನನ್ನನ್ನು ಸೇವೆಮಾಡುತ್ತ ಅನುವರ್ತಿಸಿಕೊಂಡಿದ್ದರು. ಇನ್ನುಮೇಲೆ ಭರತನಿಗೆ ರಾಜ್ಯವು ಸೇರಿದರೆ, ಅವರು ಕೈಕೇಯಿಯ ಭಯಕ್ಕಾಗಿ ನನ್ನೊಡನೆ ಮಾತನ್ನೇ ಆಡುವುದಿಲ್ಲ. ಹಾ! ಕಷ್ಟವೆ! ಆ ಕೈಕೇಯಿಯ ಬಾಯಿಯಲ್ಲಿ ಮೃದುವಾದ ಮಾತೆಂಬುದೇ ಇಲ್ಲ. ಇದರಮೇಲೆ ಆಕೆಗೆ ನನ್ನಲ್ಲಿ ನಿತ್ಯದ್ವೇಷವೂ ಇರುವುದರಿಂದ, ನನ್ನನ್ನು ನೋಡಿದಾಗಲೆಲ್ಲಾ ಸಿಡಿಗುಟ್ಟುತ್ತಾ ಕ್ರೂರವಾಕ್ಯವನ್ನಾಡತೊಡಗುವಳು. ಹೀಗೆ ಅವಳು ಬಾಯಿಗೆ ಬಂದಂತೆ ಮಾತುಗಳನ್ನಾಡಿ ತಿರಸ್ಕರಿಸಿ, ಮುಖವನ್ನು ಗಂಟುಹಾಕುತಿದ್ದರೆ, ಅದನ್ನು ನೋಡಿ ನಾನು ಹೇಗೆ ಸಹಿಸಲಿ? ದಿಕ್ಕಿಲ್ಲದ ನಾನು ಯಾರೊಡನೆ ಹೇಳಿಕೊಳ್ಳಲಿ? ನೀನಾದರೂ ವೃದ್ಧಿಗೆ ಬಂದಮೇಲೆ ನನ್ನ ಕಷ್ಟವನ್ನು ನೀಗಿಸಿಕೊಳ್ಳಬೇಕೆಂದು, ನೀನು ಹುಟ್ಟಿದುದುಮೊದಲು ಕಳೆದ * ಹದಿನೇಳುವರ್ಷಗಳಿಂದ ಆಶೋತ್ತರವನ್ನಿ

* ಇಲ್ಲಿ "ದಶ ಸಪ್ತ ಚ ವರ್ಷಾಣಿ ತವ ಜಾತಸ್ಯ ರಾಘವ" ಎಂದು ಮೂಲವು. ರಾಮನ ವಯಸ್ಸನ್ನು ಸ್ವಲ್ಪಮಟ್ಟಿಗೆ ಇಲ್ಲಿ ವಿಚಾರಿಸಬೇಕಾಗಿದೆ ಕಾಡಿಗೆ ಹೋಗುವಕಾಲದಲ್ಲಿ ಹದಿನೇಳುವರ್ಷಗಳಾಗಿದ್ದವೆಂದು ಈ ವಾಕ್ಯದಿಂದ ಸ್ಪಷ್ಟವಾಗುವುದು. ವಿಶ್ವಾಮಿತ್ರನು ಹಿಂದೆ ರಾಮನನ್ನು ಕಳುಹಿಸಿಕೊಡಬೇಕೆಂದು ದಶರಥನನ್ನು ಕೇಳಿದಾಗ, ದಶರಥನು "ಊನಷೋಡಶವರ್ಷೋಽಮೇ ರಾಮ:" ರಾಮನಿಗೆ ಇನ್ನೂ ಹದಿನಾರುವರ್ಷಗಳೂ ತುಂಬಿಲ್ಲವೆಂದು ಹೇಳಿರುವನು. ಆ ಸಂವತ್ಸರದಲ್ಲಿಯೇ ರಾಮನಿಗೆ ವಿವಾಹವು ನಡೆಯಿತು. ಮುಂದೆ ಸೀತೆಯು ರಾವಣನೊಡನೆ "ಉಷಿತ್ವಾದ್ವಾದಶ ಸಮಾಇಕ್ಷ್ವಾಕೂಣಾಂ ನಿವೇಶನೇ" ಇಕ್ಷ್ವಾಕುಗೃಹದಲ್ಲಿ ಹನ್ನೆರಡುವರ್ಷಗಳವರೆಗೆ ವಾಸಮಾಡಿದುದಾಗಿ ಹೇಳಿರುವಳು. ಹೀಗೆ ರಾಮನಿಗೆ ವಿಶ್ವಾಮಿತ್ರನೊಡನೆ ಹೋಗುವಾಗ ಹದಿನಾರು ವರ್ಷಗಳಾಗಿದ್ದವು. ಅದರಮೇಲೆ ವಿವಾಹಿತನಾಗಿ ಬಂದು, ಹನ್ನೆರಡು ವರ್ಷಗಳವರೆಗೆ ದಶರಥನ ಅರಮನೆಯಲ್ಲಿದ್ದುದಾಗಿ ಹೇಳಲ್ಪಟ್ಟಿರುವುದರಿಂದ, ಆ ಹನ್ನೆರಡು ವರ್ಷಗಳೂ, ಸೇರಿದರೆ, ರಾಮನು ಕಾಡಿಗೆ ಹೊರಡುವಾಗ ಇಪ್ಪತ್ತೆಂಟು ವರ್ಷಗಳಿಗೆ ಕಡಿಮೆಯಿಲ್ಲದೆ ವಯಸ್ಸಾಗಿರಬೇಕು.

ಟ್ಟುಕೊಂಡು ಕಾದಿದ್ದೆನು. ಅದೂ ತಪ್ಪಿತು ! ವತ್ಸ ರಾಮಾ ! ಸವತಿಯರ

---

ಇದಲ್ಲದೆ, ಮುಂದೆ ಸೀತೆಯು ರಾವಣನೊಡನೆ "ಮಮ ಭರ್ತಾ ಮಹಾತೇಜಾ ವಯಸಾ ಪಂಚವಿಂಶಕಃ। ಅಷ್ಟಾದಶ ಹಿ ವರ್ಷಾಣಿ ಮಮ ಜನ್ಮನಿ ಗಣ್ಯತೇ" ಎಂಬುದಾಗಿ, ರಾಮನಿಗೆ ಈಗ ಇಪ್ಪತ್ತೈದು ವರ್ಷಗಳೆಂದೂ, ತನಗೆ ಹದಿನೆಂಟು ವಯಸ್ಸೆಂದೂ ಸೂಚಿಸಿರುವಳು. ಇದರಿಂದ ರಾಮನು ಕಾಡಿಗೆ ಹೋಗುವಾಗ,ಕೌಸಲ್ಯೆಯ ವಾಕ್ಯದಂತೆ ಹದಿನೇಳು ವಯಸ್ಸೂ, ದಶರಥನ ಮಾತಿನಂತೆ ಇಪ್ಪತ್ತೆಂಟು ವಯಸ್ಸೂ, ಸೀತೆಯ ಮಾತಿನಂತೆ ಇಪ್ಪತ್ತೈದು ವಯಸ್ಸೂ ಸೂಚಿತವಾಗುವುದು. ಹೀಗೆ ಪರಸ್ಪರವಿರುದ್ಧಗಳಾದ ಈ ವಾಕ್ಯಗಳಿಗೆ ಸಾಮಂಜಸ್ಯವನ್ನು ನಿರೂಪಿಸಬೇಕಲ್ಲವೆ? ಇದರ ಸಿದ್ಧಾಂತವು ಹೇಗೆಂದರೆ:-ಕೌಸಲ್ಯೆಯು ಹೇಳಿರುವ "ದಶಸಪ್ತ ಚ ವರ್ಷಾಣಿ ತವ ಜಾತಸ್ಯ ರಾಘವ"ಎಂಬ ವಾಕ್ಯದಲ್ಲಿ (ಜಾತಸ್ಯ) ಎಂಬ ಪದಕ್ಕೆ ದ್ವಿತೀಯಜನ್ಮವೆಂದರೆ ಉಪನಯನವೆಂದರ್ಥವು. "ಮಾತುರ್ಯದಗ್ರೇ ಜಾಯಂತೇ ದ್ವಿತೀಯಂ ಮೌಂಜಿಬಂಧನಾತ್ । ಅತ್ರಾಸ್ಯ ಮಾತಾ ಸಾವಿತ್ರೀ ಪಿತಾತ್ವಾಚಾರ್ಯ ಉಚ್ಯತೇ । ಬ್ರಾಹ್ಮಣಕ್ಷತ್ರಿಯ ವಿಶಸ್ತಸ್ಮಾದೇತೇ ದ್ವಿಜಾತಯಃ॥" ಎಂಬಂತೆ,ಬ್ರಾಹ್ಮಣ ಕ್ಷತ್ರಿಯ ವೈಶ್ಯರೆಂಬ ಮೂರು ವರ್ಣದವರಿಗೂ ದ್ವಿಜರೆಂದು ವ್ಯವಹಾರವಿರುವುದರಿಂದ, ಇವರಿಗೆ ಉಪನಯನಕಾಲದಲ್ಲಿ ಎರಡನೆಯ ಜನ್ಮವುಂಟಾದಹಾಗೆ ಗ್ರಹಿಸಬೇಕು. ಯಾಜ್ಞವಲ್ಕ್ಯವಚನವನ್ನನುಸರಿಸಿ,"ಗರ್ಭೈಕಾದಶೇಷು ರಾಜನ್ಯಂ" ಎಂಬ ವಾಕ್ಯಕ್ಕೆ, "ಏಕಾದಶೇಷು"ಎಂದು ಬಹುವಚನವನ್ನು ಹೇಳಿರುವುದರಿಂದ, ಹುಟ್ಟಿದುದುವೊದಲು ಒಂಭತ್ತು, ಅಥವಾ ಹನ್ನೊಂದನೆಯ ವರ್ಷಗಳಲ್ಲಿ ಕ್ಷತ್ರಿಯರಿಗೆ ಉಪನಯವನ್ನು ನಡೆಸಬೇಕೆಂದು ವ್ಯಾಖ್ಯಾನವನ್ನು ಮಾಡಿರುವರು. ಆದುದರಿಂದ ಕ್ಷತ್ರಿಯವರ್ಣಾನುಗುಣವಾಗಿ ರಾಮನಿಗೆ ಎಂಟು ವರ್ಷಗಳು ಕಳೆದು,ಒಂಬತ್ತನೆಯ ವಯಸ್ಸಿನಲ್ಲಿ ಉಪನಯನವು ನಡೆಯಿತು. ಈ ವೊದಲಿನ ಎಂಟು ವರ್ಷಗಳನ್ನು ಬಿಟ್ಟು ಉಪನಯನಕಾಲದಿಂದ ಎಣಿಸಿ, ರಾಮನಿಗೆ ಹದಿನೇಳುವರ್ಷಗಳಾದುದಾಗಿ ಕೌಸಲ್ಯೆಯ ವಾಕ್ಯದಿಂದ ಗ್ರಹಿಸಬೇಕು. ಈ ಲೆಕ್ಕದಿಂದಲೇ ಸೀತೆಯೂಕೂಡ, ವೊದಲಿನ ಎಂಟು ವರ್ಷಗಳನ್ನೂ, ಮೇಲಿನ ಹದಿನೇಳು ವರ್ಷಗಳನ್ನೂ ಸೇರಿಸಿ,ಇಪ್ಪತ್ತೈದು ವರ್ಷಗಳಾದುವೆಂದು ಹೇಳಿರುವಳು. ಆದುದರಿಂದ ಕೌಸಲ್ಯೆಯ ವಾಕ್ಯಕ್ಕೂ, ಸೀತಾವಾಕ್ಯಕ್ಕೂ ವಿರೋಧವಿಲ್ಲವೆಂದು ಸ್ಪಷ್ಟವಾಗುವುದು.ಇದರಂತೆಯೇ ದಶರಥನು ಹೇಳಿರುವ ಊನಷೋಡಶ ವರ್ಷಃ"ಎಂಬ ವಾಕ್ಯದೊಡನೆಯೂ ಸಾಮಂಜಸ್ಯವನ್ನು ನಿರೂಪಿಸಬೇಕಲ್ಲವೆ? ದಶರಥನು ರಾಮನಿಗೆ ಇನ್ನೂ ಹದಿನಾರುವರ್ಷಗಳಿಲ್ಲವೆಂದು ಹೇಳಿರುವನು. ಅದಕ್ಕೆ ಇನ್ನೂ ಎಷ್ಟು ಕಡಿಮೆಯೆಂಬುದನ್ನು ನಾವು ನಿರ್ಣಯಿಸಬೇಕು. ದಶರ

ತಿರಸ್ಕಾರಕ್ಕೊಳಗಾಗಿ ಇನ್ನು ಬಹುಕಾಲದವರೆಗೆ ನಾನು ಬದುಕಿರಲಾರೆನು.

---

ಥನು ರಾಮನನ್ನು ವಿಶ್ವಾಮಿತ್ರನೊಡನೆ ಕಳುಹಿಸಿದ ಸಂವತ್ಸರದಲ್ಲಿಯೇ ರಾಮನು ಮಾರೀಚನೊಡನೆ ಯುದ್ಧಮಾಡಿರುವನು, ಆಮೇಲೆ ಮಾರೀಚನು ರಾವಣನೊಡನೆ, ರಾಮನ ಈ ಯುದ್ಧವಿಷಯವನ್ನು ಹೇಳಿದಾಗ (ಬಾಲೋ ದ್ವಾದಶವರ್ಷೋಽಯಮಕೃತಾಸ್ತ್ರಶ್ಚ ರಾಘವ:) ಎಂದು, ರಾಮನನ್ನು ಹನ್ನೆರಡು ವಯಸ್ಸಿನವನೆಂದು ಹೇಳಿರುವನು. ಆದುದರಿಂದ ವಿವಾಹಕಾಲದಲ್ಲಿ ಸೀತೆಯು, ''ಸಮಾ ದ್ವಾದಶ ತತ್ರಾಹಂ ರಾಘವಸ್ಯ ನಿವೇಶನೇ । ಭುಂಜಾನಾ ಮಾನುಷಾನ್ ಭೋಗಾನ್'' ಎಂದೂ, ''ಉಷಿತ್ವಾ ದ್ವಾದಶಸಮಾ ಇಕ್ಷ್ವಾಕೂಣಾಂ ನಿವೇಶನೇ'' ಎಂದೂ, ತಾನೂ ಹನ್ನೆರಡು ಸಂವತ್ಸರಗಳವರೆಗೆ ಅಯೋಧ್ಯೆಯಲ್ಲಿದ್ದುದಾಗಿ ಹೇಳಿರುವುದರಿಂದ, ಮಾರೀಚನ ವಾಕ್ಯದಂತೆ ವಿವಾಹಕ್ಕೆ ಪೂರ್ವದಲ್ಲಿ ಹನ್ನೆರಡು ವರ್ಷಗಳನ್ನೂ, ಸೀತೆಯ ವಾಕ್ಯದಂತೆ ವಿವಾಹಾನಂತರದಲ್ಲಿ ಹನ್ನೆರಡುವರ್ಷಗಳನ್ನೂ ಸೇರಿಸಿದರೆ, ಕಾಡಿಗೆ ಹೊರಡುವುದಕ್ಕೆಮೊದಲು ಇಪ್ಪತ್ತು ನಾಲ್ಕುವರ್ಷಗಳು ಕಳೆದುಹೋದುವೆಂದುಸಿದ್ಧವು. ''ತತ್ರ ತ್ರಯೋದಶೇ ವರ್ಷೇ ರಾಜಾಮಂತ್ರಯತ ಪ್ರಭು:॥" ಎಂಬುದಾಗಿ, ರಾಮನ ಹದಿಮೂರನೆಯ ವರ್ಷದಲ್ಲಿ ದಶರಥನು ಆತನಿಗೆ ಪಟ್ಟವನ್ನು ಕಟ್ಟುವುದಕ್ಕಾಗಿ ಆಲೋಚಿಸಿದನೆಂದು ಸೀತೆಯು ಹೇಳಿರುವುದರಿಂದಲೂಕೂಡ, ರಾಮನು ಇಪ್ಪತ್ತುನಾಲ್ಕುವರ್ಷಗಳನ್ನು ಅಯೋಧ್ಯೆಯಲ್ಲಿ ಕಳೆದು ಇಪ್ಪತ್ತೈದರಲ್ಲಿಯೇ ಕಾಡಿಗೆ ಹೊರಟನೆಂದು ಸಿದ್ಧವಾಗುವುದು. ಆದುದರಿಂದ, ದಶರಥನು ಹೇಳಿರುವ ''ಊನಷೋಡಶ ವರ್ಷ:" ಎಂಬುದಕ್ಕೆ, ಹದಿನಾರು ವರ್ಷಗಳಾಗಬೇಕಾದರೆ,ಇನ್ನೂ ಮೂರು ನಾಲ್ಕು ವರ್ಷಗಳು ಬೇಕೆಂಬ ಅರ್ಥವನ್ನಿಟ್ಟುಕೊಂಡು, ಹನ್ನೆರಡು ವರ್ಷವೆಂದು ಗ್ರಹಿಸಿದರೆ, ದಶರಥನ ಲೆಕ್ಕವೂ ಸರಿಹೋಗುವುದು. ಇದರಿಂದ ರಾಮನಿಗೆ ಎಂಟನೆಯ ವರ್ಷವಾದಮೇಲೆ ಉಪನಯನವೂ, ಹನ್ನೆರಡನೆಯ ವರ್ಷವಾದ ಮೇಲೆ ವಿವಾಹವೂ, ಆಮೇಲೆ ಹನ್ನೆರಡುವರ್ಷಗಳವರೆಗೆ ಅಯೋಧ್ಯಾವಾಸವೂ, ಇಪ್ಪತ್ತೈದನೆಯ ವಯಸ್ಸಿನಲ್ಲಿ ವನಪ್ರವೇಶವೂ ನಡೆಯಿತೆಂದು ಸಿದ್ಧವು. ಮತ್ತು ''ಮಮ ಭರ್ತಾ ಮಹಾತೇಜಾ ವಯಸಾ ಪಂಚವಿಂಶಕ: । ಅಷ್ಟಾದಶಹಿ ವರ್ಷಾಣಿ ಮಮ ಜನ್ಮನಿ ಗಣ್ಯತೇ ॥" ಎಂದು, ರಾಮನ ಇಪ್ಪತ್ತೈದನೆಯ ವರ್ಷದಲ್ಲಿ ಸೀತೆಯು ತನಗೆ ಹದಿನೆಂಟು ವಯಸ್ಸೆಂದು ಹೇಳಿರುವಳಾದುದರಿಂದ ರಾಮನಿಗಿಂತ ಸೀತೆಯು ಏಳುವರ್ಷಗಳು ಕಿರಿಯಳೆಂದು ತಿಳಿದುಬರುವುದು. ವಿವಾಹಕಾಲದಲ್ಲಿ ರಾಮನಿಗೆ ಹನ್ನೆರಡು ವರ್ಷಗಳಾಗಿದ್ದ ಪಕ್ಷದಲ್ಲಿ,ಸೀತೆಗೆ ಐದೇ ವಯಸ್ಸಿರಬೇಕು. ಸೀತೆಯು ಅರಣ್ಯಕ್ಕೆ ಹೋಗುವಾಗ ನಡೆದಿದ್ದ ಹದಿನೆಂಟುವರ್ಷಗಳಲ್ಲಿ, ಅಯೋಧ್ಯಾ ವಾಸದಲ್ಲಿ ಕಳೆದ ಹನ್ನೆ

ಈಗಲೇ ನನ್ನ ದೇಹವೆಲ್ಲವೂ ಜೀರ್ಣವಾಗಿ ಹೋಗಿರುವುದು. ಈಗ ನನಗೆ

---

ಎರಡುವರ್ಷಗಳನ್ನು ತೆಗೆದು ಹಾಕಿದರೆ, ಆರು ವರ್ಷಗಳು ಮಿಗುವುವು. ಆದುದರಿಂದ ಸೀತೆಗೆ ವಿವಾಹಕ್ಕೆ ಮೊದಲೇ ಐದುವರ್ಷಗಳು ಕಳೆದು, ಆರನೆಯ ವರ್ಷವು ನಡೆಯುತಿತ್ತೆಂದು ಗ್ರಹಿಸಬೇಕು. ಆದರೆ ರಾಮನು ವಿವಾಹವಾದ ಕೂಡಲೇ''ರಾಮಸ್ತು ಸೀತಯಾ ಸಾರ್ಧಂ ವಿಜಹಾರ ಬಹೂನೃತೂನ್" ಎಂಬುದಾಗಿ ಸೀತೆಯೊಡಗೂಡಿ ವಿಹರಿಸುತಿದ್ದುದಾಗಿ ಹೇಳಲ್ಪಟ್ಟಿರುವುದು. ಇದರಿಂದಹನ್ನೆರಡುವರ್ಷದ. ರಾಮನು,ಐದಾರುವರ್ಷದ ಬಾಲೆಯೊಡಗೂಡಿ ವಿಹಾರಸುಖವನ್ನು ಅನುಭವಿಸುತಿದ್ದನೆಂಬುದು ಅಸಂಭವವೆಂದು ತೋರಬಹುದು. ಈ ಸೀತಾರಾಮರಿಬ್ಬರೂ ಬಾಲಕ್ರೀಡೆಗಳಲ್ಲಿಯೂಕೂಡ ನಾಚಿಕೆಯನ್ನು ಬಿಟ್ಟು ಸಲಿಗೆಯಿಂದ ಕಲೆತಿದ್ದರೆಂದಾಗಲಿ, ನಿರತಿಶಯವಾದ ರಾಜಭೋಗದಲ್ಲಿಯೇ ಬಳೆದವರಿಗೆ ಅಷ್ಟು ಸಣ್ಣವಯಸ್ಸಿನಲ್ಲಿಯೇ ಯೌವನಾರಂಭವಾಯಿತೆಂದಾಗಲಿ, ಈ ದಿವ್ಯವ್ಯಕ್ತಿಗಳಿಗೆ ಬಾಲ್ಯಯೌವನಗಳೆಂಬ ಅವಸ್ಥಾನಿಯಮವೇ ಇಲ್ಲವೆಂದಾಗಲಿ, ಸಾಮಂಜಸ್ಯವನ್ನು ಕಲ್ಪಿಸಬಹುದು. ಹೀಗಿದ್ದರೂ ಕೆಲವರು ಹನ್ನೆರಡು ವಯಸ್ಸಿನ ಬಾಲಕನು ಐದಾರುವಯಸ್ಸಿನ ಬಾಲೆಯೊಡನೆ ರತಿಸೌಖ್ಯಗಳನ್ನನುಭವಿಸುತಿದ್ದನೆಂಬುದು ಸರ್ವಥಾ ಅಸಂಭವವೆಂದು ಗ್ರಹಿಸಿ, ರಾಮನು ಕಾಡಿಗೆ ಹೊರಡುವಾಗ ಇಪ್ಪತ್ತೆಂಟುವಯಸ್ಸು ಕಳೆದು ಹೋಗಿತ್ತೆಂದೇ ಸಾಧಿಸುವರು.ಇದಕ್ಕಾಗಿ ಈ ಮತದವರು ಸಿದ್ಧಾಂತಪಡಿಸಿರುವ ರೀತಿಯೇನೆಂದರೆ - ''ಊನಷೋಡಶವರ್ಷ: ಎಂದು ಹೇಳಿರುವುದರಲ್ಲಿ, ರಾಮನು ವಿಶ್ವಾಮಿತ್ರನೊಡನೆ ಹೋಗುವುದಕ್ಕೆ ಮೊದಲು, ಆತನಿಗೆ ಹದಿನಾರುವಯಸ್ಸು ತುಂಬುವುದಕ್ಕೆ ಕೆಲವು ತಿಂಗಳುಮಾತ್ರವೇ ಕಡಿಮೆಯಾಗಿರಬಹುದೆಂದೂ, ಹಿಂದೆ ಹೇಳಿದಂತೆ ನಾಲ್ಕು ಸಂವತ್ಸರಗಳು ಕಡಿಮೆಯಾಗಿಲ್ಲವೆಂದೂ ಹೇಳುವರು. ಆದರೆ ಇದೇ ಸಂದರ್ಭದಲ್ಲಿ ದಶರಥನು ವಿಶ್ವಾಮಿತ್ರನೊಡನೆ ಹೇಳಿರುವ ಮುಂದಿನ ವಾಕ್ಯಗಳಲ್ಲಿ''ಬಾಲೋಹ್ಯಕೃತವಿದ್ಯಶ್ಚ ನವೇತ್ತಿ ಚ ಬಲಾಬಲಂ" ''ರಾಮನು ಬಾಲನು. ಅಸ್ತ್ರವಿದ್ಯೆಯಲ್ಲಿ ಪರಿಚಯವಿಲ್ಲದವನು. ತನ್ನ ಮತ್ತು ಶತ್ರುಗಳ ಬಲಾಬಲವನ್ನು ತಿಳಿದುಕೊಳ್ಳಲಾರನು'' ಎಂದು ಹೇಳಿದನಲ್ಲವೆ? ಹದಿನಾರು ವಯಸ್ಸಿನ ಕುಮಾರನನ್ನುಕುರಿತು ಹೀಗೆ ಹೇಳುತಿದ್ದನೆ? ಎಂದು ಆಕ್ಷೇಪಿಸುವಪಕ್ಷದಲ್ಲಿ,ಅದಕ್ಕೂ ಸಮಾಧಾನವಾಗಿ, ಅವರು ಹೇಳುವುದೇನೆಂದರೆ: ''ಬಾಲಆಷೋಡಶಾದ್ವರ್ಷಾತ್" ಹದಿನಾರುವರ್ಷದವರೆಗೆ ಬಾಲನೆಂಬವ್ಯವಹಾರವಿರುವುದರಿಂದಲೂ, ಬಾಲ್ಯಯೌವನಸಂಧಿಯಲ್ಲಿಯೂ ಬಾಲನೆಂದು ವ್ಯವಹರಿಸಲ್ಪಡುವುದರಿಂದಲೂ,ಇಲ್ಲಿ ರಾಮನ ಯೌವನಾರಂಭದಲ್ಲಿಕೂಡ ಬಾಲನೆಂದೇ ಹೇಳಿರುವುದಾಗಿ ಗ್ರಹಿಸಬೇಕು. ಆದರೆ ಇದೇಸ್ಥಿತಿಯನ್ನೇಮಾರೀಚನೂಕೂಡ. ''ಬಾಲೋದ್ವಾದಶವರ್ಷೋಯಮಕೃತಾಸ್ತ್ರಶ್ಚ ರಾಘವಃ || ಅಜಾತವ್ಯಂಜನಶ್ರೀಮಾನ್ ಪದ್ಮಪತ್ರನಿಭೇ

ಕೊನೆಗಾಣದ ಮಹಾದುಃಖವೂ ಪ್ರಾಪ್ತವಾಯಿತು. ಪೂರ್ಣಚಂದ್ರನಂತೆ

---

ಕ್ಷಣಃ"ಈ ರಾಮನು ಹನ್ನೆರಡು ವಯಸ್ಸಿನವನು.ಅಸ್ತ್ರವಿದ್ಯೆಯನ್ನೂ ಅಭ್ಯಸಿಸಿದವನಲ್ಲ. ಯೌವನಚಿಹ್ನವಾದ ಮೀಸೆಯೂ ಆತನಿಗೆ ಇನ್ನೂ ಹುಟ್ಟಿಲ್ಲ"ವೆಂದು ಹೇಳಿರುವನು. ಹೀಗೆ ಯೌವನಚಿಹ್ನವೇ ಇಲ್ಲದ ಹನ್ನೆರಡು ವಯಸ್ಸಿನ ಬಾಲಕನನ್ನು,ಹದಿನಾರುವರ್ಷದವನೆಂದು ಹೇಗೆ ಹೇಳಬಹುದು?ಎಂದು ಕೇಳಿದರೆ, ಮಾರೀಚನು ಯುದ್ಧಭಯದಿಂದ ಭ್ರಮಿಸಿಯೋ, ಅಥವಾ ರಾವಣನಿಗೆ ಭಯವನ್ನುಂಟುಮಾಡುವುದಕ್ಕಾಗಿಯೋ, ಹೀಗೆ ಹೇಳಿರಬಹುದೇಹೊರತು, ಆತನು ನಿಜವಾದ ಅಭಿಪ್ರಾಯದಿಂದಲೇ ಹೀಗೆ ಹೇಳಿದುದಾಗಿ ಗ್ರಹಿಸಕೂಡದು. ಹಾಗಿಲ್ಲದಿದ್ದರೆ, ತನ್ನನ್ನು ವಾಯವ್ಯಾಸ್ತ್ರದಿಂದ ಎಷ್ಟೋ ದೂರಕ್ಕೆ ಹಾರಿಸಿಬಿಟ್ಟ ರಾಮನನ್ನು ಕುರಿತು "ಅಕೃತಾಸ್ತ್ರಃ" ಅಸ್ತ್ರವಿದ್ಯೆಯಲ್ಲಿ ಬಳಿಕೆಯಿಲ್ಲದವನೆಂದು ಹೇಳುತ್ತಿರಲಿಲ್ಲ. ಆದುದರಿಂದ ಹದಿನಾರುವಯಸ್ಸುಳ್ಳವನನ್ನೇ ಹನ್ನೆರಡು ವಯಸ್ಸಿನವನೆಂದು, ಹೇಳಿರುವನು. ಬಿಲ್ಲುವಿದ್ಯೆಯಲ್ಲಿ ಬಳಿಕೆಯಿಲ್ಲದ ಅಂತಹ ಬಾಲ್ಯದಲ್ಲಿಯೇ ತನ್ನನ್ನು ಹಾಗೆ ವಾಯವ್ಯಾಸ್ತ್ರದಿಂದ ತೂರಿಬಿಟ್ಟ ರಾಮನು, ಈಗ ಪ್ರವರ್ಧಮಾನನಾಗಿ, ಶಸ್ತ್ರವಿದ್ಯೆಯಲ್ಲಿ ಪಾರಂಗತನಾಗಿರುವಾಗ, ಅವನ ಪರಾಕ್ರಮವನ್ನು ಹೇಳಬೇಕಾದುದೇನೆಂದು,ರಾವಣನಿಗೆ ಭಯಹುಟ್ಟಿಸುವುದಕ್ಕಾಗಿಯೇ ಮಾರೀಚನು ಕಲ್ಪನೆಯಿಂದ ಹೇಳಿರಬಹುದೆಂದು ಗ್ರಹಿಸಬೇಕು.ಹಾಗೆಯೇ "ಅಜಾತವ್ಯಂಜನಃ"ಎಂಬಲ್ಲಿಯೂ; "ಆ ತರುಣಿಗೆ ನಡುವೇ ಇಲ್ಲ"ವೆಂದು ಹೇಳುವಂತೆ, ಅತಿಶಯೋಕ್ತಿಯಿಂದ ಹೇಳಿದಹಾಗೆ ತಿಳಿಯಬೇಕು ಇದರಿಂದ ಯೌವನಚಿಹ್ನಗಳು ಆಗತಾನೇ ರಾಮನಲ್ಲಿ ಅಂಕುರಿಸುತಿದ್ದುವೇಹೊರತು, ಪೂರ್ಣವಾಗಿ ಹುಟ್ಟಿರಲಿಲ್ಲವೆಂದು ಗ್ರಹಿಸಬೇಕು.ಮತ್ತು "ಏಕವಸ್ತ್ರಧರೋಧನ್ವೀ ಶಿಖೀ ಕನಕಮಾಲಯಾ" ಒಂದೇ ಬಟ್ಟೆಯನ್ನುಟ್ಟು,ಬಾಲಶಿಖೆಯನ್ನಿಟ್ಟು ಬಂದನೆಂದು ಹೇಳಿರುವುದರಿಂದ,ಬಾಲವೇಷದಲ್ಲಿರುವವನಿಗೆ ಹದಿನಾರುವಯಸ್ಸನ್ನು ಹೇಳುವುದು ಹೇಗೆಂದು ಕೆಲವರು ಆಕ್ಷೇಪಿಸುವುದುಂಟು. ಆದರೆ "ಏಕವಸ್ತ್ರಧರಃ" ಎಂಬುದರಿಂದ ಒಂದೇ ಬಟ್ಟೆಯನ್ನು ಕಟ್ಟಿದವನೆಂದು ಅರ್ಥವಲ್ಲ. ತಾನು ಧರಿಸಿದ್ದ ವಸ್ತ್ರಗಳನ್ನೆಲ್ಲಾ ಒಂದೇ ಗಂಟಾಗಿಮಾಡಿ ಕಟ್ಟಿಯುದ್ಧಸನ್ನದ್ಧನಾದನೆಂದು ಭಾವವು"ವಯಸಾ ಪಂಚವಿಂಶಕಃ"ಎಂಬ ವಾಕ್ಯವು ಹೇಗೆ ಸಂಗತವಾಗುವುದೆಂದು ಕೇಳಿದರೆ ಈ ರಾಮನು ತನ್ನ ದೇಹಸೌಕುಮಾರ್ಯದಿಂದ ಯಾವಾಗಲೂ ಇಪ್ಪತ್ತೈದುವಯಸ್ಸುಳ್ಳವನಂತೆಯೇ ಕಾಣುತಿದ್ದನೆಂದೂ ಗ್ರಾಹ್ಯವು. ನಿತ್ಯಯೌವನವುಳ್ಳವನೆಂದು ಭಾವವು. ದೇವತೆಗಳು ಯಾವಾಗಲೂ ಇಪ್ಪತ್ತೈದು ವಯಸ್ಸುಳ್ಳವರಂತೆಯೇ ಕಾಣುವರೆಂದು ಪ್ರಸಿದ್ಧಿಯಿರುವುದರಿಂದ, ಕೌಸಲ್ಯೆಯು "ಗರ್ಭೈಕಾದಶೇಷು ರಾಜನ್ಯಂ" ಎಂಬಂತೆ

ಪ್ರಕಾಶಿಸುವ ನಿನ್ನ ಮುಖವನ್ನು ಕಾಣದೆ ನಾನು ಹೇಗೆ ಜೀವಿಸುತ್ತಿರ ಬಲ್ಲೆನು ? ಅಥವಾ ಬದುಕಿದ್ದರೂ, ಆ ಕಾರ್ಪಣ್ಯದ ಜೀವನದಿಂದ ಫಲ ವೇನು? ಅಯ್ಯೋ ! ನೀನು ಭಾಗ್ಯಹೀನೆಯಾದ ನನ್ನ ಹೊಟ್ಟೆಯಲ್ಲಿ ಹುಟ್ಟಿ ಇದುವರೆಗೆ ಕಷ್ಟದಿಂದಲೇ ಬಳೆದುದಲ್ಲದೆ, ಮುಂದಕ್ಕೂ ಕಷ್ಟವನ್ನೇ ಅನುಭ ವಿಸಬೇಕಾಗಿ ಬಂದಿತು. ನಿನ್ನಿಂದ ನಾನು ಎಷ್ಟೋ ಉಪವಾಸಗಳನ್ನು ಮಾ ಡಿಸಿದೆನು. ಎಷ್ಟೋ ದೇವತಾಧ್ಯಾನಗಳನ್ನೂ ಮಾಡಿಸಿದೆನು. ಎಷ್ಟೋವ್ರತಗ ಳನ್ನು ಮಾಡಿಸಿ ನಿನ್ನ ದೇಹವನ್ನೂ ಬಳಲಿಸಿದೆನು. ಅದೆಲ್ಲವೂ ನಿಷ್ಫಲವಾ ಯಿತು! ಇಷ್ಟು ದುಃಖದಲ್ಲಿಯೂ ನನ್ನ ಎದೆಯು ಒಡೆದುಹೋಗದಿರುವುದ ಲ್ಲಾ! ಮಳೆಗಾಲದಲ್ಲಿ ದೊಡ್ಡಹೊಳೆಯು ಬಂದಾಗಲೂ ಒಡೆದುಹೋಗದಿರು ವ ನದಿಯ ದಡದಂತೆ, ಈನನ್ನ ಹೃದಯವು ಶಿಲಾಮಯವಾಗಿ ಬಹುಸ್ಥಿರವಾಗಿ ರುವುದೆಂದೆಣಿಸುವೆನು. ವತ್ಸರಾಮಾ!ನನಗೆ ಒಂದುವೇಳೆ ಬ್ರಹ್ಮನು ಮರಣವ ನ್ನೇ ಬರೆದಿರಲಾರನು. ಅಥವಾ ಭಾಗ್ಯಹೀನೆಯಾದ ನನಗೆ ಯಮನ ಮನೆಯಲ್ಲಿ ಯೂ ವಾಸಯೋಗ್ಯವಾದ ಸ್ಥಳವಿರಲಾರದು. ಹಾಗೆ ಯಮನು ಇಷ್ಟಾದ ರೂ ನನ್ನನ್ನು ಕೊಲ್ಲದೆ ಇಟ್ಟಿರಬೇಕಾದರೆ ಆತನಿಗೇನು ನನ್ನಲ್ಲಿ ಕರುಣೆಯೆ? ಗೋಳಿಡುತ್ತಿದ್ದಮಾತ್ರಕ್ಕೆ ಸಿಂಹವು ಜಿಂಕೆಗಳನ್ನು ಕೊಲ್ಲದಿರುವುದೆ ? ಮಹಾದುಃಖವುಂಟಾಗಿದ್ದರೂ ಈ ನನ್ನ ದೇಹವೂ, ಈ ನನ್ನ ಮನ ಸ್ಸೂ ಭೇದಿಸಿ ಹೋಗದಿರುವುದರಿಂದ, ಇವುಗಳನ್ನು ಬ್ರಹ್ಮನು ಉಕ್ಕಿ ನಿಂದಲೇ ಮಾಡಿಟ್ಟಿರಬಹುದು ! ಈ ನನ್ನ ದೇಹಕ್ಕೆ ಯಾವಾಗಲೂ ನಾಶವಿ

---

ಹನ್ನೊಂದನೆಯ ವಯಸ್ಸಿನಲ್ಲಿ ನಡೆಯಬೇಕಾದ ಉಪನಯನವನ್ನು ಮೊದಲುಮಾಡಿ ಕೊಂಡು ಎಣಿಸಿದರೆ, ಹದಿನೇಳು ವರ್ಷಗಳಾಗುವುವು. ಹುಟ್ಟಿದುದು ಮೊದಲು ಈ ವನವಾಸಕಾಲಕ್ಕೆ ಒಟ್ಟು ಇಪ್ಪತ್ತೆಂಟು ಸಂವತ್ಸರಗಳಾಗುವುವು'' ಎಂದು ಕೆಲವರು ಸ್ಥಾಪಿಸುವರು. ಹಾಗಿದ್ದರೂ ಸೀತೆಯು ಸನ್ಯಾಸಿಯಾಗಿ ಬಂದ ರಾವಣನೊಡನೆ ''ವ ಯಸಾ ಪಂಚವಿಂಶಕಃ'' ಇಪ್ಪತ್ತೈದು ವರ್ಷದವನೆಂದು ಹೇಳಿದ ಮಾತನ್ನು ಯಥಾ ರ್ಥವಾಗಿಯೇ ಗ್ರಹಿಸಬೇಕೇ ಹೊರತು, ಪಾಪಭಯವುಳ್ಳ ಸೀತೆಯು ಯಾವಕಾರಣ ದಿಂದಲೂ ಬೇರೆವಿಧವಾಗಿ ಹೇಳುವ ಸಂಭವವಿಲ್ಲ. ಆದುದರಿಂದ ರಾಮನಿಗೆ ವನಪ್ರವೇಶ ಸಮಯದಲ್ಲಿ ಇಪ್ಪತ್ತೈದು ವರ್ಷವೆಂಬುದನ್ನೇ ಸಿದ್ಧಾಂತವಾಗಿ ಗ್ರಹಿಸಬೇಕು.

ರದು! ಅಥವಾ ಎಂತಹ ಮಹಾವಿಪತ್ತು ಸಂಭವಿಸಿದರೂ, ಬ್ರಹ್ಮನಿಂದ ಬರೆಯಲ್ಪಟ್ಟ ಆಯುಃಪ್ರಮಾಣವು ತೀರಿದಹೊರತು, ಯಾರಿಗೂ ಸಾವುಂಟಾಗಲಾರದು. ಆದುದರಿಂದಲೇ ಈವ್ಯಸನದಲ್ಲಿಯೂ ನಾನು ಬದುಕಿರಬೇಕಾಗಿದೆ ನಾನು ಮಕ್ಕಳನ್ನು ಪಡೆಯಬೇಕೆಂದು ಮಾಡಿದ ವ್ರತಗಳೂ, ದಾನಗಳೂ, ದೇವತಾಧ್ಯಾನಗಳೂ ನಿಷ್ಫಲಗಳಾದುವು. ಉಪ್ಪುನೆಲದಲ್ಲಿ ಬಿತ್ತಿದ ಬೀಜದಂತೆ ನಾನು ಮಾಡಿದ ತಪಸ್ಸೆಲ್ಲವೂ ವಿಫಲವಾಯಿತು. ಎಂದೂ ಕಾಣದ ಮಹಾವ್ಯಸನವು ಈಗ ಪ್ರಾಪ್ತವಾಗಿದೆ. ಇಂತಹ ದುಃಖಗಳು ಬಂದೊದಗಿದಾಗ ಮನುಷ್ಯನಾದವನಿಗೆ ತನ್ನ ಇಚ್ಛಾಮಾತ್ರದಿಂದಲೇ ಪ್ರಾಣವನ್ನು ಬಿಡುವ ಶಕ್ತಿಯಿರುವುದಾದರೆ, ನಾನು ಆ ಕೋರಿಕೆಯನ್ನು ಈಗಲೇ ಈಡೇರಿಸಿಕೊಳ್ಳುತಿದ್ದೆನು. ಕರುವನ್ನು ಕಾಣದ ಆಕಳಿನಂತೆ, ನಿಮಿಷಮಾತ್ರವಾದರೂ ನಾನು ನಿನ್ನನ್ನಗಲಿರಲಾರದೆ, ಈಗಲೇ ಯಮಪುರಿಯನ್ನು ಸೇರುತಿದ್ದೆನು. ಅದಕ್ಕೂ ಈಗ ಸಾಧ್ಯವಿಲ್ಲದಿರುವುದು. ಎಲೈ ರಾಮನೆ! ಈಗ ನಾನೇನು ಮಾಡಲಿ! ಇನ್ನು ಮೇಲೆ ನನ್ನ ಜೀವನವೂ ಒಂದು ಜೀವನವೆ? ವಾತ್ಸಲ್ಯದಿಂದ ಕರುವನ್ನು ಹಿಂಬಾಲಿಸಿ ಹೋಗುವ ಹಸುವಿನಂತೆ, ನಾನೂ ನಿನ್ನೊಡನೆಯೇ ಕಾಡಿಗೆ ಬರುವೆನು. ಪೂರ್ಣಚಂದ್ರನಂತೆ ಪ್ರಕಾಶಿಸುವ ನಿನ್ನ ಮುಖವನ್ನು ಆಗಾಗ ನೋಡುತಿದ್ದಾದರೂ ಸಂತೋಷಪಡಬಹುದು." ಎಂದಳು. ಹೀಗೆ ಕೌಸಲ್ಯೆಯು ರಾಮನ ಅಗಲಿಕೆಯನ್ನೂ, ಸವತಿಯರ ಪ್ರಾಬಲ್ಯವನ್ನೂ ಮನಸ್ಸಿನಲ್ಲಿ ನೆನೆಸಿಕೊಂಡಹಾಗೆಲ್ಲಾ, ಮನಸ್ಸಂಕಟವನ್ನು ತಡೆಯಲಾರದೆ, ರಾಮನು ಸತ್ಯಪಾಶದಲ್ಲಿ ಬದ್ಧನಾಗಿರುವುದನ್ನು ನೋಡಿ, ಪಾಶದಿಂದ ಬಿಗಿಯಲ್ಪಟ್ಟ ಮಗನನ್ನು ನೋಡಿದ ಕಿನ್ನರಸ್ತ್ರೀಯಂತೆ, ಆತನನ್ನು ನೋಡಿ ಬಹಳವಾಗಿ ಗೋಳಿಡುತಿದ್ದಳು. ಇಲ್ಲಿಗೆ ಇಪ್ಪತ್ತನೆಯ ಸರ್ಗವು.

---

{ಲಕ್ಷ್ಮಣನು ಕೌಸಲ್ಯೆಯನ್ನು ಸಮಾಧಾನಪಡಿಸಿದುದು. ಸತ್ಯವನ್ನು ತಪ್ಪಕೂಡದೆಂದು ರಾಮನು ಲಕ್ಷ್ಮಣನಿಗೆ ಬುದ್ಧಿವಾದವನ್ನು ಹೇಳಿದುದು.}

ಕೈಕೇಯಿಯ ಅಂತಃಪುರದಲ್ಲಿ ನಡೆದ ವೃತ್ತಾಂತವನ್ನು ಕೇಳಿದಾಗಲೇ ಲಕ್ಷ್ಮಣನಿಗೆ ಕೋಪವು ಉಕ್ಕಿಬರುತ್ತಿತ್ತು. ಆದರೆ ಇವನು ರಾಮನ ಮನ

ಷ್ಟನ್ನು ಅನುವರ್ತಿಸಿನಡೆಯಬೇಕಾದುದೇ ಧರ್ಮವೆಂದು ನಿಶ್ಚಯಿಸಿಕೊಂಡು, ಆ ಕೋಪವನ್ನು ಹೊರಬೀಳಿಸದೆ, ಮನಸ್ಸಿನಲ್ಲಿಯೇ ಅಡಗಿಸಿಕೊಂಡಿದ್ದನು. ಈಗ ಕೌಸಲ್ಯೆಯು ರಾಮನನ್ನು ಮುಂದಿಟ್ಟುಕೊಂಡು ಅಳುತ್ತಿರುವುದನ್ನು ನೋಡಿ, ಲಕ್ಷ್ಮಣನಿಗೆ ಆ ಕೋಪವು ಉದ್ರೇಕಹೊಂದಿತು. ಆಗ ಬಹಳದೀನನಾಗಿ, ಅವಳ ದುಃಖವನ್ನು ಸಮಾಧಾನಪಡಿಸುವ ವ್ಯಾಜದಿಂದ ತನ್ನ ಕೋಪವನ್ನು ಹೊರಪಡಿಸುತ್ತ, *ಆ ಕಾಲಕ್ಕೆ ತಕ್ಕತೆಂ ಬಂದಾನೊಂದುಮಾತನ್ನು ಹೇಳುವನು.“ಅಮ್ಮ ಕೌಸಲ್ಯೆ! ಒಬ್ಬಹೆಂಗಸಿನ ಮಾತಿಗಾಗಿ ರಾಮನು ರಾಜ್ಯವನ್ನು ಬಿಟ್ಟು ಕಾಡಿಗೆ ಹೋಗಬೇಕೆಂಬುದು ನನಗೂಕೂಡ ಸರ್ವಥಾ ಸಮ್ಮತವಲ್ಲ!ನಮ್ಮತಂದೆಯಾದರೋ ಬಹಳ ವೃದ್ಧನಾಗಿರುವನು. ಆತನಿಗೆ ಬುದ್ಧಿಯೇ ಸ್ತಿಮಿತವಿಲ್ಲದೆ ವಿಪರೀತವಾಗಿ ಪ್ರವರ್ತಿಸಿರುವುದು. ಇಷ್ಟು ವಯಸ್ಸಾದರೂ ವಿಷಯಾಭಿಲಾಷೆಯೆಂಬುದು ಆತನನ್ನು ಇನ್ನೂ ಬಿಡಲಿಲ್ಲ. ಹೀಗೆ ಮೊದಲೇ ಮುಪ್ಪಿನಿಂದ ಬುದ್ಧಿಗೆಟ್ಟಿರುವ ಆತನು, ಕಾಮಪರವಶನಾಗಿಯೂ ಇದ್ದಮೇಲೆ, ಯಾವ ಮಾತನ್ನು ತಾನೇ ಆಡಲಾರನು ? ಆತನಿಗೆ ಈ ಅವಸ್ಥೆಯಲ್ಲಿ ಯುಕ್ತಾಯುಕ್ತವಿವೇಚನೆಯೆಲ್ಲಿಯದು?ಈಗ ಆತನ ಮಾತನ್ನು ನಾವು ಲಕ್ಷ್ಯದಲ್ಲಿಯೇ ಇರಿಸಬಾರದು. ರಾಜ್ಯವನ್ನು ತಪ್ಪಿಸಿ ಕಾಡಿಗೆ ಕಳುಹಿಸುವಷ್ಟು, ರಾಮನು ಮಾಡಿರುವ ಅಪರಾಧವೇನು ? ಈತನಲ್ಲಿ ಅಂತಹ ದೋಷವೇನೂ ನನಗೆ ತೋರಲಿಲ್ಲ! ಎಲೆ ಮಾತೆ! ಇಷ್ಟುಮುಪ್ಪಿನಲ್ಲಿಯೂ ನಮ್ಮ ತಂದೆಯು ಕಾಮವಿಕಾರಕ್ಕೊಳಗಾಗಿ, ಹೆಂಗಸಿನಮಾತಿಗೆ ಮರುಳಾಗಿ, ನಾಚಿಕೆಯಿಲ್ಲದೆ ಹೀಗೆ ಅಕಾರ್ಯಕ್ಕೆ ಪ್ರವರ್ತಿಸಿರುವನಲ್ಲವೆ ? ಅಧರ್ಮದಲ್ಲಿ ಬಿದ್ದ ರಾಜನನ್ನು ಪ್ರಜೆಗಳೇ ಕೊಲ್ಲುವಂತೆ ಈಕ್ಷಣದಲ್ಲಿಯೇ ಆತನನ್ನು ಕೊಂದುಬಿಡುವೆನು. ಆತನು ನನಗೆ ತಂದೆಯಾಗಿದ್ದರೂ ಚಿಂತೆಯಿಲ್ಲ.)

---

* ಇಲ್ಲಿ ಕಾಲೋಚಿತವೆಂದರೆ, ಲಕ್ಷ್ಮಣನು ಕಾಮಕ್ರೋಧಾದಿಗಳಿಗೆ ಸುಲಭವಾಗಿ ಅವಕಾಶಕೊಡದ ಜಿತೇಂದ್ರಿಯನಾಗಿದ್ದರೂ, ಆಗ ಕೌಸಲ್ಯಾದೇವಿಯ ಪ್ರಲಾಪವನ್ನು ಕೇಳಿ ಆತನಿಗೆ ಅವಳ ದುಃಖೋಪಶಮನಾರ್ಥವಾಗಿ ಹಾಗೆ ಹೇಳಬೇಕಾದ ಸಂದರ್ಭವುಂಟಾಯಿತೆಂದರ್ಥವು. ರಾಮನನ್ನು ಮುಂದಿಟ್ಟುಕೊಂಡು ಕೌಸಲ್ಯೆಯು ಅಳುತಿದ್ದುದನ್ನು ನೋಡಿದರೆ, ಎಂತಹ ಜಿತೇಂದ್ರಿಯನಿಗೂ ಮನಸ್ಸು ಕಳವಳಿಸದೆ ಬಿಡದೆಂದೂ ಭಾವವು.

ಅದು ಹೋಗಲಿ! ನಮ್ಮ ರಾಮನಿಗೆಜನ್ಮದ್ವೇಷಿಯಾಗಿದ್ದವನೂಕೂಡ ಆತನನ್ನು ನಿಂದಿಸಲಾರನು.ಆತನಿಂದ ತಿರಸ್ಕೃತನಾದವನೂ ಪ್ರತ್ಯಕ್ಷದಲ್ಲಿಯಾಗಲಿ,ಪರೋಕ್ಷದಲ್ಲಿಯಾಗಲಿ ಅವನಲ್ಲಿ ದೋಷವನ್ನು ಹೇಳಲಾರನು. ಹೀಗೆ ದೇವತೆಗಳಿಗೆ ಸಮಾನನಾಗಿ, ಕಪಟವನ್ನರಿಯದ ಋಜುಸ್ವಭಾವವುಳ್ಳವನಾಗಿ, ಜಿತೇಂದ್ರಿಯನಾಗಿ, ಶತ್ರುಗಳಲ್ಲಿಯೂ ದಯೆಯನ್ನು ತೋರಿಸತಕ್ಕವನಾಗಿರುವ ಇಂತಹ ಪುತ್ರನನ್ನು, ಧರ್ಮಬುದ್ಧಿಯುಳ್ಳ ಯಾವಮನುಷ್ಯನು ತಾನೇ ನಿಷ್ಕಾರಣವಾಗಿ ತೊರೆದುಬಿಡುವನು ? ಇಷ್ಟು ವಯಸ್ಸಾದರೂ ಬಾಲ್ಯವಯಸ್ಸುಳ್ಳವನಂತೆ ಚಪಲಬುದ್ಧಿಯಿಂದ ಕಾಮವಿಕಾರಕ್ಕೊಳಗಾಗಿರುವ ಈ ರಾಜನ ಮಾತನ್ನು ಯಾವ ಮಕ್ಕಳು ತಾನೇ ಗೌರವಿಸುವರು? ರಾಜನೀತಿಯನ್ನು ವಿಚಾರಿಸುವಪಕ್ಷದಲ್ಲಿ, ಪ್ರೌಢರಾದ ಮಕ್ಕಳು, ಚಪಲಬುದ್ಧಿಯುಳ್ಳ ಇಂತಹ ತಂದೆಗಳ ಮಾತನ್ನು ಮನಸ್ಸಿಗೆ ತಂದುಕೊಳ್ಳದೆ, ತಮ್ಮ ದಾರಿಯನ್ನು ತಾವು ಹಿಡಿಯುವರು. ಅಣ್ಣಾ ! ಈ ವನವಾಸಪ್ರಸ್ತಾವವು ಹೊರರಬೀಳುವುದಕ್ಕೆ ಮೊದಲೇ, ನೀನು ರಾಜ್ಯವೆಲ್ಲವನ್ನೂ ಸ್ವಾಧೀನಪಡಿಸಿಕೊಳ್ಳುವನಾಗು ! ನಿನಗೆ ನಾನೂ ಸಹಾಯಕನಾಗಿರುವೆನು. ನಾನು ಧನುರ್ಧಾರಿಯಾಗಿ ನಿನ್ನ ಪಾರ್ಶ್ವದಲ್ಲಿ ಬೆಂಬಲವಾಗಿರುವಾಗ, ನಿನ್ನಮೇಲೆ ಯಾರೂ ಕೈಮಾಡಲಾರರು. ಹಗೆಗಳೆಲ್ಲರೂ ನಮ್ಮನ್ನು ಕಂಡರೆ ಯಮನನ್ನು ಕಂಡಂತೆ ನಡುಗುವರು. ಅಥವಾ ಒಂದುವೇಳೆ ಈ ಅಯೋಧ್ಯೆಯ ನಿವಾಸಿಗಳಲ್ಲಿ ಯಾರಾದರೂ ನಿನಗೆ ಕೆಡುಕನ್ನು ಮಾಡುವುದಾಗಿ ತೋರಿಬಂದರೆ, ಈ ಪಟ್ಟಣವನ್ನೆಲ್ಲಾ ನನ್ನ ಈ ತೀಕ್ಷ್ಣವಾದ ಬಾಣಗಳಿಂದ ನಿರ್ಮನುಷ್ಯವಾಗಿ ಮಾಡಿಬಿಡುವೆನು. ಮತ್ತು ಇಲ್ಲಿ ಭರತನ ಕಡೆಯವರಾಗಿಯೂ, ಆತನಿಗೆ ಹಿತವನ್ನುಬಯಸತಕ್ಕವರಾಗಿಯೂ ಇರುವವರು ಯಾರಾದರೂ ಕಂಡುಬಂದರೆ, ಅಂತವರನ್ನು ಈಕ್ಷಣವೇ ಕೊಲ್ಲುವೆನು. ಇದು ಸಾಧುತ್ವಕ್ಕೆ ಕಾಲವಲ್ಲ! ನಾವು ಮೃದುವಾಗಿದ್ದಷ್ಟೂ ಇತರರು ನಮ್ಮನ್ನು ತಿರಸ್ಕರಿಸುವರು. ಒಂದುವೇಳೆ ನಮ್ಮ ತಂದೆಯಾದ ದಶರಥನೇ, ಪುನಃ ಕೈಕೇಯಿಯಿಂದ ಪ್ರೇರಿಸಲ್ಪಟ್ಟು, ದುಷ್ಟಸ್ವಭಾವವುಳ್ಳವನಾಗಿ, ನಿನ್ನಲ್ಲಿ ದ್ವೇಷಬುದ್ಧಿಯನ್ನಿಟ್ಟು, ಏನಾದರೂ ವಿರೋಧವನ್ನು ಮಾಡಬಹುದಾಗಿ ತೋರಿದರೆ, ಆ ಕ್ಷಣವೇ ಆತ

ನನ್ನೂ ಕೊಂದುಬಿಡುವೆವು. ಅಥವಾ ಆತನನ್ನು ಹಿಡಿದು ಸೆರೆಯಲ್ಲಿ ಹಾಕು ವೆವು. ಇದನ್ನು ಧರ್ಮವಿರುದ್ಧವೆಂದೆಣಿಸಬೇಡ. ಕಾಮಾದಿಗಳಿಗೆ ಪರವಶನಾಗಿ ಯುಕ್ತಾಯುಕ್ತವನ್ನರಿಯದೆ, ಉನ್ಮಾರ್ಗಪ್ರವರ್ತಕನಾದವನು ಹೆತ್ತ ತಂದೆಯಾಗಿದ್ದರೂ, ಅಂತವನನ್ನು ಆಕ್ಷಣವೇ ದಂಡಿಸಬೇಕೆಂದು ಶಾಸ್ತ್ರ ಪ್ರಮಾಣವುಂಟು. ಅಣ್ಣಾ ! ಇದೇನು ! ಯಾರಬಲದಿಂದ ನಮ್ಮ ತಂದೆಯು ನ್ಯಾಯವಾಗಿ ನಿನಗೆ ಸೇರಬೇಕಾದ ಈರಾಜ್ಯವನ್ನು ಕೈಕೇಯಿಗೆ ಕೊಡಬೇಕೆಂ ದಿರುವನು ? ಇದಕ್ಕೆ ಪ್ರಬಲವಾದ ಕಾರಣವೇನಿರಬಹುದು ? ನಿನ್ನೊಡ ನೆಯೂ, ನನ್ನೊಡನೆಯೂ ಇಷ್ಟು ದ್ವೇಷವನ್ನು ಬೆಳೆಸಿಕೊಂಡಾದರೂ, ಭರ ತನಿಗೆ ರಾಜ್ಯವನ್ನುಕೊಡುವುದಕ್ಕೆ ಈತನಿಗೆ ಬೇರೆ ಯಾರಬಲವುಂಟು ? ಅಮ್ಮ ಕೌಸಲ್ಯೆ ! ಭರತನಂತೆ ನಾನೂ ಈ ರಾಮನಿಗೆ ದಾಯಾದನಾಗಿದ್ದರೂ,ನನ್ನ ಅಂತರಂಗಸಾಕ್ಷಿಯಾಗಿ, ನನಗೆ ಈತನಲ್ಲಿ ಅನುರಾಗವುಂಟು . ಈವಿಷಯದಲ್ಲಿ ನಾನು ನನ್ನ ಈ ಧನುಸ್ಸಿನ ಮೇಲೆಯೂ, ನನ್ನ ಸತ್ಯದಮೇಲೆಯೂ, ನನ್ನ ಸುಕೃತಗಳಮೇಲೆಯೂ, ಆಣೆಯಿಟ್ಟು ಶಪಥಮಾಡಿಕೊಡುವೆನು, ರಾಮನು ಉರಿಯುವ ಬೆಂಕಿಯನ್ನಾಗಲಿ,ಅಥವಾ ಘೋರವಾದ ಮಹಾರಣ್ಯವನ್ನಾಗ ಲಿ, ಪ್ರವೇಶಿಸುವುದಾಗಿ ತೋರಿದರೆ, ಅವನಿಗೆ ಮೊದಲೇ ನಾನು ಆಕಾರ್ಯವ ನ್ನು ನಡೆಸಿರುವೆನೆಂದು ತಿಳಿ ! ಸೂರ್ಯನು ಹುಟ್ಟಿದೊಡನೆಯೇ ಕತ್ತಲೆಯನ್ನು ನೀಗಿಸುವಂತೆ,ನಾನು ನನ್ನ ವೀರ್ಯದಿಂದ ನಿನ್ನ ದುಃಖವನ್ನು ಈಗಲೇ ಹೋಗ ಲಾಡಿಸುವೆನು ? ನನ್ನ ಸಾಮರ್ಥ್ಯವನ್ನಾದರೂ ನೋಡು ? ರಾಮನೂ ನನ್ನ ಶಕ್ತಿಯನ್ನು ನೋಡಲಿ"ಎಂದನು,ಮಹಾತ್ಮನಾದ ಲಕ್ಷ್ಮಣನು ಹೇಳಿದ ಈ ವಾಕ್ಯವನ್ನು ಕೇಳಿ, ಕೌಸಲ್ಯೆಯು ದುಃಖದಿಂದ ಗೋಳಿಡುತ್ತ, ರಾಮನನ್ನು ಕುರಿತು “ವತ್ಸರಾಮಾ! ನಿನ್ನ ತಮ್ಮನಾದ ಲಕ್ಷ್ಮಣನು ಹೇಳಿದ ಮಾತನ್ನು ಕೇಳಿದೆಯಾ ? ಇದು ನಿನಗೆ ಸಮ್ಮತವಾಗಿದ್ದಪಕ್ಷದಲ್ಲಿ, ಮುಂದಿನ ಕಾರ್ಯ ವನ್ನು ನಡೆಸು ? ಧರ್ಮದೃಷ್ಟಿಯಿಲ್ಲದ ನನ್ನ ಸವತಿಯಾದ ಕೈಕೇಯಿಯ ಮಾತನ್ನು ಕೇಳಿಕೊಂಡು,ನನ್ನಮಾತನ್ನು ತಿರಸ್ಕರಿಸಿ, ನನ್ನನ್ನು ಸಂಕಟಪಡಿಸಿ ಹೋಗುವುದು ನಿನಗೆ ಉಚಿತವಲ್ಲ! ನೀನು ಸಮಸ್ತಧರ್ಮಗಳನ್ನೂ ತಿಳಿದವನು. ಧರ್ಮದಲ್ಲಿಯೇ ನಿರತನಾಗಿರುವವನು. ಆದುದರಿಂದ ಧರ್ಮವನ್ನು ನಡೆಸ

ಬೇಕೆಂಬ ಆಸೆಯು ಈಗಲೂನಿನಗಿದ್ದರೆ,ನೀನು ಇಲ್ಲಿಯೇ ಇದ್ದು,ನನ್ನ ಶುಶ್ರೂಷೆಯನ್ನು ಮಾಡುತ್ತ,ಮಾತೃಶುಶ್ರೂಷೆಯೆಂಬ ಈ ಪರಮಧರ್ಮವನ್ನು ನಡೆಸಿ ಕೊಂಡುಬಾ! ಮಾತೃಶುಶ್ರೂಷೆಗಿಂತಲೂ ಮೇಲಾದ ಧರ್ಮವೊಂದೂ ಇಲ್ಲ. ಪೂರ್ವದಲ್ಲಿ ಕಶ್ಯಪನ ಮಕ್ಕಳಲ್ಲೊಬ್ಬನು, ತನ್ನ ಮನೆಯಲ್ಲಿಯೇ ಇದ್ದು ಮಾತೃಶುಶ್ರೂಷೆಯೆಂಬ ಮಹಾತಪಸ್ಸನ್ನು ಸಾಧಿಸಿ ಸ್ವರ್ಗಲೋಕವನ್ನು ಪಡೆದನು. ನಿನಗೆ ತಂದೆಯು ಹೇಗೆ ಪೂಜ್ಯನೋ, ಹಾಗೆಯೇ ತಾಯಿಯಾದ ನಾನೂ ಪೂಜ್ಯಳಲ್ಲವೆ?ನಮ್ಮಿಬ್ಬರಮಾತನ್ನೂ ನೀನು ಒಂದೇವಿಧವಾಗಿ ಗೌರವಿಸಬೇಕಲ್ಲವೆ? ನಿನ್ನ ತಂದೆಯು ನಿನ್ನನ್ನು ಕಾಡಿಗೆ ಹೋಗೆಂದು ಹೇಳಿದನಷ್ಟೆ? ನೀನು ಇಲ್ಲಿಯೇ ಇರಬೇಕೆಂಬುದು ನನ್ನ ಮತವು. ನೀನು ಕಾಡಿಗೆ ಹೋಗುವುದು ನನಗೆ ಸ್ವಲ್ಪವೂ ಸಮ್ಮತವಿಲ್ಲ. ರಾಮಾ! ನಿನ್ನನ್ನಗಲಿದಮೇಲೆ ನನಗೆ ಈ ಜೀವವೇಕೆ? ಈ ಸುಖವೇಕೆ? ನೀನಿಲ್ಲದೆ ಇಲ್ಲಿ ಅನೇಕರಾಜಭೋಗಗಳನ್ನನುಭವಿಸುವುದಕ್ಕಿಂತಲೂ, ನಿನ್ನೊಡಗೂಡಿ ಕಡ್ಡಿಕಸಗಳನ್ನಾದರೂ ತಿಂದು ಜೀವಿಸುವುದು ಮೇಲೆಂದು ನನಗೆ ತೋರಿರುವುದು. ವತ್ಸ ರಾಮಾ! ವ್ಯಸನದಿಂದ ತಲ್ಲಣಿಸುತ್ತಿರುವ ನನ್ನನ್ನು ಇಲ್ಲಿ ಬಿಟ್ಟು, ನೀನು ಕಾಡಿಗೆ ಹೋಗುವುದಾದರೆ, ನಾನು ಇಲ್ಲಿ ಅನ್ನಾಹಾರಗಳನ್ನು ಬಿಟ್ಟುಪ್ರಾಣತ್ಯಾಗವನ್ನು ಮಾಡಿಕೊಳ್ಳುವೆನೇಹೊರತು ಬದುಕಿರಲಾರೆನು. ಇದರಿಂದ ನೀನು ಇದೊಂದು ಮಹಾಪಾತಕಕ್ಕೂ ಗುರಿಯಾಗಬೇಕಾಗುವುದಲ್ಲದೆ ಬೇರೊಂದೂ ಇಲ್ಲವು! ನದಿಗಳಿಗೆಲ್ಲಾ ಒಡೆಯನಾದ ಸಮುದ್ರನು, ಪಿಪ್ಪಲಾದನೆಂಬ ಬ್ರಾಹ್ಮಣನೊಬ್ಬನಿಗೆ ಅಪಕಾರವನ್ನು ಮಾಡಿ, ಅದರಿಂದುಂಟಾದ*ಬ್ರಹ್ಮಹತ್ಯಾಪಾತಕಕ್ಕೊಳಗಾಗಿ ಸಂಕಟವನ್ನನುಭವಿಸಿದಂತೆ,ನೀನೂ

*ಬ್ರಹ್ಮಹತ್ಯೆಯೆಂದರೆ ಬ್ರಾಹ್ಮಣರನ್ನು ಕೊಂದುದರಿಂದುಂಟಾಗತಕ್ಕ ಮಹಾಪಾತಕವು. ಸಮುದ್ರಕ್ಕೆ ಈ ವಿಧವಾದ ಬ್ರಹ್ಮಹತ್ಯೆಯುಂಟಾದಂತೆ ಎಲ್ಲಿಯೂ ಪ್ರಸಿದ್ಧಿಯಿಲ್ಲ. ಆದರೆ, "ಪಿಪ್ಪಲಾದಸಮುತ್ಪನ್ನೇ ಕೃತ್ಯೇ ಲೋಕಭಯಂಕರಿ" ಎಂಬುದಾಗಿ, ಹಿಂದೆ ಸಮುದ್ರನು ಪಿಪ್ಪಲಾದನೆಂಬ ಬ್ರಾಹ್ಮಣನಲ್ಲಿ ಅಪರಾಧಪಟ್ಟುದರಿಂದ, ಆ ಬ್ರಾಹ್ಮಣನು ಒಂದು ಕೃತ್ಯೆಯನ್ನು (ಶೂನ್ಯದ ಬೊಂಬೆ) ಮಾಡಿ ಪ್ರಯೋಗಿಸಿದನು. ಅದು ಸಮುದ್ರವನ್ನು ಪೀಡಿಸಿತು. ಈ ಹಿಂಸೆಯನ್ನೇ ಬ್ರಹ್ಮಹತ್ಯೆಯೆಂದು ವ್ಯವಹರಿಸಿದುದಾಗಿ ಗ್ರಹಿಸಬಹುದು. ಕೌಸಲ್ಯೆಯು, ಮೊದಲು

ದುರ್ಗತಿಗಿಳಿಯಬೇಕಾಗುವುದು.” ಎಂದಳು. ಹೀಗೆ ದೈನ್ಯದಿಂದ ಗೋಳಿಡುತ್ತಿರುವ ಕೌಸಲ್ಯೆಯ ಮಾತನ್ನು ಕೇಳಿ ಧರ್ಮಾತ್ಮನಾದ ರಾಮನು, ಧರ್ಮಯುಕ್ತವಾಗಿರುವಂತೆ ಒಂದಾನೊಂದು ಮಾತನ್ನು ಹೇಳುವನು. “ಎಲೆ ಮಾತೆ! ನಿನ್ನ ಮಾತಿನಂತೆ ನಡೆಯಬೇಕಾದುದೇ ನನಗೆ ಧರ್ಮವೆಂಬುದರಲ್ಲಿ ಸಂದೇಹವಿಲ್ಲ. ತಂದೆಯ ಮಾತಿನಂತೆ ನಿನ್ನ ಮಾತನ್ನೂ ನಾನು ಗೌರವಿಸಬೇಕಾದುದೇ ನ್ಯಾಯವು! ಆದರೆ ಅವುಗಳಲ್ಲಿ ಬಲಾಬಲವನ್ನು ವಿಚಾರಮಾಡಬೇಡವೆ? ನಿನಗಿಂತಲೂ ಮೊದಲೇ ಆತನು ನನಗೆ ಆಜ್ಞೆಯನ್ನು ಕೊಟ್ಟಿರುವನು. ನಾನೂ ಅದರಂತೆ ನಡೆಯುವುದಾಗಿ ಮೊದಲೇ ಒಪ್ಪಿಬಂದಿರುವೆನು. ಅದನ್ನು ಮೀರಿ ನಡೆಯುವುದಕ್ಕೆನಾನು ಶಕ್ತನಲ್ಲ.ಆದುದರಿಂದ ಪ್ರಣಾಮಪೂರ್ವಕವಾಗಿ ನಿನ್ನ ಕ್ಷಮೆಯನ್ನು ಬೇಡುವೆನು. ನಾನು ಕಾಡಿಗೆ ಹೊರಡುವೆನು. ಪೂರ್ವದಲ್ಲಿ ಮಹಾಜ್ಞಾನಿಯಾಗಿ,ವ್ರತನಿಷ್ಠನೆನಿಸಿಕೊಂಡಿದ್ದಕಂಡುಮಹರ್ಷಿಯು,ತಂದೆಯ ಅಪ್ಪಣೆಯಂತೆ ಗೋಹತ್ಯೆಯನ್ನೇ ಮಾಡಿಬಿಟ್ಟನು. ಆತನೇನು ಧರ್ಮವನ್ನು ತಿಳಿದವನಲ್ಲವೆ ? ನಮ್ಮ ಇಕ್ಷ್ವಾಕುವಂಶದಲ್ಲಿಯೇ ಪೂರ್ವದಲ್ಲಿ ಸಗರಪುತ್ರರು, ತಮ್ಮ ತಂದೆಯಾದ ಸಗರನ ಆಜ್ಞೆಯಿಂದ ಭೂಮಿಯನ್ನು ಭೇದಿಸಿ ದೊಡ್ಡ ಮೃತ್ಯುವಿಗೆ ಗುರಿಯಾದರು. ಜಮದಗ್ನಿಪುತ್ರನಾದ ಪರಶುರಾಮನೂಕೂಡ, ತನ್ನ ತಂದೆಯ ಆಜ್ಞೆಯನ್ನು ಮೀರಲಾರದೆ, ಹೆತ್ತತಾಯನ್ನೇ ಕತ್ತರಿಸಿದನು. ಹೀಗೆಯೇ ದೇವತೆಗಳಿಗೆ ಸಮಾನವಾದ ಮಹಿಮೆಯುಳ್ಳ ಇನ್ನೂ ಅನೇಕಮಹಾತ್ಮರು, ಪಿತೃವಚನಪರಿಪಾಲನವನ್ನು ಬಹುಸಾಹಸದಿಂದ ನಡೆಸಿರುವರು. ಈಗ ನಾನೂ ತಂದೆಯ ಹಿತವನ್ನು ಅನುಸರಿಸಿಯೇ ನಡೆಯಬೇಕಾದುದು ಧರ್ಮವು. ತಂದೆಯ ಮಾತಿಗಾಗಿ ಗೋವಧೆಯೇ ಮುಂತಾದ ಮಹಾಘೋರಕೃತ್ಯಗಳೆಲ್ಲವನ್ನೂ ನಡೆಸಿರುವಾಗ, ನಾನು ಈಗ ಸ್ವಲ್ಪಕಾಲದ ಕಷ್ಟಕ್ಕಾಗಿ ಪಿತೃವಾಕ್ಯವನ್ನುಲ್ಲಂಘಿಸುವುದು ಧರ್ಮವೆ?ನಾನೊಬ್ಬನೇ ಹೀಗೆ

---

ಕಾಶ್ಯಪಾದಿಗಳ ದೃಷ್ಟಾಂತದಿಂದ,ಮಾತೃಶುಶ್ರೂಷೆಯಿಂದ ಲಭಿಸಬಹುದಾದ ಫಲವನ್ನು ಹೇಳಿ, ಈಗ ಆ ಶುಶ್ರೂಷೆಯನ್ನು ಮಾಡದವರಿಗುಂಟಾಗುವ ದುಷ್ಫಲಗಳಿಗೆ ಉದಾಹರಣೆವಾಗಿ ಸಮುದ್ರವನ್ನು ಹೇಳಿದುದಾಗಿ ಗ್ರಹಿಸಬೇಕು. ಸಮುದ್ರನು ಮಾತೃದುಃಖವನ್ನುಂಟುಮಾಡಿದುದರಿಂದ,ಬ್ರಹ್ಮಹತ್ಯೆಯಿಂದ ಪ್ರಾಪ್ತವಾಗಬಹುದಾದ ನರಕವನ್ನು ಹೊಂದಿದನೆಂಬ ಪುರಾಣಕಥೆಯನ್ನು ಅನುಸಂಧಿಸಿಕೊಳ್ಳಬೇಕು.

ಪಿತೃವಾಕ್ಯಪರಿಪಾಲನಮಾಡುವುದದರಲ್ಲಿ ಮುಂದಾಗಿರುವೆನೆಂದೆಣಿಸಬೇಡ! ಇದುವರೆಗೆ ಹೇಳಿದ ಮಹಾತ್ಮರೆಲ್ಲರೂ ಇದಕ್ಕಾಗಿ ನಡೆಸಿರುವ ಅಸಾಧ್ಯ ಕಾರ್ಯಗಳನ್ನು ನೋಡಿದರೆ, ನಾನು ಈಗ ಪ್ರಯತ್ನಿಸುವ ಕಾರ್ಯವು ಎಷ್ಟು ಮಾತ್ರವಾದುದು? ನಾನು ನಿನಗೆ ದುಃಖವನ್ನುಂಟುಮಾಡಬೇಕೆಂಬ ಉದ್ದೇಶ ದಿಂದ, ಯಾವುದೋ ಒಂದು ಅಪೂರ್ವಕಾರ್ಯದಲ್ಲಿ ಪ್ರವರ್ತಿಸುವೆನೆಂದೆಣಿಸು ವೆಯಾ ? ಮಹಾತ್ಮರಾದ*ಪೂರ್ವಿಕರು ಸಮ್ಮತಿಸಿ ಅನುಸರಿಸಿರುವ ದಾರಿ ಯನ್ನೇ ಹಿಂಬಾಲಿಸಿರುವೆನು. ಲೋಕದಲ್ಲಿ ಪಿತೃವಾಕ್ಯಪರಿಪಾಲನವ ನ್ನು ಮಾಡಬೇಕೆಂಬುದು ನಿಯತಧರ್ಮವಾದುದರಿಂದ, ಅದಕ್ಕೆ ವ್ಯತಿರಿಕ್ತ ವಾಗಿ ನಡೆಯುವುದುಚಿತವಲ್ಲ! ಈ ಪಿತೃವಾಕ್ಯಪರಿಪಾಲನದಿಂದ ಯಾರಿಗೆ ಯಾವ ಅನಿಷ್ಟವುಂಟಾದರೂ, ಅದನ್ನು ನಡೆಸಿದವನಮೇಲೆ ದೋಷವಿಲ್ಲ" ಎಂದನು. ಸಮಯೋಚಿತವಾಕ್ಯಗಳನ್ನಾಡುವವರಲ್ಲಿಯೂ, ಧನುರ್ಧಾರಿಗ ಳಲ್ಲಿಯೂ ಸರ್ವೋತ್ತಮನೆನಿಸಿಕೊಂಡ ರಾಮನು, ಹೀಗೆ ತಾಯಿಯನ್ನು ಕುರಿತು ಹೇಳಿದಮೇಲೆ, ಲಕ್ಷ್ಮಣನಕಡೆಗೆ ತಿರುಗಿ, "ವತ್ಸ ಲಕ್ಷ್ಮಣಾ! ನಿನಗೆ ನನ್ನಲ್ಲಿರುವ ಪ್ರೇಮಾತಿಶಯವನ್ನು ನಾನು ಚೆನ್ನಾಗಿ ಬಲ್ಲೆನು. ನಿನ್ನ ಪರಾಕ್ರ ಮವನ್ನೂ, ಶಕ್ತಿಯನ್ನೂ, ಇತರರಿಂದ ತಿರಸ್ಕರಿಸುವುದಕ್ಕಸಾಧ್ಯವಾದ ನಿನ್ನ ವೀರ್ಯವನ್ನೂ ನಾನು ಬಲ್ಲೆನು. ಎಲೆ ಮಂಗಳಾಂಗನೆ! ನಮ್ಮ ತಾಯಿಯು, ಸತ್ಯ, ಶಾಂತಿ, ಮೊದಲಾದ ಸದ್ಗುಣಗಳ ಸ್ವರೂಪವನ್ನು ಚೆನ್ನಾಗಿ ತಿಳಿದುಕೊಳ್ಳಲಾರಳು ಇದಲ್ಲದೆ, ಕೇವಲಸ್ತ್ರೀಮಾತ್ರಳಾದುದರಿಂದ, ಅವ

---

* ಪೂರ್ವಿಕರು ಸಮ್ಮತಿಸಿದುದೆಂದರೆ ಚಂದ್ರನು ತಾರೆಯನ್ನು ಪರಿಗ್ರಹಿಸಿದುದೇ ಮೊದಲಾಗಿ, ಅವರು ಸಮ್ಮತಿಸದ ಕೃತ್ಯಗಳೂ ಕೆಲವಿರುವುದರಿಂದ ಅವುಗಳನ್ನು ನಡೆಸಕೂಡದೆಂದು ಭಾವವು. ಗೋವಧೆ ಮುಂತಾದುವು ಪೂರ್ವಿಕರು ನಡೆಸಿದ ಸಾಹಸಕೃತ್ಯಗಳಾದರೂ ಅಧರ್ಮವಲ್ಲ. ಪಿತ್ರಾಜ್ಞೆಯಿಲ್ಲದೆ ನಡೆಸಿದ್ದ ಪಕ್ಷದಲ್ಲಿ ಅವು ಅಕೃತ್ಯಗಳಾಗುತಿದ್ದುವು " ಪಿತುಶ್ಶತಗುಣಂ ಮಾತಾ ಗೌರವೇಣಾತಿರಿಚ್ಯತೇ " ಪೂಜ್ಯತೆಯಲ್ಲಿ ತಂದೆಗಿಂತಲೂ ತಾಯಿಯು ನೂರುಪಾಲು ಹೆಚ್ಚೆಂದು ಹೇಳಿದುದು, ಶುಶ್ರೂಷಾವಿಷಯದಲ್ಲಿಯೇ ಹೊರತು, ಆಜ್ಞೆಯನ್ನು ನಡೆಸುವ ವಿಷಯದಲ್ಲಲ್ಲ.ತಂ ದೆಯೇ ಎಲ್ಲಾಭಾಗಗಳಲ್ಲಿಯೂ ನಿಯಾಮಕನಾದುದರಿಂದ, ತಾಯಿಯ ಮಾತಿಗಿಂತ ಲೂ ತಂದೆಯ ಮಾತನ್ನು ಅತ್ಯವ್ಯಶವಾಗಿ ನಡೆಸಬೇಕೆಂದು ಸೂಚಿತವು

ಳು ಈಗ ಮಹಾವ್ಯಸನದಲ್ಲಿ ಮುಂದುಗಾಣದೆಮಾತಾಡುವುದೂ ಸಹಜವು. ಪ್ರಾಜ್ಞನಾದ ನೀನೂ ಹೀಗೆ ಹೇಳುವುದುಚಿತವೆ ? ಲೋಕದಲ್ಲಿರುವ ಸಮಸ್ತಪುರುಷಾರ್ಥಗಳಲ್ಲಿಯೂ ಧರ್ಮವೇ ಪ್ರಧಾನವು! ಧರ್ಮದಲ್ಲಿಯೇ ಸತ್ಯವೆಂಬುದು ನೆಲೆಗೊಂಡಿರುವುದು. ಈ ಪಿತೃವಾಕ್ಯಪರಿಪಾಲನವೆಂಬುದೂಕೂಡ ಧರ್ಮವನ್ನೇ ಆಶ್ರಯಿಸಿರುವುದು. ಧರ್ಮದಲ್ಲಿಯೇ ನಿಂತು, ಆ ಧರ್ಮದ ಫಲವನ್ನು ಪಡೆಯಬೇಕೆಂದಿರುವವನು, ತಂದೆಯ ವಿಷಯದಲ್ಲಿಯಾಗಲಿ, ತಾಯಿಯ ವಿಷಯದಲ್ಲಿಯಾಗಲಿ, ಅಥವಾ ಬ್ರಾಹ್ಮಣನ ವಿಷಯದಲ್ಲಿಯಾಗಲಿ, ಕೊಟ್ಟ ಮಾತಿಗೆ ತಪ್ಪಿನಡೆಯಬಾರದು. ಆದುದರಿಂದ ಎಲೈವತ್ಸನೆ ! ನಾನು ತಂದೆಯ ಆಜ್ಞೆಯನ್ನು ಅತಿಕ್ರಮಿಸುವುದಕ್ಕೆ ಶಕ್ತನಲ್ಲ. ತಂದೆಯು ನನ್ನನ್ನು ಕಾಡಿಗೆ ಹೋಗೆಂದು ತನ್ನ ಬಾಯಿಂದ ಹೇಳಲಿಲ್ಲವೆಂದು ನೀನು ಶಂಕಿಸಬೇಡ! ಆತನ ಆಜ್ಞೆಯನ್ನನುಸರಿಸಿಯೇ ಕೈಕೇಯಿಯು ನನಗೆ ಈ ಆಜ್ಞೆಯನ್ನು ಮಾಡಿರುವಳು. ಆದುದರಿಂದ ತಂದೆಯನ್ನಾದರೂ ಕೊಂದು ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ ಕ್ರೂರವಾದ ಈಕ್ಷತ್ರಿಯಧರ್ಮವನ್ನು ಬಿಟ್ಟುಬಿಡು! *ಧರ್ಮವನ್ನಾಶ್ರಯಿಸು ! ಈ ವಿಧವಾದ ಬುದ್ಧಿಯನ್ನು ನಿಶ್ಶೇಷವಾಗಿ ತ್ಯಜಿಸು ! ನನ್ನ ಮಾರ್ಗವನ್ನನುಸರಿಸಿ ನನ್ನ ಬುದ್ಧ್ಯನುಸಾರವಾಗಿ ನಡೆಯುವುದೇ ನಿನಗೆ ಶ್ರೇಯಸ್ಕರವು." ಎಂದು ಭ್ರಾತೃವಾತ್ಸಲ್ಯದಿಂದ ಲಕ್ಷ್ಮಣನಿಗೆ ವಿಶೇಷವಾದ ಬುದ್ಧಿವಾದವನ್ನು ಹೇಳಿ, ಪುನಃ ಕೌಸಲ್ಯೆಯಕಡೆಗೆ ತಿರುಗಿ, ವಿನಯದಿಂದ ತಲೆಯನ್ನು ತಗ್ಗಿಸಿ, ಕೈಮುಗಿದು ನಿಂತುಕೊಂಡು, "ಅಮ್ಮಾ! ಇನ್ನು ನನಗೆ ಅನುಮತಿಯನ್ನು ಕೊಡು! ನಾನು ಕಾಡಿಗೆ ಹೊರಡುವೆನು. ಇನ್ನು ನನ್ನ ಮೇಲೆ ಆಣೆಯಿಟ್ಟು ಬೇಡುವೆನು. ನನ್ನ ಪ್ರಯಾಣಕ್ಕೆ ನೀನು ತಡೆಮಾಡಬೇಡ! ನನಗೆ ಮಂಗಳಾಶೀರ್ವಾದಗಳನ್ನು ಮಾಡಿ ಕಳುಹಿಸು. ಈ ನನ್ನ ಪ್ರತಿಜ್ಞೆಯು ತೀರಿದೊಡನೆಯೇ ಕಾಡಿನಿಂದ

---

* ಕೇವಲನೀತಿಯನ್ನುಮಾತ್ರವಲ್ಲದೆ, ಧರ್ಮಯುಕ್ತವಾದ ನೀತಿಯನ್ನೇ ಅನುಷ್ಠಿಸಬೇಕೆಂದು ಭಾವವು. ಧರ್ಮವನ್ನು ಬಿಟ್ಟಾದರೂ ಕೇವಲನೀತಿಯನ್ನೇ ಅನುಸರಿಸಬೇಕೆಂಬುದು ಲೋಕಾಯತರ ಮತವು. ಈ ಶಾಸ್ತ್ರವು ಅದನ್ನು ಖಂಡಿಸಿ ಧರ್ಮವನ್ನು ಸ್ಥಾಪಿಸುವುದು. ಆದುದರಿಂದ ಲಕ್ಷ್ಮಣನು ಅಲ್ಲಲ್ಲಿ ಲೋಕಾಯತಮತವನ್ನು ಉಪನ್ಯಸಿಸಿದಾಗ, ರಾಮನು ಅದನ್ನು ಖಂಡಿಸಿ ಧರ್ಮವನ್ನೇ ಸ್ಥಾಪಿಸುತಿದ್ದನೆಂದು ರಹಸ್ಯವು.

ಹಿಂತಿರುಗುವೆನು. ಪೂರ್ವದಲ್ಲಿ ಸ್ವರ್ಗಲೋಕವನ್ನು ಬಿಟ್ಟುಬಂದ ಯ ಯಾತಿಯು,ಪುನಃ ಸ್ವರ್ಗವನ್ನು ಸೇರಿದಂತೆ, ಈ ಅಯೋಧ್ಯೆಗೇ ಬಂದುಬಿಡು ವೆನು. ದಶರಥನ ಆಜ್ಞೆಯನ್ನು ನಿರ್ವಹಿಸುವ ಭಾರವು ನನ್ನೊಬ್ಬನಿಗೇ ಸೇರಿದು ದೆಂದೆಣಿಸಬೇಡ! ನಾನಾಗಲಿ, ನೀನಾಗಲಿ,ಸೀತೆಯಾಗಲಿ, ಲಕ್ಷ್ಮಣನಾಗಲಿ ಸುಮಿತ್ರೆಯಾಗಲಿ ಅವನ ಅಪ್ಪಣೆಯನ್ನನುಸರಿಸಿ ನಡೆಯಬೇಕಾದುದೇ ನ್ಯಾಯವು.ಇದೊಂದು ಅನಾದಿಯಾದ ಧರ್ಮವೆಂದು ತಿಳಿ!ಎಲೆ ತಾಯೆ!ಈಗ ನೀನು ನನ್ನ ಶ್ರೇಯಃಪ್ರಾರ್ಥನೆಗಾಗಿ ಮಾಡಿರುವ ಪೂಜಾದ್ರವ್ಯಸಂಭಾರ ಗಳನ್ನು ತೆಗೆದಿಡು! ವ್ಯಸನವನ್ನು ನಿನ್ನ ಮನಸ್ಸಿನಲ್ಲಿಯೇ ಅಡಗಿಸಿಕೊಳ್ಳುವ ಳಾಗು! ನಾನು ಈಗ ವನವಾಸಕ್ಕಾಗಿ ಮನಸ್ಸನ್ನು ಸ್ಥಿರಪಡಿಸಿಕೊಂಡಿರು ವಂತೆಯೇ, ನೀನೂ ಮನಸ್ಸನ್ನು ದೃಢಪಡಿಸಿಕೊಂಡು, ನನ್ನ ಮಾರ್ಗವನ್ನ ನುಮೋದಿಸು."ಎಂದನು. ಹೀಗೆ ರಾಮನು ಧೈರ್ಯದಿಂದಲೂ,ಧರ್ಮಬುದ್ಧಿಯಿಂ ದಲೂ ಹೇಳಿದ ಮಾತನ್ನು ಕೇಳಿ ಕೌಸಲ್ಯೆಯು ವ್ಯಸನದಿಂದ ಮುಂದು ಗಾಣದಿದ್ದ ತನ್ನ ಮನಸ್ಸನ್ನು ಸಮಾಧಾನಕ್ಕೆ ತಂದುಕೊಂಡು,ಪುನಃರಾಮ ನನ್ನು ಕುರಿತು ‘‘ವತ್ಸಾ!ಇದುವರೆಗೆ ನಾನು ನಿನ್ನನ್ನು ಸಾಕಿ ವೃದ್ಧಿಗೆ ತಂದ ಕೃತಜ್ಞತಾಧರ್ಮವನ್ನಾದರೂ ಪರ್ಯಾಲೋಚಿಸು. ವಾತ್ಸಲ್ಯದವಿಷಯದ ಲ್ಲಿಯೂ, ದೇಹಸಂಸಂಬಂಧದ ವಿಷಯದಲ್ಲಿಯೂ,ನಿನಗೆ ತಂದೆಯು ಹೇಗೋ ಹಾಗೆಯೇನಾನೂ ಪೂಜ್ಯಳಲ್ಲವೆ?ತಂದೆಯ ಮಾತಿನಂತೆಯೇ ನನ್ನಮಾತನ್ನೂ ನೀನು ಆದರಿಸಬೇಕಲ್ಲವೆ?ನೀನು ಕಾಡಿಗೆ ಹೋಗುವುದಕ್ಕೆ ನಾನು ಎಂದಿಗೂ ಸಮ್ಮತಿಸಲಾರೆನು. ನನ್ನನ್ನು ವ್ಯಸನದಲ್ಲಿರಿಸಿ ಹೋಗುವುದು ನಿನಗೆ ಧರ? ವಲ್ಲ.ನೀನಿಲ್ಲದಮೇಲೆ ನನಗೆ ಈಜೀವನವೇಕೆ?ಬಂಧುಗಳೇಕೆ!ಪರಲೋಕವೇಕ್ಕೆ ಪಿತೃಲೋಕದಲ್ಲಿ ಸ್ವಧೆಯು ಸಿಕ್ಕಿದರೂ,ಸ್ವರ್ಗಲೋಕದಲ್ಲಿ ಅಮೃತವೇ ಲಭಿ ಸಿದರೂ ನನಗೆ ತೃಪ್ತಿಯಿರದು. ಆನಂದಪ್ರದಗಳಾದ ಮಹರ್ಲೋಕವೇ ಮೊದಲಾದ ಊರ್ಧ್ವಲೋಕದಲ್ಲಿರುವ ಪ್ರಾಣಿಸಮೂಹಗಳೆಲ್ಲವೂ, ನನ್ನಿದಿ ರಾಗಿ ಬಂದುನಿಂತರೂ, ನೀನು ಕಣ್ಣೆದಿರಿಗಿದ್ದಂತೆ ತೃಪ್ತಿಕರವಾಗುವುದಿಲ್ಲ" ಎಂದಳು.*ಕಾಡಿನಲ್ಲಿ ಆನೆಗಳನ್ನು ಹಿಡಿಯತಕ್ಕವರು,ಕೊಳ್ಳಿಗಳನ್ನು ಹಿಡಿದು,

---

*ಇಲ್ಲಿ ‘‘ಮಹಾಗಜೋಕ್ಷಧ್ವಾನಮನುಪ್ರವಿಷ್ಟಃ" ಎಂದು ಮೂಲವು. ಇದುಗೋ ವಿಂದರಾಜೀಯವ್ಯಾಖ್ಯಾನಾನುಸಾರವಾದ ಪಾಠವು.‘‘ಮಹಾಗಜೋ ಧ್ವಾನ್ತಮನುಪ್ರವಿ

ಅಡ್ಡಗಟ್ಟಿ ಉಪದ್ರವಪಡಿಸಿದರೂ ಲಕ್ಷ್ಯಮಾಡದೆ, ನಿರ್ಭಯವಾಗಿ ತನ್ನ ದಾರಿಯನ್ನೇ ತಾನು ಹಿಡಿದು ಹೋಗುವ ಮದದಾನೆಯಂತೆ,ಕೌಸಲ್ಯೆಯೂ ಲಕ್ಷ್ಮಣನೂ ಎಷ್ಟೆಷ್ಟುವಿಧದಲ್ಲಿ ಯುಕ್ತಿವಾದಗಳನ್ನು ಹೇಳಿತಡೆದರೂ,ರಾಮನು, ತನ್ನ ಧರ್ಮಸಂಕಲ್ಪವನ್ನು ಬಿಡಲಿಲ್ಲ. ತಾಯಿಯಾದ ಕೌಸಲ್ಯೆಯು ಅನೇಕವಿಧದಲ್ಲಿ ಪ್ರಲಾಪಿಸುತ್ತಿದ್ದರೂ, ಅದನ್ನು ಕೇಳಿ ಮತ್ತಷ್ಟು ದೃಢಚಿತ್ತನಾಗಿ, ತನ್ನದಾರಿಯನ್ನೇ ತಾನು ಹಿಡಿದುನಿಂತನು. ಪ್ರಜ್ಞೆಯಿಲ್ಲದೆ ಗೋಳಿಡುತ್ತಿರುವ ತನ್ನ ತಾಯಿಯನ್ನೂ,ವ್ಯಸನದಿಂದ ಪರಿತಪಿಸುತ್ತಿರುವ ಲಕ್ಷ್ಮಣನನ್ನೂ ನೋಡಿ ರಾಮನು, ಧರ್ಮದಲ್ಲಿಯೇ ಸ್ಥಿರಬುದ್ಧಿಯುಳ್ಳವನಾಗಿ,ಅವರಿಬ್ಬರಿಗೂ ಧರ್ಮಸೂಕ್ಷ್ಮವನ್ನು ತಿಳಿಸಲಾರಂಭಿಸಿದನು. ಈ ವಿಧವಾದ ಧರ್ಮಸಂಕಟದಲ್ಲಿ ರಾಮನೊಬ್ಬನಲ್ಲದೆ,ಇಷ್ಟುಸ್ಥಿರಬುದ್ಧಿಯಿಂದಮಾತಾಡುವವರು ಲೋಕದಲ್ಲಿ ಬೇರೆ ಯಾರುಂಟು?ಹೀಗೆ ತನ್ನ ಸುಸ್ವಭಾವಕ್ಕೆ ತಕ್ಕಂತೆ ಮೊದಲು ಲಕ್ಷ್ಮಣನನ್ನು ಕುರಿತು,"ವತ್ಸಲಕ್ಷ್ಮಣಾ!ನಿನಗೆನನ್ನಲ್ಲಿರುವಭಕ್ತಿಯನ್ನೂ ನಿನ್ನ ಪರಾಕ್ರಮವನ್ನೂ, ನಾನು ಮೊದಲಿಂದಲೂ ತಿಳಿದಿರುವೆನು. ಆದರೂ ನೀನು ಧರ್ಮಯುಕ್ತವಾದ ನನ್ನ ಅಭಿಪ್ರಾಯವನ್ನು ಚೆನ್ನಾಗಿ ತಿಳಿದುಕೊಳ್ಳದೆ, ತಾಯಿಯಾದ ಈ ಕೌಸಲ್ಯೆಯೊಡನೆ ಸೇರಿ, ನನ್ನನ್ನು ದುಃಖಪಡಿಸುವುದುಚಿತವೆ?*ಪುಣ್ಯಕ್ಕೆ ಫಲರೂಪಗಳಾದ ಸೌಖ್ಯಗಳನ್ನುಂಟುಮಾಡುವುದಕ್ಕೆ ಧರ್ಮಾರ್ಥಕಾಮಗಳೆಂಬ ಮೂರುಪುರುಷಾರ್ಥಗಳೂ ಮುಖ್ಯಕಾರಣಗಳೆಂದು ನಿರ್ಣಯಿಸಲ್ಪಟ್ಟಿವೆ. ಈ ಮೂರುಪುರುಷಾರ್ಥಗಳೂ ಧರ್ಮದಲ್ಲಿಯೇ ನೆಲೆಗೊಂ

---

ಷ್ಟ:"ಎಂಬುದು ಮಹೇಶ್ವರತೀರ್ಥವ್ಯಾಖ್ಯಾನಾನುಸಾರವಾದ ಪಾಠವು. ಇದಕ್ಕೆ "ರಾತ್ರಿಯಲ್ಲಿ ಮನುಷ್ಯರು ಕೊಳ್ಳಿಯನ್ನು ಹಿಡಿದು ಓಡಿಸುತ್ತಿರುವಾಗ, ಕತ್ತಲೆಯುಳ್ಳ ಪ್ರದೇಶದಲ್ಲಿ ಬಂದು ಸಿಕ್ಕಿಕೊಂಡ ಆನೆಯು, ಭಯದಿಂದ ಹೇಗೆ ತಪಿಸುವುದೋ, ಹಾಗೆಯೇ ತಾಯಿಯ ವಿಲಾಪವನ್ನು ಕೇಳಿ ರಾಮನು ಬಹಳವಾಗಿ ತಪಿಸುತಿದ್ದನೆಂದರ್ಥವು.

* ಈ ವಾಕ್ಯಕ್ಕೆ ಈಕೆಳಗೆ ಕಂಡಂತೆಯೂ ಅರ್ಥವನ್ನು ಮಾಡಬಹುದು. ಶಾಸ್ತ್ರಾದಿಗಳಲ್ಲಿ ಫಲಸಾಧನಗಳೆಂದು ತಿಳಿಸಲ್ಪಡುವ ಧರ್ಮಾರ್ಥಕಾಮಗಳೆಂಬಿವು ಮೂರೂ ಅನುಕೂಲೆಯಾಗಿಯೂ, ಪ್ರಿಯಳಾಗಿಯೂ, ಪುತ್ರವತಿಯಾಗಿಯೂ ಇರುವ ಹೆಂಡತಿಯಂತೆ, ಫಲಸಾಧಕಗಳಾಗುವುವು. ಆದರೆ, 'ಇವು ಮೂರೂ ಸಮಾನವಾಗಿ ಫಲಸಾಧಕಗಳಾಗಿರುವಾಗ, ಅವುಗಳಲ್ಲಿ ಯಾವುದಾದರೂ ಒಂದನ್ನುಮಾತ್ರ ಅಂಗೀಕರಿಸಿದರೆಸಾಕ

ಡಿರುವುವು. ಇವೆಲ್ಲಕ್ಕೂ ಧರ್ಮವೇ ಆಧಾರವು. ಇದರಲ್ಲಿ ಸ್ವಲ್ಪವೂ ಸಂದೇಹ ವಿಲ್ಲ! ಕೈಹಿಡಿದ ಹೆಂಡತಿಯು ತನಗನುಕೂಲಳಾಗಿ ಧರ್ಮವನ್ನೂ, ಪ್ರಿಯ ಳಾಗಿದ್ದು ಕಾಮವನ್ನೂ, ಸತ್ಪುತ್ರಸಂತಾನವನ್ನು ಪಡೆದು, ಆ ಮಕ್ಕಳ ಭಾ ಗ್ಯವಶದಿಂದ ಅರ್ಥವನ್ನೂ ಸಾಧಿಸಿಕೊಡುವಂತೆಯೇ, ಧರ್ಮವೊಂದನ್ನು ಬಿಡದೆ ಅನುಷ್ಠಿಸುತಿದ್ದ ಪಕ್ಷದಲ್ಲಿ,ಸೌಖ್ಯಪ್ರದಗಳಾದ ಅರ್ಥಕಾಮಗಳೆಂಬಪುರುಷಾ ರ್ಥಗಳು ತಾವಾಗಿ ಸಿದ್ಧಿಸುವುವು.ಯಾವ ಕಾರ್ಯದಲ್ಲಿ ಧರ್ಮಾರ್ಥಕಾಮಗಳೆಂಬ ಮೂರುಪುರುಷಾರ್ಥಗಳೂ ಸಂಬಂಧಿಸಿಲ್ಲವೋ, ಆಕಾರ್ಯಕ್ಕೆ ಪ್ರವರ್ತಿಸಬಾರ ದು.ಧರ್ಮವನ್ನು ಬಿಟ್ಟು,ಕೇವಲ ಅರ್ಥಕಾಮಗಳನ್ನುಂಟುಮಾಡತಕ್ಕಕಾರ್ಯಗಳಿ ಗೂ ಪ್ರವರ್ತಿಸಬಾರದು. ಲೋಕದಲ್ಲಿ ಕೇವಲ ಅರ್ಥಪರಾಯಣನಾದವನು, ಜನಗಳಲ್ಲಿ ವಿರೋಧವನ್ನು ಸಂಪಾದಿಸಬೇಕಾಗುವುದು. ಕೇವಲಕಾಮಪರಾ ಯಣತ್ವವೂ ಪ್ರಶಸ್ತವೆನಿಸುವುದಿಲ್ಲ! ದಶರಥನು ನಮಗೆ ತಂದೆಯುಮಾತ್ರ ವಲ್ಲ. ಆತನೇ ಆಚಾರ್ಯನು! ಆತನೇ ರಾಜನು! ಮತ್ತು ವಯಸ್ಸಿನಿಂದಲೂ ನಮಗೆ ಪೂಜ್ಯನು. ಆತನು ಕೋಪದಿಂದಲೋ, ಸಂತೋಷದಿಂದಲೋ, ಅಥವಾ ಕಾಮದಿಂದಲೋ, ತಾನು ಮಾಡಿದ ಪ್ರತಿಜ್ಞೆಯನ್ನು ಕಾಪಾಡಬೇ ಕೆಂಬ ಧರ್ಮವನ್ನನುಸರಿಸಿ, ಈ ಕಾರ್ಯವನ್ನು ನಿಯಮಿಸಿರುವಾಗ, ಕ್ರೂರ ಸ್ವಭಾವವಿಲ್ಲದ ಯಾವ * ಪುತ್ರನುತಾನೇ ಅದನ್ನು ನಡೆಸದಿರುವನು? ಆದು ದರಿಂದ ತಂದೆಯ ಆಜ್ಞೆಯನ್ನು ಆತನ ಮನಸ್ತೃಪ್ತಿಯಾಗುವಂತೆ ಲೋಪ

---

ಲ್ಲವೆ?" ಎಂದು ಕೇಳಿದರೆ, ಇವು ಮೂರನ್ನೂ ಉಂಟುಮಾಡದೆ,ಕೇವಲಧರ್ಮಮಾತ್ರ ಸಾಧಕವಾದ ಕಾರ್ಯವನ್ನೇ ಮಾಡಬೇಕೆಂದಭಿಪ್ರಾಯವು. ಏಕೆಂದರೆ, ಅರ್ಥಪರಾಯಣ ರು ದ್ವೇಷಿಸಲ್ಪಡುವುದರಿಂದಲೂ, ಕಾಮಪರಾಯಣತ್ವವು ಅಷ್ಟು ಪ್ರಶಸ್ತವಲ್ಲ ದುದರಿಂದಲೂ, ಧರ್ಮಮಾತ್ರವನ್ನು ಸಾಧಿಸುವುದೇ ಮೇಲೆಂದು ಭಾವವು.

* "ಜೀವತೋ ವಾಕ್ಯಕರಣಾತ್ ಪ್ರತ್ಯಬ್ದಂಭೂರಿಭೋಜನಾತ್। ಗಯಾಯಾಂ ಪಿಣ್ಡದಾನಾಚ್ಚ ತ್ರಿಭಿಃ ಪುತ್ರಸ್ಯ ಪುತ್ರತಾ"॥ಎಂದರೆ,ತಂದೆಯು ಬದುಕಿರುವಾಗ ಆತ ನ ಆಜ್ಞೆಯನ್ನನುಸರಿಸಿನಡೆಯುತ್ತಿರುವುದೂ,ಆತನು ಸತ್ತಮೇಲೆ ಪ್ರತಿವರ್ಷದಲ್ಲಿಯೂ ದೊಡ್ಡ ಸಂತರ್ಪಣೆಯನ್ನು ಮಾಡುವುದೂ,ಗಯೆಯಲ್ಲಿ ಪಿಂಡದಾನವನ್ನು ಮಾಡುವು ದೂ, ಇವು ಮೂರುಕಾರ್ಯಗಳಿಂದಲೇ ಮಗನು ಪುತ್ರನೆನಿಸುವನೆಂದರ್ಥವು. ಈ ಸ್ಮೃತಿ ವಾಕ್ಯವನ್ನು ಬಿಟ್ಟು ತಪ್ಪುದಾರಿಗೆ ಹೋಗಬಾರದೆಂದು ರಾಮನ ಅಭಿಪ್ರಾಯವು.

ವಿಲ್ಲದೆ ನಡೆಸಬೇಕಾದುದೇ ನನ್ನ ಕರ್ತವ್ಯವು. ಎಂದಿಗೂ ನಾನು ಅದಕ್ಕೆ ವ್ಯತಿರಿಕ್ತವಾಗಿ ನಡೆಯಲಾರೆನು. ವತ್ಸ ಲಕ್ಷ್ಮಣಾ! ನಮ್ಮ ತಂದೆಗೆ ನನ ಗಾಗಲಿ, ಭರತನಿಗಾಗಲಿ, ಯಾವವಿಷಯವನ್ನಾದರೂ ಆಜ್ಞಾಪಿಸುವುದಕ್ಕೆ ಅಧಿಕಾರವುಂಟು! ಈ ನಮ್ಮ ತಾಯಿಗೂ ಆತನೇ ನಿಯಾಮಕನು. ನಮ್ಮೆ ಲ್ಲರಿಗೂ ಆತನೇ ಗತಿಯು. ನಾವೆಲ್ಲರೂ ಆತನನ್ನು ಧರ್ಮಸ್ವರೂಪವೆಂದೇ ತಿಳಿ ಯಬೇಕು. ತಾಯಿಯಾದ ಕೌಸಲ್ಯೆಗೂಕೂಡ ಆತನ ಮನಸ್ಸನ್ನನುಸರಿಸಿ ನಡೆಯುವುದೇ ಮುಖ್ಯಧರ್ಮವು. ಈಕೆಯ ಪರಲೋಕಶ್ರೇಯಸ್ಸಿಗೂ ಆತನೇ ಮುಖ್ಯಸಾಧನವು. ಹೀಗೆ ನಮ್ಮೆಲ್ಲರಿಗೂ ಧರ್ಮನಿಯಾಮಕನಾಗಿ, ನಮ್ಮವಂ ಶದ ಪೂರ್ವರಾಜರಿಗಿಂತಲೂ ಅತಿಶಯವಾಗಿ ಸ್ವಧರ್ಮವನ್ನು ಬಿಡದೆ ವರ್ತಿಸು ತ್ತಿರುವ ಆನಮ್ಮ ತಾತನು ಬದುಕಿರುವಾಗಲೂ, ತಾಯಿಯು ಪತಿಯಾದ ಆತನನ್ನು ಬಿಟ್ಟುನನ್ನೊಡನೆ ಕಾಡಿಗೆ ಬರುವೆನೆಂಬುದು ಧರ್ಮವೆ? ತನ್ನ ಕೈಹಿ ಡಿದ ಗಂಡನು ತನಗೆ ದಿಕ್ಕಾಗಿ ಕಣ್ಣೆದಿರಿಗಿರುವಾಗ, ನಮ್ಮ ತಾಯಿಯುಮಕ್ಕಳ ಕೈಕೆಳಗೆ ಸಿಕ್ಕಿಕೊಂಡು ಕಷ್ಟಜೀವನವನ್ನು ನಡೆಸುತ್ತಿರುವ ಇತರ ವಿಧವಾ ಸ್ತ್ರೀಯರಂತೆ ನನ್ನೊಡನೆ ಬರುವುದೆಂದರೇನು ? ಎಷ್ಟುಮಾತ್ರವಾದರೂ ಇವಳು ಪತಿಯನ್ನು ಬಿಟ್ಟು ಅಗಲಿರಕೂಡದು. ಎಲೆ ಮಾತೆ! ಪತಿಯು ಜೀವಿಸಿ ರುವಾಗ ನೀನು ಆತನನ್ನು ಬಿಟ್ಟು ಬರುವುದು ಎಂದಿಗೂ ಉಚಿತವಲ್ಲ! ನನಗೆ ಕಾಡಿಗೆ ಹೋಗುವುದಕ್ಕೆ ಅನುಜ್ಞೆಯನ್ನು ಕೊಡು! ಯಯಾತಿಯು, ತನ್ನದೌ ಹಿತ್ರನ ಸತ್ಯವಾಕ್ಯದಿಂದ ಹಿಂತಿರುಗಿ ಸ್ವರ್ಗಕ್ಕೆ ಬಂದಂತೆಯೇ, ನಾನೂ ಹ ದಿನಾಲ್ಕುವರ್ಷಗಳವರೆಗೆ ಪಿತೃವಾಕ್ಯಪರಿಪಾಲನವೆಂಬ ನನ್ನ ನಿಯಮವನ್ನು ಮುಗಿಸಿಕೊಂಡು, ಸುಖವಾಗಿಹಿಂತಿರುಗಿ ಇಲ್ಲಿಗೆ ಬಂದು ಸೇರುವೆನು.*ನಮಗೆ ಮಂಗಳಾಶೀರ್ವಾದವನ್ನು ಮಾಡು! ಅತ್ಯಲ್ಪವಾದ ಈ ರಾಜ್ಯಕ್ಕಾಗಿ, ಸರ್ವೋ ತ್ತಮವಾದ ಕೀರ್ತಿಯನ್ನು ಕೆಡಿಸಿಕೊಳ್ಳುವುದು ನನಗೆ ಸರ್ವಥಾ ಸಮ್ಮ

* ಇಲ್ಲಿ ''ಕುರುಷ್ವ ನಸ್ಸ್ವಸ್ತ್ಯಯನಾನಿ''ಎಂದು ಮೂಲದಲ್ಲಿರುವುದರಿಂದ ರಾಮನು ತಾಯಿಯನ್ನು ಕುರಿತು''ನಮಗೆ ಮಂಗಳಾಶೀರ್ವಾದಗಳನ್ನು ಮಾಡಬೇಕೆಂ'' ದು ಕೇಳಿದಂತೆ ಅರ್ಥವಾಗುವುದು. ರಾಮನು ತಾನೊಬ್ಬನೇಕಾಡಿಗೆ ಹೊರಡುವುದಾಗಿರು ವಾಗ''ನಮಗೆ''ಎಂದು ಬಹುವಚನವನ್ನೇಕೆ ಉಪಯೋಗಿಸಿರುವನೆಂದು ಶಂಕೆಯುಂ

ತವಲ್ಲ. ನಾವು ಈ ಲೋಕದಲ್ಲಿ ಬದುಕಿರಬೇಕಾದುದೇ ಸ್ವಲ್ಪಕಾಲವಲ್ಲವೆ? ಇಷ್ಟರಲ್ಲಿ ಅಧರ್ಮಕ್ಕೆ ಪ್ರವರ್ತಿಸಿ, ತುಚ್ಛವಾದ ಭೂಮಿಯನ್ನು ಸಂಪಾದಿಸುವುದಕ್ಕೆ ಎಂದಿಗೂ ನಾನು ಇಷ್ಟಪಡೆನು." ಎಂದನು. ಹೀಗೆ ರಾಮನು ತಾಯಿಗೆ ಸಮಾಧಾನವನ್ನು ಹೇಳಿ, ಹಿಂದೆ ಕೈಕೇಯಿಯು ತನ್ನನ್ನು ಕಾಡಿಗೆ ಹೋಗಬೇಕೆಂದು ತ್ವರೆಪಡಿಸಿದ ಮಾತನ್ನು ಸ್ಮರಣೆಗೆ ತಂದುಕೊಂಡು, ದಂಡಕಾರಣ್ಯಕ್ಕೆ ಹೊರಡುವುದಾಗಿ ನಿಶ್ಚಯಿಸಿ, ತನ್ನ ತಮ್ಮನಾದ ಲಕ್ಷ್ಮಣನಿಗೂ ನಾನಾವಿಧದಲ್ಲಿ ಹಿತವನ್ನು ಹೇಳಿ, ಮನಸ್ಸಿನಲ್ಲಿ ಭಕ್ತಿಯಿಂದ ತಾಯಿಯನ್ನು ಪ್ರದಕ್ಷಿಣಮಾಡುವುದಕ್ಕಾಗಿ ಸಂಕಲ್ಪಿಸಿಕೊಂಡನು. ಇಲ್ಲಿಗೆ ಇಪ್ಪತ್ತೊಂದನೆಯ ಸರ್ಗವು.

---

ಟಾಗಬಹುದಲ್ಲವೆ?ಇದಕ್ಕೆ ಆತ್ಮಾರ್ಥದಲ್ಲಿ ಬಹುವಚನವು ಉಪಯೋಗಿಸಲ್ಪಟ್ಟಿರಬಹುದೆಂದು ಸಮಾಧಾನವನ್ನು ಹೇಳಬಹುದಾದರೂ, ಇಲ್ಲಿ ರಾಮನ ಅಭಿಪ್ರಾಯವು ಹಾಗಲ್ಲ. ಲಕ್ಷ್ಮಣನನ್ನೂ ತನ್ನೊಡನೆ ಸೇರಿಸಿ, ತಮ್ಮಿಬ್ಬರಿಗೂ ಹೇಳಿಕೊಂಡತೆಯೇ ಗ್ರಹಿಸಬೇಕು "ಅಸ್ಮದೋ ದ್ವಯೋಶ್ಚ" ಎಂಬ ಸೂತ್ರಾನುಸಾರವಾಗಿ ದ್ವಿವಚನಕ್ಕೂ ಬಹುವಚನವನ್ನುಪಯೋಗಿಸಬಹುದು. ಸೀತೆಯು ತನ್ನೊಡನೆ ಬರುವ ವಿಷಯವು ರಾಮನಿಗೆ ನಿರ್ಧರವಿಲ್ಲದಿದ್ದರೂ, ಲಕ್ಷ್ಮಣನು ತನ್ನನ್ನು ಹಿಂಬಾಲಿಸಿ ಬಾರದಿರನೆಂದು, ರಾಮನಿಗೆ ಮೊದಲೇ ನಿಶ್ಚಯವಿತ್ತೆಂದೂ ಗ್ರಹಿಸಬೇಕು. "ದೀಪ್ತಮಗ್ನಿಮರಣ್ಯಂ ವಾಯದಿ ರಾಮ: ಪ್ರವೇಕ್ಷ್ಯತಿ । ಪ್ರವಿಷ್ಟಂ ತತ್ರ ಮಾಂ ದೇವಿ ತ್ವಂ ಪೂರ್ವಮವಧಾರಯ" ಎಂದು ಲಕ್ಷ್ಮಣನು ದೃಢಸಂಕಲ್ಪಮಾಡಿರುವುದರಿಂದ,ಅವನು ತನ್ನೊಡನೆ ಬಂದೇಬರುವನೆಂದು ರಾಮನು ಮೊದಲೇ ನಿಶ್ಚಯಿಸಿಕೊಂಡು ಈ ಮಾತನ್ನು ಹೇಳಿರುವನು.

* ಇಲ್ಲಿ "ಸ್ವದರ್ಶನಂ" ಎಂದು ಮೂಲವು. ದರ್ಶನವೆಂದರೆ ಮತವೆಂದರ್ಥವು. ತನ್ನ ಮತವಾದ ಧರ್ಮರಹಸ್ಯವನ್ನು ಬೋಧಿಸಿದುದಾಗಿ ತಿಳಿಯಬೇಕು. ಲೋಕದಲ್ಲಿ ಧರ್ಮಾರ್ಥಕಾಮಗಳೆಂಬ ಮೂರು ಪುರುಷಾರ್ಥಗಳೂ ಪ್ರಸಿದ್ಧಗಳಾಗಿವೆ.ಅವುಗಳಲ್ಲಿಧರ್ಮವೇ ಎಲ್ಲಕ್ಕೂ ಮೂಲಭೂತವಾಗಿರುವುದರಿಂದ, ಕೇವಲಧರ್ಮವನ್ನೇ ಆಶ್ರಯಿಸಬೇಕೆಂದೂ, ಉಳಿದುವೆರಡೂ ಅಪಾಯಹೇತುಗಳೆಂದೂ ರಾಮನ ಮತವು.

## ರಾಮನು ಕೈಕೇಯಿಯ ವಿಷಯದಲ್ಲಿ ಲಕ್ಷ್ಮಣನ ನಿಗಂಟಾದ ಕೋಪವನ್ನು ತಗ್ಗಿಸಿದುದು.

ದುಃಖದಿಂದ ಕುಗ್ಗಿ, ಹಾವಿನಂತೆ ಉಷ್ಣವಾಗಿ ನಿಟ್ಟುಸಿರನ್ನು ಬಿಡುತ್ತ, ಕೋಪದಿಂದ ಬಿಚ್ಚಿದ ಕಣ್ಣುಳ್ಳವನಾಗಿರುವ ತನ್ನ ಪ್ರಿಯಸಹೋದರನಾದ ಲಕ್ಷ್ಮಣನನ್ನು ನೋಡಿ, ರಾಮನು, ಧೈರ್ಯದಿಂದ ತನ್ನ ಮನೋವಿಕಾರವನ್ನು ಹೊರಕ್ಕೆ ಕಾಣಿಸಿಕೊಳ್ಳದೆ, ಒಂದಾನೊಂದು ಮಾತನ್ನು ಹೇಳುವನು. "ವತ್ಸ ಲಕ್ಷ್ಮಣಾ! ವ್ಯರ್ಥವಾಗಿ ಹೀಗೇಕೆ ಕೋಪಿಸುವೆ? ತಂದೆಯ ವಿಷಯದಲ್ಲಿ ನಿನ್ನ ಕೋಪವನ್ನಡಗಿಸು, ನನಗೆ ಈ ವ್ಯಸನವು ಸಂಭವಿಸಿತೆಂದು ನೀನು ಸ್ವಲ್ಪವೂ ದುಃಖಿಸಬೇಡ! ಧೈರ್ಯವನ್ನವಲಂಬಿಸು. ಈ ಅಭಿಷೇಕವು ನಿಂತುಹೋದಮಾತ್ರಕ್ಕೆ, ನಮಗೆ ಯಾವವಿಧವಾದ ಅವಮಾನವೂ ಇಲ್ಲ. ಮನಸ್ಸಿನಲ್ಲಿ ಸಂತೋಷದಿಂದಿರು. ಈಗ ನನ್ನ ಅಭಿಷೇಕಕ್ಕೋಸ್ಕರ ಸಿದ್ಧವಾಗಿರುವ ಅಲ್ಪಸ್ವಲ್ಪಸನ್ನಾಹಗಳೆಲ್ಲವನ್ನೂ ಇಷ್ಟಕ್ಕೇ ನಿಲ್ಲಿಸಿ, ಅಲಂಕಾರಾದಿಗಳನ್ನು ತೆಗೆದುಬಿಡು. ಅಪಾಯವಿಲ್ಲದಕಾರ್ಯದಲ್ಲಿ ಪ್ರಯತ್ನಿಸು. ಲಕ್ಷ್ಮಣಾ! ಇದುವರೆಗೆ ನನ್ನ ಅಭಿಷೇಕಕ್ಕಾಗಿ ಎಷ್ಟು ಉತ್ಸಾಹದಿಂದ ಸಾಮಗ್ರಿಗಳನ್ನೊದಗಿಸುತಿದ್ದೆಯೋ, ಅಷ್ಟೇ ಉತ್ಸಾಹದಿಂದ ಈಗ ನನ್ನನ್ನು ಕಾಡಿಗೆ ಕಳುಹಿಸುವುದಕ್ಕೆ ತಕ್ಕ ಪ್ರಯತ್ನವನ್ನು ಮಾಡು! ಅದಕ್ಕೆ ಬೇಕಾದ ನಾರುಮಡಿ, ಕೃಷ್ಣಾಜಿನ, ಮೊದಲಾದುವುಗಳನ್ನೊದಗಿಸು! ಎಲ್ಲಿ ನನಗೆ ಅಭಿಷೇಕವು ನಡೆದುಹೋಗುವುದೋ ಎಂದು ಕೈಕೇಯಿಯು, ಮನಸ್ಸಿನಲ್ಲಿ ಸಂಕಟಪಡುತ್ತಿರುವಳು. ಈಗ ನಾವಿಬ್ಬರೂ ಕಲೆತು ಮಾತಾಡುತ್ತಿರುವುದನ್ನು ನೋಡಿದರೆ, ಇನ್ನೂ ಸಂದೇಹಪಟ್ಟು, ನಾವಿಬ್ಬರೂ ಅವಳ ಪ್ರಯತ್ನಕ್ಕೆ ಯಾವವಿಘಾತವನ್ನು ತಂದಿಡುವೆವೋ ಎಂದು ಶಂಕಿಸಬಹುದು. ಅಷ್ಟಕ್ಕೂ ನಾವು ಈಗ ಅವಕಾಶವನ್ನು ಕೊಡಬಾರದು. ಅತ್ತಲಾಗಿ ನನಗೆ ಅಭಿಷೇಕವು ಎಲ್ಲಿ ನಿಂತುಹೋಗುವುದೋ ಎಂದು ಕೊರಗುತ್ತಿರುವ ನನ್ನ ತಾಯಿಯಾದ ಕೌಸಲ್ಯೆಗೂ ಪಿತೃವಾಕ್ಯಪರಿಪಾಲನವೇ ನಮಗೆ ಮುಖ್ಯಕರ್ತವ್ಯವೆಂಬ ಧರ್ಮಸೂಕ್ಷ್ಮವನ್ನು ತಿಳಿಸಿ, ಅವಳ ಶಂಕೆಯನ್ನು ನಿವಾರಿಸಬೇಕು. ನಮ್ಮ ಮಾತೆಯರಾದ ಕೈಕೇಯಿಗಾಗಲಿ, ಕೌಸಲ್ಯೆಗಾಗಲಿ, ನಮಗಾಗಿ ಮನಸ್ಸಿನಲ್ಲಿ ದುಃಖವುಂಟಾಗುವಂತೆ ಮಾಡುವುದು ನಮಗೆ ಶ್ರೇಯಸ್ಕರವಲ್ಲ. ಅವರ ದುಃಖ

ವನ್ನು ನೋಡಿ ನಾವು ಕ್ಷಣಮಾತ್ರವಾದರೂ ಉಪೇಕ್ಷಿಸುತ್ತಿರಬಾರದು. ನಾನು ಇದುವರೆಗೆ ಯಾವಾಗಲೂ ತಂದೆತಾಯಿಗಳ ವಿಷಯದಲ್ಲಿ ಬುದ್ಧಿ ಪೂರ್ವಕವಾಗಿಯಾಗಲಿ, ಪ್ರಮಾದವಶದಿಂದಾಗಲಿ, ಅಪಕಾರವನ್ನು ಮಾಡಿ ರುವುದಾಗಿ ನನಗೆ ತೋರಲಿಲ್ಲ. ನಮ್ಮ ತಂದೆಯು ಯಾವಾಗಲೂ ಸುಳ್ಳಾ ಡಿದವನಲ್ಲ. ಆಡಿದ ಮಾತಿಗೆ ಎಂದಿಗೂ ತಪ್ಪಿದವನಲ್ಲ. ಆತನ ಪರಾಕ್ರಮ ವು ಯಾವಾಗಲೂ ಇತರರಿಂದ ತಿರಸ್ಕೃತವಾದುದಲ್ಲ. ಆತನು ಈ ಭೂ ಲೋಕದಲ್ಲಿ ಯಾರಿಗೂ ಅಂಜುವವನಲ್ಲ.ಆತನಿಗೆ ಪರಲೋಕ ಭಯವೊಂದೇ ಭಯವು. ಮಹಾಪರಾಕ್ರಮವುಳ್ಳ ಆತನು ಈಗ ಪ್ರತಿಜ್ಞೆಗೆ ತಪ್ಪಿ ದರೆ, ನಾವಾಗಿ ಆತನಿಗೆ ಆ ಪರಲೋಕದ ಭಯವನ್ನು ಹೆಚ್ಚಿಸಿದಂತಾ ಗುವುದು. ಅದಕ್ಕೆ ನಾವು ಅವಕಾಶವನ್ನು ಕೊಡಬಾರದು. ಈಗ ನಡೆಯು ತ್ತಿರುವ ನನ್ನ ಪಟ್ಟಾಭಿಷೇಕಪ್ರಯತ್ನವನ್ನು ಇಷ್ಟಕ್ಕೇ ನಿಲ್ಲಿಸದಿದ್ದರೆ, ಆತ ನು ಕೈಕೇಯಿಗೆ ತಾನು ಪ್ರತಿಜ್ಞೆಮಾಡಿಕೊಟ್ಟ ವಾಕ್ಯವು ತಪ್ಪಿಹೋಯಿತೆಂ ಬುದಕ್ಕಾಗಿ ಮನಸ್ಸಿನಲ್ಲಿ ಸಂಕಟಪಡುವನು. ಆತನ ಸಂಕಟವನ್ನು ನೋಡಿ ನಾವೂ ಪರಿತಪಿಸಬೇಕಾಗುವುದು. ಆದುದರಿಂದ ಎಲೆ ವತ್ಸನೆ! ನಾನು ಅಭಿಷೇಕಾರ್ಥವಾಗಿರುವ ಈ ಅಲಂಕಾರಗಳನ್ನು ತೆಗೆದು, ಇಲ್ಲಿಂದ ಹೀಗೆಯೇ ಕಾಡಿಗೆ ಹೋಗಬೇಕೆಂದಿರುವೆನು. ಆಗ ಕೈಕೇಯಿಯು ಮನಸ್ಸಿನ ಲ್ಲಿಸ್ವಲ್ಪವೂ ಕಳಂಕವಿಲ್ಲದೆ ಕೃತಾರ್ಥಳಾಗಿ, ಮಗನಾದ ಭರತನಿಗೆ ಪಟ್ಟ ವನ್ನು ಕಟ್ಟಿ ನಿರಾತಂಕವಾಗಿರಬಹುದು. ನಾನು ನಾರುಮಡಿಯನ್ನುಟ್ಟು, ಜಡೆಯನ್ನೂ, ಕೃಷ್ಣಾಜಿನವನ್ನೂ ಧರಿಸಿ, ಕಾಡಿಗೆ ಹೊರಡುವುದನ್ನು ನೋಡಿ ದಹೊರತು,ಆಕೆಯ ಮನಸ್ಸು ಸ್ತಿಮಿತವಾಗಿರದು, ಕಾಡಿಗೆ ಹೋಗಬೇಕೆಂಬ ಬುದ್ಧಿಯು ಈಗ ನನಗೆ ಸ್ಥಿರವಾಗಿ ಹುಟ್ಟಿರುವುದು. ಮನಸ್ಸನ್ನು ಈವಿಷ ಯದಲ್ಲಿ ದೃಢಪಡಿಸಿಕೊಂಡು ಬಿಟ್ಟಿರುವೆನು. ಹೀಗೆ ದೃಢಸಂಕಲ್ಪವುಳ್ಳ ಈ ನನ್ನ ಮನಸ್ಸನ್ನು ಕದಲಿಸಿ, ಆಮೇಲೆ ಪಶ್ಚಾತ್ತಾಪದಿಂದ ಆಯಾಸಪಡಿಸು ವುದು ನನಗೆ ಸರ್ವಥಾ ಸಮ್ಮತವಲ್ಲ. ಇನ್ನು ನಾನು ಹೊರಡುವೆನು. ನಮ್ಮ ತಂದೆಯು ಸತ್ಯವನ್ನು ಪಾಲಿಸುವುದಕ್ಕಾಗಿಯೇ ನನ್ನನ್ನು ಕಾಡಿಗೆ ಕಳುಹಿಸ ಬೇಕೆಂದು ಮನಸ್ಸಿನಲ್ಲಿ ಸಂಕಲ್ಪಿಸಿರುವೆನು,ಆ ತಂದೆಗೂ ನಾವು ಮನಃಕಿಂ ಕೃತಿಯನ್ನುಂಟುಮಾಡಬಾರದು. ಮತ್ತು ನನ್ನ ಪಟ್ಟಾಭಿಷೇಕವನ್ನು ಕೆಡಿಸ

ಬೇಕೆಂದು ಎಷ್ಟೋ ಪ್ರಯತ್ನದಿಂದ ಸಾಧಿಸುತ್ತಿರುವ(ಮಂಥರೆಯೇ ಮೊದಲಾದ)ಜನರಿಗೂ ನಾವು ಆಶಾಭಂಗವನ್ನುಂಟುಮಾಡಬಾರದು. ಆದುದರಿಂದ ಈಗ ಅವರೆಲ್ಲರ ಸಂತೋಷಾರ್ಥವಾಗಿಯಾದರೂ ನಾನೂ ಕಾಡಿಗೆ ಹೊರಡುವುದೇ ನ್ಯಾಯವು.ಎಲೆ ವತ್ಸನೆ! ಅದೆಲ್ಲವೂ ಹೋಗಲಿ! ನನ್ನನ್ನು ಕಾಡಿಗೆಕಳುಹಿಸುವುದಕ್ಕಾಗಲಿ, ನನಗೆ ಸೇರಬೇಕಾದ ರಾಜ್ಯದ ಬಾಧ್ಯತೆಯನ್ನು ತಪ್ಪಿಸುವುದಕ್ಕಾಗಲಿ, ಆಕೈಕೇಯಿಯನ್ನು ಕಾರಣವೆಂದೆಣಿಸಬೇಡ. ಇದಕ್ಕೆ ದೈವವೇ ಕಾರಣವು.ಕೈಕೇಯಿಗೂ ಆದೈವವೇ ಪ್ರೇರಿಸಿರುವುದು.ಹಾಗಿಲ್ಲದಿದ್ದರೆನನ್ನಲ್ಲಿ ಅಸಾಧಾರಣವಾತ್ಸಲ್ಯವುಳ್ಳ ಆಕೆಗೆ, ನನ್ನನ್ನು ಹೀಗೆ ವ್ಯಸನದಲ್ಲಿರಿಸಬೇಕೆಂಬ ಬುದ್ಧಿಯು ಹೇಗೆ ಹುಟ್ಟುತಿತ್ತು? ಇದನ್ನು ನೀನೇ ಚೆನ್ನಾಗಿ ಆಲೋಚಿಸಿ ನೋಡು. ಇದುವರೆಗೆ ನಾನು ಯಾವಾಗಲೂ ನಮ್ಮ ಮಾತೆಯರ ವಿಷಯದಲ್ಲಿ ಹೆತ್ತ ತಾಯಿಯೆಂದೂ, ಮಲತಾಯಿಯೆಂದೂ ಭೇದಬುದ್ಧಿಯನ್ನಿಟ್ಟವನಲ್ಲ. ಇದನ್ನು ನೀನೂ ಚೆನ್ನಾಗಿ ತಿಳಿದಿರುವೆ! ಆ ಕೈಕೇಯಿಯೂಕೂಡ ನನ್ನನ್ನೂ, ಭರತನನ್ನೂ ಒಂದೇರೀತಿಯಿಂದ ನೋಡುತಿದ್ದಳು. ಹೀಗಿರುವಾಗ ಅವಳಿಗೆ ದೈವಪ್ರೇರಣೆಯಿಲ್ಲದಿದ್ದರೆ ಈ ಬುದ್ಧಿಯು ಹೇಗೆ ಹುಟ್ಟುತಿತ್ತು? ಮೊದಲಿಂದಲೂ ನನ್ನನ್ನು ಅಷ್ಟೊಂದು ವಾತ್ಸಲ್ಯದಿಂದ ನೋಡುತಿದ್ದಆಕೆಯು, ಈಗ ನನ್ನನ್ನು ಕರೆದು,ತನ್ನ ಬಾಯಿಂದಲೇ ತಾನು,ನನಗೆ ಅಭಿಷೇಕವನ್ನು ಬಿಟ್ಟು ಕಾಡಿಗೆ ಹೋಗಬೇಕೆಂದು, ಆಡಬಾರದ ಈಕ್ರೂರವಾಕ್ಯವನ್ನಾಡಿರುವಳಲ್ಲವೆ? ಇದಕ್ಕೆ ದೈವವಲ್ಲದೆ ಬೇರೆ ಯಾವ ಕಾರಣವನ್ನೂ ಹಿಸಬಹುದು?ಮತ್ತು ಆಕೆಯು ಬಹಳ ಮೃದುಸ್ವಭಾವವುಳ್ಳವಳು, ಅದರಲ್ಲಿಯೂ ಮ

---

* ಕಥಂಪ್ರಕೃತಿಸಂಪನ್ನಾ ರಾಜಪುತ್ರೀ ತಥಾಗುಣಾ|ಬ್ರೂಯಾತ್ಸಾ ಪ್ರಾಕೃತೇವ ಸ್ತ್ರೀ ಮತ್ಪೀಡಾಂ ಭರ್ತೃಸನ್ನಿಧೌ||"ಎಂಬುದು ಇಲ್ಲಿ ಮೂಲವು. ಇಲ್ಲಿ "ಪ್ರಕೃತಿಸಂಪನ್ನಾ, ರಾಜಪುತ್ರೀ,ತಥಾಗುಣಾ."ಎಂಬೀ ಮೂರು ವಿಶೇಷಣಗಳಿಂದ,ಕ್ರಮವಾಗಿ ಆ ಕೈಕೇಯಿಯ ಸುಸ್ವಭಾವವೂ, ವಂಶೋನ್ನತಿಯೂ, ಉತ್ತಮಗುಣವೂ ಹೇಳಲ್ಪಡುವುವು. ಇಂತಹ ಕೈಕೇಯಿಯು"ಪ್ರಾಕೃತಾ ಸ್ತ್ರೀವ"ಕೇವಲ ಸಾಮಾನ್ಯಸ್ತ್ರೀಯಂತೆಎಂದರೆ, ತನಗೆ ಅನುರೂಪಳಲ್ಲದೆ ದುಸ್ಸ್ವಭಾವದಿಂದಲೂ, ದುಷ್ಕುಲದಿಂದಲೂ;ದುರ್ಗುಣಗಳಿಂದಲೂ ಕೂಡಿದ ಸ್ತ್ರೀಯಂತೆ,"ಭರ್ತೃಸನ್ನಿಧೌ" ತನ್ನ ಗಂಡನಿದಿರಾಗಿ, ಇತರ ಸಾಮಾನ್ಯಜನರ ಮುಂದೆಯಾಗಲಿ, ದೊತಮುಖದಿಂದಲಾಗಲಿ ಹೇಳಿದವಳಲ್ಲ. ತನ್ನ

ಹಾರಾಜವಂಶದಲ್ಲಿ ಹುಟ್ಟಿ ರಾಜಕುಮಾರಿಯೆನಿಸಿಕೊಂಡಿರುವಳು. ದಯಾದಾಕ್ಷಿಣ್ಯಾದಿಗುಣಗಳೆಲ್ಲವೂ ಆಕೆಯಲ್ಲಿ ಸಂಪೂರ್ಣವಾಗಿ ನೆಲೆಗೊಂಡಿರುವುವು. ಅಂತವಳು ದೈವಪ್ರೇರಣೆಯಿಲ್ಲದಿದ್ದರೆ,ಕೇವಲಪ್ರಾಕೃತಸ್ತ್ರೀಯಂತೆ ತನ್ನ ಗಂಡನಿದಿರಾಗಿ ನಿಂತು, ನನ್ನನ್ನು ಕುರಿತು,ಆ ವಿಧವಾದ ಕ್ರೂರವಾಕ್ಯವನ್ನು ಹೇಳುತಿದ್ದಳೆ! ಎಂದಿಗೂ ಹೇಳಲಾರಳು. ಇದಕ್ಕೆಲ್ಲಾ ದೈವವೇ ಮೂಲವು. ದೈವಗತಿಯನ್ನು ಹೀಗೆಂದು ನಿರ್ಣಯಿಸುವುದು ಯಾರಿಗೂ ಸಾಧ್ಯವಲ್ಲ. ದೈವಬಲದಿಂದ ನಡೆಯತಕ್ಕ ಕೆಲಸವನ್ನು ತಪ್ಪಿಸುವುದಕ್ಕೂ ಯಾರಿಂದಲೂ ಸಾಧ್ಯವಲ್ಲ. ಸಮಸ್ತಭೂತಗಳಲ್ಲಿಯೂ ಅದಕ್ಕೆ ನಿರಂಕುಶವಾದ ಪ್ರಭುತ್ವವಿರುವುದು.ಇದು ನಿಜವು.ಈಗ ನೋಡು!ನನಗೆ ಕೈಗೆ ಬಂದರಾಜ್ಯವು ತಪ್ಪಿಹೋಯಿತು.ಆಕೆಗೆ ನನ್ನಲ್ಲಿ ಬಹುಕಾಲದಿಂದಿದ್ದ ವಾತ್ಸಲ್ಯವೂ ತಪ್ಪಿತು!ಹಾಗೆ ನನ್ನ ಸ್ಥಿತಿಯೂ, ಅವಳ ಬುದ್ಧಿಯೂ ಇದ್ದಕ್ಕಿದ್ದಹಾಗೆ ವಿಪರೀತವಾಗಿ ಪರಿಣಮಿಸಿತಲ್ಲವೆ ! ದೈವಕ್ಕೆ ಯಾವುದೂ ಇದಿರಲ್ಲ! ಎಲೆವತ್ಸನೆ ! ಎಲ್ಲವೂ ದೈವವಶವಾಗಿದ್ದರೆ ಪುರುಷಪ್ರಯತ್ನದಿಂದ ಪ್ರಯೋಜನವೇನೆಂದೂ, ಆ ಪುರುಷಪ್ರಯತ್ನದಿಂದ ಅದೃಷ್ಟವನ್ನು ತಪ್ಪಿಸುವುದೇಕೆ ಸಾಧ್ಯವಲ್ಲವೆಂದೂ ಲೋಕದಲ್ಲಿ ಅದೃಷ್ಟವುಂಟೆಂಬುದಕ್ಕೆ ನಿದರ್ಶನವೇನೆಂದೂ ನೀನು ಆಕ್ಷೇಪಿಸಬಹುದು. ನಾವು ನಡೆಸುವ ಕಾರ್ಯಗಳ ಫಲಾಫಲವನ್ನು ವಿಚಾರಿಸಿನೋಡಿದರೆ, ಅದು ಚೆನ್ನಾಗಿ ಸ್ಪಷ್ಟಪಡುವುದು. ನಾವು ಎಷ್ಟೋ ಕಷ್ಟಪಟ್ಟು ಅಕ್ಕರೆಯಿಂದ ಮಾಡಿದ ಕಾರ್ಯಗಳೂ ಕೆಲವು ವೇಳೆಗಳಲ್ಲಿ ನಿಷ್ಫಲವಾಗುವುವು. ನಾವು ಅಕ್ಕರೆಯಿಲ್ಲದೆ ಮಾಡಿದ ಕೆಲವು ಕಾರ್ಯಗಳಿಗೂ ಸಂಪೂರ್ಣವಾದ ಫಲವು ಲಭಿಸುವುದು. ಇವುಗಳಿಂದ ದೈವಬಲವೇ

---

ಕುಲೋನ್ನತಿ ಮೊದಲಾದ ಸುಗುಣಗಳಿಗೆ ತಕ್ಕಂತೆ ತಾನು ಪತಿಗೆ ವಿಧೇಯಳಾಗಿ ನಡೆದುಕೊಳ್ಳಬೇಕಾಗಿದ್ದರೂ, ಅದನ್ನು ಬಿಟ್ಟು, ಗಂಡನಿದಿರಿಗೆ ನಿರ್ಭಯಳಾಗಿ ನಿಂತು, (ಮತ್ಪೀಡಾಂ) ತನಗೆ ಮುಖ್ಯಪ್ರೀತಿಪಾತ್ರನಾದ ನನ್ನನ್ನೇ ವ್ಯಸನದಲ್ಲಿರಿಸುವಂತೆ, (ಕಥಂ) ಹೇಗೆ ತಾನೇ, (ಬ್ರೂಯಾತ್) ಹೇಳುತಿದ್ದಳು? ಸಂಕೋಚವಿಲ್ಲದೆ ಸ್ಪಷ್ಟವಾಗಿ ಬಾಯಿಂದ ಹೇಳಿದಳೇಹೊರತು. ಸೂಚನಾಮಾತ್ರದಿಂದಲೂ ತಿಳಿಸಲಿಲ್ಲವೆಂದು ಭಾವವು. ಹೀಗೆ ಅಸಂಭವವೆಂದು ತೋರಿದ ವಿಪರೀತಕಾರ್ಯಗಳೆಲ್ಲವೂ ನಡೆದಿರುವುದರಿಂದ, ಇದಕ್ಕೆ ದೈವವೇ ಪ್ರೇರಕವೆಂದು ಭಾವವು.

ಮುಖ್ಯವೆಂಬುದು ಸಿದ್ಧವಾಗುವುದಲ್ಲವೆ ? ಈ ಅನುಮಾನಪ್ರಮಾಣದಿಂದ ಲೇ ದೈವವಿರುವುದೆಂದು ನಾವು ಚೆನ್ನಾಗಿ ನಿರ್ಧರಿಸಬಹುದು. ಕಾರ್ಯಗಳ ಫಲಾಫಲಗಳುಮಾತ್ರವಲ್ಲದೆ,ದೈವವನ್ನು ನಂಬುವುದಕ್ಕೆ ಬೇರೆ ಸಾಧನವಿಲ್ಲ. ಆದುದರಿಂದ ದೈವವೆಂಬುದನ್ನು ಕಾರ್ಯದಬಲದಿಂದಲೇ ಅನುಮಾನಿಸಿತಿಳಿದು ಕೊಳ್ಳಬೇಕು. ದೈವವೆಂಬುದನ್ನು ಫಲಪ್ರಾಪ್ತಿಗೆಮೊದಲೇ ತಿಳಿಯಬಹುದಾ ಗಿದ್ದರೆ,ಮತ್ತು ಅದು ನಮಗೆ ಪ್ರತಿಕೂಲವಾಗಿರುವುದೆಂದೂ ತೋರಿಬಂದರೆ, ಅದಕ್ಕೆ ತಕ್ಕ ಪ್ರತೀಕಾರವೇನೆಂದು ನಾವು ಚಿಂತಿಸಿಯಾದರೂ ಚಿಂತಿಸಬಹು ದು. ಫಲಪ್ರಾಪ್ತಿಗೆಮೊದಲು ಅದೃಷ್ಟವನ್ನು ನಿಶ್ಚಯಿಸುವುದಕ್ಕೇ ಆ ಗದಮೇಲೆ, ನಾವು ಯಾವ ಪುರುಷಪ್ರಯತ್ನವನ್ನುತಾನೇ ಮಾಡ ಬಹುದು ? ಹೀಗೆ ದೈವವನ್ನು ಪುರುಷಪ್ರಯತ್ನದ ಬಲದಿಂದ ತಪ್ಪಿಸು ವುದಕ್ಕೆ ಎಂದಿಗೂ ಸಾಧ್ಯವಲ್ಲ. ಸುಖದುಃಖಗಳಾಗಲಿ, ಲಾಭನಷ್ಟಗ ಳಾಗಲಿ, ನಿಗ್ರಹಾನುಗ್ರಹಗಳಾಗಲಿ, ಜನನಮರಣಗಳಾಗಲಿ, ಲೋಕದಲ್ಲಿ ಕಾರಣವನ್ನು ತಿಳಿಯಬಾರದ ಯಾವಕಾರ್ಯಗಳೇ ಆಗಲಿ, ಅವೆಲ್ಲವೂ ದೈವಾಧೀ ನವೆಂದೇ ತಿಳಿಯಬೇಕು. ಉಗ್ರತಪಸ್ಸನ್ನು ಮಾಡಿ ದೇವತೆಗಳನ್ನು ಕೂಡ ಲಕ್ಷ್ಯಕ್ಕೆತಾರದ ವಿಶ್ವಾಮಿತ್ರಾದಿಮಹರ್ಷಿಗಳುಕೂಡ, ದೈವವಶರಾಗಿ, ತಾ ವು ನಡೆಸುತಿದ್ದ ವ್ರತೋಪವಾಸಾದಿನಿಯಮಗಳನ್ನು ಬಿಟ್ಟು, ಕಾಮಕ್ರೋಧ ಗಳಿಗೊಳಗಾಗಿ ದುರ್ದಶೆಯನ್ನು ಹೊಂದಿರುವರು. ಲೋಕದಲ್ಲಿ ಆರಂಭಿಸಿದ ಕಾರ್ಯವು ತಪ್ಪಿ, ಅದಕ್ಕೆ ಮೊದಲು ಮನಸ್ಸಿನಲ್ಲಿಯೂ ಯೋಚಿಸದ ಬೇರೆ ಯಾವುದೋ ಒಂದು ಕಾರ್ಯವು ಥಟ್ಟನೆ ಸಂಭವಿಸುವುದುಂಟಲ್ಲವೆ ? ಇದು ದೈವಿಕವಲ್ಲದೆ ಬೇರೆ ಯಾರ ಕಾರ್ಯವು ? ನಾನು ಈಗ ಹೇಳಿರುವ ಬುದ್ಧಿ ವಾದಗಳೆಲ್ಲವನ್ನೂ ಯಥಾರ್ಥವೆಂದು ತಿಳಿ ! ನಾನು ಇದೆಲ್ಲವನ್ನೂ ಚೆನ್ನಾಗಿ ಯೋಚಿಸಿಯೇ ಮನಸ್ಸನ್ನು ಸ್ಥಿರಪಡಿಸಿಕೊಂಡು, ನನಗಾಗುವ ಪಟ್ಟಾಭಿಷೇ ಕವು ತಪ್ಪಿಹೋದರೂವ್ಯಸನಪಡದಿರುವೆನು. ಆದುದರಿಂದ ನೀನೂದೈವಶಕ್ತಿ ಯೇ ಪ್ರಬಲವೆಂಬುದನ್ನು ತಿಳಿದು, ವ್ಯಸನವನ್ನು ಬಿಟ್ಟು, ನನ್ನ ದಾರಿಯನ್ನನು ಸರಿಸು!ಅಭಿಷೇಕಾರ್ಥವಾಗಿ ಈಗ ನಡೆದಿರುವ ಅಲಂಕಾರಾದಿಕಾರ್ಯಗಳನ್ನು ತೆಗೆ ದುಬಿಡು! ಈ ಮಂಗಳಕುಂಭಗಳಿಂದಲೇ ನನಗೆ ತಾಪಸಯೋಗ್ಯವಾದ ವ್ರತ ಸ್ನಾನವನ್ನು ಮಾಡಿಸುವುದಕ್ಕೆ ಪ್ರಯತ್ನಿಸು! ಅಥವಾ ರಾಜದ್ರವ್ಯದಿಂದ

ತರಿಸಲ್ಪಟ್ಟ ಈ ಜಲಕುಂಭಗಳಿಂದೇನು? ಇದರಿಂದ ನನಗೆ ಸ್ನಾನವನ್ನು ಮಾಡಿಸಿದರೂ, ರಾಜ್ಯಾಭಿಷೇಕಾರ್ಥವಾಗಿಯೇ ನನಗೆ ಈ ಸ್ನಾನವನ್ನು ನಡೆಸಿದಹಾಗೆ ಕೈಕೇಯಿಯು ಸಂದೇಹಪಡಬಹುದು. ಆದುದರಿಂದ ಈ ರಾಜದ್ರವ್ಯಸಂಬಂಧವನ್ನೇ ಬಿಟ್ಟು, ಕಾಡಿನಲ್ಲಿ ನನ್ನ ಕೈಯಿಂದ ನಾನೇ ತೀರ್ಥಜಲವನ್ನು ತಂದು ತಾಪಸಸ್ನಾನವನ್ನು ಮಾಡಿಕೊಳ್ಳುವೆನು. ನನಗೆ ರಾಜ್ಯವಾದರೇನು? ವನವಾದರೇನು? ಎರಡೂ ಸಮಾನವೇ. ಒಂದುವೇಳೆ ರಾಜ್ಯಕ್ಕಿಂತಲೂ ವನವಾಸವೇ ಶ್ರೇಯಸ್ಕರವೆಂದೂ ಹೇಳಬಹುದು. ಅದರಲ್ಲಿ ಈ ರಾಜ್ಯಭಾರದ ಶ್ರಮವಿಲ್ಲ. ಅಪೂರ್ವವಸ್ತುಗಳೆಲ್ಲವನ್ನೂ ನೋಡಬಹುದು. ಆದುದರಿಂದ, ವತ್ಸ ಲಕ್ಷ್ಮಣಾ! ಈಗ ನಡೆದಿರುವ ಅಭಿಷೇಕಕಾರ್ಯವನ್ನು ಕೆಡಿಸುವುದಕ್ಕೆ ನಮ್ಮ ಚಿಕ್ಕ ತಾಯಿಯು ಕಾರಣವೆಂದು ಎಂದಿಗೂ ನೀನು ತಿಳಿಯಬೇಡ. ದೈವಪ್ರೇರಣೆಯಿಂದಲೇ ಆಕೆಗೆ ಈ ಬುದ್ಧಿಯುಂಟಾಗಿರುವುದೇಹೊರತು ಬೇರೆಯಲ್ಲ. ಆದೈವದ ಪ್ರಭಾವವನ್ನೇ ಇದುವರೆಗೂ ನಾನು ನಿನಗೆ ತಿಳಿಸಿರುವೆನು. ನಿನಗೂ ಈ ವಿಷಯವು ಮೊದಲೇ ತಿಳಿದಿರಬಹುದು. ದೈವಿಕವಾಗಿ ಸಂಭವಿಸಿದುದಕ್ಕೆ ನಾವು ಈಗ ಕೈಕೇಯಿಯನ್ನು ನಿಂದಿಸುವುದೇಕೆ? ಆದುದರಿಂದ ನಿನ್ನ ಕೋಪವನ್ನು ತಡೆದು, ಶಾಂತಿಯನ್ನು ಹೊಂದು." ಎಂದನು.

ಇಲ್ಲಿಗೆ ಇಪ್ಪತ್ತೆರಡನೆಯಸರ್ಗವು.

---

## *ಲಕ್ಷ್ಮಣನು ದೈವಬಲಕ್ಕಿಂತ ಪುರುಷಪ್ರಯತ್ನವೇ ಪ್ರಬಲವೆಂದು ವಾದಿಸಿದುದು.

ರಾಮನು ಹೀಗೆ ಅನೇಕಸಮಾಧಾನಗಳನ್ನು ಹೇಳುತ್ತಿದ್ದರೂ, ಲಕ್ಷ್ಮಣನಿಗೆ ಆ ಬುದ್ಧಿವಾದಗಳೊಂದೂ ಸಮ್ಮತವಾಗದುದರಿಂದ, ಸುಮ್ಮನೆ ತಲೆಯ

---

* ಹಿಂದೆ ರಾಮನು "ದೈವವೇ ಪ್ರಬಲವಾದುದರಿಂದ ರಾಜ್ಯವು ತಪ್ಪಿದುದಕ್ಕಾಗಿ ಸಂತಾಪಪಡಬಾರದು. ಧರ್ಮವೇ ಸಮಸ್ತಶ್ರೇಯಸ್ಸುಗಳಿಗೂ ಮೂಲಾಧಾರವು. ಪಿತೃವಚನಪರಿಪಾಲನವೆಂಬುದು ಧರ್ಮಮೂಲವಾಗಿರುವುದರಿಂದ, ಅದನ್ನು ಅವಶ್ಯವಾಗಿ ನಡೆಸಿಯೇ ತೀರಬೇಕು. ತಂದೆಯಾಜ್ಞೆಯು ತಾಯಿಯ ಮಾತಿಗಿಂತಲೂ ಹೆಚ್ಚು ಪೂಜ್ಯವಾದುದರಿಂದ, ಮೊದಲು ತಂದೆಯಾಜ್ಞೆಯನ್ನೇ ನಡೆಸಬೇಕು" ಎಂಬೀ ವಿಷಯಗಳನ್ನು ಮಾತ್ರ ಯುಕ್ತಿಪೂರ್ವಕವಾಗಿ ಸಿದ್ಧಾಂತಪಡಿಸಿದ್ದನು. ಇದಕ್ಕಾಗಿ ಲಕ್ಷ್ಮಣನು

ನ್ನು ತಗ್ಗಿಸಿಕೊಂಡು ಕೇಳುತಿದ್ದನು.ಆದರೆ ಈತನಿಗೆ ಒಂದುಭಾಗದಲ್ಲಿರಾಮನಿಗೆ ರಾಜ್ಯವು ತಪ್ಪಿಹೋಗುವುದೆಂಬ ವ್ಯಸನವೂ, ಮತ್ತೊಂದುಭಾಗದಲ್ಲಿ, ಆತನ ಧೈರ್ಯಸಾಹಸಗಳನ್ನೂ, ಸ್ಥಿರಸಂಕಲ್ಪವನ್ನೂ ನೋಡಿ ಸಂತೋಷವೂ ಉಕ್ಕುತಿತ್ತು. ಈ ದುಃಖಹರ್ಷಗಳನಡುವೆ ಆತನ ಮನಸ್ಸು ತೂಗಾಡುತಿತ್ತು. ಆದರೆ ಆತನ ಕೋಪವುಮಾತ್ರ ಶಾಂತವಾಗದಿದ್ದುದರಿಂದ, ಹಣೆಯಲ್ಲಿ ಹುಬ್ಬುಗಳನ್ನು ಗಂಟಿಕ್ಕಿ, ಪುಟ್ಟಿಯಲ್ಲಿ ಸಿಕ್ಕಿಬಿದ್ದ ಮಹಾಸರ್ಪವು ರೋಷದಿಂದ ಬುಸುಗುಟ್ಟುವಂತೆ ನಿಟ್ಟುಸಿರನ್ನು ಬಿಡುತಿದ್ದನು. ಹುಬ್ಬುಗಂಟುಹಾಕಿದ ಆತನ ಮುಖವು, ಕೋಪಗೊಂಡ ಸಿಂಹದಮುಖದಂತೆ, ನೋಡುವವರಿಗೆ ಅತ್ಯಂತಭಯಂಕರವಾಗಿ ಕಾಣುತಿತ್ತು. ಆನೆಯು ತನ್ನ ಸುಂಡಿಲನ್ನು ತೂಗಾಡಿಸುವಂತೆ, ಆತನು ಕೋಪದಿಂದ ಕೈಗಳನ್ನೊದರುತ್ತ, ತನ್ನ ಕೊರಳನ್ನು ಕುಗ್ಗಿಸಿ,ಅತ್ತಿತ್ತ ತಿರುಗಿಸುತ್ತ,ಓರೆಗಣ್ಣಿನಿಂದ ತನ್ನ ಅಣ್ಣನನ್ನು ನೋಡಿ, “ಅಣ್ಣಾ! ನಿನಗೆ ತಿಳಿಯದುದೊಂದೂ ಇಲ್ಲವು!ಹೀಗಿದ್ದರೂ ನೀನೇಕೆ ಇಷ್ಟುಕಳವಳಿಸುತ್ತಿರುವೆ ? ಇಷ್ಟುಸಂಭ್ರಮಗಳಿಗೆ ಇದು ಸಮಯವಲ್ಲ. ಪಿತೃವಾಕ್ಯಪರಿಪಾಲನವೆಂಬ ಧರ್ಮಕ್ಕೆ ಲೋಪವುಂಟಾಗಬಾರದೆಂದೂ, ಅಧರ್ಮಕ್ಕೆ ಪ್ರವರ್ತಿಸಿದರೆ ಲೋಕದ ಜನವೂ ಅದೇ ಮಾರ್ಗವನ್ನನುಸರಿಸುವುದೆಂದೂ ಶಂಕಿಸಿ, ಕಾಡಿಗೆ ಹೊರಡುವ ಪ್ರಯತ್ನವನ್ನು ಮಾಡಿರುವೆಯಷ್ಟೆ ? ಇದೊಂದು ಕೇವಲಭ್ರಮವೇಹೊರತು ಬೇರೆಯಲ್ಲ. ಧರ್ಮಕ್ಕೆ ಲೋಪವೆಂಬ ವ್ಯಾಜವನ್ನಿಟ್ಟುಕೊಂಡು, ಲೋಕನೀತಿಗೆ ಅಂಜದಿರಬಹುದೆ? ಯಾವಾಗಲೂ ಯುಕ್ತಾಯುಕ್ತವನ್ನು ವಿಚಾರಿಸಿ ಕಾರ್ಯಗಳನ್ನು ನಡೆಸತಕ್ಕ ಸ್ವಭಾವವುಳ್ಳ ನಿಮ್ಮಂತವರು,ಈಮಾತನ್ನಾಡಬಾರದು. ನಿನ್ನ ಶೌರ್ಯವಾದರೋಅಸಾಧಾರಣವಾದುದು.ಇದರಮೇಲೆ ಪೌರುಷವನ್ನೇ ಮುಖ್ಯಬಲವಾಗಿ ಉಳ್ಳ ಕ್ಷತ್ರಿಯ

---

ದೈವಕ್ಕಿಂತಲೂ ಪೌರುಷವೇ ಪ್ರಬಲವೆಂದೂ, ಕೇವಲದುರ್ಬಲರುಮಾತ್ರವೇ ದೈವಬಲವನ್ನು ಇದಿರುನೋಡುತ್ತಿರಬೇಕೆಂದೂ, ಧರ್ಮವನ್ನಾಶ್ರಯಿಸಬೇಕಾದರೂ ಅದು ಅರ್ಥಕಾಮಗಳಿಗೆ ವಿರುದ್ಧವಾಗಿದ್ದರೆ, ಅಂತಹ ಧರ್ಮವನ್ನನುಸರಿಸಬಾರದೆಂಹೊ, ಸಂಗ್ರಹವಾಗಿ ಪೂರ್ವಪಕ್ಷಗಳನ್ನು ಹೇಳಿದ್ದನು. ಹೀಗೆ ಸಂಗ್ರಹಿಸಲ್ಪಟ್ಟ ಪೂರ್ವಪಕ್ಷಗಳನ್ನೇ ಲಕ್ಷ್ಮಣನು ಈಸರ್ಗದಲ್ಲಿ ವಿಸ್ತಾರವಾಗಿ ಪ್ರತಿಪಾದಿಸಲು, ಅದಕ್ಕೆ ರಾಮನೂ ಪುನಃ ತನ್ನ ಸಿದ್ಧಾಂತವನ್ನು ತಿಳಿಸುವನು.

ರಲ್ಲಿ ನೀನೇ ಮೇಲೆನಿಸಿಕೊಂಡಿರುವೆ.! ದೈವಬಲವನ್ನೂ ತಲೆಕೆಳಗುಮಾಡತಕ್ಕ ಮಹಾವೀರ್ಯವುಳ್ಳ ನೀನು, ಕೇವಲದುರ್ಬಲವಾದ ದೈವವನ್ನು ಮಹಾಪ್ರಬಲವೆಂದು ಹೇಳುವೆಯಲ್ಲವೆ! ಇದು ಕೇವಲಭ್ರಾಂತಿಯೇಹೊರತು ಬೇರೆಯಲ್ಲ. ದೈವವೆಂಬುದು ಯಾವಾಗಲೂ ದುರ್ಬಲರಾದವರಿಗೆಮಾತ್ರವೇ ಪರಿಗ್ರಾಹ್ಯವಾದುದು. ಪುರುಷಕಾರವಿಲ್ಲದೆ*ದೈವಕ್ಕೆ ಸ್ವತಃ ಯಾವಶಕ್ತಿಯೂ ಇಲ್ಲ. ಹೀಗೆ ಅಶಕ್ತವಾಗಿಯೂ, ಕೃಪಣವಾಗಿಯೂ ಇರುವ ದೈವವನ್ನು ಏನೆಂದು ನೀನು ಪ್ರಶಂಸೆಮಾಡುವೆ? ಬಹುದೂರದವರೆಗೆ ಧರ್ಮಸೂಕ್ಷ್ಮವನ್ನು ವಿಚಾರಿಸತಕ್ಕ ನೀನು, ಪಾಪಾತ್ಮರಾದ ಆ ಕೈಕೇಯೀದಶರಥರ ದುಸ್ಸ್ವಭಾವವನ್ನು ವಿಚಾರಿಸದಿರಬಹುದೆ? ಅಂತಹ ಪಾಪಿಗಳ ಮಾತನ್ನು ನಡೆಸದಿದ್ದಮಾತ್ರಕ್ಕೆ ನಿನಗೆ ಬರತಕ್ಕ ಧರ್ಮಹಾನಿಯೇನು? ಕೈಕೇಯೀದಶರಥರಿಬ್ಬರೂ ಸತ್ಯವೆಂಬ ಒಂದು ವ್ಯಾಜವನ್ನಿಟ್ಟುಕೊಂಡು, ನಿನಗೆ ಈ ವನವಾಸವನ್ನಾಜ್ಞಾಪಿಸಿದ್ದರೂ ಇರಬಹುದು. ಲೋಕದಲ್ಲಿ ಹೀಗೆ ಅನೇಕರುಂಟು. ಮೇಲೆಮಾತ್ರ ಧರ್ಮವೆಂಬ ವ್ಯಾಜವನ್ನು ತೋರಿಸಿ, ಕಪಟದಿಂದ ಸ್ವಕಾರ್ಯವನ್ನು ಸಾಧಿಸಿಕೊಳ್ಳುವವರನ್ನು ನೀನು ನೋಡಿಲ್ಲವೆ? ಮತ್ತು ಧಾರ್ಮಿಕರ ವೇಷವನ್ನು ಹಾಕಿಕೊಂಡು, ಸ್ವಾರ್ಥಪರರಾಗಿ ಕಾರ್ಯಗಳನ್ನು ನಡೆಸುವವರೂ ಎಷ್ಟೋಮಂದಿಯುಂಟು. ಹಾಗೆಯೇ ಈಗ ಆ ಕೈಕೇಯೀದಶರಥರಿಬ್ಬರೇ, ಧರ್ಮಕ್ಕೆ ಕಟ್ಟುಬಿದ್ದವರಂತೆ ನಟಿಸಿ, ನಿನ್ನ ಪಟ್ಟಾಭಿಷೇಕವನ್ನು ತಪ್ಪಿಸಿಬಿಡಬೇಕೆಂದು ದುರಾಲೋಚನೆಯನ್ನು ನಡೆಸಿರುವರು. ಈ ದುರಭಿಪ್ರಾಯವು ಅವರಿಗೆ ಈಗಲೇ ಹುಟ್ಟಿರುವುದೆಂದು ನಂಬಬೇಡ! † ಬಹುಕಾ

* "ಅದೃಷ್ಟವೆಂಬುದಕ್ಕೆ ಸ್ವತಃ ಒಂದು ಕಾರ್ಯವನ್ನು ಮಾಡುವುದಕ್ಕೆ ಶಕ್ತಿಯಿಲ್ಲದಿರುವಾಗ, ಅದರಿಂದ ಕಾರ್ಯವು ಸಿದ್ಧಿಸುವುದೆಂಬುದು ಅಸಮಂಜಸವು. ಆದುದರಿಂದ ಕಾರ್ಯದ ಫಲದಿಂದಲೇ ದೈವವಿರುವುದೆಂದು ಅನುಮಾನಿಸುವುದಕ್ಕೂ ಸಾಧ್ಯವಿಲ್ಲ. ಹೀಗೆ ಅದರ ಸ್ಥಿತಿಯೇ ಸಂದಿಗ್ಧವಾಗಿರುವಾಗ, ಅಂತಹ ವಸ್ತುವನ್ನು ಆಶ್ರಯಿಸುವೆನೆಂಬುದು ನಿನಗೆ ಕೇವಲಭ್ರಮೆಯೇ ಹೊರತು ಮತ್ತೆ ಬೇರೆಯಲ್ಲ" ಎಂದು ಹೇಳಿ ಲಕ್ಷ್ಮಣನು, ಅದೃಷ್ಟದಪ್ರಾಬಲ್ಯವನ್ನು ಹೇಳಿದ ರಾಮನ ಮತವನ್ನು ಖಂಡಿಸಿದುದಾಗಿ ತಿಳಿಯಬೇಕು.

† ದಶರಥನು ಕೈಕೇಯಿಗೆ ವರವನ್ನು ಕೊಟ್ಟು ಬಹುಕಾಲವಾಯಿತು. ಆದುದರಿಂದ ಕೈಕೇಯಿಯು ಇದಕ್ಕೆ ಮೊದಲು ಯಾವಾಗಲೋ ಆ ವರಗಳನ್ನು ಕೇಳಿ ತೆಗೆದು

ಲಕ್ಕೆ ಮೊದಲೇ! ಅವರಿಗೆ ಈ ದುರಾಲೋಚನೆಯಿದ್ದಿರಬೇಕು. ವರಪ್ರದಾನ ಕಾಲದಲ್ಲಿಯೇ ಅವರಿಬ್ಬರೂ ಸೇರಿ, ಈ ದುರ್ಮಂತ್ರವನ್ನು ನಡೆಸಿರಬೇಕು. ಹಾಗಿಲ್ಲದಿದ್ದರೆ ಬಹುಕಾಲದ ಹಿಂದೆ ವಾಗ್ದಾನಮಾಡಿದ ವರಗಳನ್ನು ಇದುವರೆಗೆ ನಿಲ್ಲಿಸಿಡಬೇಕಾದ ಕಾರಣವೇನು? ನಮ್ಮ ತಂದೆಗೆ ಈ ದುರಾಲೋಚನೆಯಿಲ್ಲದಿದ್ದರೆ ಆ ವರಗಳನ್ನು ಯಾವಾಗಲೋ ಕೊಟ್ಟುಬಿಡುತಿದ್ದನಲ್ಲವೆ? ಹಿರಿಯಮಗನಾದ ನಿನ್ನನ್ನು ಬಿಟ್ಟು ಬೇರೊಬ್ಬನಿಗೆ ರಾಜ್ಯಾಭಿಷೇಕವೆಂದರೇನು? ಲೋಕದಲ್ಲಿ ಯಾರುತಾನೇ ಇದನ್ನೊಪ್ಪುವರು ? ಈ ಲೋಕಕ್ಕೇ ಅಪ್ರಿಯವಾಗಿರುವ ಈ ಕಾರ್ಯವನ್ನು ನಾನು ಎಂದಿಗೂ ಸಹಿಸಲಾರೆನು! ಈ ಭಾಗದಲ್ಲಿ ಮಾತ್ರ ನೀನು ನನ್ನನ್ನು ಮನ್ನಿಸಬೇಕು ! ಮಹಾಬುದ್ಧಿಶಾಲಿಯಾದ ನಿನ್ನ ಮನಸ್ಸು ಇದ್ದಕ್ಕಿದ್ದಹಾಗೆ ಈ ರೀತಿಯಲ್ಲಿ ಮಾರ್ಪಡುವುದಕ್ಕೆ ಕಾರಣವೇನು? ಯಾವ ಧರ್ಮವನ್ನುದ್ದೇಶಿಸಿ ನಿನ್ನ ಬುದ್ಧಿಯು ಹೀಗೆ ಭೇದಿಸಿಹೋಗಿರುವುದೋ, ಯಾವ ಧರ್ಮಕ್ಕಾಗಿ ನಿನ್ನ ಮನಸ್ಸು ಹೀಗೆ ಮರುಳಾಗಿರುವುದೋ, ಪಿತೃವಾಕ್ಯಪರಿಪಾಲನವೆಂಬ ಆ ಧರ್ಮವು, ಈಗ ನನಗೆ ಬಹಳದ್ವೇಷಕಾರಣವಾಗಿರುವುದು. ನಿನ್ನ ಪೌರುಷದಿಂದ ನೀನು ವಿಮುಖವಾದ ದೈವವನ್ನು ಅನುಕೂಲಪಡಿಸಿಕೊಳ್ಳತಕ್ಕ ಶಕ್ತಿಯುಳ್ಳವನಾಗಿರುವಾಗಲೂ, ಕೈಕೇಯಿಯಬಲೆಗೆ ಸಿಕ್ಕಿ,ಅನ್ಯಾಯಕ್ಕೆ ಪ್ರವರ್ತಿಸಿರುವ ತಂದೆಯ ಆಜ್ಞೆಯನ್ನು

---

ಕೊಳ್ಳಬಹುವಾಗಿತ್ತು. ಅಥವಾ ಒಂದುವೇಳೆ ಕೈಕೇಯಿಯು ತಾನಾಗಿ ಕೇಳದಿದ್ದರೂ,ಧರ್ಮನಿರತನಾದ ದಶರಥನು ತಾನೇ ಅವಳನ್ನು ನಿರ್ಬಂಧಿಸಿ ಕೊಟ್ಟುಬಿಡುತಿದ್ದನೇ ಹೊರತು, ಇದುವರೆಗೆ ಅವುಗಳನ್ನಿಡುತ್ತಿರಲಿಲ್ಲ. ಹೀಗಿದ್ದರೂ ಇದುವರೆಗೆ ಅವುಗಳನ್ನು ಬಚ್ಚಿಟ್ಟುಕೊಂಡಿದ್ದು, ಈಗ ನಿನ್ನ ಅಭಿಷೇಕದ ಸನ್ನಾಹಗಳೆಲ್ಲವೂ ಸಿದ್ಧವಾಗಿರುವಸಂದರ್ಭದಲ್ಲಿ, ಆ ವರಗಳನ್ನು ಹೊರಪಡಿಸಿದುದನ್ನು ನೋಡಿದರೆ,ಇದೊಂದು ತ್ರವೆಂದೇ ತೋರುವುದೆಂದು ಲಕ್ಷ್ಮಣನ ಅಭಿಪ್ರಾಯವು. ಹಿರಿಯಮಗನಾದ ರಾಮನಿರುವಾಗ ಆತನನ್ನುಬಿಟ್ಟು ಭರತನಿಗೆ ರಾಜ್ಯವನ್ನು ಕೊಡುವುದು ಉಚಿತವಲ್ಲ. ಇದಕ್ಕಾಗಿ ರಾಮನಿಗೆ ಅಭಿಷೇಕವನ್ನು ನಡೆಸುವುದಕ್ಕೆ ಪ್ರಯತ್ನಪಟ್ಟಂತೆ ನಟಿಸಿ, ಈನಡುವೆ ಈ ಎರಡುವರಗಳ ಸಂದರ್ಭವನ್ನು ತಂದು, ಈ ಅಭಿಷೇಕವನ್ನು ತಪ್ಪಿಸಿಬಿಡಬೇಕೆಂದು ಕೈಕೇಯೀದಶರಥರಿಬ್ಬರೂ ಬಹುಕಾಲಕ್ಕೆಮೊದಲೇ ಈ ದುರಾಲೋಚನೆಯನ್ನು ಮಾಡಿಟ್ಟರೆಂದು ಅವನ ಮನೋಭಾವವು

ಗೌರವಿಸಬೇಕೆಂದಿರುವೆಯಲ್ಲಾ ? ಅವನು ತಂದೆಯಾದ ಮಾತ್ರಕ್ಕೇನು ? ಆತನು ಲೋಕನಿಂದಿತವಾದ ಕಾರ್ಯವನ್ನು ಹೇಳಿಬಿಟ್ಟಮಾತ್ರಕ್ಕೆ, ನೀನು ಯುಕ್ತಾಯುಕ್ತವನ್ನು ವಿಚಾರಿಸದೆ ಅದನ್ನು ನಡೆಸಬೇಕೆಂದಿರುವೆಯಾ? ನಿನಗೆ ಇದೊಂದು ಕೇವಲವೋಹವಲ್ಲದೆ ಬೇರೆಯಲ್ಲ. ಅವರಿಬ್ಬರೂ ಕಪಟಬುದ್ಧಿಯಿಂದ ಕಲ್ಪಿಸಿಕೊಂಡಿರುವ ವರಗಳೆಂಬ ವ್ಯಾಜವನ್ನು, ನೀನು ಇದುವರೆಗೆ ತಿಳಿಯದೆ ಹೋದೆಯಲ್ಲಾ ! ಇದಕ್ಕಾಗಿಯೇ ಈಗ ನಾನು ದುಃಖಿಸಬೇಕಾಗಿದೆ ! ನೀನು ಅನುಸರಿಸಿ ಹೋಗಬೇಕೆಂದಿರುವ ಧರ್ಮಮಾರ್ಗವೂ ನನಗೆ ಬಹಳನಿಂದ್ಯವಾಗಿಯೇ ತೋರಿದೆ.। ಕಾಮಪರವಶರಾಗಿ ನಿನಗೆ ಯಾವಾಗಲೂ ಕೇಡನ್ನೇ ಬಯಸುತ್ತ, ತಂದೆತಾಯಿಗಳೆಂಬ ವ್ಯಾಜದಿಂದ ನಿನಗೆ ಶತ್ರುಗಳಾಗಿರುವ ಆ ಕೈಕೇಯೀದಶರಥರಿಬ್ಬರೂ ಸೇರಿ, ಸ್ವಾರ್ಥಪರರಾಗಿ ಈ ದುರ್ಮಂತ್ರಗಳನ್ನು ನಡೆಸಿ, ಯಾವುದೋ ಒಂದು ಅಕಾರ್ಯವನ್ನು ನಿನಗೆ ನಿಯಮಿಸಿಬಿಟ್ಟಮಾತ್ರಕ್ಕೆ ಅದನ್ನು ನಡೆಸಿಬಿಡಬೇಕೆಂದು ನಿನಗೆ ಹೇಗೆ ಬುದ್ಧಿಯು ಹುಟ್ಟಿತು? ಅವರಿಗೆ ಈ ದುರ್ಬುದ್ಧಿಯು ಹುಟ್ಟಿದುದು ದೈವಿಕವಲ್ಲದೆ, ಸ್ವಾಭಾವಿಕವಲ್ಲವೆಂದು ನಿನಗೆ ನಂಬಿಕೆಯಿದ್ದರೂ ಇರಬಹುದು. ಹಾಗಿದ್ದರೂ ಅದನ್ನು ತಿರಸ್ಕರಿಸಬೇಕೇಹೊರತು ಎಂದಿಗೂ ಆದರಿಸಬಾರದು. ದೈವವೇ ಪ್ರಮಾಣವೆಂಬುದನ್ನು ನಾನು ಎಂದಿಗೂ ಒಪ್ಪಲಾರೆನು. ಕೈಲಾಗದ ಹೇಡಿಗಳು ದೈವವನ್ನು ನಂಬಿಕೊಂಡಿರಬೇಕೇ ಹೊರತು, ದೃಢಮನಸ್ಸುಳ್ಳ ವೀರಪುರುಷರು ಎಂದಿಗೂ ದೈವದಮೇಲೆ ಭಾರವನ್ನಿಡಲಾರರು. ಯಾವನು ತನ್ನ ಸ್ವಪ್ರಯತ್ನದಿಂದ ದೈವವನ್ನು ಮುರಿಯಬಲ್ಲನೋ, ಅಂತವನು ಎಂದಿಗೂ ಕಾರ್ಯಹಾನಿಯನ್ನು ಪಡೆಯಲಾರನು. ಆತನ ಪ್ರಯತ್ನವನ್ನಿದಿರಿಸುವುದಕ್ಕೆ ದೈವವೂ ಹೆದರುವುದು. ಎಲೈ ಆರ್ಯನೆ! ಹೆಚ್ಚಾಗಿ ಹೇಳುದುದರಿಂದೇನು ? ದೈವಬಲವು ದೊಡ್ಡದೇ, ಅಥವಾ ಪುರುಷಕಾರದ ಬಲವು ದೊಡ್ಡದೇ, ಎಂಬ ತಾರತಮ್ಯವನ್ನು ಈಗಲೇ ಪ್ರತ್ಯಕ್ಷದಲ್ಲಿ ನೋಡಬಹುದು ! ಅವೆರಡಕ್ಕೂ ಇರುವ ಬಲದ ತಾರತಮ್ಯವು ನಿಮಿಷಮಾತ್ರದಲ್ಲಿ ವ್ಯಕ್ತವಾಗುವುದು. ನಿನ್ನ ಪಟ್ಟಾಭಿಷೇಕವನ್ನು ಮುರಿದಿಡುವುದಕ್ಕೆ ಯಾವದೈವವು ಕಾರಣವೆಂದು ನೀನು ನಂಬಿರುವೆಯೋ, ಆ ದೈವವನ್ನೇ ಈಗ ನಾನು ನನ್ನ ಪರಾಕ್ರಮಬಲದಿಂದ ಮುರಿದಿಡುವುದನ್ನು ಜನರೆಲ್ಲರೂ ನೋಡಲಿ! ಮಿತಿಮೀರಿದ ಮದದಿಂದ,ಅಂಕು

ಶಕ್ಯ್ಕೆ ಅಡಗದೆ, ಉನ್ಮಾರ್ಗದಲ್ಲಿ ಹೋಗುತ್ತಿರುವ ಮದದಾನೆಯನ್ನು ತಡೆ ಹಿಡುವ ಮಾವಟಿಗನಂತೆ, ನಿನಗೆ ವಿಮುಖವಾಗಿ ಹೋಗುತ್ತಿರುವ ದೈವವನ್ನು ನಿನಗೆ ಈಗಲೇ ಅಭಿಮುಖವಾಗಿ ಮಾಡುವೆನು. ನನ್ನ ಪೌರುಷವನ್ನಾದರೂ ನೋಡು! ದಿಕ್ಪಾಲಕರೆಲ್ಲರೂ ಒಂದಾಗಿ ಬಂದು ನನ್ನನ್ನಿದಿರಿಸಿದರೂ, ಮೂರು ಲೋಕವೂ ಒಟ್ಟುಗೂಡಿ ಬಂದು ತಾಗಿದರೂ, ಈಗ ನಾನು ಸಂಕಲ್ಪಸಿರುವ ನಿನ್ನ ಅಭಿಷೇಕವನ್ನು ತಪ್ಪಿಸಲಾರರು. ಇನ್ನು ಆ ನಮ್ಮಮುದಿತಂದೆಯು ಏಕಾ ಕಿಯಾಗಿದ್ದು ಏನುಮಾಡಬಲ್ಲನು? ಅಣ್ಣಾ! ಇನ್ನು ನೀನೇ ಮಹಾರಾಜನೆಂದು ತಿಳಿ! ಈಗ ರಹಸ್ಯವಾಗಿ ಯಾರು ಈ ದುರ್ಮಂತ್ರವನ್ನಾಲೋಚಿಸಿರುವರೋ, ಆ ಪಾಪಿಗಳು ನಿನಗೆ ಹೇಳಿದ ಆ ಹದಿನಾಲ್ಕುವರ್ಷಗಳ ವನವಾಸವನ್ನು ತಾವೇ ಅನುಭವಿಸುವಂತೆ ಮಾಡುವೆನು. ಮತ್ತು ಯಾವಳು ನಿನ್ನ ಅಭಿಷೇಕ ವನ್ನು ತಪ್ಪಿಸಿ ತನ್ನ ಮಗನಿಗೆ ರಾಜ್ಯವನ್ನು ಕೊಡಿಸಬೇಕೆಂದು ದುರಾಶೆಪಟ್ಟಿ ರುವಳೋ, ಅವಳಿಗೂ,ಅವಳ ಮಾತಿಗೆ ಮರುಳಾಗಿರುವ ಆ ಮುದಿತಂದೆಗೂ ಉಂಟಾಗಿರುವ ಈ ದುರುದ್ದೇಶಕ್ಕೆ ಈಗಲೇ ಭಂಗವನ್ನು ತರುವೆನು. ತಂದೆಗೆ ದೈವಬಲವಿರುವಾಗ ನಿನ್ನ ಪೌರುಷವು ಯಾವಕೆಲಸಕ್ಕೆ ಬಂದೀತೆಂದು,ನೀನು ಶಂಕಿಸಬಹುದು. ಅಣ್ಣಾ! ನನ್ನ ಪೌರುಷದಮುಂದೆ ದೈವವೂ ನಿಲ್ಲಲಾ ರದೆಂದು ತಿಳಿ! ತಂದೆಯಾದರೇನು ? ಬೇರೆ ಯಾರಾದರೇನು ? ನನ್ನೊಡನೆ ವಿರೋಧಿಸಿದವನಿಗೆ ಎಷ್ಟೇ ದೈವಬಲವಿದ್ದರೂ, ಅದರಿಂದುಂಟಾಗತಕ್ಕ ಶ್ರೇ ಯಸ್ಸಿಗಿಂತಲೂ, ನನ್ನ ಪೌರುಷದಿಂದುಂಟಾಗತಕ್ಕ ಅಪಾಯವೇ ಹೆಚ್ಚೆಂ ದು ತಿಳಿ ! ನನ್ನ ಪೌರುಷದಲ್ಲಿ ಸಿಕ್ಕಿಕೊಂಡವನನ್ನು ದೈವವೂ ಬಿಡಿಸಿಕೊಳ್ಳ ಲಾರದು. ನೀನು, ಇನ್ನುಮುಂದೆ ಬಹುಕಾಲದವರೆಗೆ ರಾಜ್ಯಪರಿಪಾಲನೆಯ ನ್ನು ಮಾಡಿ, ರಾಜ್ಯಸುಖಗಳನ್ನೆಲ್ಲಾ ಮನಸ್ತೃಪ್ತಿಯಾಗುವವರೆಗೂ ಅನು ಭವಿಸಿ, ಸಾವಿರಾರುವರ್ಷಗಳಮೇಲೆ ವಾನಪ್ರಸ್ಥಾಶ್ರಮವನ್ನಂಗೀಕರಿಸಿ ನಿನ್ನ ಇಷ್ಟದಂತೆ ನೀನೇ ಕಾಡಿಗೆ ಹೊರಟುಹೋದರೂ, ಆಮೇಲೆಯೂ, ನಿನ್ನ ಮಕ್ಕಳೇ ರಾಜ್ಯವನ್ನನುಭವಿಸಬೇಕೇಹೊರತು, ಭರತನಿಗೆ ಎಂದಿ ಗೂ ಈ ರಾಜ್ಯವು ದೊರಕಲಾರದು. ಶಕ್ತಿಯಿರುವವರೆಗೂ ಪ್ರಜೆಗಳನ್ನು ಧರ್ಮದಿಂದ ಪಾಲಿಸಿ, ಆಮೇಲೆ ಆ ಪ್ರಜೆಗಳನ್ನು ಮಕ್ಕಳ ವಶಕ್ಕೊಪ್ಪಿಸಿ, ಪ್ರಜೆಗಳನ್ನು ಪುತ್ರವಾತ್ಸಲ್ಯದಿಂದ ಕಾಪಾಡುತ್ತಿರಬೇಕೆಂದು ಅವರಿಗೂ



೪೫೨. ರಾಮನು ವಿಷ್ಣುಪೂಜೆಯಲ್ಲಿದ್ದ ಕೌಸಲ್ಯೆಯ ದುಃಖವನ್ನೂ, ಲಕ್ಷ್ಮಣನ ಕೋಪವನ್ನೂ ಸಮಾಧಾನಪಡಿಸಿದುದು.

ಬುದ್ಧಿವಾದವನ್ನು ಹೇಳಿ ವಾನಪ್ರಸ್ಥಾಶ್ರಮವನ್ನಂಗೀಕರಿಸಬೇಕೆಂಬುದೇ ಶಾಸ್ತ್ರವಿಧಿಯಲ್ಲವೆ ? ನಮ್ಮ ವಂಶದ ಪುರಾತನರಾಜರ್ಷಿಗಳೂ ಇದೇ ಮಾರ್ಗವನ್ನನುಸರಿಸಿ ನಡೆಸುತಿದ್ದರಲ್ಲವೆ ? ಎಲೆ ಧರ್ಮಾತ್ಮನೆ ! ಈಗ ರಾಜನ ಮನಸ್ಸು ಚಂಚಲವಾಗಿರುವುದೆಂದೂ, ಹೀಗಿರುವಾಗಲೂ ನೀನು ಪ್ರಯತ್ನದಿಂದ ರಾಜ್ಯವನ್ನು ಸ್ವಾಧೀನಪಡಿಸಿಕೊಂಡರೆ, ಅನೇಕವಿಧದ ಭೇದಗಳುಂಟಾಗಿ ರಾಜ್ಯವನ್ನು ನಡೆಸುವುದಸಾಧ್ಯವಾಗುವುದೆಂದೂ ಶಂಕಿಸಿ, ನೀನು ಇದನ್ನಂಗೀಕರಿಸುವುದಕ್ಕೆ ಇಷ್ಟಪಡದಿರುವುದಾದರೆ ಅದನ್ನಾದರೂ ಹೇಳು. ಅದಕ್ಕಾಗಿ ನೀನು ಚಿಂತಿಸಬೇಕಾದುದಿಲ್ಲ. ನೀನಾದರೋ ಮಹಾವೀರನು. ನಾನೂ ನಿನಗೆ ಸಹಾಯನಾಗಿರುವೆನು. ಸಮುದ್ರವೇಲೆಯು ಉಕ್ಕಿಬರುವ ಸಮುದ್ರವನ್ನು ತಡೆದಿಡುವಂತೆ, ರಾಜ್ಯವನ್ನು ಸ್ವಾಧೀನದಲ್ಲಿರಿಸತಕ್ಕ ಭಾರವು ನನಗಿರಲಿ! ಬೇಕಾದರೆ ಈ ವಿಷಯದಲ್ಲಿ ನಾನು ನಿನಗೆ ಸತ್ಯವನ್ನುಮಾಡಿಕೊಡುವೆನು. ನಾನು ಈ ಮಾತಿಗೆ ತಪ್ಪಿದರೆ, ನನಗೆ ಲಭಿಸಬೇಕಾದ ವೀರಲೋಕಗಳೆಲ್ಲವೂ ತಪ್ಪಿಹೋಗಲಿ ! ಈಗಲೇ ವಸಿಷ್ಠಾದಿಮಹರ್ಷಿಗಳನ್ನು ಕರೆಸಿ, ಮಂಗಳದ್ರವ್ಯಗಳನ್ನು ಸಿದ್ಧಪಡಿಸಿ, ಪಟ್ಟಾಭಿಷೇಕವನ್ನುನಡೆಸಿಕೊಂಡು ಬಿಡು! ಇದಕ್ಕೆ ಯಾವ ರಾಜರಾದರೂ ವಿರೋಧಿಗಳಾಗಿ ನಿಂತರೆ, ಅವರನ್ನು ನಿಗ್ರಹಿಸುವ ಭಾರವನ್ನು ನಾನು ವಹಿಸುವೆನು. ಇದಕ್ಕೆ ನಾನೊಬ್ಬನೇ ಸಾಕು!ಅಣ್ಣಾ!ಈ ನನ್ನ ಕೈಗಳೆರಡೂ ನನ್ನದೇಹಕ್ಕೆ ಕೇವಲ ಅಲಂಕಾರಪ್ರಾಯವಾದುವುಗಳೆಂದೆಣಿಸಬೇಡ! ಈ ನನ್ನ ಬಿಲ್ಲಾದರೂ ಕೇವಲ ಅಲಂಕಾರಾರ್ಥವಾದುದಲ್ಲ! ಈನನ್ನ ಕತ್ತಿಯೂ ಕೇವಲವೀರಭೂಷಣವಾಗಿ ನಡುವಿಗೆಕಟ್ಟಿದುದಲ್ಲ.ನಾನು ಧರಿಸಿರುವ ಈ ಬಾಣಗಳನ್ನು ಕೇವಲ ಡಂಭಪ್ರದರ್ಶನಾರ್ಥವೆಂದು ತಿಳಿಯಬೇಡ! ಇವೆಲ್ಲವೂ ಶತ್ರುಗಳ ಕೊಬ್ಬನ್ನು ಮುರಿದಿಡುವುದಕ್ಕಾಗಿಯೇ ಹೊರತು ಬೇರೆಯಲ್ಲ.ನನಗೆ ಯಾವನು ಶತ್ರುವೆಂದು ತೋರುವನೋ, ಅಂತವನನ್ನು ನಾನು ಹುಟ್ಟಡಗಿಸದೆ ಬಿಡುವವನಲ್ಲ! ನನ್ನನ್ನು ದ್ವೇಷಿಸುವವನು ಕೊನೆಗೆ ದೇವೇಂದ್ರನಾಗಿದ್ದರೂ, ಮಿಂಚಿನಂತೆ ಹೊಳೆಯುವ ಮಹಾತೀಕ್ಷ್ಣವಾದ ಅಲಗುಳ್ಳ ಈ ನನ್ನ ಕತ್ತಿಯಿಂದ ಆತನನ್ನು ತುಂಡುಮಾಡದೆಬಿಡೆನು. ಒಂದುವೇಳೆ ಯುದ್ಧವು ಪ್ರಾಪ್ತವಾದರೆ, ನನಗಿದಿರಾಗಿ ಬಂದ ಆನೆ, ಕುದುರೆ, ಕಾಲಾಳುಗಳೆಂಬ ಸಮಸ್ತಸೈನ್ಯಗಳನ್ನೂ ಈ

ನನ್ನ ಕತ್ತಿಯಿಂದ ತುಮುರುತುಮುರಾಗಿ ಕತ್ತರಿಸಿ, ಅವುಗಳ ಅಂಗಾಂಗಗಳೆಲ್ಲವನ್ನೂ ಯುದ್ಧರಂಗದಲ್ಲಿ ಹರಡಿ, ಜನಸಂಚಾರಕ್ಕೂ ಅವಕಾಶವಿಲ್ಲದಂತೆ ಮಾಡುವೆನು. ಇದೋ! ಈ ನನ್ನ ಕತ್ತಿಯನ್ನು ನಾನು ಒಂದಾವರ್ತಿ ರಣರಂಗದಲ್ಲಿ ಬೀಸಿದರೆ, ಶತ್ರುಸೈನ್ಯದ ಆನೆಗಳೆಲ್ಲವೂ ಮಿಂಚಿನೊಡಗೂಡಿದ ಮೇಘಗಳಂತೆ, ಆ ಖಡ್ಗಕಾಂತಿಯೊಡಗೂಡಿ, ಪರ್ವತಗಳಂತೆ ಉರುಳಿಬೀಳುವುವು. ನಾನು ಉಡುವಿನ ಚರ್ಮದ ಕೈಗಾಪಣಿಗೆಯನ್ನಿಟ್ಟು, ಬಿಲ್ಲುಹಿಡಿದು, ಯುದ್ಧಕ್ಕೆ ಬಂದು ನಿಂತಮಾತ್ರಕ್ಕೆ, ತಾನೂ ಒಬ್ಬಗಂಡಸೆಂದು ನನ್ನಿದಿರಾಗಿ ಬಂದು ನಿಲ್ಲತಕ್ಕ ವೀರಪುರುಷನಾವನು? ಏಕಕಾಲದಲ್ಲಿ ಅನೇಕ ಬಾಣಗಳನ್ನು ಬಿಟ್ಟು ಒಬ್ಬವೀರನನ್ನು ಕೊಲ್ಲುವುದಕ್ಕಾಗಲಿ, ಒಂದೇಬಾಣದಿಂದ ಏಕಕಾಲದಲ್ಲಿ ಅನೇಕರನ್ನು ಕೊಲ್ಲುವುದಕ್ಕಾಗಲಿ ನನಗೆ ಶಕ್ತಿಯುಂಟು! ಹೀಗೆ ಸಮಯೋಚಿತವಾದ ಶಸ್ತ್ರಚಾತುರ್ಯದಿಂದ, ಚತುರಂಗಸೈನ್ಯಗಳಿಗೂ ಮರ್ಮಸ್ಥಾನಗಳನ್ನು ಹಿಡಿದು ಬಾಣಗಳನ್ನು ಪ್ರಯೋಗಿಸಬಲ್ಲೆನು. ಆರ್ಯನೆ! ನನ್ನ ಶಸ್ತ್ರಪ್ರಭಾವವನ್ನಾದರೂನೋಡು! ಈಗ ದಶರಥರಾಜನಿಗಿರುವ ಪ್ರಭುತ್ವವನ್ನೇ ತಪ್ಪಿಸಿ, ಅದೇಪ್ರಭುಪದವಿಯಲ್ಲಿ ನಿನ್ನನ್ನು ನಿಲ್ಲಿಸುವುದಕ್ಕೂ, ಇದೋ! ಈ ನನ್ನ ಶಸ್ತ್ರಗಳು ಸಮರ್ಥವಾಗಿರುವುವು. ನಾನು ರಾಜಕುಮಾರನಾಗಿ ಹುಟ್ಟಿದುದರಿಂದ, ಇದುವರೆಗೆ ಈ ನನ್ನ ತೋಳುಗಳೆರಡೂ ಕೇವಲಚಂದನಾನುಲೇಪನಕ್ಕೂ ತೋಳ್ಬಳೆಗಳನ್ನಿಟ್ಟುಕೊಳ್ಳುವುದಕ್ಕೂ, ತ್ಯಾಗಮಾಡುವುದಕ್ಕೂ, ಮಿತ್ರರನ್ನು ಪಾಲಿಸುವುದಕ್ಕೂ ಯೋಗ್ಯವಾಗಿದ್ದುವು. ಇವುಗಳೇ ಈಗ ನಿನ್ನ ಕಾರ್ಯಕ್ಕೆ ಸಿದ್ಧವಾಗಿರುವುವು. ನಿನ್ನ ಅಭಿಷೇಕಕ್ಕೆ ಅಡ್ಡಿಯನ್ನು ಮಾಡುವ ವಿರೋಧಿಗಳನ್ನು ನಿಗ್ರಹಿಸುವುದಕ್ಕೆ ಮುಂದುವರಿಯುತ್ತಿರುವುವು. ಅಣ್ಣಾ! ನಿನ್ನ ಹಗೆಯಾರೆಂಬುದನ್ನು ತಿಳಿಸು! ಈಗಲೇ ಆತನ ಪ್ರಾಣವನ್ನು ಹೀರಿಬಿಡುವೆನು! ಆತನ ಕೀರ್ತಿಯನ್ನು ತಲೆಯೆತ್ತದ ಹಾಗೆ ಮಾಡುವೆನು! ಆತನ ಮಿತ್ರರನ್ನೂ ಹುಟ್ಟಡಗಿಸುವೆನು! ನೀನು ನನಗೆ ಆಜ್ಞೆಯನ್ನು ಮಾತ್ರಕೊಟ್ಟರೆ ಸಾಕು! ಈ ಸಮಸ್ತಭೂಮಂಡಲವನ್ನೂ ನಿನಗೆ ವಶಪಡಿಸಿಕೊಡುವೆನು! ಇದೋ! ನಾನು ನಿನಗೆ ಕಿಂಕರನಾಗಿ ನಿನ್ನ ಆಜ್ಞೆಯನ್ನೇ ಇದಿರುನೋಡುತ್ತಿರುವೆನು." ಎಂದನು. ಇದನ್ನು ಕೇಳಿ ರಾಮನು ಲಕ್ಷ್ಮಣನಿಗೆ ಅನೇಕವಿಧದಲ್ಲಿ ಸಮಾಧಾನವನ್ನು ಹೇಳಿ, ಆತನ ಕಣ್ಣೀರನ್ನು

ತನ್ನ ಕೈಯಿಂದಲೇ ಒರೆಸಿ, "ವತ್ಸ ಲಕ್ಷ್ಮಣಾ! ಸುಮ್ಮನೆ ಹೀಗೆ ದುಡು ಕಬಾರದು. ತಂದೆಯಾಜ್ಞೆಯನ್ನು ಮಾತ್ರನಾನೆಂದಿಗೂ ಮೀರಿ ನಡೆಯತಕ್ಕ ವನಲ್ಲ. ಈ ವಿಷಯವನ್ನು ನೀನು ಚೆನ್ನಾಗಿ ತಿಳಿ! ಸೌಮ್ಯಸ್ವಭಾವವುಳ್ಳ ನೀನೂ ಹೀಗೆ ದಾರಿತಪ್ಪಿ ಹೋಗುವುದುಚಿತವಲ್ಲ! ಆದುದರಿಂದ ಸನ್ಮಾರ್ಗ ದಲ್ಲಿ ಪ್ರವರ್ತಿಸು." ಎಂದನು. ಇಲ್ಲಿಗೆ ಇಪ್ಪತ್ತುಮೂರನೆಯ ಸರ್ಗವು.

---

## ರಾಮನ ವನವಾಸನಿಶ್ಚಯವನ್ನು ಕೌಸಲ್ಯೆಯು ಅನುಮೋದಿಸಿದುದು.

ಹೀಗೆ ಪಿತೃವಾಕ್ಯಪರಿಪಾಲನದಲ್ಲಿಯೇ ರಾಮನು ದೃಢಸಂಕಲ್ಪವುಳ್ಳ ವನಾಗಿರುವುದನ್ನು ನೋಡಿ, ಕೌಸಲ್ಯೆಯು ಕಣ್ಣೀರುಸುರಿಸುತ್ತ, ಧರ್ಮಯು ಕ್ತವಾದ ಒಂದಾನೊಂದು ಮಾತನ್ನು ಹೇಳುವಳು. "ವತ್ಸ ರಾಮಾ! ನೀನು ಇದುವರೆಗೆ ದುಃಖವೆಂಬುದನ್ನೇ ಕಂಡವನಲ್ಲ. ಧರ್ಮಸ್ವರೂಪನೆನಿಸಿಕೊಂಡು ಸಮಸ್ತಪ್ರಾಣಿಗಳಿಗೂ ಪ್ರಿಯವನ್ನೇ ನುಡಿಯತಕ್ಕ ಸುಸ್ವಭಾವವುಳ್ಳವನು. ರಾಜಾಧಿರಾಜನಾದ ದಶರಥನಿಗೆ ನನ್ನಲ್ಲಿ ಹುಟ್ಟಿರುವ ನೀನು, ಕಾಡಿಗೆ ಹೋಗಿ, ಅಲ್ಲಿ ಉದಿರಿರುವ ಧಾನ್ಯಕಣಗಳನ್ನಾಯುತ್ತ, ಅದರಿಂದಲೇ ಜೀವಿಸುತ್ತಿರ ಬೇಕಾಗಿ ಬಂದಿರುವುದಲ್ಲಾ? ಸುಕುಮಾರಾಂಗನಾದ ನೀನು ಈ ಕೆಲಸವ ನ್ನು ಹೇಗೆ ಮಾಡಬಲ್ಲೆ? ನಿನ್ನನ್ನಾಶ್ರಯಿಸಿ ಬದುಕುತ್ತಿರುವ ಭೃತ್ಯ ವರ್ಗಗಳೆಲ್ಲವೂ ಮೃಷ್ಟಾನ್ನವನ್ನು ಭುಜಿಸುತ್ತಿರುವುವು. ಅಂತಹ ಉದಾರ ಪ್ರಭುವಾದ ನೀನೇ ಈಗ ಕಾಡಿನಲ್ಲಿ ಸುತ್ತಿ, ಗೆಡ್ಡೆಗೆಣಸುಗಳನ್ನೂ, ಹಣ್ಣು ಹಂಪಲುಗಳನ್ನೂ ತಿಂದು ಹೇಗೆ ಜೀವಿಸಬಲ್ಲೆ? ದಶರಥರಾಜನು ತನಗೆ ಪ್ರಿ ಯಪುತ್ರನಾಗಿಯೂ, ಮಹಾಗುಣಾಢ್ಯನಾಗಿಯೂ ಇರುವ ರಾಮನನ್ನು ಕಾಡಿಗೆ ಕಳುಹಿಸಿಬಿಡುವನೆಂಬ ಮಾತನ್ನು ಕೇಳಿದರೂ, ಯಾರೂ ನಂಬಲಾ ರರು. ಅಥವಾ ಒಂದುವೇಳೆ ನಂಬಿದರೂ ಮಹಾಘೋರವಾದ ಈ ವ್ಯಸನ ವಾರ್ತೆಯನ್ನು ಕೇಳಿ ಯಾರೂ ಅಂಜದಿರಲಾರರು. ಎಷ್ಟು ಹೇಳಿದರೇನು? ಮುಖ್ಯವಾಗಿ ದೈವಸಂಕಲ್ಪಕ್ಕೆ ಯಾವುದೂ ಇದಿರಲ್ಲ. ಲೋಕದ ಸಮಸ್ತ ವ್ಯಾಪಾರಗಳಿಗೂ ದೈವವೇ ನಿಯಾಮಕವು. ಸರ್ವಲೋಕಪ್ರಿಯನಾದ ನಿನ

ಗೂ ಈ ವನವಾಸವು ಪ್ರಾಪ್ತವಾದಮೇಲೆ,ಇದು ದೈವಾಧೀನವಲ್ಲದೆ ಮತ್ತೇನು? ವತ್ಸನೆ! ನನ್ನ ನಿಟ್ಟುಸಿರಿನ ಆಯಾಸದಿಂದುಂಟಾಗಿ, ಈಗ ನನ್ನಲ್ಲಿ ಅಡಗಿರುವ ಶೋಕಾಗ್ನಿಯು ಸುಮ್ಮನೆಹೋಗುತಕ್ಕದಲ್ಲ! ನಿನ್ನನ್ನು ಕಾಣದುದರಿಂದ ಆಗಾಗ ಉಂಟಾಗತಕ್ಕ ಸಂಕಟವೇ ಗಾಳಿಯಂತೆ ಆ ಅಗ್ನಿಯನ್ನು ಹೆಚ್ಚಿಸುವುದಕ್ಕೆ ಸಹಕಾರಿಯಾಗುವುದು. ನನ್ನ ಪ್ರಲಾಪದಿಂದುಂಟಾದ ಈ ದುಃಖವೇ ಕಟ್ಟಿಗೆಯಾಗಿ, ನನ್ನ ಕಣ್ಣೀರುಗಳೇ ಆಜ್ಯಾಹುತಿಯಾಗಿ, ನನ್ನ ಮನಸ್ಸಿನ ಚಿಂತೆಯು ಬೇಗೆಯೆಂಬ ಹೊಗೆಯ ಪರಂಪರೆಯನ್ನು ಹೊರಡಿಸುತ್ತಾ, ನಿನ್ನಗಲಿಕೆಯಿಂದ ಮಹತ್ತಾಗಿ ಬೆಳೆದು, ನೀನಿಲ್ಲದ ಸಮಯದಲ್ಲಿ ನನ್ನನ್ನು ಕಂದಿಸಿ, ಶಿಶಿರಋತುವಿನಲ್ಲಿ ಒಣಗಿದ ಪೊದೆಯನ್ನು ಕಾಡುಗಿಚ್ಚು ಹೇಗೋಹಾಗೆ, ನನ್ನ ದೇಹವನ್ನು ಸಂಪೂರ್ಣವಾಗಿ ಸುಟ್ಟುಬಿಡುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ; ವತ್ಸ ರಾಮಾ!ಹಸುವು,ತನ್ನ ಕರುವು ಹೋದದಾರಿಯನ್ನೇ ಅನುಸರಿಸಿ ಹೋಗುವಂತೆ, ನೀನು ಹೋಗುವಕಡೆಗೆ ನಾನೂ ಬರುವೆನು."ಎಂದಳು. ಪುರುಷಶ್ರೇಷ್ಠನಾದ ರಾಮನು ತಾಯಿಯು ಹೇಳಿದ ಈ ಮಾತನ್ನು ಕೇಳಿ,ವ್ಯಸನದಿಂದ ಬಹಳವಾಗಿ ಕೊರಗುತ್ತಿರುವ ಆಕೆಯನ್ನುನೋಡಿ "ಎಲೆ ಮಾತೆ! ಮೊದಲೇ ಕೈಕೇಯಿಯು ತಂದೆಯಾದ ದಶರಥನನ್ನು ತನ್ನ ಮೋಹಪಾಶಕ್ಕೆ! ಸಿಕ್ಕಿಸಿಕೊಂಡು ಮೋಸಗೊಳಿಸುತ್ತಿರುವಳು. ಈಗ ನಾನೂ ಕಾಡಿಗೆ ಹೊರಟುಹೋಗುವೆನು. ನೀನೂ ನನ್ನ ಹಿಂದೆ ಹೊರಟುಬಂದರೆ, ಆತನು ಬದುಕುವ ಬಗೆಯೇನು ? ನಿಜವಾಗಿ ಆತನು ಪ್ರಾಣವನ್ನೇ ಕಳೆದುಕೊಳ್ಳಬೇಕಾಗುವುದು. ಗಂಡನನ್ನಗಲಿ ಹೋಗುವುದಕ್ಕಿಂತಲೂ, ಸ್ತ್ರೀಯರಿಗೆ ಬೇರೆ ಕ್ರೂರಕಾರ್ಯವೇನುಂಟು? ನಿನ್ನಂತಹ ಪಾತಿವ್ರತ್ಯಪರಾಯಣರಾದ ಸ್ತ್ರೀಯರು ಎಂದಿಗೂ ಈ ಆಲೋಚನೆಯನ್ನು ಮಾಡಬಾರದು. ಇದನ್ನು ಮನಸ್ಸಿನಲ್ಲಿ ಯೋಚಿಸುವುದೂ ನ್ಯಾಯವಲ್ಲ. ಕಕುತ್ಸ್ಥವಂಶದಲ್ಲಿ ಹುಟ್ಟಿ ಭೂಮಿಗೆಲ್ಲಾ ಒಡೆಯನೆನಿಸಿಕೊಂಡಿರುವ ನಮ್ಮತಂದೆಯು, ಬದುಕಿರುವವರೆಗೂ,ಆತನ ಶುಶ್ರೂಷೆಯನ್ನು ಮಾಡುತ್ತಿರಬೇಕಾದುದೇ ನಿನ್ನ ಕೃತ್ಯವು. ಸ್ತ್ರೀಯರಿಗೆ ಇದೇ ಶಾಶ್ವತಧರ್ಮವು"ಎಂದನು. ಇದನ್ನುಕೇಳಿ ಕೌಸಲ್ಯೆಯು ಯುಕ್ತಾಯುಕ್ತವನ್ನು ಚೆನ್ನಾಗಿ ವಿಚಾರಿಸಿ, ಆತನ ಧರ್ಮಸಂಕಲ್ಪವನ್ನು ನೋಡಿ ಮನಸ್ಸಿನಲ್ಲಿ ಸಂತೋಷಗೊಂಡು, ತನಗೆ ದುಃಖ

ನಿವಾರಕನಾದ ಆ ರಾಮನನ್ನು ಕುರಿತು “ವತ್ಸರಾಮಾ! ಸರಿ! ಇನ್ನುಮಾಡ ತಕ್ಕುದೇನು? ಹಾಗೆಯೇ ನಡೆಸುತ್ತಿರುವೆನು.” ಎಂದಳು. ಧಾರ್ಮಿಕರಲ್ಲಿ ಮೇಲೆ ನಿಸಿಕೊಂಡ ರಾಮನು, ತಾಯಿಯು ಹೇಳಿದ ಆ ಮಾತನ್ನು ಕೇಳಿ, ಇನ್ನೂ ವ್ಯಸ ನದಲ್ಲಿಯೇ ಮುಳುಗಿರುವ ಆಕೆಯನ್ನು ನೋಡಿ, ಪುನಃ ಒಂದಾನೊಂದು ಮಾ ತನ್ನು ಹೇಳುವನು. “ಎಲೆ ತಾಯೆ! ತಂದೆಯ ಮಾತನ್ನು ನಡೆಸಬೇಕೆಂಬ ನಿಯ ಮವು ನನಗೆ ಮಾತ್ರವೇ ಅಲ್ಲ. ನಿನಗೂ ಆತನ ಆಜ್ಞೆಯಂತೆ ನಡೆಯುವುದೇ ಮುಖ್ಯಕರ್ತವ್ಯವು. ಆತನನ್ನು ನೀನು ಗಂಡನೆಂದುಮಾತ್ರವೇ ಎಣಿಸಬೇಡ! ಆ ತನೇ ನಮಗೆಲ್ಲರಿಗೂ ರಾಜನು! ಆತನೇ ನಮಗೆ ಆಚಾರ್ಯನು! ಆತನೇ ನಮಗೆಪೂ ಜ್ಯನು. ಆತನೇ ನಮಗೆ ಸರ್ವವಿಷಯಗಳಲ್ಲಿಯೂ ನಿಯಾಮಕನಾದ ಪ್ರಭುವು. ಆದುದರಿಂದ ನಮ್ಮೆಲ್ಲರಿಗೂ ಆತನ ಆಜ್ಞೆಯನ್ನು ನಡೆಸಬೇಕಾದುದೇ ಪರ ಮಧರ್ಮವು. ಅಮ್ಮಾ! ಈಗ ನಾನು ನಿನ್ನ ಮಾತನ್ನು ಲಕ್ಷ್ಯೀಕರಿಸದೆ ಕಾಡಿಗೆ ಹೋಗುವೆನೆಂದು ನೀನು ನನ್ನಲ್ಲಿ ಕೋಪಿಸಬೇಡ! * ನಾನು ಕಾಡಿನಲ್ಲಿರ ಬೇಕಾದುದು, ಮೊದಲು ಒಂಬತ್ತುವರ್ಷಗಳು! ಅದರಮೇಲೆ ಐದುವರ್ಷಗಳು! ಇಷ್ಟೇ ಅಲ್ಲವೆ? ಈ ಬಹುಸ್ವಲ್ಪಕಾಲವನ್ನು ಕಾಡಿನಲ್ಲಿವಿನೋದದಿಂದಕಳೆದು ಕಾಲಹರಣವನ್ನು ಮಾಡಿ, ಸಂತೋಷದಿಂದ ಹಿಂತಿರುಗಿ ಬಂದು, ಆಮೇಲೆ ಎಂದೆಂದಿಗೂ ನಿನ್ನ ಆಜ್ಞಾಧಾರಕನಾಗಿರುವೆನು.” ಎಂದನು. ಈ ಮಾತನ್ನು ಕೇಳಿ ಪುತ್ರವತ್ಸಲೆಯಾದ ಆ ಕೌಸಲ್ಯೆಯು, ತನ್ನ ಮನಸ್ಸಿನ ದುಃಖವನ್ನು ತಡೆಯಲಾರದೆ ಕಣ್ಣೀರನ್ನು ಬಿಡುತ್ತ, ಪ್ರಿಯಪುತ್ರನಾದ ರಾಮನನ್ನು ಕುರಿತು “ಎಲೆ ವತ್ಸನೆ! ನೀನು ಹೇಳುವುದೇನೋ ನಿಜವು. ಆದರೆ ಈ ಸವತಿಯರ ನಡುವೆ! ಸಿಕ್ಕಿಕೊಂಡು ನಾನು ಎಂದಿಗೂ ಜೀವಿಸಿರಲಾ ರೆನು. ತಂದೆಯ ಆಜ್ಞೆಯಂತೆ ನೀನು ಕಾಡಿಗೆ ಹೋಗಬೇಕೆಂದೇ ನಿಶ್ಚೈ

---

* ಇಲ್ಲಿ “ವಿಹೃತ್ಯ ನವ ಪಂಚಚ” ಎಂದು ಮೂಲವು. ಹದಿನಾಲ್ಕುವರ್ಷಗ ಳೆಂದು ಕೂಡಿಸಿ ಹೇಳದೆ, “ನವ ಪಂಚಚ” ಒಂಬತ್ತುವರ್ಷಗಳು, ಐದುವರ್ಷಗಳೆಂ ದು ಬಿಡಿಸಿ ಹೇಳಿದುದೇಕೆಂದರೆ, ಬಹುಸ್ವಲ್ಪಕಾಲವೆಂಬುದನ್ನು ತೋರ್ಪಡಿಸುವುದಕ್ಕಾ ಗಿಯೇಹೊರತು ಬೇರೆಯಲ್ಲ. ಹಾಗೆಯೇ “ವಿಹೃತ್ಯ” ಎಂಬುದರಿಂದ ಆ ಸ್ವಲ್ಪಕಾಲ ವೂ ತನಗೆ ಬಹುವಿನೋದದಿಂದ ಕಳೆದು ಹೋಗುವುದೆಂದು ತಾಯಿಗೆ ಆಪ್ಯಾಯನಾ ರ್ಥವಾಗಿ ಹೇಳಿದಂತೆ ಭಾವಿಸಬೇಕು.

ಸಿರುವ ಪಕ್ಷದಲ್ಲಿ, ನನ್ನನ್ನೂ ನಿನ್ನೊಡನೆಯೇ ಕರೆದುಕೊಂಡು ಹೋಗು. *ಕಾಡುಜಿಂಕೆಯಂತೆ ನಾನೂ ಅಲ್ಲಿಯೇ ಇದ್ದು ಕಾಲವನ್ನು ಕಳೆಯುವೆನು." ಎಂದಳು. ಹೀಗೆ ಗೋಳಿಡುತ್ತಿರುವ ತಾಯಿಯ ದುಃಖವನ್ನು ನೋಡಿಸಹಿಸ ಲಾರದೆ, ರಾಮನು ತಾನೂ ಅಳುತ್ತ, ಅಮ್ಮಾ! ಸ್ತ್ರೀಯರು ಬದುಕಿರುವವರೆ ಗೂ ಗಂಡನೇ ದೈವವು; ಆ ಗಂಡನೇ ಪ್ರಭುವು. ಆದುದರಿಂದ ನಿನಗೂ, ನನಗೂ ಆದಶರಥನೇ ನಿಯಾಮಕನು. ಈ ಲೋಕಕ್ಕೆಲ್ಲವೂ ನಾಥನೆನಿಸಿಕೊಂಡ ಮಹಾ ಬುದ್ಧಿವಂತನಾದ ಆ ರಾಜನು ಬದುಕಿರುವಾಗ, ನಾವು ಅನಾಥರೆಂದು ಹೇಳಿಕೊಳ್ಳುವುದುಚಿತವೇ? ಆದುದರಿಂದ ನಿನ್ನನ್ನು ಪೋಷಿಸತಕ್ಕ ರಾಜನಿರು ವಾಗ ನೀನು ಹೇಗೆ ತಾನೇ ಅನಾಥೆಯಾಗುವೆ? ಭರತನ ವಿಷಯದಲ್ಲಿಯೂ ನೀನು ಬೇರೆ ವಿಧವಾಗಿ ಯೋಚಿಸಬೇಕಾದುದಿಲ್ಲ. ಆತನು ಬಹಳ ಧರ್ಮಬುದ್ಧಿ ಯುಳ್ಳವನು. ಸಮಸ್ತಭೂತಗಳಲ್ಲಿಯೂ ಪ್ರಿಯವನ್ನೇ ನುಡಿಯತಕ್ಕವನು. ಯಾವಾಗಲೂ ಧರ್ಮವನ್ನು ಬಿಟ್ಟು ಹೋಗತಕ್ಕವನಲ್ಲ. ನಿನ್ನ ಮನಸ್ಸನ್ನನು ಸರಿಸಿಯೇ ನಡೆಯುವನು. ಒಂದುವೇಳೆ ಆತನ ತಾಯಿಯೇ ಬಂದು ಅವನನ್ನು ನಿರ್ಬಂಧಿಸಿದರೂ ಅಧರ್ಮಕ್ಕೆ ಹೋಗತಕ್ಕವನಲ್ಲ. ಆತನ ವಿಷಯದಲ್ಲಿ ನೀನು ಸ್ವಲ್ಪವೂ ಶಂಕಿಸಬೇಕಾದುದಿಲ್ಲ. ಎಲೆ ಜನನಿ! ಅದೆಲ್ಲವೂ ಹಾಗಿರಲಿ! ನಾನು ಇತ್ತಲಾಗಿ ಕಾಡಿಗೆ ಹೊರಟಮೇಲೆ, ತಂದೆಯಾದ ದಶರಥನು ಈ ಪುತ್ರವಿರ ಹದಿಂದ ಸ್ವಲ್ಪವೂ ಆಯಾಸಪಡದಹಾಗೆ ನೋಡಿಕೊಳ್ಳುವ ಭಾರವು ನಿನಗೆ ಸೇರಿದೆ. ಬಹುಜಾಗರೂಕಳಾಗಿ ಆತನ ಕ್ಷೇಮಲಾಭವನ್ನು ವಿಚಾರಿಸುತ್ತಿರು. ಯಾರಿಗಾದರೇನು? ಪುತ್ರವಿರಹವೆಂಬುದು ಬಹಳ ವ್ಯಸನವನ್ನುಂಟುಮಾಡು ವುದು. ನಮ್ಮ ತಂದೆಯು ಮೊದಲೇ ವೃದ್ಧನು. ಇದರಮೇಲೆ ಭಯಂಕರವಾದ ಈ ಪುತ್ರಶೋಕವು ಆತನ ದೇಹವನ್ನು ಕೆಡಿಸದಂತೆ ನೀನು ಎಚ್ಚರಿಕೆಯಿಂದ ಆತನಿಗೆ ಹಿತಕರವಾದ ಕಾರ್ಯಗಳನ್ನು ಮಾಡುತ್ತಿರು. ಅಮ್ಮಾ! ನಿನಗೆ ನಾನು ಹೇಳಬೇಕಾದುದೊಂದೂ ಇಲ್ಲ. ಆದರೂ ಒಂದೆರಡು ವಿಷಯಗಳನ್ನು ಜ್ಞಾಪಿಸುವೆನು ಕೇಳು. ಯಾವಾಗಲೂ ವ್ರತೋಪವಾಸಗಳನ್ನು ನಡೆಸಿ

---

* ಇಲ್ಲಿ ಕಾಡುಜಿಂಕೆಯೆಂದು ಹೇಳಿರುವುದರಿಂದ, ಕಾಡಿನಲ್ಲಿ ಜಿಂಕೆಗಳು ಸಂ ತೋಷದಿಂದಿರುವಂತೆ, ನಿನ್ನೊಡನೆ ನಾನೂ ನಿಶ್ಚಿಂತಳಾಗಿರಬಹುದೆಂದು ಅಭಿಪ್ರಾಯವು.

ಉತ್ತಮಸ್ತ್ರೀಯೆನಿಸಿಕೊಂಡಿದ್ದರೂ, ಯಾವಳು ತನ್ನ ಪತಿಯನ್ನನುಸರಿಸಿ ನಡೆಯದಿರುವಳೋ, ಅಂತವಳು ಪಾಪಗತಿಯನ್ನು ಹೊಂದುವಳೇಹೊರತು ಎಂದಿಗೂ ಸದ್ಗತಿಯನ್ನು ಪಡೆಯಲಾರಳು. ಹೆಂಗಸರಿಗೆ ಪತಿಶುಶ್ರೂಷೆಯೊಂದೇ ಸ್ವರ್ಗಪ್ರಾಪ್ತಿಗೆ ಮುಖ್ಯಸಾಧನವು. ಗುರುಹಿರಿಯರಿಗೆ ನಮಸ್ಕರಿಸದೆ, ದೈವಭಕ್ತಿಯಿಲ್ಲದೆ, ಕೇವಲನಾಸ್ತಿಕಳಾದ ಹೆಂಗಸೂಕೂಡ ಪತಿಶುಶ್ರೂಷೆಯನ್ನು ಮಾಡಿದಮಾತ್ರಕ್ಕೆ ಉತ್ತಮಗತಿಯನ್ನು ಪಡೆಯುವಳು. ಸ್ತ್ರೀಯಾದವಳು ಯಾವಾಗಲೂ ತನ್ನ ಪತಿಗೆ ಹಿತವಾಗಿಯೂ, ಇಷ್ಟವಾಗಿಯೂ ಇರತಕ್ಕ ಕಾರ್ಯಗಳನ್ನೇಮಾಡುತ್ತಿರಬೇಕು. ಲೋಕದಲ್ಲಿ ಬಹುಕಾಲದ ಶಿಷ್ಟಾಚಾರದಿಂದ ಬಂದ ಪುರಾತನಧರ್ಮವೇ ಇದು. ವೇದಗಳಲ್ಲಿಯೂ ಇದೇ ಮುಖ್ಯಧರ್ಮವಾಗಿ ವಿಧಿಸಲ್ಪಟ್ಟಿರುವುದು. ಶ್ರುತಿಸ್ಮೃತಿಗಳೂ ಇದನ್ನೇ ಪ್ರತಿಪಾದಿಸುವುವು. ಅಮ್ಮಾ! ನೀನು ಇನ್ನು ಮೇಲೆ ನನಗಾಗಿ ಶಾಂತಿಕಪೌಷ್ಟಿಕಹೋಮಗಳೇ ಮೊದಲಾದ ಅಗ್ನಿಕಾರ್ಯಗಳಿಂದಲೂ, ಪುಷ್ಪಾದಿಗಳಿಂದಲೂ ದೇವತಾಪೂಜೆಯನ್ನು ಮಾಡುತ್ತಿರು. ಹಾಗೆಯೇ ವ್ರತನಿಷ್ಠರಾದ ಬ್ರಾಹ್ಮಣರನ್ನೂ ಆಗಾಗ ಪೂಜಿಸುತ್ತಿರು. ನಾನು ಸುಖವಾಗಿ ಹಿಂತಿರುಗಿಬರುವವರೆಗೂ, ನೀನು ಹೀಗೆಯೇ ಕಾಲವನ್ನು ಕಳೆಯುತ್ತಿರು! ಮತ್ತು ಸ್ನಾನಾದಿನಿಯಮಗಳನ್ನು ಕೈಕೊಂಡು, ನಿಷಿದ್ಧಪದಾರ್ಥಗಳನ್ನು ಭುಜಿಸದೆ, ನಿಯತವಾದ ಸಾತ್ವಿಕಾಹಾರಗಳನ್ನೇ ತೆಗೆದುಕೊಳ್ಳುತ್ತ, ಪತಿಶುಶ್ರೂಷೆಯನ್ನು ಮಾಡಿಕೊಂಡು, ನಾನು ಹಿಂತಿರುಗಿಬರುವುದನ್ನೇ ಇದಿರುನೋಡುತ್ತಿರು. ಧಾರ್ಮಿಕರಲ್ಲಿ ಶ್ರೇಷ್ಠನೆನಿಸಿಕೊಂಡ ನನ್ನ ತಂದೆಯು, ನಾನು ಹಿಂತಿರುಗಿಬರುವವರೆಗೂ ಬದುಕಿದ್ದಪಕ್ಷದಲ್ಲಿ, ಆ ಮೇಲೆ ನಿನ್ನ ಕೋರಿಕೆಗಳೆಲ್ಲವನ್ನೂ ಈಡೇರಿಸಿಕೊಳ್ಳಬಹುದು." ಎಂದನು. ಈ ಮಾತನ್ನು ಕೇಳಿ ಕೌಸಲ್ಯೆಯು, ಆಗಲೂ ಎಡಬಿಡದೆ ಕಣ್ಣೀರನ್ನು ಸುರಿಸುತ್ತಾ, ಪುತ್ರಶೋಕದಿಂದ ಪೀಡಿತಳಾಗಿ, ಪುನಃ ರಾಮನನ್ನು ಕುರಿತು "ಎಲೆ ವತ್ಸನೆ! ನೀನು ಕಾಡಿಗೆ ಹೊರಡುವುದರಲ್ಲಿಯೇ ದೃಢಸಂಕಲ್ಪವುಳ್ಳವನಾಗಿರುವೆ. ಅದನ್ನು ತಪ್ಪಿಸುವುದು ಈಗ ನನ್ನಿಂದ ಸಾಧ್ಯವಲ್ಲ. ಕಾಲಗತಿಯು ಹೀಗೆ ಬಂದೊದಗಿರುವಾಗ ಯಾರೇನು ಮಾಡಬಲ್ಲರು? ಎಲೆ ಮಗನೇ! ಇನ್ನು ನೀನು ಜಾಗರೂಕನಾಗಿ ಹೋಗಿ ಬಾ! ನಿನಗೆ ಮಂಗಳವಾಗಲಿ! ನೀನು ಕಾಡಿನಿಂದ ಹಿಂತಿರುಗಿ ಬಂದಮೇಲೆಯೇ ನನ್ನ ಕಷ್ಟವೆಲ್ಲವೂ ನೀಗಬೇಕು. ಮಹಾತ್ಮನಾದ

ನೀನು ಪಿತೃವಾಕ್ಯಪರಿಪಾಲನವೆಂಬ ವ್ರತವನ್ನು ಮುಗಿಸಿ, ಕೃತಾರ್ಥನಾಗಿ, ತಂದೆಯ ಋಣವನ್ನು ತೀರಿಸಿ, ಹಿಂತಿರುಗಿಬಂದಮೇಲೆಯೇ ನಾನು ಸೌಖ್ಯವನ್ನು ಹೊಂದಬೇಕು. ರಾಮಾ! ದೈವಗತಿಯನ್ನು ಹೀಗೆಂದು ನಿರ್ಣಯಿಸುವುದಕ್ಕೆ ಯಾರಿಂದಲೂ ಸಾಧ್ಯವಲ್ಲ. ಆ ದುರ್ದೈವದ ಪ್ರೇರಣೆಯಿಂದಲೇ ಅಲ್ಲವೇ, ಈಗ ನಾನು ಹೊಟ್ಟೆಯಲ್ಲಿ ಹುಟ್ಟಿದ ಮಗನಾದ ನಿನ್ನನ್ನು ಕರೆದು, ಕಾಡಿಗೆ ಹೋಗೆಂದು ಬಾಯಿಬಿಟ್ಟು! ಹೇಳಬೇಕಾದ ಕಾಲವು ಬಂದೊದಗಿತು. ಆ ದೈವವು ನಿನ್ನ ತಾಯಿಯಾದ ನನ್ನ ಬಾಯಿಯಿಂದಲೇ ಈ ಮಾತನ್ನು ನುಡಿಸಿತಲ್ಲವೆ? ಎಲೆ ಪುತ್ರನೇ! ಇನ್ನು ನೀನು ಹೊರಡು! ಮಹಾಬಾಹುಬಲವುಳ್ಳ ನೀನು ಕ್ಷೇಮದಿಂದ ಹಿಂತಿರುಗಿಬಂದು, ಆಮೇಲೆ ನಿನ್ನ ಪ್ರಿಯವಾಕ್ಯಗಳಿಂದ ನನ್ನನ್ನು ಆನಂದಗೊಳಿಸು! ನೀನು ಹದಿನಾಲ್ಕುವರ್ಷಗಳವರೆಗೆ ಜಟಾವಲ್ಕಲಗಳನ್ನು ಧರಿಸಿ ಕಾಡಿನಲ್ಲಿದ್ದು, ಕ್ಷೇಮದಿಂದ ಹಿಂತಿರುಗಿ ಬರುವಾಗ, ನಿನ್ನನ್ನು ನೋಡಿ ಆನಂದಿಸತಕ್ಕಕಾಲವು ಈಗಲೇ ನನಗೆ ಒದಗಿಬರಬಾರದೇ?" ಎಂದಳು. ಹೀಗೆ ರಾಮನು ಪಿತೃವಾಕ್ಯಪರಿಪಾಲನಕ್ಕಾಗಿ ಕಾಡಿಗೆ ಹೋಗಬೇಕೆಂದು ನಿಶ್ಚಯಿಸಿಕೊಂಡಿರಲು, ಕೌಸಲ್ಯೆಯು ಅತ್ಯಾದರದಿಂದ ಆತನನ್ನು ನೋಡಿ, ಆತನಿಗೆ ಪ್ರಯಾಣಕಾಲದಲ್ಲಿ ಮಾಡಬೇಕಾದ ಮಂಗಳಾಶೀರ್ವಾದಗಳನ್ನು ಮಾಡುವುದಕ್ಕೆ ತೊಡಗಿದಳು. ಇಲ್ಲಿಗೆ ಇಪ್ಪತ್ತುನಾಲ್ಕನೆಯ ಸರ್ಗವು.

---

### { ಕೌಸಲ್ಯೆಯು ರಾಮನಿಗೆ ಮಂಗಳಾಶೀರ್ವಾದಗಳನ್ನು ಮಾಡಿದುದು. }

ಕೌಸಲ್ಯೆಯು ಯುಕ್ತಾಯುಕ್ತಗಳನ್ನು ಚೆನ್ನಾಗಿ ವಿಚಾರಿಸತಕ್ಕ ಉದಾರಮನಸ್ಸುಳ್ಳವಳಾದುದರಿಂದ, ತಾನು ಇದುವರೆಗೆ ಹಿಡಿದಿದ್ದ ಹಟವನ್ನು ಬಿಟ್ಟು, ರಾಮನ ಮತವನ್ನೇ ಹಿಂಬಾಲಿಸಿದಳು. ಇದುವರೆಗೂ ತಾನು ಎಡೆಬಿಡದೆ ಕಣ್ಣೀರನ್ನು ಬಿಟ್ಟು ಅಳುತಿದ್ದುದರಿಂದ, ತನಗುಂಟಾದ ಅಶುಚಿತ್ವವನ್ನು ನೀಗಿಸುವುದಕ್ಕಾಗಿ ಆಚಮನವನ್ನು ಮಾಡಿ ಬಂದು, ರಾಮನಿಗೆ ಮಂಗಳಾಶೀರ್ವಾದಗಳನ್ನು ಮಾಡುತ್ತಾ, ಆತನನ್ನು ಕುರಿತು "ವತ್ಸ ರಾಮಾ! ಇನ್ನು ನಾನು ನಿನ್ನನ್ನು ತಡೆಯಲಾರನು. ನಿನ್ನ ಇಷ್ಟದಂತೆ ನೀನು ಕಾಡಿಗೆ ಹೋಗಿಬರಬಹುದು. ಆದರೆ ನೀನುಅಲ್ಲಿರಬೇಕಾದಅವಧಿಯು ಕಳೆದೊಡನೆಯೇ

ಸ್ವಲ್ಪಮಾತ್ರವೂ ವಿಳಂಬಮಾಡದೆ ಒಡನೆಯೇ ಬಂದುಬಿಡು! ಆಮೇಲೆ ನಮ್ಮ ಕುಲಧರ್ಮವನ್ನನುಸರಿಸಿ ಅಭಿಷೇಕವನ್ನೂ ಹೊಂದುವನಾಗು! ನಿನ್ನ ಶ್ರೇಯಸ್ಸಿಗಾಗಿ ನಾನು ಇಲ್ಲಿ ಯಾವ ದೇವತೆಗಳನ್ನೂ ಪ್ರಾರ್ಥಿಸಬೇಕಾದುದಿಲ್ಲ. ನೀನು ಹುಟ್ಟಿದಂದಿನಿಂದ ಇದುವರೆಗೂ, ಧೈರ್ಯದಿಂದಲೂ, ನಿಯಮದಿಂದಲೂ ಯಾವ ಧರ್ಮವನ್ನು ಕಾಪಾಡುತ್ತಬಂದೆಯೋ ಆ ಧರ್ಮದೇವತೆಯೇ ನಿನ್ನನ್ನು ಕಾಪಾಡಲಿ! ಎಲೈ ರಘುವಂಶಶಿಖಾಮಣಿಯೆ! ಚತುಷ್ಪಥಗಳಲ್ಲಿಯೂ, ದೇವಾಲಯಗಳಲ್ಲಿಯೂ, ಯಾವ ದೇವತೆಗಳಿಗೆ ನೀನು ನಮಸ್ಕರಿಸುತಿದ್ದೆಯೋ, ಆ ದೇವತೆಗಳೇ ಈಗ ಕಾಡಿನಲ್ಲಿ ಋಷಿಗಳೊಡಗೂಡಿದ ನಿನ್ನನ್ನು ಕಾಪಾಡಲಿ! ಧೀಮಂತನಾದ ಆ ವಿಶ್ವಾಮಿತ್ರಮಹರ್ಷಿಯು ಯಾವ ಯಾವ ದಿವ್ಯಾಸ್ತ್ರಗಳನ್ನು ನಿನಗೆ ಅನುಗ್ರಹಿಸಿರುವನೋ, ಆ ಅಸ್ತ್ರಗಳೇ ನಿನ್ನನ್ನು ಯಾವಾಗಲೂ ರಕ್ಷಿಸಲಿ! ನೀನು ಇದುವರೆಗೆ ಮಾಡುತಿದ್ದ ಪಿತೃಶುಶ್ರೂಷೆಯೂ, ಮಾತೃಶುಶ್ರೂಷೆಯೂ, ನಿನ್ನ ಸತ್ಯಸಂಧತೆಯೂ ನಿನ್ನನ್ನು ರಕ್ಷಿಸಿ, ನಿನಗೆ ಚಿರಜೀವವನ್ನು ಕೊಡಲಿ! ನೀನು ಕಾಡಿನಲ್ಲಿ ಸಂಚರಿಸುವಾಗ ಅಲ್ಲಿರತಕ್ಕ ಸಮಿತ್ತುಗಳೂ, ದರ್ಭೆಗಳೂ, ಪವಿತ್ರಗಳೂ, ಅಗ್ನಿವೇದಿಕೆಗಳೂ, ದೇವತಾಗೃಹಗಳೂ, ದೇವಪೂಜಾರ್ಥವಾಗಿ ರಚಿಸಲ್ಪಟ್ಟ ಅಯಾಪೂಜಾಸ್ಥಳಗಳೂ, ಪರ್ವತಗಳೂ, ವೃಕ್ಷಗಳೂ, ಗಿಡಗಳೂ, ಸಣ್ಣಕೊಂಬೆಗಳೂ, ಮಡುಗಳೂ ಪಕ್ಷಿಗಳೂ, ಹಾವುಗಳೂ, ಸಿಂಹಗಳೂ! ನಿನ್ನನ್ನು ರಕ್ಷಿಸಲಿ! ಮತ್ತು ಸಾಧ್ಯರೂ, ವಿಶ್ವೇದೇವತೆಗಳೂ, ಸಪ್ತಮರುತ್ತುಗಳೂ, ಮಹರ್ಷಿಗಳೂ ನಿನಗೆ ಮಂಗಳವನ್ನುಂಟುಮಾಡಲಿ! ಧಾತೃವಿಧಾತೃಗಳೇ ಮೊದಲಾದ ದೇವತೆಗಳೂ ಲೋಕಧಾರಕನಾದ ವಿರಾಟ್ಪುರುಷನೂ, ಸೃಷ್ಟಿಕರ್ತನಾದ ಬ್ರಹ್ಮನೂ, ಪೂಷ, ಭಗ, ಅರ್ಯಮರೇ ಮೊದಲಾದ ದ್ವಾದಶಾದಿತ್ಯರೂ, ಇಂದ್ರಾದ್ಯಷ್ಟದಿಕ್ಪಾಲಕರೂ, * ಋತುಗಳು, ಪಕ್ಷಗಳು, ಮಾಸಗಳು, ಸಂವತ್ಸರಗಳು,

---

* ಇಲ್ಲಿ ಋತು ಮೊದಲಾದುವುಗಳನ್ನು ಆಗಾಗ ಹೇಳಿರುವುದರಿಂದ, ಪುನರುಕ್ತಿಯಂತೆ ಕಾಣಬಹುದು. ಒಂದು ಕಡೆಯಲ್ಲಿ ಋತುಗಳೆಂದೂ, ಮತ್ತೊಂದು ಕಡೆಯಲ್ಲಿ ಅವುಗಳ ಅಧಿದೇವತೆಗಳೆಂದೂ ಅರ್ಥವನ್ನು ಹೇಳಿಕೊಳ್ಳುವುದಾದರೆ ಆ ದೋಷವಿಲ್ಲ. ಅಥವಾ ಕೌಸಲ್ಯೆಯು ಪುತ್ರರಕ್ಷಣವಿಷಯದಲ್ಲಿರುವ ತನ್ನ ಪ್ರೇಮಪಾರವಶ್ಯ

ಹಗಲು ರಾತ್ರಿಗಳು, ಮುಹೂರ್ತಗಳು, ಇವೇ ಮೊದಲಾದ ಕಾಲಪರಿಮಾಣಗಳೂ ನಿನಗೆ ಮಂಗಳವನ್ನುಂಟುಮಾಡಲಿ! ಧ್ಯಾನಯೋಗಗಳೂ, ಶ್ರುತಿಸ್ಮೃತಿಗಳಲ್ಲಿ ಪ್ರತಿಪಾದಿತಗಳಾದ ಧರ್ಮವೂ ನಿನಗೆ ಯಾವಾಗಲೂ ಮಂಗಳವನ್ನುಂಟುಮಾಡಲಿ! ಪೂಜ್ಯನಾದ ಕುಮಾರಸ್ವಾಮಿಯೂ, ಚಂದ್ರನೂ, ಬೃಹಸ್ಪತಿಯೂ, ಸಪ್ತರ್ಷಿಗಳೂ, ನಾರದನೂ, ನಿನಗೆ ಸರ್ವವಿಧದಲ್ಲಿಯೂ, ಮಂಗಳವನ್ನುಂಟುಮಾಡಲಿ ! ದಿಕ್ಪಾಲಕರೊಡಗೂಡಿದ ಲೋಕಪ್ರಸಿದ್ಧಗಳಾದ ದಿಕ್ಕುಗಳೂ, ಈ ನನ್ನ ಪ್ರಾರ್ಥನೆಗೆ ಪ್ರಸನ್ನರಾಗಿ, ನೀನು ಕಾಡಿನಲ್ಲಿರುವವರೆಗೂ ನಿನ್ನನ್ನು ಕ್ಷೇಮದಿಂದ ಕಾಪಾಡಲಿ! ಸಪ್ತಕುಲಪರ್ವತಗಳೂ, ಸಪ್ತಸಮುದ್ರಗಳೂ, ಕುಬೇರನೂ, ವರುಣನೂ, ಭೂಮ್ಯಾಕಾಶಗಳೂ, ಸ್ವರ್ಗಲೋಕವೂ, ಸಮಸ್ತಪುಣ್ಯನದಿಗಳೂ, ಸಮಸ್ತನಕ್ಷತ್ರಗಳೂ, ನವಗ್ರಹಗಳೂ, ಆಯಾಗ್ರಹಗಳ ಅಧಿದೇವತೆಗಳೂ, ಅಹೋರಾತ್ರಿಗಳೂ, ತ್ರಿಸಂಧ್ಯೆಗಳೂ, ಕಾಡಿನಲ್ಲಿ ನಿನ್ನನ್ನು ಕಾಪಾಡಲಿ! ಪವಿತ್ರಗಳಾದ ಆರುಋತುಗಳೂ, ಮಾಸಗಳೂ,ಸಂವತ್ಸರಗಳೂ, ಕಾಷ್ಠ,ಕಲೆ, ಮೊದಲಾದ ಕಾಲವಿಭಾಗಗಳೂ ನಿನಗೆ ಕ್ಷೇಮವನ್ನು ಕೊಡಲಿ! ಮುನಿವೇಷವನ್ನು ಧರಿಸಿ ಕಾಡಿನಲ್ಲಿ ಸಂಚರಿಸುತ್ತಿರುವ ನಿನಗೆ, ದೇವದಾನವರಿಬ್ಬರೂ ಸಮಪ್ರೇಮದಿಂದ ಸೌಖ್ಯವನ್ನು ಕೊಡುತ್ತಿರಲಿ ! ಯಾವಾಗಲೂ ಕ್ರೂರಸ್ವಭಾವವುಳ್ಳವರಾದ ರಾಕ್ಷಸರಿಂದಲೂ, ಪಿಶಾಚಗಳಿಂದಲೂ, ಮಾಂಸಭಕ್ಷಕಗಳಾದ ಇತರ ಕ್ರೂರಮೃಗಗಳಿಂದಲೂ ನಿನಗೆ ಯಾವಾಗಲೂ ಭಯವಿಲ್ಲದಿರಲಿ ! ಕಾಡುಕಪಿಗಳು, ತೇಳುಗಳು, ಕಾಡುನೊಣಗಳು, ಹುಳುಗಳು, ಇವೇ ಮೊದಲಾದ ವಿಷಜಂತುಗಳಿಂದಲೂ ನಿನಗೆ ಕಾಡಿನಲ್ಲಿ ಯಾವ ಭಯವೂ ಇಲ್ಲದಿರಲಿ! ಕಾಡಾನೆಗಳೂ, ಸಿಂಹಗಳೂ, ಹುಲಿಕರಡಿಗಳೂ, ಕಾಡುಹಂದಿ ಮೊದಲಾದ ಕೋರೆಯುಳ್ಳ ಮೃಗಗಳೂ, ಕಾಡೆಮ್ಮೆ ಮೊದಲಾದ ಕೊಂಬುಳ್ಳ ಕ್ರೂರಮೃಗಗಳೂ,ನಿನಗೆ ಕೇಡನ್ನುಂಟುಮಾಡದಿರಲಿ!ಮತ್ತು ಕಾಡಿನಲ್ಲಿ ಮನುಷ್ಯಮಾಂಸವನ್ನು ಭಕ್ಷಿಸತಕ್ಕ ಇತರ ಕ್ರೂರಜಂತುಗಳಾವುವುಂಟೋ ಅವೆಲ್ಲವ

---

ದಿಂದ ಹಿಂದೆ ಹೇಳಿದುದನ್ನು ಮರೆತು, ಪುನಃಪುನಃ ಅದನ್ನೇ ಹೇಳುತಿದ್ದಳೆಂದೂ ಕೆಲವರ ಅಭಿಪ್ರಾಯವುಂಟು.

ನ್ನೂ ಇಲ್ಲಿ ನಾನು ಪ್ರಾರ್ಥಿಸಿಕೊಳ್ಳುವೆನು. ಅವು ನನ್ನಲ್ಲಿ ಪ್ರಸನ್ನಗಳಾಗಿ ನಿನ್ನನ್ನು ಬಾಧಿಸದಿರಲಿ! ನೀನು ಸಂಚರಿಸತಕ್ಕ ಮಾರ್ಗಗಳೆಲ್ಲವೂ ಫಲ ಮೂಲಾದಿಗಳಿಂದ ಸಮೃದ್ಧವಾಗಿ ನಿನಗೆ ಸೌಖ್ಯಪ್ರದಗಳಾಗಿರಲಿ! ನಿನ್ನ ಪರಾಕ್ರಮಕಾರ್ಯಗಳೆಲ್ಲವೂ ತಡೆಯಿಲ್ಲದೆ ಸಿದ್ಧಿಯನ್ನು ಹೊಂದಲಿ! ಈ ಸ್ವಸ್ತ್ಯಯನಗಳೇ ನಿನಗೆ ಸಮಸ್ತಸಂಪತ್ತುಗಳಿಗೂ ಮೂಲಾಧಾರವಾಗಿರಲಿ! ಇವುಗಳನ್ನು ಹೊಂದಿ ನೀನು ಕಾಡಿನಲ್ಲಿ ಕ್ಷೇಮದಿಂದಿದ್ದು ಬರುವನಾಗು. ಅಂತರಿಕ್ಷದಲ್ಲಿಯೂ, ಭೂಮಿಯಲ್ಲಿಯೂ ಸಂಚರಿಸತಕ್ಕ ಸಮಸ್ತದೇವತೆ ಗಳೂ ನಿನಗೆ ಮಂಗಳವನ್ನುಂಟುಮಾಡಲಿ! ವತ್ಸ ರಾಮಾ! ಇಂದ್ರನೂ, ಚಂದ್ರನೂ, ಸೂರ್ಯನೂ, ಕುಬೇರನೂ, ವರುಣನೂ ಈ ನನ್ನ ಪ್ರಾರ್ಥನೆ ಯಿಂದ ಪ್ರಸನ್ನರಾಗಿ, ದಂಡಕಾರಣ್ಯವಾಸಿಯಾದ ನಿನ್ನನ್ನು ಎಡೆಬಿಡದೆ ರಕ್ಷಿಸುತ್ತಿರಲಿ! ಎಲೈ ರಘುವಂಶೋತ್ತಮನೆ! ನದೀನದಾದಿಪುಣ್ಯತೀರ್ಥಗ ಳಲ್ಲಿ ನೀನು ಸ್ನಾನಕ್ರಿಯೆಯುವಾಗ, ಅಗ್ನಿಯೂ, ವಾಯುವೂ, ಅಗ್ನಿಹೋತ್ರ ಧೂಮಗಳೂ, ವಿಶ್ವಾಮಿತ್ರನು ನಿನಗುಪದೇಶಿಸಿರುವ ರಕ್ಷಾಮಂತ್ರಗಳೂ ನಿನಗೆ ಅಪಾಯವಿಲ್ಲದಂತೆ ಕಾಪಾಡಲಿ! ಸರ್ವಲೋಕಪ್ರಭುವಾದ ಬ್ರ ಹ್ಮನೂ, ಸಮಸ್ತಲೋಕಗಳನ್ನೂ ಪೋಷಿಸತಕ್ಕ ಶ್ರೀಮನ್ನಾರಾಯಣನೂ, ಇತರದೇವತೆಗಳೂ, ಋಷಿಗಳೂ ನಿನ್ನನ್ನು ಕ್ಷೇಮದಿಂದ ರಕ್ಷಿಸಲಿ." ಎಂದು ಹೇಳುತ್ತ, ಕೌಸಲ್ಯೆಯು, ಆಯಾದೇವತೆಗಳನ್ನು ಗಂಧಪುಷ್ಪಮಾಲ್ಯಾ ಳಿಂದ ಪೂಜಿಸಿ, ಆಯಾದೇವತೆಗಳಿಗೆ ತಕ್ಕ ಸ್ತೋತ್ರವಾಕ್ಯಗಳಿಂದ ಬಾರಿಬಾರಿಗೂ ಸ್ತುತಿಸಿ, ರಾಮನಿಗೆ ಮಂಗಳಾಶೀರ್ವಾದಗಳನ್ನು ಮಾಡಿ ದಳು. ಮತ್ತು ರಾಮನ ಶ್ರೇಯೋಭಿವೃದ್ಧಿಗಾಗಿ, ಅಗ್ನಿಹೋತ್ರವನ್ನು ಪ್ರತಿಷ್ಠಿಸಿ, ಮಹಾತ್ಮರಾದ ಬ್ರಾಹ್ಮಣಶ್ರೇಷ್ಠರಿಂದ ಮಂತ್ರೋಕ್ತವಾಗಿ ಹೋಮವನ್ನು ಮಾಡಿಸಿದಳು. ಇದಕ್ಕಾಗಿ ತುಪ್ಪ, ಬಿಳೀಹೂಗಳು, ಸಮಿ ತ್ತುಗಳು, ಬಿಳೀಸಾಸುವೆ. ಮುಂತಾದ ದ್ರವ್ಯಗಳೆಲ್ಲವನ್ನೂ ತರಿಸಿಟ್ಟಳು. ಪುರೋಹಿತರು ರಾಮನ ಅನಿಷ್ಟನಿವಾರಣಾರ್ಥವಾಗಿಯೂ, ಆರೋ ಗ್ಯಾಭಿವೃದ್ಧಿಗಾಗಿಯೂ ಶಾಸ್ತ್ರೋಕ್ತವಾಗಿ ಮಾಡಬೇಕಾದ ಶಾಂತಿ ಹೋಮಗಳನ್ನು ಮಾಡಿ, ಉಳಿದ ಹವಿಸ್ಸುಗಳಿಂದ ಹೊರಗೆ ಮಾಡಬೇ ಕಾದ ಬಲಿಕರ್ಮಗಳನ್ನೂ ನಡೆಸಿದರು! ಮತ್ತು ಕೌಸಲ್ಯೆಯು, ಬ್ರಾ

ಹ್ಮಣರಿಗೆ ಜೇನು, ಮೊಸರು, ಅಕ್ಷತೆ, ತುಪ್ಪ ಮೊದಲಾದ ದಾನಗಳನ್ನು ಮಾಡಿ, ಅವರಿಗೆ ಭೂರಿದಕ್ಷಿಣೆಗಳನ್ನು ಕೊಟ್ಟು ತೃಪ್ತಿಪಡಿಸಿ, ರಾಮನಿಗೆ ಸ್ವಸ್ತಿವಾಚನಗಳನ್ನು ಮಾಡಿಸಿದಳು. ಆಮೇಲೆ ಪುರೋಹಿತನಿಗೂ ಮನಸ್ತೃಪ್ತಿಯಾಗುವಂತೆ ಕೇಳಿದಷ್ಟು ದಕ್ಷಿಣೆಯನ್ನು ಕೊಟ್ಟು, ರಾಮನನ್ನು ಕುರಿತು, "ಸಮಸ್ತದೇವತೆಗಳಿಂದಲೂ ನಮಸ್ಕರಿಸಲ್ಪಡುವ ದೇವೇಂದ್ರನು ವೃತ್ರಾಸುರಸಂಹಾರಕ್ಕೆ ಹೋದಾಗ, ಆತನಿಗೆ ಯಾವ ಮಂಗಳವುಂಟಾಯಿತೋ ಅದೇ ಮಂಗಳವು ಈಗ ನಿನಗೂ ಉಂಟಾಗಲಿ ! ಪೂರ್ವದಲ್ಲಿ ಗರುಡನು ಅಮೃತವನ್ನು ತರುವುದಕ್ಕಾಗಿ ಹೊರಡುವಕಾಲದಲ್ಲಿ, ಆತನ ತಾಯಿಯಾದ ವಿನತೆಯು ಅವನಿಗೆ ಯಾವ ಮಂಗಳವನ್ನು ಮಾಡಿದಳೋ, ನಿನಗೂ ಈಗ ಅದೇವಿಧವಾದ ಮಂಗಳವಾಗಲಿ ! ಅಮೃತವನ್ನು ಪಡೆಯುವ ಕಾಲದಲ್ಲಿ ವಿರೋಧಿಗಳಾಗಿದ್ದ ದೈತ್ಯರನ್ನು ಕೊಲ್ಲುವುದಕ್ಕಾಗಿ ಇಂದ್ರನು ಹೊರಟಾಗ, ಅವನ ತಾಯಿಯಾದ ಅದಿತಿಯು ಅತನಿಗೆ ಯಾವ ಮಂಗಳವನ್ನು ಕಲ್ಪಿಸಿದಳೋ, ಅದೇ ಮಂಗಳವು ಈಗ ನಿನಗೂ ಉಂಟಾಗಲಿ! ಮಹಾತೇಜಸ್ವಿಯಾದ ವಿಷ್ಣುವು ಬಲಿಚಕ್ರವರ್ತಿಯಲ್ಲಿ ಮೂರಡಿಗಳ ಭೂಮಿಯನ್ನು ಯಾಚಿಸಿ, ಈ ತ್ರೈಲೋಕ್ಯವನ್ನೂ ಅಡಿಯಿಟ್ಟು ಆಳಿದಾಗ, ಆತನಿಗುಂಟಾದ ಮಂಗಳವೇ ಈಗ ನಿನಗೂ ಉಂಟಾಗಲಿ ! ವತ್ಸ ರಾಮಾ ! ಬಾರಿಬಾರಿಗೂ ನಾನು ಪ್ರಾರ್ಥಿಸಿ ಕೇಳುವೆನು. ವಸಂತಾದಿಋತುಗಳೂ, ಸಪ್ತಸಾಗರಗಳೂ, ಸಪ್ತದ್ವೀಪಗಳೂ, ಚತುರ್ವೇದಗಳೂ, ಚತುರ್ದಶಲೋಕಗಳೂ, ದಶದಿಕ್ಕುಗಳೂ, ಕಾಡಿನಲ್ಲಿರುವ ನಿನಗೆ ಅನವರತವೂ ಕ್ಷೇಮವನ್ನುಂಟುಮಾಡಲಿ !" ಎಂದು ಹೇಳಿ, ಕೌಸಲ್ಯೆಯು ಆತನ ತಲೆಯಮೇಲೆ ಮಂತ್ರಾಕ್ಷತೆಗಳನ್ನು ಹಾಕಿ ಆಶೀರ್ವದಿಸಿದಳು. ಆತನ ಮೈಗೆಲ್ಲಾ ಸುಗಂಧವನ್ನು ಲೇಪಿಸಿದಳು. ಅಮೋಘವಾದ ಫಲವನ್ನು ಕೊಡತಕ್ಕ ವಿಶಲ್ಯಕರಣಿಯೆಂಬ ಮೂಲಿಕೆಯನ್ನು ರಕ್ಷಾರ್ಥವಾಗಿ ಆತನ ಮೈಗೆ ಕಟ್ಟಿ, ಅದನ್ನು ಮಂತ್ರಗಳಿಂದ ಅಭಿಮಂತ್ರಿಸಿದಳು. ಮಹಾಯಶಸ್ವಿನಿಯಾದ ಆ ಕೌಸಲ್ಯೆಯು, ತಾನು ವ್ಯಸನಪರವಶಳಾಗಿದ್ದರೂ, ರಾಮನು ಪ್ರಯಾಣಮಾಡುವಾಗ, ಅಮಂಗಳವನ್ನು ತೋರಿಸುವುದನುಚಿತವೆಂದೆಣಿಸಿ, ಬಹುಪ್ರಯಾಸದಿಂದ ಸಂಕಟವನು ಮನಸಿನಲ್ಲಿಯೇ ಅಡಗಿಸಿಕೊಂಡು, ಮೇಲೆಮಾತ್ರ ಸಂತೋಷ

ಸೂಚಕವಾದ ಮಾತುಗಳನ್ನು ನುಡಿಯುತ್ತಿದ್ದಳು. ಆದರೆ ಅವಳ ಮನಸ್ಸಿಗೆ ಸಂತೋಷವಿಲ್ಲದುದರಿಂದ ನಡುನಡುವೆ ಮಾತುಗಳು ತಡವರಿಸುತಿದ್ದುವು. ಹೀಗೆ ಅವಳು ರಾಮನನ್ನು ಸಮೀಪಕ್ಕೆ ಕರೆದು, ಆತನ ತಲೆಯನ್ನಾಘ್ರಾ ಣಿಸಿ, ಆತನನ್ನು ಬಿಗಿಯಾಗಿ ಅಪ್ಪಿ ಮುದ್ದಾಡುತ್ತ, "ವತ್ಸ ರಾಮಾ ! ಇನ್ನು ನೀನು ಸುಖವಾಗಿ ಹೋಗಿ ಬಾ ! ಕೃತಾರ್ಥನಾಗು ! ಯಾವ ರೋಗಬಾಧೆಯೂ ಇಲ್ಲದೆ, ಸಮಸ್ತಕಾರ್ಯಗಳಲ್ಲಿಯೂ ಪೂರ್ಣವಾದ ಸಿದ್ಧಿಯನ್ನು ಪಡೆದು, ಅಯೋಧ್ಯೆಗೆ ಹಿಂತಿರುಗಿ ಬಂದು, ರಾಜವಂಶಕ್ಕೆ ಯೋಗ್ಯವಾದ ರಾಜ್ಯಭಾರವನ್ನು ಸ್ಥಿರವಾಗಿ ಕೈಕೊಂಡು ಸುಖಿಯಾಗಿರು ವುದನ್ನು ನಾನು ಕಣ್ಣಾರೆ ನೋಡಬೇಕು ! ಈಗ ನನಗುಂಟಾಗಿರುವ ದುಃ ಖವೆಲ್ಲವೂ ನೀಗಿ,ನೀನು ಕಾಡಿಗೆಹೋದಮೇಲೆ ಯಾವಾಗಲೂ ನಿನ್ನ ಸ್ಮರಣೆ ಯಿಂದಲೇ ಹಂಬಲಿಸುತ್ತಿರುವ ನನ್ನ ಚಿಂತಾಜ್ವರವು ಶಮನವಾಗುವಂತೆ ಸಂತೋಷದಿಂದ ಅರಳಿದ ಮುಖವುಳ್ಳವನಾಗಿ ಉದಿಸಿಬಂದ ಪೂರ್ಣಚಂದ್ರ ನಂತೆ ಕಾಡಿನಿಂದ ಹಿಂತಿರುಗಿ ಬಂದ ನಿನ್ನನ್ನು ನೋಡಿ ಆನಂದಿಸತಕ್ಕ ಭಾಗ್ಯವು ನನಗೆ ಲಭಿಸಬೇಕು ! ನೀನು ಪಿತೃವಾಕ್ಯಪರಿಪಾಲನವೆಂಬ ವ್ರತ ವನ್ನು ತೀರಿಸಿ, ಕೃತಾರ್ಥನಾಗಿ, ಕಾಡಿನಿಂದ ಹಿಂತಿರುಗಿ ಬಂದು ಸಿಂಹಾಸನ ದಲ್ಲಿ ಕುಳಿತಿರುವುದನ್ನು ನಾನು ಕಣ್ಣಾರೆ ಕಂಡು ಆನಂದಿಸಬೇಕು. ನೀನು ಕಾಡಿನಿಂದ ಬಂದು, ರಾಜಯೋಗ್ಯವಾದ ವಸ್ತ್ರಾಭರಣಗಳನ್ನು ಧರಿಸಿ, ಮಂ ಗಳಾಲಂಕಾರಗಳನ್ನು ಮಾಡಿಕೊಂಡು, ನನಗೂ ನನ್ನ ಸೊಸೆಯಾದ ಸೀತೆಗೂ ಕೋರಿದ ಕೋರಿಕೆಗಳೆಲ್ಲವೂ ಕೈಗೂಡುವಂತೆ ಮಾಡಬೇಕು ! ಎಲೆ ವತ್ಸನೆ ! ಈಗ ನಾನು ಪೂಜಿಸಿದ ದೇವತೆಗಳೂ, ಮಹರ್ಷಿಗಳೂ, ಭೂತ ಗಳೂ, ಅಸುರರೂ, ಪನ್ನಗರೂ, ದಿಗ್ದೇವತೆಗಳೂ ನನ್ನ ಪೂಜೆಗೆ ಪ್ರಸನ್ನ ರಾಗಿ, ವನಸಂಚಾರದಲ್ಲಿರುವ ನಿನಗೆ ಯಾವಾಗಲೂ ಕ್ಷೇಮವನ್ನುಂಟು ಮಾಡುತ್ತಿರಲಿ!" ಎಂದಳು. ಹೀಗೆ ಆಕೆಯು ದುಃಖದಿಂದ ಕಣ್ಣಿನಲ್ಲಿ ನೀರನ್ನು ತುಳುಕಿಸುತ್ತ, ಪುತ್ರನಾದ ರಾಮನಿಗೆ ವಿಧ್ಯುಕ್ತವಾದ ಮಂಗಳಾಶೀ ರ್ವಾದಗಳನ್ನು ಮಾಡಿ, ರಕ್ಷಾರ್ಥವಾಗಿ ಆತನನ್ನು ಒಂದಾವರ್ತಿ ಸುತ್ತಿಬಂದು, ಬಾರಿಬಾರಿಗೂ ಪ್ರೇಮದಿಂದ ಆತನನ್ನು ಬಿಗಿದಪ್ಪಿಕೊಳ್ಳುತಿದ್ದಳು. ಹೀಗೆ ಕೌಸಲ್ಯೆಯು ಪುತ್ರವಾತ್ಸಲ್ಯದಿಂದ ಆತನಿಗೆ ಪ್ರಯಾಣಕಾಲದಲ್ಲಿ ನಡೆಸ

ಬೇಕಾದ ರಕ್ಷಾವಿಧಿಗಳೆಲ್ಲವನ್ನೂ ಮಾಡಿದಮೇಲೆ, ಮಹಾಯಶಸ್ವಿಯಾದ ರಾಮನು ತಾಯಿಯ ಎರಡುಕಾಲುಗಳನ್ನೂ ಹಿಡಿದು, ಬಾರಿಬಾರಿಗೂ ಭಕ್ತಿಯಿಂದ ನಮಸ್ಕರಿಸಿದನು. ಇವೆಲ್ಲವೂ ವಿಶೇಷವಾದ ವ್ಯಸನವನ್ನು ಹೆಚ್ಚಿಸತಕ್ಕವುಗಳಾಗಿದ್ದರೂ, ರಾಮನು ಆ ವ್ಯಸನವನ್ನು ಕಾಣಿಸಿಕೊಳ್ಳದೆ ಉಲ್ಲಾಸವಿಶಿಷ್ಟನಾಗಿಯೇ ಇದ್ದು, ಅಲ್ಲಿಂದ ಹೊರಟು ಸೀತೆಯ ಅಂತಃಪುರಕ್ಕೆ ಬಂದನು. ಇಲ್ಲಿಗೆ ಇಪ್ಪತ್ತೈದನೆಯ ಸರ್ಗವು.

---

{ ರಾಮನು ಸೀತೆಯ ಅನುಮತಿಯನ್ನು ಪಡೆಯು ವುದಕ್ಕಾಗಿ ಅವಳ ಅಂತಃಪುರಕ್ಕೆ ಹೋದುದು. }

ಹೀಗೆ ರಾಮನು ಕೌಸಲ್ಯೆಗೆ ನಮಸ್ಕರಿಸಿ, ಅವಳಿಂದ ಮಂಗಳಾಶೀರ್ವಾದಗಳನ್ನು ಪಡೆದು, ಧರ್ಮಮಾರ್ಗದಲ್ಲಿಯೇ ದೃಢವಾದ ಸಂಕಲ್ಪವುಳ್ಳವನಾಗಿ, ವನಪ್ರಯಾಣಕ್ಕೆ ಸಿದ್ಧನಾಗಿ ಹೊರಟನು. ಈತನು ಕೌಸಲ್ಯೆಯ ಅಂತಃಪುರದಿಂದ ಹೊರಟು ಬೀದಿಯಲ್ಲಿ ಬರುವಾಗ,ವಿಶೇಷಜನಭರಿತವಾಗಿದ್ದ ಆ ರಾಜಮಾರ್ಗಗಳನ್ನೆಲ್ಲಾ ತನ್ನ ಕಾಂತಿಯಿಂದ ಬೆಳಗುತ್ತ, ತನ್ನ ಗುಣಗಳಿಂದ ಸಮಸ್ತಜನರ ಮನಸ್ಸನ್ನೂ ಆಕರ್ಷಿಸುತ್ತ, ಬೀದಿಗಳನ್ನು ದಾಟಿ ಸೀತೆಯ ಅಂತಃಪುರವನ್ನು ಪ್ರವೇಶಿಸಿದನು. ಸೀತೆಗೆ ಪರೋಕ್ಷದಲ್ಲಿ ನಡೆದ ಈ ವಿಪರೀತವೃತ್ತಾಂತಗಳೊಂದೂ ತಿಳಿಯದುದರಿಂದ, ಆಕೆಯು ತನ್ನ ಪತಿಯಾದ ರಾಮನಿಗೆ ಅಭಿಷೇಕವು ನಡೆಯುವುದೆಂಬ ಉತ್ಸಾಹವನ್ನೇ ಮನಸ್ಸಿನಲ್ಲಿಟ್ಟುಕೊಂಡು, ಆತನ ಶ್ರೇಯೋಭಿವೃದ್ಧಿಗಾಗಿ ಮಾಡಬೇಕಾದ ದೇವತಾಪೂಜೆ ಮೊದಲಾದ ನಿಯಮಗಳೆಲ್ಲವನ್ನೂ ತನ್ನ ಕೈಯಿಂದಲೇ ಮಾಡಿ ಮುಗಿಸಿದ್ದಳು. ಮೊದಲು ಪಟ್ಟಾಭಿಷಿಕ್ತನಾಗಿ ಬರುವ ಪತಿಗೆ ಪಟ್ಟಮಹಿಷಿಯರು ಮಾಡಬೇಕಾದ ಪಾದಾರ್ಚನಾದಿಪೂರ್ವಾಚಾರಗಳನ್ನೆಲ್ಲಾ ಆಕೆಯು ಚೆನ್ನಾಗಿ ಬಲ್ಲವಳು. ಮತ್ತು ರಾಜಧರ್ಮಗಳೆಲ್ಲವನ್ನೂ ತಿಳಿದವಳು! ಆದುದರಿಂದ ಸಂಪ್ರದಾಯಕ್ಕೆ ತಕ್ಕ ಸಮಸ್ತಸನ್ನಾಹಗಳನ್ನೂ ಸಿದ್ಧಮಾಡಿಕೊಂಡು, ರಾಮನು ಪಟ್ಟಾಭಿಷಿಕ್ತನಾಗಿ ಬರುವುದನ್ನೇ ನಿರೀಕ್ಷಿಸುತಿದ್ದಳು. ಆ ಅಂತಃಪುರವೆಲ್ಲವೂ ರಾಮೋತ್ಸವಕ್ಕಾಗಿ ಅಲಂಕರಿಸಲ್ಪಟ್ಟು, ಅಲ್ಲಲ್ಲಿ ಅತ್ಯುತ್ಸಾಹ

ದಿಂದ ಸಂಭ್ರಮಿಸುತ್ತಿರುವ ಸೇವಕಜನರಿಂದ ನಿಬಿಡವಾಗಿತ್ತು. ಇತ್ತಲಾಗಿ ರಾಮನು ಸ್ವಭಾವಗಂಭೀರನಾಗಿದ್ದರೂ, ಆತನ ಇಂದ್ರಿಯಗಳೆಲ್ಲವೂ ಚಿಂತೆಯಿಂದ ಕಳವಳಿಸಿ, ಆತನ ಮುಖವು ದುಃಖದಿಂದ ಕಂದಿರುವುದನ್ನು ನೋಡಿದಳು. ಆತನನ್ನು ಕಂಡೊಡನೆ ಭಯದಿಂದ ನಡುಗುತ್ತ, ಥಟ್ಟನೆ ಇದಿರೆದ್ದು ಬಂದಳು. ಹೀಗೆ ಭಯದಿಂದ ತತ್ತಳಿಸುತ್ತಿರುವ ಸೀತೆಯನ್ನು ಕಂಡು, ರಾಮನೂ ತನ್ನ ಮನಸ್ಸಿನಲ್ಲಿ ಇದುವರೆಗೂ ಅಡಗಿಸಿಕೊಂಡಿದ್ದ ವ್ಯಸನವನ್ನು ತಡೆದಿಟ್ಟುಕೊಳ್ಳಲಾರದೆ ಹೋದನು. ಆತನ ಮುಖದಲ್ಲಿ ವ್ಯಸನವಿಕಾರಗಳು ತೋರ್ಪಟ್ಟುವು. ಇವುಗಳನ್ನು ಕಂಡು ಸೀತೆಯು ಮತ್ತಷ್ಟು ವ್ಯಸನಪರವಶಳಾಗಿರಾಮನನ್ನು ಕುರಿತು, ''ಆರ್ಯನೆ! ಇದೇನು? ಈಗ ನಿನಗೆ ಈ ಅವಸ್ಥೆಯುಂಟಾದುದಕ್ಕೆ ಕಾರಣವೇನು? ಸಮಸ್ತಸಂಪತ್ತುಗಳಿಗೂ ಮೂಲವಾಗಿ, ಬೃಹಸ್ಪತಿದೇವತಾತ್ಮಕವಾದ ಪುಷ್ಯನಕ್ಷತ್ರವು ಈಗಲೇ ಪ್ರಾಪ್ತವಾಗಿರುವುದಾಗಿ ಪ್ರಾಜ್ಞರಾದ ಬ್ರಾಹ್ಮಣರೆಲ್ಲರೂಹೇಳುತ್ತಿರುವರಲ್ಲವೆ? ನಿನ್ನ ಅಭಿಷೇಕಕ್ಕಾಗಿ ನಿರ್ಣಯಿಸಲ್ಪಟ್ಟ ಈ ಶುಭಮುಹೂರ್ತದಲ್ಲಿಯೂ ನೀನು ಉತ್ಸಾಹವಿಲ್ಲದೆ ದುಃಖಿಸುವುದಕ್ಕೆ ಕಾರಣವೇನು ? ಇಷ್ಟುಹೊತ್ತಿಗೆ, ಶತಶಲಾಕೆಗಳಿಂದ ಕೂಡಿ, ನೊರೆಯಂತೆ ಬಿಳುಪಾದಶ್ವೇತಚ್ಛತ್ರವು ನಿನ್ನ ನೆತ್ತಿಯಮೇಲೆ ಶೋಭಿಸುತ್ತಿರಬೇಕಲ್ಲವೆ ? ನಿನ್ನ ಅಂದವಾದ ಮುಖಕಮಲವು ಇದುವರೆಗೂ ಆ ಛತ್ರಛಾಯೆಯಲ್ಲಿ ಶೋಭಿಸದಿರುವುದಕ್ಕೆ ಕಾರಣವೇನು ? ಕಮಲದಂತೆ ಅರಳಿದ ಕಣ್ಣುಗಳಿಂದ ಶೋಭಿಸುವ ಈ ನಿನ್ನ ಮುಖವು, ಚಂದ್ರಹಂಸಗಳಂತಿರುವ ರಾಜಚಿಹ್ನಗಳಾದ ಚಾಮರಗಳಿಂದ ಬೀಸಲ್ಪಡದಿರುವುದಕ್ಕೆ ಕಾರಣವೇನು ? ಪ್ರಶಸ್ತವಾಕ್ಕುಳ್ಳ ಹೊಗಳುಭಟರೂ, ಪುರಾತನವೃತ್ತಾಂತಗಳನ್ನು ಪ್ರಶಂಸೆಮಾಡುವ ಸೂತರೂ, ವಂಶಾವಳಿಯನ್ನು ಕೀರ್ತಿಸುವ ಮಾಗಧರೂ ಸಂತೋಷದಿಂದ ಬಂದು ಮಂಗಳವಾಕ್ಯಗಳಿಂದ ನಿನ್ನನ್ನು ಈಗಲೂ ಸ್ತುತಿಸದಿರುವುದಕ್ಕೆ ಕಾರಣವೇನು ? ವೇದವಿತ್ತುಗಳಾಗ ಬ್ರಾಹ್ಮಣರೆಲ್ಲರೂ ಬಂದು, ಸ್ನಾನದಿಂದ ಶುದ್ಧವಾಗಿರುವ ಈ ನಿನ್ನ ಶಿರಸ್ಸಿನಮೇಲೆ ಶಾಸ್ತ್ರೋಕ್ತವಾದ ಜೇನು, ಮೊಸರು, ಮೊದಲಾದ ಮಂಗಳದ್ರವ್ಯಗಳಿಂದ ಇನ್ನೂ ಅಭಿಷೇಕಮಾಡದಿರುವುದೇಕೆ ? ಸ್ವರ್ಣಾಭರಣಗಳಿಂದಲಂಕರಿಸಲ್ಪಟ್ಟ ವೇಗವತ್ತಾದ ನಾಲ್ಕುಕುದುರೆಗಳಿಂದ ಕೂಡಿದ ಪುಷ್ಯರಥವೆಂಬ

ಬೇಕಾದ ರಕ್ಷಾವಿಧಿಗಳೆಲ್ಲವನ್ನೂ ಮಾಡಿದಮೇಲೆ, ಮಹಾಯಶಸ್ವಿಯಾದ ರಾಮನು ತಾಯಿಯ ಎರಡುಕಾಲುಗಳನ್ನೂ ಹಿಡಿದು, ಬಾರಿಬಾರಿಗೂ ಭಕ್ತಿಯಿಂದ ನಮಸ್ಕರಿಸಿದನು. ಇವೆಲ್ಲವೂ ವಿಶೇಷವಾದ ವ್ಯಸನವನ್ನು ಹೆಚ್ಚಿಸತಕ್ಕವುಗಳಾಗಿದ್ದರೂ, ರಾಮನು ಆ ವ್ಯಸನವನ್ನು ಕಾಣಿಸಿಕೊಳ್ಳದೆ ಉಲ್ಲಾಸವಿಶಿಷ್ಟನಾಗಿಯೇ ಇದ್ದು, ಅಲ್ಲಿಂದ ಹೊರಟು ಸೀತೆಯ ಅಂತಃಪುರಕ್ಕೆ ಬಂದನು. ಇಲ್ಲಿಗೆ ಇಪ್ಪತ್ತೈದನೆಯ ಸರ್ಗವು.

---

{ ರಾಮನು ಸೀತೆಯ ಅನುಮತಿಯನ್ನು ಪಡೆಯು ವುದಕ್ಕಾಗಿ ಅವಳ ಅಂತಃಪುರಕ್ಕೆ ಹೋದುದು. }

ಹೀಗೆ ರಾಮನು ಕೌಸಲ್ಯೆಗೆ ನಮಸ್ಕರಿಸಿ, ಅವಳಿಂದ ಮಂಗಳಾಶೀರ್ವಾದಗಳನ್ನು ಪಡೆದು, ಧರ್ಮಮಾರ್ಗದಲ್ಲಿಯೇ ದೃಢವಾದ ಸಂಕಲ್ಪವುಳ್ಳವನಾಗಿ, ವನಪ್ರಯಾಣಕ್ಕೆ ಸಿದ್ಧನಾಗಿ ಹೊರಟನು. ಈತನು ಕೌಸಲ್ಯೆಯ ಅಂತಃಪುರದಿಂದ ಹೊರಟು ಬೀದಿಯಲ್ಲಿ ಬರುವಾಗ,ವಿಶೇಷಜನಭರಿತವಾಗಿದ್ದ ಆ ರಾಜಮಾರ್ಗಗಳನ್ನೆಲ್ಲಾ ತನ್ನ ಕಾಂತಿಯಿಂದ ಬೆಳಗುತ್ತ, ತನ್ನ ಗುಣಗಳಿಂದ ಸಮಸ್ತಜನರ ಮನಸ್ಸನ್ನೂ ಆಕರ್ಷಿಸುತ್ತ, ಬೀದಿಗಳನ್ನು ದಾಟಿ ಸೀತೆಯ ಅಂತಃಪುರವನ್ನು ಪ್ರವೇಶಿಸಿದನು. ಸೀತೆಗೆ ಪರೋಕ್ಷದಲ್ಲಿ ನಡೆದ ಈ ವಿಪರೀತವೃತ್ತಾಂತಗಳೊಂದೂ ತಿಳಿಯದುದರಿಂದ, ಆಕೆಯು ತನ್ನ ಪತಿಯಾದ ರಾಮನಿಗೆ ಅಭಿಷೇಕವು ನಡೆಯುವುದೆಂಬ ಉತ್ಸಾಹವನ್ನೇ ಮನಸ್ಸಿನಲ್ಲಿಟ್ಟುಕೊಂಡು, ಆತನ ಶ್ರೇಯೋಭಿವೃದ್ಧಿಗಾಗಿ ಮಾಡಬೇಕಾದ ದೇವತಾಪೂಜೆ ಮೊದಲಾದ ನಿಯಮಗಳೆಲ್ಲವನ್ನೂ ತನ್ನ ಕೈಯಿಂದಲೇ ಮಾಡಿ ಮುಗಿಸಿದ್ದಳು. ಮೊದಲು ಪಟ್ಟಾಭಿಷಿಕ್ತನಾಗಿ ಬರುವ ಪತಿಗೆ ಪಟ್ಟಮಹಿಷಿಯರು ಮಾಡಬೇಕಾದ ಪಾದಾರ್ಚನಾದಿಪೂರ್ವಾಚಾರಗಳನ್ನೆಲ್ಲಾ ಆಕೆಯು ಚೆನ್ನಾಗಿ ಬಲ್ಲವಳು. ಮತ್ತು ರಾಜಧರ್ಮಗಳೆಲ್ಲವನ್ನೂ ತಿಳಿದವಳು! ಆದುದರಿಂದ ಸಂಪ್ರದಾಯಕ್ಕೆ ತಕ್ಕ ಸಮಸ್ತಸನ್ನಾಹಗಳನ್ನೂ ಸಿದ್ಧಮಾಡಿಕೊಂಡು, ರಾಮನು ಪಟ್ಟಾಭಿಷಿಕ್ತನಾಗಿ ಬರುವುದನ್ನೇ ನಿರೀಕ್ಷಿಸುತಿದ್ದಳು. ಆ ಅಂತಃಪುರವೆಲ್ಲವೂ ರಾಮೋತ್ಸವಕ್ಕಾಗಿ ಅಲಂಕರಿಸಲ್ಪಟ್ಟು, ಅಲ್ಲಲ್ಲಿ ಅತ್ಯುತ್ಸಾಹ

ದಿಂದ ಸಂಭ್ರಮಿಸುತ್ತಿರುವ ಸೇವಕಜನರಿಂದ ನಿಬಿಡವಾಗಿತ್ತು. ಇತ್ತಲಾಗಿ ರಾಮನು ಸ್ವಭಾವಗಂಭೀರನಾಗಿದ್ದರೂ, ಆತನ ಇಂದ್ರಿಯಗಳೆಲ್ಲವೂ ಚಿಂತೆಯಿಂದ ಕಳವಳಿಸಿ, ಆತನ ಮುಖವು ದುಃಖದಿಂದ ಕಂದಿರುವುದನ್ನು ನೋಡಿದಳು. ಆತನನ್ನು ಕಂಡೊಡನೆ ಭಯದಿಂದ ನಡುಗುತ್ತ, ಥಟ್ಟನೆ ಇದಿರೆದ್ದು ಬಂದಳು. ಹೀಗೆ ಭಯದಿಂದ ತತ್ತಳಿಸುತ್ತಿರುವ ಸೀತೆಯನ್ನು ಕಂಡು, ರಾಮನೂ ತನ್ನ ಮನಸ್ಸಿನಲ್ಲಿ ಇದುವರೆಗೂ ಅಡಗಿಸಿಕೊಂಡಿದ್ದ ವ್ಯಸನವನ್ನು ತಡೆದಿಟ್ಟುಕೊಳ್ಳಲಾರದೆ ಹೋದನು. ಆತನ ಮುಖದಲ್ಲಿ ವ್ಯಸನವಿಕಾರಗಳು ತೋರ್ಪಟ್ಟುವು. ಇವುಗಳನ್ನು ಕಂಡು ಸೀತೆಯು ಮತ್ತಷ್ಟು ವ್ಯಸನಪರವಶಳಾಗಿ ರಾಮನನ್ನು ಕುರಿತು, "ಆರ್ಯನೆ! ಇದೇನು? ಈಗ ನಿನಗೆ ಈ ಅವಸ್ಥೆಯುಂಟಾದುದಕ್ಕೆ ಕಾರಣವೇನು? ಸಮಸ್ತಸಂಪತ್ತುಗಳಿಗೂ ಮೂಲವಾಗಿ, ಬೃಹಸ್ಪತಿದೇವತಾತ್ಮಕವಾದ ಪುಷ್ಯನಕ್ಷತ್ರವು ಈಗಲೇ ಪ್ರಾಪ್ತವಾಗಿರುವುದಾಗಿ ಪ್ರಾಜ್ಞರಾದ ಬ್ರಾಹ್ಮಣರೆಲ್ಲರೂ ಹೇಳುತ್ತಿರುವರಲ್ಲವೆ? ನಿನ್ನ ಅಭಿಷೇಕಕ್ಕಾಗಿ ನಿರ್ಣಯಿಸಲ್ಪಟ್ಟ ಈ ಶುಭಮುಹೂರ್ತದಲ್ಲಿಯೂ ನೀನು ಉತ್ಸಾಹವಿಲ್ಲದೆ ದುಃಖಿಸುವುದಕ್ಕೆ ಕಾರಣವೇನು? ಇಷ್ಟುಹೊತ್ತಿಗೆ, ಶತಶಲಾಕೆಗಳಿಂದ ಕೂಡಿ, ನೊರೆಯಂತೆ ಬಿಳುಪಾದಶ್ವೇತಚ್ಛತ್ರವು ನಿನ್ನ ನೆತ್ತಿಯಮೇಲೆ ಶೋಭಿಸುತ್ತಿರಬೇಕಲ್ಲವೆ? ನಿನ್ನ ಅಂದವಾದ ಮುಖಕಮಲವು ಇದುವರೆಗೂ ಆ ಛತ್ರಛಾಯೆಯಲ್ಲಿ ಶೋಭಿಸದಿರುವುದಕ್ಕೆ ಕಾರಣವೇನು? ಕಮಲದಂತೆ ಅರಳಿದ ಕಣ್ಣುಗಳಿಂದ ಶೋಭಿಸುವ ಈ ನಿನ್ನ ಮುಖವು, ಚಂದ್ರಹಂಸಗಳಂತಿರುವ ರಾಜಚಿಹ್ನಗಳಾದ ಚಾಮರಗಳಿಂದ ಬೀಸಲ್ಪಡದಿರುವುದಕ್ಕೆ ಕಾರಣವೇನು? ಪ್ರಶಸ್ತವಾಕ್ಕುಳ್ಳ ಹೊಗಳುಭಟರೂ, ಪುರಾತನವೃತ್ತಾಂತಗಳನ್ನು ಪ್ರಶಂಸೆಮಾಡುವ ಸೂತರೂ, ವಂಶಾವಳಿಯನ್ನು ಕೀರ್ತಿಸುವ ಮಾಗಧರೂ ಸಂತೋಷದಿಂದ ಬಂದು ಮಂಗಳವಾಕ್ಯಗಳಿಂದ ನಿನ್ನನ್ನು ಈಗಲೂ ಸ್ತುತಿಸದಿರುವುದಕ್ಕೆ ಕಾರಣವೇನು? ವೇದವಿತ್ತುಗಳಾಗ ಬ್ರಾಹ್ಮಣರೆಲ್ಲರೂ ಬಂದು, ಸ್ನಾನದಿಂದ ಶುದ್ಧವಾಗಿರುವ ಈ ನಿನ್ನ ಶಿರಸ್ಸಿನಮೇಲೆ ಶಾಸ್ತ್ರೋಕ್ತವಾದ ಜೇನು, ಮೊಸರು, ಮೊದಲಾದ ಮಂಗಳದ್ರವ್ಯಗಳಿಂದ ಇನ್ನೂ ಅಭಿಷೇಕಮಾಡದಿರುವುದೇಕೆ? ಸ್ವರ್ಣಾಭರಣಗಳಿಂದಲಂಕರಿಸಲ್ಪಟ್ಟ ವೇಗವತ್ತಾದ ನಾಲ್ಕುಕುದುರೆಗಳಿಂದ ಕೂಡಿದ ಪುಷ್ಯರಥವೆಂಬ

ನಮ್ಮ ರಾಜರಥವು ಈಗಾಗಲೇ ನಿನ್ನ ಮುಂದೆ ಬರುತ್ತಿರಬೇಕಲ್ಲವೆ? ಹಾಗಿಲ್ಲದಿರವುದೇಕೆ? ಕಾಳಮೇಘದಂತೆ ಶೋಭಿಸುತ್ತ, ನೀಲಪರ್ವತದಂತೆ ಮಹೋನ್ನತವಾಗಿ, ಶುಭಲಕ್ಷಣಗಳಿಂದ ಕೂಡಿದ ನಮ್ಮ ಪಟ್ಟದಾನೆಯು, ಸರ್ವಾಲಂಕಾರಭೂಷಿತವಾಗಿ ನಿನ್ನ ಮುಂದೆ ಬಾರದಿರುವುದೇಕೆ? ನೀನು ಪಟ್ಟಾಭಿಷಿಕ್ತನಾಗಿ ಬೀದಿಯಲ್ಲಿ ಹೊರಟುಬರುವಾಗ, ನಮ್ಮ ಪುರವಾಸಿಗಳೂ, ದೇಶವಾಸಿಗಳೂ, ಮಂತ್ರಿಪುರೋಹಿತಾದಿಗಳೂ, ಪ್ರಜೆಗಳಲ್ಲಿ ಪ್ರಮುಖರಾದವರೂ, ಆಯಾ ಬೀದಿಗಳಲ್ಲಿ ಮುಖ್ಯರಾದವರೂ, ಸರ್ವಾಲಂಕಾರಭೂಷಿತರಾಗಿ, ನಿನ್ನನ್ನು ಅತ್ಯುತ್ಸಾಹದಿಂದ ಹಿಂಬಾಲಿಸಿ ಬರುತ್ತಿರಬೇಕಲ್ಲವೆ? ಹಾಗಿಲ್ಲದಿರುವುದಕ್ಕೆ ಕಾರಣವೇನು! ನೀನು ಬರುವಾಗ ನಿನ್ನ ಮುಂದೆ ವೀರಪುರುಷನೊಬ್ಬನು ಸುವರ್ಣಮಯವಾದ ನಿನ್ನ ಸಿಂಹಾಸನವನ್ನು ತರಿಸಿಕೊಂಡು ಬರಬೇಕಲ್ಲವೆ ? ಹಾಗೆ ಬಾರದಿರುವುದೇಕೆ ? ಈಗಲೇ ಅಭಿಷಿಕ್ತನಾದ ನೀನು ಎಷ್ಟು ಸಂತೋಷವುಳ್ಳವನಾಗಿರಬೇಕೋ, ಅಷ್ಟು ವ್ಯಸನವನ್ನು ಹೊರಪಡಿಸುವಂತೆ ನಿನ್ನ ಮುಖವು ಬಣ್ಣಗುಂದಿರುವುದು! ಸ್ವಲ್ಪವಾದರೂ ಸಂತೋಷವು ಕಾಣುವುದಿಲ್ಲ ! ಇದಕ್ಕೇನು ಕಾರಣವು? ನಾನು ಹಿಂದೆ ಯಾವಾಗಲೂ ಈ ಸ್ಥಿತಿಯನ್ನು ನೋಡಿದವಳಲ್ಲ ! ಹೀಗಾಗುವುದಕ್ಕೆ ಕಾರಣವೇನು ?" ಎಂದಳು. ಹೀಗೆ ಭಯಗ್ರಸ್ತಳಾಗಿ ದುಃಖಿಸುತ್ತಿರುವ ಸೀತೆಯನ್ನು ನೋಡಿ ರಾಮನು "ಎಲೆ ಪ್ರಿಯೆ ! ನಮ್ಮ ತಂದೆಯು ಈಗ ನನ್ನನ್ನು ಈ ಊರನ್ನು ಬಿಟ್ಟು ಹೊರಡಿಸಿ, ಕಾಡಿಗೆ ಕಳುಹಿಸಬೇಕೆಂದಿರುವನು. * ನೀನೋ ಸತ್ಕುಲದಲ್ಲಿ ಹುಟ್ಟಿದವಳು. ಸಮಸ್ತಧರ್ಮಗಳನ್ನೂ ಚೆನ್ನಾಗಿ ತಿಳಿದು, ಅದರಂತೆಯೇ ಆಚರಿಸತಕ್ಕವಳು. ರಾಜರ್ಷಿಯಾದ ಜನಕರಾಜನಿಗೆ ಮಗಳೆನಿಸಿಕೊಂಡಿರುವೆ! ಆದುದರಿಂದ ಎಂದಿಗೂ ನೀನು ಅಧರ್ಮಕ್ಕೆ ಪ್ರವರ್ತಿಸಲಾರೆ! ಆದರೆ, ಪೂರ್ವೋತ್ತರಗಳನು ಚೆನ್ನಾಗಿ ತಿಳಿಯುವುದಕ್ಕೆ ಮೊದಲು ನೀನು ಸಂಭ್ರಮಪಡಬೇಡ! ಆಕ್ರೋಶಕ್ಕೆ ಇದು ಸಮಯವಲ್ಲ. ಆತುರಪಡದೆ ಸಾವಧಾನವಾಗಿ ಕೇಳು,

---

* ರಾಮನು, ತಾನು ಮುಂದೆ ತಿಳಿಸುವ ದೊಡ್ಡ ಅಪ್ರಿಯವಾರ್ತೆಯನ್ನು ಕೇಳಿದರೆ, ಸೀತೆಗೆ ಸಹಿಸಲಾರದಷ್ಟು ವ್ಯಸನವು ಪ್ರಾಪ್ತವಾಗುವುದೆಂಬುದಕ್ಕಾಗಿ, ಅವಳ ಮನಸ್ಸಿಗೆ ಮೊದಲು ಪ್ರೋತ್ಸಾಹವನ್ನು ಕೊಟ್ಟು ದೃಢಪಡಿಸಬೇಕೆಂಬ ಉದ್ದೇಶದಿಂದ ಇಲ್ಲಿ ಅವಳ ಗುಣವರ್ಣನವನ್ನು ಮಾಡುವನೆಂದು ಗ್ರಹಿಸಬೇಕು.

ತಂದೆಯು ಈಗ ನನ್ನನ್ನು ಕಾಡಿಗೆ ಕಳುಹಿಸಬೇಕಾದ ಕಾರಣಗಳುಂಟು. ಸತ್ಯಪ್ರತಿಜ್ಞನಾದ ನಮ್ಮ ತಂದೆಯು, ಪೂರ್ವದಲ್ಲಿ ನಮ್ಮ ತಾಯಿಯಾದ ಕೈಕೇಯಿಗೆ, ಎರಡುವರಗಳನ್ನು ಕೊಡುವುದಾಗಿ ವಾಗ್ದಾನಮಾಡಿದ್ದನು. ಆತನು ಈಗ ನನಗೆ ರಾಜ್ಯಾಭಿಷೇಕವನ್ನು ಮಾಡಬೇಕೆಂದು ಸಿದ್ಧನಾಗಿರುವುದನ್ನು ನೋಡಿ, ಕೈಕೇಯಿಯು ತನಗೆ ಹಿಂದೆ ಅಭಯಕೊಟ್ಟಿದ್ದ ಆ ವರಗಳೆರಡನ್ನೂ ಈಗಲೇ ಕೊಡಬೇಕೆಂದು ರಾಜನನ್ನು ನಿರ್ಬಂಧಿಸಿದಳು. ತಂದೆಯು ಮಾತಿಗೆ ತಪ್ಪುವವನಲ್ಲವಾದುದರಿಂದ ಧರ್ಮಪಾಶಕ್ಕೆ ಸಿಕ್ಕಿಬಿದ್ದಿರುವನು. ಈಗ ನಾನು ಹದಿನಾಲ್ಕುವರ್ಷಗಳವರೆಗೆ ದಂಡಕಾರಣ್ಯದಲ್ಲಿ ವಾಸಮಾಡಬೇಕಾದುದೊಂದು. ಭರತನಿಗೆ ಯೌವರಾಜ್ಯಾಭಿಷೇಕವು ನಡೆಯುವುದೊಂದು! ಇವೆರಡನ್ನೂ ತಂದೆಯು ನಿಶ್ಚಯಿಸಿರುವನು. ಈಗ ನಾನು ಕಾಡಿಗೆ ಹೊರಡುವೆನು. ಅದಕ್ಕಾಗಿ ನಿನ್ನನ್ನು ನೋಡಿ ಹೋಗಬೇಕೆಂದು ಬಂದೆನು. ಈಗನಾನು ನಿನಗೆ ತಿಳಿಸಬೇಕಾದ ಬುದ್ಧಿವಾದಗಳು ಕೆಲವುಂಟು. ನಾನು ಬರುವವರೆಗೂ ನೀನು ಅದನ್ನನುಸರಿಸಿಯೇ ನಡೆಯುತ್ತಿರಬೇಕು. ಭರತನಮುಂದೆಮಾತ್ರ ನೀನು ನನ್ನ ಗುಣಗಳನ್ನು ಸ್ತುತಿಸಬೇಡ! ಧೀರರಾದವರು ಪರಸ್ತುತಿಯನ್ನು ಕೇಳಿ ಸಹಿಸಲಾರರು. ಆದುದರಿಂದ ಯಾವಾಗಲೂ ನೀನು ಆತನಮುಂದೆ ನನ್ನ ಗುಣಗಳನ್ನು ಸ್ತುತಿಸಬಾರದು. ಭರತನು ಇನ್ನುಮೇಲೆ ತನ್ನ ಇತರಸಾಮಾನ್ಯಬಂಧುಗಳಂತೆ ನಿನ್ನನ್ನು ಪೋಷಿಸುತ್ತಿರಬಹುದೇಹೊರತು, ನನ್ನಂತೆಯೇ ಅಸಾಧಾರಣವಾದ ಪ್ರೀತಿಯಿಂದ ಪೋಷಿಸುವನೆಂಬ ಆಶೋತ್ತರವನ್ನು ನೀನು ಇಟ್ಟಿರಬಾರದು. ಆತನ ಮನೋನುಕೂಲೆಯಾಗಿ ನಡೆಯುತ್ತಿದ್ದರೆಮಾತ್ರವೇ ನೀನು ಈ ಅರಮನೆಯಲ್ಲಿರಬಹುದು. ಆತನಿಗೆ ಪ್ರತಿಕೂಲಳಾಗಿ ಪ್ರವರ್ತಿಸಿದರೆ, ನಿನಗೆ ಸೌಖ್ಯವಿಲ್ಲ. ಕೊನೆಗೆ ಈ ಸ್ಥಳವನ್ನೇ ಬಿಟ್ಟುಹೊಗಬೇಕಾಗಿ ಬರುವುದು. ತಂದೆಯು ತಾನಾಗಿಯೇ ಇಷ್ಟಪಟ್ಟು ಭರತನಿಗೆ ರಾಜ್ಯವನ್ನು ಕೊಟ್ಟಿರುವುದರಿಂದ, ಆಭರತನ ಮನಸ್ಸಿಗೆ ತೃಪ್ತಿಕರವಾಗುವಂತೆ ನಡೆದುಕೊಳ್ಳಬೇಕಾದುದೇ ನಿನ್ನ ಕರ್ತವ್ಯವು. ಅದರಲ್ಲಿಯೂ ವಿಶೇಷವಾಗಿ ದಶರಥನ ಮನಸ್ಸಿಗೂ ನೀನು ಅನುಕೂಲೆಯಾಗಿರಬೇಕು. ನಾನು ಈಗ ತಂದೆಯ ಪ್ರತಿಜ್ಞೆಯನ್ನು ಪಾಲಿಸುವುದಕ್ಕಾಗಿಯೇ ಕಾಡಿಗೆ ಹೊರಡುವೆನು. ನೀನು ಉದಾರಮನಸ್ಸುಳ್ಳವಳಾ

ದುದರಿಂದ, ಇದಕ್ಕಾಗಿ ಹೆದರದೆ, ಧೈರ್ಯದಿಂದಿರು! ಎಲೆ ಮಂಗಳಾಂಗಿ! ನಾನು ಮಹರ್ಷಿಗಳಿಂದ ತುಂಬಿದ ಕಾಡಿನಲ್ಲಿದ್ದು ಬರುವವರೆಗೂ, ನೀನು ವ್ರತೋಪವಾಸಗಳನ್ನು ಬಿಡದೆ, ನಿರ್ದುಷ್ಟಳಾಗಿ ನಿಯಮದಿಂದಿರಬೇಕು. ಉಷಃಕಾಲದಲ್ಲಿಯೇ ಎದ್ದು, ಶಾಸ್ತ್ರೋಕ್ತವಾದ ರೀತಿಯಲ್ಲಿ ದೇವತಾಪೂಜೆಯನ್ನು ಮಾಡುತ್ತಿರು. ಈ ದೇವಪೂಜೆಯನ್ನು ಮುಗಿಸಿದೊಡನೆ, ನನ್ನ ತಂದೆಯ ಬಳಿಗೆಹೋಗಿ ರಾಜನಾದ ಆತನಿಗೆ ನಮಸ್ಕರಿಸು! ಹಾಗೆಯೇ ನನ್ನ ವಿರಹಸಂಕಟದಿಂದ ಕೊರಗುತ್ತಿರುವ ವೃದ್ಧಳಾದ ನನ್ನ ತಾಯಿಗೂ ನಮಸ್ಕರಿಸಿ ಬಾ! ಆಕೆಯು ಧರ್ಮವನ್ನೇ ದೃಢವಾಗಿ ನಂಬಿರತಕ್ಕವಳು. ಅವಳನ್ನು ನೀನು ಯಾವಾಗಲೂ ಗೌರವಿಸುತ್ತಿರಬೇಕು. ನನ್ನ ಇತರಮಾತೆಯರೂಕೂಡ ನನ್ನಲ್ಲಿ ವಿಶೇಷಪ್ರೇಮವನ್ನೂ, ವಾತ್ಸಲ್ಯವನ್ನೂ ತೋರಿಸಿ ನನ್ನನ್ನು ಪೋಷಿಸಿದವರಾದುದರಿಂದ, ಅವರಲ್ಲಿಯೂ ನೀನು ಮಾತೃಭಕ್ತಿಯನ್ನಿಟ್ಟು ನಮಸ್ಕರಿಸಿ ಪೂಜಿಸು! ನನಗೆ ಪ್ರಾಣಕ್ಕಿಂತಲೂ ಪ್ರಿಯರಾದ ಭರತಶತ್ರುಘ್ನರನ್ನು ನೀನು ಒಡಹುಟ್ಟಿದವರಂತೆಯೂ, ಮಕ್ಕಳಂತೆಯೂ ಭಾವಿಸಿ, ವಿಶೇಷವಾಗಿ ಆದರಿಸುತ್ತಿರಬೇಕು. ಭರತನಿಗೆ ವಿಪ್ರಿಯವಾದ ಕಾರ್ಯಕ್ಕೆಮಾತ್ರ ಎಂದಿಗೂ ಪ್ರವರ್ತಿಸಬೇಡ. ಆತನೇ ಈಗ ನಮ್ಮ ದೇಶಕ್ಕೂ, ಕುಲಕ್ಕೂ ರಾಜನಾಗುವುದರಿಂದ, ಆತನ ಮನಸ್ಸಂತೋಷಪಡಿಸುವುದೇ ನಿನ್ನ ಮುಖ್ಯಕಾರ್ಯವು. ರಾಜರನ್ನು ಸಂತೋಷಪಡಿಸುವದು ಸುಲಭವಲ್ಲ. ಅವರಲ್ಲಿ ನೀನು ಬಹಳ ನಂಬಿಕೆಯಿಂದಲೂ, ವಿಧೇಯತೆಯಿಂದಲೂ ನಡೆದುಕೊಳ್ಳಬೇಕು. ಕಷ್ಟಪಟ್ಟು ಅವರ ಸೇವೆಯನ್ನು ಮಾಡುತ್ತಿರಬೇಕು. ಹೀಗಿದ್ದರೆ ಅವರು ಬಹಳ ಪ್ರಸನ್ನರಾಗುವರು. ಇದಕ್ಕೆ ವ್ಯತಿರಿಕ್ತವಾಗಿ ನಡೆದರೆ ಕೋಪಿಸುವರು. ತನಗೆ ಅಹಿತವನ್ನು ಮಾಡಿದುದಾಗಿ ಕಂಡುಬಂದರೆ, ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನಾದರೂ ತೊರೆದುಬಿಡುವರು, ಕಾರ್ಯದಕ್ಷರಾಗಿ ತನಗೆ ಅನುಕೂಲರಾಗಿರುವರೆಂದು ಕಂಡುಬಂದರೆ, ಅವರು ಹೊರಗಿನವರಾಗಿದ್ದರೂ ಅವರಲ್ಲಿ ಪ್ರಸನ್ನರಾಗಿ, ಉನ್ನತಸ್ಥಿತಿಗೆ ತಂದುಬಿಡುವರು. ಆದುದರಿಂದ ಎಲೆ ಮಂಗಳಾಂಗಿ! ರಾಜನ ಮನೋನುವರ್ತಿನಿಯಾಗಿಯೇ ನೀನು ನಡೆದುಕೊಳ್ಳುತ್ತಿರು! ಈಗ ಭರತನೇ ರಾಜನು. ಅವನಿಗೆ ಮನಸ್ಸೊಪ್ಪುವಂತೆ ನೀನು ನಡೆದುಕೊಳ್ಳದಿದ್ದರೆ, ಬಹಳ ಕಷ್ಟಕ್ಕೆ ಸಿಕ್ಕಿಕೊಳ್ಳಬೇಕಾಗುವುದು. ನಿನ್ನ ಧರ್ಮವನ್ನು

ಬಿಡಬೇಡ! ಸತ್ಯವನ್ನೇ ನಂಬಿ ನಡೆಯುತ್ತಿರು! ನಿನ್ನ ವ್ರತಾದಿನಿಯಮಗಳ ನ್ನೂ ಲೋಪವಿಲ್ಲದೆ ನಡೆಸಿಕೊಂಡು ಬಾ! ಇನ್ನು ನಾನು ಕಾಡಿಗೆ ಹೋಗಿ ಬರುವೆನು. ಅದುವರೆಗೂ ನೀನು ಇಲ್ಲಿಯೇ ಇರಬೇಕಾಗಿರುವುದರಿಂದ, ಇಲ್ಲಿರ ತಕ್ಕವರೆಲ್ಲರ ಮನಸ್ಸಿಗೂ ಅನುಕೂಲೆಯಾಗಿ ನಡೆದುಕೊಳ್ಳಬೇಕು. ಇ ದೇ ಈಗ ನಾನು ನಿನಗೆ ಹೇಳಬೇಕಾದ ಬುದ್ಧಿವಾದವು" ಎಂದನು. ಇಲ್ಲಿಗೆ ಇಪ್ಪತ್ತಾರನೆಯ ಸರ್ಗವು.

---

ರಾಮನು ತನ್ನೊಡನೆ ಬರಕೊಡದೆಂದುದಕ್ಕಾಗಿ
ಸೀತೆಯು ಕೋಪಿಸಿದುದು.

ಸೀತೆಯು ರಾಮನ ಬಾಯಿಂದ ಯಾವಾಗಲೂ ಪ್ರಿಯವಾದ ಮಾತ ನ್ನೇ ಕೇಳುತಿದ್ದವಳೇಹೊರತು, ಒಂದುದಿನವಾದರೂ ಇಂತಹ ಅಪ್ರಿಯವನ್ನು ಕೇಳಿದವಳಲ್ಲ. ಈಕೆಯೂ ರಾಮನೊಡನೆ ಎಂದಿಗೂ ಅಪ್ರಿಯವನ್ನು ನುಡಿದ ವಳಲ್ಲ. ಹೀಗೆ ಎಡೆಬಿಡದ ಪ್ರೇಮವುಳ್ಳವರಾಗಿದ್ದರೂ, ರಾಮನು ಹೇಳಿದ ವ್ಯಸನವಾರ್ತೆಯನ್ನು ಕೇಳಿ, ಸೀತೆಗೆ ಥಟ್ಟನೆ ಕೋಪವುಂಟಾಯಿತು. ಆದರೆ ಆ ಕೋಪವೂ ಪ್ರಣಯಸಂಬಂಧವಾಗಿತ್ತೇಹೊರತು ವೈರಬುದ್ಧಿಯಿಂದುಂ ಟಾದುದಲ್ಲ. ಹೀಗೆ ಪ್ರಣಯಕುಪಿತೆಯಾದ ಸೀತೆಯು, ಪತಿಯಾದ ರಾಮ ನನ್ನು ಕುರಿತು ‹‹ನಾಥಾ! ಇದೀಗ ಬಹಳ ಚೆನ್ನಾಯಿತು ! ನೀನು ಇಂತಹ ಮಾತುಗಳನ್ನಾಡಬಹುದೆ? ಕೇವಲ ಅಲ್ಪಬುದ್ಧಿಯುಳ್ಳವರು ಈ ಮಾತುಗಳ ನ್ನಾಡುವರೇ ಹೊರತು,ಉದಾರಬುದ್ಧಿಯುಳ್ಳ ನಿನ್ನಂತವರು ಕೆಲಸಕ್ಕೆಬಾರ ದ ಇಂತಹ ಮಾತುಗಳನ್ನಾಡಲಾರರು ! ನೀನು ಹೇಳಿದಮಾತುಗಳು ಕೇ ವಲ ನಿಸ್ಸಾರಗಳೆಂದು ನಿನಗೂ ಸಿಶ್ಚಯವಾಗಿ ತಿಳಿದೇ ಇರಬಹುದು. ಸ್ತ್ರೀಮಾ ತ್ರಳಾದ ನನಗೇ !ಇವು ಪರಿಹಾಸಾಸ್ಪದಗಳಾಗಿರುವುವು. ರಾಜಕುಮಾರ ನಾದ ನೀನು ಈ ಮಾತನ್ನಾಡಿದರೆ ಇನ್ನು ಹೇಳುತಕ್ಕುದೇನು? ಇದುವರೆಗೆ ಹಿಂದೆ ಯಾವಾಗಲೂ ನಾನು ಈವಿಧವಾದ ಮಾತನ್ನು ನಿನ್ನ ಬಾಯಿಂದ ಕೇಳಲಿಲ್ಲ. ಶಸ್ತ್ರಾಸ್ತ್ರಗಳನ್ನು ಬಲ್ಲವರಾಗಿ, ವೀರರೆನಿಸಿಕೊಂಡ ರಾಜಕುಮಾ ರರು, ಅಪಕೀರ್ತಿಹೇತುವಾದ ಇದನ್ನು ಕಿವಿಯಿಂದಲೂ ಕೇಳಬಾರದು. ಅಂ

ತಹ ಮಾತನ್ನು ನಿನ್ನ ಬಾಯಿಂದ ನೀನೇ ಹೇಳುವುದಾದರೆ ಇದಕ್ಕಿಂತಲೂ ಲೋಕದಲ್ಲಿ ಆಶ್ಚರ್ಯವೇನಿರುವುದು ? ಎಲೈ ಆರ್ಯಪುತ್ರನೇ! ಲೋಕದಲ್ಲಿ ತಂದೆ ಯಾಗಲಿ, ತಾಯಿಯಾಗಲಿ, ಒಡಹುಟ್ಟಿದವರಾಗಲಿ, ಮಕ್ಕಳಾಗಲಿ, ಸೊಸೆ ಯಾಗಲಿ, ತಮ್ಮ ತಮ್ಮ ಪುಣ್ಯಪಾಪಕರ್ಮಗಳಿಗೆ ತಕ್ಕಫಲಗಳನ್ನು ಅನುಭವಿಸು ವರು. ಆಯಾಫಲಪ್ರಾಪ್ತಿಗೆ ಕಾರಣಗಳಾದ ಶುಭಾಶುಭಕರ್ಮಗಳನ್ನು ನಡೆ ಸುವುದಕ್ಕೂ ಸ್ವತಂತ್ರರಾಗಿರುವರು. ಗಂಡನಿಗೆ ಅರ್ಧಶರೀರದಂತಿರುವ ಹೆಂ ಡತಿಯಾದರೋ, ತನ ಪತಿಯ ಕರ್ಮಾನುಸಾರವಾದ ಫಲವನ್ನೇ ಅನುಭವಿಸ ತಕ್ಕವಳು. ಎಲೈ ಪ್ರಿಯನೆ ! ನಿನಗೆ ನಾನು ಅರ್ಧದೇಹವಲ್ಲವೆ ? ದಶರಥನು ನಿನಗೆ ವನವಾಸವನ್ನು ನಿಯಮಿಸಿದಮೇಲೆ, ನನಗೂ ಅದನ್ನು ನಿಯಮಿಸಿದಂ ತಾಗಲಿಲ್ಲವೆ? ಸ್ತ್ರೀಯರಿಗೆ ತಂದೆಯಾಗಲಿ, ಮಗನಾಗಲಿ, ತಾಯಿಯಾಗಲಿ, ಸಖಿಯರಾಗಲಿ, ದಿಕ್ಕಾಗಿರಲಾರರು. ತಮಗೆ ತಾವೇ ಸ್ವತಂತ್ರರಾಗಿರುವು ದಕ್ಕೂ ಅವರಿಗೆ ಅಧಿಕಾರವಿಲ್ಲ.ಅವರಿಗೆ! ಈ ಲೋಕದಲ್ಲಿಯಾಗಲಿ,ಪರಲೋಕ ದಲ್ಲಿಯಾಗಲಿ ಪತಿಯೊಬ್ಬನೇ ಗತಿಯು. ಈಗ ನೀನು ಕಾಡಿಗೆ ಹೊರಡುವುದು ನಿಜವಾಗಿದ್ದರೆ, ನಾನು ನಿನಗೆ ಮುಂದಾಗಿಯೇ ಹೊರಟು, ದಾರಿಯಲ್ಲಿ ದರ್ಭೆ ಯ ಮುಳ್ಳುಗಳನ್ನು ಕಿತ್ತು ನಿನಗೆ ದಾರಿಯನ್ನು ಸರಿಮಾಡುತ್ತಾ ಹೋಗುವೆ ನು. ಒಂದುವೇಳೆ ನಿನ್ನ ಮನಸ್ಸಿನಲ್ಲಿ ನಾನು ನಿನ್ನನ್ನನುಸರಿಸಿ ಬಂದು ನಿನ್ನ ಪಾ ದ ಶುಶ್ರೂಷೆಯನ್ನು ಮಾಡುವುದರಿಂದ ಕೃತಾರ್ಥಳಾಗಿಬಿಡುವೆನೆಂಬ ಅಸಹ ನವಿದ್ದರೂ, ಅಥವಾ ನಿನ್ನ ಮಾತನ್ನು ಮೀರಿ ನಾನು ಕಾಡಿಗೆ ಹೊರಡುವೆ ನೆಂದುದಕ್ಕಾಗಿ ನನ್ನಲ್ಲಿ ಕೋಪವಿದ್ದರೂ, ಇತರರು ಕುಡಿದು ಮಿಗಿಸಿದ ನಿಷಿ ದ್ಧವಾದ ನೀರನ್ನು ಚೆಲ್ಲಿಬಿಡುವಂತೆ ಅವೆರಡನ್ನೂ ಬಿಟ್ಟುಬಿಡು! ಅಥವಾ ನೀನು ಒಂದುವೇಳೆ ಸ್ತ್ರೀಮಾತ್ರಳಾದ ನನ್ನನ್ನ ಕಟ್ಟಿಕೊಂಡು ಕಾಡಿನಲ್ಲಿ ಅಲೆಯು ವುದು ಹೇಗೆಂದು ಭಯಪಡಬಹುದು ? ನೀನು ಮಹಾವೀರನೆನಿಸಿಕೊಂಡಿರು ವೆಯಲ್ಲವೆ ? ನನ್ನನ್ನು ಕಾಪಾಡುವುದು ನಿನಗೊಂದು ಕಷ್ಟವೆ? ಇದಕ್ಕಾಗಿ ನಿ ನ್ನಂತವನು ಭಯಪಡಬಾರದು. ನಿನ್ನನ್ನಗಲಿ ಜೀವಿಸತಕ್ಕ ಮಹಾಪಾಪಕಾರ್ಯ ದಿಂದ ನನ್ನನ್ನು ತಪ್ಪಿಸು! ರಾಜಗೃಹದಲ್ಲಿರತಕ್ಕ ಸೌಖ್ಯಗಳೆಲ್ಲವನ್ನೂ ಬಿಟ್ಟು, ಕಾಡಿನಲ್ಲಿ ಕಷ್ಟಪಡುವುದೇಕೆಂದು ನೀನು ಕೇಳಬಹುದು. ಉಪ್ಪರಿಗೆಗಳಲ್ಲಿ ವಾಸಮಾಡುವುದಕ್ಕಿಂತಲೂ, ವಿಮಾನಗಳಲ್ಲಿ ಸಂಚರಿಸುವುದಕ್ಕಿಂತಲೂ

ಅಣಿಮಾದ್ಯಷ್ಟೈಶ್ವರ್ಯಸಿದ್ಧಿಗಳನ್ನು ಪಡೆದು ಆಕಾಶದಲ್ಲಿ ಸಂಚರಿಸುವುದ ಕ್ಕಿಂತಲೂ, ಸರ್ವಾವಸ್ಥೆಗಳಲ್ಲಿಯೂ ಪತಿಯ ಪಾದಚ್ಛಾಯೆಯನ್ನನುಸರಿಸಿ ನಡೆಯುವುದೇ ಸ್ತ್ರೀಯರಿಗೆ ಸರ್ವೋತ್ತಮಧರ್ಮವು. ಯಾವಯಾವ ವರ್ಣಾ ಶ್ರಮದವರು ಯಾವಯಾವರೀತಿಯಲ್ಲಿ ನಡೆದುಕೊಳ್ಳಬೇಕೆಂಬುದನ್ನು ನನ್ನ ತಂದೆ ತಾಯಿಗಳೇ ನನಗೆ ಅನೇಕವಿಧವಾಗಿ ತಿಳಿಸಿರುವರು. ಆದುದ ರಿಂದ ಈ ಭಾಗದಲ್ಲಿ ನನಗೆ ಬೇರೆ ಯಾರೂ ಉಪದೇಶಿಸಬೇಕಾದುದಿಲ್ಲ. ಆ ಅರಣ್ಯವು ಎಷ್ಟೇ ದುರ್ಗಮವಾಗಿ ಜನರಹಿತವಾಗಿದ್ದರೂ, ಹುಲಿ, ತೋಳ, ಮೊದಲಾದ ಅನೇಕಕ್ರೂರಮೃಗಗಳಿಗೆ ನಿವಾಸವಾಗಿದ್ದರೂ, ನಾನು ನಿನ್ನೊ ಡನೆ ಬಾರದಿರಲಾರೆನು. ತಂದೆಯ ಮನೆಯಲ್ಲಿರುವಂತೆಯೇ ಅಲ್ಲಿಯೂ ನಾನು ಸುಖದಿಂದಿರಬಹುದು. ನಿನ್ನ ಶುಶ್ರೂಷೆಯನ್ನು ಬಿಟ್ಟು, ಈ ತ್ರೈಲೋಕ್ಯಾಧಿ ಪತ್ಯವೇ ಸಿಕ್ಕುವುದಾದರೂ ನಾನು ಲಕ್ಷ್ಯಮಾಡುವವಳಲ್ಲ! ಪಾತಿವ್ರತ್ಯವೆಂ ಬ ನಿಯಮವೊಂದನ್ನೇ ಅನುಸರಿಸಿ, ಇಂದ್ರಿಯಗಳನ್ನು ನಿಗ್ರಹಿಸಿ, ನಿನ್ನ ಸೇವೆ ಯನ್ನು ಮಾಡುತ್ತಿರುವೆನು. ಇಲ್ಲಿ ಎಷ್ಟುವಿಧದ ರಾಜೋಪಭೋಗಗಳಿದ್ದ ರೇನು ? ನಾನಾವಿಧ ಪುಷ್ಪಗಳ ಮಕರಂದದಿಂದ ಸುವಾಸಿತವಾದ ವನಪ್ರ ದೇಶದಲ್ಲಿ ನಿನ್ನೊಡಗೂಡಿ ವಿಹರಿಸುವುದಕ್ಕಿಂತಲೂನನಗೆ ಮೇಲಾದ ಭೋಗ ವು ಬೇರೊಂದುಂಟೆ ? ಕಾಡಿನಲ್ಲಿ ನನ್ನನ್ನು ಕಾಪಾಡುವುದು ಹೇಗೆಂದು ನೀನು ಚಿಂತಿಸಬಹುದು. ನಿನ್ನಲ್ಲಿ ಬಂದು ಮರೆಹೊಕ್ಕ ಯಾರನ್ನಾದರೂ ನೀನು ಕಾಪಾಡಬಲ್ಲೆಯಲ್ಲವೆ ? ಹೀಗಿರುವಾಗ ಕೈಹಿಡಿದ ಹೆಂಡತಿಯಾದ ನ ನ್ನನ್ನು ಕಾಪಾಡಲಾರೆಯಾ? ನನ್ನ ದೇಹವನ್ನು ಮಾತ್ರವೇಅಲ್ಲದೆ, ನನ್ನ ಮಾನ ವನ್ನು ಕಾಪಾಡುವವನೂ ನೀನೇ ಅಲ್ಲವೆ? ನಿನ್ನೊಡನೆ ನಾನೂ ಕಾಡಿಗೆ ಬಂ ದೇಬರುವೆನು. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಎಲೈ ಮಹಾಭಾಗನೆ ! ನೀನು ಎಷ್ಟು ಹೇಳಿದರೇನು ? ನಾನು ನಿನ್ನನ್ನು ಬಿಟ್ಟು ಇಲ್ಲಿರಲಾರೆನು! ನಿ ನ್ನೊಡನೆ ಬರುವುದಾಗಿಯೇ ಮನಸ್ಸನ್ನು ದೃಢಪಡಿಸಿಕೊಂಡಿರುವೆನು. ನನ್ನ ಪೋಷಣೆಗಾಗಿ ನೀನು ಸ್ವಲ್ಪವೂ ಕಷ್ಟಪಡಬೇಕಾದುದಿಲ್ಲ. ಅಲ್ಲಲ್ಲಿ ಸಿಕ್ಕಿದ ಹಣ್ಣುಹಂಪಲುಗಳನ್ನೂ, ಗಡ್ಡೆಗೆಣಸುಗಳನ್ನೂ ತಿಂದು ಜೀವಿಸಿ ಕೊಳ್ಳುವೆನು. ಇದರಲ್ಲಿ ಸಂದೇಹವಿಲ್ಲ. ನಿನ್ನನ್ನು ನಾನು ಯಾವ ವಿಧದ ಲ್ಲಿಯೂ ಕಷ್ಟಪಡಿಸುವುದಿಲ್ಲ. ನಿನ್ನ ಸಹವಾಸಸೌಖ್ಯವೊಂದಿದ್ದರೆ ಸಾಕು!

ಕಾಡಿನಲ್ಲಿ ಅಲ್ಲಲ್ಲಿ ಹರಿಯುವ ನದೀನದಗಳನ್ನೂ, ಬೆಟ್ಟಗುಡ್ಡಗಳನ್ನೂ, ಕೆರೆ ತೊರೆಗಳನ್ನೂ, ಮಡುಗಳನ್ನೂ, ತೋಪುಗಳನ್ನೂ ನೋಡಬೇಕೆಂದು ನನಗೆ ಬಹಳ ಆಸೆಯಿರುವುದು. ನಾಥನಾದ ನೀನೇ ಈಗ ನನಗೆ ಬೆಂಬಲವಾಗಿ ಬರುವುದರಿಂದ, ಆ ದುರ್ಗಮವಾದ ಕಾಡಿನಲ್ಲಿಯೂ ನಾನು ನಿರ್ಭಯಳಾಗಿ ಸಂಚರಿಸುತ್ತ, ಕಣ್ಣಿಗೆ ಬೇಕಾದುದೆಲ್ಲವನ್ನೂ ನೋಡಿ ಬರಬಹುದು. ಇದಕ್ಕಿಂತಲೂ ಒಳ್ಳೆಯ ಅವಕಾಶವು ಮುಂದೆ ಸಿಕ್ಕಲಾರದು. ಅಲ್ಲಲ್ಲಿ ಹಂಸಗಳು, ನೀರುಕೋಳಿಗಳು, ಮೊದಲಾದ ಅನೇಕಜಲಚರಪಕ್ಷಿಗಳಿಂದ ಅತಿಮನೋಹರಗಳಾಗಿರುವ ತಾವರೆಕೊಳಗಳನ್ನು ನೋಡಿ ಬರಬೇಕೆಂದು ನನಗೆ ಬಹಳಕುತೂಹಲವುಂಟು. ರಮ್ಯಗಳಾದ ಆ ಕೊಳಗಳಲ್ಲಿ ವ್ರತನಿಯಮಗಳಿಗೆ ಬೇಕಾದ ಸ್ನಾನಾದಿಗಳನ್ನೂ ಮಾಡಬಹುದು. ಅದಕ್ಕಾಗಿ ನಾನು ಬಿಸಿನೀರು ಮುಂತಾದುವುಗಳಿಗೆ ಅಪೇಕ್ಷಿಸುವವಳಲ್ಲ. ಆ ತಾವರೆಕೊಳಗಳಲ್ಲಿ ನಿನ್ನೊಡಗೂಡಿ ಎಷ್ಟೋ ಸಂತೋಷದಿಂದ ವಿಹರಿಸುತ್ತಿರಬಹುದು. ನಾನು ಕಾಡಿನಲ್ಲಿ ನಿನ್ನೊಡನೆ ವಿಹರಿಸುತ್ತಿದ್ದರೆ, ಸಾವಿರಾರುವರ್ಷಗಳವರೆಗಾದರೂ ನಿಶ್ಚಿಂತಳಾಗಿರಬಲ್ಲೆನು. ಈ ಹದಿನಾಲ್ಕುವರ್ಷಗಳನ್ನು ಕಳೆಯುವುದೊಂದು ಸಾಧ್ಯವೆ? ನಿನ್ನನ್ನು ಬಿಟ್ಟು ಸ್ವರ್ಗಸುಖವನ್ನಾದರೂ ನಾನೊಲ್ಲೆನು. ನಿನ್ನಿಂದಗಲಿಸಿ ನನ್ನನ್ನು ಇಂದ್ರಲೋಕದಲ್ಲಿರಿಸಿದರೂ ನಾನೂ ನಿಮಿಷಮಾತ್ರವೂ ಅಲ್ಲಿರತಕ್ಕವಳಲ್ಲ. * ಈಗ ನೀನು ಹೋಗಿ ವಾಸಮಾಡತಕ್ಕ ವನಪ್ರದೇಶವು

---

* ಇದಕ್ಕೆ "ಅಹಂ ಗಮಿಷ್ಯಾಮಿ ವನಂ ಸುದುರ್ಗಮಂ ಮೃಗಾಯುತಂ ವಾನರವಾರಣೈರ್ಯುತಂ। ವನೇ ನಿವತ್ಸ್ಯಾಮಿ ಯಥಾಪಿತುರ್ಗೃಹೇ ತವೈವ ಪಾದಾವುಪಗೃಹ್ಯ ಸಂಯತಾ । ಅನನ್ಯಭಾವಾಮನುರಕ್ತಚೇತಸಂ ತ್ವಯಾ ವಿಯುಕ್ತಾಂಮರಣಾಯ ನಿಶ್ಚಿತಾಂ । ನಯಸ್ವ ಮಾಂ ಸಾಧು ಕುರುಷ್ವಯಾಚನಾಂ ನತೇ ಮಯಾತೋ ಗುರುತಾ ಭವಿಷ್ಯತಿ ॥" ಎಂಬುದೇ ಮೂಲವು, ಈ ವಾಕ್ಯಗಳಲ್ಲಿ ಅಂತರ್ಗತವಾದ ಕೆಲವು ರಹಸ್ಯಾರ್ಥಗಳುಂಟು. ಹೇಗೆಂದರೆ:—(ಅಹಂ ಗಮಿಷ್ಯಾಮಿ ವನಂ ಸುದುರ್ಗಮಂ) ಎಷ್ಟೋ ದುರ್ಗಮವಾದ ವನಪ್ರದೇಶಕ್ಕಾದರೂ ನಾನು ನಿನ್ನೊಡನೆ ಬರುವೆನೆಂದರ್ಥವು. (ಮೃಗಯುತಂ) ಮೃಗದಿಂದ ಕೂಡಿದುದು. ಮಾರೀಚನು ಮಾಯಾಮೃಗವೇಷದಿಂದ ಬಂದು ನಮಗೆ ವಿಯೋಗವನ್ನುಂಟುಮಾಡತಕ್ಕ ವನಪ್ರದೇಶವೆಂದು ರಹಸ್ಯಾರ್ಥವು (ವಾನರವಾರಣೈರ್ಯುತಂ) ವಾನರವಾರಣರೆಂದರೆ ವಾನರಶ್ರೇಷ್ಠರು. ಅವರಿಂದ ಕೂಡಿದುದು.

ಎಷ್ಟೇ ದುರ್ಗಮವಾಗಿದ್ದರೂ ಇರಲಿ! ಮತ್ತು ಅಲ್ಲಿ ಕೋತಿಗಳು, ಕಾಡಾನೆಗಳು ಮೊದಲಾದ ಎಷ್ಟೇ ಕ್ರೂರಮೃಗಗಳಿದ್ದರೂ ಇರಲಿ! ನಾನು ಹಿಂತೆಗೆಯುವವಳಲ್ಲ. ನಿನ್ನ ಸಂಗಡಲೇ ಬರುವೆನು. ನಾನು ನಿಯಮನಿಷ್ಠಳಾಗಿ ನಿನ್ನ ಪಾದಶುಶ್ರೂಷೆಯನ್ನು ಮಾಡುತ್ತ, ತಂದೆಯ ಮನೆಯಲ್ಲಿರುವಂತೆಯೇ ಸುಖವಾಗಿರುವೆನು. ನಿನ್ನ ಪಾದವನ್ನಾಶ್ರಯಿಸಿದ ನನಗೆ ಯಾವ ವಿಧದಲ್ಲಿಯೂ ಭಯವಿಲ್ಲ. ನಿನ್ನನ್ನು ಬಿಟ್ಟು ನನ್ನ ಮನಸ್ಸು ಸಹಿಸಲಾರದು. ನಿನ್ನನ್ನು ಬಿಟ್ಟರೆ ನನಗೆ ಬೇರೆ ಪ್ರಿಯವಾದ ವಸ್ತುವೊಂದೂ ಈ ಪ್ರಪಂಚದಲ್ಲಿಲ್ಲ. ನೀನು ಮಾತ್ರ ನನ್ನನ್ನು ಆಗಲಿಹೋದರೆ, ನನಗೆ ಮರಣವೇ ಶರಣವಲ್ಲದೆ ಬೇರೆಯಿಲ್ಲ. ಇದೆಲ್ಲವನ್ನೂ ನೀನು ಚೆನ್ನಾಗಿ ಪರ್ಯಾಲೋಚಿಸಿ, ನನ್ನನ್ನೂ ಕಾಡಿಗೆ ಕರೆದುಕೊಂಡು ಹೋಗು! ನನ್ನ ಪ್ರಾರ್ಥನೆಯನ್ನಂಗೀಕರಿಸು! ನಾನು ಸಂಗಡಬಂದ ಮಾತ್ರಕ್ಕೆ ನಿನಗೆ ಅದೊಂದು ಭಾರವಲ್ಲ" ಎಂದಳು.

---

ವಾನರಶ್ರೇಷ್ಠರಾದ ಸುಗ್ರೀವಾದಿಗಳು ನಮಗುಂಟಾದ ವಿಯೋಗವನ್ನು ತಪ್ಪಿಸಿ ನಮಗೆ ಸಹಾಯಕರಾಗುವರೆಂದು ಭಾವವು. (ವನೇ) ಹಿಂದಿನಪಾದದಲ್ಲಿ ಹೇಳಲ್ಪಟ್ಟಿರುವ "ವನಂ"ಎಂಬ ಶಬ್ದವೇ ಸಾಕಾಗಿರುವಾಗಲೂ ಪುನಃ ಇಲ್ಲಿ "ವನೇ" ಎಂದು ಹೇಳಿರುವುದರಿಂದ, ಈ ವನಶಬ್ದಕ್ಕೆ ಅಶೋಕವನವೆಂದು ಗ್ರಹಿಸಬೇಕು. (ನಿವತ್ಸ್ಯಾಮಿ ಯಥಾ ಪಿತುರ್ಗೃಹೇ) ತಂದೆಯ ಮನೆಯಲ್ಲಿ ನಾನು ನಿನ್ನನ್ನು ಬಿಟ್ಟಿದ್ದಂತೆ, ಅಲ್ಲಿಯೂ ಕೆಲವು ಕಾಲವರದವರೆಗೆ ಇದ್ದು ಬರವೆನೆಂದು ಭಾವವು. ಹಾಗೆ ಅಲ್ಲಿರುವಾಗಲೂ ಕೂಡ (ತವೈವ ಪಾದಾವುಪಗೃಹ್ಯ ಸಂಯತಾ) ನಿನ್ನ ಪಾದಧ್ಯಾನವನ್ನೇ ಮಾಡುತ್ತ ನಿಯಮದಿಂದಿರುವೆನೆಂದರ್ಥವು. (ಅನನ್ಯಭಾವಾಂ) ಅಲ್ಲಿ ನಿನ್ನ ಧ್ಯಾನವಲ್ಲದೆ ನನಗೆ ಬೇರಿಲ್ಲವು (ಅನುರಕ್ತಚೇತಸಂ) ನಿನ್ನಲ್ಲಿ ಪತಿಯೆಂಬ ಗೌರವದಿಂದಮಾತ್ರವೇ ನಾನು ಹಾಗಿರುವವಳಲ್ಲ. ನನಗೆ ನಿನ್ನಲ್ಲಿರುವ ಮನಃಪೂರ್ವಕವಾದ ಅನುರಾಗವೇ ನನ್ನನ್ನು ಹಾಗೆಮಾಡುವುದೆಂದು ಭಾವವು. (ತ್ವಯಾವಿಯುಕ್ತಾಂ ಮರಣಾಯ ನಿಶ್ಚಿತಾಂ ಮಾಂ ನಯಸ್ವ) ಬಹುಕಾಲದವರೆಗೆ ನಿನ್ನಗಲಿಕೆಯನ್ನು ಸಹಿಲಾರದುದಕ್ಕಾಗಿ ಯಾವಾಗ ನಾನು ಪ್ರಾಣತ್ಯಾಗವನ್ನು ಮಾಡಿಕೊಳ್ಳಬೇಕೆಂದು ನಿಶ್ಚಯಿಸಿಕೊಳ್ಳುವೆನೋ,ಆಗ ನೀನು ಆಂಜನೇಯನೇ ಮೊದಲಾದ ಕಪಿಗಳ ಸಹಾಯದಿಂದ ನಿನ್ನಬಳಿಗೆ ಕರೆಸಿಕೊಳ್ಳುವವಳಾಗು" ಎಂದು ಭಾವವು. (ಯಾಚನಾಂ ಕುರುಷ್ವ) ದೇವತೆಗಳು ಬಂದು ಕೇಳಿಕೊಂಡ ರಾವಣವಧವನ್ನು ನೀನು ನಡೆಸು. (ಅತಃ) ಇದರಿಂದ, (ಮಯಾ) ನನ್ನಿಂದ (ತೇ) ನಿನಗೆ, (ಗುರುತಾ) ಭಾರವು ವಿರಹಾಯಾಸವು. (ನಭವಿಷ್ಯತಿ) ಇರಲಾರದು. ಎಂದು ರಹಸ್ಯಾರ್ಥವು.

ಪುರುಷಶ್ರೇಷ್ಠನಾದ ರಾಮನು ಧರ್ಮಮಾರ್ಗದಲ್ಲಿಯೇ ವಿಶೇಷವಾತ್ಸಲ್ಯವುಳ್ಳವನಾದುದರಿಂದ, ಸೀತೆಯು ಹೀಗೆ ಎಷ್ಟೋವಿಧದಲ್ಲಿಪ್ರಾರ್ಥಿಸಿಕೊಂಡರೂ ಅವಳನ್ನು ಕಾಡಿಗೆ ಕರೆದುಕೊಂಡುಹೋಗುವವಿಷಯದಲ್ಲಿ ಇಷ್ಟಪಡಲಿಲ್ಲ. ಅವಳಿಗೆ ಇನ್ನೂ ಅನೇಕವಿಧದಲ್ಲಿ ಬುದ್ಧಿವಾದಗಳನ್ನು ಹೇಳುತ್ತ, ಅವಳಪ್ರಯತ್ನವನ್ನು ತಪ್ಪಿಸುವುದಕ್ಕೆ ಯತ್ನಿಸಿದನು. ಕಾಡಿನಲ್ಲಿ ಸಂಭವಿಸಬಹುದಾದ ಕಷ್ಟಗಳನ್ನೆಲ್ಲಾ ಕ್ರಮವಾಗಿ ವಿವರಿಸತೊಡಗಿದನು. ಇಲ್ಲಿಗೆ ಇಪ್ಪತ್ತೇಳನೆಯಸರ್ಗವು.

---

ರಾಮನು ವನವಾಸದಲ್ಲಿರುವ ಕಷ್ಟವನ್ನು ಸೀತೆಗೆ ತಿಳಿಸಿದುದು.

ಸೀತೆಯು ಹೀಗೆ ಅನೇಕವಿಧದಲ್ಲಿ ಪ್ರಾರ್ಥಿಸಿಕೊಳ್ಳುತಿದ್ದರೂ, ರಾಮನಿಗೆ ವನವಾಸದಲ್ಲಿರಬಹುದಾದ ಕಷ್ಟಗಳನ್ನು ಚಿಂತಿಸಿ, ಆಕೆಯನ್ನು ಕರೆದುಕೊಂಡು ಹೋಗಬೇಕೆಂಬ ಬುದ್ಧಿಯೇ ಹುಟ್ಟಲಿಲ್ಲ. ಧರ್ಮಜ್ಞನಾಗಿಯೂ, ಧರ್ಮನಿರತನಾಗಿಯೂ ಇರುವ ರಾಮನು, ಆಸೀತೆಯನ್ನು ಪುನಃಪುನಃಸಮಾಧಾನಪಡಿಸುತ್ತಿದ್ದನು. ಸೀತೆಯಾದರೋ ಕಣ್ಣಿನಲ್ಲಿನೀರುತುಂಬಿಕೊಂಡು ದುಃಖಿಸುತಿದ್ದಳು. ಹೇಗಾದರೂ ತನ್ನೊಡನೆ ಬರಬೇಕೆಂದು ಹೇಳುತ್ತಿರುವ ಆಸೀತೆಯಮನಸ್ಸನ್ನು ಹಿಂತಿರುಗಿಸುವುದಕ್ಕಾಗಿ ರಾಮನು ಆಕೆಯನ್ನು ಕುರಿತು “ಎಲೆ ಸೀತೆ! ನೀನು ದೊಡ್ಡವಂಶದಲ್ಲಿ ಹುಟ್ಟಿದವಳು. ಯಾವಾಗಲೂ ಧರ್ಮನಿರತಳಾದವಳು. ಆದುದರಿಂದ ನೀನು ಇಲ್ಲಿಯೇ ಇದ್ದುಕೊಂಡು ನಿನ್ನ ಧರ್ಮವನ್ನು ನಡೆಸುತ್ತಿರು! ನಿನ್ನ ಸೌಖ್ಯವನ್ನೇ ನೀನು ಮುಖ್ಯವಾಗಿ ನೋಡಿಕೊಳ್ಳಬೇಕೆಂಬುದು ಸರಿಯಲ್ಲ! ಪತಿಯಾದ ನನ್ನ ಆಜ್ಞೆಯನ್ನನುಸರಿಸಿ ನಡೆಯುವುದೇ ನಿನಗೆ ಧರ್ಮವು. ಕಾಡಿನಲ್ಲಿ ವಾಸಮಾಡುವುದು ಸುಲಭಸಾಧ್ಯವೆಂದೆಣಿಸಬೇಡ! ಅದರಲ್ಲಿ ಅನುಭವಿಸಬೇಕಾದ ಕಷ್ಟಗಳು ಅನೇಕವಾಗಿವೆ. ಅವೆಲ್ಲವನ್ನೂ ಒಂದೊಂದಾಗಿ ನಿನಗೆ ತಿಳಿಸುವೆನು ಕೇಳು. ಆಗಲಾದರೂ ನೀನು ಈಗ ಉದ್ದೇಶಿಸಿರುವ ವನವಾಸದಆಸೆಯನ್ನು ಬಿಟ್ಟುಬಿಡಬಹುದು. ವನವೆಂಬುದನ್ನು ಏನೆಂದುಬಲ್ಲೆಯಾ? ಅದರಲ್ಲಿ ಅನುಭವಿಸಬೇಕಾದ ಕಷ್ಟಪರಂಪರೆಗಳಿಗೆ ಪಾರವೇ ಇಲ್ಲ. ಹುಲಿಕರಡಿಗಳಿಂದಲೂ, ಕಲ್ಲುಮುಳ್ಳುಗಳಿಂದಲೂ, ಸಂಚರಿಸುವು

ದಕ್ಕಸಾಧ್ಯವಾದ ಮಹಾರಣ್ಯವೇ ವನವೆನಿಸುವುದು. ನಾನು ನಿನ್ನ ಹಿತಕ್ಕಾಗಿ ಹೇಳುವೆನೇಹೊರತು, ನಿನ್ನನ್ನು ಕಾಪಾಡಲಾರದುದಕ್ಕಾಗಿ ಹೀಗೆ ಹೇಳುವೆನೆಂದು ತಿಳಿಯಬೇಡ! ಕಾಡಿನಲ್ಲಿ ನಿಮಿಷಮಾತ್ರವೂ ಸುಖವೆಂಬುದೇ ಇಲ್ಲದೆ. ಯಾವಾಗಲೂ ದುಃಖಪ್ರಚುರವಾಗಿರುವುದು. ಅಲ್ಲಲ್ಲಿ, ಪರ್ವತಗುಹೆಗಳಲ್ಲಿ ವಾಸಮಾಡುತ್ತಿರುವ ಸಿಹ್ಮದ ಗರ್ಜನೆಗಳೂ, ಅಲ್ಲಲ್ಲಿ ಪರ್ವತಶಿಖರಗಳಿಂದ ಕೆಳಕ್ಕೆ ಬೀಳುವ ಗಿರಿನದಿಗಳ ಜಲಪಾತಧ್ವನಿಗಳೂ ಆಗಾಗ ಕಿವಿಗೆ ಬೀಳುತ್ತಿರುವುವು. ಈ ಭಯಂಕರವಾದ ಧ್ವನಿಗಳನ್ನು ಕಿವಿಯಿಂದ ಕೇಳುವುದೂ ಕೂಡ ಬಹಳಕಷ್ಟವಾಗುವುದು. ಆದುದರಿಂದ ವನವಾಸವೆಂಬುದರಲ್ಲಿ ಬಹಳ ಕಷ್ಟವುಂಟು. ಜನಶೂನ್ಯವಾದ ಪ್ರದೇಶದಲ್ಲಿ ನಿರ್ಭಯವಾಗಿ ಕ್ರೀಡಿಸುತ್ತಲಿರುವ ಮೃಗಗಳೆಲ್ಲವೂ ಅಲ್ಲಲ್ಲಿ ನಿಂತಿರುವುವು. ಅವು ನಮ್ಮನ್ನು ಕಂಡೊಡನೆ ಮೇಲೆಬಿದ್ದು ಕೊಲ್ಲುವುದಕ್ಕೆ ಬರುವುವು. ಇದರಿಂದಲೇ ನಾನು ವನವಾಸವನ್ನು ಕಷ್ಟವೆಂದು ಹೇಳಿದೆನು. ಕಾಡಿನಲ್ಲಿರತಕ್ಕ ಕೊಳಗಳೆಲ್ಲವೂ ಯಾವಾಗಲೂ ಮೊಸಳೆಗಳಿಂದಲೂ, ಕಾಡಾನೆಗಳಿಂದಲೂ ತುಂಬಿರುವುವು. ಇದರಿಂದಲೇ ವನವಾಸವು ಬಹಳ ಅಪಾಯಹೇತುವಾಗಿರುವುದು. ಕಾಡುಗಳಲ್ಲಿ ಮುಳ್ಳು, ಪೊದರು, ಮುಂತಾದುವುಗಳು ವಿಶೇಷವಾಗಿ ತುಂಬಿರುವುದರಿಂದ, ಅಂತಹ ಕಾಡುದಾರಿಗಳಲ್ಲಿ ಸಂಚಾರಮಾಡುವುದೇ ಬಹಳಕಷ್ಟವು. ಅಲ್ಲಲ್ಲಿ ಕಾಡುಕೋಳಿಗಳು ಭಯಂಕರವಾದ ಧ್ವನಿಗಳಿಂದ ಕೂಗುತ್ತಿರುವುವು. ಎಷ್ಟುದೂರಕ್ಕೆ ಹೋದರೂ ಸ್ವಲ್ಪವಾದರೂ ನೀರು ಸಿಕ್ಕುವುದಿಲ್ಲ. ಇದಕ್ಕಿಂತಲೂ ಬೇರೆ ಕಷ್ಟವೇನುಂಟು? ಹಗಲೆಲ್ಲಾ ಕಾಡುದಾರಿಗಳಲ್ಲಿ ಸುತ್ತಿ ಶ್ರಮಪಟ್ಟು, ರಾತ್ರಿಯಲ್ಲಿ ಶ್ರಮಪರಿಹಾರಾರ್ಥವಾಗಿ ಮಲಗಬೇಕಾದರೂ, ಅಲ್ಲಲ್ಲಿ ಉದುರಿರುವ ಎಲೆಗಳ ಹಾಸಿಗೆಯಮೇಲೆ ಮಲಗಬೇಕೇಹೊರತು, ಒಂದು ದಿವಸವಾದರೂ ಸುಖಶಯ್ಯೆಗೆ ಅವಕಾಶವೇ ಇಲ್ಲ. ಇದರಿಂದಲೇ ಕಾಡಿನಲ್ಲಿರುವುದುಬಹಳಕಷ್ಟವು. ಅಲ್ಲಿ ಹಸಿದುಬಂದವರಿಗೆ ತಕ್ಕ ಆಹಾರವೂ ದುರ್ಲಭವು. ಹಗಲುರಾತ್ರಿಯೂ ಅಲ್ಲಲ್ಲಿ ಮರಗಳಿಂದ ಉದಿರಿಬಿದ್ದಿರುವ ಹಣ್ಣುಗಳನ್ನು ತಿಂದು ಅಷ್ಟರಲ್ಲಿಯೇ ತೃಪ್ತಿಯನ್ನು ಹೊಂದಬೇಕು. ಇದರಿಂದಲೇ ವನವಾಸವು ಬಹಳಕಷ್ಟವು. ಅವರವರ ಶಕ್ತ್ಯನುಸಾರವಾಗಿ ಉಪವಾಸವಿರಬೇಕು. ಜಡೆಯನ್ನು ಧರಿಸಬೇಕು. ನಾರುಮಡಿಯನ್ನುಡಬೇಕು. ಆಯಾಕಾಲ

ಗಳಲ್ಲಿ ನಡೆಸಬೇಕಾದ ದೇವಕಾರ್ಯಗಳನ್ನೂ, ಪಿತೃಕಾರ್ಯಗಳನ್ನೂ ಶಾಸ್ತ್ರೋಕ್ತವಾಗಿ ನಡೆಸಬೇಕು. ಅತಿಥಿಗಳಾಗಿ ಬಂದವರನ್ನು ಪ್ರತಿದಿನವೂ ಉಪಚರಿಸಿ ಪೂಜಿಸಬೇಕು. ಪ್ರತಿದಿನವೂ ಕಾಲಕಾಲಕ್ಕೆ ಸರಿಯಾಗಿ ಮೂರಾವರ್ತಿ ಸ್ನಾನಮಾಡಬೇಕು. ಇವೆಲ್ಲಕ್ಕೂ ಅಲ್ಲಿ ತಕ್ಕ ಅನುಕೂಲವಿಲ್ಲದಿದ್ದರೂ ಯಾವ ಭಾಗದಲ್ಲಿಯೂ ಲೋಪವಿಲ್ಲದಂತೆ ನಡೆಸಬೇಕು. ನಿಯಮದಿಂದಿರಬೇಕು. ಈ ಕಾರಣಗಳಿಂದಲೇ ವನವಾಸವೆಂಬುದು ಬಹಳಕಷ್ಟವು ಪ್ರತಿದಿವಸವೂ ವಾನಪ್ರಸ್ಥರಾದ ಋಷಿಗಳು ನಡೆಸುವಂತೆ, ತನ್ನ ಕೈಯಿಂದಲೇ ಹೂಗಳನ್ನು ಕುಯ್ದುತಂದು, ಅಗ್ನಿವೇದಿಕೆಯನ್ನು ಪೂಜಿಸಬೇಕು. ಇದೆಲ್ಲವನ್ನೂ ನಡೆಸುವುದು ಬಾಲೆಯಾದ ನಿನಗೆ ಸಾಧ್ಯವೆ? ಇದರಿಂದಲೇ ವನವಾಸವು ಬಹಳ ಕಷ್ಟವು. ಅಲ್ಲಲ್ಲಿ ಸಿಕ್ಕಿದ ಹಣ್ಣುಮೊದಲಾದುವುಗಳಿಂದಲೇ ತೃಪ್ತಿಹೊಂದಬೇಕು. ಸಿಕ್ಕಿದುದರಲ್ಲಿ ಸಂತೋಷಪಡಬೇಕು. ಕಾಡಿನಲ್ಲಿರುವವರೆಗೂ ನಿಯತವಾದ ಆಹಾರದಿಂದಲೇ ಪ್ರಾಣಧಾರಣೆಯನ್ನು ಮಾಡಿಕೊಂಡಿರಬೇಕು. ಇದರಿಂದಲೇ ವನವಾಸವೆಂಬುದು ಬಹಳಕಷ್ಟವು. ಕಾಡಿನಲ್ಲಿ ಯಾವಾಗಲೂ ಬಿರುಗಾಳಿಯು ಬೀಸುತ್ತಿರುವುದು! ರಾತ್ರಿಯಲ್ಲಿ ಗಾಢಾಂಧಕಾರವು ಕವಿದಿರುವುದು! ಯಾವಾಗಲೂ ಹಸಿವಿನಿಂದ ಬಳಲಬೇಕಾಗುವುದು. ಆಗಾಗ ಮಹತ್ತಾದ ಭಯವು ಸಂಭವಿಸುವುದು. ಆದುದರಿಂದ ವನವಾಸವೆಂಬುದು ಬಹುಕಷ್ಟವು. ಅಲ್ಲಲ್ಲಿ ಮಹಾಭಯಂಕರವಾದ ದೊಡ್ಡದೇಹವುಳ್ಳ ಬೆಟ್ಟದಹಾವುಗಳು ಬುಸುಗುಟ್ಟುತ್ತ ನೆಲದಮೇಲೆ ಸಂಚರಿಸುತ್ತಿರುವುವು. ಆದುದರಿಂದಲೇ ಕಾಡಿನಲ್ಲಿರುವುದು ಬಹಳ ಅಪಾಯಕರವು. ನದಿಗಳಂತೆ ವಕ್ರಗತಿಗಳುಳ್ಳ ಮಹಾಸರ್ಪಗಳು ಅಲ್ಲಲ್ಲಿ ದಾರಿಗಡ್ಡಲಾಗಿ ಮಲಗಿರುವುವು. ಇದರಿಂದಲೇ ವನವಾಸವೆಂಬುದು ಬಹಳಕಷ್ಟವು. ಅಲ್ಲಲ್ಲಿ ಮಿಡಿತೆಗಳೂ, ಚೇಳುಗಳೂ ಕೀಟಗಳೂ, ಕಾಡುನೊಣಗಳೂ, ಯಾವಾಗಲೂ ಬಾಧಿಸುತ್ತಿರುವುವು. ಇದರಿಂದಲೇ ಕಾಡಿನಲ್ಲಿರುವುದು ಬಹುಕಷ್ಟವು. ಅಲ್ಲಲ್ಲಿ ಮುಳ್ಳುಮರಗಳೂ, ದರ್ಭೆಗಳೂ, ವಿಶೇಷವಾಗಿ ಬೆಳೆದು ಹರಡಿಕೊಂಡಿರುವುವು. ಆದುದರಿಂದ ಕಾಡಿನಲ್ಲಿ ಸಂಚರಿಸುವುದು ಬಹಳಕಷ್ಟವು. ಕಾಡಿನಲ್ಲಿ ಅನುಭವಿಸಬೇಕಾದ ದೇಹಶ್ರಮಕ್ಕೆ ಪಾರವೇ ಇಲ್ಲ! ಅಲ್ಲಿ ಸಂಭವಿಸತಕ್ಕ ಭಯಕಾರಣಗಳು ಇನ್ನೂ ಅನೇಕವಿಧವಾಗಿರುವುವು. ಆದುದರಿಂದ ವನವಾಸವೆಂಬುದನ್ನು

ಕೇವಲದುಃಖವೆಂದೇ ಹೇಳಬೇಕೇಹೊರತು ಬೇರೆಯಲ್ಲ. ಕಾಡಿನಲ್ಲಿರತಕ್ಕವರು ಕ್ರೋಧಲೋಭಗಳೆರಡನ್ನೂ ಸಂಪೂರ್ಣವಾಗಿ ಬಿಟ್ಟುಬಿಡಬೇಕು. ತಪಸ್ಸಿನಲ್ಲಿಯೇ ದೃಢವಾದ ಬುದ್ಧಿಯನ್ನಿಡಬೇಕು. ಭಯಕ್ಕೆ ಎಷ್ಟೇಕಾರಣಗಳಿದ್ದರೂ ಭಯಪಡಬಾರದು. ಆದುದರಿಂದ ವನವಾಸವೆಂಬುದು ಯಾವಾಗಲೂ ಕಷ್ಟವೇಹೊರತು, ಅದರಲ್ಲಿ ಸುಖವೆಂಬುದು ಲೇಶಮಾತ್ರವೂ ಇಲ್ಲ. ಎಲೆಸೀತೆ! ಆದುದರಿಂದ ಈ ವನವಾಸದ ಪ್ರಯತ್ನವನ್ನು ಬಿಡು! ಇದು ನಿನಗೆ ಯೋಗ್ಯವಲ್ಲ! ಎಷ್ಟೇವಿಧದಲ್ಲಿ ಪರ್ಯಾಲೋಚಿಸಿ ನೋಡಿದರೂ, ವನವಾಸದಲ್ಲಿ ನನಗೆ ದೋಷಗಳೇ ಕಂಡುಬರುತ್ತಿರುವುವು" ಎಂದನು. ಮಹಾತ್ಮನಾದ ರಾಮನು ತನ್ನನ್ನು ಕಾಡಿಗೆ ಕರೆದುಕೊಂಡುಹೋಗುವುದಕ್ಕೆ ಸಮ್ಮತಿಸದಿರುವುದನ್ನು ನೋಡಿ, ಸೀತೆಯು ಆತನ ಮಾತನ್ನು ಲಕ್ಷೀಕರಿಸದೆ ವ್ಯಸನಯುಕ್ತಳಾಗಿ ನಿಂತಿದ್ದಳು ಇಲ್ಲಿಗೆ ಇಪ್ಪತ್ತೆಂಟನೆಯ ಸರ್ಗವು.

---

## ಸೀತೆಯು ತಾನೂ ಕಾಡಿಗೆ ಬಂದೇಬರುವೆನೆಂದು ರಾಮನನ್ನು ನಿರ್ಬಂಧಿಸಿದುದು.

ರಾಮನ ಮಾತನ್ನು ಕೇಳಿ ಸೀತೆಯು ಪರಮದುಃಖಿತಳಾಗಿ, ಕಣ್ಣಿನಲ್ಲಿ ನೀರನ್ನು ತುಂಬಿಕೊಂಡು, ಬಹುದೈನ್ಯದಿಂದ ಮೆಲ್ಲಗೆ ಒಂದಾನೊಂದು ಮಾತನ್ನಾಡುವಳು ‘‘ಎಲೈ ಆರ್ಯನೆ! ನೀನು ಕಾಡಿನಲ್ಲಿ ಯಾವಯಾವ ದೋಷಗಳನ್ನು ಹೇಳಿದೆಯೋ, ಅವೆಲ್ಲವೂ, ನಿನ್ನ ಪ್ರೇಮವನ್ನು ಮುಂದಿಟ್ಟುಕೊಂಡು ನಿನ್ನೊಡಗೂಡಿ ಬರುವ ನನಗೆ ಗುಣರೂಪಗಳಾಗಿಯೇ ಪರಿಣಮಿಸುವುವೇಹೊರತು ದೋಷಗಳಾಗುವುದಿಲ್ಲ. ಮೃಗಗಳಾಗಲಿ, ಸಿಂಹಗಳಾಗಲಿ, ಆನೆಗಳಾಗಲಿ, ಹುಲಿಗಳಾಗಲಿ, ಶರಭಗಳಾಗಲಿ, ಕಡವೆ ಮೊದಲಾದ ಮೃಗವಿಶೇಷಗಳಾಗಲಿ, ಪಕ್ಷಿಗಳಾಗಲಿ, ಇನ್ನೂ ವನಚರಗಳಾದ ಇತರಪ್ರಾಣಿಗಳಾಗಲಿ, ಹಿಂದೆ ಎಂದೂಕಾಣದ ನಿನ್ನ ದಿವ್ಯರೂಪವನ್ನು ಕಂಡೊಡನೆಯೇ ಅವೆಲ್ಲವೂ ಭಯಪಟ್ಟು ಓಡಿಹೋಗುವುವಲ್ಲದೆ, ನಮ್ಮಿದಿರಾಗಿ ಬಂದು, ಮೇಲೆ ಬೀಳುವುವೆಂದು ನೀನು ಹೇಳಿದಮಾತು ಒಪ್ಪತಕ್ಕುದಲ್ಲ. ಯಾರಾದರೇನು? ಭಯವುಂ

ಟಾದಾಗ ಭಯಪಡಬೇಕಾದದು ಸ್ವಾಭಾವಿಕವೇ ಅಲ್ಲವೆ? ನಿಮ್ಮ ಗುರುಜನವು ನಿನಗೆ ಕೊಟ್ಟಿರುವ ಆಜ್ಞೆಯು ನನಗೆ ಅನ್ವಯಿಸದಿರುವುದೆ? ಆದುದರಿಂದ ಆವರ ಆಜ್ಞೆಯಂತೆ ನಾನೂ ನಿನ್ನೊಡನೆ ಹೊರಡಬೇಕಾದುದೇನ್ಯಾಯವು! ನಾನು ನಡೆಸಬೇಕಾದ ಮೊದಲನೆಯ ಕೆಲಸವೇ ಅದು. ಅದು ತಪ್ಪಿದರೆ ಇಲ್ಲಿ ಪ್ರಾಣವನ್ನು ಬಿಡಬೇಕಾದುದು ಎರಡನೆಯ ಕೆಲಸವು? ಕಾಡಿನಲ್ಲಿ ಅನೇಕವಿಧವಾದ ಭಯವುಂಟೆಂದು ಹೇಳಿದೆಯಲ್ಲವೆ! ನೀನು ನನಗೆ ಬೆಂಬಲವಾಗಿರುವಾಗ, ದೇವದೇವನಾದ ಮಹೇಂದ್ರನೂಕೂಡ ನನ್ನನ್ನು ತಿರಸ್ಕರಿಸಿ ತನ್ನ ತೇಜಸ್ಸನ್ನು ಉಳಿಸಿಕೊಳ್ಳಲಾರನು. ಗಂಡನನ್ನಗಲಿದ ಹೆಂಗಸು ಲೋಕದಲ್ಲಿ ಎಂದಿಗೂ ಪ್ರಾಣವನ್ನು ಧರಿಸಿರಲಾರಳು. ಈ ವಿಷಯವನ್ನು ಕುರಿತು ನೀನೇ ನನಗೆ ಹಿಂದೆ ಅನೇಕನಿದರ್ಶನಗಳನ್ನು ತೋರಿಸಿ, ಅನೇಕವಿಧವಾಗಿ ಉಪದೇಶಿಸಿರುವೆಯಲ್ಲವೆ? ಅದು ಹಾಗಿರಲಿ! ಹಿಂದೆ ನಾನು ತಂದೆಯ ಮನೆಯಲ್ಲಿದ್ದಾಗಲೇ ನನಗೆ ಕೆಲವುದಿವಸಗಳವರೆಗೆ ವನವಾಸಪ್ರಾಪ್ತಿಯುಂಟೆಂದು ಜ್ಯೋತಿಷ್ಕರು ಹೇಳುತಿದ್ದುದನ್ನು ಕೇಳಿದ್ದೆನು. ಇದಲ್ಲದೆ ಸಾಮುದ್ರಿಕಲಕ್ಷಣವನ್ನು ಬಲ್ಲ ಬ್ರಾಹ್ಮಣರೂಕೂಡ, ಇದೇ ವಿಷಯವನ್ನು ಹೇಳಿದ್ದರು. ಅದುಮೊದಲುಗೊಂಡು ಯಾವಾಗಲೂ ನಾನು ವನಸಂಚಾರವು ಯಾವಾಗ ಪ್ರಾಪ್ತವಾಗುವುದೋ ಎಂದು ಎಷ್ಟೋ ಉತ್ಸಾಹದಿಂದ ನಿರೀಕ್ಷಿಸುತ್ತಿರುವೆನು. ಶಾಸ್ತ್ರಜ್ಞರ ಮಾತು ಎಂದಿಗೂ ಸುಳ್ಳಾಗಲಾರದು. ಹೇಗಿದ್ದರೂ ನಾನು ಕೆಲವುದಿನಗಳವರೆಗೆ ವನವಾಸವನ್ನು ಅನುಭವಿಸಿಯೇ ತೀರಬೇಕು. ಈ ದೈವಸಂಕಲ್ಪವನ್ನು ನೀನೂ ತಪ್ಪಿಸಲಾರೆಯಲ್ಲವೆ? ಹೀಗೆ ನಾನು ಕಾಡಿನಲ್ಲಿರಬೇಕಾದ ಕಾಲವನ್ನು ಈಗ ನಿನ್ನೊಡನೆಯೇ ಕಳೆದುಬಿಡುವುದುತ್ತಮವಲ್ಲವೆ? ಆಬ್ರಾಹ್ಮಣರ ಹೇಳಿಕೆಯೂ ಈಗಲೇ ಕಳೆದುಹೋಗಲಿ! ಈಗ ತಕ್ಕ ಅವಕಾಶವು ದೊರಕಿರುವುದು. ಆಬ್ರಾಹ್ಮಣರ ಮಾತು ಸತ್ಯವಾಗಲಿ! ನಾನು ಅನುಭವಿಸಬೇಕಾದ ವನವಾಸವನ್ನು ಬೇರೆವಿಧದಲ್ಲಿ ಕಳೆದುಕೊಳ್ಳುವುದಕ್ಕೆ ನನಗೆ ಅವಕಾಶವಿಲ್ಲ. ಅರಣ್ಯವಾಸದಲ್ಲಿ ಅನೇಕ ಕಷ್ಟಗಳುಂಟೆಂಬುದನ್ನು ನಾನೂ ಬಲ್ಲೆನು. ಇದರಲ್ಲಿ ಸಂದೇಹವಿಲ್ಲ. ಆದರೆ ಸ್ವಭಾವಭೀರುಗಳಾದವರಿಗೆಮಾತ್ರವೇ ಅವು ಸಂಭವಿಸುವುವೇಹೊರತು, ಮಹಾವೀರನಾದ ನಿನಗೆ ಸಂಭವಿಸಲಾರವು! ನನಗೆ ಮದುವೆಯಾಗುವುದಕ್ಕೆಮೊದಲು

ನಾನು ಕನ್ಯಾವಸ್ಥೆಯಲ್ಲಿ ತಂದೆಯ ಮನೆಯಲ್ಲಿದ್ದಾಗ, ಒಂದಾನೊಂದು ದಿನ ನನ್ನ ತಾಯಿಯಬಳಿಯಲ್ಲಿ ಕುಳಿತಿದ್ದೆನು. ಆಗ ಸದಾಚಾರಸಂಪನ್ನಳಾದ ತಾಪಸಸ್ತ್ರೀಯೊಬ್ಬಳು ಬಂದು ನನ್ನನ್ನು ನೋಡಿ "ಕೆಲವುಕಾಲದವರೆಗೆ ನೀನು ವನವಾಸವನ್ನನುಭವಿಸಬೇಕಾಗಿರುವುವು." ದೆಂದು ನನ್ನ ಮುಂದೆಯೇ ಹೇಳಿದ್ದಳು. ನಾನು ವಿವಾಹಿತಳಾಗಿ ಇಲ್ಲಿಗೆ ಬಂದಮೇಲೆಕೂಡ, ನಾವಿಬ್ಬರೂ ಗಂಗಾತೀರದಲ್ಲಿರುವ ತಪೋವನಗಳಲ್ಲಿದ್ದು ಬರಬೇಕೆಂದು ಆಗಾಗ ನಿನ್ನನ್ನು ನಿರ್ಬಂಧಿಸಿ ಪೀಡಿಸುತಿದ್ದೆನಲ್ಲವೆ? ನೀನೂ ನನ್ನಲ್ಲಿ ಪ್ರಸನ್ನನಾಗಿ ಆ ಕೋರಿಕೆಯನ್ನು ಈಡೇರಿಸಿಕೊಡುವುದಾಗಿ ಒಪ್ಪಿರುವೆಯಲ್ಲವೆ ! ವನವಾಸವೆಂಬುದನ್ನು ನಾನು ಒಂದು ದೊಡ್ಡಉತ್ಸವವೆಂದೇ ಎಣಿಸಿರುವೆನು. ನಿನಗೆ ಮಂಗಳವಾಗಲಿ! ನೀನು ಕಾಡಿನಲ್ಲಿರುವಾಗ ನಿನ್ನ ಪಾದಶುಶ್ರೂಷೆಯನ್ನು ಮಾಡುತ್ತಿರಬೇಕೆಂಬುದೇ ನನ್ನಮುಖ್ಯಾಭಿಲಾಷೆಯು. ನೀನೂ ಅಸೂಯಾದಿ ದುರ್ಗುಣಗಳಿಲ್ಲದೆ,ನಿರ್ಮಲವಾದ ಮನಸ್ಸುಳ್ಳವನಾಗಿರುವೆ. ಇಂತಹ ನಿನ್ನನ್ನು ಪ್ರೀತಿಪುರಸ್ಸರವಾಗಿ ಉಪಚರಿಸಿ, ನನ್ನ ಪಾಪಗಳೆಲ್ಲವನ್ನೂ ಹೋಗಲಾಡಿಸಿಕೊಳ್ಳಬೇಕೆಂದಿರುವೆನು. ಪತಿಯಾದ ನಿನ್ನನ್ನು ಹಿಂಬಾಲಿಸಿರಬೇಕಾದುದೇ ನನ್ನಧರ್ಮವು.ಪತಿಯಾದ ನೀನೇ ನನಗೆ ಪರದೈವವು!ಪರಲೋಕದಲ್ಲಿಯೂಕೂಡ ಎಡೆಬಿಡದೆ ನಿನ್ನನ್ನು ಸೇರಿರಬೇಕಂಬುದೇ ನನ್ನಮತವು.ಎಲೈ ಧೀಮಂತನೆ! "ಲೋಕದಲ್ಲಿ ಯಾವವಸ್ತ್ರೀಯು ತಂದೆತಾಯಿಗಳಿಂದ ಅವರವರ ವರ್ಣಾಶ್ರಮ ಧರ್ಮಗಳನ್ನನುಸರಿಸಿ ದಾನದಾರಾಪೂರ್ವಕವಾಗಿ ಮತ್ತೊಬ್ಬ ಪುರುಷನಿಗೆ ವಿವಾಹಮಾಡಿಕೊಡಲ್ಪಡುವಳೋ, ಅಂತಹ ಸ್ತ್ರೀಗೆ ಪರಲೋಕದಲ್ಲಿಯೂ ಆ ಪುರುಷನೇ ಪತಿಯಾಗಿರುವನು." ಎಂಬೀ ಶ್ರುತಿಪ್ರಮಾಣಸಿದ್ಧವಾದ ವಿಷಯವನ್ನು, ಯಶಸ್ವಿಗಳಾದ ಅನೇಕಬ್ರಾಹ್ಮಣರ ಮುಖದಿಂದ ಕೇಳಿರುವೆವಲ್ಲವೆ? ಹೀಗಿರುವಾಗ ನೀನು ಸದಾಚಾರಸಂಪನ್ನೆಯಾಗಿಯೂ, ಪತಿವ್ರತೆಯಾಗಿಯೂ, ಅಗ್ನಿಸಾಕ್ಷಿಕವಾಗಿ ವಿವಾಹಿತಳಾಗಿಯೂ ಇರುವ ನನ್ನನ್ನು ಯಾವಕಾರಣಕ್ಕಾಗಿ ಸಂಗಡ ಕರೆದುಕೊಂಡು ಹೋಗುವುದಿಲ್ಲವೆಂದು,ಹೇಳುವೆಯೋ ಕಾಣೆನು.ಎಲೈ ಕಕುತ್ಸ್ಥವಂಶಶಿಖಾಮಣಿಯೆ! ನಿನ್ನಲ್ಲಿ ಪರಮಭಕ್ತಿಯುಳ್ಳವಳಾಗಿ,ಪತಿವ್ರತೆಯಾಗಿ,ಸುಖದುಃಖಗಳಿಗೆ ಸಮ

ಭಾಗಿನಿಯಾಗಿಯೂ ಇರುವ ನನ್ನನ್ನು ಹೀಗೆ ದುಃಖದಲ್ಲಿರಿಸಿ ಬಿಟ್ಟುಹೋಗುವುದು ನಿನಗೆ ಉಚಿತವಲ್ಲ.ಆದುದರಿಂದ 'ನೀನು ನನ್ನನ್ನು ನಿನ್ನ ಸಂಗಡ ಕರೆದುಕೊಂಡು ಹೋಗಬೇಕಾದುದೇ ನ್ಯಾಯವು. ನಾನು ಹೀಗೆ ದುಃಖಿಸುತ್ತಿದ್ದರೂ ನೀನು ನನ್ನನ್ನು ಬಿಟ್ಟುಹೋಗುವುದಾದರೆ, ವಿಷದಿಂದಲಾಗಲಿ, ಅಗ್ನಿಯಿಂದಲಾಗಲಿ, ನೀರಿನಿಂದಲಾಗಲಿ ನನ್ನ ಪ್ರಾಣವನ್ನು ಕಳೆದುಕೊಳ್ಳುವೆನೇ ಹೊರತು ಕ್ಷಣಮಾತ್ರವೂ ಬದುಕಿರಲಾರೆನು" ಎಂದಳು. ಸೀತೆಯು ಹೀಗೆ ಅನೇಕವಿಧದಲ್ಲಿ ಪ್ರಾರ್ಥಿಸಿ ಕೇಳಿಕೊಳ್ಳುತಿದ್ದರೂ, ರಾಮನು ನಿರ್ಜನವಾದ ವನಕ್ಕೆ ಆಕೆಯನ್ನು ಕರೆದುಕೊಂಡು ಹೋಗುವುದಕ್ಕೆ ಸಮ್ಮತಿಸದೆ, ಆಕೆಯನ್ನು ಅನೇಕವಿಧದಲ್ಲಿ ನಿಷೇಧಿಸುತ್ತಲೇ ಇದ್ದನು. ಹೀಗೆ ರಾಮನು ತನ್ನ ಇಷ್ಟಕ್ಕೆ ವಿರೋಧವಾಗಿ ಹೇಳುತ್ತಿರುವುದನ್ನು ಕೇಳಿ, ಸೀತೆಯು ಬಹಳ ಚಿಂತೆಯನ್ನು ಹೊಂದಿ,ಸಂಕಟವನ್ನು ತಡೆಯಲಾರದೆ,ಬಿಸಬಿಸಿಯಾಗಿಕಣ್ಣೀರನ್ನು ಸುರಿಸುತ್ತಾ, ಆ ಕಣ್ಣೀರಿನಿಂದಲೇ ಭೂಪ್ರದೇಶವೆಲ್ಲವೂ ನೆನೆಯುವ ಹಾಗೆ ಮಾಡುತಿದ್ದಳು. ಹೀಗೆ ದುಃಖಿಸುತ್ತಿರುವ ಆ ಸೀತೆಯನ್ನು ನೋಡಿ ರಾಮನು,ಆಕೆಯ ಪ್ರಯತ್ನವನ್ನು ತಪ್ಪಿಸುವುದಕ್ಕಾಗಿ ಬಾರಿಬಾರಿಗೂ ಅನೇಕವಿಧದಲ್ಲಿ ಸಮಾಧಾನಪಡಿಸುತಿದ್ದನು. ಇಲ್ಲಿಗೆ ಇಪ್ಪತ್ತೊಂಬತ್ತನೆಯ ಸರ್ಗವು.

---

{ಸೀತೆಯು ತನ್ನನ್ನು ಕಾಡಿಗೆ ಕರೆದುಕೊಂಡು ಹೋಗದ ಕೋಪಕ್ಕಾಗಿ ರಾಮನನ್ನು ತಿರಸ್ಕರಿಸಿದುದು.}

ಜನಕರಾಜಪುತ್ರಿಯಾದ ಆಸೀತೆಯು, ರಾಮನು ತನಗೆ ಹೇಳುತಿದ್ದ ಸಮಾಧಾನವಾಕ್ಯಗಳೆಲ್ಲವನ್ನೂ ಕೇಳಿದರೂ, ತನ್ನ ದೃಢವಾದ ಉದ್ದೇಶವನ್ನು ಬಿಡದೆ, ಹೇಗಾದರೂ ಅವನೊಡನೆ ಪ್ರಯಾಣಮಾಡಬೇಕೆಂದು ನಿಶ್ಚಯಿಸಿಕೊಂಡು,ತನ್ನ ಪತಿಯಾದ ರಾಮನನ್ನು ನೋಡಿ ಪುನಃ ನಿರ್ಬಂಧಿಸತೊಡಗಿದಳು - ಆಗ ಆಕೆಯ ಮನಸ್ಸಿನಲ್ಲಿ ಉಂಟಾದ ಕೋಪಕ್ಕೂ, ದುಃಖಕ್ಕೂ ಪಾರವಿರಲಿಲ್ಲ. ಹೀಗೆ ಮಿತಿಮೀರಿದ ದುಃಖಕೋಪಗಳಿಂದಲೂ, ಪತಿಯಾದ ರಾಮನಲ್ಲಿ ತನಗಿರತಕ್ಕ ಸಲಿಗೆಯಿಂದಲೂ, ವಿಶೇಷವಾದ ಸ್ವಾತಂತ್ರ್ಯವನ್ನು ತೆಗೆದುಕೊಂಡು, ಪ್ರಣಯಪೂರ್ವಕವಾಗಿ ಆತನನ್ನು ತಿರಸ್ಕರಿಸುತ್ತಾ

*"ರಾಮಾ ! ನಿನ್ನಲ್ಲಿರತಕ್ಕ ಸಾರವೆಲ್ಲವೂ ದೇಹಸೌಂದರ್ಯವೊಂದೇಹೊರತು ಬೇರೊಂದೂ ಇಲ್ಲವೆಂದೇ ನನಗೆ ತೋರಿರುವುದು. ಲೋಕವೆಲ್ಲವೂ ಈ ಸೌಂ

---

*ಇದಕ್ಕೆ "ಕಿಂತ್ವಾಮನ್ಯತ ವೈದೇಹಃ ಪಿತಾ ಮೇ ಮಿಥಿಲಾಧಿಪಃ। ರಾಮ ಜಾಮಾತರಂ ಪ್ರಾಪ್ಯ ಸ್ತ್ರಿಯಂ ಪುರುಷವಿಗ್ರಹಂ" ಎಂದು ಮೂಲವು. ಇದರೊಳಗಿನ ವಿಶೇಷಾರ್ಥಗಳೇನೆಂದರೆ :—

(ರಾಮ) ಎಲೈ ರಾಮನೆ! ನೀನು ಸೌಂದರ್ಯಾತಿಶಯದಿಂದಲೇ ಜನಗಳನ್ನು ಮೋಹಗೊಳಿಸುವವನು. ಹೆಸರನ್ನು ಕೇಳಿದಾಗಲೇ ನಿನ್ನ ಸ್ಥಿತಿಯು ಚೆನ್ನಾಗಿ ವ್ಯಕ್ತವಾಗುವುದು. ಹೊರಕ್ಕೆ ಕಾಣಿಸುವ ನಿನ್ನ ರೂಪವಿಶೇಷವನ್ನುಮಾತ್ರ ನೋಡಿ, ನಿನ್ನಲ್ಲಿಸಾರವೇನೂ ಇಲ್ಲದುದನ್ನೂ ತಿಳಿದು, ವಸಿಷ್ಠನು ನಿನಗೆ "ರಾಮ" ನೆಂದು ಹೆಸರಿಟ್ಟುಬಿಟ್ಟನು. ಆ ವಿಧವಾದ ಅಂತಸ್ಸಾರವುಳ್ಳವನೆಂದು ಸೂಚಿಸುವುದಕ್ಕಾಗಿಯೇ ನಿನ್ನ ತಮ್ಮನಿಗೆ ಶತ್ರುಘ್ನನೆಂದು ಹೆಸರಿಟ್ಟಿರುವನು. ಆದುದರಿಂದಲೇ "ರಾಮ, ಇತ್ಯಭಿರಾಮೇಣ ವಪುಷಾ ತಸ್ಯ ಚೋದಿತಃ। ನಾಮಧೇಯಂ ಗುರುಶ್ಚಕ್ರೇ ಜಗತ್ಪ್ರಥಮಮಂಗಳಂ॥"ಎಂಬುದಾಗಿ,ನಿನ್ನ ದೇಹಸೌಂದರ್ಯಕ್ಕಾಗಿಯೇ ಈ ಹೆಸರು ನಿನಗೆ ಇಡಲ್ಪಟ್ಟಿರುವುದೆಂದು ವ್ಯಕ್ತವಾಗಿದೆ.ಆದರೆ ಜಗತ್ತಿಗೆಲ್ಲಾ ಮಂಗಳಕರನೆಂದು ಹೇಳಲ್ಪಟ್ಟಿದ್ದರೂ, ನೀನು ಆ ಜಗತ್ತಿನಲ್ಲಿ ಅಡಗಿರುವ ನನಗೆಮಾತ್ರ ಅಮಂಗಳಕರನಾಗಿ ಪರಿಣಮಿಸಬಹುದೇ? ಮತ್ತು (ರಾಮ)"ಸಹಸ್ರನಾಮತತ್ತುಲ್ಯಂ ರಾಮನಾಮ"ಎಂಬಂತೆ, ವಿಷ್ಣುವಿನ ಸಹಸ್ರನಾಮಗಳಿಗೂ ರಾಮನಾಮವೊಂದೇ ಸಮಾನವೆಂದೂ, ಅವುಗಳ ಶಕ್ತಿಯೆಲ್ಲವೂ"ರಾಮ"ಎಂಬ ಈ ಎರಡಕ್ಷರಗಳಲ್ಲಿಯೇ ಅಡಗಿರುವುದೆಂದೂ ಹೇಳುವರು.ಹೀಗಿದ್ದರೂ ಆಹೆಸರುಳ್ಳನಿನ್ನನ್ನು ಕೈಹಿಡಿದ ನನಗೇ ಈ ಅನಸ್ವಯುಂಟಾಗಬಹುದೆ? (ವೈದೇಹಃ) ವಿದೇಹವಂಶದಲ್ಲಿ ಹುಟ್ಟಿದವನು. "ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ" ಎಂಬುದಾಗಿ ಕರ್ಮದಿಂದಲೇ ಜನಕಾದಿಗಳು ಸಿದ್ಧಿಯನ್ನು ಹೊಂದಿರುವರಲ್ಲವೆ? ಹೀಗೆ ಜನಕವಂಶೀಯರು ಕರ್ಮಕಲಾಪಗಳನ್ನು ಬಿಡದಂತೆಯೇ ಮೋಕ್ಷಸಿದ್ಧಿಗೆ ಪ್ರಯತ್ನಿಸುವರಾದುದರಿಂದಲೂ, ಆ ಕರ್ಮಗಳನ್ನು ಸಹಧರ್ಮಚಾರಿಣಿಯರಾದ ಪತ್ನಿಯರೊಡನೆಯೇ ನಡೆಸುವರಾದುದರಿಂದಲೂ,ಅವರು ಪತ್ನೀವಿಯೋಗವನ್ನು ಎಂದಿಗೂ ಅನುಭವಿಸಿದವರಲ್ಲವು.ಇಂತವರಿಗೆ ಈ ನಿನ್ನ ಮಾರ್ಗವು ಎಂದಿಗೂ ಸರಿಬೀಳಲಾರದು. ಮತ್ತು (ವೈದೇಹಃ) ವಿದೇಹವಂಶದಲ್ಲಿ ಹುಟ್ಟಿದುದು ಮೊದಲು ಯಾರೂ ದುಃಖವೆಂಬುದನ್ನೇ ಕಂಡವರಲ್ಲ. ಈಗ ನಾನೊಬ್ಬಳು ಅಲ್ಲಿ ಹುಟ್ಟಿದುದರಿಂದ ನನ್ನ ಈ ಅವಸ್ಥೆಯನ್ನುನೋಡಿ ಅವರು ದುಃಖಪಡಬೇಕಾಗುವುದಲ್ಲವೆ ? (ಮಿಥಿಲಾಧಿಪಃ) ನೀನು ನನ್ನನ್ನಗಲಿ ಹೋದರೆ, ನನ್ನ ತಂದೆಯು ಮಾತ್ರ

ದರ್ಶ್ಯಕ್ಕೆ ಮರುಳಾಗಿರುವುದೇಹೊರತು, ನಿನ್ನಲ್ಲಿ ಸ್ವಲ್ಪವೂ ಪೌರುಷವಿಲ್ಲ! ವಿ

---

ವೇ ದುಃಖಿಃಸುವನೆಂದು ತಿಳಿಯಬೇಡ! ಮಿಥಿಲಾಪಟ್ಟಣದ ಜನವೆಲ್ಲವೂ ತಮ್ಮ ಪ್ರಭುವಿನ ದುಃಖವನ್ನು ನೋಡಿ ಸಹಿಸಲಾರದೆ, ಅದಕ್ಕಿಂತಲೂ ಹೆಚ್ಚಾಗಿ ದು:ಖಿಸದೆಬಿಡದು. ಇಷ್ಟು ರಾಜಭಕ್ತಿಯುಳ್ಳ ಪ್ರಜಾಸಮುದಾಯವನ್ನೊಳಕೊಂಡ ಮಿಥಿಲೆಗೆ ಪ್ರಭುವಾದ ನನ್ನ ತಂದೆಯನ್ನು ದುಃಖಪಡಿಸುವುದರಿಂದ,ಅವನ ರಾಜ್ಯವೇ ದುಃಖಿಸುವದಕ್ಕೆಕಾರಣವಾಗುವುದು. ಅಥವಾ(ಮಿಥಿಲಾಧಿಪಃ)''ಒಂದು ದೊಡ್ಡ ದೇಶವನ್ನೇ ತನ್ನ ಭುಜಬಲದಿಂದಧರಿಸಿರುವಾತನು,ಕೈಹಿಡಿದ ಹೆಂಡತಿಯನ್ನು ಕಾಪಾಡಲಾರದೆ ಇತರರ ಕೈಗೆಕೊಟ್ಟು ಹೊದ ನಿನ್ನನ್ನು ನೋಡಿ ನಗದಿರುವನೆ?" ಎಂದು ಭಾವವು. ಇಂತವನಾದ (ಮೇ ಪಿತಾ) ನನ್ನ ತಂದೆಯಾದಜನಕನು,(ಸ್ತ್ರಿಯಂಪುರುಷವಿಗ್ರಹಂ)ಹೊರಕ್ಕೆ ಪುರುಷಾಕಾರದಿಂದಕೂಡಿ ಸ್ವಭಾವದಿಂದ ಸ್ತ್ರೀಯಾಗಿರುವ ನಿನ್ನನ್ನು, ಕಿರೀಟಪೀತಾಂಬರಾದ್ಯಲಂಕರಣಗಳನ್ನು, ನೋಡಿ ಪುರುಷನೆಂದೂಹಿಸಬೇಕೇಹೊರತು, ಅವುಗಳನ್ನು ತೆಗೆದುಬಿಟ್ಟಾಗ ನಿನ್ನನ್ನು ಹೆಂಗಸೆಂದು ಹೇಳುವುದಕ್ಕೆ ಏನೂ ಸಂದೇಹವಿಲ್ಲ.ಮುಂದೆ ಕಾಡಿನಲ್ಲಿ ಆ ಕಿರೀಟಪೀತಾಂಬರಗಳಿಗೂ ಅವಕಾಶವಿಲ್ಲ. ಅವು ಪುರುಷಚಿಹ್ನಗಳಾದುದರಿಂದ, ಅವುಗಳನ್ನು ನೋಡಿಯಾದರೂ ಕಾಡುಜನರು, ನಿನ್ನನ್ನು ಇದಿರಿಸುವುದಕ್ಕೆ ಭಯಪಟ್ಟು ಹಿಂಜರಿಯುವರೆಂದೆಣಿಸಬಹುದಾಗಿತ್ತು, ಅದರ ಬಲವೂ ತಪ್ಪಿಹೋಯಿತೆಂದು ಭಾವವು. (ಪುರುಷವಿಗ್ರಹಂ)ನೀನು ಹೊರಗೆ ಪುರುಷಾಕಾರವನ್ನು ತೋರಿಸುತಿದ್ದುದರಿಂದಲೇ ಇಷ್ಟನರ್ಥಗಳಿಗೆ ಕಾರಣವಾಯಿತೆಂದರ್ಥವು (ಪುರುಷವಿಗ್ರಹಂ)ಪೈರುಗಳ ನಡುವೆ ಹಕ್ಕಿಗಳನ್ನುಬೆದರಿಸುವುದಕ್ಕಾಗಿ ಮಾಡಿಟ್ಟ ಬೊಂಬೆಯ ಆಕೃತಿಯಂತೆ,ನಿನ್ನ ಆಕಾರವುಮಾತ್ರ ಪುರುಷಾಕಾರವೇ ಹೊರತು, ಒಳಗೆ ಶತ್ರುಗಳನ್ನು ನಿಗ್ರಹಿಸತಕ್ಕಸಾರವಿಲ್ಲವೆಂದು ಭಾವವು.ಅಥವಾ(ಪುರುಷವಿಗ್ರಹಂ)ಒಳಗೆ ಸ್ತ್ರೀರೂಪವೂ,ಹೊರಕ್ಕೆ ಪುರುಷಸ್ವರೂಪವೂಇರುವುದರಿಂದ,ಸ್ತ್ರೀತ್ವಪುರುಷತ್ವಗಳೆರಡೂ ಕಲೆತಿರುವುದನ್ನು ಮೂರನೆಯ ಪ್ರಕೃತಿಯೆಂದು (ಷಂಡನೆಂದು)ಜನಗಳು ಹೇಳುವರು. ಪತಿಯಾದ ನಿನ್ನೊಡನೆಯೇ ನಾನು ಹಾಗೆ ಹೇಳಬಾರದೆಂಬ ಭಯದಿಂದ ಹಾಗೆ ಹೇಳದೆ, ''ಹೆಂಗಸೂ ಗಂಡಸೂ ಕಲೆತು"ದೆಂದು ಬೇರೆ ಪರ್ಯಾಯವಾಗಿ ಹೇಳುವೆನೆಂದು ಭಾವವು. ಇಂತಹ(ಜಾಮಾತರಂ)ಅಳಿಯನನ್ನು''ಜಾಮಾತಾ ದಶಮೋಗ್ರಹ:"ಎಂಬಂತೆ ಹೆಣ್ಣುಮಕ್ಕಳನ್ನು ಹೆತ್ತವರಿಗೆ ನವಗ್ರಹಗಳ ಬಾಧೆಯೇ ಅಲ್ಲದೆ ಅಳಿಯನೆಂಬ ಹತ್ತನೇ ಗ್ರಹವೊಂದೂ ಸೇರಿ, ಸುತ್ತುಮುತ್ತಲೂ ಅವರನ್ನು ಪೀಡಿಸುತ್ತಿರುವುದೆಂದು ಹೇಳುವ ಲೋಕವಾರ್ತೆಯುಈಗ ನಿನ್ನಲ್ಲಿ ಅನುಭಸಿದ್ಧವಾಯಿತೆಂದುಭಾವವು. ಇಂತಹ ಅಳಿಯನನ್ನು (ಪ್ರಾಪ್ಯ) ಹೊಂದಿ(ತ್ವಾ)ಹೀಗೆ ಒಳಗೆ ಸಾರವೇನೂ

ಹೇಹವಂಶದಲ್ಲಿ ಹುಟ್ಟಿ, ಮಿಥಿಲಾಧಿಪತಿಯೆನಿಸಿಕೊಂಡಿರುವ ನನ್ನ ತಂದೆಯು,

---

ಇಲ್ಲದ ನಿನ್ನನ್ನು (ಕಿಂ ಅಮನ್ಯತ?) ಏನೆಂದು ತಿಳಿಯುವನು ? ಎಂದರೆ, ನಿನಗೆ ರಾಜ ಧರ್ಮವು ತಿಳಿಯದೆಂದೂ ಹೇಳುವುದಕ್ಕಿಲ್ಲ! ಗುರುಕುಲವಾಸವನ್ನು ಮಾಡಿ ತಿಳಿಯದವ ನೆಂದೂ ಹೇಳುವುದಕ್ಕಿಲ್ಲ! ಕುಲಪರಂಪರಾಗತವಾದ ಆಚಾರಸಂಪ್ರದಾಯಗಳನ್ನು ತಿಳಿಯದವನೆಂದೂ ಹೇಳುವುದಕ್ಕಿಲ್ಲ! ಕುಲಸ್ತ್ರೀಯರಿಗೆ ಪತಿಯೊಡಗೂಡಿರಬೇಕಾದುದೇ ಅತ್ಯವಶ್ಯಕವೆಂಬ ಧರ್ಮವನ್ನು ನೀನು ತಿಳಿಯದವನೆಂದೂ ಹೇಳುವುದಕ್ಕಿಲ್ಲ! ನೀನು ಏಕ ಪತ್ನೀವ್ರತದವನಲ್ಲವೆಂದೂ ಹೇಳುವುದಕ್ಕಿಲ್ಲ! ಈ ಅನುಷ್ಠಾನಗಳೆಲ್ಲವೂ ನಿನ್ನಲ್ಲಿ ತುಂಬಿ ದ್ದರೂ, ಹೀಗೆ ನೀನು ಅನುಚಿತವಾದ ಮಾರ್ಗಕ್ಕೆ ಪ್ರಯತ್ನಿಸಿ ಆತನನ್ನು ಸಂಕಟದಲ್ಲಿ ರಿಸಬೇಕಾದರೆ, ಆತನು ನಿನ್ನಲ್ಲಿ ಯಾವ ಅಭಿಪ್ರಾಯವನ್ನು ಇಡುವನೋ ತಿಳಿಯದೆಂದು ಭಾವವು. ಮತ್ತು. (ಕಿಂತ್ವಾಮನ್ಯತ) ನಿನ್ನನ್ನು ಅವನು ಏನೆಂದು ತಿಳಿಯುವನು? ಮೊ ದಲುನನ್ನ ತಂದೆಯು ನನ್ನನ್ನು ನಿನ್ನ ಕೈಗೊಪ್ಪಿಸುವಾಗ "ಇಯಂ ಸೀತಾ ಮಮ ಸುತಾ" ಇತ್ಯಾದಿವಾಕ್ಯಗಳನ್ನು ಹೇಳಿದಾಗಲೇ ಆತನ ಅಭಿಪ್ರಾಯಗಳೆಲ್ಲವೂ ನಿನಗೆ ತಿಳಿ ದಿರಬಹುದು. ಅಲ್ಲಿ "ಪಾಣಿಂ ಗೃಹ್ಣೀಷ್ವಪಾಣಿನಾ" ಎಂದು ಹೇಳಿದುದರ ಅಭಿಪ್ರಾ ಯವೇನೆಂದು ನೀನು ತಿಳಿಯೆಯಾ? ವಿವಾಹಕಾಲದಲ್ಲಿ ವಧೂವರರು ಒಬ್ಬರಿಗೊಬ್ಬರು ಕೈಹಿಡಿಯಬೇಕೆಂಬುದು ಲೋಕವಿದಿತವಾಗಿಯೇ ಇರುವುದಲ್ಲವೇ? ಹೀಗಿದ್ದರೂ ನನ್ನ ತಂದೆಯು ಪುನಃ ನಿನ್ನನ್ನು ಕುರಿತು ಕೈಯಿಂದ ಕೈಯನ್ನು ಹಿಡಿಯೆಂದು ಹೇಳಿದುದೇ ಕೆ? ಈ ತ್ರೈಲೋಕ್ಯವೂ ಬಂದು ಏಕಕಾಲದಲ್ಲಿ ಮರೆಹೊಕ್ಕರೂ ಕಾಪಾಡುವಷ್ಟು ವೀ ರ್ಯವುಳ್ಳ ಈ ನಿನ್ನ ತೋಳುಗಳನ್ನು ನೋಡಿ, ಇವುಗಳ ವಶಕ್ಕೇ ನನ್ನನ್ನೊಪ್ಪಿಸಿದರೆ ನಿರ ಪಾಯವಾಗಿ ರಕ್ಷಿಸುವುವೆಂಬ ಆಶೋತ್ತರದಿಂದಲೇ ಆ ಮಾತನ್ನು ಬಾಯಿಂದ ಹೇಳಿ, ನನ್ನನ್ನೊಪ್ಪಿಸಿರುವನು, ಹೀಗಿರುವಾಗ ಇಷ್ಟು ವ್ಯಸನಾವಸ್ಥೆಯಲ್ಲಿರುವ ನನ್ನನ್ನು ನೀನು ನೋಡಿದಮೇಲೆ, ಸಂಗಡಕರೆದುಕೊಂಡು ಹೋಗುವುದು ಹಾಗಿರಲಿ! ಈ ನಿನ್ನತೋಳುಗ ಳೆರಡೂ ಬಲಾತ್ಕಾರದಿಂದ ನನ್ನನ್ನು ಹಿಡಿದು ಎತ್ತಿಕೊಂಡು ಹೋಗಬೇಕಾದುದೇ ನ್ಯಾ ಯವಲ್ಲವೆ?ಈ ಅಭಿಪ್ರಾಯದಿಂದಲೇ ನನ್ನ ತಂದೆಯು ಹಿಂದೆ ನಿನ್ನನ್ನು ಕುರಿತು ಕೈ ಯಿಂದಲೇ ಹಿಡಿಯೆಂದು ಹೇಳಿರುವನೆಂದು ಭಾವವು. (ತನಿಶ್ಲೋಕಿ).

ಅಥವಾ(ಮೇಪಿತಾ ತ್ವಾಂ ಕಿಮಮನ್ಯತ) ನನ್ನ ತಂದೆಯು ನಿನಗೆ ನನ್ನನ್ನು ಕೊಡು ವಾಗ ನಿನ್ನನ್ನು ಏನೆಂದು ತಿಳಿದುಕೊಂಡನೋ ಕಾಣೆನು.ನಿಜವಾಗಿ ನೀನು ಪುರುಷವೇಷ ಧಾರಿಯಾದ ಸ್ತ್ರೀಯೆಂಬುದನ್ನು ಅವನು ತಿಳಿದಿದ್ದರೆ,ನನ್ನನ್ನು ನಿನಗೆ ಕೊಡುತ್ತಲೇ ಇರ ಲಿಲ್ಲವೆಂದೂ ಭಾವವು. ಅಥವಾ, "ಸ ಏವ ವಾಸುದೇವೋಯಂ ಸಾಕ್ಷಾತ್ಪುರುಷಉಚ್ಯತೇ।

ಕೈಹಿಡಿದ ಹೆಂಡತಿಯನ್ನೇ ಕಾಪಾಡಲಾರದ ನಿನ್ನ ವಿಷಯದಲ್ಲಿ ಏನೆಂದು ಅಭಿ

---

ಸ್ತ್ರೀಪ್ರಾಯಮೇತತ್ಸರ್ವಂ ಜಗದ್ಬ್ರಹ್ಮಪುರಸ್ಸರಂ॥" ಆ ಮಹಾವಿಷ್ಣುವೊಬ್ಬನೇ ಸಾಕ್ಷಾತ್ಪುರುಷನೇಹೊರತು, ಬ್ರಹ್ಮನೇ ಮೊದಲಾದ ಬೇರೆ ಪ್ರಪಂಚವೆಲ್ಲವೂ ಸ್ತ್ರೀಪ್ರಾಯವಾದುದೆಂಬ ವಿಷ್ಣು ಪುರಾಣವಚನಾನುಸಾರವಾಗಿ, ರಾಮಾ! ನನ್ನ ತಂದೆಯು ನಿನ್ನನ್ನು ಅಳಿಯನನ್ನಾಗಿ ಪಡೆದು, (ಪುರುಷವಿಗ್ರಹಂ) ಪುರುಷಾಕಾರವುಳ್ಳ ಸಮಸ್ತ ಲೋಕವನ್ನೂ (ಸ್ತ್ರಿಯಂ) ಸ್ತ್ರೀಪ್ರಾಯವನ್ನಾಗಿ (ಕಿಂಅಮನ್ಯತ) ಏತಕ್ಕೋಸ್ಕರ ತಿಳಿದುಕೊಂಡನು ? ವಿಷ್ಣುದೇವಾವತಾರವುಳ್ಳ ನಿನ್ನನ್ನು ಅಳಿಯವನ್ನಾಗಿ ಪಡೆದುದರಿಂದ ನೀನೊಬ್ಬನೇ ಪುರುಷನೆಂದೂ, ಇತರರೆಲ್ಲರೂ ಸ್ತ್ರೀಯರೆಂದೂ ತಿಳಿದೇ ನನ್ನ ತಂದೆಯು ನನ್ನನ್ನು ನಿನ್ನ ಕೈಗೊಪ್ಪಿಸಿದಹಾಗಿದೆ. ನಿನ್ನ ನಿಜಸ್ಥಿತಿಯನ್ನು ತಿಳಿಯದೆ ಹೀಗೆ ಭ್ರಮೆಗೊಂಡು ಕೊಟ್ಟುಬಿಟ್ಟನೇ ಹೊರತು ಬೇರೆಯಲ್ಲವೆಂದು ಭಾವವು.

ಅಥವಾ, (ರಾಮಜಾಽಮಾತರಂ ಪ್ರಾಪ್ಯಸ್ತ್ರಿಯಂ ಪುರುಷವಿಗ್ರಹಂ) ಎಂಬಲ್ಲಿ ರಾಮಜ + ಅಮಾತರಂ + ಪ್ರಾಪ್ಯ + ಸ್ತ್ರಿಯಂ ಪುರುಷ + ವಿಗ್ರಹಂ" ಎಂದು ಪದಭೇದವನ್ನು ಮಾಡಬಹುದು. ಆಗ (ರಾಮಜ)ಲೋಕರಂಜನಾರ್ಥವಾಗಿ ಅವತರಿಸಿದ (ಪುರುಷ) ಎಲೈ ಪರಮಪುರುಷನೆ! (ಅಮಾತರಂ) ನಿನಗೆ ತಾಯಿಯಲ್ಲದ (ಸ್ತ್ರಿಯಂ)ಯಾವಳೋ ಒಬ್ಬಸ್ತ್ರೀಯನ್ನು, ಎಂದರೆ, ಸವತಿತಾಯಿಯಾದ ಕೈಕೇಯಿಯನ್ನು (ಪ್ರಾಪ್ಯ) ಉದ್ದೇಶಿಸಿ, (ವಿಗ್ರಹಂ) ಕಲಹವನ್ನು, (ಅಮನ್ಯತ ಕಿಂ)ತಿಳಿದಿದ್ದನೋ ಏನು""ತಿಳಿಯಲಿಲ್ಲವೆಂದು ಭಾವವು.ಲೋಕರಂಜನೆಗಾಗಿ ಲೀಲಾರ್ಥವಾಗಿ ಅವತರಿಸಿರುವ ಪರಮಪುರುಷನಾದ ನಿನಗೆ ಕೇವಲಸ್ತ್ರೀಮಾತ್ರಳಾದ ಕೈಕೇಯಿಯಲ್ಲಿ ವೈಮನಸ್ಯವುಂಟಾಗಿ, ಇಷ್ಟು ಅನರ್ಥಗಳಿಗೆ ಕಾರಣವಾಗುವುದೆಂದು ನನ್ನ ತಂದೆಗೆ ಮೊದಲು ತಿಳಿಯದೇ ಹೋದುದರಿಂದಲೇ ನನ್ನನ್ನು ನಿನಗೆ ಕೊಟ್ಟುಬಿಟ್ಟನೆಂದು ಭಾವವು.

ಅಥವಾ (ಪುರುಷವಿಗ್ರಹಂ)ಪುರುಷರನ್ನು ವಿಶೇಷವಾಗಿ ಪರಿಗ್ರಹಿಸತಕ್ಕ, ಎಂದರೆ, ಭಕ್ತಜನರನ್ನು ವಿಶೇಷವಾಗಿ ಆದರಿಸತಕ್ಕ (ರಾಮಜಾಮಾತರಂ) ಲೋಕರಂಜಕನಾದ ಅಳಿಯನನ್ನು (ತ್ವಾ)ನಿನ್ನನ್ನು, (ಪ್ರಾಪ್ಯ)ಹೊಂದಿ, ನನ್ನ ತಂದೆಯು (ಸ್ತ್ರಿಯಂ) ತನ್ನ ಹೆಂಡತಿಯನ್ನೂಕೂಡ,ಇಲ್ಲಿ ಸ್ತ್ರೀಶಬ್ದವು ಇತರರಿಗೂ ಉಪಲಕ್ಷಣವೆಂದು ಗ್ರಹಿಸಬೇಕು.ತನ್ನ ಪುತ್ರಮಿತ್ರಕಳತ್ರಾದಿಗಳೆಲ್ಲವನ್ನೂ, ಮತ್ತು ಆಮುಷ್ಮಿಕಭೋಗೋಪಕರಣಾದಿಗಳನ್ನೂ(ಅಮನ್ಯತಕಿಂ)ಲಕ್ಷ್ಯಕ್ಕೆ ತಂದನೇ ಏನು? ಆನಂದರೂಪನಾದ ಮತ್ತು ಭಕ್ತಪಾಲಕನಾದ ನೀನು ಅಳಿಯನಾಗಿ ಬಂದುದಕ್ಕಾಗಿ,ಅತ್ಯಂತಸಂತೋಷಹೊಂದಿ,ಐಹಿಕಸುಖಸಾಧನಗಳೆಲ್ಲವನ್ನೂ ತುಚ್ಛವಾಗಿ ಎಣಿಸಿ, ಪರಮಾನಂದಪೂರ್ಣನಾಗಿದ್ದನಲ್ಲವೆ ? ಹೀಗೆ ಸರ್ವಾನಂದಕರನಾದ ನೀನು ನನಗೇಕೆ ಹೀಗೆ ದುಃಖಕರನಾಗುವೆ?ಎಂದು ಭಾವವು.

ಪ್ರಾಯಪಡುವನು? ಪುರುಷವೇಷವನ್ನು ಹಾಕಿಕೊಂಡು ಬಂದ ಯಾವಳೋ ಒಬ್ಬ ಹೆಂಗಸು, ತನ್ನ ಮಗಳಾದ ನನ್ನನ್ನು ಕೈಹಿಡಿದು ಮದಿವೆಮಾಡಿಕೊಂಡು ಹೋದ"ಳೆಂದೇ ತಿಳಿದುಕೊಳ್ಳುವನೇಹೊರತು, ನೀನೊಬ್ಬಗಂಡಸೆಂದೇ ಎಣಿಸಲಾರನಲ್ಲವೆ? ಹೀಗೆ ನಿನ್ನಂತಹ ಅಳಿಯನು ಸಿಕ್ಕಿದಮೇಲೆ ಆತನ ಮನಸ್ಸಿನಲ್ಲಿ ಏನಭಿಪ್ರಾಯವುಂಟಾಗಬಹುದು? ಅಯ್ಯೋ!*ಈ ಲೋಕವೆಲ್ಲವೂ ನಿನ್ನಲ್ಲಿಯಾವುದೋ ಒಂದು ದಿವ್ಯತೇಜಸ್ಸಿರುವುದೆಂದು ಭ್ರಮೆಗೊಂಡಿರುವುದು. ಹಾಗಿದ್ದರೆ ಸೂರ್ಯನ ತೇಜಸ್ಸಿನಂತೆ ಹೊರಕ್ಕೆ ಕಾಣಿಸದಿರುವುದೆ? ಎಷ್ಟೋ ಅಕಾರ್ಯಗಳನ್ನು ಮಾಡಿಯಾದರೂ ಕೈಹಿಡಿದ ಹೆಂಡತಿಯನ್ನು ಚೆನ್ನಾಗಿ ಪೋಷಿಸಬೇಕೆಂದು ಮನುವಚನವಿಲ್ಲವೆ? ಹೀಗಿರುವಾಗ ನನ್ನನ್ನು ಕರದುಕೊಂಡುಹೋಗುವುದೇ ಅಕಾರ್ಯವೆಂದೆಣಿಸಿ ನೀನು ವ್ಯಸನಪಡುತ್ತಿರುವೆಯಾ ? ವಿರಾಗ್ರೇಸರನೆನಿಸಿಕೊಂಡು, ಕಾಲಾಗ್ನಿಗೆ ಸಮವಾದ ಕೋಪವುಳ್ಳ ನಿನಗೆ, ಅಂಜಿಕೆಯೆಂಬುದು ಹೇಗುಂಟಾಯಿತು ? ಮತ್ತೊಬ್ಬರನ್ನು ಮನಸ್ಸಿನಲ್ಲಿಯೂ ಎಣಿಸದೆ, ನಿನ್ನೊಬ್ಬನನ್ನೇ ನಂಬಿ, ಅನಾಥೆಯಾಗಿರುವ ನನ್ನನ್ನು ಏಕಾಕಿನಿಯಾಗಿರುವಂತೆ ಇಲ್ಲಿಬಿಟ್ಟು ಹೋಗಬೇಕೆಂದೆಣಿಸಿರುವುದಕ್ಕೆ ಕಾರಣವೇನೋ ತಿಳಿಯಲಿಲ್ಲ !

---

* ಇದಕ್ಕೆ "ಅನೃತಂ ಬತ ಲೋಕೋಯಮಜ್ಞಾನಾದ್ಯದ್ಧಿ ವಕ್ಷ್ಯತಿ । ತೇಜೋ ನಾಸ್ತಿಪರಂ ರಾಮೇ ತಪತೀವ ದಿವಾಕರೇ ॥"ಎಂಬುದು ಮೂಲವು. ಇದರ ವಿಶೇಷಾರ್ಥವೇನೆಂದರೆ:—(ಅಯಂ ಲೋಕಃ)ಈ ಲೋಕವು,(ಯತ್)ನಿನ್ನಲ್ಲಿ ದಿವ್ಯತೇಜಸ್ಸಿರುವುದೆಂಬ ಯಾವ ಮಾತನ್ನು, (ವಕ್ಷ್ಯತಿ) ಹೇಳುವುದೋ, ಅದು, (ಅಜ್ಞಾನಾತ್) ಅವರ ಅಜ್ಞಾನದಿಂದ, ಅನೃತಂಬತ (ಅಬದ್ಧವಲ್ಲವೆ) ತಪತಿ ದಿವಾಕರೇ ಇವ ಜ್ವಲಿಸುತ್ತಿರುವ ಸೂರ್ಯನಲ್ಲಿರುವಂತೆ, "ರಾಮನಲ್ಲಿ ಅತಿಶಯವಾದ ತೇಜಸ್ಸಿಲ್ಲವು" ಎಂದು ಸೀತೆಯು ರಾಮನಲ್ಲಿ ದಿವ್ಯತೇಜಸ್ಸಿರುವುದೆಂದು ಜನಗಳಾಡುವ ಮಾತನ್ನು ತಾನೇ ನಿರಸನಮಾಡಿ ಅದಿಲ್ಲವೆಂದು ನಿರ್ಧರಿಸಿದುದಾಗಿ ಗ್ರಹಿಸಬೇಕು. ಅಥವಾ, (ಅಯಂ ಲೋಕಃ) ಈ ಲೋಕವು,(ತಪತಿ ದಿವಾಕರ ಇವ ರಾಮೇ ಪರಂ ತೇಜೋ ನಾಸ್ತಿ) ಜ್ವಲಿಸುತ್ತಿರುವ ಸೂರ್ಯನಲ್ಲಿರುವಂತೆ ದಿವ್ಯತೇಜಸ್ಸು ರಾಮನಲ್ಲಿಲ್ಲವು. ಎಂದು(ಯದ್ವಕ್ಷ್ಯತಿ) ಹೇಳುವುದು ಯಾವುದುಂಟೋ ಅದು, (ಅನೃತಂ) ಅಬದ್ಧವು. ಅವನಲ್ಲಿ ಇದ್ದೇ ಇರುವುದೆಂದು ಭಾವವು. ಇದರಿಂದ ಸೀತೆಯು ಲೋಕವಾರ್ತೆಯನ್ನೂ ನಿರಾಕರಿಸಿ ರಾಮನಲ್ಲಿ ತೇಜಸ್ಸಿರುವುದೆಂದು ಸ್ಥಾಪಿಸಿದಂತಾಯಿತು. ಹೀಗೆ ಎರಡುವಿಧವಾದ ಅರ್ಥವೂ ಇಲ್ಲಿ ಸೂಚಿತವಾಗುವುದು.

ದ್ಯುಮತ್ಸೇನನ ಮಗನಾದ ಸತ್ಯವಂತನನ್ನು ತ್ರಿಕರಣಶುದ್ಧಿಯಿಂದ ಅನುಸರಿಸಿ, ಆತನ ಶುಶ್ರೂಷೆಯನ್ನೇ ವ್ರತವಾಗಿ ಉಳ್ಳ ಸಾವಿತ್ರಿಯಂತೆ, ನಾನೂ ನಿನ್ನನ್ನನುಸರಿಸಿ ನಡೆಯತಕ್ಕವಳೆಂದೇ ತಿಳಿ! ಎಲೈ ಪಾಪರಹಿತನೆ! ತಮ್ಮ ಕುಲವನ್ನೇ ಕೆಡಿಸತಕ್ಕ ಇತರನೀಚಸ್ತ್ರೀಯರಂತೆ ನನ್ನನ್ನೆಣಿಸಬೇಡ! ನಾನು ಯಾವಾಗಲೂ ಮನಸ್ಸಿನಲ್ಲಿಯಾದರೂ ನಿನ್ನನ್ನುಹೊರತು ಇತರರನ್ನು ನೆನೆಯತಕ್ಕವಳಲ್ಲ. ಆದುದರಿಂದ ನಿನ್ನನ್ನು ಬಿಟ್ಟರೆ ನನಗೆ ಬೇರೆ ದಿಕ್ಕಿಲ್ಲವೆಂಬುದನ್ನರಿಯೆಯಾ? ನಿನ್ನೊಡನೆ ನಾನು ಬಂದೇ ಬರುವೆನು. ದೃಢಪತಿವ್ರತೆಯೆಂದು ನನ್ನನ್ನು ನೀನು ಚೆನ್ನಾಗಿ ತಿಳಿದಿದ್ದರೂ, ಸಂಗಡಕರೆದುಕೊಂಡು ಹೋಗುವುದಿಲ್ಲವೆಂದು ಹೇಳುವೆಯಲ್ಲವೆ! ಇರಲಿ! ರಾಮಾ! * ನಾನು ಕುಮಾರಾವಸ್ಥೆಯಲ್ಲಿಯೇ ನಿನ್ನನ್ನು ಕೈಹಿಡಿದೆನು! ಬಹುಕಾಲದಿಂದ ನಿನ್ನ ಸಂಗಡಲೇ ವಾಸಮಾಡುತ್ತಿರುವೆನು! ನಾನು ಪತಿವ್ರತೆಯೆಂಬುದನ್ನೂ ನೀನು ಚೆನ್ನಾಗಿ ಬಲ್ಲೆ! ನಾನೊಬ್ಬಳೇ ನಿನಗೆ ಧರ್ಮಪತ್ನಿಯೆಂಬುದು ಲೋಕವಿದಿತವಾಗಿದೆ. ಹೀಗಿರುವಾಗಲೂ ಪತ್ನಿಯನ್ನು ಇತರರಿಗೊಪ್ಪಿಸಿ, ಅದರಿಂದ ತನ್ನ ಜೀವನವನ್ನು ನಡೆಸಿಕೊಳ್ಳುವ ಶೈಲೂಷನಂತೆ, ನನ್ನನ್ನು ಮತ್ತೊಬ್ಬರ ವಶದಲ್ಲಿ ಒಪ್ಪಿಸಬೇಕೆಂದಿರುವೆಯಾ? ನೀನು ಯಾರಿಗೆ ಹಿತವನ್ನು ಮಾಡುತ್ತಿರಬೇ

* ಇದಕ್ಕೆ "ಸ್ವಯಂ ತು ಭಾರ್ಯಾಂ ಕೌಮಾರೀಂ ಚಿರಮಧ್ಯುಷಿತಾಂ ಸತೀಂ। ಶೈಲೂಷ ಇವ ಮಾಂ ರಾಮ ಪರೇಭ್ಯೋ ದಾತುಮಿಚ್ಛಸಿ" ಎಂದು ಮೂಲವು. ರಾಮನು ಭರತನಿಗೆ ರಾಜ್ಯವನ್ನು ಬಿಟ್ಟುಕೊಡುವುದು ಸೀತೆಗೆ ಅಭಿಮತವಿಲ್ಲದುದರಿಂದ ಆಕೆಯು ಈ ಮಾತನ್ನು ಹೇಳಿದುದಾಗಿಯೂ ಅರ್ಥಾಂತರವನ್ನು ಹೇಳಬಹುದು. ಹೇಗೆಂದರೆ:—(ರಾಮ) ಎಲೈ ರಾಮನೆ! (ಭಾರ್ಯಾಂ) ಭರಿಸುವುದಕ್ಕೆ ಯೋಗ್ಯವಾಗಿಯೂ, (ಸತೀಂ) ಅನಶ್ವರವಾಗಿಯೂ, (ಚಿರಮಧ್ಯುಷಿತಾಂ) ಬಹುಕಾಲದಿಂದ ವಂಶಪರಂಪರೆಯಾಗಿ ಬಂದುದಾಗಿಯೂ, (ಕೌಮಾರೀಂ) ಕುಮಾರವಯಸ್ಕನಾದ ನಿನಗೆ ಅನುಭವಿಸುವುದಕ್ಕೆ ಯೋಗ್ಯವಾಗಿಯೂ, ಎಂದರೆ, ಯೌವರಾಜ್ಯರೂಪವಾಗಿಯೂ ಇರುವ (ಮಾಂ)ರಾಜ್ಯಲಕ್ಷ್ಮಿಯನ್ನು, (ಶೈಲೂಷ ಇವ) ನಾಟಕದಲ್ಲಿ ಕೇವಲ ವೇಷಧಾರಿಗಳಾಗಿ ಬಂದ ನಟರಂತೆ, (ಪರೇಭ್ಯಃ) ಭರತಾದಿಗಳಿಗೆ (ದಾತುಮಿಚ್ಛಸಿ ಕಿಂ) ಕೊಡಲಪೇಕ್ಷಿಸುವೆಯಾ? ಇದು ಎಂದಿಗೂ ನಿನ್ನಂತವನಿಗೆ ತಕ್ಕುದಲ್ಲವೆಂದು ಮಹೇಶ್ವರತೀರ್ಥವ್ಯಾಖ್ಯಾನಭಾವವು.

ಕೆಂದು ಹೇಳಿದೆಯೋ, ಯಾರ ಶುಶ್ರೂಷೆಗೋಸ್ಕರ ನನ್ನನ್ನು ಇಲ್ಲಿಯೇ ನಿಲ್ಲಿಸುವೆಯೋ, ಆ ಮಾತೆಯರಿಗೆ ನೀನೇ ಅನವರತವೂ ಶುಶ್ರೂಷೆಯನ್ನು ಮಾಡುತ್ತಾ, ಅವರು ಹೇಳಿದ ಕೆಲಸಗಳನ್ನು ಮಾಡಿಕೊಂಡು ಏಕಿಲ್ಲಿರಬಾರದು? (ಯಾವಳಿಗೆ ಇದುವರೆಗೂ ನೀನು ಅನೇಕಹಿತವಾದಗಳನ್ನು ಹೇಳುತಿದ್ದೆಯೋ, ಯಾವಳಿಗಾಗಿ ನೀನು ಇಷ್ಟು ಕಷ್ಟಪಡುತ್ತಿರುವೆಯೋ, ಅಂತಹ ನನಗೆ ನೀನು ಇದೊಂದಾವರ್ತಿಯಾದರೂ ವಶ್ಯನಾಗಿದ್ದು, ನಾನು ಹೇಳಿದ ಮಾತನ್ನು ನಡೆಸಿ ಕೊಡಬಾರದೆ ? ಯಾವನಿಗೆ ಹಿತವನ್ನೇ ಕೋರುತ್ತಾ ಅನುಕೂಲಳಾಗಿರಬೇಕೆಂದು ನನಗೆ ಬುದ್ಧಿವಾದವನ್ನು ಹೇಳಿದೆಯೋ, ಯಾವನ ಅಭಿಷೇಕಪ್ರಯತ್ನಕ್ಕಾಗಿ ನೀನು ಇಷ್ಟು ಶ್ರಮಪಟ್ಟು ತಂದೆಯಿಂದ ನಿಗ್ರಹಿಸಲ್ಪಟ್ಟಿರುವೆಯೋ, ಅಂತಹ ಭರತನ ಆಜ್ಞಾನುಸಾರವಾಗಿ ನೀನೇ ಇಲ್ಲಿದ್ದು ಅವನ ಶುಶ್ರೂಷೆಯನ್ನು ನಡೆಸುತ್ತಿರಬಾರದೆ?) ಆಗ ನಿನ್ನನ್ನೇ ಅನುಸರಿಸಿ ನಾನೂ ಕೆಲಸಗಳನ್ನು ಮಾಡುತ್ತಿರುವೆನು. ನೀನು ಕಾಡಿಗೆ ಹೊರಟರೆ ನಾನೂ ಹೊರಟುಬರುವೆನು. ಪತಿಯನ್ನನುಸರಿಸಿ ನಡೆಯಬೇಕಾದುದೇ ಪತ್ನಿಯರ ಧರ್ಮವು. ನನಗೆಮಾತ್ರ ನೀನು ಆ ಶುಶ್ರೂಷೆಯನ್ನು ಮಾಡುತ್ತಿರೆಂದು ಹೇಳುವುದುಚಿತವಲ್ಲ. ಎಲೈ ರಾಮನೇ ! ನಿನಗೆ ತಿಳಿಯದುದೊಂದೂ ಇಲ್ಲ. ತಪೋವನದಲ್ಲಿಯಾಗಲಿ, ಘೋರಾರಣ್ಯದಲ್ಲಿಯಾಗಲಿ, ಸ್ವರ್ಗಲೋಕದಲ್ಲಿಯಾಗಲಿ, ನಾನು ನಿನ್ನೊಡನೆಯೇ ಇದ್ದು ಕೊಂಡು, ಆಯಾಸುಖಗಳನ್ನು ಅನುಭವಿಸಬೇಕೇಹೊರತು, ಅಗಲಿರುವುದುಚಿತವಲ್ಲ. ನೀನಿಲ್ಲದೆ ನನಗೆ ಯಾವುದೂ ಬೇಡ. ನಿನ್ನೊಡನೆ ನಾನು ಬರುತಿದ್ದರೆ, ನನಗೆ ಯಾವುದೊಂದು ಮಾರ್ಗಶ್ರಮವೂ ತೋರಲಾರದು. ನಾನು ನಿನ್ನ ಸಂಗಡ ಸೇರಿರುವವರೆಗೂ, ಅತ್ಯುತ್ತಮಗಳಾದ ಉದ್ಯಾನದಲ್ಲಿ ವಿಹರಿಸುತ್ತಿರುವಂತೆಯೂ, ಪುಷ್ಪದ ಹಾಸಿಗೆಗಳಲ್ಲಿ ಮಲಗಿರುವಂತೆಯೂ, ಯಾವಾಗಲೂ ಸುಖಕರವಾಗಿಯೇ ಇರುವುದೇಹೊರತು, ಸ್ವಲ್ಪವೂ ಕಷ್ಟವು ತೋರಲಾರದು. ನಿನ್ನೊಡನೆ ನಾನು ಬರುತಿದ್ದರೆ, ದಾರಿಯಲ್ಲಿ ದರ್ಭೆ, ನೊದೆ, ಮತ್ತು ಇತರಮುಳ್ಳುಗಿಡಗಳು ಎಷ್ಟೇ ತುಂಬಿದ್ದರೂ ಅವೆಲ್ಲವೂ ನನಗೆ ಹತ್ತಿಯಂತೆಯೂ, ಮೃದುವಾದ ಜಿಂಕೆಯ ಚರ್ಮದಂತೆಯೂ,

ಸುಖಕರವಾಗಿರುವುವೇಹೊರತು ಕಷ್ಟವನ್ನುಂಟುಮಾಡಲಾರವು. ಎಲೆ ನಾಥಾ ! ಕಾಡಿನಲ್ಲಿ ಬಿರುಗಾಳಿಯು ಬೀಸುತ್ತಿರುವಾಗ ಹಾರಿಬಂದು ನನ್ನ ಮೇಲೆ ಬೀಳುವ ಕಲ್ಲುಮಣ್ಣುಗಳೆಲ್ಲವೂ, ನಿನ್ನೊಡನೆ ಬರುವಾಗ ನನಗೆ ಸ ರ್ವೋತ್ತಮವಾದ ಚಂದನದಂತೆ ಸುಖಕರವಾಗಿರುವುದೇ ಹೊರತು ಕಷ್ಟ ಕರವಾಗಿ ತೋರುವುದಿಲ್ಲ. ನೀನು ಕಾಡಿನಲ್ಲಿರುವಾಗ ಅಲ್ಲಿರತಕ್ಕ ಎಳಗರಿಕೆ ಹುಲ್ಲುಗಳಮೇಲೆ ಮಲಗುವುದಕ್ಕಿಂತಲೂ, ಇಲ್ಲಿ ಚಿತ್ರಕಂಬಳಿಗಳಿಂದಲೂ, ದುಪ್ಪಟಿ ಮೊದಲಾದ ಮೇಲು ಹೊದ್ದಿಕೆಗಳಿಂದಲೂ ಕೂಡಿದ ಹಾಸಿಗೆಯು ಹೆಚ್ಚು ಸುಖವನ್ನುಂಟುಮಾಡುವುವೆಂದೆಣಿಸುವೆಯಾ ! ಎಂದಿಗೂ ಇಲ್ಲ ! ಕಾಡಿನಲ್ಲಿ ಅಲ್ಲಲ್ಲಿ ಸಿಕ್ಕಬಹುದಾದ ಸೊಪ್ಪುಸದೆಗಳಾಗಲಿ, ಹಣ್ಣುಹಂ ಪಲುಗಳಾಗಲಿ, ಗಡ್ಡೆಗೆಣಸುಗಳಾಗಲಿ, ಅವು ಸ್ವಲ್ಪವಾಗಿದ್ದರೂ ಅಥವಾ ಹೆಚ್ಚಾಗಿದ್ದರೂ, ನೀನು ನಿನ್ನ ಕೈಯಿಂದ ನನಗೆ ಕೊಟ್ಟರೆ, ಅದೇ ನನಗೆ ಅಮೃತರಸದಂತಿರುವುದು. ಕಾಡಿನಲ್ಲಿ ಆಯಾಋತುಧರ್ಮಗಳಿಗೆ ತಕ್ಕಂತೆ ಬೆಳೆಯುವ ಹಣ್ಣುಗಳನ್ನು ತಿಂದು, ಹೂಗಳನ್ನುಮುಡಿದು, ಸ್ವೇಚ್ಛೆಯಾಗಿ ವಿಹರಿಸುತಿದ್ದರೆ, ನನಗೆ ಎಷ್ಟುದಿನವಾದರೂ ತಂದೆತಾಯಿಗಳ ಸ್ಮರಣೆಯಾ ಗಲಿ, ಮನೆಯ ಸ್ಮರಣೆಯಾಗಲಿ ಉಂಟಾಗುವುದೇ ಇಲ್ಲ. ನೀನು ನನ್ನನ್ನು ಕಾಡಿಗೆ ಕರೆದುಕೊಂಡುಹೋದಮಾತ್ರದಲ್ಲಿ ನನ್ನಿಂದ ನಿನಗೆ ಯಾವವಿಧ ದಲ್ಲಿಯೂ ಕಷ್ಟವಾಗಲಿ, ದುಃಖವಾಗಲಿ ಉಂಟಾಗುವುದೆಂದೆಣಿಸಬೇಡ ನನ್ನನ್ನು ಪೋಷಿಸುವುದಕ್ಕೂ ನೀನು ಅಲ್ಲಿ ಶ್ರಮಪಡಬೇಕಾದುದಿಲ್ಲ. ನಾನು ನಿನ್ನನ್ನು ಯಾವವಿಧದಲ್ಲಿಯೂ ನಿರ್ಬಂಧಿಸಿ ಕೊರಗಿಸುವುದಿಲ್ಲ. ಎಲೆ ನಾಥನೆ ಹೆಚ್ಚಾಗಿ ಹೇಳದುದರಿಂದೇನು? ನಿನ್ನೊಡಗೂಡಿರುವುದೇ ನನಗೆ ಸ್ವರ್ಗವು! ನಿನ್ನನ್ನಗಲಿರುವುದೇ ನನಗೆ ನರಕವು. ಇದನ್ನು ನೀನು ಚೆನ್ನಾಗಿ ತಿಳಿ. ನನಗೆ ನಿನ್ನಲ್ಲಿರತಕ್ಕ ಪ್ರೀತಿಯು ನಮ್ಮಿಬ್ಬರನ್ನೂ ಕ್ಷಣಮಾತ್ರವಾದರೂ ಅಗಲಿಸ ದಷ್ಟು ಮಿತಿಮೀರಿಹೋಗಿರುವುದು. ಆದುದರಿಂದ ನನ್ನನ್ನು ಬಿಟ್ಟುಹೋ ಗದೆ ಸಂಗಡಲೇ ಕರೆದುಕೊಂಡುಹೋಗು. ನಿನ್ನಲ್ಲಿರುವ ಅನುರಾಗವಿಶೇಷ ದಿಂದ ವನವಾಸದ ಕಷ್ಟಕ್ಕೂ ಹೆದರದೆ ಮನಸ್ಸನ್ನು ದೃಢಪಡಿಸಿಕೊಂಡಿ ರುವ ನನ್ನನ್ನು, ನೀನು ಇಲ್ಲಿ ಬಿಟ್ಟುಹೋದುದೇ ಆದರೆ, ಈಗ ನಿನ್ನಿದಿರಾಗಿಯೇ

ನಾನು ವಿಷವನ್ನು ಕುಡಿದುಬಿಡುವೆನೇಹೊರತು, ನಿಮಿಷಮಾತ್ರವಾದರೂ ಶತ್ರುಗಳ ವಶದಲ್ಲಿರಲಾರೆನು. ಎಲೈ ಪ್ರಿಯನೆ! ಒಂದುವೇಳೆ ನಾನು ಈಗ ಸಾಯದಿದ್ದರೂ, ನೀನು ಹೊರಟುಹೋದಮೇಲೆಯಾದರೂ ಆ ಪ್ರಾಣವು ನನ್ನಲ್ಲಿ ನಿಂತಿರಲಾರದು. ಆದುದರಿಂದ ಆಮೇಲೆ ಸಂಕಟಪಟ್ಟು ಕೊರಗಿ ಸಾಯುವುದಕ್ಕಿಂತಲೂ ನಿನ್ನಿದಿರಿಗೆ ಪ್ರಾಣಬಿಡುವುದೇ ಸುಖವಲ್ಲವೆ ? ಎಲೆ ರಾಮನೆ! ನಿನ್ನ ವಿರಹದುಃಖವನ್ನು ನಿಮಿಷಮಾತ್ರವಾದರೂ ಸಹಿಸಿಕೊಂಡಿರುವುದು ನನ್ನಿಂದ ಸಾಧ್ಯವಲ್ಲ. ಹೀಗಿರುವಾಗ, ಮೊದಲು ಹತ್ತುವರ್ಷಗಳು! ಅದರಮೇಲೆ ಇನ್ನೂ ಮೂರುವರ್ಷಗಳು ! ! ಅಷ್ಟೂ ಸಾಲದೆ ಮತ್ತೊಂದುವರ್ಷಕಾಲವು! ! ! ಅಬ್ಬಾ ! ಈ ಹದಿನಾಲ್ಕುವರ್ಷಗಳನ್ನೂ ದುಃಖದಿಂದಲೇ ಕಳೆಯಬೇಕೆಂದರೆ ನನ್ನಿಂದ ಹೇಗೆತಾನೇ ಸಾಧ್ಯವು?" ಎಂದಳು. ಹೀಗೆ ಸೀತೆಯು ಮಿತಿಮೀರಿದ ದುಃಖದಿಂದ ಬೆಂದು, ನಾನಾವಿಧದಲ್ಲಿ ಪ್ರಲಾಪಿಸಿ, ಬಹುದೀನಳಾಗಿ ಮುಂದೆಬಂದು, ಪತಿಯಾದ ರಾಮನನ್ನು ಬಿಗಿಯಾಗಿ ಎರಡುತೋಳುಗಳಿಂದಲೂ ಅಪ್ಪಿಕೊಂಡು, ಗಟ್ಟಿಯಾಗಿ ಅಳುವುದಕ್ಕಾರಂಭಿಸಿದಳು. ವಿಷದಿಗ್ಧವಾದ ಬಾಣದಿಂದ ಹೊಡೆಯಲ್ಪಟ್ಟ ಹೆಣ್ಣಾನೆಯಂತೆ, ಆಸೀತೆಯು ರಾಮನ ಮಾತುಗಳಿಂದ ಬಹಳವಾಗಿ ನೊಂದು, ಅರಣಿಶಿಲೆಗಳನ್ನು ಉಜ್ಜಿದಾಗ ಅವುಗಳೊಳಗೆ ಅಡಗಿರತಕ್ಕ ಬೆಂಕಿಯು ಹೊರಕ್ಕೆಹೊರಟುಬರುವಂತೆ ಬಹುಕಾಲದಿಂದ ಅವಳು ತಡೆದಿಟ್ಟುಕೊಂಡಿದ್ದ ಬಿಸಿಬಿಸಿಯಾದ ಕಣ್ಣೀರು, ಧಾರೆಧಾರೆಯಾಗಿ ಸುರಿಯಲಾರಂಭಿಸಿತು. ಹೀಗೆ ವ್ಯಸನದಿಂದ ಎಡೆಬಿಡದೆ ಸುರಿಯುತ್ತಿರುವ ಕಣ್ಣೀರಿನ ಧಾರೆಯು, ಸ್ಫಟಿಕದಂತೆ ಸ್ವಚ್ಛವಾಗಿ ಕಾಣುತ್ತ, ಕಮಲದಿಂದ ಸುರಿಯುತ್ತಿರುವ ಮಕರಂದಧಾರೆಯಂತೆ ಶೋಭಿಸುತಿತ್ತು. ಮತ್ತು ವಿಸ್ತಾರವಾದ ಕಣ್ಣುಗಳಿಂದ ಕೂಡಿ, ಕಳಂಕವಿಲ್ಲದ ಚಂದ್ರನಂತೆ ಕಾಣುತಿದ್ದ ಆಕೆಯ ಮುಖವು,ವ್ಯಸನಸಂತಾಪದಿಂದ ವಿಶೇಷವಾಗಿ ಕಂದಿ, ನೀರಿನಿಂದ ಕಿತ್ತುಹಾಕಿದ ತಾವರೆಹೂವಿನಂತೆ ಕಾಣುತಿತ್ತು. ಆಗ ರಾಮನು ವ್ಯಸನದಿಂದ ಪ್ರಜ್ಞೆತಪ್ಪಿದವಳಂತಿರುವ ಆ ಸೀತೆಯನ್ನು ಎರಡುತೋಳುಗಳಿಂದಲೂ ಅಪ್ಪಿಕೊಂಡು, ಆಕೆಯನ್ನು ಸಮಾಧಾನಪಡಿಸುತ್ತಾ, "ಎಲೆ ದೇವಿ ! ನನ್ನನ್ನು ವ್ಯಸನದಲ್ಲಿರಿಸಿ ನನಗೆ

ಸ್ವರ್ಗಸುಖವಾದರೂ ರುಚಿಸಲಾರದು. ಈ ಪ್ರಪಂಚದ ಸೃಷ್ಟಿಸ್ಥಿತಿಸಂಹಾರಗಳಿಗೆಲ್ಲಕ್ಕೂ ಕಾರಣಭೂತನಾದ ಸಾಕ್ಷಾನ್ಮಹಾವಿಷ್ಣುವಿಗೆ ಹೇಗೋ ಹಾಗೆ ನನಗೆ ಭಯವೆಂಬುದೆಲ್ಲಿಯದು? ನಾನು ಯಾವಕಾಲಕ್ಕೂ ಎಲ್ಲಿಯೂ ಭಯಪಡತಕ್ಕವನಲ್ಲ. ಹೀಗೆ ನಿನ್ನನ್ನು ನಾನೂ ಅಗಲಿರಲಾರೆನಾದರೂ, ನಿರ್ಭಯನಾಗಿದ್ದರೂ, ಎಲ್ಲಿದ್ದರೂ ನಾನು ನಿನ್ನನ್ನು ಪೋಷಿಸಬಲ್ಲವನಾಗಿದ್ದರೂ, ಇದುವರೆಗೆ ಈ ನಿನ್ನ ಅಭಿಪ್ರಾಯಗಳೆಲ್ಲವೂ ನನಗೆ ಚೆನ್ನಾಗಿ ತಿಳಿಯದಿದ್ದುದರಿಂದ. ನಿನ್ನನ್ನು ಕಾಡಿಗೆ ಕರೆದುಕೊಂಡು ಹೋಗುವುದಕ್ಕೆ ನಾನು ಇಷ್ಟಪಡಲಿಲ್ಲ, ಎಲೆ ಮೈಥಿಲಿ! ಈಗ ನಿನಗೆ ನಿಜವಾದ ತತ್ವವನ್ನು ಹೇಳುವೆನು ಕೇಳು. ನೀನು ಈ ಲೋಕದಲ್ಲಿ ಸೃಷ್ಟಿಸಲ್ಪಟ್ಟಿರುವುದೇ ನನ್ನೊಡನೆ ವನವಾಸವನ್ನನುಭವಿಸುವುದಕ್ಕಾಗಿಯೇ ಹೊರತು ಬೇರೆಯಲ್ಲ, ಇದನ್ನು ನಾನೂ ಚೆನ್ನಾಗಿ ಬಲ್ಲೆನು. ಧೀರನಾದ ಪುರುಷನು ಎಷ್ಟೇಕಷ್ಟದಶೆಯಲ್ಲಿಯೂ,ತನ್ನ ಕೀರ್ತಿಯನ್ನು ಬಿಡದಿರುವಂತೆ, ನಿನ್ನನ್ನು ನಾನು ಎಂದಿಗೂ ಬಿಟ್ಟಿರಲಾರೆನು. ಸುವರ್ಚಲೆಯು ಸೂರ್ಯನನ್ನು ಹಿಂಬಾಲಿಸಿಯೇ ಇರುವಳಲ್ಲವೆ?ನಮ್ಮವಂಶಕ್ಕೆ ಮೂಲಪುರುಷನಾದ ಆ ಸೂರ್ಯನ ಧರ್ಮವನ್ನೇ ಆಶ್ರಯಿಸಿ, ನಿನ್ನನ್ನು ಕರೆದುಕೊಂಡು ಹೋಗಬೇಕಾದುದೇ ನನಗೆಧರ್ಮವು.ಹೇಗಾದರೂ ನಾನು ಕಾಡಿಗೆ ಹೋಗದೆ ನಿಲ್ಲುವುದಕ್ಕಿಲ್ಲ. ಈ ವಿಷಯದಲ್ಲಿ ತಂದೆಯಾಜ್ಞೆಯು ಮಾತ್ರವೇ ಅಲ್ಲ. ನಾನೂ ಅದನ್ನುನಡೆಸುವುದಾಗಿನನ್ನ ಬಾಯಿಂದಲೇ ಸತ್ಯಮಾಡಿಕೊಟ್ಟಿರುವೆನು. ತಂದೆಯಾಜ್ಞೆ, ನನ್ನಪ್ರತಿಜ್ಞೆ, ಇವೆರಡೇ ನನ್ನನ್ನು ಕಾಡಿಗೆ ಎಳೆದುಕೊಂಡು ಹೋಗುತ್ತಿರುವುವು. ಆದುದರಿಂದ ಹೋಗದಿರುವುದಕ್ಕಿಲ್ಲ. ತಾಯಿತಂದೆಗಳ ವಿಷಯದಲ್ಲಿ ವಿಧೇಯನಾಗಿರಬೇಕೆಂಬುದೇ ಮನುಷ್ಯನು ಅನುಸರಿಸಬೇಕಾದಮೊದಲನೆಯಧರ್ಮವು. ಇದಕ್ಕಿಂತಲೂ ಮೇಲಾದ ಧರ್ಮವಿಲ್ಲ. ಪಿತೃವಾಕ್ಯಪರಿಪಾಲನವೆಂಬ ವ್ರತಕ್ಕಾಗಿ ಬದ್ಧದೀಕ್ಷನಾಗಿ ನಿಂತಿರುವ ನಾನೇ, ಆ ಧರ್ಮವನ್ನತಿಕ್ರಮಿಸಿಬಿಟ್ಟಮೇಲೆ, ಬದುಕಿರುವುದು ಹೇಗೆ? ಸಮಸ್ತಪುರುಷಾರ್ಥಗಳಿಗೂ ಸಾಧನವಾದ ದೇವತಾರಾಧನೆಗಿಂತಲೂ ತಂದೆತಾಯಿಗಳನ್ನು ಪೂಜಿಸುವುದರಲ್ಲಿ ವಿಶೇಷವೇನೆಂದು ನೀನು ಕೇಳಬಹುದು. ತಂದೆ,ತಾಯಿ,ಗುರು, ಈ ಮೂವರೂ ಪ್ರತ್ಯಕ್ಷದೇವತೆಗಳೇಹೊರತು

ಬೇರೆಯಲ್ಲ. ಪ್ರತ್ಯಕ್ಷವಾಗಿ ನಮಗಾಜ್ಞೆಯನ್ನು ಕೊಟ್ಟು, ನಮ್ಮ ಆರಾಧನೆ ಗಳಿಗೆ ವಶ್ಯರಾಗಿರುವ ಇವರನ್ನು ಬಿಟ್ಟು, ನಮಗೆ ವಶ್ಯರಲ್ಲದ ಇತರ ದೇವತೆಗ ಳನ್ನು ಎಷ್ಟುವಿಧದಲ್ಲಿ ಪೂಜಿಸಿದರೇನು ? ಇವರಿಗೆ ಶುಶ್ರೂಷೆಯನ್ನು ಮಾಡು ತಿದ್ದರೆ, ಮೂರುಲೋಕದಲ್ಲಿರುವ ದೇವತೆಗಳೆಲ್ಲರನ್ನೂ ಆರಾಧಿಸಿದಷ್ಟು ಫಲ ವುಂಟು. ಇವರಂತೆ ಪವಿತ್ರವಾದ ದೈವವು ಬೇರೊಂದಿಲ್ಲ. ಎಲೆ ಸೀತೆ! ಪಿತೃ ಶುಶ್ರೂಷೆಯೆಂಬುದು ಎಷ್ಟುಮಟ್ಟಿಗೆ ಪರಲೋಕಸಾಧನವಾಗಿರುವುದೋ, ಅಷ್ಟುಮಟ್ಟಿಗೆ ಸತ್ಯವಾಗಲಿ, ದಾನಮಾನಗಳಾಗಲಿ, ಉಚಿತದಕ್ಷಿಣೆಯುಳ್ಳ ಯಾಗಗಳಾಗಲಿ ಪರಲೋಕಸಾಧಕಗಳಾಗಿರುವುದಿಲ್ಲ. ಸ್ವರ್ಗಗಳಾಗಲಿ, ಧನಧಾನ್ಯಸಮೃದ್ಧಿಯಾಗಲಿ,ವಿದ್ಯೆಗಳಾಗಲಿ, ಪುತ್ರಸಂತಾನವಾಗಲಿ, ಸೌಖ್ಯ ಗಳಾಗಲಿ, ಬೇರೆಯಾವ ವಿಧವಾದ ಕಾರ್ಯಸಿದ್ಧಿಯಾಗಲಿ, ಕ್ರಮವಾಗಿ ನಡೆ ಸಿದ ಗುರುಶುಶ್ರೂಷೆಯೊಂದರಿಂದಲೇ ಲಭಿಸುವುವು. ಆದರಿಂದ ಸಾಧ್ಯ ವಾಗದುದೊಂದೂ ಇಲ್ಲವು; ತಾಯಿತಂದೆಗಳನ್ನು ಎಡೆಬಿಡದೆ ಭಕ್ತಿಯಿಂದ ಉಪಚರಿಸುತ್ತಿರುವ ಮಹಾತ್ಮರು, ದೇವಲೋಕವನ್ನೂ, ಗಂಧರ್ವಲೋಕವ ನ್ನೂ,ಗೋಲೋಕವನ್ನೂ, ಇತರ ಪುಣ್ಯಲೋಕಗಳನ್ನೂ ಕ್ರಮವಾಗಿ ಹೊಂ ದಿ, ಕೊನೆಗೆ ಬ್ರಹ್ಮಲೋಕವನ್ನೂ ಸೇರುವರು. ಇಷ್ಟು ಸ್ವತಂತ್ರನಾದ ತಂದೆಯು, ಸತ್ಯಧರ್ಮಗಳಿಗೆ ದೃಢವಾಗಿ ಕಟ್ಟುಬಿದ್ದು, ನನಗೆ ಆಜ್ಞೆಯನ್ನು ಮಾಡಿದಮೇಲೆ ಅದನು! ನಾನು ನಡೆಸದಿರಬಹುದೆ ? ಪಿತೃವಾಕ್ಯಪರಿಪಾಲ ನವೆಂಬುದೇ ಸನಾತನಧರ್ಮವು. ಎಲೆ ಸೀತೆ ! ಇದುವರೆಗೆ ನಿನ್ನ ದೃಢವಾ ದ ಅಭಿಪ್ರಾಯವು ನನಗೆ ತಿಳಿಯದುದರಿಂದ, ನಿನ್ನನ್ನು ನಾನು ದಂಡಕಾರ ಣ್ಯಕ್ಕೆ ಕರೆದುಕೊಂಡು ಹೋಗಬೇಕೆಂದು ನಿಶ್ಚಯಿಸಿರಲಿಲ್ಲ. ಈಗ ನಿನ್ನ ದೃಢಸಂಕಲ್ಪವು ನನಗೆ ಚೆನ್ನಾಗಿ ತಿಳಿಯಿತು. ಇನ್ನು ನಿನ್ನನ್ನು ನಾನು ಬಿಟ್ಟು ಹೋಗುವುದಿಲ್ಲ. ಸಂಗಡ ಕರದುಕೊಂಡೇ ಹೋಗುವೆನು. ನೀನು ಕಂದು ಕುಂದುಗಳೊಂದೂ ಇಲ್ಲದ ಬಹುಕೋಮಲವಾದ ದೇಹವುಳ್ಳವಳು. ಲೋಕಮೋಹಕವಾದ ಕಣ್ಣುಗಳುಳ್ಳವಳು. ಸ್ವಭಾವದಿಂದಲೇ ಭಯಶೀಲೆ ಯಾದವಳು. ಹೀಗಿದ್ದರೂ ಕಾಡಿನಲ್ಲುಂಟಾಗಬಹುದಾದ ದೇಹಶ್ರಮವ ನ್ನೂ ಲಕ್ಷ್ಯಮಾಡದೆ, ಅಲ್ಲಿ ಸಂಭವಿಸಬಹುದಾದ ಮಹಾಭಯಗಳನ್ನೂ

ಎಣಿಸದೆ ನನ್ನೊಡನೆ ಬರುವೆನೆಂದು ಕೇಳುವೆಯಲ್ಲವೆ ? ನಿನ್ನ ಈ ಪಾತಿವ್ರತ್ಯಸಂಕಲ್ಪವು ಯಾರಿಗೆ ತಾನೇ ಆಶ್ಚರ್ಯವನ್ನುಂಟುಮಾಡದು ? ನೀನು ನನಗೆ ಸಹಧರ್ಮಚಾರಿಣಿಯಾಗಿದ್ದುಕೊಂಡಿರುವುದಕ್ಕೆ ತಡೆಯೇನಿರುವುದು? ಎಲೆಸೀತೆ! ನಿನಗೆ ಈ ದೃಢಸಂಕಲ್ಪವುಂಟಾಗಿರುವುದು ನಮ್ಮಿಬ್ಬರ ವಂಶಕ್ಕೂ ಅನುಗುಣವಾಗಿಯೇ ಇರುವುದು. ಈ ನಿನ್ನ ವ್ಯವಸಾಯವು ಬಹಳ ಶ್ರೇಯಸ್ಕರವೆಂಬುದರಲ್ಲಿ ಸಂದೇಹವಿಲ್ಲ. ಇನ್ನು ನೀನು ವನಪ್ರಯಾಣಕ್ಕೆ ಬೇಕಾದ ಸನ್ನಾಹಗಳನ್ನು ಸಿದ್ಧಪಡಿಸಿಕೊಳ್ಳುವಳಾಗು. ನೀನಿಲ್ಲದೆ, ನನಗೆ ಸ್ವರ್ಗಲೋಕವಾದರೂ ರುಚಿಸದು. ಪ್ರಯಾಣಕಾಲದಲ್ಲಿ ಬ್ರಾಹ್ಮಣರಿಗೆ ರತ್ನಗಳನ್ನು ದಾನಮಾಡಿ, ಭಿಕ್ಷುಕರಿಗೆ ಭೋಜನವನ್ನು ಮಾಡಿಸು ! ಯಾರು ಯಾರು ಬೇರೆ ಯಾವಯಾವ ವಸ್ತುಗಳನ್ನು ಕೇಳುವರೋ, ಅವುಗಳೆಲ್ಲವನ್ನೂ ಕೊಡು! ಸಾವಕಾಶಮಾಡಬೇಡ ! ತ್ವರೆಮಾಡು ! ಬ್ರಾಹ್ಮಣರಿಗೆ ದಾನಮಾಡಿದಮೇಲೆ ಅಮೂಲ್ಯಗಳಾದ ಆಭರಣಗಳಾಗಲಿ,ವಸ್ತ್ರಗಳಾಗಲಿ,ಕ್ರೀಡಾರ್ಥವಾದ ಇತರಸಾಮಗ್ರಿಗಳಾಗಲಿ, ಹಾಸಿಗೆಗಳಾಗಲಿ, ವಾಹನಗಳಾಗಲಿ ನಾವಿಬ್ಬರೂ ಉಪಯೋಗಿಸಿಕೊಳ್ಳುತಿದ್ದ ಯಾವಯಾವ ವಸ್ತುಗಳುಂಟೋ ಅವೆಲ್ಲವನ್ನೂ ನಮ್ಮಲ್ಲಿ ಕೆಲಸಮಾಡುತಿದ್ದ ಭೃತ್ಯವರ್ಗಕ್ಕೆ ಹಂಚಿಬಿಡು” ಎಂದನು. ರಾಮನು ತನಗೆ ವನವಾಸಪ್ರಯಾಣವನ್ನು ಅನುಮತಿಸಿದೊಡನೆಯೇ, ಸೀತೆಯು ಮಿತಿಮೀರಿದ ಸಂತೋಷವನ್ನು ಹೊಂದಿ, ಆಗಲೇ ದಾನಕಾರ್ಯಗಳನ್ನೂ ಆರಂಭಿಸಿದಳು. ಮಹಾಯಶಸ್ವಿನಿಯಾದ ಆ ಸೀತಾದೇವಿಯು, ತನ್ನ ಪತಿಯ ಮಾತನ್ನು ಕೇಳಿ ಸಂತೋಷಗೊಂಡು, ನಿಶ್ಚಿಂತಳಾಗಿ, ಧರ್ಮಜ್ಞರಾದ ಅನೇಕಬ್ರಾಹ್ಮಣರನ್ನು ಕರೆಸಿ, ಧನಧಾನ್ಯಸುವರ್ಣಾದಿಗಳೆಲ್ಲವನ್ನೂ ಕ್ರಮವಾಗಿ ದಾನಮಾಡತೊಡಗಿದಳು. ಇಲ್ಲಿಗೆ ಮೂವತ್ತನೆಯ ಸರ್ಗವು.

---

ರಾಮನು ಲಕ್ಷ್ಮಣನನ್ನು ಕಾಡಿಗೆ ಬರಬೇಡವೆಂದು ಹೇಳಿದುದು.

ಲಕ್ಷ್ಮಣನು ಕೌಸಲ್ಯೆಯ ಅರಮನೆಯಿಂದ ರಾಮನೊಡನೆಯೇ ಹೊರಟುಬಂದು, ಸೀತೆಗೂ ರಾಮನಿಗೂ ನಡೆದ ಸಂವಾದಗಳೆಲ್ಲವನ್ನೂ ಕೇಳು

ತಿದ್ದನು. ಆಗಲೇ ಆತನು ಮನಸ್ಸಿನಲ್ಲಿ "ಈತನು ತನಗೆ ಅರ್ಧಶರೀರಭೂತೆಯಾದ ಸೀತಾದೇವಿಯನ್ನೇ ಕರೆದುಕೊಂಡು ಹೋಗುವುದಕ್ಕೆ ಸಮ್ಮತಿಸದೆ, ಕೊನೆಗೆ ಬಹುನಿರ್ಬಂಧಕ್ಕಾಗಿ ಒಪ್ಪಿಕೊಂಡಿರುವನಲ್ಲಾ! ಇನ್ನು ನನ್ನಗತಿಯೇನು?" ಎಂದು ದುಃಖದಿಂದ ಕಣ್ಣೀರನ್ನು ಸುರಿಸುತ್ತಿದ್ದನು. ಕೊನೆಗೆ ವ್ಯಸನವನ್ನು ತಡೆಯಲಾರದೆ * ರಾಮನ ಪಾದಗಳಮೇಲೆ ಬಿದ್ದು

---

* ಇದಕ್ಕೆ "ಸಭ್ರಾತುಶ್ಚರಣೌ ಗಾಢಂ ನಿಪೀಡ್ಯ ರಘುನಂದನಃ । ಸೀತಾಮುವಾಚಾತಿಯಶಾ ರಾಘವಂ ಚ ಮಹಾವ್ರತಂ ॥" ಎಂಬುದೇ ಮೂಲಶ್ಲೋಕವು. ಇಷ್ಟಾರ್ಥಸಿದ್ಧಿಗಾಗಿ ಇಷ್ಟದೇವತೆಯಲ್ಲಿ ಶರಣಾಗತಿಯನ್ನು ಮಾಡಬೇಕು. ಅದಕ್ಕೆ ತಕ್ಕ ಪುರುಷಕಾರವೂ ಇರಬೇಕು. ಇಲ್ಲಿ ಲಕ್ಷ್ಮಣನು ತನಗೆ ರಾಮಾನುವರ್ತನವೆಂಬ ಇಷ್ಟಾರ್ಥವು ಸಿದ್ಧಿಸುವುದಕ್ಕಾಗಿ, ಸೀತಾದೇವಿಯ ಪುರುಷಕಾರಮುಖದಿಂದ ರಾಮನಲ್ಲಿ ಶರಣಾಗತಿಯನ್ನು ಮಾಡುವನು. (ಸ:) ಬೇರೆ ಯಾವುದೊಂದುಪಾಯವೂ ತೋರದೆಹೋದುದರಿಂದ ಹಾಗೆ ಅನನ್ಯಗತಿಕನಾದವನೆಂದು ಭಾವವು. ಇಂತಹ ಲಕ್ಷ್ಮಣನು (ಭ್ರಾತುಶ್ಚರಣೌ ಗಾಢಂ ನಿಪೀಡ್ಯ) ಅಣ್ಣನ ಕಾಲುಗಳನ್ನು ಬಿಗಿಯಾಗಿ ಅಪ್ಪಿಹಿಡಿದುಕೊಂಡು, ಇದರಿಂದ ದೃಢವಿಶ್ವಾಸಪೂರ್ವಕವಾದ ಶರಣಾಗತಿಯು ಹೇಳಲ್ಪಡುವುದು (ಸೀತಾಂ) ಮೊದಲು ಸೀತೆಯನ್ನು ನೋಡಿ, ಎಂದರೆ, ಮೊದಲು ಪುರುಷಕಾರಕ್ಕಾಗಿ ಸೀತೆಯನಾಶ್ರಯಿಸಿ (ಉವಾಚ) ಪ್ರಾರ್ಥಿಸಿದನು. ಆಮೇಲೆ (ಮಹಾವ್ರತಂ) ಶರಣಾಗತಪರಿಪಾಲವೆಂಬ ವ್ರತನಿಷ್ಠನಾದ, "ನ ತ್ಯಜೇಯಂ ಕಥಂಚನ" "ಏತದ್ವ್ರತಂ ಮಮ" ಎಂಬುದಾಗಿ, ಆಶ್ರಿತರಕ್ಷಣವೆಂಬ ಮಹಾವ್ರತವನ್ನು ಕೈಕೊಂಡಿರುವ,ಮತ್ತು (ರಾಘವಂ) ರಘುವಂಶೋತ್ಪನ್ನನಾದವನನ್ನು, ರಘುರಾಕ್ಷಸಸಂವಾದಾದಿಗಳಲ್ಲಿ ಶರಣಾಗತರಕ್ಷಣವೇ ರಘುವಂಶದ ಮುಖ್ಯಧರ್ಮವೆಂದು ಸಿದ್ಧವಾಗುವುದರಿಂದ, ಅಂತಹ ವಂಶದಲ್ಲಿ ಹುಟ್ಟಿದ ರಾಮನೊಡನೆ, (ಉವಾಚ) ಪ್ರಾರ್ಥಿಸಿ ಹೇಳಿದನೆಂದು ಭಾವವು. ಶರಣಾಗತಿಯಿಂದ ಸರ್ವಫಲಗಳೂ ಸಿದ್ಧಿಸುವುವಾದುದರಿಂದ, ಶರಣಾಗತಿಯನ್ನು ಮಾಡಿ ತನ್ನ ಕೋರಿಕೆಯನ್ನು ತಿಳಿಸಿದುದಾಗಿ ಗ್ರಹಿಸಬೇಕು. "ಸಭ್ರಾತುಶ್ಚರಣೌ ಗಾಢಂ ನಿಪೀಡ್ಯ" ಎಂಬುದರಿಂದ "ದ್ವಯ" ವೆಂಬ ಮಂತ್ರವಾಕ್ಯದಲ್ಲಿ, ಪೂರ್ವಖಂಡದಲ್ಲಿ ಹೇಳಲ್ಪಡುವ ಶರಣಾಗತಿಯೂ "ರಾಘವಮುವಾಚ" ಎಂಬುದರಿಂದ ಉತ್ತರಖಂಡದಲ್ಲಿ ಹೇಳಲ್ಪಡುವ ಫಲಪ್ರಾರ್ಥನೆಯೂ, "ಸೀತಾಮುವಾಚ" ಎಂಬುದರಿಂದ ಈ ಪೂರ್ವೋತ್ತರಖಂಡಗಳೆರಡರಲ್ಲಿಯೂ ನಿರೂಪಿಸಲ್ಪಡುವ ಪುರುಷಕಾರಪರಿಗ್ರಹವೂ ಪ್ರತಿಪಾದಿತವೆಂದು ತಿಳಿಯಬೇಕು (ಗೋವಿಂದರಾಜೀಯವು.)

ಆತನ ಪದಾಬ್ಜಗಳೆರಡನ್ನೂ ತನ್ನ ಕೈಗಳಿಂದ ಬಿಗಿಯಾಗಿ ಹಿಡಿದು, ಮೊದಲು ತನಗೆ ಪುರುಷಕಾರಾರ್ಥವಾಗಿ ಸೀತೆಯನ್ನು ನೋಡಿ, ಆಮೇಲೆ ವ್ರತನಿಷ್ಠನಾದ ರಾಮನನ್ನೂ ನೋಡಿ, "ನೀವು ಕಾಡಿಗೆ ಹೊರಡುವುದು ನನಗೆ ಸರ್ವಥಾ ಸಮ್ಮತವಿಲ್ಲ. ಹೇಗಾದರೂ ನೀವು ಹೊರಡಬೇಕೆಂದೇ ದೃಢಸಂಕಲ್ಪವುಳ್ಳವರಾಗಿರುವಿರಿ ! ಕಾಡಿನಲ್ಲಿ ಕ್ರೂರಮೃಗಗಳೂ, ಕಾಡಾನೆಗಳೂ, ವಿಶೇಷವಾಗಿ ತುಂಬಿರುವುವು. ಅವುಗಳನ್ನು ಅಡಗಿಸುವುದಕ್ಕಾಗಿಯಾದರೂ, ನಾನು ಧನುಸ್ಸನ್ನು ಹಿಡಿದು ಮುಂದೆ ಹೋಗುತ್ತಾ ನಿಮ್ಮ ದಾರಿಯನ್ನನುಸರಿಸುವೆನು. ನಾನು ನಿಮಗೆ ಸಹಾಯಕನಾಗಿದ್ದ ಪಕ್ಷದಲ್ಲಿ, ಅನೇಕಮೃಗಪಕ್ಷಿಗಳಿಂದ ನಿಬಿಡವಾದ ಕಾಡುಗಳೆಲ್ಲವನ್ನೂ

---

(ಸ:) ಪರಮಪದದಲ್ಲಿಮಾತ್ರವೇ ಅಲ್ಲದೆ, ಈ ಲೋಕದಲ್ಲಿಯೂಕೂಡ ಕೈಂಕರ್ಯವನ್ನು ಮಾಡುತ್ತಿರಬೇಕೆಂದು ಸಂಗಡಲೇ ಅವತರಿಸಿದವನು. (ರಘುನಂದನ:) ಹಿರಿಯರನ್ನು ಅನುವರ್ತಿಸುವುದೇ ರಘುವಂಶದವರ ಕುಲಧರ್ಮವಾದುದರಿಂದ, ಆ ಧರ್ಮವನ್ನೇ ಅನುವರ್ತಿಸಿ ಅವರನ್ನು ಆನಂದಪಡಿಸುವವನೆಂದರ್ಥವು. (ಅತಿಯಶಾ:) ತಾನು ರಾಜಕುಮಾರನಾಗಿದ್ದರೂ, "ಅಹಂ ಸರ್ವಂ ಕರಿಷ್ಯಾಮಿ" ಎಂದು ಜ್ಯೇಷ್ಠಾನುವರ್ತನದಿಂದುಂಟಾದ ಮಹಾಕೀರ್ತಿಯುಳ್ಳವನು. ಇಂತಹ ಲಕ್ಷ್ಮಣನು (ಭ್ರಾತು:) ತನ್ನ ಕೈಂಕರ್ಯಗಳನ್ನಂಗೀಕರಿಸುವುದರಿಂದ ತನ್ನನ್ನುದ್ಧರಿಸತಕ್ಕವನಾದ ರಾಮನ, (ಚರಣೌ) ಕಾಲುಗಳೆರಡನ್ನೂ, ಇಲ್ಲಿ "ಚರಗತಿಭಕ್ಷಣಯೋ." ಎಂದು, "ಚರ" ಧಾತುವಿಗೆ ಗತಿಭಕ್ಷಣಾರ್ಥಗಳೆರಡೂ ಇರುವುದರಿಂದಲೂ, ದ್ವಿವಚನಸ್ವಾರಸ್ಯದಿಂದಲೂ, ಇವೇ ಪ್ರಾಪಕಗಳಾಗಿಯೂ, ಪ್ರಾಪ್ಯಗಳಾಗಿಯೂ ಇರುವುವೆಂದು ಭಾವವು. ಇಂತಹ ಪಾದಗಳನ್ನು (ನಿಪೀಡ್ಯ) ಹಿಡಿದು, ಮೊದಲು ಕೈಹಿಡಿದ ಸೀತೆಯನ್ನು ನಿರಾಕರಿಸಿದುದನ್ನು ಕಂಡು, ಹಾಗೆ ಮಾಡದೆ ಕಾಲುಗಳನ್ನೇ ಬಲವಾಗಿ ಹಿಡಿದರೆ ಅವಶ್ಯವಾಗಿ ಅಂಗೀಕರಿಸಿಯೇ ತೀರಬೇಕಾಗುವುದೆಂದು ಕಾಲುಗಳನ್ನೇ ಹಿಡಿದನೆಂದು ಭಾವವು. "ಆನುಕೂಲ್ಯಸ್ಯ ಸಂಕಲ್ಪ: ಪ್ರಾತಿಕೂಲ್ಯಸ್ಯ ವರ್ಜನಂ । ರಕ್ಷಿಷ್ಯತೀತಿ ವಿಶ್ವಾಸೋ ಗೋಪ್ತೃತ್ವವರಣಂ ತಥಾ । ಆತ್ಮನಿಕ್ಷೇಪಕಾರ್ಪಣ್ಯೇ ಷಡ್ವಿಧಾ ಶರಣಾಗತಿ:॥" ಎಂಬಂತೆ ಶರಣಾಗತಿಗೆ ಬೇಕಾದ ಆರು ಅಂಗಗಳೂ ಇದರಲ್ಲಿ ಸೂಚಿಸಲ್ಪಡುವುವು.

ಚೆನ್ನಾಗಿ ಸುತ್ತಿಬರಬಹುದು. * ನೀನಿಲ್ಲದಮೇಲೆ ನನಗೆ ಸ್ವರ್ಗಲೋಕವೇ ಲಭಿಸಿದರೂ, ಎಂದಿಗೂ 'ಸಾವಿಲ್ಲದ ಅಮರತ್ವವೇ ಸಿಕ್ಕಿದರೂ, ಕೊನೆಗೆ ಈ ತ್ರಿಲೋಕೈಶ್ವರ್ಯವೂ ನನಗೆ ದೊರಕುವುದಾದರೂ ನಾನು ಇಷ್ಟಪಡು ವವನಲ್ಲ!" ಎಂದನು. ಹೀಗೆ ಲಕ್ಷ್ಮಣನು ದೃಢಮನಸ್ಸನ್ನು ಮಾಡಿಕೊಂಡು ತನ್ನೊಡನೆ ಬರುವುದಾಗಿ ಸಂಕಲ್ಪಿಸಿರುವುದನ್ನು ನೋಡಿ ರಾಮನು, ಆತನನ್ನು ಅನೇಕವಿಧಗಳಾದ ಸಾಂತ್ವವಾಕ್ಯಗಳಿಂದ ನಿಷೇಧಿಸಲು, ಪುನಃ ಲಕ್ಷ್ಮಣನು ರಾಮನನ್ನು ನೋಡಿ, "ಅಣ್ಣಾ! ಇದೇನು! ನೀನು *ಮೊದಲೇ

---

* ಮೊದಲು ಲಕ್ಷ್ಮಣನು ತನಗೆ ಅನನ್ಯೋಪಾಯತ್ವವನ್ನು ಹೇಳಿ, ಈಗ ಅನನ್ಯಪ್ರಯೋಜನತ್ವವನ್ನು ತಿಳಿಸುವನು. ಇದಕ್ಕೆ "ನ ದೇವಲೋಕಾಕ್ರಮಣಂ ನಾಮರತ್ವಮಹಂ ವೃಣೇ।ಐಶ್ವರ್ಯಂವಾಪಿ ಲೋಕಾನಾಂ ಕಾಮಯೇ ನ ತ್ವಯಾವಿನಾ" ಎಂಬುದೇ ಮೂಲವು. ಅನನ್ಯಪ್ರಯೋಜನತ್ವವೆಂದರೆ "ನೀನೊಬ್ಬನುಹೊರತು ನನಗೆ ಪ್ರಯೋಜನಕರವಾದ ವಸ್ತು ಬೇರೊಂದೂ ಇಲ್ಲ" ವೆಂಬುದನ್ನು ಸೂಚಿಸುವುದು. (ದೇವಲೋಕಾಕ್ರಮಣಂ) "ದೇವಾನಾಂ ಪೂರಯೋಧ್ಯಾ" ಎಂಬಂತೆ ಇಲ್ಲಿ ದೇವಲೋಕವೆಂದರೆ ಪರಮಪದವೆಂದು ಗ್ರಹಿಸಬೇಕು; "ನೀನಿಲ್ಲದಪಕ್ಷದಲ್ಲಿ ನನಗೆ ಪರಮಪದವೂ ಬೇಡ" ವೆಂದು ಭಾವವು. ನಿನ್ನ ಕೈಂಕರ್ಯವನ್ನು ಬಿಟ್ಟು ನನಗೆ ಮೋಕ್ಷವೂ ಬೇಡವೆಂದು ಮುಖ್ಯಾಭಿಪ್ರಾಯವು. ಹಾಗೆಯೇ (ಅಮರತ್ವಂ) ಎಂದರೆ ಕೈವಲ್ಯವು "ಜರಾಮರಣಮೋಕ್ಷಾಯ" ಎಂಬಂತೆ ಜರಾಮರಣಗಳಿಂದ ಬಿಡಲ್ಪಡುವುದೇ ಕೈವಲ್ಯವೆನಿಸುವುದು. ಆ ಕೈವಲ್ಯವೆಂಬ ಮೋಕ್ಷವನ್ನೂ ತಾನೊಲ್ಲೆನೆಂದು ಭಾವವು (ಐಶ್ವರ್ಯಂವಾಪಿ ಲೋಕಾನಾಂ) ಎಂದರೆ ತ್ರಿಲೋಕಾಧಿಪತ್ಯವನ್ನೂ ಅಥವಾ ಬ್ರಹ್ಮತ್ವವನ್ನೂ ನಾನೊಲ್ಲೆನೆಂದರ್ಥವು. "ಮುಮುಕ್ಷುವಾದವನಿಗೆ ಐಶ್ವರ್ಯ ಕೈವಲ್ಯ, ಮೋಕ್ಷಗಳೆಂಬ ಮೂರು ಪುರುಷಾರ್ಥಗಳುಂಟು. ಅವುಗಳಲ್ಲಿ ಲಕ್ಷ್ಮಣನು ಮುಖ್ಯವಾದ ಮೋಕ್ಷವನ್ನೇ ಅಪೇಕ್ಷಿಸದಿರುವಾಗ, ಇತರಕೈವಲ್ಯಾದಿಗಳನ್ನು ನಾನು ಅಪೇಕ್ಷಿಸುವೆನೆ?" ಎಂದು ರಾಮಕೈಂಕರ್ಯವನ್ನು ಬಿಟ್ಟು ತನಗೆ ಬೇರೊಂದು ಪುರುಷಾರ್ಥಗಳೂ ಆದರಣೀಯಗಳಲ್ಲವೆಂದು ಹೇಳಿದುದಾಗಿ ಗ್ರಹಿಸಬೇಕು.

† ಲಕ್ಷ್ಮಣನು ತನ್ನೊಡನೆ ಕಾಡಿಗೆ ಬರುವವಿಷಯದಲ್ಲಿ ರಾಮನು ಹಿಂದೆ ಅನುಮತಿಯನ್ನು ಕೊಟ್ಟಿರುವಂತೆ ವಾಚ್ಯವಾಗಿ ಎಲ್ಲಿಯೂ ಹೇಳಿಲ್ಲ. ಆದರೂ ಹಿಂದು ಕಡೆಯಲ್ಲಿ, "ಉಪಕ್ಲೃಪ್ತಂಚ ಯತ್ಕಿಂಚಿದಭಿಷೇಕಾರ್ಥಮದ್ಯಮೇ। ಸರ್ವಂ ವಿಸರ್ಜಾಯ ಕ್ಷಿಪ್ರಂ ಕುರು ಕಾರ್ಯಂ ನಿರತ್ಯಯಂ।" "ಅಭಿಷೇಕಕ್ಕಾಗಿ ಈಗ ನಡೆಸಿರುವ ಕಾರ್ಯಗ

ನನಗೆ ಅನುಜ್ಞೆಯನ್ನು ಕೊಟ್ಟಿರುವೆಯಲ್ಲವೆ ? ಈಗ ನನ್ನನ್ನು ತಡೆಯುವು ದಕ್ಕೆ ಕಾರಣವೇನು ? ಹೀಗೆ ನನ್ನನ್ನು ತಡೆಯಬೇಕಾದರೆ, ನಾನು ನಿನ್ನಲ್ಲಿ ಯಾವ ಅಪರಾಧವನ್ನು ಮಾಡಿರುವೆನೋ ಎಂದು ನನಗೆ ಸಂದೇಹವುಂಟಾ ಗಿರುವುದು." ಎಂದನು. ಇದನ್ನು ಕೇಳಿ ಮಹಾತೇಜಸ್ವಿಯಾದ ರಾಮನು, ತನಗಿಂತಲೂ ಮುಂದಾಗಿಯೇ ವನಪ್ರಯಾಣಕ್ಕೆ ಸಿದ್ಧನಾಗಿ ಬಹುದೈನ್ಯ ದಿಂದ ಕಯ್ಯನ್ನು ಜೋಡಿಸಿ ಬಾರಿಬಾರಿಗೂ ಯಾಚಿಸುತ್ತ ಮುಂದೆ ನಿಂತಿ ರುವ ಲಕ್ಷ್ಮಣನನ್ನು ನೋಡಿ, "ವತ್ಸ ಲಕ್ಷ್ಮಣ! ನಿನಗೇನೋ ನನ್ನಲ್ಲಿ ಸಂ ಪೂರ್ಣವಾದ ಪ್ರೀತಿಯಿರುವುದು! ಧರ್ಮದಲ್ಲಿಯೇ ಸ್ಥಿರಬುದ್ಧಿಯುಳ್ಳವನಾಗಿ ರುವೆ! ಮಹಾವೀರನೆನಿಸಿಕೊಂಡಿರುವೆ! ಸನ್ಮಾರ್ಗವನ್ನು ಬಿಟ್ಟು ಎಂದಿಗೂ ಚಲಿಸತಕ್ಕವನಲ್ಲ. ನನಗೆ ಪ್ರಾಣಸಮಾನನಾಗಿಯೇ ಇರುವೆ. ನನ್ನ ಆಜ್ಞೆ ಯನ್ನು ಎಂದಿಗೂ ಮೀರತಕ್ಕವನಲ್ಲ. ಒಡಹುಟ್ಟಿದವನಲ್ಲದೆ ಮಿತ್ರನಂ ತೆಯೂ ಇರುವೆ! ನಾನು ನಿನಗೆ ಹೇಳಬೇಕಾದುದೇನೂ ಇಲ್ಲ. ಆದ ರೂ ಈಗ ಒಂದೆರಡುವಿಷಯಗಳನ್ನು ತಿಳಿಸುವೆನು. ಒಂದುವೇಳೆ ನೀನು ನನ್ನೊಡನೆ ಕಾಡಿಗೆ ಬಂದು ಬಿಟ್ಟರೆ, ನಮ್ಮ ಮಾತೆಯರಾದ ಕೌಸಲ್ಯಾಸುಮಿತ್ರೆಯರನ್ನು ಇಲ್ಲಿ ಪೋಷಿಸತಕ್ಕವರಾರು ? ಇದಕ್ಕಾಗಿಯೇ ನಾನು ನಿನ್ನನ್ನು ಇಲ್ಲಿರಬೇಕೆಂದು ಹೇಳಬೇಕಾಯಿತು. ಹಿಂದೆ ನಾನು ನಿನಗೆ ಅನುಮತಿಯನ್ನು ಕೊಟ್ಟಿದ್ದರೂ, ಅದು ತಾತ್ಕಾಲಿಕವಾದ ಸಮಾಧಾನ

---

ಳು ಯಾವುವುಂಟೋ ಅವೆಲ್ಲವನ್ನೂ ತೆಗೆದುಬಿಟ್ಟು, ಹಾನಿಬಾರದ ಕಾರ್ಯಕ್ಕೆ ಪ್ರಯ ತ್ನಿಸು." ಎಂದು ಹೇಳಿರುವುದರಿಂದ, ಅನುಮತಿಯು ಸೂಚಿತವಾಗುವುದು. ಹಾಗೆ ಯೇ ಮತ್ತೊಂದು ಕಡೆಯಲ್ಲಿ. "ತಸ್ಮಾದಪರಿತಾಪಸ್ಸ್ವಂ ತ್ವಮಪ್ಯನುವಿಧಾಯ ಮಾಂ। ಪ್ರತಿಸಂಹಾರಯ ಕ್ಷಿಪ್ರಮಾಭಿಷೇಚನಿಕೀ:ಕ್ರಿಯಾ:॥" "ನೀನು ವ್ಯಸನವನ್ನು ಬಿಟ್ಟು ನನ್ನನ್ನೇ ಅನುವರ್ತಿಸು" ಎಂದು ಹೇಳಿರುವನು. ಇನ್ನೊಂದುಕಡೆಯಲ್ಲಿ ರಾಮನು ಸೀತೆಗೆ ಬುದ್ಧಿವಾದಗಳನ್ನು ಹೇಳುವಾಗ, "ಭ್ರಾತೃಪುತ್ರಸಮೌ ಚಾಪಿ ದ್ರಷ್ಟವ್ಯೌಚ ವಿಶೇಷತ: । ತ್ವಯಾ ಭರತಶತ್ರುಘ್ನೌ ಪ್ರಾಣೈ:ಪ್ರಿಯತರಾ ಮಮ" "ಭರತಶ ತ್ರುಘ್ನರನ್ನೇ ಅನುವರ್ತಿಸುತ್ತಿರು" ಎಂದು ಹೇಳಿರುವನೇಹೊರತು ಲಕ್ಷ್ಮಣನನ್ನು ಅನುಸರಿಸುವಂತೆ ಹೇಳಲಿಲ್ಲ. ಆದುದರಿಂದ ಲಕ್ಷ್ಮಣನು ಇಲ್ಲಿ ನಿಲ್ಲಲಾರನೆಂದು ತಿಳಿದು ಆತನ ಆಗಮನಕ್ಕೆ ತನ್ನ ಅನುಮತಿಯನ್ನು ಸೂಚಿಸಿರುವನೆಂದೇ ತಿಳಿಯಬೇಕು.

ಕ್ಕೋಸ್ಕರವಾಗಿಯೇಹೊರತು ಬೇರೆಯಲ್ಲ. "ಆದರೆ ನಮ್ಮ ತಂದೆಯಾದ ದಶರಥನೇ ಅವರಿಬ್ಬರನ್ನೂ ಭರಿಸಲಾರನೆ ?" ಎಂದು ನೀನು ಕೇಳಬಹುದು. ಮಳೆಯನ್ನು ಸುರಿಸುತ್ತಿರುವ ಪರ್ಜನ್ಯನಂತೆ ನಮ್ಮತಂದೆಯು ಆಶ್ರಿತರ ಕೋರಿಕೆಗಳೆಲ್ಲವನ್ನೂ ಈಡೇರಿಸಿ, ಅವರನ್ನು ಪ್ರೀತಿಯಿಂದ ಪೋಷಿಸುವ ನೆಂಬುದರಲ್ಲಿ ಸಂದೇಹವಿಲ್ಲ. ಇದರಮೇಲೆ ಆತನು ಮಹಾತೇಜಸ್ವಿಯೆಂಬುದ ರಲ್ಲಿಯೂ ಸಂಶಯವಿಲ್ಲ. ಆದರೆ ಆತನು ಕೈಕೇಯಿಯಿಂದ ಕಾಮಪಾಶ ದಲ್ಲಿ ಕಟ್ಟಲ್ಪಟ್ಟಿರುವನು. ಅಶ್ವಪತಿಯ ಮಗಳಾದ ಆಕೆಯಾದರೋ, ಈ ರಾಜ್ಯವೆಲ್ಲವನ್ನೂ ತನ್ನ ಮಗನ ವಶಕ್ಕೆ ಒಪ್ಪಿಸಿಬಿಟ್ಟಮೇಲೆ, ತಾನೇ ಸರ್ವ ಸ್ವಾತಂತ್ರ್ಯವನ್ನೂ ವಹಿಸುವಳು. ಆಕೆಯು ಸವತಿಯರನ್ನು ಪ್ರೇಮದಿಂದ ಪೋಷಿಸುವಳೆಂಬುದೇ ಅಸಂಭವವು! ನಮ್ಮಿಬ್ಬರ ಅಗಲಿಕೆಯಿಂದ ಎಡೆಬಿಡದೆ ಕೊರಗುತ್ತಿರುವ ನಮ್ಮ ಮಾತೆಯರಿಬ್ಬರನ್ನೂ ಆಕೆಯು ಮನಸ್ಸಿನಿಂದಲೂ ಸ್ಮರಿಸಲಾರಳು. ಭರತನು ರಾಜ್ಯಾಧಿಕಾರಕ್ಕೆ ಬಂದಮೇಲೆ ಅವನ ತಾಯಿಯ ಮನೋಭಿಪ್ರಾಯವನ್ನನುಸರಿಸಿಯೇ ನಡೆಯುವನು. ಆದುದರಿಂದ ವತ್ಸ ಲಕ್ಷ್ಮಣಾ! ನೀನು ಇಲ್ಲಿಯೇ ಇದ್ದುಕೊಂಡು, ರಾಜಾನುಗ್ರಹವನ್ನು ಸಂಪಾ ದಿಸಿ, ಪೂಜ್ಯರಾದ ನಮ್ಮ ಮಾತೆಯರಿಬ್ಬರನ್ನೂ ಪೋಷಿಸುವುದುತ್ತಮವ ಲ್ಲವೆ? ನೀನು ಇದಿರುಮಾತನ್ನಾಡದೆ ನಾನು ಹೇಳಿದಂತೆ ನಡೆಸು. "ನಿನ್ನ ಶುಶ್ರೂಷೆಯೊಂದನ್ನೇ ಅಪೇಕ್ಷಿಸುತ್ತಿರುವ ನನಗೆ ಇತರರ ಚಿಂತೆಯೇಕೆ?"ಎಂ ದು ನೀನು ಕೇಳಬಹುದು. ನೀನು ಸಮಸ್ತಧರ್ಮಗಳನ್ನೂ ತಿಳಿದವನು. ನನ್ನ ಮಾತಿನಂತೆ ನಡೆಯಬೇಕಾದುದೂ ನಿನ್ನ ಕೃತ್ಯವಲ್ಲವೆ? ಈಗ ನಾನು ಹೇಳುವ ಈ ಕೆಲಸವನ್ನು ನೀನು ಮಾಡುತಿದ್ದರೆ, ನನ್ನ ಶುಶ್ರೂಷೆಯನ್ನು ನಡೆಸಿ ದಂತೆಯೇ ಆಗುವುದಲ್ಲವೆ? ನನ್ನಲ್ಲಿರುವ ಭಕ್ತಿಗೆ ಇದೇ ಸಂಪೂರ್ಣವಾದ ನಿದ ರ್ಶನವು. ಮತ್ತು ಮಾತೃಶುಶೂಷೆಯೆಂಬುದಕ್ಕಿಂತಲೂ ಉತ್ತಮವಾದ ಧರ್ಮವು ಲೋಕದಲ್ಲಿ ಬೇರೆ ಯಾವುದುಂಟು? ನೀನು ಈ ಕಾರ್ಯವನ್ನು ಮಾ ಡುವುದರಿಂದ ನನಗೆಮಾತ್ರವೇ ಅಲ್ಲದೆ, ನಮ್ಮ ರಘುವಂಶಕ್ಕೇ ಸಂತೋಷವ ನ್ನುಂಟುಮಾಡಿದಂತಾಗುವುದು. ನಾವಿಬ್ಬರೂ ಬಿಟ್ಟುಹೋದಮೇಲೆ ನಮ್ಮ ಮಾತೆಯರಿಗೆ ಸುಖವೆಂಬುದನ್ನು ಕನಸಿನಲ್ಲಿಯೂ ಎಣಿಸಬೇಡ." ಎಂದನು.

ಹೀಗೆ ಮೃದುವಾಗಿ ಮಾತುಗಳನ್ನಾಡಿ, ಉಪಾಯದಿಂದ ತನ್ನನ್ನು ನಿಷೇಧಿ ಸುತ್ತಿರುವ ರಾಮನನ್ನು ನೋಡಿ, ಆತನಿಗಿಂತಲೂ ವಾಕ್ಚಾತುರ್ಯದಲ್ಲಿ ಮೇಲೆನಿಸಿಕೊಂಡ ಲಕ್ಷ್ಮಣನು "ಅಣ್ಣಾ! ನೀನು ಮಹಾವೀರನಲ್ಲವೆ! ನೀನು ಎಲ್ಲಿದ್ದರೇನು?ನಿನ್ನ ದಿವ್ಯತೇಜಸ್ಸೊಂದೇ ಲೋಕವೆಲ್ಲವನ್ನೂ ಅಂಜಿಸುವುದು! ಭರತನೂ ನಿನ್ನ ಪ್ರತಾಪಕ್ಕೆ ಭಯಪಟ್ಟು ನಮ್ಮ ಮಾತೆಯರನ್ನು ಅಕ್ಕರೆಯಿಂದಪೋಷಿಸುವುದರಲ್ಲಿ ಸಂದೇಹವಿಲ್ಲ.(ಒಂದುವೇಳೆ ರಾಜ್ಯಾಧಿಕಾರದ ಮದದಿಂದ ಆತನು ಹಿಂದುಮುಂದರಿಯದೆ ಗರ್ವಪಟ್ಟುದುರ್ಬುದ್ಧಿಯುಳ್ಳವನಾಗಿ, ನಮ್ಮ ಮಾತೆಯರನ್ನು ಅಲಕ್ಷ್ಯದಿಂದ ಕಂಡು, ಸರಿಯಾಗಿ ಪೋಷಿಸದಿದ್ದಪಕ್ಷದಲ್ಲಿ, ಕ್ರೂರಬುದ್ಧಿಯುಳ್ಳ ಆತನನ್ನು ಆಕ್ಷಣವೇ ಕೊಂದುಬಿಡುವೆನು. ಆತನನ್ನು ಮಾತ್ರವೇ ಅಲ್ಲ. ಆತನ ಕಡೆಯವರೆಲ್ಲರನ್ನೂ ನಿರ್ಮೂಲಮಾಡುವೆನು. ಕೊನೆಗೆ ಈ ಮೂರುಲೋಕವೂ ಆತನ ಪಕ್ಷವನ್ನು ವಹಿಸಿಬಂದರೂ ಅದನ್ನೂ ಆಗಲೇ ಹುಟ್ಟಡಗಿಸಿಬಿಡುವೆನು. ಇದರಲ್ಲಿ ಸಂದೇಹವೇ ಇಲ್ಲ.) ಅಥವಾ ಕೌಸಲ್ಯೆಯನ್ನು ಮತ್ತೊಬ್ಬರು ಪೋಷಿಸಬೇಕೆ? ಇದುವರೆಗೂ ಆಕೆಯನ್ನಾಶ್ರಯಿಸಿ ಬದುಕುತಿದ್ದವರು ಸಾವಿರಾರುಮಂದಿಯಿರುವರು. ಅವರೆಲ್ಲರೂ ಆಕೆಯ ಅನುಗ್ರಹದಿಂದ ಸಾವಿರಾರು ಗ್ರಾಮಗಳನ್ನು ಪಡೆದಿರುವರು. ಅವರೆಲ್ಲರೂ ಈಗ ಆಕೆಯನ್ನು ಬಿಟ್ಟುಬಿಡುವರೆ? ಎಂದಿಗೂ ಬಿಡಲಾರರು! ಅವರ ಬಲದಿಂದ ನಮ್ಮ ಕೌಸಲ್ಯಾದೇವಿಯು, ತನ್ನನ್ನೂ, ನನ್ನ ತಾಯಿಯಾದ ಸುಮಿತ್ರೆಯನ್ನೂ,ಕೊನೆಗೆ ನಮ್ಮಂತವರು ಸಾವಿರಾರುಮಂದಿಗಳು ಬಂದರೂ ಅವರೆಲ್ಲರನ್ನೂ ಪೋಷಿಸಬಲ್ಲಳು. ಎಲೆ ಆರ್ಯನೆ! ನನ್ನನ್ನು ನಿನಗೇ ಅನುಚರನನ್ನಾಗಿ ಮಾಡಿಕೊಳ್ಳುವನಾಗು. ಇದರಿಂದ ಯಾವವಿಧ

---

* ಇದಕ್ಕೆ "ಕುರುಷ್ವಮಾಮನುಚರಂ ವೈಧರ್ಮ್ಯಂ ನೇಹ ವಿದ್ಯತೇ । ಕೃತಾರ್ಥೋಹಂ ಭವಿಷ್ಯಾಮಿ ತವಚಾರ್ಥಃ ಪ್ರಕಲ್ಪತೇ" ಎಂಬುದೇ ಮೂಲವು. ಇಲ್ಲಿನ ರಹಸ್ಯಾರ್ಥವೇನೆಂದರೆ:—(ಮಾಂ) ನಿನಗೆ ಶೇಷಭೂತನಾದ ನನ್ನನ್ನು (ಅನುಚರಂ, ಆ ಶೇಷತ್ವಕ್ಕೆ ಅನುಗುಣವಾದ ಕೈಂಕರ್ಯವನ್ನು ನಡೆಸುವವನನ್ನಾಗಿ, (ಕುರುಷ್ವ) ಮಾಡಿಕೊಳ್ಳುವನಾಗು! ನಿನಗೆ ಅನನ್ಯಾರ್ಹವಾದ ಸ್ವರೂಪ್ತಿನೆಂತಿರುವ ನನ್ನನ್ನು ಸರಿಯಾದ ಸ್ಥಿತಿಯಲ್ಲಿ ಉಪಯೋಗಿಸಿಕೊಂಡು ಕಾಪಾಡಿಟ್ಟುಕೊಳ್ಳುವ ಭಾರವು ನಿನಗೇ ಸೇರಿರು

ವಾದ ಧರ್ಮಹಾನಿಯೂ ಇಲ್ಲವು. ಇದರಿಂದ ನಾನೂ ಕೃತಾರ್ಥನಾಗುವೆನು. ಕಾಡಿನಲ್ಲಿ ಫಲಮೂಲಾದಿಗಳನ್ನು ತಂದಿಡುವುದರಿಂದ ನಿನಗೂ ಅನುಕೂಲ್ಯ

---

ವುದೆಂದು ಭಾವವು ಅದರ ಫಲವು ಕರ್ತೃವನ್ನೇ ಹೊಂದುವುದಾದುದರಿಂದ ನನ್ನನ್ನು ಹಾಗೆ ಇರಿಸಿಕೊಳ್ಳುವುದು ನಿನಗೇ ಪ್ರಯೋಜನವೆಂದು ಸೂಚಿಸುವುದಕ್ಕಾಗಿ ಇಲ್ಲಿ (ಕುರುಷ್ವ) ಎಂಬ ಆತ್ಮನೇಪದವು ಉಪಯೋಗಿಸಲ್ಪಟ್ಟಿದೆ. ತನ್ನ ಸ್ವತ್ತನ್ನು ಸರಿಯಾದ ಸ್ಥಿತಿಯಲ್ಲಿ ಉಪಯೋಗಿಸಿಕೊಳ್ಳದಿದ್ದರೆ, ಅದರ ಸ್ವಾಮಿಗೇ ಫಲನಾಶನಾಗುವುದೆಂದು ಭಾವವು (ಇಹ) ಹೀಗೆ ಮಾಡುವುದರಿಂದ (ವೈಧರ್ಮ್ಯಂ) ನಮ್ಮಿಬ್ಬರಲ್ಲಿರುವ ಸೇವ್ಯಸೇವಕಧರ್ಮಕ್ಕೆ ಹಾನಿಯು (ನ) ಇಲ್ಲವು. ಸ್ವಾಮಿಯಾದ ನಿನ್ನಲ್ಲಿ ಸೇವ್ಯಧರ್ಮವೂ, ನಿನಗೆ ಶೇಷಭೂತನಾದ ನನ್ನಲ್ಲಿ ಸೇವಕಧರ್ಮವೂ ಪೂರ್ಣವಾಗಿರುವುದರಿಂದ, ಅದಕ್ಕನುಸಾರವಾಗಿ ನಡೆಯುವುದರಿಂದ ಯಾವುದೊಂದು ಧರ್ಮಹಾನಿಯೂ ಇಲ್ಲವು. ಅದನ್ನು ತಪ್ಪಿಸಿದರೆಮಾತ್ರವೇ ಧರ್ಮಹಾನಿಯುಂಟಾಗುವುದೆಂದು ಭಾವವು. ಅಥವಾ (ವೈಧರ್ಮ್ಯಂನೇಹವಿದ್ಯತೇ) ವೈಪರೀತ್ಯಕ್ಕೆ ಸಾಧಕವಾದ ದಾರಿಯೂ ಇದರಲ್ಲಿಲ್ಲವು. "ನೀನು ಮಾತೃಶುಶ್ರೂಷೆಯನ್ನು ಮಾಡುತ್ತಿರಬೇಕೆಂದೂ, ನಾನು ಕಾಡಿಗೆ ಬಂದರೆ ಅದೆಲ್ಲವೂ ಕೆಟ್ಟು ಹೋಗುವು" ದೆಂದೂ ಹೇಳಿದೆಯಲ್ಲವೆ? ಅದಕ್ಕೆ ನಾನು ಆಗಲೇ ಸಮಾಧಾನವನ್ನು ಹೇಳಿರುವೆನಾದುದರಿಂದ, ಆ ಧರ್ಮಕ್ಕೂ ಲೋಪವಿಲ್ಲವೆಂದು ಭಾವವು. ತನ್ನನ್ನು ಅನುಚರನನ್ನಾಗಿ ಮಾಡಿಕೊಳ್ಳುವುದರಿಂದ ಪ್ರಯೋಜನವೇನೆಂಬುದನ್ನು ಹೇಳುವನು (ಕೃತಾರ್ಥೋಹಂ ಭವಿಷ್ಯಾಮಿ ತವಚಾರ್ಥಃ ಪ್ರಕಲ್ಪತೇ) ಆಯಾಸವಿಲ್ಲದೆ ನೀನು ಫಲಮೂಲಾದಿಗಳನ್ನು ಪಡೆಯಬಹುದು. ನಿನ್ನ ಕೈಂಕರ್ಯವು ಲಭಿಸುವುದರಿಂದ ನಾನೂ ಕೃತಾರ್ಥನಾಗುವೆನೆಂದರ್ಥವು.

ಅಥವಾ, (ಮಾಂ) ಸ್ವಾಭಾವಿಕವಾಗಿಯೇ ನಿನಗೆ ಶೇಷಭೂತನಾಗಿ ಜನಿಸಿರುವ ನನ್ನನ್ನು (ಅನುಚರಂ ಕುರುಷ್ವ)ತನಗೆಶೇಷತ್ವವೆಂಬುದು ಸ್ವಭಾವಸಿದ್ಧವಾಗಿದ್ದರೂ ಅದನ್ನು ತಿಳಿದು ಅದಕ್ಕೆ ತಕ್ಕಂತೆ ಸ್ವರೂಪಾನುರೂಪವಾದ ಕೈಂಕರ್ಯಗಳನ್ನು ನಡೆಸದಿರುವ ನನ್ನನ್ನು ಆ ಶೇಷತ್ವದಲ್ಲಿರುವಂತೆ ಮಾಡಬೇಕೆಂದು ಭಾವವು. ಕೇವಲ ನಾಮಮಾತ್ರಕ್ಕೆ ಶೇಷಭೂತನೆನಿಸಿಕೊಂಡರೆ ಪ್ರಯೋಜನವಿಲ್ಲ. ಆ ಸ್ವರೂಪವನ್ನು ತಿಳಿದುಕೊಂಡು,ಅದಕ್ಕನುಗುಣವಾಗಿ ವರ್ತಿಸಿದರೇ ಕಾರ್ಯಕಾರಿಯಾಗುವುದೆಂದರ್ಥವು (ಇಹ)ಈ ನನ್ನಲ್ಲಿ (ವೈಧರ್ಮ್ಯಂ) ಶೇಷತ್ವವೆಂಬ ಧರ್ಮವಿಪರ್ಯಾಸವು. (ನಾಸ್ತಿ) ಇಲ್ಲವು. ಇದರಿಂದ ಶೇಷತ್ವವೆಂಬುದು ಪ್ರತಿಯೊಬ್ಬನಿಗೂ ಸ್ವಭಾವತಃ ಸಿದ್ಧವಾಗಿರುವುದೆಂದೂ ಅದನ್ನು ತಿಳಿದುಕೊಂಡವನಿಗೆ ಎಂದರೆ ತಾನು ಶೇಷಭೂತನೆಂಬುದನ್ನು ತಿಳಿದುಕೊಂಡಿರುವವನಿಗೆ ಶೇಷಿ(ಸ್ವಾಮಿ) ಕೈಂಕರ್ಯವನ್ನು ಮಾಡುವುದೇ ಫಲವೆಂದೂ,(ಮಾಂ,ಅನು

ವುಂಟು. ನಮಗೆ ಕಾಡಿನಲ್ಲಿ ಹಗೆಗಳಾಗಿ ಬರುವ ರಾಕ್ಷಸರನ್ನೂ, ಕ್ರೂರಮೃಗಳನ್ನೂ ಕೊಲ್ಲುವುದಕ್ಕಾಗಿ, ಇದೋ! ನನ್ನ ಕಯ್ಯಲ್ಲಿ ಈ ಧನುರ್ಬಾಣಗಳಿರುವುವು. ನಿಮಗೆ ಆಗಾಗ ಆಹಾರಾರ್ಥವಾದ ಗಡ್ಡೆಗೆಣಸುಗಳನ್ನು ಅಗೆದು ತರುವುದಕ್ಕಾಗಿ ಒಂದು ಗುದ್ದಲಿಯನ್ನೂ, ಹಣ್ಣುಹಂಪಲಗಳನ್ನೂ ಹೂಗಳನ್ನೂ ತುಂಬಿಕೊಂಡು ಬರುವುದಕ್ಕಾಗಿ ಒಂದು ಬುಟ್ಟಿಯನ್ನೂ ತೆಗೆದುಕೊಂಡು, ನಿಮಗೆ ದಾರಿಯನ್ನು ತೋರಿಸುತ್ತಾ ಮುಂದೆ ಹೋಗುವೆನು. ಪ್ರತಿದಿವಸವೂ ನಿಮಗೆ ಬೇಕಾದ ಫಲಮೂಲಗಳನ್ನೂ, ಕಾಡಿನಲ್ಲಿ ತಪಸ್ವಿಗಳ ಆಹಾರಾರ್ಥವಾಗಿ ಬೇಕಾದ ಇತರ ಆಹಾರಪದಾರ್ಥಗಳನ್ನೂ ಅಯಾಕ್ಷಣವೇ ತಂದು ಒದಗಿಸಿಕೊಡುವೆನು. ಇವುಗಳಿಗಾಗಿ ನೀವು ಸ್ವಲ್ಪವೂ ಶ್ರಮಪಡಬೇಕಾದುದಿಲ್ಲ.*ಅಲ್ಲಲ್ಲಿ ಮನೋಹರಗಳಾದ ಬೆಟ್ಟದತಪ್ಪಲುಗಳಲ್ಲಿ ಸೀತೆಯೊ

---

ಚರಂ) ಎಂಬೀ ಎರಡುಪದಗಳಿಂದ ಸೂಚಿಸಲ್ಪಡುವುವು. (ಕೃತಾರ್ಥೋಽಹಂ ಭವಿಷ್ಯಾಮಿ) ಆಗ ನಾನೂ ಕೃತಾರ್ಥನಾಗುವೆನು. ಕೈಂಕರ್ಯವನ್ನು ನಡೆಸದಿದ್ದರೆ ಶೇಷತ್ವಕ್ಕೆ ಹಾನಿಬರುವುದರಿಂದ,ಅದನ್ನು ನಡೆಸಿಯೇ ನಾನು ಕೃತಾರ್ಥನಾಗಬೇಕೆಂದುಭಾವವು. (ತವಚಾರ್ಥಃ ಪ್ರಕಲ್ಪತೇ) ಇಲ್ಲಿ "ಚ" ಎಂಬುದಕ್ಕೆ ಅವಧಾರಣಾರ್ಥವನ್ನು ಹೇಳಿ (ತವೈವಾರ್ಥಃ) ನಿನ್ನ ಪ್ರಯೋಜನವೇ ಸಿದ್ಧಿಸುವುದೆಂದು ಹೇಳಿದುದಾಗಿ ಗ್ರಹಿಸಬಹುದು. ನಿನಗಾಗಿ ನಾನು ಕೈಂಕರ್ಯವನ್ನು ನಡೆಸುತ್ತಿರುವೆನೇಹೊರತು, ನನ್ನ ಪ್ರಯೋಜನಕ್ಕಲ್ಲವು. ಪರಾರ್ಥವಾಗಿ ನಡೆಸತಕ್ಕ ಕೈಂಕರ್ಯವೇ ಪುರುಷಾರ್ಥವೆನಿಸುವುದೆಂದು ಭಾವವು. ಶೇಷಭೂತನಿಗೆ ಶೇಷತ್ವಾಧ್ಯವಸಾಯವೇ (ತಾನು ಶೇಷಭೂತನೆಂಬಜ್ಞಾನವೇ) ಉಪಾಯ (ಫಲ) ವೆಂದು ಉಪಾಯೋಪೇಯಗಳ ಸ್ವರೂಪವೂ ಇದರಿಂದ ನಿಷ್ಕರ್ಷಿಸಲ್ಪಟ್ಟದಾಗಿ ರಹಸ್ಯವು.

*ಇದಕ್ಕೆ "ಭವಾಂಸ್ತು ಸಹವೈದೇಹ್ಯಾ ಗಿರಿಸಾನುಷುರಂಸ್ಯತೇ।ಅಹಂ ಸರ್ವಂ ಕರಿಷ್ಯಾಮಿ ಜಾಗ್ರತಸ್ಸ್ವಪತಶ್ಚತೇ॥" ಎಂಬುದೇ ಮೂಲವು. ಇಲ್ಲಿ (ಸಹವೈದೇಹ್ಯಾ) ಸೀತೆಯೊಡಗೂಡಿದಾಗಲೇ, ಎಂಬುದರಿಂದ ಲಕ್ಷ್ಮೀವಿಶಿಷ್ಟನಾದ ಪರಮಪುರುಷನಿಗೆ ಮಾಡತಕ್ಕ ಕೈಂಕರ್ಯಗಳೇ ಭೋಗ್ಯವೆಂದು ಸೂಚಿತವಾಗುವುದು (ಜಾಗ್ರತಃಸ್ವಪತಶ್ಚ) ಎಂಬುದರಿಂದ ಸರ್ವಕಾಲ ಸರ್ವಾವಸ್ಥೆಗಳಿಗೂ ಉಚಿತವಾದ, ಕೈಂಕರ್ಯವೆಂದು ಸೂಚಿತವಾಗುವುದು. (ಸರ್ವಂಕರಿಷ್ಯಾಮಿ) ಎಂಬುದರಿಂದ ಸರ್ವವಿಧಕೈಂಕರ್ಯಗಳೆಂದು ಸೂಚಿತವಾಗುವುದು. ಇದರಿಂದ ದೇವೀವಿಶಿಷ್ಟನಾದ ಶೇಷಿಗೆ,ಸರ್ವದೇಶ ಸರ್ವಕಾಲ ಸ

ಡಗೂಡ ನೀನು ನಿಶ್ಚಿಂತನಾಗಿ ವಿಹರಿಸುತ್ತಿರಬಹುದು ! ನೀನು ಎಚ್ಚರದಿಂ ದಿದ್ದರೂ,ಮಲಗಿದ್ದರೂ, ನಿನಗೆ ಬೇಕಾದುದನ್ನೆಲ್ಲಾ ನಾನೇ ನಡೆಸುವೆನು" ಎಂದನು. ಈಮಾತನ್ನು ಕೇಳಿ ರಾಮನಿಗೆ ಬಹಳ ಸಂತೋಷವುಂಟಾಯಿತು. ಆಗ ಲಕ್ಷ್ಮಣನನ್ನು ಕುರಿತು "ವತ್ಸಲಕ್ಷ್ಮಣಾ! ಸರಿ! ಹಾಗೆಯೇ ಆಗಲಿ! ನೀನು ಹೋಗು! ನಿನ್ನ ಮಿತ್ರರೆಲ್ಲರನ್ನೂ ನೋಡಿ ಅವರ ಅನುಮತಿಯನ್ನು ಪಡೆದು ಬಾ! ಮಹಾತ್ಮನಾದ ವರುಣನು, ಪೂರ್ವದಲ್ಲಿ ಜನಕರಾಜನಿಗೆ,* ಯಜ್ಞಕಾಲ ದಲ್ಲಿ ರೌದ್ರಾಕಾರವುಳ್ಳ ಯಾವ ದಿವ್ಯಧನುಸ್ಸುಗಳನ್ನು ತಾನಾಗಿ ಅನು ಗ್ರಹಿಸಿ ಕೊಟ್ಟನೋ, ಆ ಎರಡು ಧನುಸ್ಸುಗಳನ್ನೂ, ಶತ್ರುಗಳಿಂದ ಭೇದಿ ಸುವುದಕ್ಕಸಾಧ್ಯವಾದ ಎರಡು ದಿವ್ಯಕವಚಗಳನ್ನೂ, ಅಕ್ಷಯಬಾಣಗ

---

ರ್ವಾವಸ್ಥೆಗಳಲ್ಲಿಯೂ, ಸರ್ವವಿಧ ಕೈಂಕರ್ಯಗಳನ್ನೂ ನಡೆಸುತ್ತಿರಬೇಕಾದುದೇ ಶೇಷ ಭೂತನಾದವನಿಗೆ ಮುಖ್ಯಧರ್ಮವೆಂದು ಫಲಿತಾರ್ಥವು ಸೂಚಿತವಾಗುವುದು (ಜಾಗ್ರತಃ) ಎಂಬುದರಿಂದ ಬೆಳಗ್ಗೆ ಹಾಸಿಗೆಯಿಂದೆದ್ದಕೂಡಲೇ ದಂತಕಾಷ್ಠಗಳನ್ನು ತಂದಿಡುವು ದು ಮೊದಲುಗೊಂಡು ಹಾಸಿಗೆಯನ್ನು ಸಿದ್ಧಪಡಿಸುವವರೆಗೆ ಮಾಡಬೇಕಾದ ಕೆಲಸಗಳ ನ್ನು ಮಾಡಿ, ರಾತ್ರಿಯಲ್ಲಿ ನಿದ್ರಿಸುವಾಗ ದುಷ್ಟಮೃಗಗಳೂ, ರಾಕ್ಷಸರೂ ಬಂದು ಬಾಧಿಸದಂತೆ ಬೆಳಗಾಗುವವರೆಗೂ ಧನುರ್ಧಾರಿಯಾಗಿ ಕಾವಲಿರುವೆನೆಂದು ಭಾವವು.

* ವರುಣನು ಬಿಲ್ಲು-ಮೊದಲಾದುವುಗಳನ್ನು ತಮ್ಮಿಬ್ಬರಿಗೂ ಒಂದೊಂದುಲಭಿ ಸುವಂತೆ ಕೊಟ್ಟಿರುವುದಾಗಿ ಇಲ್ಲಿ ಹೇಳಲ್ಪಟ್ಟಿದೆ. ಜನಕನ ಯಜ್ಞದಲ್ಲಿ ಹೀಗೆ ಎರಡಾ ಯುಧಗಳು ಕೊಡಲ್ಪಟ್ಟುದಾಗಿ ಹಿಂದೆ ವ್ಯಕ್ತವಾಗಿಲ್ಲ. ಇಲ್ಲಿಮಾತ್ರ ಅದನ್ನು ಪ್ರಸ್ತಾ ವಿಸುವುದಕ್ಕೆ ಕಾರಣವೇನೆಂದು ಶಂಕೆಯುಂಟಾಗಬಹುದು. ಆಗಾಗ ವಾಲ್ಮೀಕಿಮಹ ರ್ಷಿಯು ಒಂದುಕಡೆಯಲ್ಲಿ ಹೇಳಬೇಕಾದ ಅಂಶವನ್ನು ಮತ್ತೊಂದು ಕಡೆಯಲ್ಲಿ ಹೇ ಳಿ ತಿಳಿಸುವ ಪದ್ಧತಿಯುಂಟು. ಇದಕ್ಕೆ ಬೇರೆಕೆಲವು ನಿದರ್ಶನಗಳೂ ಉಂಟು. ಏನೆಂದ ರೆ, "ಬಾಲಕಾಂಡದಲ್ಲಿ ಸೀತಾವಿವಾಹಘಟ್ಟದಲ್ಲಿ ಹೇಳಬೇಕಾದ ಮಣಿಬಂಧನದ ವೃ ತ್ತಾಂತವನ್ನು ಅಲ್ಲಿ ಹೇಳದೆ, ಸುಂದರಕಾಂಡದಲ್ಲಿ ಹೇಳಿರುವರು. ಅದರಂತೆಯೇ ಅಯೋಧ್ಯಾಕಾಂಡದಲ್ಲಿ ತಿಳಿಸಬೇಕಾದ ಕಾಕಾಸುರವೃತ್ತಾಂತವಿಷಯಕವಾದ ಕೆಲವು ಅಂಶಗಳನ್ನು (ಸಪಿತ್ರಾಚ ಪರಿತ್ಯಕ್ತಃ) ಇತ್ಯಾದಿವಾಕ್ಯಗಳಿಂದ ಸುಂದರಕಾಂಡದಲ್ಲಿ ವಿವರಿಸಿರುವರು- ಹೀಗೆಯೇ, ಇನ್ನೂ ಕೆಲವು ಕಡೆಗಳಲ್ಲಿ, ಹೇಳಬೇಕಾದ ವಿಷಯಗಳ ನ್ನು ಅಲ್ಲಿ ಹೇಳದೆ, ಮತ್ತೊಂದು ಕಡೆಯಲ್ಲಿಯಾವುದೋ ಒಂದು ವ್ಯಾಜದಿಂದ ಅದೇ ಪ್ರಸ್ತಾವವನ್ನಾರಂಭಿಸಿ ಹೇಳಿರುವರು.

ಳುಳ್ಳ ಎರಡು ಬತ್ತಳಿಕೆಗಳನ್ನೂ, ಚಿನ್ನದ ಹಿಡಿಗಳಿಂದ ಕೂಡಿ ಸೂರ್ಯ ನಂತೆ ಜ್ವಲಿಸುತ್ತಿರುವ ಎರಡುಕತ್ತಿಗಳನ್ನೂ ತೆಗೆದುಕೊಂಡು ಬಾ! ಇ ವೆಲ್ಲವನ್ನೂ ನಾನು ಗಂಧಪುಷ್ಪಾದಿಗಳಿಂದ ಪೂಜಿಸಿ, ನಮ್ಮ ಕುಲಗುರುವಾ ದ ವಸಿಷ್ಠನ ಮನೆಯಲ್ಲಿರಿಸಿರುವೆನು. ನೀನು ಮೊದಲು ನಿನ್ನ ಮಿತ್ರವರ್ಗ ವನ್ನು ನೋಡಿ ಬಂದು, ಆಮೇಲೆ ಆ ಆಯುಧಗಳನ್ನು ಬೇಗನೆ ತೆಗೆದುಕೊಂ ಡುಬಾ!" ಎಂದನು. ಇದನ್ನು ಕೇಳಿ ಲಕ್ಷ್ಮಣನು ಬಹಳ ಸಂತೋಷವುಳ್ಳ ವನಾಗಿ, ವನಪ್ರಯಾಣಕ್ಕೆ ನಿಶ್ಚಯಿಸಿಕೊಂಡು, ತನ್ನ ಮಿತ್ರರೆಲ್ಲರಿಗೂ ಈ ವಿಷಯವನ್ನು ತಿಳಿಸಿ, ಅವರ ಅನುಮತಿಯನ್ನೂ ಪಡೆದು, ಅಲ್ಲಿಂದ ಕುಲ ಗುರುವಾದ ವಸಿಷ್ಠನ ಮನೆಗೆ ಹೋಗಿ, ಅಲ್ಲಿದ್ದ ದಿವ್ಯಾಯುಧಗಳೆಲ್ಲವನ್ನೂ ತಂದನು. ರಾಜಶ್ರೇಷ್ಠನಾದ ರಾಮನಿಂದ ಪೂಜಿಸಲ್ಪಟ್ಟು, ಗಂಧಪುಷ್ಪಾದಿ ಗಳಿಂದಲಂಕೃತವಾದ ಆ ದಿವ್ಯಾಯುಧಗಳೆಲ್ಲವನ್ನೂ ರಾಮನ ಮುಂದೆತಂ ದಿಟ್ಟನು. ಇವುಗಳನ್ನು ನೋಡಿ ರಾಮನು ಬಹಳ ಸಂತೋಷಗೊಂಡವನಾಗಿ, "ಎಲೆವತ್ಸನೆ! ನಾನು ಬೇರೊಂದು ಕಾರ್ಯಕ್ಕಾಗಿ ನಿನ್ನನ್ನೇ ಇದಿರುನೋಡು ತಿದ್ದೆನು. ನೀನು ಸಕಾಲಕ್ಕೆ ಬಂದು ಸೇರಿದೆ! ಇನ್ನುಮೇಲೆ ವನಪ್ರಯಾಣ ಕ್ಕೆಮೊದಲು ನಾವಿಬ್ಬರೂ ಸೇರಿ ನಡೆಸಬೇಕಾದ ಮುಖ್ಯಕಾರ್ಯವೊಂ ದುಂಟು! ನಮ್ಮಲ್ಲಿರತಕ್ಕ ವಸ್ತ್ರಾಭರಣಗಳೇ ಮೊದಲಾದ ಧನವೆಲ್ಲವನ್ನೂ ತಪಸ್ವಿಗಳಾದ ಬ್ರಾಹ್ಮಣರಿಗೆ ದಾನಮಾಡಿಡಬೇಕಾಗಿರುವುದು. ಇಲ್ಲಿ ವಿಶೇಷವಾದ ಗುರುಭಕ್ತಿಯುಳ್ಳ ಅನೇಕಬ್ರಾಹ್ಮಣೋತ್ತಮರಿರುವರು. ನಮ್ಮನ್ನೇ ನಂಬಿಕೊಂಡು ಬದುಕುತ್ತಿರುವವರೂ ಅನೇಕರಿರುವರು. ಅವರೆ ಲ್ಲರಿಗೂ ಮನಸ್ತೃಪ್ತಿಯಾಗುವಂತೆ ವಿಶೇಷವಾಗಿ ದಾನಮಾಡುವುದಕ್ಕೆ ಇ ದೇ ತಕ್ಕಸಮಯವು.ಆದುದರಿಂದ ನೀನು ಈಗಲೇ ಹೋಗಿ,ವಸಿಷ್ಠಪುತ್ರನಾ ಗಿ,ಬ್ರಾಹ್ಮಣಶ್ರೇಷ್ಠನೆನಿಸಿಕೊಂಡಿರುವ,ಪೂಜ್ಯನಾದ ಸುಯಜ್ಞನನ್ನು ಬೇಗ ನೆ ಇಲ್ಲಿಗೆ ಕರೆದುಕೊಂಡುಬಾ! ಆತನನ್ನೂ ಮತ್ತು ಶಿಷ್ಟರಾದ ಇತರಬ್ರಾಹ್ಮ ಣೋತ್ತಮರೆಲ್ಲರನ್ನೂ ಚೆನ್ನಾಗಿ ಪೂಜಿಸಿ, ಆಮೇಲೆ ನಾವು ಕಾಡಿಗೆ ಹೊರ ಡುವೆವು" ಎಂದನು. ಇಲ್ಲಿಗೆ ಮೂವತ್ತೊಂದನೆಯ ಸರ್ಗವು.

---

## { ರಾಮನು ವನಪ್ರಯಾಣಕ್ಕೆ ಮೊದಲು ದಾನಾದಿಗಳನ್ನು ಮಾಡಿದುದು. }

ರಾಮನು ಹೀಗೆ ಆಜ್ಞೆಯನ್ನು ಕೊಟ್ಟೊಡನೆಯೇ,ತನಗೆ ಶ್ರೇಯಸ್ಕರವಾಗಿಯೂ, ಪ್ರಿಯವಾಗಿಯೂ ಇರುವ ಆತನ ಆಜ್ಞೆಯನ್ನು ಲಕ್ಷ್ಮಣನು ಶಿರಸಾವಹಿಸಿ, ಅಲ್ಲಿಂದ ನೆಟ್ಟಗೆ ಸುಯಜ್ಞನ ಮನೆಗೆ ಬಂದನು. ಇಷ್ಟರಲ್ಲಿ ಸುಯಜ್ಞನು,ತನ್ನ ಅಗ್ನಿಗೃಹದಲ್ಲಿ ಕುಳಿತು,ಅಗ್ನಿಕಾರ್ಯಗಳನ್ನು ನಡೆಸುತ್ತಿರಲು ಆತನಿಗೆ ಲಕ್ಷ್ಮಣನು ವಿನಯದಿಂದ ನಮಸ್ಕರಿಸಿ "ಎಲೈ ಮಿತ್ರನೆ! ರಾಮನು ಈಗ ಇತರರಿಂದ ಅಸಾಧ್ಯವಾದ ಒಂದು ದೊಡ್ಡಕಾರ್ಯವನ್ನು ನಡೆಸಬೇಕಾಗಿರುವುದು. ನೀನು ಈಗಲೇ ಆತನ ಮನೆಗೆ ಹೋಗಿ ಅವನನ್ನು ನೋಡಿಬಾ!" ಎಂದನು. ಇದನ್ನು ಕೇಳಿ ಸುಯಜ್ಞನು, ಬಹುಸಂಭ್ರಮದಿಂದ ಬೇಗನೆ ತನ್ನ ಸಂಧ್ಯಾವಂದನಾದಿಕಾರ್ಯಗಳನ್ನು ಮುಗಿಸಿಕೊಂಡು, ಲಕ್ಷ್ಮಣನೊಡನೆಯೇ ಹೊರಟು, ವಿಶೇಷ ಕಾಂತಿವಿಶಿಷ್ಟವಾಗಿ, ಬಹುರಮಣೀಯವಾದ ರಾಮನ ಅರಮನೆಯನ್ನು ಪ್ರವೇಶಿಸಿದನು. ಹುತವಾದ ಅಗ್ನಿಹೋತ್ರದಂತೆ ಜ್ವಲಿಸುತ್ತಿರುವ ವೇದವಿತ್ತಾದ ಆ ಸುಯಜ್ಞನು ಬರುವುದನ್ನು ನೋಡಿ,ರಾಮನು ಆತನಿಗೆ ಕೈಮುಗಿದು, ಸೀತೆಯೊಡಗೂಡಿ ಭಕ್ತಿಯಿಂದ ಅವನನ್ನು ಪ್ರದಕ್ಷಿಣ ಮಾಡಿದನು. ಆಮೇಲೆ ಅವನನ್ನು ಪೀಠದಲ್ಲಿ ಕುಳ್ಳಿರಿಸಿ, ಸುವರ್ಣಮಯವಾದ ತನ್ನ ತೋಳ್ಬಳೆಗಳನ್ನೂ, ಅತ್ಯುತ್ತಮಗಳಾದ ಕುಂಡಲಗಳನ್ನೂ, ಚಿನ್ನದ ಸಲಿಗೆಗಳಲ್ಲಿ ಪೋಣಿಸಲ್ಪಟ್ಟ ರತ್ನಹಾರಗಳನ್ನೂ, ಕೈಬಳೆಗಳನ್ನೂ, ಇನ್ನೂ ಅನೇಕವಿಧವಾದ ರತ್ನಾಭರಣಗಳನ್ನೂ. ಆತನ ಕಯ್ಯಲ್ಲಿಟ್ಟು ವಿಶೇಷವಾಗಿ ಪೂಜಿಸಿದನು. ಆಮೇಲೆ ಪುನಃ ಸೀತೆಯಿಂದ ಪ್ರೇರಿಸಲ್ಪಟ್ಟವನಾಗಿ, ಆ ಸುಯಜ್ಞನನ್ನು ಕುರಿತು "ಎಲೆ ಸೌಮ್ಯನೆ! ಈ ಸೀತೆಯು ತಾನು ಧರಿಸಿದ್ದ ರತ್ನಹಾರವನ್ನೂ ಚಿನ್ನದ ಉಡೆದಾರವನ್ನೂ, ನಿನ್ನ ಪತ್ನಿಗಾಗಿ ಕೊಡಬೇಕೆಂದಿರುವಳು. ಇದೆಲ್ಲವನ್ನೂ ನೀನು ತೆಗೆದುಕೊಂಡು ಹೋಗಿ ನಿನ್ನ ಪತ್ನಿಗೆ ಕೊಡು! ಸೀತೆಯು ಈಗ ಕಾಡಿಗೆ ಹೊರಡಬೇಕಾಗಿರುವುದು. ಆದುದರಿಂದ ಆಕೆಯು ತೊಟ್ಟುಕೊಂಡಿದ್ದ ಕೈಬಳೆಗಳನ್ನೂ ತೋಳ್ಬಳೆಗಳನ್ನೂ ನಿನ್ನ ಪತ್ನಿಗಾಗಿ ಕೊಟ್ಟುಬಿಡುವಳು.ಮತ್ತು ನಾನು ಇದುವರೆಗೆ ಅನು

ಭವಿಸುತಿದ್ದ ಸರ್ವೋತ್ತಮವಾದ ಮಂಚವನ್ನೂ ನಿನಗಾಗಿಯೇ ಕೊಡಬೇ ಕೆಂದಿರುವಳು. ಆ ಮಂಚವು ಅಮೂಲ್ಯವಾದ ನವರತ್ನಗಳಿಂದ ಕೆತ್ತಲ್ಪಟ್ಟು, ದಿವ್ಯವಾದ ಮೇಲುಹೊದ್ದಿಕೆಯಿಂದ ಕೂಡಿ, ಆಕೆಗೆ ಬಹುಪ್ರೀತಿಪಾತ್ರವಾ ಗಿರುವುದು.ನಿನ್ನಲ್ಲಿರುವ ಪ್ರೀತಿವಿಶೇಷಕ್ಕಾಗಿ ಅದನ್ನೂ ನಿನಗೇ ಕೊಡುವುದಾ ಗಿರುವಳು. ನನಗೆ ನನ್ನ ಸೋದರಮಾವನು ಕೊಟ್ಟ ಶತ್ರುಂಜಯವೆಂಬ ಹೆಸ ರುಳ್ಳ ಆನೆಯೊಂದಿರುವುದು. ಇನ್ನೂ ಸಾವಿರಾರು ಆನೆಗಳೊಡನೆ ಅದನ್ನೂ, ನಿನಗೆ ಕೊಟ್ಟುಬಿಡುವೆನು" ಎಂದನು. ಹೀಗೆ ಹೇಳಿದ ರಾಮನ ಮಾತನ್ನು ಕೇ ಳಿ ಸುಯಜ್ಞನು ಅವೆಲ್ಲವನ್ನೂ ಪ್ರತಿಗ್ರಹಿಸಿ, ರಾಮಲಕ್ಷ್ಮಣರಿಗೂ, ಸೀತೆಗೂ ಮಂಗಳಾಶೀರ್ವಾದಗಳನ್ನು ಮಾಡಿದನು. ಆಮೇಲೆ ರಾಮನು ಕಾರ್ಯದಕ್ಷ ನಾಗಿಯೂ, ಜಾಗರೂಕನಾಗಿಯೂ, ತನಗೆ ಪ್ರಿಯಸಹೋದರನಾಗಿಯೂ ಇರುವ ಲಕ್ಷ್ಮಣನನ್ನು ನೋಡಿ, ಬ್ರಹ್ಮದೇವನು ದೇವೇಂದ್ರನಿಗೆ ಅಜ್ಞೆಮಾ ಡುವಂತೆ ಒಂದಾನೊಂದು ಮಾತನ್ನು ಹೇಳುವನು. "ವತ್ಸ ಲಕ್ಷ್ಮಣ! ನೀನು ಈಗಲೇ ಹೋಗಿ ಅಗಸ್ತ್ಯವಿಶ್ವಾಮಿತ್ರರ ಮಕ್ಕಳಿಬ್ಬರನ್ನೂ ಕರೆದುಕೊಂ ಡುಬಾ! ಅವರಿಬ್ಬರೂ ಬ್ರಾಹ್ಮಣರಲ್ಲಿ ಬಹಳ ಮೇಲೆನಿಸಿಕೊಂಡಿರುವರು. ಪೈರುಗಳಿಗೆ ನೀರೆರೆಯುವಂತೆ, ನೀನೇ ನಿನ್ನ ಕಯ್ಯಿಂದ ಅವರಿಗೆ ರತ್ನಾಭರಣ ಗಳನ್ನು ಕೊಟ್ಟು ಪೂಜಿಸು. ಅವರಿಗೆ ಬೇಕಾದಷ್ಟು ಬೆಳ್ಳಿಬಂಗಾರಗಳನ್ನೂ, ಸಾವಿರಾರು ಗೋವುಗಳನ್ನೂ, ಅಮೂಲ್ಯವಾದ ರತ್ನಗಳನ್ನೂ ಕೊಟ್ಟು, ಅವರನ್ನು ಸಂತೋಷಪಡಿಸು! ತೈತ್ತಿರೀಯ ಶಾಖೆಯನ್ನು ಕಲಿಯುತ್ತಿರುವ ಶಿಷ್ಯರೆಲ್ಲರಿಗೂ ಆಚಾರ್ಯನಾಗಿ, ಪಂಡಿತೋತ್ತಮನಾಗಿ, ಸಮಸ್ತ ವೇದಗಳ ನ್ನೂ ಬಲ್ಲವನಾಗಿರುವ ಬ್ರಾಹ್ಮಣೋತ್ತಮನೊಬ್ಬನು, ಬಹುಕಾಲದಿಂದ ನಮ್ಮ ತಾಯಿಯಾದ ಕೌಸಲ್ಯೆಯನ್ನಾಶ್ರಯಿಸಿಕೊಂಡು, ಪ್ರತಿದಿನವೂ ಆ ಕೆಗೆಮಂಗಳಾಶೀರ್ವಾದಗಳನ್ನು ಮಾಡಿಹೋಗುತ್ತಿರುವನು ಆತನಿಗೆ ಮನಸ್ತೃ ಪ್ತಿಯಾಗುವಂತೆ,ಆನೆ,ಕುದುರೆ,ಪಲ್ಲಕ್ಕಿ,ಮೊದಲಾದ ವಾಹನಗಳನ್ನೂ, ದಾಸ ದಾಸೀಜನರನ್ನೂ, ಪಟ್ಟೆಪಡಿ ಮೊದಲಾದವಸ್ತ್ರಗಳನ್ನೂ ಕೊಟ್ಟುಪೂಜಿಸು. ಚಿತ್ರರಥನೆಂಬ ಸಾರಥಿಯು ನಮ್ಮ ತಂದೆಗೆ ಬಹಳಪ್ರೀತಿಪಾತ್ರನಾಗಿರುವನು ಆತನು ಬಹುಕಾಲದಿಂದ ನಮ್ಮ ಅರಮನೆಯಲ್ಲಿಯೇ ಸೇರಿಕೊಂಡಿರುವನು.

ಆತನಿಗೂ ನೀನು ಅಮೂಲ್ಯಗಳಾದ ನಮ್ಮ ವಸ್ತ್ರಾಭರಣಗಳನ್ನೂ, ನಮ್ಮಲ್ಲಿರುವ ಧನರಾಶಿಯನ್ನೂ, ನಮ್ಮಲ್ಲಿರುವ ಸಾವಿರಾರು ಗೋವುಗಳನ್ನೂ, ಇನ್ನೂ ಸಣ್ಣ ಆಕಳುಗಳನ್ನೂ ಕೊಟ್ಟು, ಸಂತೋಷಪಡಿಸಬೇಕು. ಮತ್ತು ಕಠ, ಕಾಲಾಪ ಮೊದಲಾದ ವೇದಶಾಖೆಗಳನ್ನು ಅಧ್ಯಯನಮಾಡಿದ ಬ್ರಾಹ್ಮಣೋತ್ತಮರೂ ಇಲ್ಲಿ ಅನೇಕರಿರುವರು. ಪಲಾಶದಂಡಗಳನ್ನು ಧರಿಸಿದ ಬ್ರಹ್ಮಚಾರಿಗಳೂ ಇಲ್ಲಿ ಬೇಕಾದಷ್ಟು ಮಂದಿಯಿರುವರು. ಇವರೆಲ್ಲರೂ ಯಾವಾಗಲೂ ವೇದಾಧ್ಯಯನವನ್ನು ಮಾಡುತ್ತ ಕಾಲವನ್ನು ಕಳೆಯುವರೇಹೊರತು, ಬೇರೆ ಯಾವ ಕಾರ್ಯಗಳನ್ನೂ ಮಾಡುವುದಕ್ಕೆ ಶಕ್ತರಲ್ಲ. ಬಹಳ ಅಲಸಸ್ವಭಾವವುಳ್ಳವರು. ಅವರಿಗೆ ಮಧುರವಾದ ಆಹಾರದಲ್ಲಿಯೇ ಬಹಳ ಆಸೆಯುಂಟು. ಮಹಾತ್ಮರಾದವರು ಕೂಡ ಅವರನ್ನು ಸನ್ಮಾನಿಸುವರು. ಅವರ ಸಂಖ್ಯೆಯು ಎಂಬತ್ತರವರೆಗೆ ಇರುವುದರಿಂದ, ಒಬ್ಬೊಬ್ಬರಿಗೊಂದೊಂದರಂತೆ, ರತ್ನಪೂರ್ಣವಾದ ಎಂಬತ್ತು ವಾಹನಗಳನ್ನು ಕೊಟ್ಟುಬಿಡು. ಮತ್ತು ಬತ್ತಗಳನ್ನು ಹೇರಿದ ಇನ್ನೂರು ಎತ್ತುಗಳನ್ನೂ ಅವರಿಗೆ ಕೊಡು. ಅವರು ಮಧುರವಾದಪದಾರ್ಥಗಳನ್ನೇ ವಿಶೇಷವಾಗಿ ಬಯಸುವರಾದುದರಿಂದ, ಅವರಿಗೆ ಹಾಲು, ಮೊಸರು ತುಪ್ಪಗಳನ್ನು ಬೇಕಾದಷ್ಟು ಒದಗಿಸಿಕೊಡುವಂತೆ ಸಾವಿರಾರು ಗೋವುಗಳನ್ನೂ ಕೊಡು. ಇನ್ನೂ ಅನೇಕ ಬ್ರಹ್ಮಚಾರಿಗಳು ಕೌಸಲ್ಯೆಯನ್ನಾಶ್ರಯಿಸಿಕೊಂಡಿರುವರು. ಅವರಿಗೂ ಪ್ರತ್ಯೇಕಪ್ರತ್ಯೇಕವಾಗಿ ಸಾವಿರಗೋವುಗಳನ್ನು ಕೊಡು! ವತ್ಸ ಲಕ್ಷ್ಮಣಾ! ಮುಖ್ಯವಾಗಿ ನಮ್ಮ ತಾಯಿಯಾದ ಕೌಸಲ್ಯೆಗೆ ಮನಸ್ತೃಪ್ತಿಯಾಗುವಂತೆ ಆ ಬ್ರಾಹ್ಮಣರಿಗೆ ದಕ್ಷಿಣಾದಿಗಳನ್ನು ಕೊಟ್ಟುಪೂಜಿಸು" ಎಂದನು. ಹಾಗೆಯೇ ಲಕ್ಷ್ಮಣನು ರಾಮನ ಮಾತಿನಂತೆ ಧನರಾಶಿಯನ್ನು ತಂದು, ಕುಬೇರನಂತೆ ಬ್ರಾಹ್ಮಣರೆಲ್ಲರಿಗೂ ಹಂಚಿಕೊಟ್ಟನು. ಆಗ ರಾಮನು ತನ್ನ ಮುಂದೆ ವ್ಯಸನದಿಂದ ಕಣ್ಣೀರನ್ನು ಸುರಿಸುತ್ತಾ ನಿಂತಿರುವ ತನ್ನ ಅನುಜೀವಿಗಳನ್ನು ನೋಡಿ, ಅವರ ಜೀವನಾರ್ಥವಾಗಿ ಒಬ್ಬೊಬ್ಬರಿಗೂ ಬೇಕಾದಷ್ಟು ಧನಗಳನ್ನು ಕೊಟ್ಟು, ಅವರನ್ನು ಕುರಿತು "ನೀವೆಲ್ಲರೂ ನಾವು ಹಿಂತಿರುಗಿ ಬರುವವರೆಗೂ ನನ್ನ ಮನೆಯನ್ನೂ, ಲಕ್ಷ್ಮಣನ ಮನೆಯನ್ನೂ ಶೂನ್ಯವಾಗಿಟ್ಟಿರದಂತೆ ಯಾವಾಗಲೂ ಕಾವಲಿದ್ದು ರಕ್ಷಿಸುತ್ತಿ

ರಬೇಕು ” ಎಂದನು. ದುಃಖಿತರಾದ ಅವರನ್ನು ಸಮಾಧಾನಪಡಿಸಿ, ಆಮೇಲೆ ತನ್ನ ಅರಮನೆಯ ಧನಾಧ್ಯಕ್ಷನನ್ನು ನೋಡಿ, ತನ್ನ ಬೊಕ್ಕಸದಿಂದ ಧನವನ್ನು ತರುವಂತೆ ಆಜ್ಞಾಪಿಸಿದನು. ಆಗ ಅಲ್ಲಿದ್ದ ರಾಮನ ಅನುಚರರೆಲ್ಲರೂ, ಆ ಧನಾಧ್ಯಕ್ಷನೊಡನೆ ರಾಮನ ಭಂಡಾರಕ್ಕೆ ಹೋಗಿ,ಅಲ್ಲಿದ್ದ ಧನರಾಶಿಯೆಲ್ಲವನ್ನೂ ಹೊತ್ತು ತಂದು, ರಾಮನ ಮುಂದುಗಡೆಯಲ್ಲಿಟ್ಟರು. ಅಲ್ಲಿ ಅಪರಿಮಿತವಾಗಿ ರಾಶಿಹಾಕಿದ್ದ ಧನವು ನೋಡುವವರಿಗೆ ಅತ್ಯಾಶ್ಚರ್ಯವನ್ನುಂಟುಮಾಡುತಿತ್ತು. ಪುರುಷಶ್ರೇಷ್ಠನಾದ ರಾಮನು ಲಕ್ಷ್ಮಣನೊಡಗೂಡಿ ಅವೆಲ್ಲವನ್ನೂ ಅಲ್ಲಿದ್ದ ಬ್ರಾಹ್ಮಣರಲ್ಲಿ ಆಬಾಲವೃದ್ಧರಿಗೂ ಹಂಚಿಕೊಟ್ಟನು. ಆ ಬ್ರಾಹ್ಮಣರ ನಡುವೆ ಗರ್ಗಮಹಾಋಷಿಯ ವಂಶದಲ್ಲಿ ಹುಟ್ಟಿದ ತ್ರಿಜಟನೆಂಬ ಒಬ್ಬ ಬ್ರಾಹ್ಮಣನಿದ್ದನು.ದಾರಿದ್ರ್ಯದಶೆಯಿಂದ ಆತನ ಮಯ್ಯೆಲ್ಲವೂ ರಕ್ತಬಲವಿಲ್ಲದೆ ಗೋರೋಚನದಂತೆ ಪಿಂಗಳವರ್ಣವಾಗಿತ್ತು. ಆತನು ಯಾವಾಗಲೂ ಕಾಡಿನಲ್ಲಿ ಧಾನ್ಯಗಳನ್ನು ಆಯ್ದು ತಿಂದು ಜೀವಿಸುತಿದ್ದನು. ಮತ್ತು, ಕೊಡಲಿ, ಗುದ್ದಲಿ, ನೇಗಿಲು, ಕಲ್ಲಿ, ಮೊದಲಾದ ಆಯುಧಗಳನ್ನು ಧರಿಸಿ,ಕಾಡಿನಲ್ಲಿ ತಿರುಗುತ್ತಾ,ಗಡ್ಡೆಗೆಣಸುಗಳನ್ನೂ,ಹಣ್ಣುಗಳನ್ನೂ ಸಂಗ್ರಹಿಸಿ ತರುತಿದ್ದನು. ಆತನು ಬಹಳವೃದ್ಧನು. ಅವನ ಹೆಂಡತಿಯಾದರೋ ಎಳೆವಯಸ್ಸಿನವಳು. ದಾರಿದ್ರ್ಯದಿಂದ ಸಂಕಟಪಡುತಿದ್ದ ಆಕೆಯು ತನ್ನ ಎಳೆಯಮಕ್ಕಳನ್ನು ಭರಿಸಲಾರದೆ, ವೃದ್ಧನಾದ ತನ್ನ ಪತಿಯನ್ನು ನೋಡಿ “ಆರ್ಯನೆ ! ನಮ್ಮ ಈ ದಾರಿದ್ರ್ಯದಶೆಯು ಎಂದಿಗೆ ತೀರುವುದೋ ಕಾಣೆನು. ನೀನು ಈಗ ಹಿಡಿದಿರುವ ಈ ಗುದ್ದಲಿನೇಗಿಲುಗಳಿಂದಲೇ ನಮ್ಮ ಕಷ್ಟವು ತೀರದು” ಈಗ ನಾನೊಂದುಪಾಯವನ್ನು ಹೇಳುವೆನು ಕೇಳು. ಇದರಿಂದ ನಮಗೆ ಕ್ಷೇಮವುಂಟು “ ಈಗ ರಾಮನು ಬ್ರಾಹ್ಮಣರಿಗೆ ಅನೇಕವಾಗಿ ದಕ್ಷಿಣೆಯನ್ನು ಕೊಡುತ್ತಿರುವನು. ಈ ಸಮಯದಲ್ಲಿ ನಾವೂ ಈ ಮಕ್ಕಳನ್ನು ಕಟ್ಟಿಕೊಂಡು ಅವನ ಬಳಿಗೆ ಹೋದರೆ, ನಮಗೂ ಏನಾದರೂ ಸಿಕ್ಕಬಹುದು” ಎಂದಳು. ಹೆಂಡತಿಯ ಈ ಮಾತನ್ನು ಕೇಳಿದೊಡನೆಯೇ ಆ ಬ್ರಾಹ್ಮಣನು ಅದಕ್ಕೊಪ್ಪಿ, ಅರಮನೆಗೆ ಉಟ್ಟುಕೊಂಡು ಹೋಗುವುದಕ್ಕೆ ಯೋಗ್ಯವಾದ ಬಟ್ಟೆಗೂ ತನಗೆ ಗತಿಯಿಲ್ಲದುದರಿಂದ, ಮನೆಯಲ್ಲಿ

ಶತಚ್ಛಿದ್ರವಾಗಿ ಬಿದ್ದಿದ್ದ ಒಂದು ಹರಕುಬಟ್ಟೆಯನ್ನೇ ಸುತ್ತಿಕೊಂಡು ರಾಮನ ಅರಮನೆಯನ್ನು ಕುರಿತು ಹೊರಟನು. ಆತನು ಎಷ್ಟು ದರಿದ್ರನಾದರೇನು! ಆತನ ಮುಖದಲ್ಲಿ ಬ್ರಹ್ಮವರ್ಚಸ್ಸಾದರೋ ಅಗ್ನಿಯಂತೆ ಜ್ವಲಿಸುತ್ತಿತ್ತು'! ಆ ಜನಸಮೂಹದಲ್ಲಿ ಅವನು ನಿಂತಿದ್ದಾಗ ಭೃಗುಮಹರ್ಷಿಯಂತೆಯೂ, ಅಂಗಿರಸ್ಸಿನಂತೆಯೂ ಕಾಣುತಿದ್ದನು. ಆತನ ತೇಜಸ್ಸನ್ನು ನೋಡಿ ಹೆದರಿ,ದ್ವಾರಪಾಲಕರೊಬ್ಬರಾದರೂ ಅವನನ್ನು ತಡೆಯಲಿಲ್ಲ. ಹಾಗೆಯೇ ಅವನು ತಡೆಯಿಲ್ಲದೆ ಆ ಅರಮನೆಯ ಐದುತೊಟ್ಟಿಗಳನ್ನೂ ದಾಟಿ,ರಾಮನಿದ್ದಸ್ಥಳಕ್ಕೆ ಬಂದು, ಆತನನ್ನು ನೋಡಿ ‚‚ಎಲೆ ರಾಜಕುಮಾರನೆ!ನೀನು ಮಹಾಯಶಸ್ವಿಯು. ನಾನಾದರೋ ಬಹಳ ದರಿದ್ರನು. ನಾನೊಂದು ದೊಡ್ಡ ಕುಟುಂಬವನ್ನು ರಕ್ಷಿಸಬೇಕಾಗಿರುವುದು ! ನನಗೆ ಬಹುಮಂದಿ ಮಕ್ಕಳಿರುವರು. ಕಾಡಿನಲ್ಲಿ ಧಾನ್ಯದ ಕಾಳುಗಳನ್ನು ಆಯ್ದುತಂದು ಜೀವಿಸುತ್ತಿರುವೆನು. ನೀನು ನನ್ನನ್ನು ಕಟಾಕ್ಷಿಸಬೇಕು" ಎಂದನು. ಇದನ್ನು ಕೇಳಿ ರಾಮನು. ಆತನನ್ನು ನೋಡಿ ನಗುತ್ತಾ, ವಿನೋದಕ್ಕಾಗಿ ‚‚ಎಲೈ ಬ್ರಾಹ್ಮಣೋತ್ತಮನೆ! ಇದೋ! ನನ್ನಲ್ಲಿ ಅನೇಕಸಹಸ್ರಗೋವುಗಳಿರುವುವು. ನಿನಗೆ ಇದರಲ್ಲಿ ಒಂದೆರಡುಸಾವಿರ ಗೋವುಗಳನ್ನು ಕೊಟ್ಟರೂ ಸಾಲದೆಂದು ನನಗೆ ತೋರಿರುವುದು.ಅದಕ್ಕಾಗಿ ಈಗ ನೀನೊಂದುಕೆಲಸವನ್ನು ಮಾಡು! ಇದೋ! ಈ ದಂಡವನ್ನು ಕೈಗೆ ತೆಗದುಕೊಂಡು ನಿನ್ನ ಶಕ್ತಿಯಿರುವವರೆಗೂ ದೂರಕ್ಕೆ ಬಿಸುಡು!ನನ್ನಲ್ಲಿರುವ ಈ ಗೋವುಗಳೆಲ್ಲವನ್ನೂ ಸಾಲಾಗಿ ನಿಲ್ಲಿಸಿಡುವೆನು. ನೀನು ಬಿಸುಡುವ ಆದಂಡವು ಎಷ್ಟು ದೂರಕ್ಕೆಹೋಗಿ ಬೀಳುವುದೋ,ಅಷ್ಟುಗಲದಲ್ಲಿರುವ ಗೋವುಗಳೆಲ್ಲವನ್ನೂ ನೀನೇ ತೆಗದುಕೊಳ್ಳಬಹುದು"ಎಂದನು. ಆ ಬ್ರಾಹ್ಮಣನು ಬಹುಸಂಭ್ರಮದಿಂದ ದಟ್ಟಿಯನ್ನು ಕಟ್ಟಿ, ಆ ದಂಡವನ್ನು ತೆಗದುಕೊಂಡು ಗಿರ್ರನೆ ತಿರುಗಿಸಿ,ತನ್ನ ಶಕ್ತಿಯನ್ನು ಮೀರಿ ಎಸೆದನು. ಆತನ ಬ್ರಹ್ಮಬಲದ ಅತಿಶಯವನ್ನೇನೆಂದು ಹೇಳಲಿ! ಅವನು ಬೀಸಿದ ದಂಡವು ಸರಯೂನದಿಯನ್ನೂ ದಾಟಿ, ಅನೇಕಸಹಸ್ರಗೋವುಗಳಿಂದಾಚೆಗೆ,ಎತ್ತುಗಳನ್ನು ನಿಲ್ಲಿಸಿದ್ದಪ್ರದೇಶದಲ್ಲಿ ಬಿತ್ತು. ಧರ್ಮಾತ್ಮನಾದ ರಾಮನು ಬಹಳಸಂತೋಷಿಸಿ,ಆ ತ್ರಿಜಟನನ್ನು ಅಪ್ಪಿಕೊಂಡು, ಸರಯೂನದೀತೀರದಲ್ಲಿ ಆತನ ದಂಡವು

ಬಿದ್ದ ಸ್ಥಳದವರೆಗಿದ್ದ ಗೋವುಗಳೆಲ್ಲವನ್ನೂ ಕೂಡಿಸಿ,ಗೊಲ್ಲರಮೂಲಕವಾಗಿ ಆತನ ಆಶ್ರಮಕ್ಕೆ ಕಳುಹಿಸಿಕೊಡುವಂತೆ ನಿಯಮಿಸಿದನು. ಆಮೇಲೆ ಅಗಾರ್ಗ್ಯನನ್ನು ಸಮಾಧಾನಪಡಿಸುತ್ತಾ “ ಎಲೈ ಬ್ರಾಹ್ಮಣೋತ್ತಮನೆ! ನೀನು ಕೋಪಿಸಬೇಡ! ನಾನು ಪರಿಹಾಸಾರ್ಥವಾಗಿ ಹೀಗೆ ಹೇಳಿದೆನೇಹೊರತು ಬೇರೆಯಲ್ಲ. ನಿನ್ನಲ್ಲಿರುವ ಅತಿಶಯವಾದ ಈ ಬ್ರಹ್ಮತೇಜಸ್ಸನ್ನು ಪ್ರಕಾಶ ಪಡಿಸಬೇಕೆಂಬುದಕ್ಕಾಗಿಯೇ ಹೀಗೆ ನಿನಗೆ ಈ ಕಾರ್ಯವನ್ನು ಹೇಳಿದೆನು. ಇನ್ನು ನಿನಗೆ ಬೇಕಾದ ಬೇರೆ ಯಾವ ಕೋರಿಕೆಗಳಿದ್ದರೂ ಕೇಳು! ಅವೆಲ್ಲವನ್ನೂ ಕೊಡುವೆನು. ಆಗಲೂ ನಾನು ಪರಿಹಾಸಮಾಡುತ್ತಿರುವೆನೆಂದು ತಿಳಿಯಬೇಡ! ಸತ್ಯವಾಗಿಯೇ ಹೇಳುತ್ತಿರುವೆನು. ನಿನಗೆ ಯಾವವಿಧದಲ್ಲಿಯೂ ತಡೆಯಿಲ್ಲ. ನನ್ನಲ್ಲಿರತಕ್ಕ ಧನವೆಲ್ಲವೂ ಬ್ರಾಹ್ಮಣರ ಉಪಯೋಗಾರ್ಥವಾಗಿಯೇಹೊರತು ಬೇರೆಯಲ್ಲ! ಆದರಲ್ಲಿಯೂ ನಿಮ್ಮಂತಹ ಸತ್ಪಾತ್ರಗಳಲ್ಲಿ ವಿನಿಯೋಗಿಸಲ್ಪಡುವುದಾದರೆ, ನನ್ನ ಧನವು ಸಾರ್ಥಕ್ಯವನ್ನು ಹೊಂದಿ ನನಗೆ ಸಂತೋಷವನ್ನೂ ಕೀರ್ತಿಯನ್ನೂ ಉಂಟುಮಾಡವೆ?” ಎಂದನು. ಆಮೇಲೆ ಮಹರ್ಷಿಯಾದ ಆ ತ್ರಿಜಟನು ಪತ್ನಿಯೊಡಗೂಡಿ ಆ ಗೋಸಮೂಹಗಳೆಲ್ಲವನ್ನೂ ತೆಗೆಸಿಕೊಂಡು, ಮತ್ತಾವುದನ್ನೂ ಅಪೇಕ್ಷಿಸದೆ, ಅಷ್ಟರಲ್ಲಿಯೇ ತೃಪ್ತಿಪಟ್ಟು ಮಹಾತ್ಮನಾದ ರಾಮನಿಗೆ ಯಶಸ್ಸೂ, ವೀರ್ಯವೂ, ಸಂತೋಷವೂ, ಶೌಚವೂ ಹೆಚ್ಚುತ್ತಿರಬೇಕೆಂದು ಮಂಗಳಾಶೀರ್ವಾದಗಳನ್ನು ಮಾಡಿದನು. ರಾಮನೂಕೂಡ ಧರ್ಮಾತಿಕ್ರಮವಿಲ್ಲದೆ ತನ್ನ ವೀರ್ಯದಿಂದಲೇ ಸಂಪಾದಿಸಲ್ಪಟ್ಟ ಆ ಧನವೆಲ್ಲವೂ ಸತ್ಪಾತ್ರವಿನಿಯೋಗದಿಂದ ಸಾರ್ಥಕವಾಯಿತೆಂದು ಸಂತೋಷಪಟ್ಟು, ಆಮೇಲೆ ತನ್ನ ಸುಹೃಜ್ಜನರಿಗೂ, ಅವರವರಿಗೆ ತಕ್ಕ ಸನ್ಮಾನವಾಕ್ಯಗಳೊಡನೆ ತನ್ನಲ್ಲಿ ಉಳಿದ ಧನವನ್ನೂ ಹಂಚಿಕೊಡಿಸಿದನು. ಅಲ್ಲಿದ್ದ ಬ್ರಾಹ್ಮಣರಲ್ಲಿಯಾಗಲಿ, ಅತನ ಮಿತ್ರರಲ್ಲಿಯಾಗಲಿ ಭೃತ್ಯಜನರಲ್ಲಿಯಾಗಲಿ, ದರಿದ್ರರಲ್ಲಿಯಾಗಲಿ. ಕೊನೆಗೆ ಬೀದಿಬೀದಿಯಲ್ಲಿ ಭಿಕ್ಷೆಯೆತ್ತಿ ಜೀವಿಸುವವರಲ್ಲಿಯಾಗಲಿ, ರಾಮನಿಂದ ಯಥೋಚಿತಸನ್ಮಾನಗಳನ್ನೂ, ಗೋದಾನಾದಿಗಳನ್ನೂ ಪಡೆದು ತೃಪ್ತರಾಗದವರು. ಒಬ್ಬರಾದರೂ ಇರಲಿಲ್ಲ. ರಾಮನು ಎಷ್ಟೋ ಆತುರದಿಂದ ಮಾಡಿದುದಾದರೂ



ರಾಮನು ಸೀತಾಲಕ್ಷ್ಮಣರ ಪ್ರಯಾಣಕ್ಕೆ ಅನುಮತಿಯನ್ನು ಕೇಳುವುದಕ್ಕಾಗಿ ದಶರಥನ

ಆ ದಾನವು ಯಾವ ಭಾಗದಲ್ಲಿಯೂ ನ್ಯೂನತೆಯಿಲ್ಲದೆ ಎಲ್ಲರಿಗೂ ತೃಪ್ತಿಕರವಾಗಿಯೇ ನಡೆಸಲ್ಪಟ್ಟಿತು. ಇಲ್ಲಿಗೆ ಮೂವತ್ತೆರಡನೆಯ ಸರ್ಗವು.

---

(ರಾಮನು ಸೀತಾಲಕ್ಷ್ಮಣರನ್ನು ತನ್ನೊಡನೆ ಕಾಡಿಗೆ ಕರೆದುಕೊಂಡು ಹೋಗುವ ವಿಷಯದಲ್ಲಿ ಅನುಮತಿಯನ್ನು ಕೇಳುವುದಕ್ಕಾಗಿ ದಶರಥನ ಬಳಿಗೆ ಹೋದುದು.)

ರಾಮಲಕ್ಷ್ಮಣರಿಬ್ಬರೂ ಸೀತೆಯೊಡನೆ ಸೇರಿ, ಬ್ರಾಹ್ಮಣರಿಗೆ ಅನೇಕ ಧನಧಾನ್ಯಾದಿಗಳನ್ನು ಕೊಟ್ಟು, ದಶರಥನನ್ನು ನೋಡಿಬರುವುದಕ್ಕಾಗಿ ಹೊರಟರು. ಆಗ ಅವರಿಬ್ಬರೂ ಗಂಧಪುಷ್ಪಾದಿಗಳಿಂದ ಅಲಂಕರಿಸಲ್ಪಟ್ಟು, ಖಡ್ಗಾದ್ಯಾಯುಧಗಳನ್ನು ಧರಿಸಿ ಸಿದ್ಧರಾಗಿ ನಿಂತಿರಲು, ಆ ಆಯುಧಗಳು ನೋಡುವವರ ಕಣ್ಣುಗಳನ್ನು ಕೋರೈಸುವಂತೆ ತೇಜೋವಿಶೇಷದಿಂದ ಜ್ವಲಿಸುತ್ತ, ಪಕ್ಕದಲ್ಲಿ ಸೀತಾದೇವಿಯೂ ಇದ್ದುದರಿಂದ, ಮತ್ತಷ್ಟು ಶೋಭಾವಿಶೇಷವನ್ನು ಹೊಂದಿತ್ತು. ಇವರು ಹೋಗತಕ್ಕ ದಾರಿಯಲ್ಲಿ ಬಹುಜನರು ಗುಂಪುಗೂಡಿ ಕಿಕ್ಕಿರಿಸಿ ತುಂಬಿದ್ದುದರಿಂದ, ಸುಲಭಸಂಚಾರಕ್ಕೇ ಅವಕಾಶವಿರಲಿಲ್ಲ. ಅನೇಕಜನರು ತಮ್ಮ ತಮ್ಮ ಉಪ್ಪರಿಗೆಗಳನ್ನೂ, ವಿಮಾನಗಳನ್ನೂ ಏರಿನಿಂತು ಬಹುವ್ಯಸನದಿಂದ ರಾಮನನ್ನೇ ನೋಡುತಿದ್ದರು. ಆಗ ರಾಜಚಿಹ್ನವಾದ ಛತ್ರವೂ ಇಲ್ಲದೆ, ರಾಮನು ಕಾಲುನಡೆಯಿಂದಲೇ ಬರುತ್ತಿರುವುದನ್ನು ನೋಡಿ, ಪುರವಾಸಿಗಳೆಲ್ಲರೂ ವ್ಯಸನದಿಂದ ಮುಂದುಗಾಣದವರಾಗಿ, ಒಬ್ಬರಿಗೊಬ್ಬರು ವಿಧವಿಧವಾಗಿ ಮಾತಾಡಿಕೊಳ್ಳುತಿದ್ದರು. ಆಗ ಅವರಲ್ಲಿ ಕೆಲವರು "ಆಹಾ! ಈರಾಮನು ಹೊರಟಾಗ ದೊಡ್ಡ ಚತುರಂಗಸೈನ್ಯವು ಈತನನ್ನು ಹಿಂಬಾಲಿಸಿ ಹೋಗುತಿತ್ತು. ಇಂತಹ ರಾಮನನ್ನು ಈಗ ಸೀತಾಲಕ್ಷ್ಮಣರಿಬ್ಬರು ಮಾತ್ರವೇ ಅನುಸರಿಸಿ ಹೋಗುತ್ತಿರುವರು. ಆಹಾ! ಇದೇನು ವಿಪರೀತವು! ರಾಮನು ಪ್ರಭುತ್ವದ ಸುಖವನ್ನು ಚೆನ್ನಾಗಿ ಅನುಭವಿಸಿದವನು. ಕೋರಿದವರ ಕೋರಿಕೆಗಳೆಲ್ಲವನ್ನೂ ಆಗಾಗಲೇ ಈಡೇರಿಸಿಕೊಡತಕ್ಕವನು. ಪಿತೃಶುಶ್ರೂಷಾದಿಧರ್ಮಗಳಲ್ಲಿ ವಿಶೇಷಗೌರವವುಳ್ಳವನು. ಈಗ ಇವನು ತನ್ನ ತಂದೆಯ ಪ್ರತಿಜ್ಞೆಯನ್ನು ತಪ್ಪಿಸಲಾರದೆ, ಕಾಡಿಗೆ ಹೊರಟಿರುವುದು ಹಾಗಿರಲಿ! ಪೂರ್ವದಲ್ಲಿ ಯಾವಳನ್ನು ಆಕಾಶದಲ್ಲಿ ಸಂಚರಿಸುತ್ತಿರುವ ಭೂತಗಳೂ ನೋಡಲಾ

ರಥಿದು ವ್ರೋ,ಅಂತಹ ಸೀತೆಯು ಈಗ ರಾಜಮಾರ್ಗದಲ್ಲಿ ಕಾಲುನಡೆಯಿಂದ ಲೇ ಬರುತ್ತಿರುವುದರಿಂದ, ಬೀದಿಯ ಜನರೆಲ್ಲರೂ ನೋಡುವ ಹಾಗಾಯಿತ ಲ್ಲವೆ? ಅಯ್ಯೋ! ಈಸೀತೆಯ ದೇಹವು ಎಷ್ಟೋಸುಕುಮಾರವಾದುದು. ಈಕೆ ಯ ದೇಹಕ್ಕೆ ಸರ್ವೋತ್ತಮವಾದ ಸುಗಂಧಾನುಲೇಪನವೊಂದೇಉಚಿತವಾ ದುದು! ಈಕೆಯು ಯಾವಾಗಲೂ ರಕ್ತಚಂದನದಿಂದಲೇ ತನ್ನದೇಹವನ್ನು ಅಲಂಕರಿಸಿಕೊಳ್ಳುತಿದ್ದವಳು. ಇಂತಹ ಸೀತೆಯ ದೇಹವು ಇನ್ನುಮೇಲೆ ಬಿ ಸಿಲುಮಳೆಗಾಳಿಗೆ ಸಿಕ್ಕಿ,ಕಂದಿಹೋಗಬೇಕಾದ ಕಾಲವು ಬಂದೊದಗಿರುವು ದಲ್ಲಾ! ಛೀ! ಈಗ ದಶರಥನಿಗೆ ಯಾವುದೋ ಒಂದು ಕೆಟ್ಟಪಿಶಾಚಿಯು ಬಂದು ಮೆಟ್ಟಿರುವಂತಿದೆ! ಇದರಲ್ಲಿ ಸಂದೇಹವೇಇಲ್ಲ! ಹಾಗಿಲ್ಲದಿದ್ದರೆ ಇದು ವರೆಗೂ ಎಷ್ಟೋ ಗುಣಾಢ್ಯನೆನಿಸಿಕೊಂಡಿದ್ದ ಆರಾಜನು,ತನ್ನಮುದ್ದುಮಗ ನಾದ ರಾಮನನ್ನು ಕಾಡಿಗೆ ಕಳುಹಿಸುತಿದ್ದನೆ ! ಹೊಟ್ಟೆಯಲ್ಲಿ ಹು ಟ್ಟಿದಮಕ್ಕಳು ಎಷ್ಟೇ ಗುಣಹೀನರಾಗಿದ್ದರೂ,ತಂದೆತಾಯಿಗಳು ಮಕ್ಕಳನ್ನು ಕಾಡಿಗೆಕಳುಹಿಸಲಾರರು. ತನ್ನ ಸೌಜನ್ಯದಿಂದ ಲೋಕವೆಲ್ಲವನ್ನೂ ವಶಪಡಿಸಿ ಕೊಂಡಿರುವ ಇಂತಹ ರಾಮನೆಂಬ ಪುತ್ರರತ್ನವನ್ನೇ ಹೀಗೆ ತೊರೆದು ಬಿಡ ಬೇಕಾದರೆ ಇನ್ನು ಹೇಳುತಕ್ಕುದೇನು? ಅಹಿಂಸೆ, ದಯೆ,ಇಂದ್ರಿಯನಿಗ್ರಹ, ವಿದ್ಯೆ,ಶೀಲ, ಅಂತರಿಂದ್ರಿಯನಿಗ್ರಹ, ಬಹಿರಿಂದ್ರಿಯನಿಗ್ರಹಗಳೆಂಬ ಈ ಆರು ಗುಣಗಳೂ ರಾಮನಿಗೆ ಸರ್ವೋತ್ತಮವಾದ ಶೋಭಾತಿಶಯವನ್ನುಂಟುಮಾ ಡುತ್ತಿರುವುವು. ಈ ರಾಮನಿಗೆ ಸ್ವಲ್ಪ ಹಿಂಸೆಯುಂಟಾದರೂ ಬೇಸಗೆಯಲ್ಲಿ ನೀರೊಣಗಿದ ಕೊಳಗಳಲ್ಲಿ ಸಿಕ್ಕಿ ಸಂಕಟಪಡುತ್ತಿರುವ ಜಲಜಂತುಗಳಂತೆಪ್ರ ಜೆಗಳು ಪರಿತಪಿಸುವರು. ಈ ರಾಮನೇ ಜಗತ್ತಿಗೆಲ್ಲ ಅಧಿನಾಥನು. ಅಂತಹ ರಾಮನಿಗೆ ವನವಾಸಪೀಡೆಯುಂಟಾದರೆ,ಬುಡವುಕೆಟ್ಟುಹೋದಮೇಲೆಪುಷ್ಪ ಫಲಭರಿತವಾದ ಮರವೂನಾಶಹೊಂದುವಂತೆ, ಆತನ ಆಧಾರದಿಂದಿರುವ ಈ ಲೋಕವೆಲ್ಲವೂ ನಾಶಹೊಂದುವುದರಲ್ಲಿ ಸಂದೇಹವಿಲ್ಲ. ಧರ್ಮವೆಂಬುದೇ .ಈ ತನಿಗೆ ಮುಖ್ಯವಾದ ಸಾರವು. ಈತನಲ್ಲಿ ಅದ್ಭುತವಾದ ಒಂದು ದಿವ್ಯತೇಜ ಸ್ಸಿರುವುದು.ಮನುಷ್ಯಾದಿಪ್ರಾಣಿರೂಪಗಳಾದ ವೃಕ್ಷಕ್ಕೆ ಈತನೇ ಮೂಲ ಪ್ರಾಯನಾಗಿರುವನು. ಈ ಪ್ರಪಂಚದಲ್ಲಿರುವ ಇತರಜನರೆಲ್ಲರೂ ಆ ವೃಕ್ಷ

ದಲ್ಲಿ ಬೆಳೆದಿರುವ ಪುಷ್ಪಗಳಂತೆಯೂ, ಫಲಗಳಂತೆಯೂ, ಶಾಖೆಗಳಂತೆಯೂ, ಇರುವರು. ಆದುದರಿಂದ ಆತನನ್ನಾಶ್ರಯಿಸಿ ಜೀವಿಸುತ್ತಿರುವ ನಾವೆಲ್ಲರೂ ಪುತ್ರ ಮಿತ್ರ ಕಳತ್ರಬಂಧುಗಳೊಡಗೂಡಿ, ಆ ಲಕ್ಷ್ಮಣನಂತೆ, ರಾಮನನ್ನೇ ಹಿಂಬಾಲಿಸಿ ಹೋಗುವುದುಚಿತವು. ನಾವೆಲ್ಲರೂ ನಮ್ಮ ಮನೆಮಾರುಗಳನ್ನೂ, ಹೊಲಗದ್ದೆಗಳನ್ನೂ, ಇನ್ನೂ ಉಳಿದ ಸಮಸ್ತಸ್ವತ್ತುಗಳನ್ನೂ ಬಿಟ್ಟು, ಧಾರ್ಮಿಕನಾದ ರಾಮನನ್ನೇ ಹಿಂಬಾಲಿಸಿ, ಆತನ ಸುಖದುಃಖಗಳಿಗೆ ಸಮಭಾಗಿಗಳಾಗಿ ಹೋಗುವೆವು. ಹೇಗಿದ್ದರೂ ನಾವು ನಮ್ಮ ಮನೆಯನ್ನು ಬಿಟ್ಟು ಹೋದಮೇಲೆ, ನಾವು ಸಂಗ್ರಹಿಸಿಟ್ಟಿರುವ ನಿಧಿನಿಕ್ಷೇಪಗಳೆಲ್ಲವೂ ಪರರ ಪಾಲಾಗುವುವು. ನಮ್ಮ ಮನೆಮಠಗಳೆಲ್ಲವೂ ಹಾಳು ಬೀಳುವುವು. ನಾವು ಸೇರಿಸಿಟ್ಟಿರುವ ಧನಧಾನ್ಯಗಳೆಲ್ಲವೂ ಸೂರೆಹೋಗುವುವು. ನಮ್ಮಲ್ಲಿರತಕ್ಕ ಶಯನಾಸನಾದಿ ಸಮಸ್ತಪದಾರ್ಥಗಳೂ ಕಳ್ಳರ ಪಾಲಾಗುವುವು. ಅವೆಲ್ಲವೂ ಹಾಗಿರಲಿ! ಮುಖ್ಯವಾಗಿ ಇನ್ನು ಸ್ವಲ್ಪಕಾಲದಲ್ಲಿಯೇ ನಮ್ಮ ಮನೆಯ ಅಂಗಳವೆಲ್ಲವೂ ಧೂಳಿನಿಂದ ತುಂಬಿ, ಗೃಹದೇವತೆಗಳೂ ಬಿಟ್ಟುಹೋಗುವರು. ಅಲ್ಲಲ್ಲಿ ಇಲಿಹೆಗ್ಗಣಗಳು ಹೆಚ್ಚಿ ಬಿಲಗಳನ್ನು ಕೊರೆದು ನಿರಾತಂಕವಾಗಿ ಓಡಾಡುವುವು. ಇನ್ನುಮೇಲೆ ನಮ್ಮ ಮನೆಯು ಜಲಸೇಚನವೆಂಬುದನ್ನೇ ಕಾಣದು. ಇದನ್ನು ಗುಡಿಸುವವರೂ ಇಲ್ಲದೇ ಹೋಗುವರು. ಇದುವರೆಗೂ ನಾವು ಸುವಾಸನೆಗಾಗಿ ಆಗಾಗ ಉಪಯೋಗಿಸುತಿದ್ದ ಧೂಪದೀಪಾದಿಗಳಿಗೂ ಇನ್ನುಮೇಲೆ ಅವಕಾಶವಿಲ್ಲ. ಬಲಿಕರ್ಮಗಳಾಗಲಿ, ಯಜ್ಞಕಾರ್ಯಗಳಾಗಲಿ, ಅಗ್ನಿಹೋತ್ರಗಳಾಗಲಿ, ಜಪಗಳಾಗಲಿ, ಯಾವುದೊಂದೂ ಇನ್ನುಮೇಲೆ ನಮ್ಮ ಮನೆಯಲ್ಲಿ ನಡೆಯಲಾರವು. ಕೊನೆಗೆ ಹೊಗೆಯಾಡುವುದಕ್ಕೇ ಅವಕಾಶವಿಲ್ಲ. ಬರಗಾಲದಲ್ಲಿ ಬಿಟ್ಟುಹೋಗುವುದರಿಂದ ಹಾಳುಬಿದ್ದ ಮನೆಗಳಂತೆ, ಒಡೆದುಹೋದ ಕುಡಿಕೆ ಮಡಕೆಗಳಿಂದ ತುಂಬಿದ ನಮ್ಮ ಮನೆಗಳೆಲ್ಲವನ್ನೂ, ದುರಾಶೆಯುಳ್ಳ ಆ ಕೈಕೇಯಿಯೇ ಇಟ್ಟುಕೊಂಡು ಸ್ವೇಚ್ಛೆಯಾಗಿ ಅನುಭವಿಸಲಿ! ಈ ಅಯೋಧ್ಯೆಯೇ ಕಾಡಾಗಿರಲಿ! ರಾಮನು ಹೋಗತಕ್ಕ ಕಾಡುಗಳೇ ಪಟ್ಟಣಗಳಾಗಲಿ! ನಾವು ರಾಮನೊಡನೆ ಹೋದರೆ, ನಮಗೆ ಕಾಡಿನಲ್ಲಿ ಯಾವುದೊಂದು ಭಯವೂ ಇರದು. ಬಿಲಗಳಲ್ಲಿರುವ ಹಾವುಗಳೂಕೂಡ ನಮಗೆ ಹೆದರಿ ಬಿಟ್ಟು

ಹೋಗುವುವು. ಬೆಟ್ಟದ ತಪ್ಪಲುಗಳಲ್ಲಿರುವ ಮೃಗಪಕ್ಷಿಗಳೆಲ್ಲವೂ ಆ ಸ್ಥಳವನ್ನು ಬಿಟ್ಟೋಡುವುವು. ಕಾಡಾನೆಗಳೂ, ಸಿಂಹಗಳೂ ಕಾಡುಗಳನು ಬಿಟ್ಟು ಓಡಿಹೋಗುವುವು. ಕೊನೆಗೆ ಆ ಕ್ರೂರಜಂತುಗಳೆಲ್ಲವೂ ನಿರಾಶ್ರಯವಾಗಿ ಈ ಪಟ್ಟಣದಲ್ಲಿಯೇ ಬಂದು ಸೇರಲಿ ! ನಾವು ಅಲ್ಲಿಗೆ ಹೋದಮೇಲೆ ಹುಲ್ಲುಕಡ್ಡಿಗಳನ್ನೂ, ಮಾಂಸಗಳನ್ನೂ, ಹಣ್ಣುಗಳನ್ನೂ ತಿಂದು ಜೀವಿಸತಕ್ಕ ವನಜೀವಿಗಳೆಲ್ಲವೂ ಈ ಪಟ್ಟಣಕ್ಕೆ ಬಂದು ಸೇರಿ, ಇಲ್ಲಿ ಸ್ಥಿರವಾಗಿ ನೆಲೆಗೊಂಡಿರಲಿ ! ಕ್ರೂರಜಂತುಗಳಿಂದ ತುಂಬಿರುವ ಈ ದೇಶವನ್ನು ಕೈಕೇಯಿಯೂ, ಅವಳ ಮಗನೂ, ಅವರ ಬಂಧುಗಳೂ ಸಂತೋಷದಿಂದನುಭವಿಸಲಿ ! ನಾವು ರಾಮನೊಡನೆ ಸೇರಿ ಸುಖದಿಂದಿರುವೆವು ” ಎಂದರು. ಹೀಗೆ ಅನೇಕಜನರು ವಿಧವಿಧವಾದ ಮಾತುಗಳನ್ನಾಡುತ್ತಿರಲು, ರಾಮನು ಅವೆಲ್ಲವನ್ನೂ ಕೇಳುತ್ತಲೇ ಹೋಗುತಿದ್ದನು. ಆತನು ಬಹಳಗಂಭೀರಸ್ವಭಾವವುಳ್ಳವನಾದುದರಿಂದ, ಅವುಗಳನ್ನು ಕೇಳಿಯೂ ಯಾವವಿಧವಾದ ಸಂತೋಷವಿಕಾರವನ್ನೂ ಹೊಂದಲಿಲ್ಲ. ಧರ್ಮಾತ್ಮನಾದ ಆ ರಾಮನು, ಕೈಲಾಸಶಿಖರದಂತೆ ಮಹೋನ್ನತವಾಗಿ ಪ್ರಕಾಶಿಸುತ್ತಿರುವ ತಂದೆಯ ಅರಮನೆಯನ್ನು ದೂರದಿಂದಲೇ ನೋಡುತ್ತಾ,ಮದದಾನೆಯಂತೆಗಂಭೀರವಾದ ನಡೆಯಿಂದ ಮುಂದೆ ಬಂದನು. ಅಲ್ಲಿ ಅನೇಕವೀರಪುರುಷರು ವಿನೀತರಾಗಿ ಬಾಗಿಲನ್ನು ಕಾಯುತಿದ್ದರು. ರಾಮನು ಆ ಅರಮನೆಯನ್ನು ಪ್ರವೇಶಿಸಿದೊಡನೆ ಅಲ್ಲಿಗೆ ಸ್ವಲ್ಪದೂರದಲ್ಲಿ ದೈನ್ಯದಿಂದ ನಿಂತಿರುವ ಸುಮಂತ್ರನನ್ನು ನೋಡಿದನು. ಹೀಗೆ ರಾಮನು ಪಿತೃಪರಿಪಾಲನವೆಂಬ ವ್ರತವನ್ನಂಗೀಕರಿಸಿ, ತಂದೆಯನ್ನು ನೋಡುವುದಕ್ಕಾಗಿ ದಾರಿಯಲ್ಲಿ ಬರುತಿದ್ದಾಗ,ಆತನನ್ನು ನೋಡಿದ ಪುರವಾಸಿಗಳೆಲ್ಲರೂ ಅನೇಕವಿಧದಲ್ಲಿ ಸ್ತೋತ್ರಮಾಡುತ್ತ, ಆತನ ಕಷ್ಟಕ್ಕಾಗಿ ದುಃಖಿಸುತಿದ್ದರೂ, ಅವನು ಮಾತ್ರ ಸ್ವಲ್ಪವೂ ವ್ಯಸನವನ್ನು ತೋರಿಸಿಕೊಳ್ಳದೆ, ನಗುಮುಖವುಳ್ಳವನಾಗಿಯೇ ಇದ್ದನು. ಮಹಾತ್ಮನಾಗಿಯೂ, ಧೀರನಾಗಿಯೂ ಇರುವ ಆ ದಶರಥಪುತ್ರನು ಹೀಗೆ ವನಪ್ರಯಾಣಕ್ಕೆ ನಿಶ್ಚಯಿಸಿಕೊಂಡು, ಅಲ್ಲಿ ತನಗೆ ತಂದೆಯು ವನವಾಸವನ್ನಾಜ್ಞಾಪಿಸಿದುದುಮೊದಲು ವ್ಯಸನದಿಂದ ಕೊರಗುತ್ತಿದ್ದ ಸುಮಂತ್ರನನ್ನು ನೋಡಿ, ತಾನು ಬಂದಿರುವ ವಿಷಯವನ್ನು ತಂದೆಗೆ

ತಿಳಿಸುವುದಕ್ಕಾಗಿ ಆ ಸುಮಂತ್ರನನ್ನೇ ನಿರೀಕ್ಷಿಸುತ್ತ, ಸ್ವಲ್ಪಹೊತ್ತಿನವರೆಗೆ ಅಲ್ಲಿಯೇ ಸುಮ್ಮನೆ ನಿಂತಿದ್ದನು. ಕೊನೆಗೆ ತಾನಾಗಿಯೇ ಆತನ ಬಳಿಗೆ ಹೋಗಿ, ತಾನು ವನಪ್ರಯಾಣಕ್ಕೆ ಸಿದ್ಧನಾಗಿ ಬಂದಿರುವ ವಿಷಯವನ್ನು ದಶರಥನಿಗೆ ತಿಳಿಸಿ ಬರಬೇಕೆಂದು ಆತನನ್ನು ಕೇಳಿಕೊಂಡನು. ಇಲ್ಲಿಗೆ ಮೂವತ್ತುಮೂರ ನೆಯ ಸರ್ಗವು.

---

(ರಾಮನು ವನಪ್ರಯಾಣಕ್ಕಾಗಿ ದಶರಥನ ಅನುಮತಿ ಯನ್ನು ಕೇಳಿದುದು.)

ಕಮಲದಳದಂತೆ ವಿಸ್ತಾರವಾದ ಕಣ್ಣುಳ್ಳವನಾಗಿಯೂ, ಶ್ಯಾಮವ ರ್ಣನಾಗಿಯೂ, ಸಣ್ಣನಡುವುಳ್ಳವನಾಗಿಯೂ ಇರುವ ಪೂಜ್ಯನಾದ ರಾಮ ನು, ಅಲ್ಲಿದ್ದ ಸೂತನನ್ನು ನೋಡಿ, ತಂದೆಗೆ ತಾನು ಬಂದಿರುವ ವೃತ್ತಾಂತ ವನ್ನು ತಿಳಿಸಬೇಕೆಂದು ಹೇಳಿದನು. ರಾಮನಿಂದ ಪ್ರೇರಿಸಲ್ಪಟ್ಟ ಆ ಸುಮಂತ್ರನು, ದುಃಖದಿಂದ ಕಲಗಿದ ಇಂದ್ರಿಯಗಳುಳ್ಳವನಾಗಿ, ಆಗಲೇ ಒಳಕ್ಕೆ ಪ್ರವೇಶಿಸಿ, ಅಲ್ಲಿ ದೈನ್ಯದಿಂದ ನಿಟ್ಟುಸಿರುಬಿಡುತ್ತಿರುವ ದಶರಥನನ್ನು ನೋಡಿದನು. ಆಗ ದಶರಥನ ದುಸ್ಸ್ಥಿತಿಯನ್ನು ಹೇಳತಕ್ಕುದೇನು ! ರಾಹು ಗ್ರಸ್ತನಾದ ಸೂರ್ಯನಂತೆಯೂ, ಬೂದಿಮುಚ್ಚಿದ ಬೆಂಕಿಯಂತೆಯೂ, ನೀರಿ ಲ್ಲದ ಕೆರೆಯಂತೆಯೂ, ಕಳೆಗುಂದಿದವನಾಗಿದ್ದನು. ಆತನ ಮನಸ್ಸೆಲ್ಲವೂ ಸಂಪೂರ್ಣವಾಗಿ ಕಳವಳಿಸಿತ್ತು. ಅವನು ರಾಮನನ್ನೇಕುರಿತು ಹಂಬಲಿಸು ತಿದ್ದನು ಹೀಗೆ ದುರವಸ್ಥೆಯನ್ನು ಹೊಂದಿದ ದಶರಥನಬಳಿಗೆ, ಪ್ರಾಜ್ಞ ನಾದ ಆ ಸುಮಂತ್ರನು ವಿನಯದಿಂದ ಬದ್ಧಾಂಜಲಿಯಾಗಿಯೇ ಬಂ ದು, ಕ್ರಮಪ್ರಕಾರವಾಗಿ ಆತನಿಗೆ ಜಯಶಬ್ದದೊಡನೆ ಮಂಗಳಾಶಾಸನ ವನ್ನು ಮಾಡಿ, ಭಯದಿಂದ ಕುಗ್ಗಿದ ಸ್ವರವುಳ್ಳವನಾಗಿ, ಮೆಲ್ಲಗೆ ಒಂದಾ ನೊಂದು ಮಾತನ್ನು ಹೇಳುವನು, “ಎಲೈ, ಮಹಾರಾಜನೆ ! ಪುರುಷಶ್ರೇಷ್ಠ ನಾದ ನಿನ್ನ ಕುಮಾರನು ಬಾಗಿಲಲ್ಲಿ ಬಂದು ನಿಂತಿರುವನು. ಆಗಲೇ ಅವನು ಅನೇಕಬ್ರಾಹ್ಮಣರಿಗೂ, ಪರಿಜನರಿಗೂ, ವಿಶೇಷವಾದ ದ್ರವ್ಯವನ್ನು ದಾನ ಮಾಡಿ, ನಿನ್ನನ್ನು ನೋಡಿಹೋಗುವುದಕ್ಕಾಗಿ ಬಂದಿರುವನು. ಮತ್ತು ತನ್ನ

ಮಿತ್ರರೆಲ್ಲರನ್ನೂ ನೋಡಿ, ವನಪ್ರಯಾಣಕ್ಕಾಗಿ ಅವರವರ ಅನುಮತಿಯನ್ನೂ ಪಡೆದು ಇಲ್ಲಿಗೆ ಬಂದಿರುವನು. ಈಗಲೇ ಆತನು ವನಪ್ರಯಾಣಕ್ಕೆ ಸಿದ್ಧನಾಗಿ ನಿಂತಿರುವುದರಿಂದ, ಸೂರ್ಯನು ಕಿರಣಗಳಿಂದ ಕೂಡಿ ಪ್ರಕಾಶಿಸುವಂತೆ, ಸಮಸ್ತರಾಜಗುಣಗಳಿಂದಲೂ, ಪ್ರಕಾಶಿಸುತ್ತಿರುವ ಆತನನ್ನು ಕರೆಯಿಸಿ ನೋಡು" ಎಂದನು. ದಶರಥನಾದರೋ ಸತ್ಯವನ್ನು ಎಂದಿಗೂ ಮೀರತಕ್ಕವನಲ್ಲ. ಲೋಕದಲ್ಲಿ ತಾನೇ ಧರ್ಮಸ್ವರೂಪನೆನಿಸಿಕೊಂಡಿರುವನು. ಗಾಂಭೀರ್ಯದಲ್ಲಿ ಸಮುದ್ರದಂತಿರುವನು. ಆಕಾಶದಂತೆ ನಿರ್ಮಲನಾಗಿರುವನು. ಹೀಗೆ ಗುಣಾಢ್ಯನಾದ ದಶರಥನು ಸುಮಂತ್ರನನ್ನು ಕುರಿತು, "ಎಲೈ ಸೂತನೆ! ನನ್ನ ಪತ್ನಿಯರೆಲ್ಲರನ್ನೂ ಇಲ್ಲಿಗೆ ಕರೆಸು. ಇನ್ನೂ ನನ್ನ ಸಂಬಂಧಿಗಳು ಯಾರುಂಟೋ ಅವರೆಲ್ಲರನ್ನೂ ಈಗಲೇ ಕರೆದುಕೊಂಡುಬಾ! ಅವರೆಲ್ಲರೊಡಗೂಡಿಯೇ ರಾಮನನ್ನು ನೋಡಬೇಕೆಂದಿರುವೆನು." ಎಂದನು. ಇದನ್ನು ಕೇಳಿದೊಡನೆ ಸುಮಂತ್ರನು ಅರಮನೆಯಿಂದ ಹೊರಟು, ಅಂತಃಪುರಕ್ಕೆ ಹೋಗಿ, ರಾಜಪತ್ನಿಯರನ್ನು ಕುರಿತು, "ಅಮ್ಮಾ! ರಾಜನು ನಿಮ್ಮನ್ನು ಕರೆಯುವನು! ಈಗಲೇ ನೀವು ಅಲ್ಲಿಗೆ ಬರಬೇಕು!" ಎಂದನು. ಇದನ್ನು ಕೇಳಿ ಆ ರಾಜಸ್ತ್ರೀಯರೆಲ್ಲರೂ ರಾಜಾಜ್ಞೆಯನ್ನು ಗೌರವಿಸಿ, ಒಡನೆಯೇ ಅಲ್ಲಿಂದ ಹೊರಟು ದಶರಥನಿದ್ದ ಸ್ಥಳಕ್ಕೆ ಬಂದರು, ಮುನ್ನೂರೈವತ್ತುಮಂದಿ ರಾಜಸ್ತ್ರೀಯರು ಕೌಸಲ್ಯೆಯನ್ನು ಮುಂದಿಟ್ಟುಕೊಂಡು ಮೆಲ್ಲಗೆ ಆ ರಾಜಗೃಹಕ್ಕೆ ಬಂದುಸೇರಿದರು. ತನ್ನ ಪತ್ನಿಯರೆಲ್ಲರೂ ಬಂದು ಸೇರಿದಮೇಲೆ, ದಶರಥನು ರಾಮನನ್ನು ಒಳಕ್ಕೆ ಕರೆತರುವಂತೆ ಸುಮಂತ್ರನಿಗೆ ಆಜ್ಞಾಪಿಸಿದನು! ಅದರಂತೆಯೇ ಸುಮಂತ್ರನು ಸೀತಾಲಕ್ಷ್ಮಣರೊಡಗೂಡಿದ ರಾಮನನ್ನು ಸಂಗಡಕರೆದುಕೊಂಡು ಬಂದು ದಶರಥನ ಸಮೀಪದಲ್ಲಿ ಬಿಟ್ಟನು. ದೂರದಿಂದಲೇ ಕೈಮುಗಿದುಕೊಂಡು ತನ್ನ ಕಡೆಗೆ ಬರುತ್ತಿರುವ ರಾಮನನ್ನು ಕಂಡೊಡನೆ, ದಶರಥನು ಥಟ್ಟನೆ ತಾನು ಕುಳಿತಿದ್ದ ಆಸನದಿಂದ ಎದ್ದುನಿಂತು, ಉಕ್ಕಿಬರುತ್ತಿರುವ ಮನಸ್ಸಿನ ಸಂಕಟದಿಂದ ಮೈತಿಳಿಯದವನಾಗಿ, ತನ್ನನ್ನು ಸುತ್ತಿದ್ದ ಪತ್ನಿಯರೊಡಗೂಡಿ ಮುಂದೆ ಬಂದನು. ಹೀಗೆ ಅತಿವೇಗದಿಂದ ರಾಮನಿಗೆ ಅಭಿಮುಖವಾಗಿ ಓಡಿಬರುವುದಕೆ, ಪ್ರಯತ್ನಿಸಿ, ಹಾಗೆಯೇ ವ್ಯಸನದಿಂದ ಮೂರ್ಛೆಯನ್ನು ಹೊಂದಿ

ನೆಲದಮೇಲೆ ಬಿದ್ದುಬಿಟ್ಟನು ಇದನ್ನುನೋಡಿ ರಾಮಲಕ್ಷ್ಮಣರಿಬ್ಬರೂ ಬೇಗನೆ ಮುಂದೆಬಂದು, ದುಃಖದಿಂದ ಪ್ರಜ್ಞೆತಪ್ಪಿ ಬಿದ್ದಿರುವ ತಂದೆಯನ್ನು ಎತ್ತಿ ಕುಳ್ಳಿರಿಸುವುದಕ್ಕೆ ಪ್ರಯತ್ನಿಸಿದರು. ಆಕಾಲದಲ್ಲಿ ಅಲ್ಲಿದ್ದ ಸ್ತ್ರೀಯರೆಲ್ಲರೂ ಗಟ್ಟಿಯಾಗಿ ಗೋಳಿಡುವುದಕ್ಕಾರಂಭಿಸಿದರು. ಹೀಗೆ ಸ್ತ್ರೀಯರೆಲ್ಲರೂ ಮುಂದುಗಾಣದೆ ಭಯಸಂಭ್ರಮಗಳಿಂದ ಓಡಾಡುತ್ತಿರುವಾಗ, ಅವರ ಕಾಲಂದುಗೆ ಮೊದಲಾದ ಆಭರಣಗಳ ಧ್ವನಿಗಳೊಡನೆ, ಅವರ ಹಾಹಾಕಾರವೂ ಅರಮನೆಯ ನಾಲ್ಕುಕಡೆಗೂ ವ್ಯಾಪಿಸಿತು. ಒಬ್ಬೊಬ್ಬರೂ ರಾಮನ ಹೆಸರನ್ನು ಹಿಡಿದು ಹಾಹಾಕಾರದೊಡನೆ ಕೂಗಿಕೊಳ್ಳುತಿದ್ದರು. ಇಷ್ಟರಲ್ಲಿ ರಾಮಲಕ್ಷ್ಮಣರಿಬ್ಬರೂ ತಮ್ಮ ಎರಡುತೋಳುಗಳಿಂದಲೂ ಆ ದಶರಥನನ್ನು ಎತ್ತಿಕೊಂಡು ಬಂದು ಮಂಚದಮೇಲೆ ಮಲಗಿಸಿದರು. ಸೀತಾದೇವಿಯೂ ಇವರಿಗೆ ಸಹಾಯಕಳಾಗಿ ದಶರಥನಿಗೆ ಶೈತ್ಯೋಪಚಾರಗಳನ್ನು ಮಾಡುತಿದ್ದಳು. ಈ ಅತ್ಯಾಹಿತವನ್ನು ನೋಡಿ ಸೀತಾರಾಮಲಕ್ಷ್ಮಣರು ಮೂವರೂ ವ್ಯಸನವನ್ನು ತಡೆಯಲಾರದೆ ಅಳುತಿದ್ದರು. ಒಂದು ಮುಹೂರ್ತಕಾಲದ ಮೇಲೆ ದಶರಥರಾಜನು ಚೇತರಿಸಿ ಪ್ರಜ್ಞೆಹೊಂದಿದುದನ್ನು ನೋಡಿ, ದುಃಖಸಮುದ್ರದಲ್ಲಿ ಮುಳುಗಿಹೋಗಿದ್ದ ಆತನನ್ನು ಕುರಿತು ರಾಮನು ವಿನಯದಿಂದ ಕೈಮುಗಿಯುತ್ತಾ "ಎಲೈ ಮಹಾರಾಜನೆ! ನಿನ್ನಲ್ಲಿ ನನ್ನದೊಂದು ಪ್ರಾರ್ಥನೆಯುಂಟು. ನಮ್ಮೆಲ್ಲರಿಗೂ ನೀನೇ ಮುಖ್ಯನಿಯಾಮಕನಲ್ಲವೆ! ನಾನು ಈಗ ದಂಡಕಾರಣ್ಯಕ್ಕೆ ಹೊರಟಿರುವೆನು. ಪ್ರಯಾಣಸಿದ್ಧನಾಗಿರುವ ನನ್ನನ್ನು ಕ್ಷೇಮದಿಂದ ನೋಡಿ ಆಶೀರ್ವದಿಸು. ಇದೋ! ತಮ್ಮನಾದ ಲಕ್ಷ್ಮಣನೂ, ಪ್ರಿಯಪತ್ನಿಯಾದ ಸೀತೆಯೂ ನನ್ನೊಡನೆ ಬರುವುದಾಗಿ ಸಂಕಲ್ಪಿಸಿಕೊಂಡಿರುವರು. ಅವರಿಬ್ಬರಿಗೂ ನೀನು ಅನುಮತಿಯನ್ನು ಕೊಟ್ಟುಕಳುಹಿಸು. ನಾನು ಅನೇಕಕಾರಣಗಳನ್ನು ಹೇಳಿ ತಡೆದರೂ, ಇವರಿಬ್ಬರೂ ನನ್ನನ್ನು ಬಿಟ್ಟಿರುವುದಕ್ಕೆ ಇಷ್ಟಪಡದೆ ಹೋದರು. ನೀನು ವ್ಯಸನವನ್ನು ಬಿಟ್ಟು ನಮ್ಮೆಲ್ಲರಿಗೂ ಅನುಮತಿಯನ್ನು ಕೊಡು. ಬ್ರಹ್ಮದೇವನು ಪ್ರಜೆಗಳನ್ನು ಆಯಾಕಾರ್ಯಗಳಿಗೆ ನಿಯಮಿಸುವಂತೆ, ನಮ್ಮೆಲ್ಲರಿಗೂ ನೀನೇ ಆಜ್ಞೆಯನ್ನು ಕೊಟ್ಟು ಕಳುಹಿಸಬೇಕಲ್ಲವೆ?" ಎಂದನು. ಹೀಗೆ ತನ್ನ ಆಜ್ಞೆಯನ್ನು ಅತ್ಯಾತುರದಿಂದ ಇದಿರುನೋಡುತ್ತಿರುವ ರಾಮನನ್ನು ನೋ

ಡಿ ದಶರಥನು "ವತ್ಸ ರಾಮಾ ! ನಾನು ವರಪ್ರದಾನವೆಂಬ ವ್ಯಾಜದಿಂದ ಕೈಕೇಯಿಯ ಮಾತಿಗೆಮರುಳಾಗಿ ಧರ್ಮಪಾಶಕ್ಕೆ ಕಟ್ಟುಬಿದ್ದಿರುವೆನು. ಹೀಗೆ ಮೋಸಹೋಗಿರುವ ನನ್ನನ್ನು ನಿಗ್ರಹಿಸುವುದಕ್ಕೂ ಈಗ ನಿನಗೆ ಪೂರ್ಣವಾದ ಅಧಿಕಾರವುಂಟು!ಆದುದರಿಂದ ಈಗ ನನ್ನನ್ನೇ ನೀನು ನಿಗ್ರಹಿಸಿ‹ಈಅಯೋಧ್ಯೆಗೆ ರಾಜನಾಗಬಹುದು.ಇದರಲ್ಲಿ ಯಾವುದೊಂದು ಧರ್ಮಹಾನಿಯೂ ಇರಲಾರದು." ಎಂದನು. ಧರ್ಮಜ್ಞರಲ್ಲಿ ಮೇಲೆನಿಸಿಕೊಂಡ ರಾಮನು ಇದನ್ನು ಕೇಳಿ ಕೈಮುಗಿದುನಿಂತು, ತಂದೆಯನ್ನು ನೋಡಿ "ಎಲೈ ರಾಜನೆ! ನೀನು ಈಗ ಸಾವಿರಾರು ವರ್ಷಗಳಿಂದ ಈ ಭೂಮಿಗೆ ಒಡೆಯನಾಗಿ ಧರ್ಮದಿಂದಪಾಲಿಸುತ್ತಿರುವೆ. ಅಂತಹ ನೀನು ಈಗ ನನ್ನನ್ನು ಅಸತ್ಯವಂತನನ್ನಾಗಿ ಮಾಡಬಾರದು. ನಿನ್ನ ಸತ್ಯಕ್ಕೆ ಭಂಗವನ್ನು ತರುವುದು ನನಗೂ ಶ್ರೇಯಸ್ಕರವಲ್ಲ. ಆದುದರಿಂದ ನಾನು ಕಾಡಿನಲ್ಲಿದ್ದೇ ಬರುವೆನು. ಈ ಹದಿನಾಲ್ಕುವರ್ಷಗಳನ್ನು ಕಾಡಿನಲ್ಲಿ ಕಳೆಯುವುದು ನನಗೊಂದು ಕಷ್ಟವಲ್ಲ. ಸುಖವಾಗಿಯೇ ಕಳೆದು ಬಿಡಬಹುದು. ಆ ಪ್ರತಿಜ್ಞೆಯನ್ನು ಮುಗಿಸಿ, ಹಿಂತಿರುಗಿಬಂದ ಮೇಲೆ ನಿನ್ನಪಾದಶುಶ್ರೂಷೆಯನ್ನು ಮಾಡುತ್ತಿರುವೆನು" ಎಂದನು. ಇದನ್ನು ಕೇಳಿ ದಶರಥನು ವ್ಯಸನವನ್ನು ತಡೆಯಲಾರದೆ,ಗಟ್ಟಿಯಾಗಿ ಗೋಳಿಡುತ್ತಾ, ತಾನು ಸತ್ಯಪಾಶಕ್ಕೆ ಕಟ್ಟುಬಿದ್ದಿರುವುದಲ್ಲದೆ ಸಮೀಪದಲ್ಲಿದ್ದ ಕೈಕೇಯಿಯೂ ರಹಸ್ಯವಾಗಿ ತನ್ನನ್ನು ಸಿಬಂಧಿಸುತ್ತಿರಲು,ಏನೊಂದೂ ತೋರದೆ, ಕೊನೆಗೆ ರಾಮನನ್ನು ನೋಡಿ "ವತ್ಸನೆ ! ಇನ್ನು ನಾನೇನು ಹೇಳಲಿ ? ಪಾರಲೌಕಿಕಫಲಕ್ಕಾಗಿಯೂ, ಇಹಲೋಕದ ಅಭ್ಯುದಯಕ್ಕಾಗಿಯೂ ನೀನು ನಡೆಸಬೇಕೆಂದಿರುವ ಈ ವನವಾಸವನ್ನು ಮುಗಿಸಿಕೊಂಡು ಬಾ! ನೀನು ಹೋಗತಕ್ಕ ಮಾರ್ಗಗಳೆಲ್ಲವೂ ಮಂಗಳಕರವಾಗಿರಲಿ! ನಿನಗೆ ದಾರಿಯಲ್ಲಿ ಯಾವುದೊಂದು ಭಯವೂ ಇಲ್ಲದಿರಲಿ! ನೀನು ಸುಖವಾಗಿ ಹಿಂತಿರುಗಿ ಬಂದು ಅಯೋಧ್ಯೆಯನ್ನು ಸೇರುವವರೆಗೂ ನಿನಗೆ ಕ್ಷೇಮವುಂಟಾಗಲಿ!ನೀನು ಸತ್ಯಸ್ವರೂಪನೆನಿಸಿಕೊಂಡು ಧರ್ಮದಲ್ಲಿಯೇದೃಢಸಂಕಲ್ಪವುಳ್ಳವನಾಗಿರುವುದರಿಂದ,ಈ ನಿನ್ನನಿಶ್ಚಯವನ್ನು ತಪ್ಪಿಸುವುದಕ್ಕೆ ಯಾರಿಂದಲೂ ಸಾಧ್ಯವಲ್ಲ. ಆದರೆ ನೀನು ಈ ರಾತ್ರಿಯಲ್ಲಿ ಮಾತ್ರ ಇಲ್ಲಿಯೇ ಇದ್ದು ಹೋಗಬೇಕೇಹೊರತು,ಸರ್ವಥಾ ಈಗ ಹೊರಡಕೂಡದು.ಈ ಒಂದು ದಿವಸವಾದರೂ ನಿನ್ನನ್ನು ಮನಸ್ತೃಪ್ತಿಯಾಗು

ವವರೆಗೆ ನೋಡಿ ಆನಂದಿಸುವೆನು. ಇನ್ನೇನು! ಇದೋ! ರಾತ್ರಿಯು ಸಮೀಪಿ
ಸಿರುವುದು! ಇದೊಂದುದಿವಸವಾದರೂ ನೀನು ನನ್ನನ್ನೂ, ನಿನ್ನ ತಾಯಿಯ
ನ್ನೂ ನೋಡುತಿದ್ದು, ನಮ್ಮಿಬ್ಬರನ್ನೂ ಸಂತೋಷಪಡಿಸು! ನಾಳೆಬೆಳಗಾದ
ಕೂಡಲೆ ನಿನ್ನ ಕೋರಿಕೆಗಳೆಲ್ಲವನ್ನೂ ಕೈಗೂಡಿಸಿ, ನಿನ್ನನ್ನು ಕಳುಹಿಸಿಕೊಡು
ವೆವು! ಎಲೆ ವತ್ಸನೆ! ಈಗ ನೀನು ಪ್ರಾರಂಭಿಸಿರುವ ಕಾರ್ಯವು ಅತಿದುಷ್ಕರವಾ
ದುದು! ನನ್ನೊಬ್ಬನ ಹಿತಕ್ಕಾಗಿ ಇಷ್ಟರಾದ ಇತರಬಂಧುಮಿತ್ರರೆಲ್ಲರನ್ನೂ
ತೊರೆದು, ನಿರ್ಜನವಾದ ಕಾಡಿಗೆ ಹೊರಡಬೇಕೆಂದಿರುವೆಯಲ್ಲವೆ? ನೀನು ಇಷ್ಟು
ಸಾಹಸಕಾರ್ಯಕ್ಕೆ ಪ್ರಯತ್ನಿಸಿದುದು ನನಗೆ ಸರ್ವಥಾ ಸಮ್ಮತವಿಲ್ಲ! ಇದರಿಂದ
ನಾನು ಎಂದಿಗೂ ಸಂತೋಷಿಸುವೆನೆಂದು ತಿಳಿಯಬೇಡ! ನನ್ನ ಸತ್ಯದ
ಮೇಲೆ ಆಣೆಯಿಟ್ಟು ಹೇಳುವೆನು. ಆದರೆ ಕೇವಲಸ್ತ್ರೀಮಾತ್ರಳಾದವಳೊಬ್ಬ
ಳು ಬೂದಿಮುಚ್ಚಿದ ಕೆಂಡದಂತೆ ತನ್ನೊಳಗಿನ ಕ್ರೂರಸ್ವಭಾವವನ್ನು ಹೊರ
ಕ್ಕೆ ಕಾಣಿಸದೆ ಮರೆಸಿಕೊಂಡಿದ್ದು. ನನ್ನನ್ನು ಮರುಳುಮಾಡಿ, ನನ್ನ ಮನಸ್ಸ
ನ್ನು ಕದಲಿಸಿ, ಮೋಸದಿಂದ ಮಾತಿಗೆ ಸಿಕ್ಕಿಸಿಕೊಂಡುಬಿಟ್ಟಿರುವಳು. ಕುಲ
ಗೇಡಿಯಾದ ಆಕೈಕೇಯಿಯು ನನ್ನನ್ನು ವಂಚಿಸಿ ಕೇಳಿಕೊಂಡ ವರಗಳನ್ನೂ
ಕೂಡ, ನೀನು ಅಲಕ್ಷ್ಯಮಾಡದೆ ಕೈಗೂಡಿಸಬೇಕೆಂದು ಪ್ರಯತ್ನಿಸಿರುವೆ
ಯಲ್ಲವೆ? ನಿನ್ನ ಗುಣವನ್ನು ನಾನೇನೆಂದು ಹೇಳಲಿ! ಆದರೆ ಹಿರಿಯಮಗನಾದ
ನೀನು, ತಂದೆಯಾದ ನನ್ನನ್ನು ಅಸತ್ಯದಲ್ಲಿ ಬೀಳದಂತೆ ಮಾಡಿ ಉದ್ಧರಿ
ಸುವುದೇನೂ ಅಷ್ಟು ಆಶ್ಚರ್ಯಕರವಾದ ವಿಷಯವಲ್ಲ" ಎಂದನು. ಹೀಗೆ
ಬಹುವ್ಯಸನದಿಂದ ದಶರಥನು ಹೇಳಿದ ಮಾತನ್ನು ಕೇಳಿ, ರಾಮಲಕ್ಷ್ಮಣರಿ
ಬ್ಬರೂ ವ್ಯಸನಾಕ್ರಾಂತರಾಗಿದ್ದರು. ಆಗ ರಾಮನು ತಂದೆಯನ್ನು ನೋಡಿ
"ಎಲೈ! ತಂದೆಯೆ! ನಾಳೆ ನನ್ನ ಸಮಸ್ತವಿಧವಾದ ಕೋರಿಕೆಗಳನ್ನೂ ಈಡೇ
ರಿಸಿ, ಆಮೇಲೆ ನನ್ನನ್ನು ಕಳುಹಿಸಿಕೊಡುವುದಾಗಿ ನೀನು ಹೇಳಿದೆಯಲ್ಲವೆ!
ಗುಣವಿಶಿಷ್ಟವಾದ ಯಾವ ವಸ್ತುಗಳನ್ನು ಪಡೆಯಬೇಕಾದರೂ ನಾನು ನಿ
ಮ್ಮಿಂದಲ್ಲದೆ ಮತ್ತಾರಿಂದ ಪಡೆಯಲಿ? ತಂದೆತಾಯಿಗಳಾದ ನೀವಲ್ಲದೆ
ನನ್ನ ಕೋರಿಕೆಗಳನ್ನು ಬೇರೆ ಯಾರುತಾನೇ ಈಡೇರಿಸಿಕೊಡುವರು? ಆದರೆ
ನನಗೆ ನಿಮ್ಮಿಂದ ಪಡೆಯಬೇಕಾದ ಸಮಸ್ತ ಇಷ್ಟಾರ್ಥಗಳಲ್ಲಿಯೂ ಮು
ಖ್ಯವಾದುದೊಂದುಂಟು. ಅದನ್ನು ಮಾತ್ರ ಈಗ ನಡೆಸಿ ಕೊಟ್ಟರೆ ಸಾಕು!

ನನ್ನ ವನಪ್ರಯಾಣಕ್ಕೆ ನೀವು ಅನುಮತಿಯನ್ನು ಕೊಡಬೇಕೆಂಬುದೇ ಈಗ ನಾನು ಮುಖ್ಯವಾಗಿ ಅಪೇಕ್ಷಿಸತಕ್ಕ ಕೋರಿಕೆಯು. ನನಗೆ ಬೇರೆಯಾವುದನ್ನೂ ಕೊಡಬೇಕಾದುದಿಲ್ಲ. ಅವೆಲ್ಲಕ್ಕೂ ಪ್ರತಿನಿಧಿಯಾಗಿ ಈ ಪ್ರಯಾಣದ ಅನುಜ್ಞೆಯೊಂದನ್ನು ಕೊಟ್ಟರೆ ಸಾಕು. ಧನಧಾನ್ಯಸಮೃದ್ಧವಾದ ದೇಶಗಳಿಂದಲೂ, ಜನಗಳಿಂದಲೂ, ಭರಿತವಾದ ಈ ಭೂಮಿಯೆಲ್ಲವನ್ನೂ ನಾನು ಭರತನಿಗಾಗಿಯೇ ಬಿಟ್ಟುಬಿಡುವೆನು. ಭರತನೇ ಇದನ್ನನುಭವಿಸಲಿ! ವನವಾಸಕ್ಕಾಗಿ ದೃಢಸಂಕಲ್ಪಮಾಡಿರುವ ನನ್ನ ಬುದ್ಧಿಯು ಈಗ ಎಷ್ಟುಮಾತ್ರವೂ ಚಲಿಸಲಾರದು. ವರಪ್ರದಾತನಾದ ನೀನು ಕೈಕೇಯಿಯಲ್ಲಿ ಪ್ರಸನ್ನನಾಗಿ ಆಕೆಗೆ ಯಾವ ವರಗಳನ್ನು ಕೊಟ್ಟಿದ್ದೆಯೋ, ಅವುಗಳನ್ನು ಲೋಪವಿಲ್ಲದೆ ನಡೆಸಿಕೊಡು! ನಿನ್ನ ಸತ್ಯಸಂಧತೆಯು ಕೆಡದಂತೆ ರಕ್ಷಿಸಿಕೊಳ್ಳುವನಾಗು! ನಾನೂ ನಿನ್ನ ಆಜ್ಞೆಯನ್ನು ಯಥೋಕ್ತವಾಗಿ ಪರಿಪಾಲಿಸುತ್ತ, ಹದಿನಾಲ್ಕುವರ್ಷಗಳವರೆಗೆ ವನಚರರೊಡನೆ ಕಾಡಿನಲ್ಲಿ ವಾಸಮಾಡುತ್ತಿರುವೆನು. ನೀನು ಮನಸ್ಸಿನಲ್ಲಿ ಸ್ವಲ್ಪವೂ ವಿಚಾರಪಡಬೇಡ! ಭರತನಿಗೇ ರಾಜ್ಯವನ್ನು ಕೊಡು! ನಮ್ಮ ರಘುಕುಲಕ್ಕೆ ಸಂತೋಷವನ್ನುಂಟುಮಾಡು! ನನಗೆ ನಿನ್ನಾಜ್ಞೆಯನ್ನು ನೆರವೇರಿಸುವುದರಲ್ಲಿರುವಷ್ಟು ಪ್ರೀತಿಯು, ರಾಜ್ಯದಲ್ಲಿಯಾಗಲಿ, ರಾಜಭೋಗಗಳಲ್ಲಿಯಾಗಲಿ ಮತ್ತಾವುದರಲ್ಲಿಯಾಗಲಿ ಇಲ್ಲವು. ಇನ್ನು ನಿನ್ನ ವ್ಯಸನವನ್ನು ಬಿಡು! ಈ ನಿನ್ನ ಕಣ್ಣೀರುಗಳನ್ನು ತಡೆಹಿಡು! ಸಮಸ್ತನದಿಗಳಿಗೂ ಪತಿಯಾದ ಮಹಾಸಾಗರವನ್ನು ಕಲಗಿಸುವುದಕ್ಕೆ ಬೇರೆಯಾರಿಂದತಾನೇ ಸಾಧ್ಯವು? ಹಾಗೆಯೇ ಸಮುದ್ರನಂತೆ ಧೀರನಾದ ನೀನು ಈ ಸ್ವಲ್ಪಕಾರ್ಯಕ್ಕಾಗಿ ಧೈರ್ಯಗೆಡುವುದುಚಿತವೇ? ನನಗೆ ರಾಜ್ಯದಲ್ಲಿಯಾಗಲಿ, ರಾಜ್ಯಸುಖದಲ್ಲಿಯಾಗಲಿ ಆಸೆಯಿಲ್ಲ! ಕೊನೆಗೆ ನನ್ನ ಪ್ರಾಣಪ್ರಿಯಳಾದ ಸೀತೆಯನ್ನಾದರೂ ಅಗಲಿರುವುದಕ್ಕೆ ಸಿದ್ಧನಾಗಿರುವೆನು. ಈ ಕಾಮೋಪಭೋಗಗಳೊಂದರಲ್ಲಿಯೂ ನನಗೆ ದೃಷ್ಟಿಯಿಲ್ಲ! ನಾನು ಸ್ವರ್ಗಸೌಖ್ಯವನ್ನಾದರೂ ಅಪೇಕ್ಷಿಸುವವನಲ್ಲ! ಕೊನೆಗೆ ನನ್ನ ಪ್ರಾಣವನ್ನೂ ನಾನು ಲಕ್ಷ್ಯಮಾಡತಕ್ಕವನಲ್ಲ. ಮುಖ್ಯವಾಗಿ ನಿನ್ನನ್ನು ಅಸತ್ಯದಲ್ಲಿ ಬಿಳಿಸದೆ ಸತ್ಯಪ್ರತಿಜ್ಞನನ್ನಾಗಿ ಮಾಡಬೇಕೆಂಬುದೇ ನನ್ನ ಕೋರಿಕೆ. ಈ ವಿಷಯದಲ್ಲಿ ನನಗೆ ಪ್ರತ್ಯಕ್ಷದೈವವಾದ ನಿನ್ನಿದಿರಾಗಿಯೇ ನನ್ನ ಸತ್ಯದಮೇಲೆಯೂ, ನನ್ನ ಸುಖದಮೇಲೆಯೂ, ಆಣೆ

ಯಿಟ್ಟು ಶಪಥಮಾಡಿಕೊಡುವೆನು. ಇನ್ನು ನಾನು ಇಲ್ಲಿ ಕ್ಷಣಮಾತ್ರವಾದ ರೂ ನಿಲ್ಲಲಾರೆನು. ಆದುದರಿಂದ ನಿನ್ನಾಜ್ಞೆಯಂತೆ ಈ ರಾತ್ರಿಯೆಲ್ಲವೂ ನಾನು ಇಲ್ಲಿಯೇ ಇದ್ದುಹೋಗಬೇಕೆಂದರೆ ಸಾಧ್ಯವಿಲ್ಲ. ಇದಕ್ಕಾಗಿ ನೀನು ವ್ಯಸನಪಡಬೇಡ. ನಾನು ಮಾಡಿಟ್ಟಿರುವ ಸಂಕಲ್ಪವನ್ನು ಈಗ ತಪ್ಪಿಸಲಾರೆ ನು.ಆಗಲೇ ಕೈಕೇಯಿಯು ನನ್ನನ್ನು ವನಪ್ರಯಾಣಕ್ಕೆ ತ್ವರೆಪಡಿಸಿ,ಅನೇಕವಿ ಧದಲ್ಲಿ ಕೇಳಿಕೊಂಡಿರುವಳು. ನಾನೂ ಈಗಲೇ ಕಾಡಿಗೆ ಹೊರಡುವುದಾಗಿ ಮಾತುಕೊಟ್ಟು ಬಂದಿರುವೆನು. ಹೀಗೆ ಕೊಟ್ಟಮಾತನ್ನು ಕಾಪಾಡಿಕೊಳ್ಳತ ಕ್ಕ ಭಾರವು ನನಗೆ ಸೇರಿದುದಲ್ಲವೆ? ಇದಕ್ಕಾಗಿ ನೀನು ಸ್ವಲ್ಪವೂ ಕಳವಳಿಸಬೇ ಡ! ನಾವು ಕಾಡಿನಲ್ಲಿ ಕಷ್ಟಪಡಬೇಕಾಗುವುದೆಂದು ನೀನು ಚಿಂತಿಸಬೇಡ!ಬಹ ಳ ಶಾಂತಸ್ವಭಾವವುಳ್ಳ ಜಿಂಕೆಗಳಿಂದಲೂ, ಬಗೆಬಗೆಯಪಕ್ಷಿಸಮೂಹಗಳ ಧ್ವನಿಗಳಿಂದಲೂ ಮನೋಹರವಾಗಿರುವ ಕಾಡಿನಲ್ಲಿ ಕೆಲವು ದಿವಸಗಳವರೆಗೆ ಸುಖವಾಗಿ ವಿನೋದದಿಂದಿದ್ದು ಬರುವೆವು. ಎಲೈ ತಂದೆಯೇ! ದೇವತೆಗಳಿಗೂ ಕೂಡ ತಂದೆಯೇ ದೈವವೆಂದು ಹೇಳಲ್ಪಟ್ಟಿರುವುದು. ಇನ್ನು ಮನುಷ್ಯಮಾ ತ್ರರಾದ ನಮಗೆ ಹೇಳತಕ್ಕುದೇನು ? ಆದುದರಿಂದ ತಂದೆಯಾದ ನಿನ್ನನ್ನೇ ನಾನು ಪರದೈವವೆಂದೆಣಿಸಿ, ನಿನ್ನ ಮಾತನ್ನು ನಡೆಸುವುದಕ್ಕಾಗಿಯೇ ಪ್ರ ಯತ್ನಿಸಿರುವೆನು. ಎಲೈ ರಾಜೇಂದ್ರನೇ ! ಈ ಹದಿನಾಲ್ಕುವರ್ಷಗಳೆಂಬುದು ಎಷ್ಟುಮಾತ್ರವು ? ಈ ಸ್ವಲ್ಪಕಾಲದ ಅವಧಿಯು ಕಳೆದೊಡನೆಯೇ ನೀನು ನನ್ನನ್ನು ಈ ಅಯೋಧ್ಯೆಯಲ್ಲಿ ನೋಡಬಹುದು. ಇದಕ್ಕಾಗಿ ನೀನು ಚಿಂತಿಸ ಬೇಡ ! ಎಲೆ ತಾತನೆ : ಇದೇನು ? ಇಲ್ಲಿರತಕ್ಕವರೆಲ್ಲರಿಗೂ ನೀನೇ ದೊಡ್ಡವ ನಲ್ಲವೆ ? ವ್ಯಸನದಿಂದ ಪರಿತಪಿಸುತ್ತಿರುವ ಇವರೆಲ್ಲರ ಕಣ್ಣೀರನ್ನೂ ಒರೆಸಿ ಸಮಾಧಾನಪಡಿಸಬೇಕಾದ ಭಾರವು ನಿನ್ನನ್ನೇ ಸೇರಿದುದಲ್ಲವೆ? ಹೀಗಿರುವಾಗ ಲೂ ನೀನೇ ಹೀಗೆ ಮನೋವಿಕಾರವನ್ನು ಹೊಂದಿ ದುಃಖಿಸುತ್ತಿದ್ದರೆ,ಇವರಿಗೆ ಬುದ್ಧಿವಾದವನ್ನು ಹೇಳಿ ತಡೆಯುವವರಾರು? ಈ ಪಟ್ಟಣವನ್ನೂ ರಾಷ್ಟ್ರ ವನ್ನೂ, ಈ ಸಮಸ್ತಭೂಮಿಯನ್ನೂ ನಾನು ಮನಃಪೂರ್ವಕವಾಗಿ ತೊರೆದು ಬಿಟ್ಟಿರುವೆನು! ಇವೆಲ್ಲವನ್ನೂ ನೀನು ಧಾರಾಳವಾಗಿ ಭರತನ ವಶಕ್ಕೇ ಒಪ್ಪಿಸಿ ಬಿಡಬಹುದು! ನಾನು ನಿನ್ನ ಆಜ್ಞಾಧಾರಕನಾಗಿ ಕಾಡಿನಲ್ಲಿಯೇ ಇದ್ದು ಬರು ವೆನು ! ನಾನು ಇಲ್ಲಿಂದ ಬಿಟ್ಟುಹೋದಮೇಲೆ ಹಿಂತಿರುಗಿ ಬರುವುದಕ್ಕ

ಇನ್ನೂ ಕೆಲವು ಕಾಲವು ಹಿಡಿಯಬಹುದಲ್ಲವೆ ? ಅದುವರೆಗೆ ಭರತನೇ ಇಲ್ಲಿ ದ್ದುಕೊಂಡು, ಅನೇಕ ಪಟ್ಟಣಗಳಿಂದಲೂ, ರಾಷ್ಟ್ರಗಳಿಂದಲೂ, ಪರ್ವತ ಗಳಿಂದಲೂ, ಕಾಡುಗಳಿಂದಲೂ ಕೂಡಿ, ವಿಸ್ತಾರವಾದ ಎಲ್ಲೆ ಕಟ್ಟುಗಳು ಳ್ಳ ಮಂಗಳಕರವಾದ ಈ ಸಮಸ್ತ ಭೂಮಿಯನ್ನೂ ನಿರಾತಂಕವಾಗಿ ಅನು ಭವಿಸುತ್ತಿರಲಿ ! ನಾನು ಹಟದಿಂದಲೇ ಹೀಗೆ ಉದ್ದೇಶಿಸಿರುವೆನೆಂದು ತಿಳಿಯ ಬೇಡ ! ನಿನ್ನ ಆಜ್ಞೆಯನ್ನನುಸರಿಸಿಯೇ ನಾನು ನಡೆಯುತ್ತಿರುವೆನು. ಎಲೆ ದೋಷರಹಿತನೆ ! ಸಜ್ಜನ ಸಮ್ಮತವಾದ ನಿನ್ನ ಆಜ್ಞೆಯನ್ನು ನಡೆಸುವುದರ ಲ್ಲಿ ನನ್ನ ಮನಸ್ಸು ಎಷ್ಟು ಮಟ್ಟಿಗೆ ಉತ್ಸಾಹಗೊಂಡಿರುವುದೋ, ಬೇರೆ ಕೋರಿಕೆಗಳಲ್ಲಿಯಾಗಲಿ, ಆತ್ಮಸುಖದಲ್ಲಿಯಾಗಲಿ, ನನಗೆ ಅಷ್ಟು ಮಟ್ಟಿಗೆ ಉತ್ಸಾಹವಿಲ್ಲವು. ನನಗಾಗಿ ನೀನು ಸ್ವಲ್ಪವೂ ದುಃಖಿಸಬೇಕಾದುದಿಲ್ಲ! ನಿನ್ನ ನ್ನು ಸತ್ಯಭ್ರಷ್ಟನನ್ನಾಗಿ ಮಾಡಿ, ಆದರಿಂದ ನಾನು ಸೌಖ್ಯಗಳನ್ನನುಭವಿಸ ಬೇಕೆಂಬುದು ನನಗೆ ಸರ್ವಥಾ ಸಮ್ಮತವಲ್ಲ. ಇದರಿಂದ ನನಗೆ ಸಮಸ್ತ ಕಾ ಮಗಳೂ ಸಿದ್ಧಿಸುವ ಹಾಗಿದ್ದರೂ ನಾನು ಇಷ್ಟಪಡುವವನಲ್ಲ. ನಿನ್ನನ್ನು ಅಸತ್ಯದಲ್ಲಿರಿಸಿ, ರಾಜ್ಯವನ್ನಾಗಲಿ, ಸುಖವನ್ನಾಗಲಿ, ಸೀತೆಯನ್ನಾಗಲಿ, ಕೊನೆಗೆ ನನ್ನ ಪ್ರಾಣವನ್ನೇ ಆಗಲಿ ನಾನು ಅಪೇಕ್ಷಿಸುವವನಲ್ಲ. ನೀನು ಸತ್ಯ ವ್ರತನಾಗಿರಬೇಕೆಂಬುದೇ ನನ್ನ ಮುಖ್ಯವಾದ ಕೋರಿಕೆ ! ಅದೆಲ್ಲವೂ ಹಾಗಿ ರಲಿ! ಈಗ ನಾನು ಕಾಡಿಗೆ ಹೋಗಿ ಬರುವುದರಿಂದ ನಮ್ಮಿಬ್ಬರಿಗೂ ಸೌಖ್ಯ ವುಂಟು ! ನಾನು ಅಲ್ಲಿ ವಿಧವಿಧವಾದ ಗಡ್ಡೆಗೆಣಸುಗಳನ್ನು ತಿನ್ನಬಹುದು ! ನಾನಾವಿಧಗಳಾದ ಹಣ್ಣುಗಳನ್ನು ರುಚಿನೋಡಬಹುದು ! ಚಿತ್ರವಿಚಿತ್ರ ಗಳಾದ ಬೆಟ್ಟಗಳನ್ನೂ, ನದಿಗಳನ್ನೂ, ಸರೋವರಗಳನ್ನೂ ನೋಡಬಹು ದು ! ಬಗೆಬಗೆಯ ಮರಗಿಡಗಳನ್ನು ನೋಡಬಹುದು ! ಇವೆಲ್ಲಕ್ಕೂ ಈಗ ಲ್ಲದೆ ಬೇರೆ ಅವಕಾಶವೆಲ್ಲಿ ಸಿಕ್ಕುವುದು ? ನೀನೂ ಇಲ್ಲಿ ಸತ್ಯಪ್ರತಿಜ್ಞನಾಗಿ ಸುಖದಿಂದಿರಬಹುದು !" ಎಂದನು. ಈ ಮಾತನ್ನು ಕೇಳುತ್ತಾ ದಶರಥ ನು ಮಹಾವ್ಯಸನದಿಂದ ಕೂಡಿ, ಆ ದುಃಖಾಗ್ನಿಯಿಂದ ಬೆಂದ ದೇಹ ವುಳ್ಳವನಾಗಿಯೂ, ಕಂದಿದ ಮನಸ್ಸುಳ್ಳವನಾಗಿಯೂ ಪರಿತಪಿಸುತ್ತ, ರಾಮನನ್ನು ಎರಡು ತೋಳುಗಳಿಂದಲೂ ಅಪ್ಪಿಕೊಂಡು, ಹಾಗೆಯೇ ದುಃಖ ವನ್ನು ತಡೆಯಲಾರದೆ ಮೂರ್ಛೆಯನ್ನು ಹೊಂದಿ, ನಿಶ್ಚಲನಾಗಿ ಬಿದ್ದನು,

ಇದನ್ನು ನೋಡಿ ಅಲ್ಲಿದ್ದ ಅಂತಃಪುರಸ್ತ್ರೀಯರು ಒಟ್ಟಾಗಿ ಹಾಹಾಕಾರವನ್ನು ಮಾಡಿ ವಿಲಪಿಸುತ್ತಿದ್ದರು. ಕ್ರೂರಮನಸ್ಸುಳ್ಳ ಕೈಕೇಯಿಯು ಹೊರತು, ಇತರಸ್ತ್ರೀಯರೆಲ್ಲರೂ ನಾನಾವಿಧವಾಗಿ ಪ್ರಲಾಪಗಳನ್ನು ಮಾಡುತಿದ್ದರು. ಸುಮಂತ್ರನೂಕೂಡ ವ್ಯಸನದಿಂದಳುತ್ತ ಮೂರ್ಛೆಬಿದ್ದನು. ಆ ಅಂತಃಪುರಪ್ರದೇಶವೆಲ್ಲವೂ ಕೇವಲ ಹಾಹಾಕಾರಧ್ವನಿಯಿಂದಲೇ ತುಂಬಿ ಹೋಯಿತು. ಇಲ್ಲಿಗೆ ಮೂವತ್ತು ನಾಲ್ಕನೆಯ ಸರ್ಗವು.

---

## ಸುಮಂತ್ರನು ಕೈಕೇಯಿಯನ್ನು ನಿಂದಿಸಿದುದು.

ಆಗ ಸುಮಂತ್ರನಿಗೆ ವ್ಯಸನದೊಡನೆ ಮಿತಿಮೀರಿದ ಕೋಪವೂ ಉಕ್ಕಿ ಬರುತಿತ್ತು. ಆ ಕೋಪೋದ್ರೇಕದಿಂದ ತಲೆಯನ್ನೊದರುತ್ತಾ, ಬಾರಿಬಾರಿಗೂ ನಿಟ್ಟುಸಿರನ್ನು ಬಿಡುತಿದ್ದನು ಆಗಾಗ ಹಲ್ಲುಗಳನ್ನು ಕಡಿದು ಕೈಗಳನ್ನು ಹಿಸುಕುತಿದ್ದನು ಸ್ವಭಾವದಿಂದ ತೆಳುವಾದ ಆತನ ಕಣ್ಣುಗಳು ಕೆಂಪೇರಿದುವು ದೇಹವೆಲ್ಲವೂ ಸ್ವಾಭಾವಿಕವಾದ ವರ್ಣವನ್ನು ಬಿಟ್ಟು ವೈವರ್ಣ್ಯವನ್ನು ಹೊಂದಿತು. ಅತಿತೀವ್ರವಾದ ಕೋಪದಿಂದ ತಪಿಸುತಿದ್ದನು. ಕೈಕೇಯಿಯವಿಷಯದಲ್ಲಿ ಹಾಗೆ ಮರುಳಾಗಿದ್ದ ದಶರಥನ ಮನಸ್ಸೂಕೂಡ ಈಗ ಆಕೆಯಲ್ಲಿ ಭೇದಿಸಿಹೋದುದನ್ನು ನೋಡಿ; ಈ ಸುಮಂತ್ರನಿಗೂ ಆಕೆಯಲ್ಲಿ ಇದುವರೆಗೂ ಇದ್ದ ಗೌರವಬುದ್ಧಿಯು ಕೆಟ್ಟುಹೋಯಿತು. ಅತಿತೀಕ್ಷ್ಣವಾದ ತನ್ನ ವಾಗ್ಬಾಣವು ಆಕೆಯ ಹೃದಯವನ್ನು ಭೇದಿಸುವಂತೆಯೂ, ವಜ್ರಸಾರಗಳಾದ ತನ್ನ ಕ್ರೂರವಾಕ್ಯಗಳು ಅವಳ ಮರ್ಮಗಳಲ್ಲಿ ನಾಟುವಂತೆಯೂ, ಕೆಲವು ಮಾತುಗಳನ್ನಾಡತೊಡಗಿದನು. ಈ ನಿಂದಾವಾಕ್ಯಗಳಿಂದ ಆಕೆಯ ಗುಟ್ಟೆಲ್ಲವನ್ನೂ ಹೊರಪಡಿಸಬೇಕೆಂದು, "ಎಲೆ, ದೇವಿ! ನಿನ್ನ ಪತಿಯಾದ ಈ ದಶರಥನನ್ನು ನೀನೇನೆಂದು ತಿಳಿದಿರುವೆ? ಈತನು ಚರಾಚರಾತ್ಮಕವಾದ ಈ ಲೋಕವನ್ನೆಲ್ಲಾ ಧರಿಸಿರತಕ್ಕವನು. ಇಂತಹ ಮಹಾಪ್ರಭುವಾದ ರಾಜನನ್ನು ನೀನು ಅಲಕ್ಷ್ಯವಾಗಿ ಕಂಡು, ಈತನ ಮೃತ್ಯುವಿಗೂ ಅಂಜದ ಮೇಲೆ, ಲೋಕದಲ್ಲಿ ಇದಕ್ಕಿಂತಲೂ ಇನ್ನು ಅಕಾರ್ಯವೇನಿರುವುದು? ಹೀಗೆ ಪತಿಹತ್ಯೆಯಲ್ಲಿ ಪ್ರಯತ್ನಿಸಿರುವ ನೀನು ಈ ಮೂಲಕವಾಗಿ ಕೊನೆಗೆ ಕುಲ

ವನ್ನೇ ಕೆಡಿಸುವಹಾಗಿದೆ ! ಮಹೇಂದ್ರನಂತೆ ಇತರರಿಂದ ಜಯಿಸಲಸಾಧ್ಯನಾಗಿಯೂ, ಪರ್ವತದಂತೆ ಕದಲಿಸಲಾರದವನಾಗಿಯೂ, ಮಹಾಸಾಗರದಂತೆ ಇತರರಿಂದ ಕ್ಷೋಭೆಹೊಂದಿಸುವುದಕ್ಕೆ ಅಸಾಧ್ಯನಾಗಿಯೂ ಇರುವ ಮಹಾಧೀರನಾದ ದಶರಥನನ್ನೇ ನೀನು ಹೀಗೆ ನಿನ್ನ ದುಷ್ಕಾರ್ಯಗಳಿಂದ ಸಂಕಟಪಡಿಸುವೆಯಲ್ಲವೆ ? ಇದು ನಿನಗೆ ಎಂದಿಗೂ ಉಚಿತವಲ್ಲ. ಕೋರಿದ ಕೋರಿಕೆಗಳೆಲ್ಲವನ್ನೂ ಆಗಾಗ ನಡೆಸಿಕೊಟ್ಟು, ನಿನ್ನನ್ನು ಎಷ್ಟೋಪ್ರೇಮದಿಂದ ಪೋಷಿಸುತ್ತಿರುವ ಪತಿಯಾದ ದಶರಥನಿಗೇ ನೀನು ಹೀಗೆ ಅವಮಾನವನ್ನು ತಂದಿಡುವದಕ್ಕೆ ಪ್ರಯತ್ನಿಸಬಹುದೆ ? ಲೋಕದಲ್ಲಿ ಸ್ತ್ರೀಯರಿಗೆ ತಮ್ಮತಮ್ಮ ಮಕ್ಕಳ ಮನಸ್ಸನ್ನನುವರ್ತಿಸಿ ನಡೆಯುವುದಕ್ಕಿಂತಲೂ ಪತಿಯ ಇಷ್ಟಾನುಸಾರವಾಗಿ ನಡೆಯುವುದೇ ವಿಶೇಷಶ್ರೇಯಸ್ಕರವು. ಕೋಟಿಕೋಟಿಪುತ್ರರಿದ್ದರೂ ಪತಿಯ ಪಾದಚ್ಛಾಯೆಯನ್ನನುಸರಿಸಿ ನಡೆಯುವುದೇ ಅವರಿಗೆ ಮೇಲಾದ ಧರ್ಮವು. ರಾಜವಂಶಕ್ಕೆ ಕುಲಕ್ರಮಾಗತವಾಗಿ ಬಂದಿರುವ ಸಂಪ್ರದಾಯವನ್ನು ನೀನೂ ತಿಳಿದಿರುವೆ? ರಾಜನಾದವನು ರಾಜ್ಯವನ್ನು ಬಿಟ್ಟುಹೋಗುವಾಗ, ತನ್ನ ಮಕ್ಕಳಲ್ಲಿ ವಯಸ್ತಾರತಮ್ಯವನ್ನು ನೋಡಿ ಹಿರಿಯನಾದವನಿಗೆ ರಾಜ್ಯವನ್ನು ಒಪ್ಪಿಸಬೇಕಾದುದು ನ್ಯಾಯವಲ್ಲವೆ ? ಈ ರಾಜಧರ್ಮವನ್ನು ಲೋಕೋತ್ತರವಾದ ಈ ಇಕ್ಷ್ವಾಕುವಂಶದಲ್ಲಿಯೇ ತಪ್ಪಿಸಬೇಕೆಂದೆಣಿಸಿರುವೆಯಾ ? ಅದರಲ್ಲಿಯೂ ಈಗ ನೀನು ನಿನ್ನ ಪತಿಯನ್ನೇ ಅಪವಾದಕ್ಕೆ ಈಡುಮಾಡಬೇಕೆಂದೆಣಿಸಿರುವೆಯಲ್ಲಾ ! ಹೇಗಾದರೂ ನೀನು ನಿನ್ನ ಹಟವನ್ನು ಬಿಡದೆ ಭರತನಿಗೇ ರಾಜ್ಯವನ್ನು ಕೊಡಿಸಬೇಕೆಂದು ನಿಶ್ಚಯಿಸಿರುವುದಾದರೆ, ಹಾಗೆಯೇ ಮಾಡು! ನಿನ್ನ ಮಗನಾದ ಭರತನೇ ರಾಜನಾಗಿರಲಿ ! ಅತನೇ ರಾಜ್ಯವನ್ನಾಳುತ್ತಿರಲಿ! ಆಗ ನಾವೊಬ್ಬರೂ ಇಲ್ಲಿ ನಿಲ್ಲುವವರಲ್ಲ. ರಾಮನು ಹೋದಕಡೆಗೆ ನಾವೂ ಹೋಗುವೆವು ! ನಮ್ಮ ವಿಷಯವೂ ಹಾಗಿರಲಿ ! ಈ ನಿನ್ನ ದೇಶದೊಳಗೆ ಒಬ್ಬ ಬ್ರಾಹ್ಮಣನನ್ನಾದರೂ ನೀನು ಕಾಣಲಾರೆ ! ಎಲೆ ಕೈಕೇಯಿ! ನೀನು ಮರ್ಯಾದೆಯನ್ನು ಯೋಚಿಸದೆ ಎಂತಹ ಕ್ರೂರಕಾರ್ಯವನ್ನು ಆರಂಭಿಸಿದೆ ! ನಿನ್ನ ಈ ನಡತೆಯನ್ನು ನೋಡಿ ನನಗೆ ಪರಮಾಶ್ಚರ್ಯವುಂಟಾಗಿರುವುದು. ಇಂತಹ ಕ್ರೂರಸ್ವಭಾವೆಯಾದ ನಿನ್ನನ್ನು ಇನ್ನೂ ಈ ಭೂಮಿಯು ಬಾಯಿಬಿಟ್ಟು ನುಂಗಿ

ಕೊಳ್ಳದೆ ಧರಿಸಿರುವುದನ್ನು ನೋಡಿದರೆ ಅದಕ್ಕಿಂತಲೂ ಪರಮಾಶ್ಚರ್ಯವಾಗಿದೆ. ವಸಿಷ್ಠಾದಿಗಳಾದ ಬ್ರಹ್ಮರ್ಷಿಗಳೆಲ್ಲರೂ ಈ ನಿನ್ನ ಕ್ರೂರಸ್ವಭಾವಕ್ಕೆ ಕೋಪಿಸಿ, ಇನ್ನೂ ನಿನ್ನನ್ನು ತಮ್ಮ ಶಾಪರೂಪವಾದ ವಾಗ್ದಂಡದಿಂದ ಶಿಕ್ಷಿಸದಿರುವರಲ್ಲಾ! ಲೋಕೋತ್ತರಗುಣವಿಶಿಷ್ಟನಾದ ರಾಮನನ್ನು ಕಾಡಿಗೆಕಳುಹಿಸಬೇಕೆಂದು ಪ್ರಯತ್ನಿಸಿರುವ ಈ ನಿನ್ನ ಕ್ರೂರಸ್ವಭಾವಕ್ಕೆ ತಕ್ಕ ಶಿಕ್ಷೆಯನ್ನು ಇದುವರೆಗೆ ಯಾರೂ ಮಾಡದಿರುವುದು ನನಗೆ ಅತ್ಯಾಶ್ಚರ್ಯವನ್ನುಂಟುಮಾಡತ್ತಿದೆ! ಚೆನ್ನಾಗಿ ಬೆಳೆದಿರತಕ್ಕ * ಮಾವಿನ ಮರವನ್ನು ಕೊಡಲಿಯಿಂದ ಕಡಿದು,ಆ ಸ್ಥಳದಲ್ಲಿ ಬೇವಿನಮರವನ್ನು ನಟ್ಟು, ಅದಕ್ಕೆ ಹಾಲೆರೆದು ಎಷ್ಟೇಪ್ರೀತಿಯಿಂದ ಪೋಷಿಸಿದರೂ ಅದು ರುಚಿಯಾದ ಹಣ್ಣನ್ನು ಕೊಡುವುದೆ? ಇದು ನಿನಗೆ ಜನ್ಮಸಂಬಂಧವಾದ ಗುಣವಲ್ಲದೆ ಸ್ವಾಭಾವಿಕವಾದ ಗುಣವಲ್ಲ! ದೊಡ್ಡವಂಶದಲ್ಲಿ ಹುಟ್ಟಿದ್ದರೂ ನಿನ್ನತಾಯಿಗೆ ಯಾವ ದುಸ್ಸ್ವಭಾವವಿತ್ತೋ, ಆ ಸ್ವಭಾವವೇ ನಿನಗೂ ಅನುಸರಿಸಿ ಬಂದಿರುವುದೆಂದು ನನಗೆ ತೋರುವುದು. ಬೇವಿನ ಹೂಗಳಲ್ಲಿ ಜೇನಿಲ್ಲವೆಂಬ ಲೋಕಪ್ರಸಿದ್ಧಿಯನ್ನು ಕೇಳಿಲ್ಲವೆ? ನಿನ್ನ ಹೆತ್ತತಾಯಿಯು ನಡೆಸಿದ ಮಹಾಘೋರವಾದ ಪಾಪಕರ್ಮವನ್ನು ನಾವೂ ಕೇಳಿಬಲ್ಲೆವು. ಅದನ್ನು ಹೇಳುವೆನು ಕೇಳು. ಪೂರ್ವದಲ್ಲಿ ವರಪ್ರದನಾದ ಬಬ್ಬ ಮಹಾತ್ಮನು ನಿನ್ನ ತಂದೆಗೆ ಸರ್ವೋತ್ತಮವಾದ ಒಂದು ವರವನ್ನು ಕೊಟ್ಟಿದ್ದನು. ಆ ವರದಿಂದ ನಿನ್ನ ತಂದೆಗೆ ಲೋಕದ ಜೀವಜಂತುಗಳಾಡಿಕೊಳ್ಳತಕ್ಕ ಮಾತುಗಳೆಲ್ಲವನ್ನೂ ಗ್ರಹಿಸತಕ್ಕ ಶಕ್ತಿಯುಂಟಾಗಿತ್ತು. ಇದರ ಬಲದಿಂದ ತಿರ್ಯಗ್ಜಂತುಗಳು ನುಡಿಯುತಿದ್ದ ಮಾತುಗಳೆಲ್ಲವನ್ನೂ ನಿನ್ನ ತಂದೆಯು ತಿಳಿದುಕೊಳ್ಳುತಿದ್ದನು. ಹೀಗಿರಲು ಒಂದಾನೊಂದುಕಾಲದಲ್ಲಿ, ಮಹಾತೇಜಸ್ವಿಯಾದ ನಿನ್ನ ತಂದೆಯು ಮಲಗಿರುವಾಗ, ಆತನ ಹಾಸಿಗೆಯಕೆಳಗೆ ಜೃಂಭಗಳೆಂಬ ಒಂದುಜಾತಿಯ ಇರುವೆಗಳು ಮಾತಾಡುತಿದ್ದುವು. ಅದನ್ನು ಕೇಳಿ, ಅದರ ಭಾವವನ್ನು ತಿಳಿದ ನಿನ್ನ ತಂದೆ

---

* ಈ ವಾಕ್ಯದಿಂದ ಸುಮಂತ್ರನು ದಶರಥನನ್ನೇ ಗೂಢವಾಗಿ ನಿಂದಿಸಿದುದಾಗಿ ತಿಳಿಯಬೇಕು.ರಾಮನನ್ನು ಕಾಡಿಗೆ ಕಳುಹಿಸಿ, ಕೈಕೇಯಿಯ ಅಭಿಮತವನ್ನು ಸಾಧಿಸಿಕೊಡುವುದರಿಂದ ಮತ್ತೆಷ್ಟು ಕಷ್ಟವೇಹೊರತು ಕ್ಷೇಮವಿಲ್ಲವೆಂದು ಗೂಢಾರ್ಥವು

ಯು ಫಕ್ಕನೆ ನಕ್ಕನು. ಆಗ ನಿನ್ನ ತಾಯಿಗೆ ಪತಿಯು ತನ್ನನ್ನು ಹಾಸ್ಯಮಾಡಿ ನಗುವನೆಂಬ ಭಾವವುಂಟಾಗಿ, ಆಕೆಯು ಬಹಳವಾಗಿ ಕೋಪಿಸಿಕೊಂಡಳು. ಆ ಕೋಪವೇ ತನಗೆ ಮರಣಹೇತುವಾಗುವುದೆಂಬುದನ್ನು ತಿಳಿಯದೆ ಪತಿಯನ್ನು ಕುರಿತು, ''ಎಲೆ ಸೌಮ್ಯನೆ! ನೀನು ನಕ್ಕುದೇಕೆ? ಅದರ ನಿಜವಾದ ಕಾರಣವನ್ನು ನಾನು ತಿಳಿದುಕೊಳ್ಳಬೇಕೆಂದಿರುವೆನು." ಎಂದಳು. ಆಗ ನಿನ್ನ ತಂದೆಯು ಪತ್ನಿಯನ್ನು ಕುರಿತು, ''ಎಲೆ ದೇವಿ ! ಅದನ್ನು ನಾನು ಹೇಳಿದೆನಾದರೆ ಈಗಲೇ ನನಗೆ ಮರಣವು ಸಂಭವಿಸುವುದು. ಅದುದರಿಂದ ನಾನು ಯಾರೊಡನೆಯೂ ಅದನ್ನು ಹೇಳಬಾರದು" ಎಂದನು. ಆಗ ಕ್ರೂರಬುದ್ಧಿಯುಳ್ಳ ನಿನ್ನ ತಾಯಿಯು,ಪತಿಯನ್ನುಕುರಿತು, ನೀನು ಹೇಳಿಯೇ ತೀರಬೇಕು! ನೀನು ಬದುಕಿದರೂ ಸರಿ! ಸತ್ತರೂ ಸರಿ! ನನ್ನನ್ನೇ ನೀನು ಹಾಸ್ಯಮಾಡಿರುವೆಯೆಂದು ನನಗೆ ತೋರಿರುವುದು. ನೀನು ಹೇಳಿದಹೊರತು ನಾನು ಎಂದಿಗೂ ಬಿಡುವಳಲ್ಲ." ಎಂದಳು. ಈ ನಿನ್ನ ತಾಯಿಯ ಮಾತನ್ನು ಕೇಳಿ ಕೇಕಯರಾಜನು,ಒಡನೆಯೇ ತನಗೆ ವರವನ್ನು ಕೊಟ್ಟ ಮಹಾತ್ಮನಬಳಿಗೆ ಹೋಗಿ ಆತನೊಡನೆ ಆಲೋಚಿಸುವುದಕ್ಕಾಗಿ, ಇಲ್ಲಿ ನಡೆದ ವೃತ್ತಾಂತವೆಲ್ಲವನ್ನೂ ಯಥಾಸ್ಥಿತವಾಗಿ ಆತನಿಗೆ ತಿಳಿಸಿದನು. ಅದನ್ನು ಕೇಳಿ ಆ ಮಹಾತ್ಮನು ನಿನ್ನ ತಂದೆಯನ್ನು ಕುರಿತು. ''ಎಲೆ ರಾಜನೆ ! ಹೇಗಿದ್ದರೂ ನೀನು ಅದನ್ನು ಹೊರಪಡಿಸಕೂಡದು. ನಿನ್ನ ಹೆಂಡತಿಯು ಸತ್ತರೂ ಸಾಯಲಿ! ಈ ಅರಮನೆಯನ್ನು ಬಿಟ್ಟು ಹೊರಟುಹೋದರೂ ಹೋಗಲಿ ! ಏನುಮಾಡಿದರೂ ನೀನು ಆ ವಿಷಯವನ್ನು ತಿಳಿಸಬೇಡ" ಎಂದನು. ಇದನ್ನು ಕೇಳಿ ನಿನ್ನ ತಂದೆಯು ಒಡನೆಯೇ ಹೊರಟುಬಂದು, ನಿನ್ನ ತಾಯಿಯನ್ನು ಮನೆಯಿಂದ ಹೊರಡಿಸಿ ನಿಶ್ಚಿಂತನಾಗಿ ಕುಬೇರನಂತೆ ಸುಖದಿಂದಿದ್ದನು. ಎಲೆ ಕೈಕೇಯಿ ! ನೀನು ಪತಿಯಾದ ದಶರಥರಾಜನನ್ನು ದುರ್ಮಾರ್ಗಕ್ಕೆಳೆದು ಮರುಳುಮಾಡಿ, ಆತನನ್ನು ಕೆಡಿಸುವಪ್ರಯತ್ನದಲ್ಲಿರುವೆ! ಲೋಕದಲ್ಲಿ ತಂದೆಯಂತೆ ಗಂಡುಮಕ್ಕಳೂ, ತಾಯಿಯಂತೆ ಹೆಣ್ಣುಮಕ್ಕಳೂ ಹುಟ್ಟುವರೆಂದು ಜನಜನಿತವಾದ ಪ್ರಸಿದ್ಧಿಯುಂಟಲ್ಲವೆ?ಈಗ ನಿನ್ನ ಸ್ವಭಾವವನ್ನು ನೋಡಿದರೆ ಅದು ನಿಜವೆಂದೇ ವ್ಯಕ್ತವಾಗುವುದು. ಈ ಅಪವಾದಕ್ಕೆ ನೀನು ಒಳಗಾಗಬೇಡ ! ಪತಿಗೆ ವಿಧೇಯಳಾಗಿದ್ದು,ಆತನು ಹೇಳಿದಂತೆ ನಡೆಸು!ನಿನ್ನ ಗಂಡನ ಇಷ್ಟಾನುಸಾರವಾಗಿ ರಾಮನ

ಪಟ್ಟಾಭಿಷೇಕಕ್ಕಾಗಿ ಅನುಮತಿಸು! ಈಗ ರಾಮನ ವನವಾಸವನ್ನು ಕುರಿತು ಬಹಳ ದುಃಖಿತರಾಗಿರುವ ಪ್ರಜೆಗಳೆಲ್ಲರನ್ನೂ ನೀನೇ ರಕ್ಷಿಸಿದಂತಾಗುವುದು. ಪಾಪಬುದ್ಧಿಯುಳ್ಳ ಯಾರೋ ನಿನಗೆ ಈ ದುರ್ಬೋಧನೆಯನ್ನು ಮಾಡಿರುವಹಾಗಿದೆ! ಆ ಕಿರುಕುಳಗಳನ್ನು ಕೇಳಿಕೊಂಡು,ದೇವೇಂದ್ರನಂತೆ ಪ್ರಕಾಶಿಸುತ್ತಿರುವ ಲೋಕನಾಥನಾದ ನಿನ್ನ ಪತಿಯನ್ನು ಕೆಟ್ಟದಾರಿಗೆಳೆಯಬೇಡ! ಹಿರಿಯಮಗನಿರುವಾಗ ಕಿರಿಯನಿಗೆ ಪಟ್ಟವನ್ನು ಕಟ್ಟಿದನೆಂಬ ಅಪವಾದವನ್ನು ಆತನಮೇಲೆ ಹೊರಿಸಬೇಡ! ಶ್ರೀಮಂತನಾದ ಈ ದಶರಥನು ಎಂದಿಗೂ ಪಾಪಕಾರ್ಯಕ್ಕೆ ಪ್ರವರ್ತಿಸತಕ್ಕವನಲ್ಲ. ನಿನಗೆ ತಾನುಕೊಟ್ಟ * ಪ್ರತಿಜ್ಞೆಯನ್ನೂ ಎಂದಿಗೂ ತಪ್ಪಿಸಲಾರನು. ಬೇರೆ ಯಾವವಿಧದಲ್ಲಿಯಾದರೂ ನಿನಗೆ ಆ ವರಗಳನ್ನು ಕೊಟ್ಟುಬಿಡುವನು. ರಾಮನು ಈತನಿಗೆ ಜ್ಯೇಷ್ಠಪುತ್ರನೆಂಬುದುಮಾತ್ರವೇ ಅಲ್ಲದೆ, ಬಹಳ ಉದಾರಸ್ವಭಾವವುಳ್ಳವನು. ಕರ್ಮನಿಷ್ಠನು. ತನ್ನ ರಾಜಧರ್ಮವನ್ನು ಚೆನ್ನಾಗಿ ಕಾಪಾಡಿಕೊಳ್ಳತಕ್ಕವನು.ಸಮಸ್ತಪ್ರಾಣಿಗಳನ್ನೂ ಕ್ಷೇಮದಿಂದ ಪೋಷಿಸತಕ್ಕವನು. ಮಹಾಬಲಾಢ್ಯನು. ರಾಜ್ಯನಿರ್ವಹಣಕ್ಕೆ ಬೇಕಾದ ಸಮಸ್ತಗುಣಗಳೂ ಆತನಲ್ಲಿ ತುಂಬಿರುವುವು. ಆದುದರಿಂದ ಆತನಿಗೇ ಪಟ್ಟಾಭಿಷೇಕವು ನಡೆಯಲಿ!ಈಗ ನೀನು ಇದನ್ನು ತಪ್ಪಿಸಿ, ರಾಮನನ್ನು ಕಾಡಿಗೆ ಕಳುಹಿಸುವುದಾದರೆ, ಲೋಕದಲ್ಲಿ ದೊಡ್ಡ ಅಪವಾದಕ್ಕೆ ಗುರಿಯಾಗುವೆ. ರಾಮನೇ ರಾಜ್ಯವನ್ನಾಳುತ್ತಿರಲಿ! ಅದಕ್ಕಾಗಿ ನೀನು ಕಳವಳಿಸಬೇಡ ! ರಾಮನು ಕಾಡಿಗೆ ಹೋದರೆ ಈ ರಾಜ್ಯವನ್ನು ನಿರ್ವಹಿಸುವುದಕ್ಕೆ ಆತನಷ್ಟು ಸಮರ್ಥರಾದವರು ಬೇರೊಬ್ಬರೂ ಅಯೋಧ್ಯೆಯಲ್ಲಿಲ್ಲ. ರಾಮನು ಯೌವರಾಜ್ಯಕ್ಕೆ ಬಂದಮೇಲೆ, ಮಹಾಧನುರ್ಧರನಾದ ಈ ದಶರಥನು, ತನ್ನ ವಂಶದಲ್ಲಿ ಹಿರಿಯರು ನಡೆಸಿದ ಮಾರ್ಗವನ್ನನುಸರಿಸಿ ವಾನಪ್ರಸ್ಥಾಶ್ರಮವನ್ನು ಕೈಕೊಂಡು ವರ್ತಿಸಬಹುದು. ಇದೇ ರಾಜ

* ಇಲ್ಲಿ "ನಹಿ ಮಿಥ್ಯಾ ಪ್ರತಿಜ್ಞಾತಂ ಕರಿಷ್ಯತಿ ತವಾನಘು:" ಎಂದು ಮೂಲವು. ದಶರಥನು ಕೇವಲವಿನೋದಾರ್ಥವಾಗಿ ನಿನಗೆ ಪ್ರತಿಜ್ಞೆಮಾಡಿಕೊಟ್ಟಿರುವನೇ ಹೊರತು ನಿಜವಾದ ಅಭಿಪ್ರಾಯದಿಂದಲ್ಲ. ಆದುದರಿಂದ ಅದನ್ನು ನೆರವೇರಿಸಿಕೊಡಲಾರನು. ಎಂದು ಮಹೇಶ್ವರತೀರ್ಥವ್ಯಾಖ್ಯಾನವು.

ಧರ್ಮವು! ಎಂದನು." ಹೀಗೆ ನಯಭಯಗಳನ್ನು ತೋರ್ಪಡಿಸುವ ಮಾತುಗಳಿಂದ ಆ ರಾಜಸಭೆಯಲ್ಲಿ ಕೈಕೇಯಿಗೆ ತಕ್ಕ ಬುದ್ಧಿವಾದಗಳನ್ನು ಹೇಳಿ, ಪುನಃಪುನಃ ಕೈಮುಗಿದು ಪ್ರಾರ್ಥಿಸುತಿದ್ದನು. ಎಷ್ಟುಹೇಳಿದರೇನು ? ಆಕೆಯ ಮನಸ್ಸು ಕದಲಲಿಲ್ಲ. ಆಕೆಯ ಹೃದಯದಲ್ಲಿ ಸ್ವಲ್ಪವಾದರೂ ಮರುಕವುಂಟಾಗಲಿಲ್ಲ. ಆಕೆಯ ಮುಖದಲ್ಲಿರತಕ್ಕ ಕ್ರೌರ್ಯವೂ ಸ್ವಲ್ಪವಾದರೂ ತಗ್ಗಲಿಲ್ಲ. ಇಲ್ಲಿಗೆ ಮೂವತ್ತೈದನೆಯಸರ್ಗವು.

---

(ದಶರಥನು ರಾಮನೊಡನೆ ಚತುರಂಗಸೈನ್ಯಗಳನ್ನೂ ಕೊಟ್ಟು ಕಳೆಹಿಸುವುದಕ್ಕೆ ಪ್ರಯತ್ನಿಸಲು, ಕೈಕೇಯಿಯು ಅಡ್ಡಿಮಾಡಿದುದು. ಸಿದ್ಧಾರ್ಥನು ಕೈಕೇಯಿಗೆ ಬುದ್ಧಿವಾದಗಳನ್ನು ಹೇಳಿದುದು.)

ಹೀಗೆ ಯಾರೇನುಹೇಳಿದರೂ ಕೈಕೇಯಿಯು ರಾಮನನ್ನು ಇಲ್ಲಿರಿಸುವುದಕ್ಕೆ ಸಮ್ಮತಿಸದಿರುವುದನ್ನು ನೋಡಿ ದಶರಥನು, ತಾನು ಆಕೆಯಲ್ಲಿ ಮಾತಿಗೆ ಸಿಕ್ಕಿಬಿದ್ದಿರುವುದರಿಂದ ಹಿಂದುಮುಂದುತೋರದೆ ಸಂಕಟಪಡುತ್ತ, ಸುಮಂತ್ರನನ್ನು ನೋಡಿ ಕಣ್ಣೀರುತುಂಬಿಕೊಂಡು, ದುಃಖದಿಂದ ಆಗಾಗ ನಿಟ್ಟುಸಿರನ್ನು ಬಿಡುತ್ತ "ಎಲೈ ಸೂತನೆ! ಈಗ ನಾನು ರಾಮನನ್ನು ಕಾಡಿಗೆ ಕಳುಹಿಸದೆ ವಿಧಿಯಿಲ್ಲ. ಆದುದರಿಂದ ಈತನನ್ನು ಕಾಡಿನಲ್ಲಿ ಹಿಂಬಾಲಿಸಿಹೋಗುವುದಕ್ಕಾಗಿ ನಮ್ಮ ಚತುರಂಗಸೈನ್ಯಗಳನ್ನಾದರೂ ಸಿದ್ಧಪಡಿಸು.ಆಸೈನ್ಯಗಳೊಡನೆ ಅನೇಕರತ್ನಗಳನ್ನೂ, ಬೇಕಾದ ಪದಾರ್ಥಗಳನ್ನೂ ಸಿದ್ಧಪಡಿಸಿಡು! ಸಾವಕಾಶಮಾಡಬೇಡ!ಆತನ ವಿನೋದಾರ್ಥವಾಗಿ, ಮಾತಾಡುವುದರಲ್ಲಿಯೂ,ಹಾಡುವುದರಲ್ಲಿಯೂ ಚತುರರಾದ ವೇಶ್ಯಾಸ್ತ್ರೀಯರನ್ನೂ, ಸೇನಾಸಮೇತನಾದ ಆ ರಾಮನಿಗೆ ಬೇಕಾದ ಪದಾರ್ಥಗಳನ್ನು ಆಗಾಗಲೇ ಒದಗಿಸಿಕೊಡುವುದಕ್ಕಾಗಿ ಧನಿಕರಾದ ವರ್ತಕರನ್ನೂ ಕಳುಹಿಸಿ ಕೊಡಬೇಕು. ಮತ್ತು ಇದುವರೆಗೆ ಇಲ್ಲಿ ಆತನನ್ನಾಶ್ರಯಿಸಿಕೊಂಡು ಜೀವಿಸುತಿದ್ದ ಅವನ ಅನುಚರರೂ,ಧನುರ್ವಿದ್ಯೆ ಮೊದಲಾದ ವೀರಕಾರ್ಯಗಳಲ್ಲಿ ಆತನೊಡನೆ ಕಲೆತುವಿಹರಿಸುತಿದ್ದ ಆತನ ಪ್ರಿಯಮಿತ್ರರೂ, ಅವನೊಡನೆ ಹೋಗಿಬರಲಿ! ಅವರೆಲ್ಲರಿಗೂ ಸಮೃದ್ಧವಾಗಿ ಸುವರ್ಣರಜತವಸ್ತ್ರಾದಿಗಳನ್ನು ಕೊಟ್ಟು ಸಂತೋಷ

ಪಡಿಸಿ ಹೋಗಿಬರುವಂತೆಹೇಳು.ಉತ್ತಮವಾದ ಆಯುಧಧಾರಿಗಳೂ,ಪ್ರಮು ಖರಾದ ಪಟ್ಟಣವಾಸಿಗಳೂ, ಪದಾರ್ಥಸಮೃದ್ಧಿಯುಳ್ಳ ಬಂಡಿಗಳೂ, ಕಾಡಿನಲ್ಲಿ ಸುತ್ತಿ ಬಳಿಕೆಯುಳ್ಳ ಬೇಡರೂ, ಆತನ ಸಹಾಯಾರ್ಥವಾಗಿ ಹೋಗಿಬರಲಿ! ಹೀಗೆ ನಾವು ರಾಮನಿಗೆ ಸಮಸ್ತಸಹಾಯಸಂಪತ್ತುಗಳನ್ನೂ ಒದಗಿಸಿ ಕೊಟ್ಟರೆ,ಆತನು ಈ ರಾಜ್ಯದಲ್ಲಿದ್ದಂತೆಯೇ ಕಾಡಿನಲ್ಲಿಯೂ ಸುಖದಿಂದಿರಬಹುದು.ಆಗ ಆತನಿಗೆ ವನವಾಸಶ್ರಮವೇ ತೋರಲಾರದು. ಅಲ್ಲಲ್ಲಿ ಮೃಗಗಳನ್ನೂ,ಕಾಡಾನೆಗಳನ್ನೂ ಕೊಲ್ಲುತ್ತ, ಅಲ್ಲಲ್ಲಿ ಸಿಕ್ಕುವ ಜೇನನ್ನು ಕುಡಿಯುತ್ತ,ವಿಚಿತ್ರಗಳಾದ ನದಿಗಳನ್ನು ನೋಡುತ್ತ ವಿನೋದದಿಂದಿದ್ದು ಬಿಡುವನು. ಆಗ ಆತನ ಮನಸ್ಸಿಗೆ ಈ ರಾಜ್ಯವು ತಪ್ಪಿಹೋಯಿತೆಂಬ ಸ್ಮರಣೆಯೂಬಾರದು. ರಾಮನು ಇನ್ನು ಬಹುದಿವಸಗಳವರೆಗೆ ನಿರ್ಜನವಾದ ವನಪ್ರದೇಶದಲ್ಲಿ ವಾಸಮಾಡಬೇಕಾಗಿರುವುದರಿಂದ, ಆತನಿಗೆ ಕಾಲಕಾಲಕ್ಕೆ ಸರಿಯಾಗಿ ಧನಧಾನ್ಯಗಳು ಸಿಕ್ಕುವುದೇ ಕಷ್ಟವಾಗುವುದು. ಆದುದರಿಂದ ನಮ್ಮಲ್ಲಿ ಧಾನ್ಯದ ಕಣಜಗಳು ಎಷ್ಟುಂಟೋ, ನಮ್ಮಲ್ಲಿರುವ ಬೊಕ್ಕಸಗಳು ಯಾವುವುಂಟೋ,ಅವೆಲ್ಲವನ್ನೂ ಆತನೊಡನೆಯೇ ಕಳುಹಿಸಿಕೊಡು.ರಾಮನು ಅಲ್ಲಲ್ಲಿನ ಪುಣ್ಯಕ್ಷೇತ್ರಗಳಲ್ಲಿ ಯಾಗಗಳನ್ನು ಮಾಡುವುದಕ್ಕೂ, ಬ್ರಾಹ್ಮಣರಿಗೆ ಯಥೋಕ್ತವಾಗಿ ದಕ್ಷಿಣೆಗಳನ್ನು ಕೊಡುವುದಕ್ಕೂ,ಕಾಡಿನಲ್ಲಿ ತಪಸ್ವಿಗಳೊಡನೆ ಸುಖವಾಗಿ ವಾಸಮಾಡುವುದಕ್ಕೂ ಅನುಕೂಲಿಸುವಂತೆಮಾಡು.ಹೀಗಾದರೆ ಅತ್ತಲಾಗಿ ರಾಮನೂ ಕಾಡಿನಲ್ಲಿ ಸುಖದಿಂದಿರಬಹುದು.ಇತ್ತಲಾಗಿ ಮಹಾಬಾಹುವಾದ ಭರತನೂ ಅಯೋಧ್ಯೆಯನ್ನು ಪಾಲಿಸುತ್ತ ರಾಜ್ಯಸುಖವನ್ನನುಭವಿಸಬಹುದು.ಆದುದರಿಂದ ಶ್ರೀಮಂತನಾದ ರಾಮನನ್ನು ಸಮಸ್ತಸಂಭಾರಗಳೊಡನೆಯೇ ಕಾಡಿಗೆ ಪ್ರಯಾಣಮಾಡಿಸು." ಎಂದನು. ಈಮಾತು ಕಿವಿಗೆ ಬಿದ್ದೊಡನೆ ಕೈಕೇಯಿಯ ಮುಖವು ಕಂದಿತು. ಆಕೆಗೆ ಮನಸ್ಸಿನಲ್ಲಿ ಮಹಾಭಯವುಂಟಾಯಿತು. ಆಕೆಯ ಸ್ವರವೂ ಅಡಗಿಹೋಯಿತು. ಹೀಗೆ ಮಿತಿಮೀರಿದ ಭಯದಿಂದಲೂ, ಸಂಕಟದಿಂದಲೂ ಬಣ್ಣಗುಂದಿದ ಮುಖವುಳ್ಳವಳಾಗಿ ಆಕೆಯು, ಥಟ್ಟನೆ ರಾಜನಿಗಿದಿರಾಗಿ ಬಂದು ನಿಂತು, "ಎಲೆರಾಜನೆ! ಓಹೋ?ಇದೊಂದುಪಾಯವನ್ನೆತ್ತಿದೆಯಾ? ಮೇಲಿನ ಹೆಪ್ಪನ್ನು ತೆಗೆದಿಟ್ಟುಕೊಂಡು,ರುಚಿಯಿಲ್ಲದ ನಿಸ್ಸಾರವಾದ ಮದ್ಯವನ್ನು ಇತರರಿಗೆ ಕೊಡುವಂತೆ,

ಈ ದೇಶವೆಲ್ಲವನ್ನೂ ನಿರ್ಜನವಾಗುವಂತೆ ಮಾಡಿ, ಹಾಳುಬಿದ್ದ ರಾಜ್ಯವನ್ನು ಭರತನವಶಕ್ಕೆ ಕೊಡಬೇಕೆಂದಿರುವಹಾಗಿದೆ ! ಹಾಗೆ ಯಾರಿಗೂ ಬೇಡದ ಶೂನ್ಯವಾದ ರಾಜ್ಯವನ್ನು ನನ್ನ ಮಗನು ಎಂದಿಗೂ ಒಪ್ಪುವವನಲ್ಲ. ನಿನ್ನ ಹಾಳುರಾಜ್ಯವನ್ನು ನೀನೇ ಅನುಭವಿಸು!" ಎಂದಳು. ಹೀಗೆ ನಾಚಿಕೆಯಿಲ್ಲದೆ ಇದಿರಾಗಿ ನಿಂತು ಅತಿಕ್ರೂರವಾಕ್ಯಗಳನ್ನು ಹೇಳುತ್ತಿರುವ ಆ ಕೈಕೇಯಿಯು ನ್ನು ನೋಡಿ, ಪುನಃ ದಶರಥನು, "ಎಲೆ ಕೇಡಾಳಿ ! ನಿನಗೆ ಈ ವಿಪ ರೀತಬುದ್ಧಿಯೂ ಹುಟ್ಟಿತೆ? ಸಣ್ಣಕರುವಿನಮೇಲೆ ಹೊರಬಾರದಷ್ಟು ಹೊರೆಗಳನ್ನು ಹೊರಿಸಿ, ಆ ಭಾರವನ್ನೇ ತಡೆಯಲಾರದೆ ತತ್ತಳಿಸುತ್ತಿರುವ ಆ ಕರುವನ್ನು ನಾನಾಪಿಥದಲ್ಲಿ ಹಿಂಸಿಸಿ ಹೊಡೆದೋಡಿಸುವಂತೆ,ನೀನು ಮೊ ದಲೇ ನನ್ನಮೇಲೆ ಹೊರಬಾರದ ದುಃಖಭಾರವನ್ನು ಹೊರಿಸಿ, ಮೇಲೆಮೇಲೆ ಇನ್ನೂ ಪೀಡಿಸುತ್ತಿರುವೆಯಾ! ಎಲೆದುಷ್ಟೆ! ನೀನು ಮೊದಲೇ ಈ ಮಾತು ಗಳನ್ನು ಹೇಳಿರಬಾರದೆ? ನಾನು ರಾಮನೊಡನೆ ಸೈನ್ಯಾದಿಸಮಸ್ತ ಪರಿವಾ ರಗಳನ್ನೂ ಕಳುಹಿಸುವುದಕ್ಕೆ ಪ್ರಯತ್ನಮಾಡಿದಮೇಲೆ, ಈಗ ನೀನು ಬೇಡ ವೆಂದು ಹೇಳುವೆಯಾ! ಮೊದಲೂ ಹೀಗೆಯೇ ರಾಮಾಭಿಷೇಕಕ್ಕಾಗಿ ನಾನು ಸಮಸ್ತಸನ್ನಾಹಗಳನ್ನೂ ಸಿದ್ಧಪಡಿಸಿಟ್ಟಮೇಲೆ,ಅದಕ್ಕೂ ನೀನು ಅಡ್ಡವಾಗಿ ಬಂದು ನಿರೋಧಿಸಿದೆ!ಆದರೆ ಆಗ ನಾನು ನಿನಗೆ ವರಪ್ರದಾನವೆಂಬ ನೆವದಿಂ ದ ಸಾಲಗಾರನಾಗಿದ್ದೆನು! ಅದಕ್ಕಾಗಿ ಮಾತಿಗೆ ಕಟ್ಟುಬಿದ್ದುನಿನ್ನ ಕೋರಿಕೆ ಯನ್ನು ನಡೆಸಿಕೊಡುವುದಾಗಿ ಒಪ್ಪಿದೆನು.ಅದರಂತೆಯೇ ಈಗಲೂ ನೀನುಬೇ ರೆಬೇರೆ ನೆವಗಳನ್ನು ತಂದು ನನ್ನನ್ನು ನಿರ್ಬಂಧಿಸಿದಮಾತ್ರಕ್ಕೆ ನಾನು ಕೇಳುವೆ ನೆ?ಎಂದಿಗೂ ನಿನ್ನ ಕೋರಿಕೆಯನ್ನು ನಡೆಸಲಾರೆನು. ಈಗ ನಾನು ಸಮಸ್ತಪ ರಿವಾರಗಳನ್ನೂ ರಾಮನೊಡನೆ ಕಳುಹಿಸುವುದೇ ನಿಜವು. ನಿನ್ನ ಮಾತಿನಂತೆ ನಡೆಯತಕ್ಕವನಲ್ಲ" ಎಂದನು. ಹೀಗೆ ದಶರಥನು ಬಹುಕೋಪದಿಂದ ಹೇಳಿದ ಮಾತನ್ನು ಕೇಳಿ, ಕೈಕೇಯಿಯು ಅವನಿಗಿಂತಲೂ ಇಮ್ಮಡಿಯಾದ ಕೋಪ ವನ್ನು ತೋರಿಸುತ್ತಾ "ಎಲೆ ರಾಜನೆ! ಇದೇನು ಹೀಗೆ ಹೇಳುವೆ?ನಿನ್ನವಂಶದ ಪೂರ್ವಚರಿತ್ರವನ್ನೇ ನೀನರಿಯೆಯಾ? ನಿಮ್ಮವಂಶಕ್ಕೆ ಹಿರಿಯನಾದ ಸಗರನು ಅಸಮಂಜಸೆಂಬ ತನ್ನ ಜ್ಯೇಷ್ಠಪುತ್ರನನ್ನು ಕಾಡಿಗೆ ಹೊರಡಿಸಿಬಿಟ್ಟುದನ್ನು ನೀನು ಕೇಳಿಲ್ಲವೆ?ಆತನೇನು ತನ್ನ ಸಮಸ್ತರಾಜ್ಯಸಂಪತ್ತುಗಳನ್ನೂ ತನ್ನ ಮಗ

ನೊಡನೆ ಕಾಡಿಗೆ ಕಳುಹಿಸಿಕೊಟ್ಟನೆ? ಕಾಡಿಗೆ ಕಳುಹಿಸುವುದೆಂದರೆ ಸಮಸ್ತ ಸಂಪತ್ತುಗಳನ್ನೂ ಕೊಟ್ಟು ಕಳುಹಿಸಬೇಕೆಂಬುದಲ್ಲ! ಜನಸಹಾಯ ಧನಸ ಹಾಯಗಳೊಂದೂ ಇಲ್ಲದೆ ದೇಶಭ್ರಷ್ಟನನ್ನಾಗಿ ಮಾಡಬೇಕೆಂಬುದೇ ವನ ವಾಸವು. ಆದುದರಿಂದ ರಾಮನು ನಿರ್ಧನನಾಗಿಯೇ ಕಾಡಿಗೆ ಹೋಗ ಬೇಕು.” ಎಂದಳು. ಇದನ್ನು ಕೇಳಿ ದಶರಥನು ಕೋಪವನ್ನೂ, ಸಂಕಟ ವನ್ನೂ ತಡೆಯಲಾರದೆ, ಯಾವುದೊಂದು ಪ್ರತ್ಯುತ್ತರವನ್ನೂ ನುಡಿಯು ಲಾರದೆ“ಛೀ! ಪಾಪಿನಿಯೆ” ಎಂದು ಬಯ್ದು ಸುಮ್ಮನಾದನು. ಅಲ್ಲಿದ್ದ ಜನ ರೆಲ್ಲರೂ ನಾಚಿಕೆಯಿಂದ ತಲೆಯನ್ನು ತಗ್ಗಿಸಿಕೊಂಡು ಮೌನದಿಂದಿದ್ದರು. ಕೈಕೇಯಿಯಾದರೋ ಇದೊಂದನ್ನೂ ಲಕ್ಷ್ಯಮಾಡದೆ ನಿರ್ಭಯಳಾಗಿ ನಿಂ ತಿದ್ದಳು. ಇವೆಲ್ಲವನ್ನೂ ನೋಡುತಿದ್ದ ಸಿದ್ಧಾರ್ಥನೆಂಬ ಹೆಸರುಳ್ಳ ಶುದ್ಧಾತ್ಮ ನಾದ ವೃದ್ಧಮಂತ್ರಿಯೊಬ್ಬನು, ಬಹುಕೋಪಗೊಂಡು, ಆ ಕೈಕೇಯಿಯನ್ನು ಕುರಿತು “ಎಲೆ ಕೈಕೇಯಿ! ಬಹಳಚೆನ್ನಾಯಿತು! ಒಳ್ಳೇನಿದರ್ಶನವನ್ನು ಹೇಳಿದೆ! ಲೋಕೋತ್ತರಗುಣವುಳ್ಳ ಈ ರಾಮನಿಗೆ ಮಹಾದುಷ್ಟನಾದ ಆ ಅಸಮಂಜನನ್ನು ಸರಿಗಟ್ಟುವೆಯಾ? ಆ ಅಸಮಂಜನು ಬೀದಿಬೀದಿಗಳಲ್ಲಿ ಆಡು ತಿದ್ದ ಮಕ್ಕಳನ್ನು ಎತ್ತಿಕೊಂಡುಹೋಗಿ ಸರಯೂನದಿಯಲ್ಲಿ ಹಾಕಿ ವಿನೋ ದಿಸುತಿದ್ದನಲ್ಲವೆ? ಹೀಗೆ ಶಿಶುಘಾತುಕನಾದ ಆತನ ದೌಷ್ಟ್ಯವನ್ನು ತಡೆಯು ಲಾರದೆ, ಪಟ್ಟಣವಾಸಿಗಳೆಲ್ಲರೂ ಒಟ್ಟುಗೂಡಿ, ಬಹುಕೋಪದಿಂದ ಸಗ ರನ ಬಳಿಗೆ ಬಂದು ಆತನನ್ನು ಕುರಿತು “ಎಲೆ ರಾಜನೆ? ನಿನ್ನ ಮಗನ ಬಾಧೆ ಯನ್ನು ನಾವು ತಡೆಯಲಾರೆವು. ಅವನೊಬ್ಬನನ್ನೇ ನೀನು ನಿನ್ನ ರಾಷ್ಟ್ರದಲ್ಲಿ ರಿಸಿಕೊಂಡು ನಮ್ಮೆಲ್ಲರನ್ನೂ ತೊರೆದುಬಿಡು! ಅಥವಾ ನಮ್ಮನ್ನು ಕ್ಷೇಮದಿಂ ದ ರಕ್ಷಿಸಬೇಕೆಂಬ ಆಸೆಯು ನಿನಗಿದ್ದರೆ, ನಿನ್ನ ಮಗನನ್ನು ಈಗಲೇ ಈ ದೇ ಶದಿಂದ ಹೊರಡಿಸು. ಹೀಗಿಲ್ಲದಿದ್ದರೆ ನಮಗೆ ಉಳಿಗಾಲವೇ ಇಲ್ಲ” ವೆಂದರು. ಆಗ ಸಗರನು ಅವರ ಭಯಕ್ಕೆ ಕಾರಣವನ್ನು ವಿಚಾರಿಸಲು, ಅವರೆಲ್ಲರೂ ಕೂಡಿ, ರಾಜನನ್ನು ಕುರಿತು “ಎಲೈ ರಾಜನೆ! ನಿನ್ನ ಮಗನಿಗೆ ಹುಚ್ಚು ಹಿಡಿದಿರು ವಂತಿದೆ! ಬೀದಿಬೀದಿಗಳಲ್ಲಿ ಆಡುತ್ತಿರುವ ಮಕ್ಕಳನ್ನು ಹೊಳೆಯಲ್ಲಿ ಹಾಕಿ ವಿ ನೋದನೋಡುತ್ತಿರುವನು”ಎಂದರು. ಇದನ್ನು ಕೇಳಿ ರಾಜನು ಆ ಪ್ರಜೆಗಳ ಹಿ ತಕ್ಕಾಗಿ ದುಷ್ಟನಾದ ತನ್ನ ಮಗನನ್ನು ಕಾಡಿಗೆ ಕಳುಹಿಸಿದನು. ಆಗಲಾ

ದರೂ ಸಗರನು ತನ್ನ ಮಗನನ್ನು ಏಕಾಕಿಯನ್ನಾಗಿ ಮಾಡಿ ಕಳುಹಿಸಲಿಲ್ಲ, ಆತನಿಗೆ ವಾಹನಾದಿಗಳನ್ನು ಕೊಟ್ಟೇ ಕಳುಹಿಸಿದನು. ಮತ್ತು ಅವನ ಹೆಂಡತಿಯನ್ನೂ, ಪರಿಜನರನ್ನೂ, ಇನ್ನೂ ಕೆಲವು ಸಾಮಗ್ರಿಗಳನ್ನೂ ಅವನೊಡನೆ ಕಳುಹಿಸಿಕೊಟ್ಟು, ಯಾವಜ್ಜೀವವೂ ಆತನನ್ನು ಪಟ್ಟಣಕ್ಕೆ ಬರಗೊಳಿಸದೆ ಕಾಡಿನಲ್ಲಿಯೇ ಇರುವಂತೆ ನಿಯಮಿಸಿ ಕಳುಹಿಸಿದನು. ಆ ಅಸಮಂಜನಾದರೋ ಕೈಯಲ್ಲಿ ಗುದ್ದಲಿಯನ್ನೂ, ಪುಟ್ಟಿಯನ್ನೂ ಹಿಡಿದು, ಪಾಪಾತ್ಮನಂತೆ ದಿಕ್ಕುಗೆಟ್ಟು ತಿರುಗುತ್ತಾ, ಗಿರಿದುರ್ಗಗಳಲ್ಲಿ ಗಡ್ಡೆಗೆಣಸುಗಳನ್ನು ಅಗೆದು ತಿಂದು ಕಾಲವನ್ನು ಕಳೆಯುತಿದ್ದನು. ಎಲೆ ಕೈಕೇಯಿ! ಧಾರ್ಮಿಕನಾದ ಸಗರನು ಪ್ರಜೆಗಳ ಕ್ಷೇಮಕ್ಕಾಗಿಯೇ ದುಷ್ಟನಾದ ತನ್ನ ಮಗನನ್ನು ಕಾಡಿಗೆ ಹೊರಡಿಸಿದನೇಹೊರತು ಬೇರೆಯಲ್ಲ. ಈಗ ರಾಮನು ಮಾಡಿರುವ ಅಂತಹ ಪಾಪಕೃತ್ಯವೇನು ? ಈತನಲ್ಲಿ ನಾವು ಒಂದುದುರ್ಗುಣವನ್ನಾದರೂ ಕಾಣೆವು. ಚಂದ್ರನಲ್ಲಿಯಾದರೂ ಸ್ವಲ್ಪಕಳಂಕವುಂಟು. ಸ್ವಲ್ಪವಾದರೂ ದೋಷವಿಲ್ಲದೆ, ನಿಷ್ಕಳಂಕನಾದ ಚಂದ್ರನಂತೆ ಲೋಕಾನಂದಕರನಾದ ರಾಮನಲ್ಲಿ ಯಾವ ತಪ್ಪನ್ನಾರೋಪಿಸಬಹುದು ? ಅಥವಾ ನಿನಗೆ ಅವನಲ್ಲಿ ಯಾವುದಾದರೂ ದೋಷವು ಕಂಡುಬಂದಿದ್ದರೆ ಅದನ್ನಾದರೂ ತಿಳಿಸು. ಅದನ್ನೇ ಒಂದುವ್ಯಾಜವನ್ನಾಗಿಟ್ಟುಕೊಂಡು ಈಕ್ಷಣವೇ ಅವನನ್ನು ಹೊರಡಿಸಿಬಿಡಬಹುದು ! ನಿರ್ದುಷ್ಟನಾಗಿ ಸನ್ಮಾರ್ಗದಲ್ಲಿಯೇ ನಿರತನಾಗಿರುವವನನ್ನು ನಿಷ್ಕಾರಣವಾಗಿ ತೊರೆದುಬಿಡುವುದು ಧರ್ಮವಿರುದ್ಧವು. ಹೀಗೆ ಅಧರ್ಮಕ್ಕೆ ಪ್ರವರ್ತಿಸಿದರೆ, ದೇವೇಂದ್ರನಿಗಾದರೂ ತೇಜೋಹಾನಿಯುಂಟಾಗದಿರದು ! ಆದುದರಿಂದ, ಎಲೆ ದೇವಿ ! ರಾಮನ ವಿಷಯದಲ್ಲಿರುವ ಮಾತ್ಸರ್ಯವನ್ನು ಇಷ್ಟಕ್ಕೇ ಬಿಟ್ಟುಬಿಡು ! ಆತನ ಶ್ರೇಯಸ್ಸಿಗೆ ವಿಘಾತವನ್ನು ತರುವ ಪ್ರಯತ್ನವು ಧರ್ಮವಲ್ಲ. ಅಥವಾ ಧರ್ಮಾಧರ್ಮವಿಚಾರವೂ ಹಾಗಿರಲಿ ! ನೀನು ಲೋಕಾಪವಾದಕ್ಕಾದರೂ ಅಂಜಬೇಡವೆ ?" ಎಂದನು. ಸಿದ್ಧಾರ್ಥನು ಹೇಳುತಿದ್ದ ಈ ಮಾತನ್ನು ಕೇಳಿ ದಶರಥನು, ದುಃಖದಿಂದ ಗಟ್ಟಿಯಾಗಿ ಮಾತನ್ನೂ ಆಡಲಾರದೆ, ಬಹಳ ಕುಗ್ಗಿದ ಸ್ವರದಿಂದ, ಕೈಕೇಯಿಯನ್ನು ಕುರಿತು, "ಎಲೆ ಪಾಪಿನಿ ! ಈಗಲೂ ನಿನಗೆ ಬುದ್ಧಿ ಹುಟ್ಟಲಿಲ್ಲವೆ ? ಈತನ ಅಮೋಘವಾದ ಬುದ್ಧಿವಾದವನ್ನು ಕೇಳಿಯೂ ನಿನಗೆ ಮನಸ್ಸು



೫೩೩. ರಾಮಲಕ್ಷ್ಮಣರೂ, ಸೀತೆಯೂ, ಕೈಕೇಯಿಯು ಕೊಟ್ಟ ನಾರುಬಟ್ಟೆಗಳನ್ನು ಧರಿಸಿದುದು.

ಕರಗಲಿಲ್ಲವೆ? ನನ್ನನ್ನು ಕೆಡಿಸುವುದಲ್ಲದೆ ನಿನ್ನ ಶ್ರೇಯಸ್ಸನ್ನೂ ನೀನು ಕೆಡಿಸಿಕೊಳ್ಳುತ್ತಿರುವೆಯಲ್ಲಾ ! ಕುತ್ಸಿತವಾದ ಮಾರ್ಗಕ್ಕೆ ಪ್ರವರ್ತಿಸಿ ಹೀಗೇಕೆ ಕುಚೇಷ್ಟೆಯನ್ನಾರಂಭಿಸಿರುವೆ ? ಈ ನಿನ್ನ ವ್ಯಾಪಾರವು ಸಾಧುಗಳಿಗೆ ಸಮ್ಮತವಾದುದಲ್ಲವೇ ಅಲ್ಲ. ನೀನು ನಿನ್ನ ಹಟವನ್ನು ಬಿಡದಿರುವುದೇ ನಿಜವಾದರೆ, ನಾನೂ ರಾಮನೊಡನೆಯೇ ಕಾಡಿಗೆ ಹೊರಟುಹೋಗುವೆನು ! ನನಗೆ ಇನ್ನು ಮೇಲೆ ಈ ರಾಜ್ಯವೂ ಬೇಡ! ಈ ಹಣವೂ ಬೇಡ! ಈ ಸುಖವೂ ಬೇಡ! ನೀನೇ ಭರತನಿಗೆ ರಾಜ್ಯವನ್ನು ಕೊಟ್ಟು, ಅವನೊಡನೆ ಸ್ವೇಚ್ಛೆಯಾಗಿ ರಾಜ್ಯಸುಖಗಳನ್ನನುಭವಿಸುತ್ತಿರು!, ಎಂದನು. ಇಲ್ಲಿಗೆ ಮೂವತ್ತಾರನೆಯಸರ್ಗವು.

---

(ರಾಮಲಕ್ಷ್ಮಣರೂ, ಸೀತೆಯೂ, ಕೈಕೇಯಿಯು ತರಿಸಿಕೊಟ್ಟ ನಾರುಬಟ್ಟೆಗಳನ್ನು ಧರಿಸಿದುದು ವಸಿಷ್ಠನು ಕೈಕೇಯಿಯನ್ನು ನಿಂದಿಸಿದುದು.)

ಸಿದ್ಧಾರ್ಥನು ಹೇಳುತಿದ್ದ ಮಾತುಗಳನ್ನು ರಾಮನೂ ಕೇಳುತಿದ್ದನು. ದಶರಥನು ಕೈಕೇಯಿಗೆ ಹೇಳಿದ ವಾಕ್ಯಗಳನ್ನೂ ಕೇಳಿದನು. ಆಗ ವಿನಯದಿಂದ ದಶರಥನನ್ನು ನೋಡಿ. ''ಎಲೈ ಮಹಾರಾಜನೆ! ಈಗ ನಾನು ಸಮಸ್ತಭೋಗಗಳನ್ನೂ ಬಿಟ್ಟು ಕಾಡಿಗೆ ಹೋಗುತ್ತಿರುವೆನು. ಇನ್ನು ಮೇಲೆ ಅಲ್ಲಿಗಡ್ಡೆಗೆಣಸುಗಳನ್ನು ಅಗೆದು ತಿಂದು ಜೀವಿಸತಕ್ಕವನು. ಸರ್ವಸಂಗಪರಿತ್ಯಾಗವನ್ನು ಮಾಡಿ ವಿರಕ್ತನಂತೆ ಕಾಲವನ್ನು ಕಳೆಯಬೇಕಾದ ನನಗೆ ಈ ಪರಿವಾರಗಳಿಂದೇನು? ಉತ್ತಮವಾದ ಆನೆಯನ್ನು ಪರರಿಗೆ ಕೊಟ್ಟು, ಅದರ ಹಗ್ಗಕ್ಕೆ ಹೋರಾಡುವವನಂತೆ, ನನಗೆ ಇನ್ನು ಪರಿಜನರಿಂದಲೂ, ಸೇನೆಗಳಿಂದಲೂ ಪ್ರಯೋಜನವೇನು? ನೀನು ನನಗೆ ಕೊಡಬೇಕೆಂದಿರುವುದೆಲ್ಲವನ್ನೂ ಭರತನಿಗೇ ಕೊಡು ! ನನಗೆ ಈಗ ಮುಖ್ಯವಾಗಿ ಬೇಕಾದ ಪದಾರ್ಥವು ನಾರುಮಡಿಯೊಂದೇ ಹೊರತು ಬೇರೊಂದೂ ಇಲ್ಲವು. ಅವುಗಳನ್ನು ತರಿಸಿಕೊಟ್ಟರೆ ಸಾಕು! ಒಂದೊಂದು ವೇಳೆ ಗಡ್ಡೆಗೆಣಸುಗಳನ್ನಗೆಯುವುದಕ್ಕಾಗಿ ಒಂದುಗುದ್ದಲಿಯೂ, ಅವುಗಳನ್ನು ತುಂಬಿಡುವುದಕ್ಕಾಗಿ ಒಂದು ಪುಟ್ಟಿಯೂ ಬೇಕಾಗಿಬರುವುದು. ಅವುಗಳೆರಡನ್ನೂ ಕೊಡುವುದಾದರೆ, ನನಗೆ ಬೇಕಾದುದೆಲ್ಲವನ್ನೂ ಕೊಟ್ಟಂತೆಯೇ ಆಗುವುದು. ಅವುಗಳನ್ನುಮಾತ್ರ ತರಿಸಿಕೊಡು ! ನಾನು ಇನ್ನು ಹದಿನಾಲ್ಕು ವರ್ಷಗಳವರೆಗೆ ಕಾಡಿನಲ್ಲಿರಬೇಕಾದುದರಿಂದ, ಈ ಸಾಮಗ್ರಿಗಳುಮಾತ್ರ ನನ

ಗೆ ಅವಶ್ಯಕಗಳಾಗಿರುವುವು" ಎಂದನು. ಇದನ್ನು ಕೇಳುತಿದ್ದ ಕೈಕೇಯಿಯು ಬಹಳಸಂಭ್ರಮದಿಂದ ತಾನೇ ಹೋಗಿ ನಾರುಬಟ್ಟೆಗಳನ್ನು ತಂದು ರಾಮನ ಮುಂದಿಟ್ಟು, ಅಲ್ಲಿದ್ದವರೆಲ್ಲರೂ ಕೇಳುತ್ತಿರುವಾಗಲೇ ನಾಚಿಕೆಯಿಲ್ಲದೆ ರಾಮನನ್ನು ಕುರಿತು "ರಾಮಾ! ನಾರುಮಡಿಗಳು ಸಿದ್ಧವಾಗಿರುವುವು. ಇವುಗಳನ್ನು ಧರಿಸು"ಎಂದಳು. ಆಗ ರಾಮನು ಆಕೆಯ ಸಮೀಪದಲ್ಲಿದ್ದ ನಾರುಮಡಿಗಳೆರಡನ್ನೂ ತಾನಾಗಿಯೇ ಕೈಗೆ ತೆಗೆದುಕೊಂಡು, ಮೊದಲು ತಾನು ಉಟ್ಟಿದ್ದ ದುಕೂಲವನ್ನು ತೆಗೆದುಹಾಕಿ, ತಾಪಸಯೋಗ್ಯವಾದ ಆ ವಲ್ಕಲಗಳನ್ನು ಕಟ್ಟಿಕೊಂಡನು. ಲಕ್ಷ್ಮಣನೂ ಹಾಗೆಯೇ ಉಟ್ಟಿದ್ದ ಬಟ್ಟೆಯನ್ನು ತೆಗೆದು ಹಾಕಿ, ತಾಪಸಯೋಗ್ಯವಾದ ಆ ಬಟ್ಟೆಗಳನ್ನು ತೆಗೆದುಕೊಂಡು ದಶರಥನಮುಂದೆಯೇ ಅವುಗಳನ್ನುಟ್ಟುಕೊಂಡನು. ಕೊನೆಗೆ ಸೀತೆಯೂ ತನಗಾಗಿ ಕೈಕೇಯಿಯು ತಂದಿಟ್ಟ ನಾರುಬಟ್ಟೆಯನ್ನು ನೋಡಿದಳು. ಈಕೆಯು ಹುಟ್ಟಿದುದುಮೊದಲು ಪಟ್ಟೆಯ ದುಕೂಲವನ್ನು ಹೊರತು, ಬೇರೆಬಟ್ಟೆಯನ್ನೇ ಉಟ್ಟವಳಲ್ಲ. ಈಗ ಆ ನಾರುಬಟ್ಟೆಗಳನ್ನು ನೋಡಿದೊಡನೆ, ಬಲೆಯನ್ನು ನೋಡಿದ ಹೆಣ್ಣು ಜಿಂಕೆಯಂತೆ ಬೆಚ್ಚಿಬಿದ್ದಳು. ಮನಸ್ಸಿನಲ್ಲಿ ಸಹಿಸಲಾರದಷ್ಟು ಸಂಕಟವುಂಟಾಯಿತು. ಹಾಗೆಯೇ ನಾಚಿಕೆಯಿಂದ ತಲೆಯನ್ನು ತಗ್ಗಿಸಿಕೊಂಡಳು. ಆಕೆಯ ಎರಡುಕಣ್ಣುಗಳಲ್ಲಿಯೂ ನೀರು ತುಂಬಿ ತುಳುಕಾಡುತ್ತಿತ್ತು. ಶುಭಲಕ್ಷಣಗಳುಳ್ಳ ಆ ಸೀತೆಯು ತನಗುಂಟಾದ ಈ ಹೀನದಶೆಯನ್ನು ನೋಡಿ ದುಃಖಿತೆಯಾಗಿದ್ದರೂ, ಪತಿವ್ರತಾಧರ್ಮವನ್ನು ಚೆನ್ನಾಗಿ ಬಲ್ಲವಳಾದುದರಿಂದ, ನಾಚಿಕೆಯಿಂದಲೇ ಆ ಬಟ್ಟೆಗಳನ್ನು ಕೈಗೆ ತೆಗೆದುಕೊಂಡು ಗಂಧರ್ವರಾಜನಂತೆ ಮುಂದೆ ನಿಂತಿದ್ದ ಪತಿಯಾದ ರಾಮನನ್ನು ನೋಡಿ "ಎಲೈ ಪ್ರಿಯನೆ! ವನವಾಸಿಗಳಾದ ಋಷಿಗಳು ಈ ವಿಧವಾದ ಬಟ್ಟೆಗಳನ್ನು ಹೇಗೆ ಕಟ್ಟಿಕೊಳ್ಳುವರೆಂಬುದೇ ನನಗೆ ತಿಳಿಯದು. ನೀನೇ ಆ ಕ್ರಮವನ್ನು ನನಗೆ ತಿಳಿಸಿಕೊಡಬೇಕು?"ಎಂದು ಹೇಳುತ್ತಾ ಅವುಗಳನ್ನು ಕಟ್ಟಿಕೊಳ್ಳುವುದಕ್ಕೆ ತಿಳಿಯದೆ ಸುಮ್ಮನೆ ನಿಂತಿದ್ದಳು. ವ್ಯಸನದಿಂದ ಆಕೆಗೆ ಯಾವುದೊಂದೂ ತೋರಲಿಲ್ಲ. ಆ ಎರಡುಬಟ್ಟೆಗಳಲ್ಲಿ ಒಂದನ್ನು ತೆಗೆದು ಕಂಠದಲ್ಲಿ ಸಿಕ್ಕಿಸಿಕೊಂಡು,ಮತ್ತೊಂದನ್ನು ಕೈಯ್ಯಲ್ಲಿ ಹಿಡಿದು, ಸರಿಯಾಗಿ ಉಟ್ಟುಕೊಳ್ಳುವುದಕ್ಕೆ ತಿಳಿಯದೆ ನಾಚಿಕೆಯಿಂದ ಸುಮ್ಮನೆ ನಿಂತಿರಲು, ಇದನ್ನು ನೋಡಿ ರಾಮನು

ಆ ಬಟ್ಟೆಗಳನ್ನು ತಾನೇ ಕೈಗೆ ತೆಗೆದುಕೊಂಡು, ಆ ಸೀತೆಯು ಮೊದಲು ಉಟ್ಟಿದ್ದ ಪಟ್ಟೆಸೀರೆಯಮೇಲೆಯೇ ತನ್ನ ಕೈಯ್ಯಿಂದ ಉಡಿಸಿದನು. ಹೀಗೆ ರಾಮನು ತನ್ನ ಕೈಯಿಂದಲೇ ತನ್ನ ಹೆಂಡತಿಗೆ ನಾರುಬಟ್ಟೆಗಳನ್ನುಡಿಸುತ್ತಿರುವುದನ್ನು ನೋಡಿ, ಅಲ್ಲಿದ್ದ ಅಂತಃಪುರಸ್ತ್ರೀಯರೆಲ್ಲರೂ ಕಣ್ಣೀರನ್ನು ಸುರಿಸುತ್ತಿದ್ದರು. ಅವರೆಲ್ಲರೂ ಮಹಾವ್ಯಸನದಿಂದ ನೊಂದವರಾಗಿ ತೇಜಸ್ವಿಯಾದ ರಾಮನನ್ನು ನೋಡಿ ''ಎಲೆ ವತ್ಸ ರಾಮನೆ! ಸುಕುಮಾರಾಂಗಿಯಾದ ಈ ಸೀತೆಯನ್ನು ವನವಾಸದಿಂದ ಬಳಲಿಸುವುದು ನ್ಯಾಯವಲ್ಲ! ಒಂದುವೇಳೆ ನೀನು ಪಿತೃವಾಕ್ಯಪರಿಪಾಲನಾರ್ಥವಾಗಿ ಕಾಡಿನಲ್ಲಿದ್ದು ಬರಬೇಕಾಗಿದ್ದರೂ ಈಕೆಗೆ ಆ ನಿರ್ಬಂಧವೇನೂ ಇಲ್ಲವಷ್ಟೆ? ಇನ್ನು ಹದಿನಾಲ್ಕುವರ್ಷಗಳವರೆಗೆ ನಿನ್ನ ದರ್ಶನವಂತೂ ನಮಗೆ ದುರ್ಲಭವು. ಈಕೆಯನ್ನಾದರೂ ಆಗಾಗ ನೋಡುತಿದ್ದರೆ ನಮ್ಮ ಮನಸ್ಸಿಗೆ ಸ್ವಲ್ಪಮಟ್ಟಿಗಾದರೂ ಅಪ್ಯಾಯನವುಂಟಾಗಬಹುದು! ನಿನ್ನ ಸಹಾಯಕ್ಕಾಗಿ ಲಕ್ಷ್ಮಣನನ್ನುಮಾತ್ರ ಕರೆದುಕೊಂಡು ಹೋಗು! ಮಂಗಳಸ್ವರೂಪಿಣಿಯಾದ ಈ ಸೀತೆಯು ತಪಸ್ವಿಗಳಂತೆ ಕಾಸಿನಲ್ಲಿ ವಾಸಮಾಡುವುದಕ್ಕರ್ಹಳಲ್ಲ! ನಮ್ಮ ಇಂದೊಂದು ಪ್ರಾರ್ಥನೆಯನ್ನಾದರೂ ನಡೆಸಿಕೊಡು! ಧರ್ಮನಿರತನಾದ ನಿನ್ನನ್ನಂತೂ ನಾವು ತಡೆಯಲಾರೆವು. ಸೀತೆಯಾದರೂ ಇಲ್ಲಿರಲಿ!" ಎಂದರು. ಹೀಗೆ ಆ ಅಂತಃಪುರಸ್ತ್ರೀಯರೆಲ್ಲರೂ ನಾನಾವಿಧವಾಗಿ ಕೇಳಿಕೊಳ್ಳುತಿದ್ದರೂ, ರಾಮನು ಆ ಮಾತುಗಳಿಗೆ ಲಕ್ಷ್ಯ ಕೊಡದೆ ಸುಮ್ಮನೆ ಕಿವಿಯಿಂದ ಕೇಳುತ್ತ ಸೀತೆಗೆ ಆ ನಾರುಬಟ್ಟೆಗಳನ್ನುಡಿಸುತ್ತಲೇ ಇದ್ದನು. ಸೀತೆಯು ನಾರುಬಟ್ಟೆಯನ್ನುಡಿಸಿಕೊಳ್ಳುತ್ತಿರುವ ಸಮಯದಲ್ಲಿ, ರಾಜಗುರುವಾದ ವಸಿಷ್ಠನು ನೋಡಿ, ಆ ಸೀತೆಯನ್ನು ಹಾಗೆ ಮಾಡಕೂಡದೆಂದು ತಡೆದು ನಿಲ್ಲಿಸಿ ಬಹುಕೋಪದಿಂದ ಕೈಕೇಯಿಯ ಕಡೆಗೆ ತಿರುಗಿ ''ಎಲೆ ದುರ್ಬುದ್ಧಿಯುಳ್ಳವಳೆ? ಇದೇನು? ಮಿತಿಮೀರಿ ಹೋಗುತ್ತಿರುವೆ? ಎಲೆ ಕುಲಗೇಡಿ! ಕೈಹಿಡಿದ ಗಂಡನನ್ನು ಮರುಳುಮಾಡಿ ವಂಚಿಸಿದುದಲ್ಲದೆ ಮೇಲೆಮೇಲೆ ಮರ್ಯಾದೆಯನ್ನೂ ಮೀರಿಹೋಗುತ್ತಿರುವೆಯಲ್ಲಾ! ಎಲೆ ದುಶ್ಶೀಲೆ! ಸೀತೆಯು ಈಗ ಕಾಡಿಗೆ ಹೋಗಬೇಕಾದ ಅವಸರವೇನು? ಒಂದುವೇಳೆ ರಾಮನು ನಿನ್ನ ನಿರ್ಬಂಧಕ್ಕಾಗಿ ಕಾಡಿನಲ್ಲಿರಬೇಕಾದರೂ, ಅವನಿಗೆ ಸಲ್ಲಬೇಕಾದ ಸಿಹ್ಮಾಸನಕ್ಕೆ ಈ ಸೀತೆಗೇ ಬಾಧ್ಯತೆಯೇಹೊರತು ಮತ್ತೊಬ್ಬರಿ

ಗಿಲ್ಲ! ರಾಮನು ಹಿಂತಿರುಗಿ ಬರುವವರೆಗೂ ರಾಜ್ಯಾಧಿಕಾರವು ಈಕೆಗೇ ಸಲ್ಲಬೇಕು! ಈಕೆಯೇ ರಾಜ್ಯವನ್ನು ಪಾಲಿಸುತ್ತಿರಲಿ! ಗೃಹಸ್ಥರಾದವರಿಗೆ*ಭಾರ್ಯೆಯೇ ಆತ್ಮವೆಂದು ಶ್ರುತಿಪ್ರಮಾಣದಿಂದ ಸಿದ್ಧವಾಗಿರುವುದು. ಹೀಗೆ ಕೈಹಿಡಿದ ಹೆಂಡತಿಯಾದ ಈ ಸೀತೆಯು ರಾಮನಿಗೆ ಆತ್ಮಭೂತೆಯಾಗಿರುವುದರಿಂದ, ಅವನಿಗೆ ಸಲ್ಲಬೇಕಾದ ರಾಜ್ಯವನ್ನು ಪಾಲಿಸುವುದಕ್ಕೆ ಈಕೆಯೇ ಬಾಧ್ಯಳು! ಒಂದುವೇಳೆ ಈ ಸೀತೆಯು ತನ್ನ ಪತಿಯನ್ನಗಲಿರಲಾರದೆ ತಾನಾಗಿಯೇ ಇಷ್ಟಪಟ್ಟು ಕಾಡಿಗೆ ಹೊರಡುವುದಾದರೆ, ನಾವೂ ಅವರೊಡನೆಯೇ ಹೊರಟು ಹೋಗುವೆವು! ಈ ಪಟ್ಟಣವೂ ಅವರನ್ನು ಹಿಂಬಾಲಿಸುವುದು! ರಾಮನು ಪತ್ನೀಸಮೇತನಾಗಿ ಎಲ್ಲಿಗೆ ಹೋಗುವನೋ, ಅಲ್ಲಿಗೆ ನಮ್ಮ ದಂಡನಾಯಕರೆಲ್ಲರೂ ಹೊರಟುಹೋಗುವರು. ರಾಜನಾಗಲಿ, ಆತನ ಅನುಜೀವಿಗಳಾಗಲಿ, ಪುರವಾಸಿಗಳಾಗಲಿ, ದೇಶವಾಸಿಗಳಾಗಲಿ, ತಮ್ಮ ತಮ್ಮ ಪರಿವಾರಗಳೊಡನೆ ಆ ರಾಮನನ್ನೇ ಹಿಂಬಾಲಿಸುವರು. ಭರತಶತ್ರುಘ್ನರಾದರೂ ಇಲ್ಲಿ ನಿಲ್ಲುವರೆಂದೆಣಿಸಬೇಡ! ಅವರೂ ನಾರುಮಡಿಗಳನ್ನುಟ್ಟು ಅಣ್ಣನನ್ನೇ ಹಿಂಬಾಲಿಸುವರು. ಆಮೇಲೆ ಘೋರಾರಣ್ಯದಂತೆ ಶುದ್ಧಶೂನ್ಯವಾದ ಈ ದೇಶವನ್ನು ನೀನೊಬ್ಬಳೇ ಸ್ವೇಚ್ಛೆಯಾಗಿ ಆಳಬಹುದು! ಇಷ್ಟಬಂದಂತೆ ಪ್ರಜೆಗಳನ್ನು ಹಿಂಸಿಸುತ್ತಿರಬಹುದು! ಮುಖ್ಯವಾಗಿ ನಡೆಯತಕ್ಕ ನಿಜತತ್ವವನ್ನು ಒಂದೇಮಾತಿನಲ್ಲಿ ಹೇಳುವೆನು ಕೇಳು. ರಾಮನಿರತಕ್ಕ ಪ್ರದೇಶವೇ ರಾಜ್ಯವು. ಆವನಿಲ್ಲದ ಸ್ಥಳವೇ ಅರಣ್ಯವೆಂದು ತಿಳಿ! ಭರತನು ದಶರಥನಿಗೆ ಹೊಟ್ಟೆಯಲ್ಲಿಹುಟ್ಟಿದ ಮಗನಾಗಿದ್ದರೂ, ತಂದೆಯು ತಾನಾಗಿ ಇಷ್ಟಪಟ್ಟು ಕೊಡದ ರಾಜ್ಯವನ್ನು ಪಾಲಿಸುವುದಕ್ಕೆ ಮಗನು ಎಂದಿಗೂ ಅರ್ಹನಾಗಲಾರನು. ಇನ್ನು ಮುಂದೆ ಆತನು ತಂದೆಗೆ ಕೇಡನ್ನು ತಂದ ನಿನ್ನನ್ನು ತಾಯಿಯೆಂದೂ ಗೌರವಿಸಲಾರನು! ನಿನ್ನ ಬುದ್ಧಿಯು ವಿಪರೀತವಾಗಿ ಪರಿಣಮಿಸಿಹೋಗಿರುವುದರಿಂದ, ನೀನು ಭೂಮಿಯಿಂದ ಆಕಾಶಕ್ಕೆ ಹಾರುವವಳಾಗಿದ್ದರೂ, ತನ್ನ ತಂದೆಯ ವಂಶಚರಿತ್ರವೆಲ್ಲವನ್ನೂ ಚೆನ್ನಾಗಿ ಬಲ್ಲ ಆ ಭರತನು, ನಿನ್ನಂತೆ ವಿಪರೀತಮಾರ್ಗಕ್ಕೆ ಪ್ರವರ್ತಿಸಲಾರನು. ಆತನು ದಶರಥನ ಮಗನೇ ಆಗಿದ್ದಪಕ್ಷದಲ್ಲಿ, ತನ್ನ

* ಇಲ್ಲಿ "ಅಥೋ ಅರ್ಧೋವಾ ಏಷ ಆತ್ಮನೋ ಯತ್ಪತ್ನೀ" ಎಂದು ಶ್ರುತಿಯು

ಈಕಕುತ್ಸ್ಥವಂಶದ ಮರ್ಯ್ಯಾದೆಯನ್ನು ಎಂದಿಗೂಬಿಟ್ಟುಹೋಗಲಾರನು. ನೀನು ನಿನ್ನ ಮಗನಲ್ಲಿರುವ ವಿಶೇಷವಾತ್ಸಲ್ಯದಿಂದ ರಾಮನನ್ನು ಹೊರಡಿಸಿ, ಭರತ ನಿಗೆ ರಾಜ್ಯವನ್ನು ಕೊಡಿಸುವ ಪ್ರಯತ್ನವನ್ನು ಮಾಡಿದರೂ,ಭರತನು ಎಂ ದಿಗೂ ತನ್ನ ಅಣ್ಣನನ್ನು ಅನುವರ್ತಿಸದಿರಲಾರನು. ಭರತನ ಮಾತು ಹಾಗಿ ರಲಿ! ಈ ಲೋಕದಲ್ಲಿ ನೀನೊಬ್ಬಳುಹೊರತು ರಾಮನನ್ನನುವರ್ತಿಸಿ ನಡೆಯ ದಿರುವವರು ಯಾರೂ ಇಲ್ಲವೆಂದೇ ತಿಳಿ! ನೀನು ಭರತನ ಹಿತಕ್ಕಾಗಿ ಈಗ ಯಾವ ಪ್ರಯತ್ನವನ್ನು ಮಾಡಿರುವೆಯೋ, ಅವೆಲ್ಲವೂ ಆತನಿಗೆ ಅಪ್ರಿಯ ವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಎಲೆ ಕೈಕೇಯಿ! ಹೆಚ್ಚಾಗಿ ಹೇಳಿದುದ ರಿಂದೇನು? ಈ ಪಟ್ಟಣದಲ್ಲಿರತಕ್ಕ ಮನುಷ್ಯವರ್ಗವು ಮಾತ್ರವೇ ಅಲ್ಲ! ಅಜ್ಞಾನಿಜಂತುಗಳಾದ ಪಶುಪಕ್ಷಿಮೃಗಾದಿಗಳೂ, ಆ ರಾಮನನ್ನೇ ಹಿಂಬಾ ಲಿಸಿಹೋಗುವುದನ್ನು ಈಗಲೇ ನೀನು ನೋಡುವೆ. ಕೊನೆಗೆ ಅಚೇತನಗಳಾದ ವೃಕ್ಷಗಳೂ ಕೂಡ,ತಮಗೆ ಸಂಚಾರಶಕ್ತಿಯಿಲ್ಲದಿದ್ದರೂ, ಆತನು ಹೋಗು ತ್ತಿರುವಕಡೆಗೆ ಅಭಿಮುಖಗಳಾಗಿ,ಆತನಲ್ಲಿ ತಮಗಿರುವ ಅನುರಾಗವನ್ನು ತೋ ರಿಸದೆಬಿಡವು. ಎಲೆ ದೇವಿ! ಆದುದರಿಂದ ಈ ನಿನ್ನ ಕ್ರೌರ್ಯವನ್ನು ಇಷ್ಟಕ್ಕೇ ನಿಲ್ಲಿಸು! ಈಗ ನಿನ್ನ ಸೊಸೆಗೆ ಉಡಿಸುತ್ತಿರುವ ನಾರುಮಡಿಯನ್ನು ತೆಗೆದು. ಉತ್ತಮವಾದ ಆಭರಣಗಳನ್ನು ಕೊಡು! ಈಕೆಗೆ ನಾರುಮಡಿಯು ಎಂದಿಗೂ ಉಚಿತವಲ್ಲ"ಎಂದು ಬಹಳವಾಗಿ ನಿಷೇಧಿಸಿ ಪುನಃ ಕೈಕೇಯಿಯನ್ನು ನೋಡಿ, ಎಲೆ ಕೈಕೇಯಿ! ನೀನು ಕಾಡಿನಲ್ಲಿರಿಸಬೇಕೆಂದು ಅಪೇಕ್ಷಿಸಿದುದು ರಾಮ ನೊಬ್ಬನನ್ನೇ ಅಲ್ಲವೆ? ಸೀತೆಯು ಹಾಗಿರಬೇಕಾದ ನಿರ್ಬಂಧವೇನೂಇಲ್ಲವಷ್ಟೆ? ಆದುದರಿಂದ ಪ್ರತಿನಿತ್ಯವೂ ಆಭರಣಾದಿಗಳಿಂದ ಅಲಂಕರಿಸಲ್ಪಡುವುದಕ್ಕೆ ಯೋಗ್ಯಳಾದ ಈಕೆಯು. ರಾಜಯೋಗ್ಯಗಳಾದ ಆಭರಣಗಳೊಡನೆಯೇ ರಾಮನನ್ನು ಹಿಂಬಾಲಿಸಿಹೋಗಲಿ! ಮತ್ತು ಈ ರಾಜಕುಮಾರಿಯು ಉತ್ತಮ ವಾಹನಗಳನ್ನೂ, ಪರಿಜನರುಗಳನ್ನೂ, ವಿಚಿತ್ರವಸ್ತ್ರಗಳನ್ನೂ, ಇನ್ನೂ ಬೇ ಕಾದ ಉಪಕರಣಗಳನ್ನೂ ಸಂಗಡ ತೆಗೆದುಕೊಂಡೇ ಹೋಗುವಂತೆ ಅನು ಗ್ರಹಿಸು. ನೀನು ವರಗಳನ್ನು ಕೇಳುವಾಗ ಸೀತೆಯನ್ನು ಕಳುಹಿಸಬೇಕೆಂದು ಕೇಳಿಲ್ಲವಷ್ಟೆ? ಆದುದರಿಂದ ಇವಳನ್ನು ಯಾವವಿಷಯದಲ್ಲಿಯೂ ನೀನು ನಿರ್ಬಂಧಿಸಕೂಡದು" ಎಂದನು. ದಶರಥನಿಗೆ ಕುಲಗುರುವಾಗಿ, ಎಣೆಯಿಲ್ಲದ

ಪ್ರಭಾವವುಳ್ಳ ಆ ಬ್ರಾಹ್ಮಣೋತ್ತಮನು ಹೀಗೆ ಎಷ್ಟುವಿಧದಲ್ಲಿ ಹೇಳುತಿದ್ದರೂ, ಸೀತೆಯು ತನ್ನ ಪತಿಯ ವೇಷವನ್ನೇ ಅನುಕರಿಸಬೇಕೆಂಬುದಕ್ಕಾಗಿ, ತಾನು ಧರಿಸಿದ್ದ ನಾರುಬಟ್ಟೆಯನ್ನು ತೆಗೆಯಲಾರದೆ, ಹಾಗೆಯೇ ಪ್ರಯಾಣಸನ್ನದ್ಧಳಾಗಿದ್ದಳು. ಇಲ್ಲಿಗೆ ಮೂವತ್ತೇಳನೆಯಸರ್ಗವು.

---

{ ದಶರಥನು ಸೀತೆಗೆ ನಾರುಬಟ್ಟೆಯನ್ನುಡಿಸದಿರಬೇಕೆಂದು ಕೈಕೇಯಿಯನ್ನು ಕೇಳಿಕೊಂಡುದು. ರಾಮನು ತನ್ನ ತಾಯಿಯಾದ ಕೌಸಲ್ಯೆಯನ್ನು ಸರಿಯಾಗಿ ಕಾಪಾಡಿಕೊಳ್ಳಬೇಕೆಂದು ತಂದೆಯನ್ನು ಕೇಳಿಕೊಂಡುದು. }

ಆಗ ಸೀತೆಯು,ತ್ರಿಲೋಕೇಶ್ವರನಾದ ರಾಮನೇ ತನಗೆ ನಾಥನಾಗಿರುವಾಗಲೂ,ಅನಾಥೆಯಂತೆನಾರುಬಟ್ಟೆಯನ್ನುಟ್ಟುಕೊಳ್ಳುತ್ತಿರಲು, ಸಭೆಯಲ್ಲಿದ್ದ ಜನರೆಲ್ಲರೂ ದಶರಥನನ್ನು ನೋಡಿ,"ಛೀ!ನಿನ್ನಬಾಳೇತಕ್ಕೆ?"ಎಂದುಗಟ್ಟಿಯಾಗಿ ನಿಂದಿಸಲಾರಂಭಿಸಿದರು. ಹೀಗೆ ಜನಗಳು ಆಡಿಕೊಳ್ಳುತಿದ್ದ ತನ್ನ ನಿಂದಾವಾಕ್ಯಗಳನ್ನು ಕೇಳಿ ದಶರಥನು ಪರಮದುಃಖಿತನಾಗಿ, ತನ್ನ ಪ್ರಾಣದಲ್ಲಿಯಾಗಲಿ,ಧರ್ಮದಲ್ಲಿಯಾಗಲಿ, ಕೀರ್ತಿಯಲ್ಲಿಯಾಗಲಿ ದೃಷ್ಟಿಯಿಡದೆ,ಬಿಸಿಬಿಸಿಯಾಗಿ ನಿಟ್ಟುಸಿರನ್ನು ಬಿಟ್ಟು,ಕೈಕೇಯಿಯನ್ನುಕುರಿತು "ಎಲೆ ಕೈಕೇಯಿ! ಈ ಸೀತೆಯು ನಾರುಬಟ್ಟೆಯನ್ನುಡಲೇಕೂಡದು. ಇವಳು ಬಹಳಸುಕುಮಾರವಾದ ಮೈಯುಳ್ಳವಳು. ಇನ್ನೂ ಎಳವಯಸ್ಸಿನವಳು. ಯಾವಾಗಲೂ ಸುಖದಿಂದಲೇ ಬೆಳೆದವಳು. ಇಂತವಳಿಗೆ ಅರಣ್ಯವಾಸವು ಯೋಗ್ಯವಲ್ಲವೆಂದು ನಮ್ಮಕುಲಗುರುವಾದ ವಸಿಷ್ಠರು ಹೇಳಿದ ಮಾತುಸತ್ಯವು.ಈಸೀತೆಯು ನಾರುಬಟ್ಟೆಯನ್ನುಟ್ಟು,ಈ ಜನರಮುಂದೆ ಕೇವಲತಾಪಸಸ್ತ್ರೀಯಂತೆ ನಿಂತಿರುವಳಲ್ಲಾ!ಇವಳು ಮಾಡಿರುವ ತಪ್ಪೇನು?ಜನಕರಾಜನ ಹೊಟ್ಟೆಯಲ್ಲಿ ಹುಟ್ಟಿ,ಪಾತಿವ್ರತ್ಯಪರಾಯಣೆಯಾದ ಈಕೆಗೆ ಈ ದುರವಸ್ಥೆಯುಂಟಾಗಬಹುದೆ?ಇವಳು ಈಗಲೇ ತಾನುಟ್ಟಿರುವ ನಾರುವಸ್ತ್ರವನ್ನು ತೆಡಗುಹಾಕಬೇಕು. ನಾನು ಈವಿಷಯದಲ್ಲಿ ನಿನಗೇನೂ ಪ್ರತಿಜ್ಞೆಯನ್ನು ಮಾಡಿಕೊಟ್ಟಿಲ್ಲ. ರಾಮನೊಡನೆ ಈಕೆಯು ಕಾಡಿಗೆ ಹೋಗಬೇಕಾದರೂ, ರಾಜಯೋಗ್ಯವಾದ

ರತ್ನಾಭರಣಗಳನ್ನೇಧರಿಸಿ, ಸಮಸ್ತಸುಖಸಾಮಗ್ರಿಗಳೊಡನೆಹೋಗಲಿ! ನಾನಂತೂ ಇನ್ನು ಬದುಕಿರುವುದೇ ಅಸಾಧ್ಯವು.ಮರಣಕಾಲವು ಸಮೀಪಿಸಿತೆಂದೇ ಹೇಳಬಹುದು ! ಇದರಿಂದಲೇ ನಿನಗೆ ಕೇಳಿದ ವರಗಳನ್ನು ಕೊಡುವುದಾಗಿ ಸತ್ಯಮಾಡಿಕೊಡುವಂತೆ ನನಗೆ ಈ ವಿಪರೀತಬುದ್ಧಿಯು ಹುಟ್ಟಿತು. ಅದಕ್ಕೆ ತಕ್ಕಂತೆ ನಿನಗೂ ದುರ್ಬುದ್ಧಿಯು ಹುಟ್ಟಿ,ನಾನು ಕೊಟ್ಟವರಗಳಲ್ಲಿ ಒಂದಕ್ಕೆ ರಾಮನನ್ನು ಕಾಡಿಗೆ ಕಳುಹಿಸಬೇಕೆಂದೂ, ಮತ್ತೊಂದಕ್ಕೆ ಭರತನಿಗೆ ಪಟ್ಟ ಕಟ್ಟಬೇಕೆಂದೂ ಕೇಳಿಕೊಂಡೆ.ಬಿದಿರುಮೆಳೆಗಳಲ್ಲಿ ಹುಟ್ಟಿದ ಪುಷ್ಪವೇ ಅವುಗಳನ್ನು ದಹಿಸುವಂತೆ, ನನ್ನ ಪ್ರತಿಜ್ಞೆಯೇ ಈಗ ನನ್ನನ್ನು ಸುಡುತ್ತಿರುವುದು. ಎಲೆ ಕೈಕೇಯಿ! ರಾಮನಲ್ಲಿ ಒಂದುವೇಳೆ ನಿನಗೆ ಏನಾದರೂ ವೈರಬುದ್ಧಿಯಿದ್ದರೂ,ಸೀತೆಯು ನಿನಗೆ ಮಾಡಿದ ಅಪಕಾರವೇನು?ಜಿಂಕೆಯ ಕಣ್ಣಿನಂತೆ ವಿಸ್ತಾರವಾದ ಕಣ್ಣುಳ್ಳವಳಾಗಿ, ಮೃದುಸ್ವಭಾವವುಳ್ಳ ಈಬಾಲೆಯು,ಮುಂದೆಯಾದರೂ ನಿನಗೆ ಯಾವ ಅಪಕಾರವನ್ನು ಮಾಡಬಲ್ಲಳು?ಎಲೆ ಪಾಪಿ!ರಾಮನನ್ನು ಕಾಡಿಗೆ ಹೊರಡಿಸಿದರೆ ಸಾಲದೆ?ಇದೊಂದೇ ನಿನ್ನ ಆತ್ಮವಿರುವವರೆಗೂ ನೀನು ನರಕಬಾಧೆಯನ್ನನುಭವಿಸುವುದಕ್ಕೆ ಸಾಕಾಗಿರುವುದು ಅದಕ್ಕೂ ಮೇಲೆಮೇಲೆ ದುಃಖಕರವಾದ ಪಾಪಕೃತ್ಯಗಳನ್ನು ಮಾಡಬೇಕೆಂಬ ದುರ್ಬುದ್ಧಿಯು ನಿನಗೇಕೆ ಹುಟ್ಟಿತು?ಇನ್ನು ನೀನು ಯಾವಯಾವನರಕಯಾತನೆಯನ್ನನುಭವಿಸಬೇಕೋ ತಿಳಿಯದು!ರಾಮನನ್ನು ನಾನು ಅಭಿಷೇಕಾರ್ಥವಾಗಿ ಇಲ್ಲಿಗೆ ಕರೆಸಿದಾಗ,ಆತನ ಕೈಗೆ ನಾರುಬಟ್ಟೆಗಳನ್ನು ಕೊಟ್ಟು,ಕಾಡಿನಲ್ಲಿ ಹದಿನಾಲ್ಕು ವರುಷಗಳಿದ್ದು ಬರಬೇಕೆಂದು ನೀನು ಹೇಳಿದೆ! ಮೋಹಾಂಧನಾದ ನಾನೂ ಹಾಗೆಯೇ ನಿನಗೆ ಪ್ರತಿಜ್ಞೆಮಾಡಿಕೊಟ್ಟೆನು. ಇಷ್ಟೇಹೊರತು ಸೀತೆಯ ವಿಷಯವಾಗಿ ನೀನು ಯಾವಮಾತನ್ನೂ ಹೇಳಲಿಲ್ಲ! ನಾನೂ ಈ ವಿಷಯದಲ್ಲಿ ಏನೂ ಪ್ರತಿಜ್ಞೆಮಾಡಿಕೊಟ್ಟಿಲ್ಲ. ಹೀಗಿರುವಾಗಲೂ ಸುಕುಮಾರಿಯಾದ ಈಸೀತೆಯು ನಾರುಬಟ್ಟೆಯನ್ನುಟ್ಟುಕೊಳ್ಳುವಾಗ ನೀನು ಕಣ್ಣಾರೆನೋಡುತ್ತಿರುವೆಯಲ್ಲವೆ ? ಆಃ ! ನಿನ್ನ ಕ್ರೌರ್ಯವನ್ನೇನೆಂದು ಹೇಳಲಿ ! ನೀನು ಯಾವ ನರಕದಲ್ಲಿ ಬೀಳುವೆಯೋ ಕಾಣೆನು ! ಮೊದಲು ಕೊಟ್ಟ ಮಾತಿನಲ್ಲಿ ನಿಲ್ಲದೆ, ಮೇಲೆಮೇಲೆ ಮಿತಿಮೀರಿ ಹೋಗುತ್ತಿರುವ ನೀನು ನಿನ್ನ ದುರ್ಬುದ್ಧಿಗೆ ತಕ್ಕ ನರಕಶಿಕ್ಷೆಯನ್ನು ಅನುಭವಿಸದಿರಲಾರೆ!" ಎಂದನು.

ಮಹಾತ್ಮನಾದ ದಶರಥನು ಹೀಗೆಂದು ಹೇಳುತ್ತಾ ಘಟ್ಟಿಯಾಗಿ ಪ್ರಲಾಪಿಸುತಿದ್ದನು. ಆತನ ದುಃಖಕ್ಕೆ ಪಾರವೇ ಇರಲಿಲ್ಲ. ಪುತ್ರವ್ಯಸನದಲ್ಲಿ ಮುಳುಗಿ,ಹಾಗೆಯೇ ಪ್ರಜ್ಞೆತಪ್ಪಿ ನೆಲದಮೇಲೆ ಬಿದ್ದನು. ಇತ್ತಲಾಗಿ ವನಪ್ರಯಾಣಕ್ಕೆ ಸಿದ್ಧನಾದ ರಾಮನು,ತಲೆಯನ್ನು ತಗ್ಗಿಸಿಕೊಂಡು ಮುಂದೆಕುಳಿತಿದ್ದ ತನ್ನ ತಂದೆಯನ್ನು ನೋಡಿ, "ಎಲೈ ತಂದೆಯೆ! ನೀನು ಸಮಸ್ತಧರ್ಮಗಳನ್ನೂ ತಿಳಿದವನಾದುದರಿಂದ,ನಾನು ನಿನ್ನಲ್ಲಿಪ್ರಾರ್ಥಿಸಿ ಕೇಳಬೇಕಾದುದೊಂದೂ ಇಲ್ಲವು. ಆದರೂ ವಿಜ್ಞಾಪಿಸಿಕೊಳ್ಳುವೆನು. ಯಶಸ್ವಿನಿಯಾದ ನನ್ನ ತಾಯಿಯು ವೃದ್ಧಳೆಂಬುದನ್ನು ನೀನೂ ಬಲ್ಲೆ. ಅವಳು ಸರ್ವೋತ್ತಮವಾದ ಸೌಶೀಲ್ಯವುಳ್ಳವಳೆಂಬುದನ್ನೂ ಬಲ್ಲೆ. ಆ ಸುಸ್ವಭಾವದಿಂದಲೇ ಆಕೆಯು ಪ್ರಿಯಪುತ್ರನಾದ ನನ್ನನ್ನು ನೀನು ಕಾಡಿಗೆ ಕಳುಹಿಸುತಿದ್ದರೂ, ನಿನ್ನಲ್ಲಿ ಯಾವವಿಧವಾದ ಅತೃಪ್ತಿಯನ್ನೂ ತೋರಿಸಿಕೊಳ್ಳದೆ, ನಿನ್ನನ್ನು ನಿಂದಿಸದೆ, ಗೌರವಿಸುತ್ತಿರುವಳು. ನನ್ನಗಲಿಕೆಯನ್ನು ಸಹಿಸಲಾರದೆ ಆಕೆಯು ಮಹತ್ತಾದ ದುಃಖಸಾಗರದಲ್ಲಿಯೇ ಮುಳುಗಿರುವಳು. ಇಂತಹ ಮಹಾದುಃಖವನ್ನು ಆಕೆಯು ಎಂದಿಗೂ ಕಂಡನುಭವಿಸಿದವಳಲ್ಲ. ಆದುದರಿಂದ ಆಕೆಯನ್ನು ನೀನು ಮೊದಲಿಗಿಂತಲೂ ಹೆಚ್ಚಾಗಿ ಆದರಿಸುತ್ತಿರಬೇಕು. ಇದೇ ನನ್ನ ಮುಖ್ಯವಾದ ಪ್ರಾರ್ಥನೆಯು. ನೀನು ಆಕೆಗೆ ಮಾಡುತ್ತಿರುವ ಸತ್ಕಾರಗಳಿಂದ ಆಕೆಯು ಪುತ್ರಶೋಕವನ್ನೇ ಮರೆತು ಬಿಡುವಂತೆ ಮಾಡಬೇಕು. ನೀನು ಅವಳನ್ನು ಸತ್ಕರಿಸುತಿದ್ದರೆ, ಅವಳು ಆಗಾಗ ನನ್ನನ್ನು ಸ್ಮರಿಸಿಕೊಂಡರೂ, ಅಷ್ಟಾಗಿ ದುಃಖಿಸದೆ, ನಿನ್ನ ಆದರಣೆಯಿಂದ ನಾನು ಬರುವವರೆಗೂ ಜೀವಿಸಿಕೊಂಡಿರುವಳು. ನೀನು ಸಾಕ್ಷಾನ್ಮಹೇಂದ್ರನಿಗೆ ಸಮಾನವಾದ ತೇಜಸ್ಸುಳ್ಳವನು. ನನ್ನನ್ನು ಕುರಿತು ಯಾವಾಗಲೂ ಹಂಬಲಿಸುತ್ತಿರುವ ತಾಯಿಯಾದ ಕೌಸಲ್ಯೆಯು, ನಾನು ಕಾಡಿಗೆ ಹೊರಟುಹೋದಮೇಲೆ, ನನ್ನ ವಿರಹದುಃಖದಿಂದ ಕೊರಗಿ ಸಾಯದಂತೆ ನೋಡಿಕೊಳ್ಳತಕ್ಕ ಭಾರವು ನಿನಗೇ ಸೇರಿರುವುದು" ಎಂದನು ಇಲ್ಲಿಗೆ ಮೂವತ್ತೆಂಟನೆಯಸರ್ಗವು.

---

{ದಶರಥನು ಸುಮಂತ್ರನೊಡನೆ ರಾಮನಿಗಾಗಿ ರಥವನ್ನು ತರುವಂತೆ ಹೇಳಿದುದು. ಕೌಸಲ್ಯೆಯು ಸೀತೆಗೆ ನೀತಿಗಳನ್ನುಪದೇಶಿಸಿದುದು. ರಾಮನು ಕೌಸಲ್ಯೆ ಮೊದಲಾದವರನ್ನು ಸಮಾಧಾನಪಡಿಸಿದುದು.}

ರಾಮನು ಹೇಳಿದ ಮಾತನ್ನು ಕೇಳಿ, ಆತನು ತಾಪಸವೇಷವನ್ನು ಧರಿಸಿದುದನ್ನೂ ನೋಡಿ, ದಶರಥನೂ ಆತನ ಪತ್ನಿಯರೂ ವ್ಯಸನದಿಂದ ಹಾಗೆಯೇ ಮೂರ್ಛೆಹೊಂದಿದರು. ದಶರಥನು ದುಃಖದಿಂದ ಆ ರಾಮನನ್ನು ಕಣ್ಣೆತ್ತಿಯೇ ನೋಡಲಿಲ್ಲ. ಆತನೊಡನೆ ಮುಖಕೊಟ್ಟು ಮಾತನ್ನೂ ಆಡಲಾರದೆ ಹೋದನು. ಮಹಾಬಾಹುವಾದ ಆ ದಶರಥನು ದುಃಖದಿಂದ ಕ್ಷಣಕ್ಷಣಕ್ಕೂ ಮೂರ್ಛೆಹೊಂದುತ್ತಾ, ಆಗಾಗ ರಾಮನನ್ನು ನೆನೆಸಿಕೊಂಡು ಪ್ರಲಾಪಿಸುತಿದ್ದನು. ಕೊನೆಗೆ ಆತನು ತನ್ನಲ್ಲಿ ತಾನು "ಹಾ! ನಾನು ಪೂರ್ವದಲ್ಲಿ ಎಷ್ಟು ಜನರ ಮಕ್ಕಳನ್ನು ಕೊಂದೆನೋ! ಎಷ್ಟು ಜೀವಜಂತುಗಳನ್ನು ಹಿಂಸಿಸಿದೆನೋ! ಆದರಿಂದಲೇ ಈಗ ನನಗೆ ಈ ಮಹಾವ್ಯಸನವು ಪ್ರಾಪ್ತವಾಗಿರಬೇಕು! ಮನುಷ್ಯನಿಗೆ ತಾನು ಮಾಡಿದ ಪೂರ್ವಕರ್ಮಗಳಿಗೆ ತಕ್ಕ ಫಲಗಳೆಲ್ಲವಕ್ಕೂ ಅನುಭವಿಸಿ ತೀರಿದಹೊರತು,ಆತನ ಪ್ರಾಣವು ದೇಹವನ್ನು ಬಿಟ್ಟುಹೋಗುವುದಿಲ್ಲವೆಂಬುದು ನಿಜವು! ಆದುದರಿಂದಲೇ ಕೈಕೇಯಿಯು ನನ್ನನ್ನು ಹೀಗೆ ಸಂಕಟಪಡಿಸುತಿದ್ದರೂ ನನಗೆ ಮರಣವು ಪ್ರಾಪ್ತವಾಗಲಿಲ್ಲ. ಅಯ್ಯೋ! ನನ್ನ ಪ್ರಿಯಪುತ್ರನಾದ ರಾಮನು ಅಗ್ನಿಯಂತೆ ಮಹಾತೇಜಸ್ವಿಯಾಗಿದ್ದೂ, ತಾನು ಧರಿಸಿದ್ದ ರಾಜಯೋಗ್ಯಗಳಾದ ದುಕೂಲಗಳನ್ನು ತೆಗೆದುಹಾಕಿ, ನನ್ನಿದಿರಾಗಿಯೇ ಕಾಡುಜನದಂತೆ ನಾರುಬಟ್ಟೆಗಳನ್ನು ಕಟ್ಟಿಕೊಂಡನಲ್ಲಾ! ಇದನ್ನು ಕಣ್ಣಿಂದ ನೋಡಿಯೂ ನನ್ನ ಪ್ರಾಣವು ಬಿಟ್ಟುಹೋಗದಿರುವುದಲ್ಲಾ! ನನ್ನನ್ನು ಮೋಸಗೊಳಿಸಿ ಸ್ವಕಾರ್ಯವನ್ನು ಸಾಧಿಸಿಕೊಳ್ಳುವುದಕ್ಕಾಗಿ ಪ್ರಯತ್ನಪಡುತ್ತಿರುವ ಈ ಕೈಕೇಯಿಯೊಬ್ಬಳಿಗಾಗಿ, ಈ ಸಮಸ್ತಜನವೂ ಸಂಕಟಪಡುತ್ತಿರುವುದಲ್ಲವೇ!" ಎಂದು ಹೇಳುತ್ತಾ,ಕಣ್ಣಿನಲ್ಲಿ ನೀರುತುಂಬಿಕೊಂಡು, "ರಾಮಾ!" ಎಂದು ಒಂದೇ ಆವರ್ತಿ ಕೂಗಿ, ಆದಕ್ಕೆಮೇಲೆ ಯಾವಮಾತನ್ನೂ ಆಡಲಾರದೆ, ಪ್ರಜ್ಞೆತಪ್ಪಿ ಸುಮ್ಮನಾದನು. ಒಂದುಕ್ಷಣಕಾಲದಮೇಲೆ ಮೆಲ್ಲಗೆ ಚೇತರಿಸಿಕೊಂಡು,ಕಣ್ಣೀರನ್ನು

ಸುರಿಸುತ್ತಾ, ಸುಮಂತ್ರನನ್ನು ನೋಡಿ “ಎಲೆ ಸೂತನೆ ! ನಮ್ಮಲ್ಲಿರುವ ವಿಲಾಸಾರ್ಹವಾದ ಒಂದು ರಥಕ್ಕೆ ಒಳ್ಳೇಕುದುರೆಗಳನ್ನು ಕಟ್ಟಿ ತೆಗೆದುಕೊಂಡುಬಾ! ಮಹಾತ್ಮನಾದ ಈ ರಾಮನನ್ನು ಆ ರಥದಲ್ಲಿ ಕುಳ್ಳಿರಿಸಿ, ನಮ್ಮ ದೇಶದ ಎಲ್ಲೆಕಟ್ಟನ್ನು ದಾಟುವವರೆಗಾದರೂ ನೀನೇ ಕರೆದುಕೊಂಡುಹೋಗಿ ಬಿಟ್ಟುಬರಬೇಕು. ಆಹಾ! ತಾಯಿತಂದೆಗಳಿಬ್ಬರೂ ಸೇರಿ, ಸತ್ಪುರುಷನಾಗಿಯೂ ವೀರನಾಗಿಯೂ ಇರುವ ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನು ಕಾಡುಪಾಲು ಮಾಡಬೇಕಾಗಿ ಬಂತಲ್ಲವೆ? ಲೋಕದಲ್ಲಿ ಗುಣವಂತರಾದವರ ಸಾಧುತ್ವಕ್ಕೆ ಇದೇ ಫಲವೆಂದು ನನಗೆ ತೋರುತ್ತಿದೆ! ಛೀ! ಇದು ಸೌಜನ್ಯಕ್ಕೆ ಎಂದಿಗೂ ಕಾಲವಲ್ಲ ! ಇದಕ್ಕಾಗಿ ನಾನು ಎಷ್ಟು ಚಿಂತಿಸಿದರೇನು?” ಎಂದನು. ಇದನ್ನು ಕೇಳಿ ಸುಮಂತ್ರನು ದಶರಥನು ಹೇಳಿದಂತೆಯೇ ಒಂದು ರಥಕ್ಕೆ ಉತ್ತಮವಾದ ಕುದುರೆಗಳನ್ನು ಕಟ್ಟಿತಂದು ಸುವರ್ಣದಿಂದ ಅಲಂಕರಿಸಲ್ಪಟ್ಟ ಆ ರಥವನ್ನು ಬಾಗಿಲಲ್ಲಿ ನಿಲ್ಲಿಸಿ, ಈ ವಿಷಯವನ್ನು ರಾಜಕುಮಾರನಾದ ರಾಮನಿಗೆ ವಿನಯದಿಂದ ಕೈಮುಗಿದು ತಿಳಿಸಿದನು. ಇದನ್ನು ಕೇಳುತಿದ್ದ ದಶರಥನು ಆತ್ಯಾತುರದಿಂದ ತನ್ನ ಅರಮನೆಯ ಬೊಕ್ಕಸದ ಅಧಿಕಾರಿಯನ್ನು ಕರೆಸಿ, ದೇಶಕಾಲಸ್ಥಿತಿಯನ್ನು ಚೆನ್ನಾಗಿ ತಿಳಿದವನಾಗಿಯೂ, ನಿಷ್ಕಲ್ಮಷನಾಗಿಯೂ, ನಿಜಸ್ಥಿತಿಯನ್ನು ಚೆನ್ನಾಗಿ ವಿಚಾರಿಸಿ ತಿಳಿಯತಕ್ಕವನಾಗಿಯೂ ಇರುವ ಆ ಧನಾಧ್ಯಕ್ಷನನ್ನು ಕುರಿತು “ಎಲೈ ಧನಾಧ್ಯಕ್ಷನೆ! ಈ ಸೀತೆಯು ಇನ್ನು ಹದಿನಾಲ್ಕು ವರ್ಷಗಳವರೆಗೆ ಕಾಡಿನಲ್ಲಿರಬೇಕಾಗಿರುವುದು. ಅದಕ್ಕೆ ತಕ್ಕಷ್ಟು ಉತ್ತಮವಾದ ವಸ್ತ್ರಗಳನ್ನೂ, ಮೇಲಾದ ಆಭರಣಗಳನ್ನೂ ತರಿಸಿಡು” ಎಂದನು. ಇದನ್ನು ಕೇಳಿದೊಡನೆಯೇ ಆತನು ಬಂಡಾರಕ್ಕೆ ಹೋಗಿ, ಸಾಕಾಗುವಷ್ಟು ವಸ್ತ್ರಾಭರಣಗಳನ್ನು ತೆಗೆಸಿಕೊಂಡು ಬಂದು, ಸೀತೆಗೆ ಕೊಟ್ಟನು. ಸತ್ಕುಲಪ್ರಸೂತೆಯಾದ ಆ ಸೀತೆಯು ಪ್ರಯಾಣಸನ್ನದ್ಧಳಾಗಿ ನಿಂತು, ವಿಚಿತ್ರವಾದ ಆ ಆಭರಣಗಳನ್ನು ತೆಗೆದು ತನ್ನ ಮಯ್ಯನ್ನು ಚೆನ್ನಾಗಿ ಅಲಂಕರಿಸಿಕೊಂಡಳು. ಉದಯಕಾಲದಲ್ಲಿ ಸೂರ್ಯನು ತನ್ನ ಪ್ರಭೆಗಳಿಂದ ಆಕಾಶವೆಲ್ಲವನ್ನೂ ಪ್ರಕಾಶಪಡಿಸುವಂತೆ, ತನ್ನ ಆಭರಣಕಾಂತಿಯಿಂದಲೇ ಆಕೆಯು ತಾನಿದ್ದ ಆಸ್ಥಾನವೆಲ್ಲವನ್ನೂ ಬೆಳಗುತಿದ್ದಳು. ಆಗ ಅತ್ತೆಯಾದ ಕೌಸಲ್ಯೆಯು ಸೀತೆಯನ್ನು ಎರಡುತೋಳುಗಳಿಂದಲೂ ಅಪ್ಪಿ

ಕೊಂಡು,ಪ್ರೀತಿಯಿಂದ ತಲೆಯನ್ನಾಘ್ರಾಣಿಸಿ, ಉತ್ತಮವಾದ ಸೌಶೀಲ್ಯ ವುಳ್ಳ ಆಕೆಯನ್ನು ಕುರಿತು, "ಎಲೆ, ಸೌಭಾಗ್ಯವತಿ! ಈ ಲೋಕದಲ್ಲಿ ಸಾಮಾನ್ಯವಾಗಿ * ಅನೇಕಸ್ತ್ರೀಯರು ಅಸತಿಯರಾಗಿ, ತಮ್ಮ ಪತಿಗಳು ತಮ್ಮನ್ನು ಎಷ್ಟೇ ವಿಧದಲ್ಲಿ ಇಷ್ಟದಾನಾದಿಗಳಿಂದ ಸತ್ಕರಿಸುತಿದ್ದರೂ, ಪತಿಗೆ ಏನಾದರೂ ಕಷ್ಟದಶೆಯು ಬಂದೊದಗಿದಾಗ, ಆತನನ್ನು ಕಣ್ಣೆತ್ತಿಯೂ ನೋಡದೆ ಅನಾದರಿಸುವರು. ಮೊದಲು ಅನುಕೂಲಕಾಲಗಳಲ್ಲಿ ಬೇಕಾದಸೌಖ್ಯಗಳನ್ನೆಲ್ಲಾ ಯಥೇಚ್ಛವಾಗಿ ಅನುಭವಿಸಿದ್ದರೂ, ದುಷ್ಕಾಲವಶದಿಂದ ತಮ್ಮ ಪತಿಗೆ ಏನಾದರೂ ಸ್ವಲ್ಪ ವಿಪತ್ತು ಬಂದೊದಗಿದರೆ, ಆಗಲೇ ಗಂಡನಲ್ಲಿ ಅಲಕ್ಷ್ಯಭಾವವನ್ನು ತೋರಿಸುತ್ತಾ, ಕೊನೆಗೆ ಅವನನ್ನು ಬಿಟ್ಟುಬಿಡುವರು. ಲೋಕದಲ್ಲಿ ಸ್ತ್ರೀಯರ ನಡತೆಯೇ ಈ ವಿಧವಾದುದು. ಸುಳ್ಳಾಡುವುದೇ ಅವರ ಸ್ವಭಾವವು. ಕ್ಷಣಕ್ಷಣಕ್ಕೂ ಅವರ ಮನಸ್ಸು ಚಲಿಸುತ್ತಿರುವುದು. ಅವರ ಮನಸ್ಸನ್ನು ಹೀಗೆಂದು ಕಂಡುಹಿಡಿಯುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಯಾವಾಗಲೂ ಅವರಿಗೆ ಕೇಡನ್ನೇ ಯೋಚಿಸುತ್ತಿರುವರು. ಅವರ ಪ್ರೇಮವೇ ಸ್ಥಿರವಾದುದಲ್ಲ. ನಿಮಿಷಮಾತ್ರದಲ್ಲಿ ತಪ್ಪಿಹೋಗುವುದು. ಅವರು, ವಂಶೋನ್ನತಿಯನ್ನಾಗಲಿ, ಉಪಕಾರವನ್ನಾಗಲಿ, ವಿದ್ಯೆಯನ್ನಾಗಲಿ, ಲೋಕಮರ್ಯಾದೆಯನ್ನಾಗಲಿ, ವಸ್ತ್ರಾಭರಣಾದಿಸನ್ಮಾನಗಳನ್ನಾಗಲಿ ಗಮನಿಸತಕ್ಕವರಲ್ಲ. ಅವರಮನಸ್ಸು ಬಹುಚಂಚಲವು. ಅವರು ಹಣವೊಂದನ್ನೇ ನೋಡುವರು ಹೀಗಿಲ್ಲದೆ ಕುಲೋಚಿತವಾದ ನಡತೆಯಲ್ಲಿಯೂ, ಸತ್ಯದಲ್ಲಿಯೂ ಗುರುಹಿರಿಯರ ಉಪದೇಶದಲ್ಲಿಯೂ ಅಕ್ಕರೆಯುಳ್ಳ ಪತಿವ್ರತೆಯರಿಗೆ ಪತಿಯೊಬ್ಬನೇ ಪರಮಪಾವನವಾದ ವಸ್ತುವು. ಎಲೆ ಸೀತೆ! ಈಗ ನನ್ನ ಮಗನಾದ ರಾಮನಿಗೆ ಕಾಲವಶದಿಂದ ಈ ವನವಾಸವೆಂಬ ದುರವಸ್ಥೆಯು ಬಂದೊದಗಿರುವುದನ್ನು ನೋಡಿ, ನೀನು ಆತನನ್ನು ಅಲಕ್ಷ್ಯದಿಂದ ಕಾಣಬೇಡ! ಆತನು ಧನಿಕನಾಗಿದ್ದರೂ, ಅಥವಾ ದರಿದ್ರನಾಗಿದ್ದರೂ, ಪತಿಯಾದ ಅವನನ್ನು ನೀನು ಪರದೈವವೆಂದೇ ಭಾವಿಸುತ್ತಿರಬೇಕು" ಎಂದಳು. ಧರ್ಮದ ಸಾರವುಳ್ಳ ಆ ಕೌಸಲ್ಯೆಯ ಮಾತನ್ನು ಕೇಳಿ ಸೀತೆಯು, ತನ್ನಿದಿರಾಗಿ

---

* ಕೈಕೇಯಿಯನ್ನು ನಿಂದಿಸುವುದಕ್ಕಾಗಿಯೇ ಕೌಸಲ್ಯೆಯು ಈ ಮುಂದಿನ ವಾಕ್ಯಗಳನ್ನು ಹೇಳಿದಂತೆ ಗ್ರಹಿಸಬೇಕು.

ನಿಂತಿದ್ದ ಅತ್ತೆಯಾದ ಆಕೆಗೆ ವಿನಯದಿಂದ ಕೈಮುಗಿದು ನಿಂತು ‘‘ಅಮ್ಮಾ! ನಿನ್ನ ಆಜ್ಞೆಯಂತೆಯೇ ನಡೆದುಕೊಳ್ಳುವೆನು. ಈ ವಿಷಯದಲ್ಲಿ ನೀನು ನನಗೆ ಹೇಳಬೇಕಾದುದೇನೂ ಇಲ್ಲವು, ಪತಿಯವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ನಾನು ಚೆನ್ನಾಗಿ ಬಲ್ಲೆನು. ಈ ವಿಷಯವನ್ನು ಮೊದಲೇ ಅನೇಕ ಮಹನೀಯರು ನನಗೆ ಉಪದೇಶಿಸಿರುವರು. ನೀನು ಇತರದುಷ್ಟಸ್ತ್ರೀಯರಿಗೆ ಸಮಾನವಾಗಿ ನನ್ನನ್ನೆಣಿಸಕೂಡದು. ಪ್ರಭೆಯು ಚಂದ್ರನನ್ನು ಹೇಗೆ ಅಗಲಿರದೋ, ಹಾಗೆ ನಾನು ಎಂದಿಗೂ ಧರ್ಮವನ್ನು ಬಿಟ್ಟುಹೋಗುವವಳಲ್ಲ. ತಂತಿಯಿಲ್ಲದೆ ವೀಣೆಯು ನುಡಿಯದು. ಚಕ್ರವಿಲ್ಲದೆ ರಥವು ನಡೆಯದು. ಹಾಗೆಯೇ ಸ್ತ್ರೀಯಾದವಳು ನೂರಾರುಮಕ್ಕಳನ್ನು ಪಡೆದಿದ್ದರೂ, ಗಂಡನಿಲ್ಲದಿದ್ದರೆ ಆಕೆಗೆ ಎಂದಿಗೂ ಸುಖವಿಲ್ಲ. ಸ್ತ್ರೀಯರಿಗೆ ಅವರವರ ತಂದೆಯಾಗಲಿ, ತಾಯಿಯಾಗಲಿ, ಮಕ್ಕಳಾಗಲಿ ಕೊಡತಕ್ಕ ವಸ್ತುಗಳಿಗೆ ಮಿತಿಯುಂಟು. ಅವೆಲ್ಲವೂ ಐಹಿಕವಾದ ಫಲಕ್ಕೆ ಮಾತ್ರವೇ ಸಾಧಕಗಳಾಗಿರುವುವು. ಅವರಿಗೆ ಪತಿಯಿಂದುಂಟಾಗತಕ್ಕ ಫಲಗಳಿಗಾದರೋ ಮಿತಿಯೇ ಇಲ್ಲವು. ಐಹಿಕಾಮುಷ್ಮಿಕ ಫಲಗಳೆರಡಕ್ಕೂ ಅವು ಸಾಧಕವಾಗಿರುವುವು. ಇಂತಹ ಪತಿಯನ್ನು ಪೂಜಿಸದವರುಂಟೆ? ಈ ಪಾತಿವ್ರತ್ಯಧರ್ಮವನ್ನು ನಾನು ಚೆನ್ನಾಗಿ ಬಲ್ಲೆನು. ಅದನ್ನೇ ಅವಲಂಬಿಸಿಕೊಂಡಿರುವೆನು. ಮಹಾಪತಿವ್ರತೆಯರೆನಿಸಿಕೊಂಡ ಅನೇಕಸ್ತ್ರೀಯರಿಂದ ಇದಕ್ಕೆ ಸಂಬಂಧಪಟ್ಟ ಸಾಮಾನ್ಯವಿಶೇಷಧರ್ಮಗಳೆಲ್ಲವನ್ನೂ ನಾನು ಚೆನ್ನಾಗಿ ಕೇಳಿಯೂ ಇರುವೆನು. ಹೀಗಿರುವಾಗಲೂ ನಾನು ಅತನನ್ನು ಅವಮಾನಪಡಿಸುವೆನೆ? ಸ್ತ್ರೀಯರಿಗೆ ಪತಿಯೇ ಪರದೈವವೆಂಬುದನ್ನು ನಾನರಿಯೆನೆ??ಎಂದಳು. ಹೀಗೆ ಕಿವಿಗಿಂಪಾದ ಸೀತೆಯ ಮಾತನ್ನು ಕೇಳಿದೊಡನೆ ಸಾತ್ವಿಕಸ್ವಭಾವವುಳ್ಳ ಕೌಸಲ್ಯೆಯು ರಾಮನ ಅಗಲಿಕೆಯಿಂದುಂಟಾದ ದುಃಖವು ತನ್ನ ಮನಸ್ಸಿನಲ್ಲಿ ತುಂಬಿದ್ದರೂ, ಸೀತೆಯ ಪಾತಿವ್ರತ್ಯಧರ್ಮವನ್ನು ನೋಡಿ ಪರಮಸಂತೋಷವನ್ನು ಹೊಂದಿ, ಮೊದಲಿದ್ದ ದುಃಖಜಲದೊಡನೆ ಕಣ್ಣಿನಲ್ಲಿ ಆನಂದಬಾಷ್ಪವನ್ನು ಸುರಿಸುತಿದ್ದಳು. ಆಮೇಲೆ ರಾಮನು ಇತರ ಮಾತೆಯರಿಂದ ವಿಶೇಷವಾಗಿ ಉಪಚರಿಸಲ್ಪಡುತಿದ್ದ ತನ್ನ ತಾಯಿಯಾದ ಕೌಸಲ್ಯೆಯನ್ನು ಪ್ರದಕ್ಷಿಣಮಾಡಿ, ಕೈಮುಗಿದುನಿಂತು, ಆಕೆಯನ್ನು ನೋಡಿ ‘‘ಅಮ್ಮಾ! ಇನ್ನು ನೀನು ದುಃಖಿಸಬೇಡ! ತಂದೆಯನ್ನು

ಕ್ಷೇಮದಿಂದ ನೋಡಿಕೊಳ್ಳುತ್ತಿರು.ನನ್ನ ವನವಾಸಕಾಲವು ಶೀಘ್ರದಲ್ಲಿಯೇ ಮುಗಿದು ಹೋಗುವುದು.ನೀನು ಮಲಗಿದ್ದು,ಕಣ್ಣುಮುಚ್ಚಿ ಕಣ್ಣುತೆರೆಯು ವಷ್ಟರಲ್ಲಿಯೇ ನಾನು ಹಿಂತಿರುಗಿ ಬಂದುಬಿಡುವೆನು. ಆಗ ಕೃತಾರ್ಥನಾಗಿ ಮಿತ್ರರೊಡಗೂಡಿ ಸಂತೋಷದಿಂದ ಬಂದ ನನ್ನನ್ನು ನೀನು ನಿನ್ನಕಣ್ಣಾರೆ ನೋಡಬಹುದು" ಎಂದನು.ಹೀಗೆ ರಾಮನು ನಿಷ್ಕೃಷ್ಟಾರ್ಥವುಳ್ಳ ಈ ಮಾತನ್ನು ಹೇಳಿ,ಆಕೆಯನ್ನು ಸಮಾಧಾನಪಡಿಸಿದಮೇಲೆ,ಉಳಿದ ಮುನ್ನೂ ರೈವತ್ತುಮಂದಿ ಮಾತೆಯರನ್ನೂ ಪ್ರತ್ಯೇಕಪ್ರತ್ಯೇಕವಾಗಿ ನೋಡಿ, ಅವರಿಗೂ ಹೀಗೆಯೇಸಮಾಧಾನವಾಕ್ಯಗಳನ್ನು ಹೇಳಿ,ಆಮೇಲೆ ಅವರೆಲ್ಲರಿಗೂ ಒಟ್ಟಿಗೆ ಕೈಮುಗಿದು"ಎಲೈ ಜನನಿಯರ! ಅಜ್ಞಾನದಿಂದಲಾಗಲಿ, ಅಥವಾ ನಿಮ್ಮಲ್ಲಿ ವಿಶೇಷವಾದ ಸಲಿಗೆಯಿಂದಾಗಲಿ,ನಾನುಯಾವ ಅಪರಾಧವನ್ನುಮಾಡಿದ್ದರೂ ಮನ್ನಿಸಿ,ನನ್ನ ವನಪ್ರಯಾಣಕ್ಕೆ ಅನುಮತಿಯನ್ನು ಕೊಡಬೇಕು" ಎಂದನು. ಹೀಗೆ ರಾಮನು ಹೇಳಿದ ಧರ್ಮಯುಕ್ತವಾದ ಮಾತನ್ನು ಕೇಳಿ,ಆ ರಾಜಸ್ತ್ರೀಯರೆಲ್ಲರೂ ವ್ಯಸನಪೀಡಿತರಾಗಿ ಉಚ್ಚಸ್ವರದಿಂದ ಅಳುವುದಕ್ಕಾರಂಭಿಸಿದರು. ಕ್ರೌಂಚಪಕ್ಷಿಗಳು ಕೂಗಿಕೊಳ್ಳುವಂತೆ ಆ ಸ್ತ್ರೀಯರೆಲ್ಲರೂ ಒಟ್ಟಾಗಿ ಕೂಡಿ, ಗೋಳಿಡುತಿದ್ದರು. ಮೊದಲು ನಿತ್ಯವೂ ಭೇರೀಮೃದಂಗ ಮೊದಲಾದ ಮಂಗಳವಾದ್ಯಗಳಿಂದ ಶೋಭಿಸುತ್ತಿದ್ದ ಆ ದಶರಥನ ಅರಮನೆಯಲ್ಲಿ, ಈಗ ಒಂದುಕಡೆಯಲ್ಲಿ ರಾಜಸ್ತ್ರೀಯರ ಗೋಳಾಟದ ಧ್ವನಿ! ಮತ್ತೊಂದುಕಡೆಯಲ್ಲಿ ರಾಮನಗುಣಗಳ ಕೊಂಡಾಟದ ಧ್ವನಿ ! ಇನ್ನೊಂದುಕಡೆಯಲ್ಲಿ ಕೈಕೇಯೀ ವಿಷಯವಾದ ನಿಂದಾವಾಕ್ಯಗಳ ಧ್ವನಿ ! ಇವೆಲ್ಲವೂ ಬಹಳ ದುಃಖಕರವಾಗಿ ಕಾಣಿಸುತಿತ್ತು. ಇಲ್ಲಿಗೆ ಮೂವತ್ತೊಂಭತ್ತನೆಯ ಸರ್ಗವು.

---

ರಾಮನು ವನಕ್ಕೆ ಪ್ರಯಾಣಮಾಡಿದುದು. ಪ್ರಜೆಗಳ ವಿಲಾಪವು

ಹೀಗೆ ಸೀತಾರಾಮಲಕ್ಷ್ಮಣರು ಮೂವರೂ ಕೈಮುಗಿದು, ದಶರಥನ ಪಾದಗಳನ್ನು ಹಿಡಿದು ನಮಸ್ಕರಿಸಿ, ತಾಯಿತಂದೆಗಳ ಶುಶ್ರೂಷೆಯನ್ನು ಬಿಟ್ಟು ಹೋಗಬೇಕೆಂಬ ವ್ಯಸನಕ್ಕಾಗಿ ಮನಸ್ಸಿನಲ್ಲಿಯೇ ಕೊರಗುತ್ತ

ತಂದೆತಾಯಿಗಳಿಗೆ ಪ್ರದಕ್ಷಿಣವನ್ನು ಮಾಡಿದರು. ಧರ್ಮಜ್ಞನಾದ ರಾಮನು ದಶರಥನ ಅನುಜ್ಞೆಯಿಲ್ಲದೆ, ಸೀತೆಯನ್ನೂ,ಲಕ್ಷ್ಮಣನನ್ನೂ ಕರೆದುಕೊಂಡು ಹೋಗಬಾರದೆಂದು ತಿಳಿದು, ದಶರಥನ ಬಾಯಿಂದಲೇ ಅವರಿಬ್ಬರಿಗೂ ಅನುಜ್ಞೆಯನ್ನು ಕೊಡಿಸಿ,ಇನ್ನು ಹದಿನಾಲ್ಕುವರ್ಷಗಳವರೆಗೆ ತನ್ನ ತಾಯಿಯನ್ನು ಅಗಲಿರಬೇಕಾದುದಕ್ಕಾಗಿ ವ್ಯಸನಗೊಂಡು,ತಾಯಿಯಬಳಿಗೆ ಬಂದು ಅವಳಿಗೂ ನಮಸ್ಕರಿಸಿದನು ಲಕ್ಷ್ಮಣನೂ ಹಾಗೆಯೇ ಮೊದಲು ಕೌಸಲ್ಯೆಗೆ ನಮಸ್ಕರಿಸಿ,ಆಮೇಲೆ ತನ್ನ ತಾಯಿಯಾದ ಸುಮಿತ್ರೆಯ ಪಾದಗಳನ್ನು ಹಿಡಿದು ಪ್ರಣಾಮಮಾಡಿದನು. ಆಕೆಯು ನಮಸ್ಕರಿಸುತ್ತಿರುವ ಲಕ್ಷ್ಮಣನ ತಲೆಯನ್ನು ಪ್ರೀತಿಯಿಂದಾಘ್ರಾಣಿಸಿ, ಅವನನ್ನು ಕುರಿತು* "ವತ್ಸನೆ! ನಿನಗೆ ಪ್ರಿಯಮಿತ್ರನಂತಿರುವ ಅಣ್ಣನಾದ ರಾಮನು ಕಾಡಿಗೆ ಹೊರಟಿರುವನು.

---

* ಇದಕ್ಕೆ "ಸೃಷ್ಟಸ್ತ್ವಂ ವನವಾಸಾಯ ಸ್ವನುರಕ್ತಸ್ಸುಹೃಜ್ಜನೇ । ರಾಮೇ ಪ್ರಮಾದಂ ಮಾಕಾರ್ಷೀ: ಪುತ್ರ ಭ್ರಾತರಿ ಗಚ್ಛತಿ॥" ಎಂಬುದೇ ಮೂಲವು, (ಸೃಷ್ಟಸ್ತ್ವಂ ವನವಾಸಾಯ) ಕಾಡಿನಲ್ಲಿ ರಾಮನನ್ನನುವರ್ತಿಸಿರುವುದಕ್ಕಾಗಿಯೇ ನೀನು ದೈವದಿಂದ ಸೃಷ್ಟಿಸಲ್ಪಟ್ಟಿರುವೆಯೆಂದರ್ಥವು. ಕೌಸಲ್ಯೆಯು ಲೋಕರಕ್ಷಣಾರ್ಥವಾಗಿ ರಾಮನನ್ನು ಪಡೆದಿರುವಂತೆ, ಆತನನ್ನು ಅನುವರ್ತಿಸಿರುವುದಕ್ಕಾಗಿ ನಿನ್ನನ್ನು ನಾನು ಪಡೆದಿರುವೆನೆಂದು ಭಾವವು. (ರಾಮೇ ಪ್ರಮಾದಂ ಮಾಕಾರ್ಷೀ:) ಎಂದರೆ, ರಾಮನು ಹೋಗುತ್ತಿರುವಾಗ ಆತನ ಗಮನಸೌಂದರ್ಯವು ನಿನ್ನ ಮನಸ್ಸನ್ನು ಆಕರ್ಷಿಸಿಬಿಡಬಹುದಾದುದರಿಂದ, ಅದರಲ್ಲಿಯೇ ಮಗ್ನನಾಗಿ ಆತನ ರಕ್ಷಣಕಾರ್ಯದಲ್ಲಿ ಅಜಾಗರೂಕನಾಗಿರಬೇಡವೆಂದೂ ಭಾವವು.

ಅಥವಾ (ಸೃಷ್ಟಸ್ತ್ವಂವನವಾಸಾಯ) ಎಂದರೆ, ನೀನು ಈ ಪ್ರಪಂಚದಲ್ಲಿ ಜನ್ಮವನ್ನೆತ್ತಿರುವುದೇ ಕಾಡಿನಲ್ಲಿ ರಾಮನೊಡನೆ ವಾಸಮಾಡುತಿದ್ದು, ಆತನ ಕೈಂಕರ್ಯವನ್ನು ನಡೆಸುವುದಕ್ಕಾಗಿಯೇ ಹೊರತು ಬೇರೆಯಲ್ಲ. ಅದನ್ನು ನಡೆಸದಿದ್ದರೆ ನಿನ್ನ ಜನ್ಮವೇ ನಿರರ್ಥಕವು. (ಸ್ವನುರಕ್ತಸ್ಸುಹೃಜ್ಜನೇ) ಯಾವನಾದರೂ ಒಬ್ಬನು ನಿನಗೆ ಮಿತ್ರನಾಗಿದ್ದ ಮಾತ್ರಕ್ಕೆ, ಆತನಲ್ಲಿ ಎಷ್ಟೋ ಅನುರಾಗವನ್ನು ತೋರಿಸುತ್ತಿರುವೆ. ಇಂತಹ ನೀನು ಸರ್ವೋಪಜೀವ್ಯನೆನಿಸಿಕೊಂಡಿರುವ ರಾಮನಲ್ಲಿ ವಿಶೇಷವಾಗಿ ಅನುರಕ್ತನಾಗಿರಬೇಕೆಂಬುದನ್ನು ನಾನು ಹೇಳಬೇಕಾದುದೇ ಇಲ್ಲವು. (ತನಿಶ್ಲೋಕಿ).

ಅಥವಾ (ಸ್ವನುರಕ್ತೋ ಸುಹೃಜ್ಜನೇऽಪಿ) ನೀನು ಇಲ್ಲಿರತಕ್ಕ ನಿನ್ನ ಮಿತ್ರರಲ್ಲಿ

ಆತನಲ್ಲಿ ವಿಶೇಷಪ್ರೇಮವುಳ್ಳ ನೀನೂ ಅವನೊಡನೆ ಕಾಡಿಗೆ ಹೋಗಿ, ಅವನ ಶುಶ್ರೂಷೆಯನ್ನು ಮಾಡುತ್ತಿರಬೇಕೆಂಬುದಕ್ಕಾಗಿಯೇ ಇಲ್ಲಿ ಸೃಷ್ಟಿಸಲ್ಪಟ್ಟಿರುವೆಯೇಹೊರತು ಬೇರೆಯಲ್ಲ. ಆತನು ಲೋಕರಕ್ಷಣಾರ್ಥವಾಗಿ ಅವತರಿಸಿರುವಂತೆಯೇ, ಆತನೊಡನೆ ವನವಾಸದಲ್ಲಿದ್ದು ಅವನ ಶುಶ್ರೂಷೆಯನ್ನು ಮಾಡುತ್ತಿರುವುದಕ್ಕಾಗಿಯೇ ಹುಟ್ಟಿರುವ ನೀನು,ಬಹಳ ಎಚ್ಚರಿಕೆಯಿಂದ ಆತನನ್ನು ಕಾಡಿನಲ್ಲಿ ರಕ್ಷಿಸುತ್ತಿರಬೇಕು. ರಾಮನು ಭಾಗ್ಯವಂತನಾಗಿದ್ದರೂ ರಾಜ್ಯಾಧಿಕಾರವೊಂದೂ ಇಲ್ಲದೆ ಕಷ್ಟದಲ್ಲಿ ಸಿಕ್ಕಿಬಿದ್ದರೂ ಆತನೇ ನಿನಗೆ ಗತಿಯು.ತಮ್ಮಂದಿರು ಅಣ್ಣನಿಗೆ ಹಿತರಾಗಿದ್ದು, ಅವರನ್ನು ಪರಿಚರ್ಯೆಮಾಡುತ್ತಿರಬೇಕೆಂಬುದೇ ಸತ್ಪುರುಷರ ಧರ್ಮವು. ಈ ರೀತಿಯಾದ ನಡತೆಯೂ, ಬಡವರನ್ನು ದಾನಾದಿಗಳಿಂದ ಪೋಷಿಸುವುದೂ,ಆಗಾಗ ಯಜ್ಞದೀಕ್ಷೆಗಳನ್ನು ವಹಿಸುವುದೂ,ಯುದ್ಧದಲ್ಲಿ ದೇಹವನ್ನು ಬಿಡುವುದೂ ನಮ್ಮ ಇಕ್ಷ್ವಾಕುವಂಶಕ್ಕೆ ಪರಂಪರಾಗತವಾಗಿ ಬಂದ ಧರ್ಮವು. ಆದುದರಿಂದ ನಿನ್ನ ಪ್ರಾಣಕ್ಕೇ ಹಾನಿಯುಂಟಾಗುವ ಸಂಭವವಿದ್ದರೂ, ರಾಮನನ್ನು ಸರಿಯಾಗಿರಕ್ಷಿಸಬೇಕು" ಎಂದಳು. ಹೀಗೆಂದುಹೇಳಿ, ರಾಮನನ್ನೇ ತನಗೆ ಮುಖ್ಯಗತಿಯೆಂದು ನಂಬಿಕೊಂಡು ವನಪ್ರಯಾಣಕ್ಕೆ ಸಿದ್ಧನಾಗಿರುವ ಲಕ್ಷ್ಮಣನನ್ನು "ನಡೆನಡೆ" ಎಂದು ತಾನೇ ಬಾರಿಬಾರಿಗೂ ತ್ವರೆಪಡಿಸುತ್ತಾ,ಪುನಃ ಆತನನ್ನು ಕುರಿತು *ವತ್ಸನೆ! ನೀನು ರಾಮನನ್ನೇ ನಿನ್ನ ತಂದೆಯಾದ ದಶರಥನೆಂದು ಭಾವಿಸು!ಸೀತೆ

---

ಬಹಳ ಅನುರಾಗವುಳ್ಳವನಾಗಿದ್ದರೂ (ವನವಾಸಾಯ) ಕಾಡಿನಲ್ಲಿ ರಾಮನೊಡನೆ ಹೋಗಿರುವುದಕ್ಕೆ (ಮಯಾ ಸೃಷ್ಟಃ) ನನ್ನಿಂದ ಅನುಮತಿಸಲ್ಪಟ್ಟಿರುವೆ" ಎಂದು ಮಹೇಶ್ವರತೀರ್ಥವ್ಯಾಖ್ಯಾನವು.

* ಇದಕ್ಕೆ "ರಾಮಂ ದಶರಥಂ ವಿದ್ಧಿ ಮಾಂ ವಿದ್ಧಿ ಜನಕಾತ್ಮಜಾಂ। ಅಯೋಧ್ಯಾಮಟವೀಂ ವಿದ್ಧಿ ಗಚ್ಛ ತಾತ ಯಥಾಸುಖಂ" ಎಂದು ಮೂಲವು. "ಕಾಡಿನಲ್ಲಿರುವಾಗ ಲಕ್ಷ್ಮಣನಿಗೆ ತಂದೆತಾಯಿಗಳೇ ಮೊದಲಾದವರ ಸ್ಮರಣೆಯು ಬಂದು, ಆತನ ಮನಸ್ಸು ಕದಲಿಹೋಗುವುದೋ" ಎಂದು ಶಂಕಿಸಿ, ಸುಮಿತ್ರೆಯು ಈ ಮಾತನ್ನಾಡುವಳು. ಇದರಿಂದ "ರಾಮನನ್ನೇ ತಂದೆಯನ್ನಾಗಿಯೂ, ಸೀತೆಯನ್ನೇ ತಾಯಿಯನ್ನಾಗಿಯೂ, ಕಾಡನ್ನೇ ಅಯೋಧ್ಯಾನಗರದಂತೆ ಭೋಗಸ್ಥಾನವನ್ನಾಗಿಯೂ ತಿಳಿದುಕೊಂಡು,ಸುಖವಾಗಿ ಹೋಗಿ ಬಾ"ಎಂದು ಸಾಮಾನ್ಯಾರ್ಥವು (ಯಥಾಸುಖಂ ಗಚ್ಛ) "ನಿನಗೆ ಸುಖವುಂಟಾ

ಯನ್ನೇ ನಾನೆಂದು ಭಾವಿಸು ! ನೀನು ಹೋಗತಕ್ಕ ಕಾಡನ್ನೇ ಅಯೋಧ್ಯೆ

---

ಗುವಂತೆ ಹೋಗಿ ಬಾ" ಎಂದರೆ, ಇಲ್ಲಿ ರಾಜಭೋಗದಲ್ಲಿರುವುದಕ್ಕಿಂತಲೂ ರಾಮನನ್ನನುವರ್ತಿಸಿಕೊಂಡು ಆತನ ಕೈಂಕರ್ಯವನ್ನು ನಡೆಸುತ್ತಿರುವುದೇ ನಿನಗೆ ಉಚಿತವಾದ ಸುಖವೆಂದೂ ಭಾವವು. ಅಥವಾ (ದಶರಥಂ) "ದಶ್" ಎಂದರೆ ಕಡಿಯುವುದೆಂದರ್ಥವು. ಮೀನು, ಆಮೆ, ಹಾವು, ಮುಂತಾದುವುಗಳನ್ನು ಕಡಿಯತಕ್ಕ ಪಕ್ಷಿಯು. "ದಶ: ಪಕ್ಷೀ ವಿಹಂಗಮು:" ಎಂಬ ಹಲಾಯುಧನಿಘಂಟುವಿನ ಪ್ರಕಾರವಾಗಿಯೂ "ದಶ ಎಂಬ ಶಬ್ದಕ್ಕೆ ಪಕ್ಷಿಯೆಂಬರ್ಥವು ಸಿದ್ಧಿಸುವುದು. ದಶರಥನೆಂದರೆ ಪಕ್ಷಿವಾಹನನು. ಗರುಡವಾಹನನಾದ ಶ್ರೀಮಹಾವಿಷ್ಣುವೆಂದರ್ಥವು ಅದುದರಿಂದ(ರಾಮಂ ದಶರಥಂ ವಿದ್ಧಿ)ರಾಮನನ್ನು ಸಾಕ್ಷಾನ್ಮಹಾವಿಷ್ಣುವೆಂದೇ ಭಾವಿಸು! (ಮಾಂವಿದ್ಧಿ ಜನಕಾತ್ಮಜಾಂ) "ಇಂದಿರಾ ಲೋಕಮಾತಾಮಾ" ಎಂಬಂತೆ "ಮಾ" ಎಂದರೆ ಲಕ್ಷ್ಮಿಯೆಂದರ್ಥವು. (ಜನಕಾತ್ಮಜಾಂ ವಿದ್ಧಿ) ಸೀತೆಯನ್ನು ಮಹಾಲಕ್ಷ್ಮಿಯನ್ನಾಗಿಯೇ ತಿಳಿಯೆಂದು ಭಾವವು. (ಅಯೋಧ್ಯಾಮಟವೀಂ ವಿದ್ಧಿ) ಅಯೋಧ್ಯೆಯೆಂದರೆ ಅಪರಾಜಿತೆಯೆಂಬ ಹೆಸರುಳ್ಳ ವೈಕುಂಠನಗರಿಯೆಂದರ್ಥವು. "ದೇವಾನಾಂ ಪೂರಯೋಧ್ಯಾ" ಎಂಬ ಶ್ರುತಿಪ್ರಮಾಣವನ್ನನುಸರಿಸಿ ಅಯೋಧ್ಯೆಯೆಂದರೆ ವಿಷ್ಣುಪುರಿಯೆಂದು ಹೇಳಲ್ಪಡುವುದರಿಂದ, ರಾಮನಿರತಕ್ಕ ಕಾಡನ್ನೇ ವಿಷ್ಣುವಿಗೆ ವಾಸಸ್ಥಾನವಾದ ಪರಮಪದವೆಂಬುದಾಗಿ ತಿಳಿಯೆಂದು ಭಾವವು. ಅಥವಾ (ರಾಮಂದಶರಥಂಚ ವಿದ್ಧಿ "ರಾಮನನ್ನೂ, ದಶರಥನನ್ನೂ ತಿಳಿ"ಯೆಂದರೆ, ಅವರಿಬ್ಬರಿಗೂ ಇರತಕ್ಕ ಗುಣತಾರತಮ್ಯಗಳನ್ನು ತಿಳಿದುಕೊಂಡು, ಯಾರಲ್ಲಿ ಹೇಗೆ ನಡೆಯಬೇಕೋ ಹಾಗೆ ನಡೆಯುತ್ತಿರೆಂದು ಭಾವವು. ಅದರಂತೆಯೇ (ಮಾಂ ಜನಕಾತ್ಮಜಾಂಚ ವಿದ್ಧಿ) ನನಗೂ ಸೀತೆಗೂ ಇರತಕ್ಕ ತಾರತಮ್ಯವನ್ನೂ ಪರ್ಯಾಲೋಚಿಸು! (ಅಯೋಧ್ಯಾಮಟವೀಂಚ ವಿದ್ಧಿ)ಅಯೋಧ್ಯೆಗೂ ಕಾಡಿಗೂ ಇರತಕ್ಕ ತಾರತಮ್ಯವನ್ನೂ ಪರ್ಯಾಲೋಚಿಸು" ಎಂದರೆ, ದಶರಥನಿಗಿಂತ ರಾಮನೇ ಗುಣದಲ್ಲಿ ಮೇಲಾದವನೆಂದೂ, ನನಗಿಂತಲೂ ಸೀತೆಯೇ ನಿನಗೆ ವಿಶೇಷಹಿತಕಾರಿಣಿಯೆಂದೂ, ಅಯೋಧ್ಯೆಗಿಂತಲೂ ರಾಮನಿರತಕ್ಕ ವನಪ್ರದೇಶವೇ ನಿನಗೆ ವಿಶೇಷಸುಖಾಶ್ರಯವಾದ ಸ್ಥಾನವೆಂದೂ, ಸೂಚಿಸಿದುದಾಗಿ ಭಾವವು. ಅಥವಾ(ದಶರಥಂರಾಮಂವಿದ್ಧಿ) "ರಮ್"ಎಂಬಧಾತುವಿಗೆ "ರಮು ಉಪರಮೇ"ಎಂಬ ಧಾತ್ವರ್ಥವನ್ನನುಸರಿಸಿ, ಉಪರತನೆಂದರೆ ಸತ್ತವನೆಂದರ್ಥವು. ಇದರಿಂದ ಇನ್ನುಮೇಲೆ ದಶರಥನನ್ನು ಸತ್ತಂತೆಯೇ ತಿಳಿ (ಮಾಂ ಜನಕಾತ್ಮಜಾಂ ವಿದ್ಧಿ) "ನನ್ನನ್ನು ತಂದೆಯಮಗಳನ್ನಾಗಿಯೇ ತಿಳಿ"ಎಂದರೆ, ಪತಿಹೀನೆಯಾದ ನಾನು ಕೈಕೇಯಿಯ ಬಾಧೆಯನ್ನು ತಡೆಯಲಾರದುದಕ್ಕಾಗಿ ಇನ್ನುಮೇಲೆ ತಂದೆಯ ಮನೆಯಲ್ಲಿ ಹೋಗಿ ಸೇರಿದವಳನ್ನಾಗಿಯೇ ತಿಳಿ

ಯೆಂದು ಭಾವಿಸು! ಸುಖವಾಗಿ ಹೋಗಿ ಬಾ" ಎಂದಳು. ಆಮೇಲೆ ಸುಮಂ

---

ಯೆಂದು ಭಾವವು.(ಅಯೋಧ್ಯಾಮಟವೀಂ ವಿದ್ಧಿ) ಇನ್ನುಮೇಲೆ ಈ ಅಯೋಧ್ಯೆಯನ್ನು ಒಂದು ಅಡವಿಯನ್ನಾಗಿಯೇ ತಿಳಿ. ಎಂದರೆ. ಕಾಡಿನಂತೆ ಈ ಅಯೋಧ್ಯೆಯು ಇನ್ನು ಮೇಲೆ ನಿರ್ಜನವಾಗುವುದೆಂದೂ ಭಾವವು. ಇದರಿಂದ 'ನೀನು ರಾಮನೊಡನೆ ಕಾಡಿಗೆ ಹೊರಟುಹೋದಮೇಲೆ.ದಶರಥನೂ ಬದುಕಿರಲಾರನು.ನಾನೂ ತಂದೆಯ ಮನೆಗೆಹೋಗಿ ಸೇರುವೆನು. ಅಯೋಧ್ಯಾವಾಸಿಗಳೆಲ್ಲರೂ ಈ ಪಟ್ಟಣವನ್ನು ಬಿಟ್ಟು ಹೊರಟುಹೋಗುವುದರಿಂದ, ಈ ಪಟ್ಟಣವು ಕೇವಲಶೂನ್ಯಪ್ರದೇಶವಾಗುವುದೆಂದು ಮುಖ್ಯತಾತ್ಪರ್ಯವು. (ಗೋವಿಂದರಾಜೀಯವು).

ಅಥವಾ (ರಾಮಂ ದಶರಥಂ ವಿದ್ಧಿ) ಇತ್ಯಾದಿವಾಕ್ಯಗಳಿಗೆ ''ಉಪಾಧಿವಶದಿಂದ ತಂದೆಯೆನಿಸಿಕೊಂಡಿರುವ ದಶರಥನಲ್ಲಿ ನೀನು ಅತಿಸ್ನೇಹವನ್ನು ಬಿಟ್ಟು, ನಿರುಪಾಧಿಕ ಪಿತೃವಾದ ರಾಮನಲ್ಲಿಯೇ ಭಕ್ತಿಯಿಡು ಮತ್ತು (ಮಾಂ ವಿದ್ಧಿ ಜನಕಾತ್ಮಜಾಂ) ಉಪಾಧಿವಶದಿಂದ ತಾಯಿಯೆನಿಸಿಕೊಂಡಿರುವ ನನ್ನಲ್ಲಿರುವುದಕ್ಕಿಂತಲೂ ನಿರುಪಾಧಿಕ ಮಾತೆಯಾದ ಸೀತೆಯಲ್ಲಿ ಹೆಚ್ಚು ಭಕ್ತಿಯನ್ನಿಡು: (ಅಯೋಧ್ಯಾಮಟವೀಂವಿದ್ಧಿ) ಉಪಾಧಿವಶದಿಂದ ಬಂದಿರುವ ಅಯೋಧ್ಯಾಸಾಮ್ರಾಜ್ಯದಲ್ಲಿರುವುದಕ್ಕಿಂತಲೂ, ರಾಮನಿಗಾಶ್ರಯವಾಗಿರುವುದರಿಂದ ನಿರುಪಾಧಿಕವಾದ ಭೋಗಸಾಮ್ರಾಜ್ಯವನ್ನುಂಟುಮಾಡತಕ್ಕ ಕಾಡಿನಲ್ಲಿ ಪ್ರೀತಿಯನ್ನಿಡು." ಎಂದೂ ಭಾವವು. ಅಥವಾ ರಾಮನು ರಾಜ್ಯಹೀನನಾಗಿ ಕಾಡಿನಲ್ಲಿರುತಿದ್ದರೂ, ಆತನ ನಿತ್ಯೈಶ್ವರ್ಯಕ್ಕೆ ಎಂದಿಗೂ ಲೋಪವು ಬಾರದಾದುದರಿಂದ, ಆತನನ್ನು ದಶರಥನಂತೆ ಸಾಮ್ರಾಜ್ಯದಲ್ಲಿರುವವನನ್ನಾಗಿಯೂ, ಸೀತೆಯನ್ನುಕೂಡ ನನ್ನಂತೆ ರಾಜಮಹಿಷಿಯನ್ನಾಗಿಯೂ, ಕಾಡನ್ನು ಅಯೋಧ್ಯೆಯಂತೆ ಪುಷ್ಪಫಲಸಮೃದ್ಧಿಯುಳ್ಳುದನ್ನಾಗಿಯೂ ತಿಳಿದು ಗೌರವಿಸುತ್ತಿರಬೇಕೇ ಹೊರತು, ಅವರ ದುರ್ದಶೆಯನ್ನು ನೋಡಿ ಅಲಕ್ಷ್ಯವನ್ನು ತೋರಿಸಬಾರದೆಂದೂ ಭಾವವು. ಅಥವಾ ಇದರಿಂದ ಸುಮಿತ್ರೆಯು ದಶರಥನ ವಿಷಯದಲ್ಲಿ ಕೋಪಗೊಂಡಿರುವ ಲಕ್ಷ್ಮಣನಿಗೆ ಸಮಾಧಾನವನ್ನು ಹೇಳಿ ಬುದ್ಧಿಗಲಿಸಿದುದಾಗಿಯೂ ಅರ್ಥವನ್ನು ಮಾಡಬಹುದು.(ರಾಮಂ ದಶರಥಂ ವಿದ್ಧಿ) ದಶರಥನನ್ನೂ ರಾಮನಂತೆಯೇ ಭಾವಿಸು ಎಂದರೆ ''ಅಹಂ ತಾವನ್ಮಹಾರಾಜೇ ಪಿತೃತ್ವಂ ನೋಪಲಕ್ಷಯೇ। ಭ್ರಾತಾ ಭರ್ತಾಚ ಬಂಧುಶ್ಚ ಪಿತಾಚ ಮಮ ರಾಘವಃ" ಎಂದು ನೀನು ಹೇಳಿರುವಂತೆ, ದಶರಥನನ್ನು ಅವಮಾನಿಸಬಾರದೆಂದು ಭಾವವು. (ಮಾಂ ವಿದ್ಧಿ ಜನಕಾತ್ಮಜಾಂ) ಸೀತೆಯಲ್ಲಿ ನೀನು ಹೇಗೆ ಭಕ್ತಿಯನ್ನಿಟ್ಟಿರುವೆಯೋ, ಹಾಗೆ ನನ್ನಲ್ಲಿಯೂ ಇದುವರೆಗಿದ್ದ ನಿನ್ನ ಮಾತೃಭಕ್ತಿಯನ್ನು ಬಿಡಬೇಡ

ತ್ರನು ವಿನಯದಿಂದ ಕೈಮುಗಿದು, ರಾಮನನ್ನು ಕುರಿತು, ಮಾತಲಿಯು ಇಂದ್ರನಿಗೆ ವಿಜ್ಞಾಪಿಸುವಂತೆ ಬಹುನಮ್ರಭಾವದಿಂದ ಒಂದಾನೊಂದು ಮಾತನ್ನು ಹೇಳುವನು. “ಎಲೈ ಯಶಸ್ವಿಯಾದ ರಾಮನೆ! ಬಾಗಿಲಲ್ಲಿ ರಥವು ಸಿದ್ಧವಾಗಿರುವುದು. ಏರಬಹುದು. ನಿನಗೆ ಮಂಗಳವಾಗಲಿ! ಎಲ್ಲಿಗೆ ರಥವನ್ನು ಬಿಡಬೇಕೆಂದು ಅಪ್ಪಣೆಯಾದರೂ, ಅಲ್ಲಿಗೆ ಈಗಲೇ ಕರೆದುಕೊಂಡುಹೋಗಿ ಸೇರಿಸಿ ಬಿಡುವೆನು! ನೀನು ಕಾಡಿನಲ್ಲಿ ಕಳೆಯಬೇಕಾದುದು, ಹದಿನಾಲ್ಕು ವರ್ಷಗಳ ಕಾಲವೆಂದಲ್ಲವೇ ಕೈಕೇಯಿಯು ನಿಯಮಿಸಿರುವಳು? ಅದರಲ್ಲಿ ಒಂದು ದಿನದ ಮಟ್ಟಿಗೆ ಕಳೆದರೂ ಎಷ್ಟೋ ಲಾಭವಲ್ಲವೆ? ಅದನ್ನೂ ಎಷ್ಟು ಶೀಘ್ರದಲ್ಲಿ ಕಳೆದರೆ ಅಷ್ಟುತ್ತಮವು. ಆದುದರಿಂದ ಈಗಲೇ ಉಪಕ್ರಮಿಸುಬಿಡು” ಎಂದನು. ಸೀತೆಯು ಇಷ್ಟರೊಳಗಾಗಿ ತನ್ನ ದೇಹವನ್ನು ಅಲಂಕರಿಸಿಕೊಂಡು ಸಿದ್ಧಳಾಗಿ, ಮನಸ್ಸಿನಲ್ಲಿ ಅತ್ಯುತ್ಸಾಹಗೊಂಡು, ಸೂರ್ಯನಂತೆ ಜ್ವಲಿಸುತ್ತಿರುವ ಆ ರಥದಮೇಲೆ ತಾನೇ ಮೊದಲು ಏರಿ ಕುಳಿತಳು. ಆಮೇಲೆ ಸ್ವರ್ಣಮಯವಾಗಿ ಅಗ್ನಿ

---

ಷೆಂದು ಭಾವವು (ಅಯೋಧ್ಯಾಮಟವೀಂ ವಿದ್ಧಿ) ರಾಮನಿಗೆ ವಾಸಸ್ಥಾನವಾದ ಕಾಡಿನಲ್ಲಿಟ್ಟಿರುವ ಅಭಿಮಾನವನ್ನೇ ಅಯೋಧ್ಯೆಯಲ್ಲಿಯೂ ಇಟ್ಟಿರು. ಎಂದರೆ “ವನಂ ನಗರಮೇವಾಸ್ತು ಯೇನ ಗಚ್ಛತಿ ರಾಘವಃ” ಎಂದು ನೀನು ಹೇಳಿರುವಂತೆ, ಈ ಅಯೋಧ್ಯಾನಗರವನ್ನು ಅವಮಾನಿಸಕೂಡದೆಂದು ಭಾವವು. ಮತ್ತು ಇದರಿಂದ ಮುಂದಿನ ಕೆಲವು ಕಥಾಸಂದರ್ಭಗಳೂ ಸೂಚಿತವಾಗುವುವು. ಹೇಗೆಂದರೆ, “ರಾಮನನ್ನು ದಶರಥನಂತೆಯೇ ತಿಳಿ.” ಎಂಬುದರಿಂದ, ದಶರಥನು ಹೆಂಡತಿಯ ಮಾತಿಗೆ ಮರುಳಾಗಿ ರಾಮನಿಗೆ ವನವಾಸವನ್ನು ಹೇಗೆ ಆಜ್ಞಾಪಿಸಿದನೋ, ಹಾಗೆಯೇ ರಾಮನೂ ಸೀತೆಯ ಮಾತಿಗೆ ಮರುಳಾಗಿ ಮಾಯಾಮೃಗವನ್ನನುಸರಿಸಿ ಕಷ್ಟಕ್ಕೆ ಗುರಿಯಾಗುವನೆಂದುಭಾವವು. ಸೀತೆಯನ್ನು ನನ್ನಂತೆಯೇ ತಿಳಿ” ಎಂಬುದರಿಂದ, ನಾನು ಈಗ ನಿನ್ನನ್ನು ಕುರಿತು ರಾಮನನ್ನು ಹಿಂಬಾಲಿಸಿಹೋಗೆಂದು ನಿರ್ಬಂಧಿಸುವಹಾಗೆಯೇ, ಆ ಸೀತೆಯೂ ನಿನ್ನನ್ನು ಕುರಿತು ಮಾಯಾಮೃಗವನ್ನು ಹುಡುಕಿಕೊಂಡು ಹೋದ ರಾಮನನ್ನು ಹಿಂಬಾಲಿಸಿ ಹೋಗೆಂದು ನಿರ್ಬಂಧಿಸುವಳೆಂದು ಭಾವವು. “ಕಾಡನ್ನೂ ಅಯೋಧ್ಯೆಯೆಂದೇ ತಿಳಿ.” ಎಂಬುದರಿಂದ ರಾಮನು ಈಗ ಅಯೋಧ್ಯೆಯನ್ನು ಬಿಟ್ಟು ಹೋದಂತೆಯೇ, ಮುಂದೆ ದಂಡಕಾರಣ್ಯವನ್ನು ಬಿಟ್ಟುಬೇರೊಂದು ಕಾಡಿಗೆ ಹೊರಟುಹೋಗಬಹುದು, ಆದುದರಿಂದ (ರಾಮೇ ಪ್ರಮಾದಂಮಾಕಾರ್ಷೀಃ) ಈ ಸಮಸ್ತವಿಷಯಗಳಲ್ಲಿಯೂ ನೀನು ಬಹು ಜಾಗರೂಕನಾಗಿರಬೇಕೆಂದು ಭಾವವು. (ತನಿಶ್ಲೋಕಿ).



೫೫೧. ರಾಮನು ಕಾಡಿಗೆ ಪ್ರಯಾಣಮಾಡಿದುದು, ಪ್ರಜೆಗಳು ಅವನನ್ನು ಹಿಂಬಾಲಿಸಿದುದು

ಯಂತೆ ಜ್ವಲಿಸುತ್ತಿರುವ ಆ ರಥವನ್ನು ಅಣ್ಣತಮ್ಮಂದಿರಾದ ರಾಮಲಕ್ಷ್ಮಣರಿಬ್ಬರೂ ಏರಿದರು. ಸೀತೆಯು ಕಾಡಿನಲ್ಲಿರಬೇಕಾದ ದಿನಗಳನ್ನು ಲೆಕ್ಕಮಾಡಿ ಅದಕ್ಕೆ ತಕ್ಕಷ್ಟು ವಸ್ತ್ರಾಭರಣಗಳನ್ನೂ,ರಾಮಲಕ್ಷ್ಮಣರಿಗೆ ಬೇಕಾದ ಆಯುಧಗಳನ್ನೂ,ಕವಚಗಳನ್ನೂ ರಥದಲ್ಲಿ ತಂದಿಡುವಂತೆ, ದಶರಥನು ಪರಿಜನರಿಗೆ ಆಜ್ಞಾಪಿಸಿ,ಅವೆಲ್ಲವನ್ನೂ ಲೋಪವಿಲ್ಲದೆತರಿಸಿಟ್ಟನು.ಮತ್ತು ಲಕ್ಷ್ಮಣನಿಗೆ ಬೇಕಾದ ಗುದ್ದಲಿ,ಪುಟ್ಟಿ,ಮೊದಲಾದ ಸಾಮಗ್ರಿಗಳನ್ನೂ ತರಿಸಿಟ್ಟನು.ಹೀಗೆ ಸೀತಾರಾಮಲಕ್ಷ್ಮಣರು ಮೂವರೂ ಸಮಸ್ತಸಾಮಗ್ರಿಗಳೊಡನೆ ರಥವನ್ನೇರಿ ಕುಳಿತಮೇಲೆ,ಸುಮಂತ್ರನು ವಾಯುವೇಗದಿಂದ ಕೂಡಿದ ಶುಭಲಕ್ಷಣಗಳುಳ್ಳ ಕುದುರೆಗಳನ್ನು ಮುಂದೆ ನಡೆಸಿದನು. ಅತ್ತಲಾಗಿ ರಾಮನು ವನಕ್ಕೆ ಪ್ರಯಾಣಮಾಡಿದೊಡನೆಯೇ, ಆ ಪಟ್ಟಣವೆಲ್ಲವೂ ಮೂರ್ಛೆಯಲ್ಲಿ ಮುಳುಗಿತು.ಆನೆಕುದುರೆಗಳೇ ಮೊದಲಾದ ಚತುರಂಗಸೈನ್ಯವೂ ವ್ಯಸನದಿಂದ ಪ್ರಜ್ಞೆತಪ್ಪಿತು. ಉತ್ಸವಾರ್ಥವಾಗಿ ಆಗಂತುಕರಾಗಿ ಬಂದಿದ್ದ ಜನರೆಲ್ಲರೂ ಪ್ರಜ್ಞೆತಪ್ಪಿದ್ದರು. ಆ ಪಟ್ಟಣದಲ್ಲಿದ್ದ ಸಮಸ್ತಪ್ರಾಣಿಗಳೂ ಹಿಂದುಮುಂದುತೋರದೆ ಕಳವಳಹೊಂದಿ, ಇಂದ್ರಿಯಶೂನ್ಯವಾಗಿ ಗೋಳಿಡುತಿದ್ದುವು. ಆ ಪಟ್ಟಣದಲ್ಲಿದ್ದ ಮದೋನ್ಮತ್ತವಾದ ಆನೆಗಳೆಲ್ಲವೂ ಕೋಪದಿಂದ ಘೀಂಕಾರಧ್ವನಿಯನ್ನು ಮಾಡುತಿದ್ದುವು. ಕುದುರೆಗಳೂಕೂಡ ನಿಂತಕಡೆಯಲ್ಲಿ ನಿಲ್ಲದೆ ಸಂಕಟದಿಂದ ಕೂಗಿಕೊಳ್ಳುತಿದ್ದುವು. ರಾಮನ ರಥದ ದಾರಿಯನ್ನೇ ಅನುಸರಿಸಿ ಓಡುತಿದ್ದ ಜನರ ಆಭರಣಧ್ವನಿಗಳು ನಾಲ್ಕುಗಡೆಗಳಲ್ಲಿಯೂ ತುಂಬಿದುವು. ಆ ಕಾಲದಲ್ಲಿ ಅಯೋಧ್ಯಾಪಟ್ಟಣವೆಲ್ಲವೂ ಕೇವಲದುಃಖಧ್ವನಿಯಿಂದಲೇ ತುಂಬಿಹೋಯಿತು. ಆ ಪಟ್ಟಣದ ಜನರಲ್ಲಿ ಆಬಾಲವೃದ್ಧರೂ ರಾಮನನ್ನು ನೆನೆಸಿಕೊಂಡು ಸಂಕಟಪಡುತ್ತಾ, ಬೇಸಗೆಯ ತಾಪದಿಂದ ಬಳಲಿದವರು ನೀರನ್ನು ಹುಡುಕಿಕೊಂಡು ಓಡುವಂತೆ ರಾಮನ ರಥವನ್ನೇ ಹಿಂಬಾಲಿಸಿ ಓಡುತಿದ್ದರು. ರಾಮನ ರಥದ ಸುತ್ತುಮುತ್ತಲೂ ಅಲ್ಲಿನ ಪುರವಾಸಿಗಳೆಲ್ಲರೂ ಕಿಕ್ಕಿರಿಸಿ ತುಂಬಿ ತಲೆಯೆತ್ತಿ ಆ ರಾಮನನ್ನೇ ನೋಡುತ್ತ, ಕಣ್ಣಿನಲ್ಲಿ ನೀರನ್ನು ತುಂಬಿಕೊಂಡು,ರಥವನ್ನು ನಡೆಸುತಿದ್ದ ಸುಮಂತ್ರನನ್ನು ಕುರಿತು, "ಅಯ್ಯಾ ಸಾರಥಿಯೇ! ಕುದುರೆಗಳ ಹಗ್ಗವನ್ನು ಎಳೆದು ಹಿಡಿ! ರಥವನ್ನು ಮೆಲ್ಲಗೆ ಬಿಡು! ರಾಮನ ಮುಖವನ್ನಾ

ದರೂ ನೋಡುವೆವು!ಇನ್ನು ಆತನ ಮುಖದರ್ಶನವೂ ನಮಗೆ ದುರ್ಲಭವಾಗುವುದಲ್ಲವೆ?ನೀನು ರಥವನ್ನು ವೇಗದಿಂದ ನಡೆಸಿಕೊಂಡುಹೋದರೆ ಆತನನ್ನು ನೋಡುವುದೂ ನಮಗೆ ಕಷ್ಟವಾಗುವುದು ಆಃ!ರಾಮನ ತಾಯಿಯಾದ ಕೌಸಲ್ಯೆಯ ಹೃದಯವು ಉಕ್ಕಿನಿಂದಲೇ ಮಾಡಲ್ಪಟ್ಟಿರುವುದೆಂಬುದರಲ್ಲಿಸಂದೇಹವಿಲ್ಲ. ದೇವಕುಮಾರನಂತೆ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನು ಕಾಡಿಗೆ ಹೋಗುವಾಗಲೂ ಅವಳ ಎದೆಯು ಒಡೆಯದಿರುವುದಲ್ಲಾ! ಛಾಯೆಯಂತೆ ತನ್ನ ಪತಿಯನ್ನನುಸರಿಸಿ ಹೋಗುತ್ತಿರುವ ಈ ಸೀತೆಯೇ ಧನ್ಯಳು ಈಕೆಯು * ಸೂರ್ಯಕಾಂತಿಯು ಮೇರುಪರ್ವತವನ್ನು ಅಗಲಿಹೋಗದಂತೆ, ನಿಮಿಷಮಾತ್ರವೂ ತನ್ನ ಪಾತಿವ್ರತ್ಯಧರ್ಮವನ್ನು ಆಗಲಿರದೆ,ಆತನನ್ನೇ ಅನುಸರಿಸಿ ಹೋಗುವಳು.ಎಲೈ ಲಕ್ಷ್ಮಣನೇ!ಲೋಕದಲ್ಲಿ ನಿನ್ನಂತೆ ಧನ್ಯರಾರುಂಟು? ಪ್ರಿಯವಾದಿಯಾಗಿ,ದೇವತೆಗಳಿಗೆ ಸಮಾನನೆನಿಸಿಕೊಂಡಿರುವ ನಿನ್ನ ಅಣ್ಣನಿಗೆ ನೀನು ಅನವರತವೂ ಪರಿಚರ್ಯೆಯನ್ನು ಮಾಡುತ್ತಿರುವೆಯಲ್ಲವೆ? ಹೀಗೆ ಈತನನ್ನನುಸರಿಸಿಹೋಗುವುದೇ ನಿನಗೆ ದೊಡ್ಡ ತಪಸ್ಸಿದ್ಧಿಯು.ಇದೇ ನಿನಗೆ ಸಮಸ್ತವಿಧವಾದ ಅಭ್ಯುದಯವು!ಇದೇ ನಿನಗೆ ಸ್ವರ್ಗಪ್ರಾಪ್ತಿಗೆ ದಾರಿಯು.ನೀನೇ ಧನ್ಯನು."ಎಂದು ಕೂಗಿಕೊಳ್ಳುತಿದ್ದರು. ಹೀಗೆ ಸರ್ವಲೋಕಪ್ರಿಯನಾಗಿ ಇಕ್ಷ್ವಾಕುವಂಶಕ್ಕೆ ಆನಂದಕರನೆನಿಸಿಕೊಂಡಿರುವ ರಾಮನನ್ನು ಬಿಟ್ಟುಬರಲಾರದೆ, ಪುರವಾಸಿಗಳೆಲ್ಲರೂ ಆತನ ರಥವನ್ನೇ ಹಿಂಬಾಲಿಸಿ ಹೋಗುತ್ತಾ, ವ್ಯಸನದಿಂದ ಧಾರೆಧಾರೆಯಾಗಿ ಕಣ್ಣೀರನ್ನು ಸುರಿಸುತಿದ್ದರು. ಇತ್ತಲಾಗಿ ದಶರಥರಾಜನೂ ಬಹಳ ದುಃಖಿತನಾಗಿ, ತನ್ನಂತೆಯೇ ಮಹಾವ್ಯಸನದಲ್ಲಿ ಮುಳುಗಿರುವ ತನ್ನ ಪತ್ನಿಯರೊಡಗೂಡಿ, "ಮತ್ತೊಂದಾವರ್ತಿಯಾದರೂ ರಾಮನನ್ನು ನೋಡಿಬರುವೆ"ನೆಂದು ಹೇಳುತ್ತಾ,ಥಟ್ಟನೆ ಎದ್ದು ಅರಮನೆಯನ್ನು ಬಿಟ್ಟುಹೊರಟನು. ಕಾಡಾನೆಗಳ ಗುಂಪಿನಲ್ಲಿರುವ ಸಲಗನನ್ನು ಹಿಡಿದುಕಟ್ಟಿದಾಗ,ಹೆಣ್ಣಾನೆಗಳೆಲ್ಲವೂ ದುಃಖದಿಂದ ಕೂಗಿಕೊಳ್ಳುವಂತೆ, ಈ ದಶರಥನ ಹಿಂದೆ,ಸ್ತ್ರೀಯರೆಲ್ಲರೂ ಗಟ್ಟಿಯಾಗಿ ಅಳುತ್ತಾ ಬರುತ್ತಿರಲು.ಅವರ ರೋದ

---

* ಸೂರ್ಯನು ಯಾಗಾಗಲೂ ಮೇರುಪರ್ವತವನ್ನೇ ಸುತ್ತಿಬರುವುದರಿಂದ, ಆತನ ಕಾಂತಿಯು ಆ ಪರ್ವತದ ಮೇಲೆ ಯಾವಾಗಲೂ ಬಿದ್ದೇ ಇರುವುದೆಂದು ಗ್ರಹಿಸಬೇಕು

ನ ಧ್ವನಿಯು ಆ ಸ್ಥಳವೆಲ್ಲವನ್ನೂ ತುಂಬಿಕೊಂಡಿತು. ಈ ಅನರ್ಥಗಳೆಲ್ಲವನ್ನೂ ನೋಡಿದಾಗ ಆ ದಶರಥನು ಗ್ರಹಣಹಿಡಿದ ಪೂರ್ಣಚಂದ್ರನಂತೆ ಕಾಂತಿಹೀನನಾಗಿದ್ದನು. ಅತ್ತಲಾಗಿ ಶ್ರೀಮಂತನಾದ ರಾಮನು, ಪ್ರಜೆಗಳ ದುಃಖವನ್ನು ನೋಡಿ ಸಹಿಸಲಾರದೆ, ಸುಮಂತ್ರನನ್ನು ಕುರಿತು, ““ಬೇಗಬೇಗನೆ ರಥವನ್ನು ಬಿಡು” ಎಂದು ತ್ವರೆಪಡಿಸುತಿದ್ದನು. ಇತ್ತಲಾಗಿ ಪ್ರಜೆಗಳು ರಥವನ್ನು ಮುಂದೆಬಿಡದೆ, ನಿಲ್ಲುನಿಲ್ಲೆಂದು ತನ್ನನ್ನು ನಿರ್ಬಂಧಿಸುತ್ತಿರುವುದನ್ನೂ, ಅತ್ತಲಾಗಿ ರಾಮನು ಹೋಗುಹೋಗೆಂದು ಬಹಳವಾಗಿ ತ್ವರೆಪಡಿಸುತ್ತಿರುವುದನ್ನೂ ನೋಡಿ, ಆತನಿಗೆ ಯಾವುದೂ ತೋರಲಿಲ್ಲ. ಮಹಾಬಾಹುವಾದ ರಾಮನು ಹೀಗೆ ಹೋಗುತ್ತಿರುವಾಗ, ರಥಸಂಚಾರದಿಂದಲೂ, ಜನಸಂಚಾರದಿಂದಲೂ ಎದ್ದ ದೊಡ್ಡಧೂಳಿಯು, ಅಲ್ಲಿದ್ದ ಪ್ರಜೆಗಳ ಕಣ್ಣೀರಿನಿಂದಲೇ ಶಾಂತವಾಗುವಂತೆ ತೋರುತಿತ್ತು. ರಾಮನ ಪ್ರಯಾಣಕಾಲದಲ್ಲಿ ಪುರಜನರೆಲ್ಲರೂ ಬಹಳದುಃಖದಿಂದ ಅಳುತ್ತ ““ಹಾಹಾ” ಎಂದು ಕೂಗಿಕೊಂಡು ಪ್ರಜ್ಞೆತಪ್ಪಿ ಬೀಳುತಿದ್ದರು. ಆ ಪ್ರಜೆಗಳ ಕಣ್ಣೀರಿನಿಂದಲೇ ಭೂಮಿಯೆಲ್ಲವೂ ನೆನೆದಂತಾಯಿತು. ಕೊಳದಲ್ಲಿ ಮೀನುಗಳು ಇಲ್ಲಿಗಲ್ಲಿಗೆ ಸಂಚಾರಮಾಡುವಾಗ, ಅಲುಗುವ ತಾವರೆಬಳ್ಳಿಗಳಿಂದ ಮಕರಂದವು ಸೋರಿಕ್ಕುವಂತೆ, ಜನಗಳ ಕಣ್ಣುಗಳಿಂದ ಧಾರೆಧಾರೆಯಾಗಿ ನೀರು ಸುರಿಯುತಿತ್ತು. ರಾಮನ ಅಗಲಿಕೆಗಾಗಿ ಆ ಅಯೋಧ್ಯಾಪುರವೆಲ್ಲವೂ ಒಂದೇಮನಸ್ಸಿನಿಂದದುಃಖಿಸುತ್ತಿರುವುದನ್ನು ನೋಡಿ, ಶ್ರೀಮಂತನಾದ ದಶರಥನೂ ಮಹಾವ್ಯಸನಗೊಂಡು, ಬುಡವನ್ನು ಕಡಿದ ಮರದಂತೆ ಹಾಗೆಯೇ ಪ್ರಜ್ಞೆತಪ್ಪಿ ಕೆಳಕ್ಕೆಬಿದ್ದನು. ಅತ್ತಲಾಗಿ ರಾಮನ ಹಿಂದೆ ಹೋಗುತಿದ್ದ ಜನರೆಲ್ಲರೂ ದಶರಥನ ದುರವಸ್ಥೆಯನ್ನು ನೋಡಿ, ““ಹಾಹಾ”! ಎಂದು ಕೂಗುತಿದ್ದರು. ಅವರಲ್ಲಿ ಕೆಲವರು ““ಹಾ ರಾಮಾ” ಎಂದೂ, ಮತ್ತೆ ಕೆಲವರು ““ಹಾ ಕೌಸಲ್ಯೇ” ಎಂದೂ ಕೂಗಿಕೊಳ್ಳುತಿದ್ದರು. ಹೀಗೆಯೇ ಅಂತಃಪುರದಲ್ಲಿಯೂ ಪ್ರಬಲವಾದ ರೋದನಧ್ವನಿಯು ಹೊರಟಿತು. ಈ ಗದ್ದಲವನ್ನು ಕೇಳಿ ರಾಮನು ಹಿಂತಿರುಗಿ ನೋಡಿದಾಗ, ಅನೇಕಪ್ರಜೆಗಳು ತನ್ನ ಹಿಂದೆ ದುಃಖದಿಂದ ಗೋಳಿಡುತ್ತ ಹಿಂಬಾಲಿಸಿಬರುತ್ತಿರುವುದನ್ನು ಕಂಡನು. ಅವರ ನಡುವೆ ತನ್ನ ತಂದೆಯೂ, ತಾಯಿಯೂ, ಮಹಾದುಃಖಿತರಾಗಿ ಅನಾಥರಂತೆ ಗೋಳಿಡುತ್ತ, ದಾರಿಯಲ್ಲಿ ನಡೆದು ಬರುತಿದ್ದ

ದನ್ನೂ ನೋಡಿದನು. ಹಗ್ಗದಿಂದ ಕಟ್ಟಿಹಾಕಲ್ಪಟ್ಟ ಕುದುರೆಯ ಮರಿಯು ದೂರದಲ್ಲಿರುವ ತನ್ನ ತಾಯಿಯನ್ನು ನೋಡಿ ತತ್ತಳಿಸುವಂತೆ,ಧರ್ಮಪಾಶದಲ್ಲಿ ಕಟ್ಟಲ್ಪಟ್ಟ ರಾಮನು, ದುಃಖಿತರಾಗಿ ತನ್ನ ರಥವನ್ನು ಹಿಂಬಾಲಿಸಿ ಬರುತ್ತಿರುವ ತನ್ನ ತಾಯಿತಂದೆಗಳನ್ನು ಕಡೆಗಣ್ಣಿನಿಂದ ನೋಡುತ್ತ ಮುಂದೆ ಸಾಗುತಿದ್ದನು. ಯಾವಾಗಲೂ ವಾಹನಾರೂಢರಾಗಿಯೇ ಹೊರಡುತಿದ್ದ ತನ್ನ ತಾಯಿತಂದೆಗಳು, ಹೀಗೆ ಕಾಲುನಡೆಯಿಂದಲೇ ಬೀದಿಯಲ್ಲಿ ಬರುತ್ತಿರುವುದನ್ನೂ, ಹುಟ್ಟಿದುದುಮೊದಲು ದುಃಖವೆಂಬುದನ್ನೇ ಕಂಡರಿಯದ ಅವರಿಬ್ಬರೂ ಈಗ ಮಹಾವ್ಯಸನದಿಂದ ಕೊರಗುತ್ತಿರುವುದನ್ನೂ ನೋಡಿ ಸಹಿಸಲಾರದೆ,ಸುಮಂತ್ರನನ್ನು "ಬೇಗ ನಡೆ"ಯೆಂದು ಬಹಳವಾಗಿ ತ್ವರೆಪಡಿಸುತಿದ್ದನು. ರಾಮನು ಪುರುಷಶ್ರೇಷ್ಠನೆನಿಸಿಕೊಂಡು ಎಷ್ಟೋ ಗಂಭೀರಸ್ವಭಾವವುಳ್ಳವನಾಗಿದ್ದರೂ, ತನ್ನ ತಾಯಿತಂದೆಗಳ ದುಃಖವನ್ನು ನೋಡಿ ತಾನೂ ಪರಮದುಃಖಿತನಾದನು. ಕಶೆಯಿಂದ ಹೊಡೆಯಲ್ಪಟ್ಟ ಆನೆಯಂತೆ ಆ ದುಃಖವನ್ನು ಸಹಿಸಲಾರದೆ,ಕಣ್ಮರೆಯಾಗಿ ಹೊರಟುಹೋಗಬೇಕೆಂದು ಆತುರಪಡುತಿದ್ದನು. ರಾಮನ ರಥವು ವೇಗವಾಗಿ ಓಡುತಿದ್ದಷ್ಟೂ, ಹಸುವು ತನ್ನ ಕರುವನ್ನು ನೆನೆಸಿಕೊಂಡು ಓಡಿಬರುವಂತೆ, ಕೌಸಲ್ಯೆಯು ಅದನ್ನು ಹಿಂಬಾಲಿಸಿ ತಾನೂ ಓಡಿಬರುತಿದ್ದಳು. ಹೀಗೆ ಮೈಥಿಳಿಯದೆ "ಹಾ ರಾಮಾ! ಹಾ ಸೀತೇ! ಹಾ ಲಕ್ಷ್ಮಣಾ!"ಎಂದು ಕೌಸಲ್ಯೆಯು ಕೂಗಿಡುತ್ತಾ ಕಣ್ಣಿನಲ್ಲಿ ನೀರುತುಂಬಿಕೊಂಡು ಓಡಿಬರುತಿದ್ದುದನ್ನೂ, ದುಃಖಾತಿಶಯದಿಂದ ಕುಣಿದಾಡುವವಳಂತೆ ನಿಂತಕಡೆಯಲ್ಲಿ ನಿಲ್ಲದೆ, ತನ್ನ ರಥವನ್ನು ಹಿಂಬಾಲಿಸಿ ಬರುತ್ತಿರುವುದನ್ನೂ, ರಾಮನು ಆಗಾಗ ಹಿಂತಿರುಗಿ ನೋಡುತ್ತ ಸಾರಥಿಯನ್ನು "ನಡೆನಡೆ" ಎಂದು ತ್ವರೆಪಡಿಸುತಿದ್ದನು. ದಶರಥನು ನಿಲ್ಲುನಿಲ್ಲೆಂದು ಹಿಂದೆ ಕೂಗಿಕೊಳ್ಳುತಿದ್ದನು. ಸುಮಂತ್ರನಿಗೆ ಯಾವುದೊಂದೂ ತೋರಲಿಲ್ಲ. ರಥದ ಹಿಂದುಮುಂದಿನ ಚಕ್ರಗಳ ನಡುವೆ ಸಿಕ್ಕಿಕೊಂಡು ಅತ್ತಿತ್ತ ಚಲಿಸಲಾರದೆ ಭಯದಿಂದ ತತ್ತಳಿಸುತ್ತಿರುವ ಮನುಷ್ಯನಂತೆ,ಆ ಸಾರಥಿಯ ಮನಸ್ಸು ಈ ಉಭಯಸಂಕಟದಲ್ಲಿ ಸಿಕ್ಕಿಕೊಂಡು ತತ್ತಳಿಸುತ್ತಿತ್ತು.ಆಗ ರಾಮನು ಹೀಗೆ ಕಳವಳಿಸುತ್ತಿರುವ ಸಾರಥಿಯನ್ನು ನೋಡಿ "ಎಲೆ ಸೂತನೆ! ಇದೇಕೆ ಹೀಗೆ ಭಯಪಡುವೆ? ನೀನುರಥವನ್ನು ನಿಲ್ಲಿಸಬೇಡ!

ವೇಗದಿಂದ ಬಿಡು! ದಶರಥನಿಗೆ ಬೇರೆ ಬಗೆಯಿಂದ ಸಮಾಧಾನವನ್ನು ಹೇಳಬಹುದು. ಆತನಿಗೆ ತನ್ನ ಅಜ್ಞೆಯನ್ನು ನಡೆಸಲಿಲ್ಲವೆಂದು ನಿನ್ನಲ್ಲಿ ಕೋಪವುಂಟಾದರೂ ಅದನ್ನು ತಪ್ಪಿಸುವುದಕ್ಕೆ ಬೇರೆ ಉಪಾಯವುಂಟು. ಆತನು ನಿನ್ನನ್ನು ಒಂದುವೇಳೆ ಆಕ್ಷೇಪಿಸಿದರೆ "ನೀನು ಕೂಗಿದುದು ಈ ದೊಡ್ಡಗದ್ದಲದಲ್ಲಿ ಕಿವಿಗೆ ಬೀಳಲಿಲ್ಲ"ವೆಂದು ಆತನಿಗೆ ಸಮಾಧಾನವನ್ನು ಹೇಳಬಹುದು. ಹೀಗೆ ಸುಳ್ಳಾಡುವುದು ಪಾಪಕಾರ್ಯವೆಂದು ನೀನು ಶಂಕಿಸಬೇಡ. ಈ ಸುಳ್ಳನ್ನಾದರೂ ಹೇಳಬಹುದೇಹೊರತು, ಅವರ ದುಃಖವನ್ನು ನಾವು ನೋಡುತ್ತಿರುವುದು ಇನ್ನೂ ಪಾಪಕೃತ್ಯವು. ನಾನು ಅದನ್ನು ನೋಡಿ ಸಹಿಸಲಾರೆನು" ಎಂದನು. ಈ ಮಾತನ್ನು ಕೇಳಿ ಸುಮಂತ್ರನು, ರಥವನ್ನು ಹಿಂಬಾಲಿಸಿ ಬರುತಿದ್ದ ಅಂತಃಪುರಜನಗಳಿಗೆ ರಾಮನಿಂದ ಅನುಮತಿಯನ್ನು ಕೊಡಿಸಿ, ತನ್ನಷ್ಟಕ್ಕೆ ತಾನೇ ವೇಗದಿಂದ ಹೋಗುತ್ತಿರುವ ಕುದುರೆಗಳನ್ನು ಮತ್ತಷ್ಟು ವೇಗದಿಂದ ಓಡಿಸಲಾರಂಭಿಸಿದನು. ರಾಜಸಂಬಂಧಿಜನರೆಲ್ಲರೂ ರಾಮನ ರಥಕ್ಕೆ ಪ್ರದಕ್ಷಿಣಮಾಡಿ ಹಿಂತಿರುಗಿದರು. ಎಷ್ಟಾದರೇನು!* ಅಲ್ಲಿಂದ ಹಿಂತಿರುಗಿದ ಜನರ ದೇಹವುಮಾತ್ರವೇ ಪಟ್ಟಣಕ್ಕಭಿಮುಖವಾಗಿ ಬರುತಿತ್ತೇಹೊರತು, ಅವರ ಮನಸ್ಸೂ, ಕಣ್ಣೀರುಗಳೂ ಹಿಂತಿರುಗಲಿಲ್ಲ. ಇತ್ತಲಾಗಿ ಮಂತ್ರಿಗಳೆಲ್ಲರೂ ದಶರಥನನ್ನು ನೋಡಿ "ಎಲೈ ರಾಜನೆ! ಪ್ರಯಾಣಮಾಡಿಸಿ ಕಳುಹಿಸುವಾಗ, ಯಾವನನ್ನು ಪುನಃ ಶೀಘ್ರದಲ್ಲಿಯೇ ಹಿಂತಿರುಗಿ ಬರಬೇಕೆಂದು ಕೋರುವೆವೋ, ಆತನನ್ನು ಬಹುದೂರದವರೆಗೆ ಹಿಂಬಾಲಿಸಿ ಹೋಗಬಾರದೆಂದು ಹಿರಿಯರು ಹೇಳಿರುವರು. ಆದುದರಿಂದ ನಾವು ಇನ್ನುಮುಂದೆ ಅವನನ್ನನುಸರಿಸಿ ಹೋಗಬಾರದು"ಎಂದರು. ದುಃಖದಿಂದ ಬೆವತ ಮೈಯುಳ್ಳ

---

* ಇಲ್ಲಿ "ನ್ಯವರ್ತತ ಜನೋ ರಾಜ್ಞೋ ರಾಮಂ ಕೃತ್ವಾ ಪ್ರದಕ್ಷಿಣಂ । ಮನಸಾಪ್ಯಶ್ರುವೇಗೈಶ್ಚ ನ ನ್ಯವರ್ತತ ಮಾನುಷಂ" ಎಂದು ಮೂಲವು. ಇದರಲ್ಲಿ (ರಾಜ್ಞೋ ಜನಃ) ಎಂದರೆ ರಾಜಸಂಬಂಧಿಯಾದ ಅಂತಃಪುರಜನವು ತಮ್ಮ ದೇಹಮಾತ್ರವನ್ನು ಹಿಂತಿರುಗಿಸಿತೇಹೊರತು, ತಮ್ಮ ಕಣ್ಣೀರನ್ನೂ, ಮನಸ್ಸನ್ನೂ ತಿರುಗಿಸಲಾರದೇ ಹೋಯಿತೆಂದೂ, (ಮಾನುಷಂ) ಎಂದರೆ ಇತರಪೌರಜನವು ಆ ದೇಹವನ್ನೂ ತಿರುಗಿಸಲಾರದೆ ಹೋಯಿತೆಂದೂ ಮಹೇಶ್ವರತೀರ್ಥವ್ಯಾಖ್ಯಾನವು.

ವನಾಗಿಯೂ, ಕಂದಿದ ರೂಪವುಳ್ಳವನಾಗಿಯೂ ಇದ್ದ ಆ ದಶರಥನು, ಮಂತ್ರಿಗಳು ಹೇಳಿದ ಗುಣಯುಕ್ತವಾದ ಆ ಮಾತನ್ನು ಕೇಳಿ, ತನ್ನ ಪತ್ನಿಯರೊಡನೆ ಅಲ್ಲಿಯೇ ನಿಂತು, ರಾಮನ ರಥವು ಹೋಗುತಿದ್ದ ದಾರಿಯನ್ನೇ ನೋಡುತಿದ್ದನು. ಇಲ್ಲಿಗೆ ನಾಲ್ವತ್ತನೆಯ ಸರ್ಗವು.

---

{ಅಂತಃಪುರಸ್ತ್ರೀಯರ ವಿಲಾಪವು. ಪ್ರಜೆಗಳ ದುಃಖವು. ದುಶ್ಶಕುನಗಳು.}

ಪುರುಷಶ್ರೇಷ್ಠನಾದ ರಾಮನು, ಹೀಗೆ ತನ್ನ ಮಾತೆಯರಿಂದ ಪರಿವೃತನಾದ ತಂದೆಗೆ ಕೈಮುಗಿದು ಹೊರಟುಹೋದಮೇಲೆ, ಇತ್ತಲಾಗಿ ಸ್ತ್ರೀಸಮೂಹದಲ್ಲಿ ದೊಡ್ಡಪ್ರಲಾಪಧ್ವನಿಯುಂಟಾಯಿತು. ಅವರೆಲ್ಲರೂ "ಹೋ" ಎಂದು ಗಟ್ಟಿಯಾಗಿ ಗೋಳಿಡುತ್ತಾ, ರಾಮನನ್ನು ಕುರಿತು "ಅಯ್ಯೋ! ನಾವು ಇನ್ನು ಅನಾಥರಾಗಿಬಿಟ್ಟೆವು! ನಮಗೆ ಸಮಸ್ತಬಲವೂ ತಪ್ಪಿಹೋಯಿತು. ಹೀಗೆ ಶೋಚನೀಯಾವಸ್ಥೆಯಲ್ಲಿರುವ ನಮಗೆ ಇನ್ನು ಗತಿಯಾರು? ನಮ್ಮೆಲ್ಲರಿಗೂ ರಕ್ಷಕನಾಗಿಯೂ, ದಿಕ್ಕಾಗಿಯೂ ಇದ್ದ ರಾಮನು ನಮ್ಮನ್ನುಬಿಟ್ಟು ಎಲ್ಲಿಗೆ ಹೋಗುವನೋ? ನಾವು ಎಷ್ಟೇ ಬಯ್ದರೂ ಕೋಪಿಸುವವನಲ್ಲ. ನಮಗೆ ಕೋಪವುಂಟಾಗತಕ್ಕ ಕೆಲಸವನ್ನು ಆಗಲೇ ಬಿಟ್ಟುಬಿಡುತಿದ್ದನು ನಮ್ಮ ದುಃಖಕ್ಕೆ ತಾನೂ ಸಮಭಾಗಿಯಾಗಿಗುತಿದ್ದನು. ಹೀಗೆ ನಮ್ಮೆಲ್ಲರಿಗೂ ನಾಥನಾದ ರಾಮನು ಎಲ್ಲಿಯೋ ಹೊರಟುಹೋದನಲ್ಲಾ! ತನ್ನ ಹೆತ್ತತಾಯಿಯಾದ ಕೌಸಲ್ಯೆಯನ್ನು ಕಾಣುತಿದ್ದಂತೆಯೇ ನಮ್ಮನ್ನೂ ಎಷ್ಟೋ ಪ್ರೀತಿಯಿಂದ ಕಾಣುತಿದ್ದ ಅಂತಹ ಮಹಾನುಭಾವನು, ಎಲ್ಲಿಗೆ ಹೋದನೋ? ಕೈಕೇಯಿಯ ನಿರ್ಬಂಧಕ್ಕಾಗಿ ದಶರಥನು ಪ್ರೇರಿಸಿದುದರಿಂದ, ಸರ್ವಲೋಕಕ್ಕೂ ರಕ್ಷಕನಾದ ರಾಮನೇ ಕಾಡಿಗೆ ಹೊರಟನು. ಅವನು ಇನ್ನೆಲ್ಲಿರುವನೋ ? ದಶರಥನಿಗೆ ಸ್ವಲ್ಪವಾದರೂ ವಿವೇಕವಿಲ್ಲ ಸಮಸ್ತಜೀವಿಗಳಿಗೂ ಪ್ರಿಯನಾಗಿ, ಧರ್ಮಿಷ್ಠನಾಗಿ, ಸತ್ಯಸಂಧನಾಗಿರುವ ರಾಮನನ್ನೇ ಕಾಡಿನಲ್ಲಿರಬೇಕೆಂದು ಹೇಳಿದನಲ್ಲವೆ?" ಎಂದು, ಅಲ್ಲಿದ್ದ ಸ್ತ್ರೀಯರೆಲ್ಲರೂ ಕರುವನ್ನು ಕಾಣದ ಹಸುಗಳಂತೆ ದುಃಖದಿಂದ ತತ್ತಳಿಸುತ್ತ ರೋದನಮಾಡತೊಡಗಿದರು. ಮಹಾಭಯಂಕರವಾದ ಈ ಪ್ರಲಾಪ

ಧ್ವನಿಯನ್ನು ದಶರಥನೂ ಕೇಳಿದನು. ಮೊದಲೇ ಪುತ್ರಶೋಕದಿಂದ ಬೆಂದುಹೋಗುತ್ತಿರುವ ಆತನಿಗೆ ಇದು ಮತ್ತಷ್ಟು ದುಃಖವನ್ನು ಹೆಚ್ಚಿಸಿತು. ದುಃಖದಿಂದ ಆ ಅಯೋಧ್ಯಾವಾಸಿಗಳಲ್ಲಿ ಯಾರೊಬ್ಬರೂ ಯಾವುದೊಂದು ಕೆಲಸವನ್ನೂ ಮಾಡುತ್ತಿರಲಿಲ್ಲ. ಆಹಿತಾಗ್ನಿಗಳಾದವರು ಪ್ರತಿನಿತ್ಯವೂ ತಾವು ನಡೆಸಬೇಕಾದ ಅಗ್ನಿಹೋತ್ರವನ್ನೇ ನಿಲ್ಲಿಸಿಬಿಟ್ಟರು. ಆ ಪಟ್ಟಣದಲ್ಲಿ ಆ ದಿವಸ ಒಬ್ಬರಾದರೂ ಅಡಿಗೆಯನ್ನೇ ಮಾಡಲಿಲ್ಲ. ಪ್ರಜೆಗಳು ತಾವು ಮಾಡಬೇಕಾದ ಕಾರ್ಯವೆಲ್ಲವನ್ನೂ ನಿಲ್ಲಿಸಿಬಿಟ್ಟರು. * ಸೂರ್ಯನೂಕೂಡ ಇನ್ನೂ ಹೊತ್ತಿರುವಾಗಲೇ ಮುಳುಗಿಹೋದನು. ಆನೆಗಳು ತಮ್ಮ ಆಹಾರವನ್ನೇ ಬಿಟ್ಟುಬಿಟ್ಟುವು. ಹಸುಗಳು ಹಾಲುಕುಡಿಯುವುದಕ್ಕಾಗಿ ಬಂದ ಕರುಗಳನ್ನು ಒದ್ದು ತಳ್ಳುತಿದ್ದುವು. †ಬಹುಕಾಲದವರೆಗೆ ಮಕ್ಕಳಿಲ್ಲದೆ ಕೊನೆಗಾಲದಲ್ಲಿ ಒಬ್ಬ ಸೀಮಂತಪುತ್ರನನ್ನು ಪಡೆದ ಹೆಂಗಸಿಗೂಕೂಡ, ಆಗ ಮನಸ್ಸಿನಲ್ಲಿ ಸಂತೋಷವಿರಲಿಲ್ಲ. ‡ ಇಕ್ಷ್ವಾಕುಕುಲಕ್ಕೆ ಕೂಟಸ್ಥನಾಗಿ, ಆಕಾಶದಲ್ಲಿ ನಕ್ಷತ್ರರೂಪದಿಂದ ಜ್ವಲಿಸುತ್ತಿರುವ ತ್ರಿಶಂಕುವೂ, ಅಂಗಾರಕನೂ,

---

* ರಾಮನು ಸಮಸ್ತಪ್ರಪಂಚಕ್ಕೂ ಆತ್ಮಭೂತನಾಗಿರುವುದರಿಂದ, ಆತನಿಗೆ ದುಃಖವುಂಟಾದರೆ ಎಲ್ಲಕ್ಕೂ ದುಃಖವುಂಟಾದಂತೆಯೇ ಆಗಬೇಕಲ್ಲವೆ? ಇದರಿಂದ ಈ ರಾಮಾಯಣದಲ್ಲಿ ಹೇಳಲ್ಪಟ್ಟಿರುವ ವಿಷಯಗಳೆಲ್ಲವೂ ವಾಸ್ತವಾಂಶಗಳೆಂದೇ ಗ್ರಹಿಸಬೇಕು. (ಮಹೇಶ್ವರತೀರ್ಥರು.)

† ಇದಕ್ಕೆ, "ಪುತ್ರಂ ಪ್ರಥಮಜಂ ಲಬ್ಧ್ವಾ ಜನನೀ ನಾಭ್ಯನಂದತ!" ಎಂಬುದೇ ಮೂಲವು. ರಾಮನು "ಉತ್ಸವೇಷು ಚ ಸರ್ವೇಷು ಪಿತೇವ ಪರಿತುಷ್ಯತಿ" ಎಂಬಂತೆ ಮಕ್ಕಳು ಹುಟ್ಟಿದುದುಮೊದಲು, ತಂದೆಯಂತೆ ತೊಡೆಯಲ್ಲಿಟ್ಟು ಲಾಲಿಸತಕ್ಕವನು. ಅಂತಹ ರಾಮನೇ ಕಾಡಿಗೆ ಹೊರಟುಹೋದಮೇಲೆ, ತಮ್ಮ ಮಕ್ಕಳನ್ನು ಅಷ್ಟುಪ್ರೀತಿಯಿಂದ ಕಾಪಾಡತಕ್ಕವರಾರೆಂಬ ಭಾವವು ಇಲ್ಲಿ ಸೂಚಿತವಾಗುವುದು.

‡ ಇಲ್ಲಿ ತ್ರಿಶಂಕುವೆಂದರೆ ನಕ್ಷತ್ರರೂಪದಲ್ಲಿರುವ ಇಕ್ಷ್ವಾಕುಕುಲಕೂಟಸ್ಥನೆಂದು ತಿಳಿಯಬೇಕು. ಈತನಿಗೆ ಗ್ರಹವೆಂಬ ಸಂಕೇತವಿಲ್ಲದಿದ್ದರೂ, ಇತರಗ್ರಹಗಳ ನಡುವೆ ಸೇರಿರುವುದರಿಂದ, ಆ ವ್ಯವಹಾರವೇ ಇವನಿಗೂ ಉಪಯೋಗಿಸಲ್ಪಟ್ಟಿರುವುದು. ಒಂದು ಜನಸಮೂಹದಲ್ಲಿ ಒಬ್ಬನುಮಾತ್ರ ಕೊಡೆಯನ್ನು ಹಿಡಿದಿದ್ದರೂ, ಆ ಜನರೆಲ್ಲರಿಗೂ ಛತ್ರಿಗಳೆಂಬ ವ್ಯಪದೇಶವಿರುವಂತೆ ಇದನ್ನೂ ಗ್ರಹಿಸಬೇಕು.

ಬೃಹಸ್ಪತಿಯೂ, ಬುಧನೂ, ಇನ್ನೂ ಇತರಗ್ರಹಗಳೂ ಕ್ರೂರದೃಷ್ಟಿ ಗಳೊಡನೆ ವಕ್ರಗತಿಯುಳ್ಳವುಗಳಾಗಿ, ಚಂದ್ರನೊಡಗೂಡಿದುವು. ನಕ್ಷತ್ರಗಳೂ, ಗ್ರಹಗಳೂ ಕಾಂತಿಹೀನವಾಗಿದ್ದುವು. * ಇಕ್ಷ್ವಾಕುದೇಶಕ್ಕೆ ಪ್ರಧಾನನಕ್ಷತ್ರಗಳಾದ ವಿಶಾಖೆಗಳು, ಹೊಗೆಸುತ್ತಿದಂತೆ ಮಲಿನವಾಗಿ ಕಾಣುತಿದ್ದುವು. ಮಹಾಮೇಘಪರಂಪರೆಯಿಂದ ಕೂಡಿದ ಬಿರುಗಾಳಿಯು ಬೀಸಿದಾಗ ಸಮುದ್ರವು ಉಲ್ಲೋಲಕಲ್ಲೋಲವಾಗಿ ಉಕ್ಕಿಬರುವಂತೆ, ಆ ಅಯೋಧ್ಯಾನಗರವೆಲ್ಲವೂ ಕ್ಷಣಮಾತ್ರದಲ್ಲಿ ಕದಲಿಹೋಯಿತು. ಮಹಾಂಧಕಾರವು ಕವಿದಂತೆ ದಿಕ್ಕುಗಳೆಲ್ಲವೂ ಕತ್ತಲೆಕವಿದಿದ್ದುವು. ಆಕಾಶದಲ್ಲಿ ಒಂದು ಗ್ರಹವಾಗಲಿ, ಒಂದುನಕ್ಷತ್ರವಾಗಲಿ ಮಿನುಗುತ್ತಿರಲಿಲ್ಲ. ಪುರಜನರೆಲ್ಲರೂ ಆಕಸ್ಮಿಕವಾದ ಈ ಮಹಾವ್ಯಸನದಲ್ಲಿ ಮುಳುಗಿಹೋಗಿದ್ದರು. ಊಟದಲ್ಲಿಯಾಗಲಿ,ಆಟದಲ್ಲಿಯಾಗಲಿ ಒಬ್ಬನಾದರೂ ಮನಸ್ಸುಕೊಡಲಿಲ್ಲ. ಒಬ್ಬೊಬ್ಬರೂ ದುಃಖದಿಂದ ನಿಟ್ಟುಸಿರನ್ನು ಬಿಡುತಿದ್ದರು. ಒಬ್ಬೊಬ್ಬರೂ ದಶರಥನ ದುರವಸ್ಥೆಯನ್ನು ನೋಡಿ ಸಂಕಟಪಡುತಿದ್ದರು. ಒಬ್ಬೊಬ್ಬರೂ ಬೀದಿಯಲ್ಲಿ ನಿಂತು ಕಣ್ಣೀರುಸುರಿಸುತಿದ್ದರು. ಯಾವನೊಬ್ಬನ ಮುಖದಲ್ಲಿಯೂ ಸಂತೋಷಚಿಹ್ನವೇ ಕಾಣದೆ, ಪ್ರತಿಯೊಬ್ಬರೂ ವ್ಯಸನದಲ್ಲಿ ಮುಳುಗಿದ್ದರು. ಮನುಷ್ಯರ ದುಃಖವು ಹಾಗಿರಲಿ! ಗಾಳಿಯೂ ತಂಪಾಗಿ ಬೀಸುತ್ತಿರಲಿಲ್ಲ. ಚಂದ್ರನಲ್ಲಿ ಸ್ವಲ್ಪವಾದರೂ ಸೌಮ್ಯತೆಯೇ ತೋರಲಿಲ್ಲ. ಸೂರ್ಯನಿಗೆ ಸ್ವಾಭಾವಿಕವಾಗಿದ್ದ ತಾಪವೂ ಅಡಗಿಹೋಯಿತು. ಜಗತ್ತೆಲ್ಲವೂ ತಮ್ಮ ತಮ್ಮ ಸ್ವಾಭಾವಿಕಸ್ಥಿತಿಯನ್ನು ಬಿಟ್ಟು ಕದಲಿಹೋದುವು. ಎಳಮಕ್ಕಳೂಕೂಡ ತಾಯಿಯಹಾಲನ್ನು ಕುಡಿಯಲೊಲ್ಲದೆಹೋದುವು. ವಿಶೇಷವಾದ ಪರಸ್ಪರಾನುರಾಗವುಳ್ಳ ಗಂಡಹೆಂಡಿರೂ ಒಬ್ಬರನ್ನೊಬ್ಬರು ಆದರಿಸುತ್ತಿರಲಿಲ್ಲ. ಆ

* ವಿಶಾಖಾನಕ್ಷತ್ರದಲ್ಲಿ ಹುಟ್ಟಿದ ಸೂರ್ಯನೇ ಇಕ್ಷ್ವಾಕುವಂಶಕ್ಕೆ ಮೂಲಭೂತನಾದುದರಿಂದಲೂ, ಆ ವಂಶದಲ್ಲಿ ಇಕ್ಷ್ವಾಕುವು ಹುಟ್ಟಿರುವುದರಿಂದಲೂ, ಅದಕ್ಕೆ ಇಕ್ಷ್ವಾಕುಕುಲನಕ್ಷತ್ರವೆಂದು ಪ್ರಸಿದ್ಧಿಯು. ಇದು ಹೊಗೆಯಾಡುವಂತೆ ಮಲಿನವಾಗಿ ಕಂಡುದರಿಂದ, ರಾಜನಿಗೆ ಸಂಭವಿಸಬಹುದಾದ ಮರಣವು ಸೂಚಿತವಾಗುವುದೆಂದೂ ಗ್ರಹಿಸಬೇಕು.

ಣ್ಣತಮ್ಮಂದಿರಲ್ಲಿದ್ದ ಸಹೋದರಪ್ರೀತಿಯೂ ತಪ್ಪಿಹೋಯಿತು. ಅಲ್ಲಿದ್ದವರೆಲ್ಲರೂ ತಮಗೆ ಬೇಕಾದುದೆಲ್ಲವನ್ನೂ ಬಿಟ್ಟು ರಾಮನೊಬ್ಬನನ್ನೇ ಚಿಂತಿಸಿ ಹಂಬಲಿಸುತಿದ್ದರು. ಇದಲ್ಲದೆ ರಾಮನಲ್ಲಿ ವಿಶೇಷಸ್ನೇಹವನ್ನು ಬಳೆಸಿ, ಆತನಿಗೆ ಪ್ರಿಯಮಿತ್ರರಾದವರೆಲ್ಲರೂ ಹುಚ್ಚುಹಿಡಿದವರಂತೆ ಹಿಂದುಮುಂದು ತೋರದೆ, ದುಃಖಾತಿಶಯದಿಂದ ಎದ್ದುನಿಲ್ಲಲಾರದೆ, ವ್ಯಾಧಿಪೀಡಿತರಂತೆ ಮಲಗಿದ್ದರು. ಹೀಗೆ ಮಹಾತ್ಮನಾದ ರಾಮನಿಂದ ಬಿಡಲ್ಪಟ್ಟ ಅಯೋಧ್ಯಾನಗರವು, ತ್ರಿಲೋಕಾಧಿಪತಿಯಾದ ಇಂದ್ರನಿಲ್ಲದ ಕಾಲದಲ್ಲಿ ಈ ಭೂಮಂಡಲವೆಲ್ಲವೂ ನಿರಾಶ್ರಯವಾಗಿ ವ್ಯಾಕುಲಪಡುವಂತೆ, ಭಯಶೋಕಗಳಿಂದ ಪೀಡಿತವಾಗಿ, ಗಜತುರಗಪದಾತಿಸೈನ್ಯಸಹಿತವಾಗಿ ಕಳವಳಿಸಿ, ದೊಡ್ಡಆಕ್ರಂದನಧ್ವನಿಯನ್ನು ಮಾಡುತಿತ್ತು. ಇಲ್ಲಿಗೆ ನಾಲ್ವತ್ತೊಂದನೆಯ ಸರ್ಗವು.

---

## ರಾಮನು ಕಾಡಿಗೆ ಹೋದಮೇಲೆ ದಶರಥನ ವಿಲಾಪವು.

ರಾಮನು ಪಟ್ಟಣವನ್ನು ಬಿಟ್ಟುಹೋಗುತ್ತಿರುವಾಗ. ಆತನ ರಥವೇಗದಿಂದುಂಟಾದ ಧೂಳಿನ ರಾಶಿಯು ಕಣ್ಣಿಗೆ ಕಾಣುತ್ತಿರುವವರೆಗೂ, ದಶರಥನು ಆ ಕಡೆಯನ್ನೇ ನೋಡುತಿದ್ದನೇ ಹೊರತು, ಅಲ್ಲಿ ನಟ್ಟದೃಷ್ಟಿಯನ್ನು ಅತ್ತಿತ್ತ ಕದಲಿಸಲೇ ಇಲ್ಲ. ಪ್ರಿಯಪುತ್ರನಾಗಿಯೂ, ಪರಮಧಾರ್ಮಿಕನಾಗಿಯೂ ಇರುವ ರಾಮನನ್ನು ಕಾಣದೆ ಸಂಕಟಪಡುತ್ತಿರುವ ದಶರಥನಿಗೆ, ಸ್ವಲ್ಪ ಕಾಲದವರೆಗಾದರೂ ಆಪ್ಯಾಯನವನ್ನುಂಟುಮಾಡುಬೇಕೆಂಬುದಕ್ಕಾಗಿ, ಆ ರಾಮನ ರಥದಿಂದ ದೊಡ್ಡ ಧೂಳಿಯು ಮೇಲಕ್ಕೆದ್ದು, ಆರಾಮನು ಹೋಗತಕ್ಕದಾರಿಯನ್ನು ದಶರಥನಿಗೆ ತೋರಿಸುತ್ತಿರುವಂತೆ, ದಶರಥನ ದೃಷ್ಟಿಯು ಬೀಳುವವರೆಗೂ ಆರಜಸ್ಸು ಸುತ್ತಲೂ ವ್ಯಾಪಿಸಿತು. ಕೊನೆಗೆ ರಾಮನ ರಥವೇಗದಿಂದುಂಟಾದ ಆ ರಜೋರಾಶಿಯೂಕೂಡ ಕಣ್ಣಿಗೆ ಬೀಳದಂತಾಗಲು, ದಶರಥನು ಮಹಾವ್ಯಸನದಲ್ಲಿ ಮುಳುಗಿದವನಾಗಿ, ಹಾಗೆಯೇ ಪ್ರಜ್ಞೆತಪ್ಪಿ ನೆಲದಮೇಲೆ ಬಿದ್ದನು. ಒಡನೆಯೇ ಕೌಸಲ್ಯೆಯು ಆತನನ್ನೆತ್ತಿ ಹಿಡಿಯುವುದಕ್ಕಾಗಿ ಅವನ ಬಲತೋಳನ್ನು ಹಿಡಿದಳು. ಎಡಭಾಗದಲ್ಲಿ ಕೈಕೇಯಿಯೂ

ಬಂದು ನಿಂತಳು. ಇಷ್ಟರಲ್ಲಿ ನೀತಿಜ್ಞನಾಗಿಯೂ, ಧಾರ್ಮಿಕನಾಗಿಯೂ, ಸದಾಚಾರಸಂಪನ್ನನಾಗಿಯೂ ಇರುವ ದಶರಥನು, ಸ್ವಲ್ಪಮಟ್ಟಿಗೆ ಪ್ರಜ್ಞೆ ಹೊಂದಿ,ತನ್ನ ಎಡಪಕ್ಕದಲ್ಲಿ ನಿಂತಿದ್ದ ಕೈಕೇಯಿಯನ್ನು ನೋಡಿ ಕೋಪದಿಂದ "ಎಲೆದುಷ್ಟೆ!ನೀನು ನನ್ನಮೈಯ್ಯನ್ನು ಮುಟ್ಟಬೇಡ!ನಿನ್ನನ್ನು ಕಣ್ಣೆತ್ತಿನೋ ಡುವುದಕ್ಕೂ ನನಗೆ ಇಷ್ಟವಿಲ್ಲ!ನೀನು ನನಗೆ ಹೆಂಡತಿಯೂಅಲ್ಲ! ನಿಗಗೆ ನಾನು ಗಂಡನೂ ಅಲ್ಲ! ನಿನಗೂ ನನಗೂ ರಕ್ತಸಂಬಂಧವೇ ಇಲ್ಲವೆಂದು ತಿಳಿ ! ನಿನ್ನ ವಿಷಯವು ಹಾಗಿರಲಿ. ನಿನ್ನನ್ನಾಶ್ರಯಿಸಿ ಜೀವಿಸುತ್ತಿರುವ ಪುರಜನರ ಭಾಗ ಕ್ಕೂ ನಾನಿಲ್ಲ ! ನನ್ನಭಾಗಕ್ಕೂ ಅವರಿಲ್ಲ ! ಕೇವಲ ಸ್ವಾರ್ಥಪರಳಾಗಿ ಧರ್ಮ ಮಾರ್ಗವನ್ನು ಬಿಟ್ಟಿರತಕ್ಕ ನಿನ್ನನ್ನು ನಾನು ತೊರೆದುಬಿಟ್ಟೆನೆಂದೇ ತಿಳಿ ! ಅಗ್ನಿಸಾಕ್ಷಿಕವಾಗಿ ಕೈಹಿಡಿದವಳನ್ನು ಹೇಗೆತೊರೆಯಬಲ್ಲೆನೆಂದು ನೀನು ಶಂಕಿಸಬೆಡ ? ನಿನ್ನನ್ನು ಕೈಹಿಡಿದು ನಿನ್ನೊಡಗೂಡಿ ಅಗ್ನಿಯನ್ನು ಪ್ರದಕ್ಷಿ ಣಮಾಡಿರುವೆನಾದರೂ, ಆ ಸಂಬಂಧವನ್ನೂ ಈಗ ತೊರೆದುಬಿಟ್ಟೆನು. ಅದ ರಿಂದನುಭವಿಸಬೇಕಾದ ಐಹಿಕಾಮುಷ್ಮಿಕಫಲಗಳಲ್ಲಿಯೂ ನನಗೆ ಅಕ್ಕರೆ ಯಿಲ್ಲ!ಭರತನು ಅಕ್ಷಯವಾದ ಈ ರಾಜ್ಯವನ್ನು ಪಡೆದು ಸ್ವೇಚ್ಛೆಯಾಗಿ ಸಂ ತೋಷಿಸುವುದೇ ನಿಜವಾದರೆ, ಆತನು ಇನ್ನುಮೇಲೆ ತಂದೆಯಾದ ನನಗೆ ಮಾಡಬೇಕಾದ ಜಲತರ್ಪಣಾದಿಕಾರ್ಯಗಳನ್ನೂ ನಡೆಸಬೇಕಾದುದಿಲ್ಲ. ಅಥ ವಾ ಒಂದುವೇಳೆ ಅವನು ಅದನ್ನು ನಡೆಸಿದರೂ ಅದು ನನಗೆ ಸೇರದು" ಎಂದನು. ಆಗ ಕೌಸಲ್ಯೆಯು ದುಃಖಿತಳಾಗಿ ಧೂಳಿನಿಂದ ಮಲಿನವಾದ ದೇಹವುಳ್ಳ ಆ ರಾಜನನ್ನು ಮೇಲಕ್ಕೆತ್ತಿ, ಆತನನ್ನು ಕೈಹಿಡಿದು ಕರೆದುಕೊಂ ಡು ಹಿಂತಿರುಗಿ ಹೋದಳು. ದಶರಥನಾದರೋ ತಾಪಸವೇಷವನ್ನು ಹಾಕಿಕೊಂಡಿದ್ದ ರಾಮನನ್ನು ಆಗಾಗ ಸ್ಮರಿಸಿಕೊಂಡು, ಬ್ರಹ್ಮಹತ್ಯೆಯನ್ನು ಮಾಡಿದವನಂತೆಯೂ, ಬೆಂಕಿಯನ್ನುಕೈಯಿಂದ ಮುಟ್ಟಿದವನಂತೆಯೂ,ಸಂ ಕಟದಿಂದ ಕೊರಗುತಿದ್ದನು. ರಾಮನ ರಥವು ಹೋದ ದಾರಿಯನ್ನೇ ಆಗಾ ಗ ತಿರುಗಿತಿರುಗಿ ನೋಡುತ್ತಿದ್ದನು. ಗ್ರಹಣಹಿಡಿದ ಸೂರ್ಯನಂತೆ ರೂಪುಗೆ ಟ್ಟವನಾಗಿ, ತನ್ನ ಪ್ರಿಯಪುತ್ರನನ್ನೇ ಸ್ಮರಿಸಿಕೊಂಡು ಅಳುತಿದ್ದನು.ಆಮೇ ಲೆ ರಾಮನು ಪಟ್ಟಣದ ಎಲ್ಲೆಯನ್ನು ದಾಟಿಹೋದನೆಂಬ ಸುದ್ದಿಯನ್ನುಕೇಳಿ

ದೊಡನೆ ಮಹಾಸಂಕಟದಿಂದ "ಅಯ್ಯೋ! ನನ್ನಮುದ್ದುಮಗನನ್ನು ಕರೆದು ಕೊಂಡುಹೋದ ಕುದುರೆಗಳ ಹೆಜ್ಜೆಯ ಗುರುತುಗಳನ್ನುಮಾತ್ರ ನೋಡಬೇಕಾಗಿ ಬಂದಿತೆ! ಇನ್ನು ಮಹಾತ್ಮನಾದ ರಾಮನನ್ನು ಕಾಣುವುದೆಲ್ಲಿ ? ಹಾಕಷ್ಟವೆ! ಉತ್ತಮವಾದ ಚಂದನವನ್ನು ಲೇಪಿಸಿಕೊಂಡು, ಅನೇಕಸ್ತ್ರೀಯರು ಸುತ್ತಲೂ ನಿಂತು ಚಾಮರವನ್ನು ಬೀಸುತ್ತಿರಲು, ಸುಪ್ಪತಿಗೆಯಮೇಲೆ ಸುಖವಾಗಿ ಮಲಗತಕ್ಕ ರಾಮನು, ಈಗ ಎಲ್ಲಿಯೋ ಒಂದುಸ್ಥಳದಲ್ಲಿ ಮರದಕೆಳಗೆ ಕಟ್ಟಿಗೆಯನ್ನಾಗಲಿ, ಅಥವಾ ಕಲ್ಲನ್ನಾಗಲಿ ತಲೆಗಿಟ್ಟುಕೊಂಡು ಮಲಗಬೇಕಾಗಿರುವುದಲ್ಲಾ ! ಹೀಗೆ ಮಲಗಿದ್ದು ಬೆಳಗಾದಮೇಲೆ ಹಾಸಿಗೆಯಿಂದೇಳುವಾಗ, ಗಿರಿನದಿಗಳ ಪಾರ್ಶ್ವದಲ್ಲಿ ಮಲಗಿದ್ದು ಮೇಲೇಳುವ ಮದದಾನೆಯಂತೆ, ಮಣ್ಣಿನಿಂದ ಮಲಿನವಾದ ಮೈಯುಳ್ಳವನಾಗಿ, ಆತನು ಅತಿಕಾರ್ಪಣ್ಯದಶೆಯಲ್ಲಿ ನಿಟ್ಟುಸಿರನ್ನು ಬಿಡುತ್ತಾ ಹೊರಟುಬರುತ್ತಿದ್ದರೆ,ದೀರ್ಘಬಾಹುವಾದ ಆತನನ್ನು,ನೋಡಿ ಕಾಡುಜನರೆಲ್ಲರೂ,ಈತನು ಲೋಕನಾಥನೆಂಬುದನ್ನರಿಯುವರೆ?ಅನಾಥನೆಂದೇ ಭಾವಿಸುವರು. ಇದರಲ್ಲಿ ಸಂದೇಹವೇ ಇಲ್ಲ. ಜನಕರಾಜನ ಪ್ರಿಯಪುತ್ರಿಯಾದ ಸೀತೆಯಾದರೋ ಸುಖದಿಂದಲೇ ಬಳೆದವಳು.ಕಷ್ಟವೆಂಬುದನ್ನು ಕಂಡವಳೇ ಅಲ್ಲ.ಅಂತವಳು ಈಗ ಕಲ್ಲುಮುಳ್ಳುಗಳಿಂದ ತುಂಬಿದ ಕಾಡಿನಲ್ಲಿ ಸುತ್ತಬೇಕಾಗಿ ಬಂದಿರುವುದು.ಆಕೆಯು ಕಾಡೆಂಬುದನ್ನು ಕನಸಿನಲ್ಲಿಯೂ ಕಂಡವಳಲ್ಲ. ಆ ಘೋರಾರಣ್ಯವನ್ನು ಕಂಡಮಾತ್ರದಲ್ಲಿಯೇ ಬೆಚ್ಚಿಬೀಳುವಳು. ಇದರಮೇಲೆ ಅಲ್ಲಲ್ಲಿ ಕ್ರೂರಮೃಗಗಳು ಗರ್ಜಿಸುತ್ತಿರುವುದನ್ನು ಕೇಳಿದರೆ, ಆಕೆಯ ಸ್ಥಿತಿಯನ್ನು ಹೇಳತಕ್ಕುದೇನು ? ಎಲೆ ಕೈಕೇಯಿ ! ನಿನ್ನ ಕೋರಿಕೆಯು ಕೈಗೂಡಿತೆ!ಗಂಡನಿಲ್ಲದ ಮುಂಡೆಯಾಗಿ ನೀನೇ ರಾಜ್ಯವನ್ನಾಳು!ಹೇಗಿದ್ದರೂ ಪುರುಷಶ್ರೇಷ್ಠನಾದ ಆರಾಮನನ್ನು ಬಿಟ್ಟುನನ್ನಜೀವವು ನಿಲ್ಲಲಾರದು!" ಎಂದು ಗಟ್ಟಿಯಾಗಿ ಗೋಳಿಡುತ್ತಾ, ತನ್ನ ಅನುಚರರೊಡಗೂಡಿ, * ಬಂಧುಮರಣಕ್ಕಾಗಿ ಸ್ನಾನಮಾಡಿ ಶ್ಮಶಾ

---

* ಇಲ್ಲಿ "ಅಪಸ್ನಾತ ಇವಾರಿಷ್ಟಂ ಪ್ರವಿವೇಶ ಪುರೋತ್ತಮಂ" ಎಂದು ಮೂಲವು. ಇಲ್ಲಿ ಮೃತಸ್ನಾನವನ್ನು ಮಾಡಿದವರಂತೆ ಪಟ್ಟಣವನ್ನು ಪ್ರವೇಶಿಸಿದನೆಂದು ಹೇಳಲ್ಪಟ್ಟಿತಲ್ಲವೆ ? ರಾಮನು ಜೀವಿತನಾಗಿರುವಾಗಲೇ ಆತನನ್ನು ದಾರಿಕಳುಹಿಸಿ

ನದಿಂದ ಹಿಂತಿರುಗಿ ಬಂದವರಂತೆ,ಅಮಂಗಳಕರವಾದ ಆ ಅಯೋಧ್ಯಾಪುರವ ನ್ನು ಪ್ರವೇಶಿಸಿದನು. ಆಗ ಅಯೋಧ್ಯಾಪಟ್ಟಣದ ದುಸ್ಥಿತಿಯನ್ನು ಹೇಳ ತಕ್ಕುದೇನು?ಅಲ್ಲಿನ ಚತುಷ್ಪಥಗಳೂ,ಮನೆಯಬಾಗಿಲುಗಳೂ ಹಾಳುಬಿದ್ದು, ನಿರ್ಜನವಾಗಿ ಕೇವಲಶೂನ್ಯಪ್ರದೇಶದಂತೆ ಕಾಣುತಿದ್ದುವು.ಆಪಟ್ಟಣದ ಅಂ ಗಡಿಬೀದಿಗಳಲ್ಲಿರುವ ದೇವಾಲಯಗಳೆಲ್ಲವೂ ಮುಚ್ಚಲ್ಪಟ್ಟಿದ್ದುವು. ಸಂಚಾರ ಶಕ್ತಿಯಿಲ್ಲದ ಕೇವಲದುರ್ಬಲರು ಮಾತ್ರವೇ ಅಲ್ಲಲ್ಲಿ ನಿಂತು ದುಃಖಿಸುತಿದ್ದ ರು.ದೊಡ್ಡದೊಡ್ಡರಾಜಮಾರ್ಗಗಳಲ್ಲಿಕೂಡ ಒಬ್ಬರಿಬ್ಬರೇ ನಿಂತಿದ್ದರು. ಹೀ ಗೆ ಹಾಳುಬಿದ್ದಂತಿರುವ ಆಪಟ್ಟಣವನ್ನುನೋಡಿ ದಶರಥನು,ರಾಮನನ್ನೇ ಚಿಂ ತಿಸಿ ಪ್ರಲಾಪಿಸುತ್ತ,ಮೇಘಮಂಡಲದಲ್ಲಿ ಮರೆಹುಗುವ ಸೂರ್ಯನಂತೆ ಕಾಂ ತಿಹೀನನಾಗಿ ಅರಮನೆಯನ್ನು ಪ್ರವೇಶಿಸಿದನು. ಮಡುವಿನಲ್ಲಿ ಬಹುಕಾಲದಿಂ ದ ಕಾವಲಿದ್ದ ಒಂದು ಮಹಾಸರ್ಪವನ್ನು ಗರುಡನು ಎತ್ತಿಕೊಂಡುಹೋದ ಮೇಲೆ, ಆಮಡುವಿನ ಸ್ಥಿತಿಯು ಹೇಗಿರಬಹುದೋ,ಹಾಗೆ ಸೀತಾರಾಮಲಕ್ಷ್ಮ ಣರಿಂದ ಶೂನ್ಯವಾದ ಆಮನೆಯು ಬಹಳ ದೀನದಶೆಯನ್ನುಹೊಂದಿದ್ದುದನ್ನು ನೋಡಿ,ಮೇಲೆಮೇಲೆ ಹೆಚ್ಚುತ್ತಿರುವ ವ್ಯಸನದಿಂದ ದಶರಥನು ಪ್ರಲಾಪಿಸು ತ್ತ ಒಳಕ್ಕೆ ಪ್ರವೇಶಿದನು. ಆಗ ದುಃಖಾತಿಶಯದಿಂದ ಆತನಕಂಠದಲ್ಲಿ ಸ್ವ ರವೇಹೊರಡಲಿಲ್ಲ! ಹೀಗಿದ್ದರೂ ಬಹುದೈನ್ಯದಿಂದ ಕುಗ್ಗಿದ ಧ್ವನಿಯುಳ್ಳವ ನಾಗಿ''ನನ್ನನ್ನು ಈಗಲೇ ರಾಮನತಾಯಿಯಾದ ಕೌಸಲ್ಯೆಯ ಅಂತಃಪುರಕ್ಕೆ ಕರೆದುಕೊಂಡು ಹೋಗಿರಿ! ಬೇರೆಲ್ಲಿಯೂ ನನ್ನ ಮನಸ್ಸಿಗೆ ಸಮಾಧಾನವಿ ರದು" ಎಂದನು. ಇದನ್ನು ಕೇಳಿ ದ್ವಾರಪಾಲಕರು ಆತನನ್ನು ಎತ್ತಿಕೊಂಡು

---

ಬಂದವರನ್ನು, ಮೃತಸ್ನಾನಮಾಡಿ ಬಂದವರಿಗೆ ಹೋಲಿಸುವುದು ಅಶ್ಲೀಲವಾದುದ ರಿಂದ, ಹೀಗೆ ಹೇಳುವುದು ಯುಕ್ತವಲ್ಲವಾದರೂ, ಆಗ ದಶರಥನು ''ನೂನಂ ಭಯ ಮುಪೈಷ್ಯತಿ" ಎಂದು ಸೀತೆಗೆ ವಿಪತ್ತನ್ನು ಶಂಕಿಸಿ, ತನ್ಮೂಲಕವಾಗಿ ರಾಮವಿಪತ್ತಿ ಯನ್ನೂ, ಅದರಿಂದ ತನಗೂ ಹಾನಿಯನ್ನೂ ಶಂಕಿಸಿದನು. ಈ ಶಂಕೆಯಿಂದಲೇ''ಸಕಾ ಮಾ ಭವ ಕೈಕೇಯಿ" ಎಂದೂ ''ವಿಧವಾ ರಾಜ್ಯಮಾವಸ" ಎಂದೂ ಹೇಳಿರುವನು. ಆದುದರಿಂದ ಇಲ್ಲಿ ಸೀತಾರಾಮಾದಿಗಳಿಗೆ ಮರಣವು ನಿಜವಾಗಿಲ್ಲದಿದ್ದರೂ, ದಶರಥನ ಬುದ್ಧಿಗೆ ಹಾಗೆ ತೋರಿಬಿಟ್ಟುದರಿಂದ, ಅದನ್ನನುಸರಿಸಿಯೇ ಕವಿಯು ಹೀಗೆ ಹೇಳಿರುವ ನೆಂದು ಗ್ರಹಿಸುವುದರಿಂದ ಆ ವಿಧವಾದ ಅಶ್ಲೀಲದೋಷವಿಲ್ಲವು.

ಹೋಗಿ, ಕೌಸಲ್ಯೆಯ ಅಂತಃಪುರದಲ್ಲಿಬಿಟ್ಟರು. ಅಲ್ಲಿ ಹಾಸಿಗೆಯಮೇಲೆ ಮಲಗಿಸಿಟ್ಟರೂ ಆತನ ಮನಸ್ಸಿಗೆ ಸಮಾಧಾನವಿರಲಿಲ್ಲ! ತನ್ನ ಇಬ್ಬರುಮಕ್ಕಳೂ, ಸೊಸೆಯೂ ಬಿಟ್ಟುಹೋದುದರಿಂದ, ಚಂದ್ರನಿಲ್ಲದ ಆಕಾಶದಂತೆ ಶೂನ್ಯವಾದ ಆ ಮನೆಯನ್ನು ನೋಡಿದೊಡನೆ ಆತನ ಮನಸ್ಸು ಮತ್ತಷ್ಟುಕದಲಿತು. ತಡೆಯಲಾರದಷ್ಟು ಮಹಾಸಂಕಟವುಂಟಾಯಿತು ಆತನು ಎಷ್ಟೋ ವೀರ್ಯವುಳ್ಳವನಾಗಿರಾಜಾಧಿರಾಜನೆನಿಸಿಕೊಂಡಿದ್ದರೂ,ಕೇವಲಸ್ತ್ರೀಮಾತ್ರಳಂತೆ ಎರಡುತೋಳುಗಳನ್ನೂ ಮೇಲಕ್ಕೆತ್ತಿ “ಹಾರಾಮಾ! ನನ್ನನ್ನು ಬಿಟ್ಟುಹೋದೆಯಾ?”ಎಂದು ಗಟ್ಟಿಯಾಗಿ ಕೂಗಿಕೊಳ್ಳುತ್ತ“ಅಯ್ಯೋ!ರಾಮನು ಹಿಂತಿರುಗಿ ಬಂದಮೇಲೆ, ಯಾರು ಆತನನ್ನು ಕಣ್ಣಾರನೋಡಿ, ಬಿಗಿಯಾಗಿ ಅಪ್ಪಿಕೊಂಡು ಆನಂದಿಸುವರೋ ಅವರೇ ಸುಖಿಗಳು. ಆದುವರೆಗೆ ಬದುಕಿರತಕ್ಕವರೇ ಮಹಾಭಾಗ್ಯಶಾಲಿಗಳು. ಈ ಮಹಾಭಾಗ್ಯವು ಯಾವ ಪುಣ್ಯಶಾಲಿಗಳಿಗೆ ಲಭಿಸುವುದೋ?ನನಗಂತೂ ಆ ಭಾಗ್ಯವಿರದು”ಎಂದು ಅಳುತಿದ್ದನು. ಹೀಗೆ ತನಗೆ ಪ್ರಳಯಕಾಲದ ರಾತ್ರಿಯಂತಿರುವ ಆ ರಾತ್ರಿಯನ್ನು ಬಹುಸಂಕಟದಿಂದ ಕಳೆಯುತ್ತ,ಅರ್ಧರಾತ್ರಿಸಮಯದಲ್ಲಿ ಕೌಸಲ್ಯೆಯನ್ನು ನೋಡಿ “ಎಲೆ *ಕೌಸಲ್ಯೆ! ಈಗ ನನಗೆ ಕಣ್ಣೇ ಕಾಣುವುದಿಲ್ಲ. ರಾಮನನ್ನು ಹಿಂಬಾಲಿಸಿ ಹೊ

---

* ಇದಕ್ಕೆ “ರಾಮಂ ಮೇऽನುಗತಾ ದೃಷ್ಟಿರದ್ಯಾಪಿ ನ ನಿವರ್ತತೇ। ನತ್ವಾಪಶ್ಯಾಮಿ ಕೌಸಲ್ಯೇ ಸಾಧು ಮಾ ಪಾಣಿನಾಸ್ಪೃಶ॥” ಎಂಬುದೇ ಮೂಲಶ್ಲೋಕವು. ಸಮುದ್ರದ ಅಲೆಯ ಸೆಳೆತಕ್ಕೆ ಸಿಕ್ಕಿದ ಪದಾರ್ಥಗಳು ಹೇಗೆ ಹಿಂತಿರುಗಿಬಾರವೋ. ಹಾಗೆ ಗುಣಸಮುದ್ರನಾದ ರಾಮನಿಂದ ಸೆಳೆಯಲ್ಪಟ್ಟ ನನ್ನ ನೇತ್ರೇಂದ್ರಿಯವು ಇನ್ನೂ ಹಿಂತಿರುಗಿ ಬಾರಲಿಲ್ಲವೆಂದು ಭಾವವು (ನತ್ವಾಪಶ್ಯಾಮಿ ಕೌಸಲ್ಯೇ) ರಾಮನ ದರ್ಶನವು ದುರ್ಲಭವಾದುದರಿಂದ ಆತನಿಗೆ ಹೆತ್ತ ತಾಯಿಯಾದ ನಿನ್ನನ್ನಾದರೂ ನೋಡಿ ಮನಸ್ಸಿಗೆ ಆಪ್ಯಾಯನವನ್ನು ತಂದುಕೊಳ್ಳುವೆನೆಂದರೆ, ಅದಕ್ಕೂ ಅವಕಾಶವಿಲ್ಲದಿದೆ. ಇದುವರೆಗೆ ಕೈಕೇಯಿಯ ಮುಖದರ್ಶನದಿಂದುಂಟಾದ ಮಹಾಪಾತಕವನ್ನು ನೀಗುವುದಕ್ಕಾಗಿ, ನಿನ್ನ ಮುಖವನ್ನು ನೋಡಬೇಕೆಂದು ಆತುರಪಡುತಿದ್ದ ನನಗೆ ಅದೂ ಲಭಿಸದೇ ಹೋಯಿತೆಂದು ಭಾವವು. (ಸಾಧು ಮಾಪಾಣಿನಾಸ್ಪೃಶ)ನನಗೆ ಈಗ ನೇತ್ರೇಂದ್ರಿಯವಂತೂ ಇಲ್ಲವೆಂಬುದು ಸ್ಪಷ್ಟವಾಯಿತು. ಸ್ಪರ್ಶೇಂದ್ರಿಯವಾದರೂ ಇರುವುದೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಬೇಕಾಗಿರುವುದರಿಂದ, ನೀನು ನನ್ನನ್ನು ಸ್ಪರ್ಶಿಸು”ಎಂದು ಹೇಳಿದುದಾಗಿಯೂ

ರಟುಹೋದ ನನ್ನ ದೃಷ್ಟಿಯು ಇದುವರೆಗೂ ಹಿಂತಿರುಗಿ ಬರಲಿಲ್ಲ. ಆದು

---

ಭಾವವು(ಸಾಧುಮಾ ಪಾಣಿನಾಸ್ಪೃಶ)ನೀನು ರಾಮನ ತಾಯಿಯಾದುದರಿಂದ,ಆತನನ್ನು ಅನವರತವೂ ಎತ್ತಿಕೊಂಡು ಮುದ್ದಾಡಿದ ಕೈಯಿಂದಾದರೂ ಈಗ ನನ್ನನ್ನು ಮುಟ್ಟಿದರೆ, ಅದು ನನಗೆ ರಾಮಸ್ಪರ್ಶದಂತೆಯೇ ಆಪ್ಯಾಯಕವಾಗುವುದರಿಂದ ನಿನ್ನ ಕೈಯಿಂದ ನನ್ನನ್ನು ಸ್ಪರ್ಶಿಸೆಂದೂ ಭಾವವು. (ಗೋವಿಂದರಾಜೀಯವು.)

ಅಥವಾ ಪಂಚೇಂದ್ರಿಯಗಳಲ್ಲಿ ಒಂದೊಂದು ಇಂದ್ರಿಯವೂ ಬೇರೆಬೇರೆಯಾಗಿ ಅನನ್ಯಾರ್ಹಶೇಷಭೂತಗಳಾಗಿ, ಈಗ ರಾಮನಿಗೆಹೊರತು ಇತರರಿಗೆ ಅಧೀನವಾಗವೆಂಬುದನ್ನೂ ಇಲ್ಲಿ ಸೂಚಿಸಿರುವುದಾಗಿ ತಿಳಿಯಬೇಕು. (ರಾಮಂ) ರಮಿಯಿಸತಕ್ಕವನು. ''ರಾಮಂ ರಮಯತಾಂ ವರಂ'' ಎಂಬಂತೆ, ಚೇತನಾಚೇತನಗಳೆಂಬ ವಿಭಾಗವಿಲ್ಲದೆ ಸಮಸ್ತಪ್ರಪಂಚವನ್ನೂ ತನ್ನಲ್ಲಿ ಪ್ರೇಮಪರವಶವನ್ನಾಗಿ ಮಾಡಿಕೊಳ್ಳತಕ್ಕವನಾದುದರಿಂದ,ಅಚೇತನವಾದ ನನ್ನ ಕಣ್ಣೂ ಕೂಡ ಅವನಿಂದ ಆಕರ್ಷಿಸಲ್ಪಟ್ಟಿರುವುದು ಎಲ್ಲಾಕಡೆಗಳಲ್ಲಿಯೂ ಚಕ್ಷುರಿಂದ್ರಿಯವೆಂಬುದು ರೂಪವನ್ನು ಗ್ರಹಿಸತಕ್ಕ ಶಕ್ತಿಯುಳ್ಳದಾಗಿದ್ದರೂ, ರಾಮನ ರೂಪವುಮಾತ್ರ ಚಕ್ಷುರಿಂದ್ರಿಯವನ್ನೇ ತನ್ನಕಡೆಗೆ ಎಳೆದುಕೊಂಡಿತೆಂದು ಭಾವವು. ಮತ್ತು ಅನುಗತವಾದ ವಸ್ತುಗಳನ್ನು ನೋಡುವುದಕ್ಕೆ ಮಾತ್ರವೇ ಶಕ್ತಿಯುಳ್ಳ ನೇತ್ರವು,ಈಗ ಆ ವಸ್ತುವನ್ನು ಹಿಂಬಾಲಿಸಿ ಹೋಗುವುದಕ್ಕೂ ಸಮರ್ಥವಾಯಿತು. ''ಕಾಮರೂಪ್ಯನುಸಂಚರನ್'' ಕಾಮರೂಪವನ್ನು ಹೊಂದಿ ಹಿಂಬಾಲಿಸಿ ತಿರುಗುತ್ತಿರುವುವೆಂಬ, ಚೇತನರ ಕಾರ್ಯವನ್ನು ಅಚೇತನಗಳೂ ಮಾಡುವುವೆಂದು ಭಾವವು. ಮತ್ತು ದೇಶಾಂತರವಾದ ಪರಮಪದದಲ್ಲಿ ಮಾಡಲ್ಪಡುವ ಅನುಗಮನವು ಈ ಸಂಸಾರಚಕ್ರದಲ್ಲಿಯೂ ರಾಮನ ವಿಷಯವಾಗಿ ನಡೆಸಲ್ಪಡುವುದೆಂದರ್ಥವು. ಅಥವಾ ''ಚಕ್ಷುರ್ದೇವಾನಾಮುತ ಮರ್ತ್ಯಾನಾಂ'' ಎಂಬಂತೆ, ದೇವಮನುಷ್ಯಾದಿಸಮಸ್ತಪ್ರಪಂಚಕ್ಕೂ ಪ್ರಧಾನದೃಷ್ಟಿಯೆನಿಸಿಕೊಂಡಿರುವವನು ಮುಂದೆ ಹೋಗುತ್ತಿರುವಾಗ, ತಾನು ಹೋಗದಿರಬಾರದೆಂದೆಣಿಸಿ ತನ್ನ ದೃಷ್ಟಿಯೂ ಅತನನ್ನು ಹಿಂಬಾಲಿಸಿತೆಂದೂ ಭಾವವು. (ದೃಷ್ಟಿಃ) ಎಂಬ ಪದದಿಂದ, ''ದೃಶಿರ್ ಪ್ರೇಕ್ಷಣೇ'' ಎಂಬ ವ್ಯುತ್ಪತ್ತಿಯನ್ನನುಸರಿಸಿ, ಸಾರಾಸಾರವಿವೇಚನೆಯಿಂದ ವಿಶೇಷವನ್ನು ಗ್ರಹಿಸತಕ್ಕುದಾದುದರಿಂದಲೇ, ರಾಮನನ್ನು ಹಿಂಬಾಲಿಸಿತೆಂದು ಭಾವವು. (ಮೇ ದೃಷ್ಟಿರದ್ಯಾಪಿ ನ ನಿವರ್ತತೇ); ಇನ್ನೂ ಹಿಂತಿರುಗಲಿಲ್ಲವೆಂಬುದರಿಂದ,ತಾನು ಹಿಂತಿರುಗಿ ಬಂದರೆ ಮಹಾಪಾಪಿನಿಯಾದ ಕೈಕೇಯಿಯಲ್ಲಿ ಪುನಃ ಬೀಳಬೇಕಾಗುವುದೆಂಬ ಭಯಕ್ಕಾಗಿ ಇನ್ನೂ ನನ್ನಲ್ಲಿಗೆ ಬಂದು ಸೇರದಿರುವುದೆಂದೂ ಭಾವವು.ಮತ್ತು(ದೃಷ್ಟಿರದ್ಯಾಪಿ ನ ನಿವರ್ತತೇ

ದರಿಂದ ನೀನು ಪ್ರತ್ಯಕ್ಷದಲ್ಲಿದ್ದರೂ ನನ್ನ ಕಣ್ಣಿಗೆ ಬೀಳುವುದಿಲ್ಲ. ನನ್ನಲ್ಲಿ ನಿನಗೆ

---

ಊರನ್ನು ಬಿಟ್ಟು ಹೋಗೆತಕ್ಕ ರಾಮನನ್ನು ಹಿಂತಿರುಗಿಸಲಾರದೆಂಬುದುಮಾತ್ರವಲ್ಲ. ಈ ಪುರಜನರಂತೆ ತಾನಾದರೂ ಹಿಂತಿರುಗಿ ಬಾರದಿರುವುದೆಂದರ್ಥವು. ಮತ್ತು (ರಾಮಂಮೇನು ಗತಾದೃಷ್ಟಿರ್ನ ನಿವರ್ತತೇ) ಆ ರಾಮನನ್ನು ಅನುಸರಿಸಿ ಹೋದ ದೃಷ್ಟಿಯೂ ಹಿಂತಿರುಗುವುದಿಲ್ಲ" ಎಂಬುದರಿಂದ, "ನಚ ಪುನರಾವರ್ತತೇ" ಎಂಬಂತೆ ಆತನನ್ನು ಅನುವರ್ತಿಸಿದವರಿಗೆ ಪುನರಾವೃತ್ತಿಯೇ ಇಲ್ಲವೆಂಬರ್ಥವೂ ಸೂಚಿತವಾಗುವುದು. ಮತ್ತು (ನ ತ್ವಾಪಶ್ಯಾಮಿ) ಕೈಕೇಯಿಯ ಮಾತಿಗೆ ಮರುಳಾಗಿ ರಾಮನಿಗೆ ವನವಾಸವನ್ನು ನಿಯಮಿಸಿ, ಆತನ ಕಷ್ಟಕ್ಕೆ ತಾನೇ ಮುಖ್ಯಕಾರಣನಾಗಿರುವಾಗಲೂ ದಶರಥನು "ತನ್ನ ಕಣ್ಣುಗಳು ರಾಮನನ್ನು ಹಿಂಬಾಲಿಸಿ ಇನ್ನೂ ಹಿಂತಿರುಗಲಿಲ್ಲ" ವೆಂದು ಹೇಳುವುದು ಕೇವಲಸಮಾಧಾನವಾಕ್ಯಗಳೇಹೊರತು ನಿಜವಲ್ಲವೆಂದು ಕೌಸಲ್ಯೆಯು ಶಂಕಿಸಬಹುದೆಂಬುದಕ್ಕಾಗಿ (ನೆತ್ವಾ ಪಶ್ಯಾಮಿ) ನಿನ್ನನ್ನೂ ನಾನು ಕಾಣುವುದಿಲ್ಲವೆಂದು ಅದನ್ನೇ ನಿರ್ಧರಿಸುವನು. ನನ್ನ ಚಕ್ಷುರಿಂದ್ರಿಯವು ನನ್ನಲ್ಲಿಯೇ ಇದ್ದಿದ್ದರೆ, ಮುಂದೆ ನಿಂತಿರುವ ನಿನ್ನನ್ನು ನಾನು ಎಂದಿಗೂ ಕಾಣದಿರಲಾರೆನು. ಇದಿರಿಗಿರುವ ನೀನೇ ನನ್ನ ಕಣ್ಣಿಗೆ ಗೋಚರಿಸದಿರುವುದರಿಂದ, ಆ ಇಂದ್ರಿಯವು ನನ್ನನ್ನು ಬಿಟ್ಟು ಹೋಗಿಯೇ ಇರಬೇಕೆಂದು ಭಾವವು (ಸಾಧು ಮಾ ಪಾಣಿನಾ, ಸ್ಪೃಶ) ರಾಮನ ಸ್ಪರ್ಶವಿದ್ದರೆಮಾತ್ರವೇ ಬದುಕಿರಬಲ್ಲವನಾಗಿಯೂ. ಅದಿಲ್ಲದಿದ್ದರೆ ನಾಶಹೊಂದುವವನಾಗಿಯೂ ಇರುವ ನನ್ನನ್ನು ನಿನ್ನ ಕೈಯ್ಯಿಂದ ಮುಟ್ಟಿಯಾದರೂ ಬದುಕಿಸೆಂದು ಭಾವವು. ಭಗವಂತನ ಸ್ಪರ್ಶವು ಲಭಿಸದಿದ್ದರೂ, ಆತನ ಸಂಬಂಧಿಸಂಬಂಧಿಗಳ ಸ್ಪರ್ಶವಾದರೂ ಲಭಿಸಿದರೆ, ಉಜ್ಜೀವಿಸಿಕೊಳ್ಳಬಹುದಲ್ಲವೆ? ಅದರಂತೆಯೇ ರಾಮಸ್ಪರ್ಶವಿಲ್ಲದಿದ್ದಾಗ ತತ್ಸಂಬಂಧಿಯಾದ ನಿನ್ನ ಕರಸ್ಪರ್ಶವಾದರೂ ನನ್ನನ್ನು ಬದುಕಿಸಬಲ್ಲುದಾದುದರಿಂದ, ನನ್ನನ್ನು ನಿನ್ನ ಕೈಯಿಂದ ಮುಟ್ಟಬೇಕೆಂದು ಕೇಳಿದುದಾಗಿ ಭಾವವು. ರಾಮನೂಕೂಡ ಹೀಗೆಯೇ ಸೀತಾವಿಯೋಗದಲ್ಲಿ "ವಾಹಿ ವಾತ ಯತ: ಕಾಂತಾ" ಎಲೈ ಗಾಳಿಯೆ ! ಸೀತೆಯಿದ್ದ ಕಡೆಯಲ್ಲಿ ಬೀಸು! "ತಾಂ ಸ್ಪೃಷ್ಟ್ವಾ ಮಾಮಪಿ ಸ್ಪೃಶ" ಆಕೆಯನ್ನು ಮುಟ್ಟಿಬಂದು ಆಮೇಲೆ ನನ್ನನ್ನೂ ಮುಟ್ಟು ! ಎಂದು ಹೇಳಿರುವನು. ಅದರಂತೆ ತನ್ನಪ್ರಿಯವಸ್ತುವಿಲ್ಲದ ಕಾಲದಲ್ಲಿ, ತತ್ಸಂಬಂಧಿಯಾದವರ ದರ್ಶನಾದಿಗಳಿಂದಲಾದರೂ ಅಪ್ಯಾಯನವನ್ನು ಹೊಂದುವುದು ಸಹಜವು ಜನ್ಮಾಂತರಸುಕೃತವಶದಿಂದ ಕೌಸಲ್ಯಾದಶರಥರಿಗೆ ಶ್ರೀರಾಮನಲ್ಲಿ ಪರತ್ವಜ್ಞಾನವುಂಟಾಗಿರಬಹುದಾದರೂ, ಅವರಿಬ್ಬರೂ ಹೀಗೆ ಆತನ ಪರತ್ವವನ್ನು ನಿಷ್ಕೃಷ್ಟವಾಗಿ ಅನುಸಂಧಿಸಿ ಮಾತಾಡುವುದುಚಿತವೆ? ಎಂದರೆ, ಇಲ್ಲಿ ವಾ

ಎಷ್ಟೇ ಕೋಪವಿದ್ದರೂ ಬಿಟ್ಟು, ದಯೆಯಿಂದ ನನ್ನ ಮೈಯ್ಯನ್ನು ನಿನ್ನ ಕೈಯ್ಯಿಂದ ಸ್ಪರ್ಶಿಸು.ಅದರಿಂದಲಾದರೂ ನನ್ನ ಸಂಕಟವು ಸ್ವಲ್ಪಮಟ್ಟಿಗೆ ತಗ್ಗುವುದೋ ನೋಡುವೆನು"ಎಂದನು. ಹೀಗೆ ಹಾಸಿಗೆಯಲ್ಲಿ ಮಲಗಿ, ರಾಮನನ್ನೇ ಹಂಬಲಿಸುತ್ತಿರುವ ರಾಜನನ್ನು ನೋಡಿ, ಕೌಸಲ್ಯೆಯು ಆತನ ಸಮೀಪದಲ್ಲಿ ಬಂದು ಕುಳಿತು,ತಾನೂ ವ್ಯಸನವನ್ನು ತಡೆಯಲಾರದೆ ಆಗಾಗ ನಿಟ್ಟುಸಿರನ್ನು ಬಿಡುತ್ತಾ ವಿಲಪಿಸುತಿದ್ದಳು. ಇಲ್ಲಿಗೆ ನಾಲ್ವತ್ತೆರಡನೆಯ ಸರ್ಗವು.

---

ಕೌಸಲ್ಯೆಯು ದಶರಥನೊಡನೆ ರಾಮನ ಗುಣಗಳನ್ನು ಹೇಳಿ ದುಃಖಿಸಿದುದು.

'ಹಾಗೆಯೇ ಕೌಸಲ್ಯೆಯೂ ಪುತ್ರಶೋಕದಿಂದ ಪೀಡಿತಳಾಗಿ, ಹಾಸಿಗೆಯಲ್ಲಿ ದುಃಖದಿಂದ ಮಲಗಿರುವ ದಶರಥನನ್ನು ನೋಡಿ, "ಆರ್ಯನೆ ! ಕೈಕೇಯಿಯು ಪುರುಷಶ್ರೇಷ್ಠನಾದ ರಾಮನಿಗೆ ತನ್ನ ಕುಟಿಲಸ್ವಭಾವವೆಂಬ ವಿಷವನ್ನು ಪ್ರಯೋಗಿಸಿಬಿಟ್ಟಳು. ಪರೆಯನ್ನು ಸುಲಿದ ಹಾವಿನಂತೆ ಇನ್ನು ಅವಳು ಸುಖವಾಗಿ ವಿಹರಿಸಬಹುದು.ಒಳಗೆ ವಿಷವನ್ನು ತುಂಬಿಕೊಂಡಿದ್ದರೂ, ಮೇಲೆಮಾತ್ರ ಮನೋಹರಾಕಾರವುಳ್ಳ ಆಕೆಯು, ರಾಮನನ್ನು ಕಾಡುಪಾಲುಮಾಡಿ ತನ್ನ ಕೋರಿಕೆಯನ್ನು ಕೈಗೂಡಿಸಿಕೊಂಡುಬಿಟ್ಟಳು. ಮನೆಯೊಳಗೆ ಸೇರಿಕೊಂಡಿರುವ ಕೆಟ್ಟ ಹಾವಿನಂತೆ ಇನ್ನು ಮೇಲೆ ನಮಗೂ ಯಾವ ಅಪಾಯವನ್ನು ತರುವಳೋ ಎಂದು ಭಯಪಡಬೇಕಾಗಿದೆ! ಭರತನಿಗೆ ಅವಶ್ಯವಾಗಿ ರಾಜ್ಯವನ್ನು ಕೊಡಿಸಬೇಕೆಂದು ಆಕೆಗೆ ಉದ್ದೇಶವಿದ್ದರೂ, ನನ್ನ ಮಗನಾದ ರಾಮನನ್ನು ಕಾಡಿಗೆ ಕಳುಹಿಸಿದುದೇಕೋ ಕಾಣೆನು! ಒಂದುವೇಳೆ ರಾಮನನ್ನು ಅರಮನೆಗೆ ಸೇರಿಸದೆ,ಆತನಿಗೆ ಅನ್ನವನ್ನೂ ಹಾಕದೆ ಈ ಪಟ್ಟಣದಲ್ಲಿ ಮನೆಮನೆಗೆ ಹೋಗಿ ಭಿಕ್ಷೆಯೆತ್ತಿ ಜೀವಿಸಬೇಕೆಂದು ಹೇಳಿದ್ದರೂ ಉತ್ತಮವಾಗಿತ್ತು. ಅಥವಾ ಭರತನಿಗೆ ದಾಸ್ಯವನ್ನು ಮಾಡುತ್ತಿರಬೇಕೆಂದು ಹೇಳಿ

---

ಲ್ಲೀಕಿಯು, ದಶರಥಾದಿಗಳು ಮಾತಾಡಿಕೊಂಡರೆಂಬ ವ್ಯಾಜದಿಂದ, ಮಾತುಮಾತಿಗೂ ತಾನೇ ಆ ಪರತ್ವವನ್ನು 'ಅನುಸಂಧಿಸುವನೇಹೊರತು ಬೇರೆಯಲ್ಲವೆಂದು ಗ್ರಹಿಸಬೇಕು.

ದ್ದರೂ ಮೇಲಾಗಿತ್ತು-ಇದೆಲ್ಲವನ್ನೂ ಬಿಟ್ಟು ಆತನನ್ನು ಕಾಡಿಗೆ ಕಳುಹಿಸಬೇಕೆಂದೇ ಹಟಹಿಡಿದಳಲ್ಲವೆ? ಈ ಪುತ್ರವಿರಹವನ್ನನುಭವಿಸುವುದಕ್ಕಿಂತಲೂ ರಾಮನು ಇಲ್ಲಿ ಭಿಕ್ಷೆಯೆತ್ತಿ ಜೀವಿಸುತಿದ್ದರೆ, ಆ ಅವಮಾನವನ್ನಾದರೂ ನಾನು ಸಹಿಸಿಕೊಳ್ಳುತಿದ್ದೆನು. ಆಗಾಗ ಆತನನ್ನು ಕಣ್ಣಿನಿಂದಲಾದರೂ ನೋಡಬಹುದಾಗಿತ್ತು. ಆಹಿತಾಗ್ನಿಯಾದವನು ಪ್ರತಿದಿವಸವೂ ದೇವತೆಗಳಿಗೆ ಕೊಡಬೇಕಾದ ಹವಿರ್ಭಾಗವನ್ನು ತಪ್ಪಿಸಿ, ಅದನ್ನು ರಾಕ್ಷಸರಿಗೆ ಕೊಡುವಂತೆ, ರಾಮನಿಗೆ ಸೇರಬೇಕಾದ ರಾಜ್ಯವನ್ನು ನೀನು ಕೈಕೇಯಿಗೆ ಕೊಟ್ಟುಬಿಟ್ಟೆ ! ಆನೆಯಂತೆ ಗಂಭೀರವಾದ ನಡೆಯುಳ್ಳವನಾಗಿ, ಮಹಾವೀರನಾಗಿ, ಆಜಾನುಬಾಹುವಾಗಿ, ಧನುರ್ಧಾರಿಗಳಲ್ಲಿ ಮೇಲೆನಿಸಿಕೊಂಡ ಆ ರಾಮನೂಕೂಡ, ತನ್ನ ಹೆಂಡತಿಯನ್ನೂ ತಮ್ಮನನ್ನೂ ಸಂಗಡಕರೆದುಕೊಂಡು, ಕಾಡುಪಾಲಾಗಿ ಹೊರಟುಹೋದನು. ಆ ಕೈಕೇಯಿಯ ಮಾತಿಗೆ ಮರುಳಾಗಿ, ನೀನೂ ಹಿಂದುಮುಂದನ್ನು ತಿಳಿಯದೆ,ಕಾಡೆಂಬುದನ್ನೇ ಕಂಡರಿಯದ ಆಸೀತೆಯನ್ನೂ, ರಾಮಲಕ್ಷ್ಮಣರನ್ನೂ ಹೀಗೆ ಭಯಂಕರವಾದ ದುಃಖಕ್ಕೆ ಗುರಿಮಾಡಿದೆಯಲ್ಲವೆ! ಇನ್ನು ಅವರ ಗತಿಯೇನು?ಅವರೆಲ್ಲರೂ ಬಹಳ ಎಳಪ್ರಾಯದವರು. ಸಮಸ್ತ ಭೋಗಫಲಗಳನ್ನೂ ಸ್ವೇಚ್ಛೆಯಾಗಿ ಅನುಭವಿಸತಕ್ಕ ಈ ಕಾಲದಲ್ಲಿ ಸರ್ವೋತ್ತಮವಾದ ಈ ಭೋಗಸಾಮಗ್ರಿಗಳೆಲ್ಲವನ್ನೂ ಬಿಟ್ಟು, ಕಾಡಿನಲ್ಲಿ ಗೆಡ್ಡೆಗೆಣಸುಗಳನ್ನೂ, ಹಣ್ಣುಗಳನ್ನೂ ತಿಂದು ಕಾರ್ಪಣ್ಯದಿಂದ ಜೀವಿಸಬೇಕೆಂದರೆ, ಅವರಿಂದ ಹೇಗೆ ತಾನೇ ಸಾಧ್ಯವು? ರಾಮನು ಸೀತಾಲಕ್ಷ್ಮಣರೊಡಗೂಡಿ ಹಿಂತಿರುಗಿ ಇಲ್ಲಿಗೆ ಬಂದಮೇಲೆ ನನ್ನ ದುಃಖವೆಲ್ಲವೂ ನೀಗಿ,ಅವರನ್ನು ಕಣ್ಣಾರೆ ನೋಡಿ ಆನಂದಿಸತಕ್ಕ ಒಳ್ಳೇಕಾಲವು ಈಗಲೇ ನನಗೆ ಲಭಿಸಬಾರದೆ? ಮಲಗಿದ್ದು ಎದ್ದುಬಂದವರಂತೆ ಆ ವೀರರಿಬ್ಬರೂ ಕಾಡಿನಿಂದ ಸುಖವಾಗಿ ಹಿಂತಿರುಗಿ ಅಯೋಧ್ಯೆಯ ಸಮೀಪಕ್ಕೆ ಬಂದುದನ್ನು ಕೇಳಿ ಈ ಪುರಜನರೆಲ್ಲರೂ ಸಂತೋಷದಿಂದ ಮಂಗಳಧ್ವಜಗಳನ್ನು ಕಟ್ಟಿ, ಈ ಪಟ್ಟಣವನ್ನು ಅಲಂಕರಿಸುವ ಕಾಲವು ಎಂದಿಗೆ ಬರುವುದೋ? ಕಾಡಿನಿಂದ ಹಿಂತಿರುಗಿ ಬಂದ ರಾಮಲಕ್ಷ್ಮಣರನ್ನು ನೋಡಿ ಈ ಪುರಜನರೆಲ್ಲರೂ ಪರ್ವಕಾಲದಲ್ಲಿ ಸಮುದ್ರವು ಹೇಗೋ ಹಾಗೆ ಸಂತೋಷದಿಂದುಬ್ಬುವ ಕಾಲವು ಯಾವಾಗ

ಪ್ರಾಪ್ತವಾಗುವುದೋ!? ಮಹಾಬಾಹುವಾದ ಆ ವೀರನು ಧೇನುವಿನೊಡ ಗೂಡಿದ ವೃಷಭದಂತೆ ರಥದಲ್ಲಿ ಸೀತೆಯನ್ನು !ಮುಂದಿಟ್ಟುಕೊಂಡು, ಈ ಪಟ್ಟಣವನ್ನು ಯಾವಾಗ ಪ್ರವೇಶಿಸುವನೋ? ವೀರನಾದ ನನ್ನ ಕುಮಾರನು ಪುರಪ್ರವೇಶವನ್ನು ಮಾಡುವಾಗ, ರಾಜಬೀದಿಯಲ್ಲಿ ಸಾವಿರಾರುಜನರು ಗುಂಪುಕೂಡಿ ಬಂದು, ಅವನಮೇಲೆ ಮಂಗಳಾರ್ಥವಾಗಿ ಅರಳುಗಳನ್ನು ಯಾವಾಗ ಚೆಲ್ಲುವರೋ?ಉತ್ತಮವಾದ ಕರ್ಣಕುಂಡಲಗಳನ್ನಿಟ್ಟು, ಮೇಲಾದ ಕತ್ತಿಯನ್ನೂ ಬಿಲ್ಲನ್ನೂ ಧರಿಸಿ, ಶಿಖರಗಳಿಂದ ಕೂಡಿದ ಎರಡುಬೆಟ್ಟಗಳಂತೆ ಮಹಾವೀರರಾದ ರಾಮಲಕ್ಷ್ಮಣರು ಯಾವಾಗ ಪುರಪ್ರವೇಶಮಾಡುವುದನ್ನು ನಾನು ನೋಡುವೆನೋ? ಆ ರಾಮಲಕ್ಷ್ಮಣರು ಪುರಪ್ರವೇಶಮಾಡುವಾಗ,ಮಂಗಳಾರ್ಥವಾಗಿ *ಕನ್ಯಕೆಯರು ತಮಗೆ ತಂದುಕೊಡತಕ್ಕ ಪುಷ್ಪಮಾಲಿಕೆಗಳನ್ನೂ, ಬ್ರಾಹ್ಮಣರು ತಂದುಕೊಡತಕ್ಕ ಫಲಗಳನ್ನೂ ಪ್ರೀತಿಯಿಂದ ಸ್ವೀಕರಿಸಿ, ಯಾವಾಗ ಸಂತೋಷದಿಂದ ಪುರಪ್ರದಕ್ಷಿಣೆಯನ್ನು ಮಾಡುವರೋ? ರಾಮನ ವಯಸ್ಸನ್ನು ನೋಡಿದರೆ ದೇವತೆಗಳಂತೆ ಕಾಣುತ್ತಿರುವನಾದರೂ ಜ್ಞಾನದಲ್ಲಿ ವೃದ್ಧನಾಗಿರುವನು. ಧರ್ಮಜ್ಞನಾದ ಆತನು ತನ್ನ ಬಾಲ್ಯಾವಸ್ಥೆಯನ್ನು ಈಗ ಕಳೆದುಬಿಟ್ಟಿದ್ದರೂ, ಮೂರು ವರ್ಷದ ಮಗುವಂತೆ ನನ್ನ ತೊಡೆಯಮೇಲೆ ಬಂದು ಕುಳಿತು,ನನ್ನಿಂದ ಯಾವಾಗ ಲಾಲಿಸಲ್ಪಡುವನೋ? ಎಲೆ ವೀರನೆ!ಇನ್ನು ನಾವು ಎಷ್ಟುಪ್ರಲಾಪಿಸಿದರೇನು? ನಾನು ಪೂರ್ವಜನ್ಮದಲ್ಲಿ ಮಹಾಪಾಪಬುದ್ಧಿಯುಳ್ಳವಳಾಗಿ,ಎಳೇ ಮಕ್ಕಳು

---

* ಇಲ್ಲಿ "ಕದಾ ಸುಮನಸಃ ಕನ್ಯಾ ದ್ವಿಜಾತೀನಾಂ ಫಲಾನಿಚ । ಪ್ರದಿಶಂತಃ ಪುರೀಂ ಹೃಷ್ಟಾಃ ಕರಿಷ್ಯಂತಿ ಪ್ರದಕ್ಷಿಣಂ" ಎಂದು ಮೂಲವು. ಈ ಮೂಲವನ್ನನುಸರಿಸಿಯೇ ಮೇಲಿನ ಅರ್ಥವು ಬರೆಯಲ್ಪಟ್ಟಿದೆ. ಆದರೆ ಗೋವಿಂದರಾಜೀಯದಲ್ಲಿ "ಪ್ರದಿಶಂತ್ಯಃ" ಎಂದು ಪಾಠಾಂತರವನ್ನು ಮಾಡಿ, ಅದಕ್ಕೆ ಬೇರೆ ಅರ್ಥವು ಹೇಳಲ್ಪಟ್ಟಿರುವುದು. ಹೇಗೆಂದರೆ "ಕನ್ಯಾ ದ್ವಿಜಾತೀನಾಂ" ಎಂಬುದಕ್ಕೆ "ದ್ವಿಜಾತೀನಾಂ ಕನ್ಯಾಃ" ಎಂದು ಅನ್ವಯ ಮಾಡಿ, ಬ್ರಾಹ್ಮಣಕನ್ಯೆಯರೆಂದು ಕನ್ಯಕೆಯರನ್ನು ಕರ್ತೃಗಳನ್ನಾಗಿ ಗ್ರಹಿಸಬೇಕು. ಬ್ರಾಹ್ಮಣಕನ್ಯೆಯರು ಪುಷ್ಪಫಲಗಳನ್ನು ಕೊಡುತ್ತ, ಸಂತೋಷದಿಂದ ಪಟ್ಟಣವನ್ನು ಯಾವಾಗ ಪ್ರದಕ್ಷಿಣೆಮಾಡುವರೋ ? ಎಂದರ್ಥವು. ಉತ್ಸವಕಾಲಗಳಲ್ಲಿ ಹೀಗೆ ಮಾಡುವುದು ಉತ್ತರದೇಶಸಂಪ್ರದಾಯವೆಂದು ವ್ಯಾಖ್ಯಾನಕರ್ತರ ಅಭಿಪ್ರಾಯವು.

ಹಾಲನ್ನು ಕುಡಿಯುವುದಕ್ಕೆ ಆತುರಪಡುತ್ತಿರುವಾಗ, ತಾಯಿಯ ಸ್ತನಗಳನ್ನು ಕುಯ್ದುಹಾಕಿರಬಹುದು. ಇದರಲ್ಲಿ ಸ್ವಲ್ಪವೂ ಸಂದೇಹವಿರದು! ಎಲೈ ಪುರುಷಶ್ರೇಷ್ಠನೇ ! ಸಿಂಹವು,ಆಗಲೇ ಕರುಹಾಕಿದ ಹಸುವನ್ನು ಕಂಡೊಡನೆ ಅದರ ಕರುವನ್ನೆತ್ತಿಕೊಂಡು ಹೋದಂತೆ, ಮಹಾಪಾಪಿನಿಯಾದ ಕೈಕೇಯಿಯುನನ್ನನ್ನು ಪುತ್ರಹೀನೆಯನ್ನಾಗಿ ಮಾಡಿದಳು. ನಾನು ಬಹುಕಾಲದವರೆಗೆ ಮಕ್ಕಳಿಲ್ಲದೆ ಕೊನೆಗೆ ಈ ಒಬ್ಬ ಮಗನನ್ನು ಪಡೆದೆನು. ಆತನಾದರೋ ಲೋಕಪ್ರಸಿದ್ಧವಾದ ಸಮಸ್ತಕಲ್ಯಾಣಗುಣಗಳಿಂದಲೂ ಕೂಡಿದವನಾಗಿ, ಬಾಲ್ಯದಲ್ಲಿಯೇ ಸಮಸ್ತಶಾಸ್ತ್ರಗಳನ್ನೂ ಓದಿಕಲಿತನು. ಅಂತಹ ಪುತ್ರರತ್ನವನ್ನು ಬಿಟ್ಟು ನಾನು ಹೇಗೆ ಜೀವಿಸಿರಲಿ? ಮಹಾಬಲಾಢ್ಯನಾದ ಆ ನನ್ನ ಪ್ರಿಯಪುತ್ರನನ್ನು ನಾನು ನೋಡದಿದ್ದರೆ ಎಂದಿಗೂ ಬದುಕಿರಲಾರೆನು. ದೈವವೂ ನನ್ನನ್ನು ಬದುಕಿಸಿರಲಾರದು. ಬೇಸಗೆಯಲ್ಲಿ ಅತಿಕ್ರೂರವಾದ ಕಿರಣಗಳನ್ನು ಪ್ರಸರಿಸಿ, ಈ ಭೂಮಿಯನ್ನು ಸುಡುತ್ತಿರುವ ಸೂರ್ಯನಂತೆ, ಪುತ್ರವಿರಹದಿಂದುಂಟಾದ ಈ ಶೋಕಾಗ್ನಿಯು ನನ್ನ ದೇಹವನ್ನು ಬಲವಾಗಿ ಸುಡುತ್ತಿರುವುದು" ಎಂದಳು. ಇಲ್ಲಿಗೆ ನಾಲ್ವತ್ತು ಮೂರನೆಯಸರ್ಗವು.

---

ಸುಮಿತ್ರೆಯು ಕೌಸಲ್ಯೆಯನ್ನು ಸಮಾಧಾನಪಡಿಸಿದುದು.

ಹೀಗೆ ವಿಲಪಿಸುತ್ತಿರುವ ಕೌಸಲ್ಯೆಯನ್ನು ನೋಡಿ ಧರ್ಮಜ್ಞಳಾದ * ಸುಮಿತ್ರೆಯು, ಆಕೆಯೊಡನೆ ಧರ್ಮಯುಕ್ತವಾದ ಒಂದಾನೊಂದು

---

* ಇದಕ್ಕೆ "ಇದಂ ಧರ್ಮೇ ಸ್ಥಿತಾ ಧರ್ಮ್ಯಂ ಸುಮಿತ್ರಾ ವಾಕ್ಯಮಬ್ರವೀತ್" ಎಂಬುದೇ ಮೂಲವು. ತಾರಾ ಮಂಡೋದರಿಯರಂತೆ ಸುಮಿತ್ರೆಯೂ ಪರತ್ವಜ್ಞಾನವುಳ್ಳವಳೆಂಬುದು ಸಂಪ್ರದಾಯಸಿದ್ಧವಾದುದರಿಂದ, ಇಲ್ಲಿ ಸುಮಿತ್ರೆಯಮೂಲಕವಾಗಿ ಶ್ರೀರಾಮನ ಪರತ್ವವನ್ನು ಪ್ರಕಾಶಪಡಿಸುವರು. ಹೇಗೆಂದರೆ (ಧರ್ಮೇ ಸ್ಥಿತಾ) ಧರ್ಮದಲ್ಲಿ ನೆಲೆಗೊಂಡವಳು. ಧರ್ಮದಲ್ಲಿ ಎಂದರೆ, ಸಿದ್ಧಧರ್ಮಸ್ವರೂಪನಾದ ರಾಮನಲ್ಲಿಯೇ ನೆಟ್ಟ ಮನಸ್ಸುಳ್ಳವಳೆಂದು ಭಾವವು.ಅಥವಾ ಧರ್ಮವೆಂದರೆ ಜನ್ಮಾಂತರಸುಕೃತದಲ್ಲಿ ನೆಲೆಗೊಂಡವಳಾಗಿ, ಆ ಸುಕೃತಶೇಷದಿಂದ, (ಧರ್ಮ್ಯಂ) ಸಮಸ್ತಧರ್ಮಗಳಿಗೂ ನೆಲೆಯಾದ ರಾಮನ ಪರತ್ವವನ್ನು (ಅಬ್ರವೀತ್) ಹೇಳಿದಳು. (ಆರ್ಯೇ ತವ ಪುತ್ರಃ) ಎಲೈ ಪೂಜ್ಯಳೆ! ನಿನ್ನ

ಮಾತನ್ನಾಡುವಳು. "ಅಮ್ಮ ಕೌಸಲ್ಯೆ! ನಿನ್ನ ಮಗನು ಸಮಸ್ತ

---

ಮಗನಾದವನು, (ಸಃ) ಅಂತಹ ಪ್ರಸಿದ್ಧನಾದ, ಎಂದರೆ, ವೇದಾಂತಗಳಲ್ಲಿ ಪ್ರಸಿದ್ಧನಾದ (ಪುರುಷೋತ್ತಮಃ) ಸಾಕ್ಷಾನ್ನಾರಾಯನೇ! ಹೇಗೆಂದರೆ (ಸದ್ಗುಣೈರ್ಯುಕ್ತಃ) ಅನಿತರಸಾಧಾರಣಗಳಾಗಿಯೂ, ಅಸಂಖ್ಯೇಯಗಳಾಗಿಯೂ, ಅನವಧಿಕಾತಿಶಯಗಳಾಗಿಯೂ, ಒಪ್ಪುತ್ತಿರುವ ಕಲ್ಯಾಣಗುಣಗಳಿಂದ ಕೂಡಿದವನು. ಸಾಕ್ಷಾತ್ಪರಮಾತ್ಮನೇ ಅವನೆಂದರ್ಥವು. ಇಲ್ಲಿ (ಸಃ) ಎಂದು ಹೇಳಿರುವುದರಿಂದ, ವೇದಾಂತವೇದ್ಯನಾದ ಆ ಪುರುಷೋತ್ತಮನೇ ಇವನಲ್ಲದೆ, ಮನುಷ್ಯರಲ್ಲಿ ಶ್ರೇಷ್ಠನೆಂದು ಮಾತ್ರವೇ ಗ್ರಹಿಸಕೂಡದೆಂದೂ, ನೀನೂ ಆತನನ್ನು ನಿಜವಾಗಿ ಹೊಟ್ಟೆಯಲ್ಲಿ ಹುಟ್ಟಿದಮಗನೆಂದು ಭ್ರಾಂತಿಗೊಂಡು ಶೋಕಿಸುವುದನುಚಿತವೆಂದೂ ಸುಮಿತ್ರೆಯ ಭಾವವು. ಹಾಗೆ ರಾಮನೇ ಪರಮಪುರುಷನಾಗಿದ್ದ ಪಕ್ಷದಲ್ಲಿ, ಕರ್ಮಪ್ರವಣನಾಗಿ ಪಿತೃವಚನಪರಿಪಾಲನಾದಿಕರ್ಮಗಳನ್ನು ನಡೆಸುತ್ತಿರುವುದೇಕೆ? ಎಂದರೆ, ಅದಕ್ಕೆ ಸಮಾಧಾನರೂಪವಾಗಿ ಮುಂದಿನ ವಾಕ್ಯಗಳನ್ನು ಹೇಳುವಳು. "ಶಿಷ್ಟೈರಾಚರಿತೇ ಸಮ್ಯಕ್ ಶಶ್ವತ್ಪ್ರೇತ್ಯ ಫಲೋದಯೇ। ರಾಮೋ ಧರ್ಮೇಸ್ಥಿತಶ್ಶ್ರೇಷ್ಠೋ ನ ಸ ಶೋಚ್ಯಃ ಕದಾಚನ॥" ಎಂದು ಮೂಲವು. (ಶಿಷ್ಟೈರಾಚರಿತೇ) ಎಂಬಲ್ಲಿ ಶಿಷ್ಟರಾದವರು ನಡೆಸತಕ್ಕುದೆಲ್ಲವೂ ಲೋಕಾನುಗ್ರಹಾರ್ಥವಾಗಿರುವುವು. ಆದುದರಿಂದ ತಾನು ಪುರುಷೋತ್ತಮನಾಗಿ ನಿರಪೇಕ್ಷನಾಗಿದ್ದರೂ, ಶಿಷ್ಟಾಚಾರವಾದ ಕರ್ಮಗಳಲ್ಲಿ ಪ್ರವಣನಾಗಿರುವುದು ಲೋಕಾನುಗ್ರಹಾರ್ಥವಾಗಿಯೇ ಹೊರತು ಬೇರೆಯಲ್ಲವೆಂದು ಭಾವವು. (ಪ್ರೇತ್ಯ ಫಲೋದಯೇ) ದಶರಥನಿಗೆ ಪಾರಲೌಕಿಕಫಲವನ್ನು ಸಾಧಿಸಿಕೊಡಬೇಕೆಂಬ ಉದ್ದೇಶದಿಂದಲೇ ತಾನು ಈ ಕೆಲಸಮಾಡುತ್ತಿರುವನೆಂದು ಭಾವವು (ಶ್ರೇಷ್ಠಃ) ಲೋಕದಲ್ಲಿ "ಯದ್ಯದಾಚರತಿಶ್ರೇಷ್ಠಸ್ತತ್ತದೇವೇತರೇ ಜನಾಃ" ಎಂಬ ಗೀತಾವಚನವನ್ನನುಸರಿಸಿ, ಶ್ರೇಷ್ಠರಾದವರು ನಡೆಸತಕ್ಕ ಕಾರ್ಯಗಳೆಲ್ಲವೂ ಸಾಮಾನ್ಯರಾದ ಇತರಜನರಿಗೆ ದಾರಿಯನ್ನು ತೋರಿಸಿಕೊಟ್ಟು, ಅವರನ್ನು ಉದ್ಧರಿಸುವುದಕ್ಕಾಗಿಯೇ ಹೊರತು ಬೇರೆಯಲ್ಲ. ಆದುದರಿಂದ, ಇತರರಿಗೆ ದಾರಿತೋರಿಸುವುದಕ್ಕಾಗಿಯೇ ತಾನು ಕರ್ಮಪ್ರವಣನಾಗಿರುವನೆಂದೂ ಭಾವವು. ಮತ್ತು "ಕಾಮವೃತ್ತಸ್ತ್ವಯಂ ಲೋಕಃ ಕೃತ್ಸ್ನಸ್ಸಮುಪವರ್ತತೇ! ಯದ್ವೃತ್ತಾಸ್ಸಂತಿ ರಾಜಾನಸ್ತದ್ವೃತ್ತಾಸ್ಸಂತಿ ಹಿಪ್ರಜಾಃ॥" ಎಂಬಂತೆ, ಈ ಲೋಕವೆಲ್ಲವೂ ತನ್ನಿಚ್ಛೆಯಿಂದ ನಡೆಯುತ್ತಿರುವುದು. ರಾಜನು ಹೇಗೆ ನಡೆದುಕೊಳ್ಳುವನೋ ಪ್ರಜೆಗಳೂ ಹಾಗೆಯೇ ನಡೆದುಕೊಳ್ಳುವರೆಂದು ಹೇಳಿರುವುದರಿಂದ, ಈತನೂ ರಾಜನಾಗಿ ಅವತರಿಸಿ ಪ್ರಜೆಗಳಿಗೆ ಸನ್ಮಾರ್ಗವನ್ನು ತಿಳಿಸುತ್ತಿರುವನೆಂದು ಭಾವವು. ಇದರಂತೆಯೇ ಲಕ್ಷ್ಮ

ಸದ್ಗುಣಗಳಿಂದಲೂ ಕೂಡಿ ಪುರುಷಶ್ರೇಷ್ಠನೆನಿಸಿಕೊಂಡಿರುವುದರಲ್ಲಿ ಸಂದೇಹವಿಲ್ಲ. ಹೀಗಿದ್ದರೂ ಅವನಿಗಾಗಿ ನೀನು ಹೀಗೆ ಬಹುದೈನ್ಯದಿಂದ ಅಳುತಿದ್ದಮಾತ್ರಕ್ಕೆ ಪ್ರಯೋಜನವೇನು? ಬಲಾಢ್ಯನಾದ ನಿನ್ನ ಮಗನು ರಾಜ್ಯವನ್ನು ಬಿಟ್ಟು ಹೋದುದಕ್ಕಾಗಿ ನೀನು ಚಿಂತಿಸಬಾರದು. ತಂದೆಯ ಸತ್ಯಕ್ಕೆ ಲೋಪವನ್ನುಂಟುಮಾಡದೆ, ಆತನ ಸತ್ಯಸಂಧತೆಯನ್ನು ಕಾಪಾಡುವುದಕ್ಕಾಗಿಯೇ ರಾಮನು ಕಾಡಿಗೆ ಹೊರಟುಹೋದನು. ಇದರಿಂದ ಪರಲೋಕದಲ್ಲಿಯೂ ಮಹಾಫಲವುಂಟು. ಈಗ ರಾಮನು ಅನುಸರಿಸಿದ ದಾರಿಯು ಶಿಷ್ಟಸಮ್ಮತವಾದುದೇಹೊರತು ಬೇರೆಯಲ್ಲ. ಹೀಗೆ ಧರ್ಮದಲ್ಲಿ ಪ್ರವರ್ತಿಸಿರತಕ್ಕ ರಾಮನಿಗಾಗಿ ನೀನು ಈಗಚಿಂತಿಸುವುದು ನ್ಯಾಯವಲ್ಲ.ಹಾಗೆಯೇ ಸೀತಾಲಕ್ಷ್ಮಣರಿಗಾಗಿಯೂ ನಾವು ದುಃಖಿಸಬೇಕಾದುದಿಲ್ಲ. ಲಕ್ಷ್ಮಣನು ನಿಷ್ಕಲ್ಮಷವಾದ ಸ್ವಭಾವವುಳ್ಳವನು. ಸಮಸ್ತಪ್ರಾಣಿಗಳಲ್ಲಿಯೂ ದಯೆಯುಳ್ಳವನು. ಆತನು ಈಗ ಅವಲಂಬಿಸಿರತಕ್ಕ ಭ್ರಾತೃಶುಶ್ರೂಷೆಯೆಂಬ ವೃತ್ತಿಯೇ ಸರ್ವೋತ್ತಮವಾದುದು. ಇದರಿಂದ ಆತನಿಗೂ ವಿಶೇಷವಾದ

---

ಣನೂಕೂಡ ತನ್ನ ಶೇಷತ್ವಕ್ಕೆ ಅನುಗುಣವಾದ ಸ್ವಾಮಿಕೈಂಕರ್ಯವನ್ನೇ ದೃಢವಾಗಿ ನಂಬಿಕೊಂಡು, ಸದ್ವರ್ತನದಲ್ಲಿರುವನಾದುದರಿಂದ ಅವನಿಗಾಗಿಯೂ ದುಃಖಿಸಬಾರದೆಂದು ಹೇಳುವಳು. ''ವರ್ತತೇಚೋತ್ತಮಾಂ ವೃತ್ತಿಂ ಲಕ್ಷ್ಮಣೋಽಸ್ಮಿನ್ ಸದಾನಘಃ ದಯಾವಾನ್ ಸರ್ವಭೂತೇಷು ಲಾಭಸ್ತಸ್ಯ ಮಹಾತ್ಮನಃ'' ಎಂದು ಮೂಲವು. (ಅನಘಃ) ಪಾಪವಿಲ್ಲದವನು, ಎಂದರೆ ಪ್ರಮಾದವಿಲ್ಲದವನೆಂದು ಭಾವವು. (ಸರ್ವಭೂತೇಷುದಯಾವಾನ್)ಎಲ್ಲಾ ಆತ್ಮಗಳನ್ನೂ ಜ್ಞಾನೈಕಾಕಾರಗಳನ್ನಾಗಿ ತಿಳಿದು, ಎಲ್ಲದರಲ್ಲಿಯೂ ಸಮಬುದ್ಧಿಯುಳ್ಳವನಾಗಿರುವುದರಿಂದ, ಮೈತ್ರಿಯುಳ್ಳವನೆಂದು ಭಾವವು. ಇಂತಹ ಲಕ್ಷ್ಮಣನು (ಉತ್ತಮಾಂ) ನಿರತಿಶಯಪುರುಷಾರ್ಥರೂಪವಾಗಿರುವುದರಿಂದ ಸರ್ವೋತ್ತಮವೆನಿಸಿಕೊಂಡ (ವೃತ್ತಿಂ) ಕೈಂಕರ್ಯವೃತ್ತಿಯನ್ನು (ಸದಾವರ್ತತೇ) ಅನವರತವೂ ಅನುಷ್ಠಿಸುತ್ತಿರುವನು. (ತಸ್ಯ ಮಹಾತ್ಮನಃ) ಆ ಮಹಾತ್ಮನಿಗೆ (ಲಾಭಃ) ಈ ಕೈಂಕರ್ಯವೇ ಪರಮಲಾಭವು. ಎಂದರೆ ಪುರುಷಾರ್ಥವು. ಎಂದರ್ಥವು.

ಈ ಶ್ಲೋಕದಲ್ಲಿ ''ವರ್ತತೇ'' ಎಂಬ ಪದದಲ್ಲಿರುವ ''ವ'' ಎಂಬುದು, ಗಾಯತ್ರಿಯ ಪಂಚಮಾಕ್ಷರವಾದುದರಿಂದ್ಧ, ಇಲ್ಲಿಗೆ ನಾಲ್ಕು ಸಾವಿರಗ್ರಂಥಗಳು ಮುಗಿದು ಐದನೆಯ ಸಾವಿರವು ಆರಂಭಿಸಲ್ಪಟ್ಟಿರುವುದೆಂಧು ತಿಳಿಯಬೇಕು.

ಫಲವುಂಟು. ಇದರಿಂದ ಲಕ್ಷ್ಮಣನಿಗಾಗಿಯೂ ನಾವು ದುಃಖಿಸಬಾರದು. ಸೀತೆಯು ಯಾವಾಗಲೂ ಸುಖವನ್ನೇ ಅನುಭವಿಸುವುದಕ್ಕೆ ಅರ್ಹಳೆಂಬುದ ರಲ್ಲಿ ಸಂದೇಹವಿಲ್ಲ. ವನವಾಸದಲ್ಲಿ ಅನೇಕಕಷ್ಟಗಳುಂಟೆಂಬುದನ್ನೂ ಆಕೆ ಯು ಚೆನ್ನಾಗಿ ಬಲ್ಲಳು.ಹೀಗಿದ್ದರೂ ಅವಳು ಪಾತಿವ್ರತ್ಯಪರಾಯಣೆಯಾಗಿ, ಪತಿಯೇ ತನಗೆ ಪರದೈವವೆಂದು ತಿಳಿದು, ಕಾಡಿನಲ್ಲಿಯೂ ಪತಿಯ ಪಾದ ಶುಶ್ರೂಷೆಯನ್ನು ಮಾಡುತ್ತಿರುವುದಕ್ಕಾಗಿ ಧರ್ಮಾತ್ಮದಾದ ನಿನ್ನ ಮಗ ನನ್ನೇ ಹಿಂಬಾಲಿಸಿ ಹೋಗಿರುವಳು. ಅವಳಿಗೂ ಇದು ಸ್ವರೂಪಾನು ವಾದ ಧರ್ಮವಾದುದರಿಂದ ಆ ಸೀತೆಗಾಗಿಯೂ ನಾವು ದುಃಖಿಸಬಾರದು. ಈ ಪ್ರಪಂಚದಲ್ಲಿ ತನ್ನ ಕೀರ್ತಿಯೆಂಬ ಪತಾಕೆಯನ್ನೆತ್ತಿ ಕಟ್ಟುತ್ತಿರುವ ಪ್ರ ಭುವಾದ ರಾಮನಿಗೆ, ಇದರಿಂದ ಯಾವ ಶ್ರೇಯಸ್ಸು ತಾನೇ ಉಂಟಾಗಲಾ ರದು? ಆತನು ಮಹರ್ಷಿಗಳಂತೆ ಜಿತೇಂದ್ರಿಯನೆನಿಸಿಕೊಂಡಿರುವನು. ಧರ್ಮವೆಂ ಬುದೇ ಆತನ ಧನವು. ಸತ್ಯವೆಂಬುದೇ ಆತನ ವ್ರತವು. ಆತನ ಮಹಿಮೆಯನ್ನು ಈಲೋಕದಲ್ಲಿ ಕಂಡರಿಯದವರೇ ಇಲ್ಲ. ಆತನ ಶುಚಿತ್ವವನ್ನೂ, ಎಣೆಯಿಲ್ಲದ ಮಹಿಮೆಯನ್ನೂ ಚೆನ್ನಾಗಿ ತಿಳಿದಿರುವುದರಿಂದಲೇ, *ಸೂರ್ಯನೂಕೂಡ ತನ್ನ ಕಿರಣಗಳಿಂದ ಆತನ ದೇಹವನ್ನು ಸಂತಾಪಪಡಿಸಲಾರನೆಂದು ತಿಳಿ! †ವಾಯು

---

ಈ ಮುಂದಿನ ವಾಕ್ಯಗಳೊಳಗೆಲ್ಲಾ ವೇದಾಂತಪ್ರತಿಪಾದ್ಯಗಳಾದ ಪರಮಪುರು ಷನ ಲಕ್ಷಣಗಳು ತಿಳಿಸಲ್ಪಡುವುವೆಂದು ಗ್ರಹಿಸಬೇಕು. ಹೇಗೆಂದರೆ:—

ಇಲ್ಲಿ "ತಸ್ಯನಾಮ ಮಹದ್ಯಶಃ" ಎಂಬ ಶ್ರುತ್ಯರ್ಥವು ಪ್ರತಿಪಾದಿಸಲ್ಪಟ್ಟಿದೆ.

* ಇದುಮೊದಲು ದೇವತೆಗಳೆಲ್ಲರೂ ಆತನ ಆಜ್ಞಾಧಾರಕರಾಗಿರುವುದರಿಂದ, ಆತ ನಿಗೆ ಅವರೆಲ್ಲರೂ ಅನುಕೂಲರಾಗಿಯೇ ಪ್ರವರ್ತಿಸುತ್ತಿರುವರೆಂಬುದನ್ನು ಸೂಚಿಸುವರು

ಇಲ್ಲಿ "ಭೀಷೋದೇತಿ ಸೂರ್ಯ:" ಎಂಬ ಶ್ರುತ್ಯರ್ಥವು ಪ್ರತಿಪಾದಿತವಾಗಿದೆ.

† ಇಲ್ಲಿ "ಭೀಷಾಸ್ಮಾ ದ್ವಾತಃ ಪವತೇ" ಎಂಬ ಶ್ರುತ್ಯರ್ಥವನ್ನು ಅನುಸಂಧಿಸಿ ಕೊಳ್ಳಬೇಕು. ಮತ್ತು ಇಲ್ಲಿ "ಶಿವಸ್ಸರ್ವೇಷು ಕಾಲೇಷು ಕಾನನೇಭ್ಯೋವಿನಿಸ್ಸೃತ:" ಎಂದು ಮೂಲವು. (ಶಿವ:) ಎಂಬುದರಿಂದ ಅಲ್ಲಿನ ಗಾಳಿಯಲ್ಲಿ ಬಿರುಸಿಲ್ಲದೆ ದೇಹಕ್ಕೆ ಹಿತಕರವಾದ ಮಾಂದ್ಯಗುಣವೂ, (ಕಾನನೇಭ್ಯ:) ಎಂಬುದರಿಂದ ಸೌರಭ್ಯಗುಣವೂ, (ವಿನಿಸ್ಸೃತ:) ಎಂಬುದರಿಂದ ಶೈತ್ಯಗುಣವೂ ಹೇಳಲ್ಪಟ್ಟಿರುವುವು.

ವೂ ಆಯಾಕಾಲಕ್ಕೆ ತಕ್ಕಂತೆ ಆತನ ಮೈಗೆ ಹಿತಕರವಾದ ಶೀತೋಷ್ಣಸ್ಥಿತಿಯನ್ನನುಸರಿಸಿ ತನ್ನ ಬಿರುಸನ್ನು ಬಿಟ್ಟು ಮೆಲ್ಲಗೆ ಬೀಸುವನು. ತಂದೆತಾಯಿಗಳು ಪ್ರೀತಿಯಿಂದ ಕೈನೀಡಿ ಮಕ್ಕಳನ್ನಪ್ಪಿಕೊಳ್ಳುವಂತೆ, * ಚಂದ್ರನು ರಾತ್ರಿಕಾಲಗಳಲ್ಲಿ ಮಲಗಿರುವ ರಾಮನ ಮೈಯ್ಯನ್ನು ತನ್ನ ತಂಪಾದ ಕಿರಣಗಳಿಂದ ಆಲಿಂಗಿಸಿ ಸಂತೋಷಪಡಿಸುವನು †ಪೂರ್ವದಲ್ಲಿ ರಾಮನು ಶಂಬರಾಸುರನ ಮಗನನ್ನು ಕೊಂದಾಗ, ಬ್ರಹ್ಮನು ಪ್ರಸನ್ನನಾಗಿ ಈತನಿಗೆ ಅನೇಕದಿವ್ಯಾಸ್ತ್ರಗಳನ್ನು ಕೊಟ್ಟಿರುವನಲ್ಲವೆ?ಆದುದರಿಂದ ನಿನ್ನ ಮಗನಾದ ರಾಮನ ಶೌರ್ಯಕ್ಕೆ ಎಲ್ಲಿಯೂ ತಡೆಯಿರುವುದಿಲ್ಲ. ಕಾಡಿನಲ್ಲಿದ್ದರೂ ಆತನಿಗೆ ಯಾವುದೊಂದು ಭಯವೂ ಸಂಭವಿಸದು. ಆತನ ಬಾಹುಬಲವೇ ಅವನಿಗೆ ಮುಖ್ಯಸಹಾಯಕವಾಗಿರುವುದರಿಂದ, ಅವನು ತನ್ನ ರಕ್ಷಣೆಗಾಗಿ ಬೇರೊಬ್ಬರನ್ನು ಆಶ್ರಯಿಸಬೇಕಾದುದಿಲ್ಲ.ಅವನು ಕಾಡಿನಲ್ಲಿದ್ದರೂ ಅರಮನೆಯಲ್ಲಿದ್ದಂತೆಯೇ ನಿರ್ಭಯನಾಗಿರುವನೆಂದು ತಿಳಿ!ಇಲ್ಲಿ ಭರತನು ಕೋಸಲರಾಜ್ಯದಲ್ಲಿ ಬೇರೂರಿ ನಿಂತಮೇಲೆ, ರಾಮನಿಗೆ ರಾಜ್ಯದ ಆಸೆಯೇ ಇಲ್ಲವೆಂದು ನೀನು ಭ್ರಮೆಗೊಂಡಿರಬಹುದು! ಆ ಶಂಕೆಯನ್ನೂ ಬಿಟ್ಟುಬಿಡು. ರಾಮನ ಬಾಣಕ್ಕೆ ಇದಿರಾಗಿ

---

* ಇಲ್ಲಿ''ಏತಸ್ಯವಾ ಅಕ್ಷರಸ್ಯ ಪ್ರಶಾಸನೇ ಗಾರ್ಗೀಸೂರ್ಯಾಚಂದ್ರಮಸೌವಿಧೃತೌತಿಷ್ಠತಃ''ಎಂಬ ಶ್ರುತ್ಯರ್ಥವನ್ನೂ ಹಿಸಿಕೊಳ್ಳಬೇಕು.

† ಇಲ್ಲಿ ಬ್ರಹ್ಮನು ಮಾಡತಕ್ಕ ಕಿಂಚಿತ್ಕಾರವು ಸೂಚಿತವಾಗಿದೆ. ಇದೇ ಕಾಂಡದಲ್ಲಿ ಹಿಂದೆ ''ವೈಜಂಯಂತಮಿತಿ ಖ್ಯಾತಂ ಪುರಂ ಯತ್ರ ತಿಮಿಧ್ವಜಃ'' ಎಂಬುದಾಗಿ,ವೈಜಯಂತಪುರದಲ್ಲಿ ತಿಮಿಧ್ವಜನೆಂಬ ನಾಮಾಂತರವುಳ್ಳ ಶಂಬರಾಸುರನೊಡನೆ ದಶರಥನು ಯುದ್ಧಮಾಡಿದುದಾಗಿ ಹೇಳಲ್ಪಟ್ಟಿರುವುದು ಈಗ ರಾಮನು ಆತನ ಮಗನನ್ನು ಕೊಂದುದಾಗಿ ಹೇಳಲ್ಪಟ್ಟಿದೆ. ಈ ವಿಷಯವು ಮೊದಲು ಹೇಳಲ್ಪಡದಿರುವುದೇಕೆಂದು ಶಂಕೆಯುಂಟಾಗಬಹುದು. ಆದರೆ, ''ಯದಾ ವ್ರಜತಿ ಸಂಗ್ರಾಮಂ ಗ್ರಾಮಾರ್ಥೇ ನಗರಸ್ಯವಾ । ಗತ್ವಾಸೌಮಿತ್ರಿಸಹಿತೋ ನಾವಿಜಿತ್ಯ ನಿವರ್ತತೇ॥'' ''ಯುದ್ಧವು ಸಂಭವಿಸಿದಾಗ ತಾನು ಲಕ್ಷ್ಮಣಸಹಿತನಾಗಿ ಹೊರಟರೆ, ಜಯಹೊಂದದೆ ಹಿಂತಿರುಗುವವನಲ್ಲ''ವೆಂದು ಈಕಾಂಡದಲ್ಲಿಯೇ ಸಾಮಾನ್ಯವಾಗಿ ತಿಳಿಸಲ್ಪಟ್ಟಿರುವುದರಿಂದ, ಅದರಲ್ಲಿ ಈ ವಿಷಯವೂ ಅಂತರ್ಗತವಾಗಿರುವುದೆಂದೂ, ಇಲ್ಲಿ ಪ್ರಸ್ತಾವವಶದಿಂದ ವಿಶೇಷಿಸಿ ಹೇಳಿದುದಾಗಿಯೂ ತಿಳಿಯಬೇಕು.

ನಿಂತಮೇಲೆ ಯಾವಶತ್ರುಗಳೂ ಜೀವದಿಂದ ಹಿಂತಿರುಗಿಹೋಗಲಾರರು. ಅಂತಹ ಮಹಾವೀರನಾದ ರಾಮನ ಆಜ್ಞೆಯಲ್ಲಿ ಈ ಭೂಮಿಯು ಹೇಗೆತಾನೇ ನಿಲ್ಲದೆ ಹೋಗುವುದು? ಅವಶ್ಯವಾಗಿ ಈ ಸಮಸ್ತಭೂಮಂಡಲವೂ ಆತನಾಜ್ಞೆಗೆ ಅಧೀನವಾಗಿಯೇ ನಿಲ್ಲಬೇಕಾಗುವುದು. ಸರ್ವಲಕ್ಷಣಸಂಪನ್ನನಾದ ರಾಮನ ದಿವ್ಯತೇಜಸ್ಸನ್ನೂ, ಶೌರ್ಯವನ್ನೂ, ಪ್ರಶಸ್ತವಾದ ಆತನ ದೇಹಬಲವನ್ನೂ ನೋಡಿದರೆ, ಆತನು ಶೀಘ್ರದಲ್ಲಿಯೇ ತನ್ನ ಅರಣ್ಯವಾಸವನ್ನು ಮುಗಿಸಿ ಹಿಂತಿರುಗಿಬಂದು, ರಾಜ್ಯದಲ್ಲಿ ನಿಲ್ಲುವನೆಂದೇ ನನಗೆ ತೋರಿರುವುದು. ರಾಮನನ್ನು ಸಾಮಾನ್ಯನೆಂದು ತಿಳಿಯಬೇಡ!*ತತ್ವವನ್ನು ವಿಚಾರಿಸಿದರೆ, ಆತನು ಸೂರ್ಯನಿಗೂ ಸೂರ್ಯನಂತಿರುವನು. ಅಗ್ನಿಗೂ ಅಗ್ನಿಯಂತಿರುವನು. ಪ್ರಭುಗಳಿಗೂ ಆತನೇ ಪ್ರಭುವು. ಸಂಪತ್ತುಗಳಿಗಲ್ಲವೂ ಆತನೇ ಸಂಪತ್ತೆನಿಸಿಕೊಂಡಿರುವನು ಕೀರ್ತಿಗೂ ತಾನೇ ಒಂದುಕೀರ್ತಿಯಂತಿರುವನು. ಕ್ಷಮೆಗೂ ಆತನೇ ಕ್ಷಮೆಯು. †ದೇವತೆಗಳಿಗೂ ಆತನೇ ದೇವತೆಯಾಗಿರುವನು. ಪಂಚ

---

* ಈ ಮುಂದಿನ ವಾಕ್ಯಗಳಲ್ಲಿ "ತಮೇವಭಾಂತಮನುಭಾತಿ ಸರ್ವಂ" ಎಂಬ ಶ್ರುತ್ಯರ್ಥವು ಪ್ರತಿಪಾದಿತವಾಗುವುದೆಂದು ಗ್ರಹಿಸಬೇಕು. ಇಲ್ಲಿ "ಸೂರ್ಯಸ್ಯಾಪಿ ಭವೇತ್ಸೂರ್ಯೋಹ್ಯಗ್ನೇರಗ್ನಿ. ಪ್ರಭೋಃಪ್ರಭುಃ।ಶ್ರಿಯಶ್ಶ್ರೀಶ್ಚ ಭವೇದಗ್ರ್ಯಾಕೀರ್ತಿಃಕೀರ್ತ್ಯಾಃ ಕ್ಷಮಾಕ್ಷಮಾ" ಎಂಬುದೇ ಮೂಲವು. (ಸೂರ್ಯಸ್ಯಾಪಿ ಸೂರ್ಯಃ) ಎಂದರೆ ಗೂಡಿನಲ್ಲಿಡಲ್ಪಟ್ಟಿರುವ ದೀಪದ ಕುಡಿಯಂತೆ ಸೂರ್ಯಮಂಡಲಮಧ್ಯವರ್ತಿಯಾಗಿದ್ದು, ಅದಕ್ಕೂ ಪ್ರಕಾಶವನ್ನು ಕೊಡುವವನೆಂದು ಭಾವವು. (ಅಗ್ನೇರಗ್ನಿಃ) ಅಗ್ನಿಗಿರತಕ್ಕ ದಹನಪಚನಾದಿಶಕ್ತಿಗಳೆಲ್ಲವೂ ಈತನ ಸಂಕಲ್ಪದಿಂದಲೇ ನಡೆಯುವುವೆಂದು ಭಾವವು "ಅಹಂ ವೈಶ್ವಾನರೋ ಭೂತ್ವಾ" ಎಂಬ ಗೀತಾರ್ಥವನ್ನು ಇಲ್ಲಿ ಅನುಸಂಧಿಸಿಕೊಳ್ಳಬೇಕು. (ಪ್ರಭೋಃ ಪ್ರಭುಃ) ಬ್ರಹ್ಮಾದಿದೇವತೆಗಳಿಗೆಲ್ಲಾ ನಿಯಾಮಕನು. (ಶ್ರಿಯಃ ಶ್ರೀಃ) ಲಕ್ಷ್ಮಿಗೂ ಈತನ ಆಶ್ರಯದಿಂದಲೇ ಶ್ರೀತ್ವವು ಸಿದ್ಧಿಸುವುದೆಂದು ಭಾವವು. (ಕ್ಷಮಾಕ್ಷಮಾ) ಸರ್ವಕ್ಕೂ ಆಧಾರಭೂತವಾದ ಭೂಮಿಗೂ ಈತನೇ ಆಧಾರಭೂತನು. ಇಲ್ಲಿ "ಯಸ್ಮಿನ್ ದ್ಯೌಃ ಪೃಥಿವೀ ಚಾಂತರಿಕ್ಷಂ" ಎಂದು ಶ್ರುತಿಯು.

† (ದೈವತಾನಾಂ ಚ ದೈವತಂ) ಇಲ್ಲಿ "ತಂ ದೇವತಾನಾಂ ಪರಮಂಚ ದೈವತಂ" ಎಂದು ಶ್ರುತಿಯು. ಇವೇ ಮೊದಲಾದ ಕಲ್ಯಾಣಗುಣಗಳನ್ನು ಹೇಳಿ, ಇನ್ನು "ಅಪಹತಪಾಪ್ಮಾ" ಇತ್ಯಾದಿ ಶ್ರುತಿಸಿದ್ಧವಾದ ಆತನ ಹೇಯಗುಣವಿರೋಧಿತ್ವವನ್ನು ಒಂದೇ

ಭೂತಗಳಿಗೆಲ್ಲಾ ಆತನೇ ಪ್ರಧಾನಭೂತನೆನಿಸಿಕೊಂಡಿರುವನು. ಹೀಗೆ ಲೋಕೋತ್ತರವಾದ ಮಹಾಮಹಿಮೆಯುಳ್ಳ ನಿನ್ನ ಮಗನು ಕಾಡಿನಲ್ಲಿದ್ದರೇನು ? ಅಥವಾ ಊರಿನಲ್ಲಿದ್ದರೇನು? ಎಲ್ಲಿದ್ದರೂ ಆತನಿಗೆ ಯಾವುದೊಂದು ಹಾನಿಯೂ ಉಂಟಾಗುವುದಿಲ್ಲ. ನೀನು ಸ್ವಲ್ಪವೂ ಚಿಂತಿಸಬೇಡ ! ಇನ್ನು ಸ್ವಲ್ಪಕಾಲದೊಳಗಾಗಿಯೇ ನಿನ್ನ ಮಗನು, ಭೂದೇವಿಯನ್ನೂ, ರಾಜ್ಯಲಕ್ಷ್ಮಿಯನ್ನೂ, ಸೀತೆಯನ್ನೂ ಸಂಗಡ ಕುಳ್ಳಿರಿಸಿಕೊಂಡು, ಈ ಮೂವರೊಡಗೂಡಿಯೇ ಅಭಿಷಿಕ್ತನಾಗುವನು. ರಾಮನಿಗೆ ಅಪಜಯವೆಲ್ಲಿಯದು ? ರಾಮನು ಈ ಊರನ್ನು ಬಿಟ್ಟುಹೊರಟಾಗ ಈ ಅಯೋಧ್ಯೆಯಲ್ಲಿರತಕ್ಕಸಮಸ್ತಜನರೂ ವ್ಯಸನದಿಂದ ಆತನನ್ನು ನೋಡಿ ಕಣ್ಣೀರನ್ನು ಸುರಿಸುತಿದ್ದರಲ್ಲವೆ? ಅವರಿಗೆ ಇದೊಂದು ಕೇವಲಭ್ರಮವೇ ಹೊರತು ಬೇರೆಯಲ್ಲ. ಆ ರಾಮನು ದರ್ಭೆಗಳನ್ನು ಧರಿಸಿ, ನಾರುಮಡಿಯನ್ನುಟ್ಟು, ತಾಪಸವೇಷದಿಂದಿದ್ದಮಾತ್ರಕ್ಕೆ ಆತನಿಗುಂಟಾದ ದುರವಸ್ಥೆಯೇನು? ಅಥವಾ ಅವನ ಪರಾಕ್ರಮಕ್ಕೆ ಬಂದ ನ್ಯೂನತೆಯೇನು? ಆತನು ತಾಪಸವೇಷದಲ್ಲಿದ್ದರೂ ಆತನನ್ನು ಈ ಲೋಕದಲ್ಲಿ ಯಾರೂ ಜಯಿಸಲಾರರು. ಅವನು ಜಟಾವಲ್ಕಲಧಾರಿಯಾಗಿ ಈಪಟ್ಟಣದಿಂದ ಹೊರಟಾಗಲೇ * ಸೀತೆಯಂತೆ ರಾಜ್ಯಲಕ್ಷ್ಮಿಯೂ ಅವನನ್ನೇ ಹಿಂಬಾಲಿಸಿ ಹೋಗಿರುವಳೆಂದು ತಿಳಿ ! ಈ ಲೋಕದಲ್ಲಿ ನಿನ್ನ ಮಗನಿಗೆ ದುರ್ಲಭವಾದುದೊಂದೂ ಇಲ್ಲವು ಇದರಮೇಲೆ ಮಹಾಧನುರ್ಧಾರಿಯಾದ ಲಕ್ಷ್ಮಣನು, ಬಿಲ್ಲನ್ನೂ, ಬಾಣಗಳನ್ನೂ ಧರಿಸಿ, ರಾಮನಿಗೆ ಮುಂದಾಗಿಯೇ ಹೋಗುತ್ತಿರುವನಲ್ಲವೆ? ಇನ್ನು ರಾಮನಿಗೆ ದುರ್ಲಭವಾದುದುಯಾವುದುಂಟು?

---

ಮಾತಿನಲ್ಲಿ ಹೇಳುವುದಕ್ಕಾಗಿ (ತಸ್ಯ ತೇಽಸ್ಯಗುಣಾ:) ''ಅವನಿಗೆ ಯಾವ ಅವಗುಣಗಳೂ ಇಲ್ಲ''ವೆಂದು ಹೇಳಿದುದಾಗಿ ಗ್ರಹಿಸಬೇಕು. (ರಾಷ್ಟ್ರೇವಾಪ್ಯಥವಾ ಪುರೇ) ಇಲ್ಲಿ ರಾಷ್ಟ್ರಪಟ್ಟಣಗಳೆರಡನ್ನೂ ಹೇಳಿರುವುದರಿಂದ, ಉಭಯವಿಭೂತಿಗಳಲ್ಲಿಯೂ ಆತನು ಅಜಹತ್ಸ್ವರೂಪನೆಂದು ವ್ಯಂಜಿತವಾಗುವುದು.

* ಇಲ್ಲಿ ''ಸೀತೇವಾನುಗತಾಲಕ್ಷ್ಮೀ:'' ಎಂದು ಮೂಲವು. ರಾಜ್ಯಲಕ್ಷ್ಮಿಯೂ ಸೀತೆಯಂತೆ ರಾಮನನ್ನೇ ಹಿಂಬಾಲಿಸಿತೆಂದರ್ಥವು. ಇದರಿಂದ ಕೋಸಲರಾಜ್ಯಲಕ್ಷ್ಮಿಯು ಇತರರನ್ನು ಪರಿಗ್ರಹಿಸಲಾರಳೆಂದು ಸೂಚಿತವಾಗುವುದು. ಆದರೆ ಸೀತಾರೂಪವಾಗಿಯೇ ರಾಜ್ಯಲಕ್ಷ್ಮಿಯು ಆತನನ್ನು ಹಿಂಬಾಲಿಸಿತೆಂದು ಮಹೇಶ್ವರತೀರ್ಥವ್ಯಾಖ್ಯಾನವು.

ಎಲೆ ಕೌಸಲ್ಯೆ! ಚಿಂತಿಸಬೇಡ! ಶೀಘ್ರದಲ್ಲಿಯೇ ವನವಾಸವನ್ನು ಮುಗಿಸಿ ಕೊಂಡುಬಂದ ರಾಮನನ್ನು ನಿನ್ನ ಕಣ್ಣಾರೆ ನೀನೇ ನೋಡುವೆ! ದುಃಖವನ್ನು ಬಿಡು! ಅಜ್ಞಾನದಿಂದುಂಟಾದ ಈ ನಿನ್ನ ಮಮತೆಯನ್ನು ಬಿಟ್ಟುಬಿಡು. ನನ್ನ ಮಾತನ್ನು ಸತ್ಯವೆಂದು ತಿಳಿ! ಆಗಲೇ ಉದಿಸಿ ಬಂದ ಚಂದ್ರನಂತೆ,ನಿನ್ನ ಕಣ್ಣಿದಿರಿಗೆ ಬಂದುನಿಂತು, ನಿನ್ನ ಈ ಪಾದಗಳೆರಡನ್ನೂ ಹಿಡಿದು ನಮಸ್ಕರಿಸುವ ಮಗನನ್ನು ನೀನು ಶೀಘ್ರದಲ್ಲಿಯೇ ನೋಡುವೆ.ಆತನು ಹಿಂತಿರುಗಿ ಈ ಪಟ್ಟಣಕ್ಕೆಬಂದು ಪಟ್ಟಾಭಿಷಿಕ್ತನಾಗಿ, ರಾಜತೇಜಸ್ಸಿನಿಂದಜ್ವಲಿಸುತ್ತಿರುವುದನ್ನು ನೋಡಿ, ಈ ನಿನ್ನಕಣ್ಣುಗಳಿಂದಲೇ ಆನಂದಬಾಷ್ಪವು ತುಳುಕುವುದು. ಎಲೆ ದೇವಿ!ರಾಮನು ಎಲ್ಲಿದ್ದರೂ ಅವನಿಗೆ ಯಾವುದೊಂದು ದುಃಖವಾಗಲಿ ಅಪಾಯವಾಗಲಿ ಸಂಭವಿಸಲಾರದು. ಸೀತಾಲಕ್ಷ್ಮಣರೊಡಗೂಡಿ ಹಿಂತಿರುಗಿಬಂದ ಆತನನ್ನು ನೀನು ಶೀಘ್ರದಲ್ಲಿಯೇ ನೋಡುವೆ! ಇಲ್ಲಿರುವವರೆಲ್ಲರಿಗೂ ನೀನೇದೊಡ್ಡವಳು. ದುಃಖಿಸುತ್ತಿರುವ ಇತರಜನರನ್ನೂ ನೀನೇಸಮಾಧಾನಪಡಿಸಬೇಕು! ಹೀಗಿರುವಾಗ ನೀನೇ ಹೀಗೆ ದುಃಖಿಸುವುದುಂಟೆ? ಮಹಾನುಭಾವನಾದ ರಾಮನನ್ನು ಪುತ್ರನನ್ನಾಗಿ ಪಡೆದಿರುವ ಪರಮಭಾಗ್ಯಶಾಲಿನಿಯಾದನೀನು ಎಂದಿಗೂ ಹೀಗೆ ದುಃಖಿಸಬಾರದು. ಲೋಕದಲ್ಲಿ ರಾಮನಿಗಿಂತಲೂ ಮೇಲೆನಿಸಿಕೊಂಡ ಸನ್ಮಾರ್ಗಪ್ರವರ್ತಕನು ಒಬ್ಬನಾದರೂ ಇಲ್ಲವು? ರಾಮನು ತನ್ನ ಮಿತ್ರರೊಡಗೂಡಿ ಬಂದು ನಿನ್ನ ಪಾದಗಳಿಗೆ ನಮಸ್ಕರಿಸುತ್ತಿರುವಾಗ, ಆತನನ್ನು ನೋಡಿನೀನು,ಮಳೆಗಾಲದಮೇಘಪರಂಪರೆಯಂತೆ ಶೀಘ್ರದಲ್ಲಿಯೂ ಕಣ್ಣುಗಳಿಂದ ಆನಂದಬಾಷ್ಪವನ್ನು ಸುರಿಸುವುದರಲ್ಲಿ ಸಂದೇಹವಿಲ್ಲ! ಶೀಘ್ರದಲ್ಲಿಯೇ ನಿನ್ನ ಮಗನು ಈ ಅಯೋಧ್ಯೆಗೆ ಹಿಂತಿರುಗಿಬಂದು ಮೃದುವಾಗಿಯೂ, ಪುಷ್ಟಿಯುಳ್ಳುದಾಗಿಯೂ ಇರುವ ತನ್ನ ಕೈಗಳಿಂದ ನಿನ್ನ ಪಾದಗಳನ್ನೊತ್ತುವನು. ಹೀಗೆ ಶೂರನಾದ ರಾಮನು ಮಿತ್ರರೊಡಗೂಡಿ ನಿನ್ನ ಪಾದಕ್ಕೆ ನಮಸ್ಕರಿಸುತ್ತಿರುವಾಗ,ನೀನು ಪರ್ವತದಮೇಲೆ ಮೇಘಗಳು ಮಳೆಯನ್ನು ಸುರಿಸುವಂತೆ ಆತನ ದೇಹದಮೇಲೆ ನಿಜವಾಗಿ ಆನಂದಬಾಷ್ಪವನ್ನು ಸುರಿಸುವೆ" ಎಂದಳು. ಹೀಗೆ ನಿಷ್ಕಲ್ಮಷವಾದ ಸ್ವಭಾವವುಳ್ಳ ಆ ಸುಮಿತ್ರೆಯು, ಸಮಯೋಚಿತವಾದ ಉಪಚಾರವಾಕ್ಯಗಳನ್ನು ಹೇಳುವುದರಲ್ಲಿ ಬಹಳ

ಚತುರೆಯಾದುದರಿಂದ, ಆ ಕೌಸಲ್ಯೆಗೆ ಅನೇಕವಿಧದಲ್ಲಿ ಸಮಾಧಾನಗಳನ್ನು ಹೇಳಿ ಸುಮ್ಮನಾದಳು. ಇವೆಲ್ಲವನ್ನೂ ಕೇಳಿದಮೇಲೆ, ಶರತ್ಕಾಲದಲ್ಲಿ ವಿಸ್ತಾರವಾದ ನೀರಿನಿಂದ ಕೂಡಿದ ಮೇಘವು, ಇದ್ದಕ್ಕಿದ್ದಹಾಗೆ ಕಣ್ಮರೆಯಾಗಿ ಹೋಗುವಂತೆ, ಆಗ ಆ ಕೌಸಲ್ಯೆಯ ದೇಹದಲ್ಲಿದ್ದ ದುಃಖವು ಹಾಗೆಯೇ ಅಡಗಿಹೋಯಿತು. ಇಲ್ಲಿಗೆ ನಾಲ್ವತ್ತುನಾಲ್ಕನೆಯ ಸರ್ಗವು.

---

## ರಾಮನು ತನ್ನನ್ನು ಹಿಂಬಾಲಿಸಿ ಬರುತಿದ್ದ ಪ್ರಜೆಗಳಿಗೆ ಸಮಾಧಾನವನ್ನು ಹೇಳಿದುದು.

ಸತ್ಯಪರಾಕ್ರಮನಾಗಿಯೂ, ಮಹಾತ್ಮನಾಗಿಯೂ ಇರುವ ರಾಮನು, ಅಯೋಧ್ಯೆಯನ್ನು ಬಿಟ್ಟು ಅತ್ತಲಾಗಿ ಹೋಗುತ್ತಿರುವಾಗ, ಅವನಲ್ಲಿ ವಿಶೇಷವಾದ ಅನುರಾಗವುಳ್ಳ ಅನೇಕಪ್ರಜೆಗಳು ಬಹುದೂರದವರೆಗೆ ಆತನನ್ನು ಹಿಂಬಾಲಿಸಿ ಹೋಗುತಿದ್ದರು. ರಾಮನು ತಂದೆಯಾದ ದಶರಥನನ್ನೂ, ಅಂತಃಪುರಸ್ತ್ರೀಯರನ್ನೂ, ಇನ್ನೂ ಮಂತ್ರಿಗಳೇ ಮೊದಲಾದವರನ್ನೂ ಬಹಳವಾಗಿ ಬಲಾತ್ಕರಿಸಿ ಹಿಂತಿರುಗಿಸಿದರೂ, ಪ್ರಜೆಗಳುಮಾತ್ರ ಆತನ ರಥವನ್ನು ಬಿಟ್ಟು ಹಿಂತಿರುಗಲೇ ಇಲ್ಲ. ಅಯೋಧ್ಯೆಯಲ್ಲಿ ವಾಸಮಾಡತಕ್ಕ ಸಮಸ್ತಸ್ತ್ರೀಪುರುಷರಿಗೂ, ಮಹಾಯಶಸ್ವಿಯಾಗಿ ಗುಣಸಂಪನ್ನನೆನಿಸಿಕೊಂಡಿರುವ ಈ ರಾಮನು, ಪೂರ್ಣಚಂದ್ರನಂತೆ ಬಹುಪ್ರೀತಿಗೆ ಪಾತ್ರನಾಗಿದ್ದನು. ಪ್ರಜೆಗಳೆಲ್ಲರೂ ಆತನನ್ನು ಎಷ್ಟೋ ಪ್ರಾರ್ಥಿಸಿಕೊಂಡರೂ, ತಂದೆಯ ಸತ್ಯವನ್ನು ಕಾಪಾಡುವುದಕ್ಕಾಗಿ ವನಪ್ರಯಾಣದಲ್ಲಿಯೇ ಉದ್ಯುಕ್ತನಾಗಿದ್ದನು. ಆಗ ತನ್ನ ಹಿಂದೆ ಬರುತ್ತಿದ್ದ ಪ್ರಜೆಗಳೆಲ್ಲರನ್ನೂ ಪ್ರೀತಿಪೂರ್ವಕವಾದ ಕಟಾಕ್ಷದಿಂದ ನೋಡುತ್ತಾ, ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಂತೆ ಅವರನ್ನು ಪ್ರೀತಿಸಿ, "ಎಲೈ ಪ್ರಜೆಗಳಿರಾ! ಅಯೋಧ್ಯಾವಾಸಿಗಳಾದ ನೀವು ನನ್ನಲ್ಲಿ ಎಷ್ಟು ಗೌರವವನ್ನೂ, ಪ್ರೀತಿಯನ್ನೂ ತೋರಿಸುತ್ತಿರುವಿರೋ, ಅಷ್ಟು ಪ್ರೀತಿಗೌರವಗಳನ್ನು ನೀವು ಇನ್ನುಮೇಲೆ ಭರತನಲ್ಲಿ ತೋರಿಸುತ್ತಿರಬೇಕು. ನನ್ನನ್ನು ನೀವು ನಿಜವಾಗಿ ಸಂತೋಷಪಡಿಸಬೇಕೆಂದಿದ್ದರೆ, ಮೊದಲು ಈ ಕೆಲಸವನ್ನು ಮಾಡಿರಿ! ಕೈಕೇಯಿಗೆ ಆನಂದವರ್ಧಕನಾದ ಆ ಭರತನು ಸಾ

ಮಾನ್ಯನೆಂದು ತಿಳಿಯಬೇಡಿರಿ! ಆತನು ಬಹಳ ಶುಭಚರಿತ್ರವುಳ್ಳವನು! ನಿಮಗೆ ಪ್ರಿಯವಾದ ಕಾರ್ಯಗಳನ್ನು ಲೋಪವಿಲ್ಲದೆ ನಡೆಸತಕ್ಕವನು. ಆತನು ವಯಸ್ಸಿನಲ್ಲಿ ಬಾಲನಾಗಿದ್ದರೂ ಜ್ಞಾನದಲ್ಲಿ ವೃದ್ಧನು. ಮಹಾವೀರ್ಯವುಳ್ಳವನಾಗಿದ್ದರೂ ಬಹುಮೃದುಸ್ವಭಾವವುಳ್ಳವನು. ಆತನೇ ನಿಮಗೆ ತಕ್ಕ ಪ್ರಭುವು. ಅವನು ನಿಮ್ಮ ಸಮಸ್ತಭಯಗಳನ್ನೂ ಹೋಗಲಾಡಿಸಬಲ್ಲನು. ಸಮಸ್ತರಾಜಗುಣಗಳೂ ಆತನಲ್ಲಿ ತುಂಬಿರುವುವು. ತಂದೆಯಾದ ದಶರಥನ ಆಜ್ಞೆಯಂತೆಯೇ ಆತನು ಯುವರಾಜಪಟ್ಟದಲ್ಲಿಡಲ್ಪಟ್ಟಿರುವನು. ಮುಖ್ಯವಾಗಿ, ನಾನಾಗಲಿ, ನೀವಾಗಲಿ, ಭರತಶತ್ರುಘ್ನರಾಗಲಿ ಪ್ರಭುವಾದ ಆ ದಶರಥನಾಜ್ಞೆಯಂತೆ ನಡೆಯಬೇಕಾದುದೇ ನ್ಯಾಯವಲ್ಲವೆ? ಆದುದರಿಂದ ನಾನು ಕಾಡಿಗೆ ಹೊರಟುಹೋದಮೇಲೆ, ಆತನ ಪ್ರಜೆಗಳಾದ ನೀವು, ಅವನ ಆಜ್ಞೆಯನ್ನು ಉಲ್ಲಂಘಿಸಿದಪಕ್ಷದಲ್ಲಿ, ಆತನು ಬಹಳವಾಗಿ ಸಂಕಟಪಡುವನು. ರಾಜಾಧಿರಾಜನಾದ ಆತನಿಗೆ ಮನಸ್ಸಂಕಟವನ್ನುಂಟುಮಾಡುವುದು ನಮಗೆ ನ್ಯಾಯವಲ್ಲ. ನನಗೆ ಪ್ರಿಯವನ್ನು ಮಾಡಬೇಕೆಂಬುದೇ ನಿಮಗೆ ನಿಜವಾದ ಅಭಿಪ್ರಾಯವಾಗಿದ್ದಲ್ಲಿ, ದಶರಥನ ಮನೋನುವರ್ತಿಗಳಾಗಿರಿ! ಇದೇ ನಿಮ್ಮ ಮುಖ್ಯಕಾರ್ಯವು" ಎಂದನು. ಹೀಗೆ ರಾಮನು ಪಿತೃವಾಕ್ಯಪರಿಪಾಲನವೆಂಬ ಧರ್ಮದಲ್ಲಿಯೇ ಸ್ಥಿರವಾಗಿ ನಿಂತು, ಪ್ರಜೆಗಳಿಗೆ ಎಷ್ಟೆಷ್ಟು ಬುದ್ಧಿವಾದಗಳನ್ನು ಹೇಳುತಿದ್ದನೋ, ಪ್ರಜೆಗಳೂ ರಾಮನನ್ನು ಅಷ್ಟಷ್ಟು ನಿರ್ಬಂಧಿಸುತ್ತಾ, ಆತನನ್ನೇ ಯುವರಾಜನಾಗಿರಬೇಕೆಂದು ಪ್ರಾರ್ಥಿಸುತಿದ್ದರು. ಆ ಜನರಲ್ಲಿ ಒಬ್ಬೊಬ್ಬರೂ ಕಣ್ಣಿನಲ್ಲಿ ನೀರನ್ನು ಸುರಿಸಿ, ಬಹಳ ದೈನ್ಯದಿಂದ ರಾಮನನ್ನು ಬಿಡದೆ ಹಿಂಬಾಲಿಸುತ್ತಲೇ ಇದ್ದರು. ಇದನ್ನು ನೋಡಿದರೆ, ಆ ರಾಮಲಕ್ಷ್ಮಣರಿಬ್ಬರೂ ತಮ್ಮ ಸದ್ಗುಣಗಳೆಂಬ ಹಗ್ಗಗಳಿಂದ ಆ ಪುರವಾಸಿಗಳನ್ನು ಕಟ್ಟಿ ಎಳೆದುಕೊಂಡು ಹೋಗುವಂತೆ ತೋರುತಿತ್ತು. ಆ ಜನಗಳ ಮಧ್ಯದಲ್ಲಿ ಜ್ಞಾನವೃದ್ಧರಾಗಿಯೂ, ವಯೋವೃದ್ಧರಾಗಿಯೂ, ತಪೋವೃದ್ಧರಾಗಿಯೂ ಇದ್ದ ಕೆಲವು ಬ್ರಾಹ್ಮಣರು, ತಮ್ಮ ಮಿತಿಮೀರಿದ ವಾರ್ಧಕಾವಸ್ಥೆಯಿಂದ ನಡುಗುತ್ತಿರುವ ತಲೆಯುಳ್ಳವರಾಗಿ, ತಾವು ಕೇವಲದುರ್ಬಲರಾಗಿದ್ದರೂ ತಮ್ಮ ಶಕ್ತಿಮೀರಿ ಬಹುದೂರದಿಂದಲೇ ಕೂಗಿ

ಕೊಳ್ಳುತ್ತಾ "ಎಲೈ, ರಥಾಶ್ವಗಳೆ! ಹಿಂತಿರುಗಿರಿ! ನಿಮ್ಮ ಕೈಲಾದಮಟ್ಟಿಗೆ ನೀವೂ ರಾಮನಿಗೆ ಹಿತವನ್ನುಂಟುಮಾಡಿರಿ! ನೀವು ಉತ್ತಮಜಾತಿಯಲ್ಲಿ ಹುಟ್ಟಿದವರೆಂಬುದೇನೋ ನಿಜವು. ನಿಮ್ಮ ಎಣೆಯಿಲ್ಲದ ವೇಗಾತಿಶಯವನ್ನೂ ನಾವು ಬಲ್ಲೆವು. ನಿಮ್ಮ ಸಾಮರ್ಥ್ಯವನ್ನು ತೋರಿಸುವುದಕ್ಕೆ ಇದು ಕಾಲವಲ್ಲ. ನಿಮ್ಮ ಈ ವೇಗಬಲವನ್ನು ಅಯೋಧ್ಯೆಯಕಡೆಗೆ ತೋರಿಸಬಾರದೆ! ಪ್ರಾಣಿಸಾಮಾನ್ಯದಲ್ಲಿ ಮೃಗಗಳಿಗೆ—ಅದರಲ್ಲಿಯೂ ವಿಶೇಷವಾಗಿ ಕುದುರೆಗಳಿಗೆ—ಕರ್ಣೇಂದ್ರಿಯವು ಅತಿಸೂಕ್ಷ್ಮವಾದುದೆಂದು ಪ್ರಸಿದ್ಧಿಯುಂಟಲ್ಲವೆ? ಇಷ್ಟಾದರೂ ನಮ್ಮ ಪ್ರಾರ್ಥನೆಯು ನಿಮ್ಮ ಕಿವಿಗೆ ಬೀಳಲಿಲ್ಲವೆ? ರಾಮನು ಪರಮಧಾರ್ಮಿಕನು. ಬಹಳ ಪರಿಶುದ್ಧಾತ್ಮನು. ಮಹಾವೀರನು. ಅನೇಕವ್ರತಗಳನ್ನು ದೃಢವಾಗಿ ನಡೆಸತಕ್ಕವನು. ಇಂತವನನ್ನು ನೀವು ನಿರ್ಜನವಾದ ಕಾಡಿಗೆ ತೆಗೆದುಕೊಂಡು ಹೋಗುವುದುಚಿತವೆ? ಒಂದುವೇಳೆ ಇಂಥವರು ಕಾಡಿನಲ್ಲಿದ್ದರೂ ಊರಿಗೆ ಕರೆತಂದು ಬಿಡಬೇಕಲ್ಲವೆ? ನೀವು ನಮ್ಮ ಪ್ರಾರ್ಥನೆಯನ್ನು ಕೇಳಿರಿ! ನಮ್ಮಲ್ಲಿ ಪ್ರಸನ್ನರಾಗಿ ಹಿಂತಿರುಗಿರಿ!" ಎಂದು ಗಟ್ಟಿಯಾಗಿ ಎಲ್ಲರೂ ಸೇರಿ ಕೂಗಿಕೊಳ್ಳುತಿದ್ದರು. ಹೀಗೆ ಅತಿದೀನಸ್ವರದಿಂದ ಹುಚ್ಚುಹುಚ್ಚಾಗಿ ಕೂಗಿಕೊಳ್ಳುತ್ತಿರುವ ವೃದ್ಧಬ್ರಾಹ್ಮಣರನ್ನು ನೋಡಿ, ರಾಮನ ಮನಸ್ಸು ಕದಲಿತು. ಆ ಬ್ರಾಹ್ಮಣರನ್ನು ತಿರಸ್ಕರಿಸಿ ಹೋಗಬಾರದೆಂಬ ಧರ್ಮಬುದ್ಧಿಯು ಆತನ ಮನಸ್ಸಿಗೆ ತೋರಿತು. ಇದಲ್ಲದೆ ತನ್ನ ರಥದ ಹಿಂದೆ ಕಾಲುನಡೆಯಿಂದಲೇ ಬರುತ್ತಿದ್ದ ವೃದ್ಧಬ್ರಾಹ್ಮಣರೊಡನೆ ತಾನು ರಥದಲ್ಲಿಯೇ ಕುಳಿತು, ಮಾತನಾಡಿಸುವುದೂ ಉಚಿತವಲ್ಲವೆಂದು ತೋರಿತು. ಆದರೆ ತಾನು ಅಯೋಧ್ಯಾಭಿಮುಖನಾಗಿ ಈ ಬ್ರಾಹ್ಮಣರಿದ್ದಕಡೆಗೆ ತಿರುಗಿದರೆ, ತನ್ನ ವ್ರತಕ್ಕೆ ಭಂಗವುಂಟಾಗುವುದೆಂದಾಲೋಚಿಸಿ, ಅಲ್ಲಿಯೇ ರಥವನ್ನು ನಿಲ್ಲಿಸಿ ಕೆಳಕ್ಕಿಳಿದನು. ಸೀತಾಲಕ್ಷ್ಮಣರನ್ನು ಸಂಗಡ ಕರೆದುಕೊಂಡು ಕಾಲುನಡೆಯಿಂದಲೇ ಮೆಲ್ಲಗೆ ಮುಂದೆ ಹೋಗುತಿದ್ದನು. ಆ ಬ್ರಾಹ್ಮಣರು ಸಮೀಪಿಸುವವರೆಗೂ ಮೆಲ್ಲಗೆ ಕಾಲನ್ನಿಡುತ್ತಾ ಮುಂದೆ ಹೋಗುತಿದ್ದನು. ಹೀಗೆ ಹಿಂತಿರುಗದೆ ಹೋಗುತ್ತಲೇ ಇರುವ ಆ ರಾಮನನ್ನು ನೋಡಿ ಬ್ರಾಹ್ಮಣರೆರೂ ಮನಸ್ಸಿನಲ್ಲಿ ತತ್ತಳಿಸುತ್ತ, ಆತನನ್ನು

ಕುರಿತು, “ವತ್ಸರಾಮಾ! ಇದೇನು? ನೀನು ಯಾವಾಗಲೂ ಬ್ರಾಹ್ಮಣರನ್ನು ಎಷ್ಟೋ ಗೌರವದಿಂದ ಪೂಜಿಸುತಿದ್ದವನಲ್ಲವೆ ? ಈಗ ಅನೇಕಬ್ರಾಹ್ಮಣರು ನಿನ್ನನ್ನು ಬಿಡದೆ ಹಿಂಬಾಲಿಸಿ ಬರುತ್ತಿರುವರು. ಆ ಬ್ರಾಹ್ಮಣರುಮಾತ್ರವೇ ಅಲ್ಲ. ಅವರು ಅರಣಿಯಲ್ಲಿ ಆರೋಪಿತವಾದ ಅಗ್ನಿಗಳನ್ನು ತಮ್ಮ ತಮ್ಮ ಹೆಗಲಿನಮೇಲೆ ಹೊತ್ತುಕೊಂಡು ಬರುವುದರಿಂದ, ಅವರವರ ಅಗ್ನಿಹೋತ್ರಗಳೂ ನಿನ್ನನ್ನು ಹಿಂಬಾಲಿಸುತ್ತಿರುವುವು. ಶರತ್ಕಾಲದ ಮೇಘಗಳಂತೆ ಬಿಳುಪಾದ ನಮ್ಮ ವಾಜಪೇಯಚ್ಛತ್ರಗಳೂ ಇದೋ ನಿನ್ನನ್ನೇ ಹಿಂಬಾಲಿಸಿ ಬರುತ್ತಿರುವುವು. ಈಗ ನಿನಗೆ ಛತ್ರಾದ್ಯುಪಚಾರಗಳೊಂದೂ ಇಲ್ಲವಲ್ಲವೆ ? ನಮಗೆ ವಾಜಪೇಯದಲ್ಲಿ ಬಂದಿರುವ ಈ ಕೊಡೆಗಳಿಂದಲೇ ನಿನಗೆ ನೆಳಲನ್ನುಂಟುಮಾಡುವೆವು. ವತ್ಸನೆ! ಇದುವರೆಗೂ ನಿಶ್ಚಿಂತವಾಗಿ,ಯಾವಾಗಲೂ ವೇದಮಂತ್ರಗಳಲ್ಲಿಯೇ ಪ್ರವರ್ತಿಸುತಿದ್ದ ನಮ್ಮ ಬುದ್ಧಿಯು, ಈಗ ನಿನಗಾಗಿ ವನವಾಸಕ್ಕೆ ಎಳೆಯಲ್ಪಟ್ಟಿರುವುದು. “ಬ್ರಾಹ್ಮಣರಾದವರು ತಮಗೆ ಧನದಂತಿರುವ ವೇದಮಂತ್ರಗಳನ್ನೂ ಬಿಟ್ಟು, ಸಹಧರ್ಮಚಾರಿಣಿಯರಾದ ಪತ್ನಿಯರನ್ನೂ ಕಾಪಾಡದೆ, ನಿನ್ನನ್ನು ಹಿಂಬಾಲಿಸಿ ಕಾಡಿಗೆ ಹೋಗುವುದುಚಿತವೆ?” ಎಂದು ನೀನು ಶಂಕಿಸಬಹುದು. ನಮಗೆ ಪರಮಧನವಾದ ವೇದಮಂತ್ರಗಳೆಲ್ಲವೂ ನಮ್ಮ ಹೃದಯದಲ್ಲಿಯೇ ಇರುವುವು. ನಮ್ಮನಮ್ಮ ಧರ್ಮಪತ್ನಿಯರನ್ನು ಅವರವರ ಪಾತಿವ್ರತ್ಯವೇ ಸುರಕ್ಷಿತವಾಗಿ ಕಾಪಾಡುವುದರಿಂದ, ಅವರು ನಮ್ಮ ಮನೆಗಳಲ್ಲಿಯೇ ಇರುವರು. ನಾವು ಅವರನ್ನು ರಕ್ಷಿಸಬೇಕಾದುದೇ ಇಲ್ಲ. ಈಗ ನಿನ್ನನ್ನು ಹಿಂತಿರುಗಿಸಿ ಕರೆದುಕೊಂಡು ಹೋಗುವುದುಹೊರತು ನಮಗೆ ಬೇರೆ ಕೆಲಸವಿಲ್ಲ. ಈ ವನಪ್ರಯಾಣದ ನಿಶ್ಚಯವನ್ನು ಬಿಟ್ಟುಬಿಡು. ನೀನು ಪಿತೃವಾಕ್ಯಪರಿಪಾಲನವೆಂಬ ನಿನ್ನೊಬ್ಬನ ಧರ್ಮವನ್ನೇ ಕಾಪಾಡಿಕೊಳ್ಳುವುದಾದರೆ, ನಾವೆಲ್ಲರೂ ನಮ್ಮ ಜಾತಿಧರ್ಮಗಳೆಲ್ಲವನ್ನೂ ಬಿಟ್ಟುಬಿಡಬೇಕಾಗಿ ಬರುವುದು. (ನೀನು ಬ್ರಾಹ್ಮಣರಾದ ನಮ್ಮ ಪ್ರಾರ್ಥನೆಗಳನ್ನು ತಿರಸ್ಕರಿಸಿ ಹೋಗಬಾರದೆಂಬ ಧರ್ಮವನ್ನು ಬಿಟ್ಟು ಹೋಗುವುದಾದರೆ, ನೀನು ಬೇರೆಯಾವ ಧರ್ಮವನ್ನೂ ನಡೆಸಿದಂತಾಗುವುದಿಲ್ಲ)ನಿನಗೆ ಇದಕ್ಕಿಂತಲೂ ವಿಶೇಷವಾಗಿ ಅದರಿಸಬೇಕಾದ ಧರ್ಮವು ಬೇರೆ ಯಾವುದುಂಟು? ನೀನು ನಿಶ್ಚಲವಾದ ಧರ್ಮಾ

ನುಷ್ಠಾನವುಳ್ಳವನು. ನಮ್ಮ ಮುಪ್ಪನ್ನು ನೋಡಿಯಾದರೂ ನಿನಗೆ ಮರುಕ ಹುಟ್ಟಬಾರದೆ ? ನಮ್ಮ ತಲೆ ಕೂದಲು ಹಂಸದಂತೆ ಬಿಳುಪಾಗಿ ನರೆತುಹೋಗಿರುವುದನ್ನು ಕಾಣೆಯಾ? ನಮ್ಮ ಈ ಶಿರಸ್ಸುಗಳನ್ನು ನೆಲಕ್ಕೆ ಸೋಕಿಸಿ ನಿನಗೆ ಪ್ರಣಾಮಮಾಡಿ ಕೇಳಿಕೊಳ್ಳುವೆವು.ನೀನು ಹಿಂತಿರುಗು!ನಿನ್ನನ್ನು ಹಿಂಬಾಲಿಸಿ ಇಲ್ಲಿಗೆ ಬಂದಿರುವ ಬ್ರಾಹ್ಮಣರಲ್ಲಿ ಅನೇಕರು ಯಜ್ಞಗಳನ್ನು ಮಾಡುವುದಕ್ಕಾಗಿ ಸಮಸ್ತಸಾಮಗ್ರಿಗಳನ್ನೂ ಸಿದ್ಧಪಡಿಸಿಟ್ಟು ಬಂದಿರುವರು.ನೀನು ಈಗ ಹಿಂತಿರುಗಿದರೆ ಆ ಯಜ್ಞಗಳೆಲ್ಲವೂ ಸಮಾಪ್ತಿಹೊಂದುವುವು.ನೀನು ಹಿಂತಿರುಗದಿದ್ದರೆ ಅವುಗಳಿಗೆ ನೀನೇ ವಿಘ್ನವನ್ನು ತಂದಿಟ್ಟಂತಾಗುವುದು.ಎಲೆ ರಾಮನೆ! ನಾವು ಮಾತ್ರವೇ ಅಲ್ಲ! ಜಂಗಮಗಳಾದ ತಿರ್ಯಗ್ಜಂತುಗಳೂ, ಸ್ಥಾವರಗಳಾದ ವೃಕ್ಷಾದಿಗಳೂ ನಿನ್ನಲ್ಲಿರುವ ಪ್ರೇಮದಿಂದ ನಿನ್ನನ್ನು ಹಿಂತಿರುಗುವಂತೆ ಪ್ರಾರ್ಥಿಸುತ್ತಿರುವುವು.ಆಶ್ರಿತವತ್ಸಲನಾದ ನೀನು ಅವುಗಳ ಪ್ರೀತಿಗಾದರೂ ಸಾಫಲ್ಯವನ್ನುಂಟುಮಾಡು!ನೀನು ಕಾಡಿಗೆ ಹೋಗುವುದನ್ನು ನೋಡಿ ಇಲ್ಲಿರತಕ್ಕ ವೃಕ್ಷಗಳೆಲ್ಲವೂ ನಿನ್ನನ್ನೇ ಹಿಂಬಾಲಿಸಿ ಬರಬೇಕೆಂದು ಪ್ರಯತ್ನಿಸಿದ್ದರೂ,ಅವುಗಳ ಪಾದದಂತಿರುವ ಬೇರು ಕದಲದಿರುವುದರಿಂದ, ನಡೆಯಲಾರದೆ,ಆಶಾಭಂಗವನ್ನು ಹೊಂದಿ, ಗಾಳಿಯ ಅಲೆತಕ್ಕೆ ಸಿಕ್ಕಿ ಧ್ವನಿ ಮಾಡುತ್ತಿರುವುದನ್ನು ನೋಡಿದರೆ, ನಿನ್ನೊಡನೆ ಬರಲಾರದುದಕ್ಕಾಗಿ ಅವು ಸಂಕಟಪಟ್ಟು ಶಾಖೆಗಳೆಂಬ ಬಾಹುಗಳನ್ನು ನೀಡಿ, ಕೂಗಿಕೊಳ್ಳುವಂತೆ ಕಾಣುವುವು. ಪಕ್ಷಿಗಳುಕೂಡ ತಮ್ಮ ಆಹಾರಸಂಚಾರಗಳೆಲ್ಲವನ್ನೂ ಬಿಟ್ಟು ಮರದಮೇಲೆ ಯಾವುದೋ ಒಂದುಕಡೆಯಲ್ಲಿ ಕುಳಿತು ಸಮಸ್ತಪ್ರಾಣಿಗಳಲ್ಲಿಯೂ ದಯೆಯುಳ್ಳ ನಿನ್ನನ್ನು ಹಿಂತಿರುಗಿ ಬರುವಂತೆ ಪ್ರಾರ್ಥಿಸುತ್ತಿರುವುವು ” ಎಂದರು. ಹೀಗೆ ರಾಮನನ್ನು ಹಿಂತಿರುಗಿಸುವುದಕ್ಕಾಗಿ ನಾನಾವಿಧದಲ್ಲಿ ಪ್ರಾರ್ಥಿಸಿ, ಬ್ರಾಹ್ಮಣರೆಲ್ಲರೂ ಗಟ್ಟಿಯಾಗಿ ಕೂಗಿಕೊಳ್ಳುತ್ತಿರಲು, ಇವರ ವಿಲಾಪಧ್ವನಿಯನ್ನು ಕೇಳಿ ಸಹಿಸಲಾರದೆ, ತಮಸಾನದಿಯು ತಾನಾಗಿಯೇ ಬಂದು ರಾಮನ ದಾರಿಯನ್ನು ಅಡ್ಡಗಟ್ಟಿ ನಿಲ್ಲಿಸುವಂತೆ ಮುಂದೆ ಕಾಣಿಸಿತು. ಆಮೇಲೆ ಸುಮಂತ್ರನು ಮಾರ್ಗಶ್ರಮದಿಂದ ಬಳಲಿದ ಕುದುರೆಗಳನ್ನು ಬಿಚ್ಚಿ, ನೀರನ್ನು ಕುಡಿಸಿ, ಅವುಗಳನ್ನು ನೆಲದಮೇಲೆ

ಹೊರಳಿಸಿ, ಅವುಗಳ ಮೈಯ್ಯನ್ನು ಚೆನ್ನಾಗಿ ತೊಳೆದು, ಆ ನದೀತೀರದಲ್ಲಿಯೇ ಮೇಯುವುದಕ್ಕೆ ಬಿಟ್ಟನು. ಇಲ್ಲಿಗೆ ನಾಲ್ವತ್ತೈದನೆಯ ಸರ್ಗವು.

---

ರಾಮನು ತಮಸಾನದೀತೀರದಲ್ಲಿ ವಿಶ್ರಮಿಸಿಕೊಂಡಿದ್ದು, ರಾತ್ರಿಯಲ್ಲಿ ಪ್ರಜೆಗಳನ್ನು ವಂಚಿಸಿ ಮುಂದಕ್ಕೆ ಹೊರಟುದು.

ಹೀಗೆ ರಾಮನು ರಮಣೀಯವಾದ ತಮಸಾತೀರವನ್ನು ಸೇರಿದ ಮೇಲೆ *ಸೀತೆಯನ್ನು ನೋಡಿ, ಲಕ್ಷ್ಮಣನನ್ನು ಕುರಿತು “ವತ್ಸ ಲಕ್ಷ್ಮಣಾ ! ನಾವು ವನವಾಸಕಾಲದಲ್ಲಿ ಕಳೆಯಬೇಕಾದ ರಾತ್ರಿಗಳಲ್ಲಿ ಇದೇ ಮೊದಲನೆಯ ರಾತ್ರಿಯು ! ಈಗಲೇ ಈರಾತ್ರಿಯು ಸನ್ನಿಹಿತವಾಗುತ್ತಿರುವುದು. ಇದು ಮೊದಲ್ಗೊಂಡು ನೀನು ಮನೆಯನ್ನಾಗಲಿ, ತಂದೆತಾಯಿಗಳನ್ನಾಗಲಿ, ಈ ಸೀತೆಯ ಕಷ್ಟದಶೆಯನ್ನಾಗಲಿ ನೆನೆಸಿಕೊಂಡು ಕಳವಳಪಡಕೂಡದು. ಇದೋ! ಮುಂದೆ ಶೂನ್ಯವಾಗಿ ಕಾಣುವ ಅರಣ್ಯಪ್ರದೇಶಗಳನ್ನು ನೋಡು ! ರಾತ್ರಿಯು ಸಮೀಪಿಸಿರುವುದರಿಂದ ಸಂಚಾರಾರ್ಥವಾಗಿ ಹೊರಗೆ ಹೋಗಿದ್ದ ಮೃಗಪಕ್ಷಿಗಳೆಲ್ಲವೂ ತಮ್ಮತಮ್ಮ ಗೂಡುಗಳಿಗೆ ಸೇರುತ್ತಿರುವುವು. ಆ ಮೃಗಪಕ್ಷಿಗಳ ಕೂಗುಗಳಿಂದ ಈ ಅರಣ್ಯವೇ ರೋದನಮಾಡುವಂತಿರುವುದು. † ಈಗ ನಮ್ಮ ತಂದೆಗೆ ರಾಜಧಾನಿಯಾದ ಅಯೋಧ್ಯಾಪಟ್ಟಣದಲ್ಲಿ ಸ್ತ್ರೀಪುರುಷರು ಮೊದಲಾಗಿ, ಅಲ್ಲಿನ ನಿವಾಸಿಗಳೆಲ್ಲರೂ ನಮಗಾಗಿ ದುಃಖಿಸುತ್ತಿರಬಹುದು. ಇದರಲ್ಲಿ ಸಂದೇಹವಿಲ್ಲ. ಪ್ರಜೆಗಳಿಗೆ ದಶರಥನಲ್ಲಿಯೂ, ನಿನ್ನಲ್ಲಿಯೂ, ನನ್ನಲ್ಲಿಯೂ, ಭರತಶತ್ರುಘ್ನರಲ್ಲಿಯೂ ಸಂಪೂರ್ಣವಾದ ಅನುರಾಗವಿರುವುದು. ಮುಖ್ಯವಾಗಿ ನಮ್ಮ ತಂದೆಯಲ್ಲಿರುವ ಅನೇಕಸದ್ಗುಣಗಳು ಅವರ ಮನಸ್ಸನ್ನು ಆಕರ್ಷಿಸಿಬಿಟ್ಟಿರುವುವು. ನನಗೂ ಈಗ ತಂದೆಯನ್ನೂ,

---

* ಇಲ್ಲಿ ಸೀತೆಯನ್ನು ನೋಡಿ ಲಕ್ಷ್ಮಣನಿಗೆ ಹೇಳಿದುದಾಗಿರುವುದರಿಂದ, ಲಕ್ಷ್ಮಣನಂತೆಯೇ ಸೀತೆಯೂ ಮನಸ್ಸುಗುಂದದಿರಬೇಕೆಂಬುದು ರಾಮನ ಅಭಿಪ್ರಾಯವು.

† ಆ ಅಡವಿಯನ್ನು ನೋಡಿದಾಗಲೇ ರಾಮನಿಗೆ ಅಯೋಧ್ಯೆಯ ಸ್ಮರಣೆಯುಂಟಾಯಿತೆಂದು ಗ್ರಹಿಸಬೇಕು.

ಯಶಸ್ವಿನಿಯಾದ ತಾಯಿಯನ್ನೂ, ನೆನೆಸಿಕೊಂಡು ಮಹಾವ್ಯಸನವುಂಟಾಗಿ ರುವುದು. ಅವರ ಗೋಳಾಟವನ್ನು ನೋಡಿ ಸಹಿಸುವುದಕ್ಕಾಗುವುದಿಲ್ಲ. ಹೀಗೆ ಯೇ ಅವರು ಎಡೆಬಿಡದೆ ಕಣ್ಣೀರನ್ನು ಸುರಿಸಿ ಅಳುತಿದ್ದರೆ, ಅವರ ಕಣ್ಣುಗ ಳು ಹೇಗೆತಾನೇ ಕೆಟ್ಟುಹೋಗದಿರುವುವು? ಅವರು ಇದೇ ಅವಸ್ಥೆಯಲ್ಲಿ ದ್ದರೆ ಸ್ವಲ್ಪಕಾಲದೊಳಗಾಗಿ ಕುರುಡರಾಗಿಯೇ ಬಿಡುವರೆಂದು ಶಂಕಿಸು ವೆನು. ಆದರೆ ಭರತನು ಧರ್ಮಗಳೆಲ್ಲವನ್ನೂ ಚೆನ್ನಾಗಿ ತಿಳಿದವನಾದುದರಿಂದ, ಆತನು ಮಾವನ ಮನೆಯಿಂದ ಹಿಂತಿರುಗಿ ಬಂದೊಡನೆಯೇ, ಧರ್ಮಾರ್ಥಯುಕ್ತ ವಾದ ಮಾತುಗಳಿಂದ, ಮೊದಲು ನಮ್ಮ ತಂದೆತಾಯಿಗಳನ್ನು ಸಮಾಧಾನ ಪಡಿಸಬಹುದು. ಆ ಭರತನು ಬಹಳ ದಯಾರ್ದ್ರಹೃದಯನಾಗಿರುವುದ ರಿಂದ, ಅತನ ಸುಸ್ವಭಾವವನ್ನು ಯೋಚಿಸಿದರೆ, ನಮ್ಮ ತಂದೆತಾಯಿಗಳಿ ಗಾಗಿ ನಾವು ಚಿಂತಿಸಬೇಕಾದುದೇ ಇಲ್ಲವೆಂದು ಆಗಾಗ ನನ್ನಷ್ಟಕ್ಕೆನಾನೇ ಸಮಾಧಾನಮಾಡಿಕೊಳ್ಳುವೆನು. ವತ್ಸಲಕ್ಷ್ಮಣಾ! ನೀನು ನನಗೆ ಸಹಾಯ ಕನಾಗಿ ಬಂದುದು ಉತ್ತಮವೇ ಆಯಿತು! ನೀನೂ ಬಾರದಿದ್ದರೆ ಈಸೀತೆಯ ನ್ನು ರಕ್ಷಿಸುವುದಕ್ಕಾಗಿ ಬೇರೆಯವರ ಸಹಾಯವನ್ನು ಕೋರಬೇಕಾಗಿತ್ತಲ್ಲ ವೆ? ಈಗ ನನಗೆ ಆ ಕಷ್ಟವಿಲ್ಲ! ಅದೆಲ್ಲವೂ ಹಾಗಿರಲಿ! ನಮ್ಮ ವನವಾಸಕ್ಕೆ ಇದೇ ಮೊದಲನೆಯ ದಿನವು. ಮತ್ತು ಈ ಸ್ಥಳವು ತಮಸಾನದಿಯ ತೀರವೆನಿಸಿ ಕೊಂಡಿರುವುದರಿಂದ, ಪುಣ್ಯಕ್ಷೇತ್ರವಾಗಿಯೂ ಇರುವುದು. ಆದುದರಿಂದ ಈ ದಿವಸದಲ್ಲಿ, ನಾವು ಉಪವಾಸವಿರುವುದೇ ಉತ್ತಮವೆಂದು ತೋರುವುದು. ಅದ ಕ್ಕಾಗಿ ಈಗ ನಾವು ನೀರನ್ನುಮಾತ್ರ ಕುಡಿದು ಹಾಗೆಯೇ ಮಲಗಿಬಿಡುವೆವು ಇಲ್ಲಿ ನಮಗೆ ಕಾಡಿನಲ್ಲಿ ಬೆಳೆಯುವ ಹಣ್ಣುಮೊದಲಾದ ಆಹಾರಪದಾರ್ಥ ಗಳು ಬೇಕಾದಷ್ಟು ಸಿಕ್ಕುವುವು. ಹಾಗಿದ್ದರೂ ಈಗ ನನಗೊಂದೂ ಸೇರುವು ದಿಲ್ಲ"ಎಂದನು. ಆಮೇಲೆ ಸುಮಂತ್ರನನ್ನು ನೋಡಿ, ‘‘ಎಲೆಸೂತನೆ! ಕುದು ರೆಗಳನ್ನು ನೀನು ಜಾಗ್ರತೆಯಿಂದ ನೋಡುತ್ತಿರು. ಹೋಗು"ಎಂದನು. ಒಡ ನೆಯೇ ಸುಮಂತ್ರನು ಸೂರ್ಯನು ಮುಳುಗಿದಕೂಡಲೆ, ಆ ಕುದುರೆಗಳನ್ನು ಒಂದುಕಡೆಯಲ್ಲಿ ಕಟ್ಟಿ, ಅವುಗಳಿಗೆ ಹುಲ್ಲುಹಾಕಿ, ಮುಂದಿನಕಾರ್ಯವೇನೆಂದು ರಾಮನ ಆಜ್ಞೆಯನ್ನು ನಿರೀಕ್ಷಿಸುತ್ತಿದ್ದನು. ಆಮೇಲೆ ಆ ಸುಮಂತ್ರನು

ಸಂಧ್ಯಾಕಾಲದಲ್ಲಿ ನಡೆಸಬೇಕಾದ ತನ್ನ ಉಪಾಸನಾದಿಕಾರ್ಯಗಳನ್ನು ಮುಗಿಸಿ, ರಾತ್ರಿಯಾಗುವುದನ್ನು ನೋಡಿ, ಲಕ್ಷ್ಮಣನೊಡಗೂಡಿ ರಾಮನಿಗೆ ಹಾಸಿಗೆಯನ್ನು ಸಿದ್ಧಪಡಿಸಿಟ್ಟನು. ಹೀಗೆ ಆ ನದಿಯ ತೀರದಲ್ಲಿ ಮರಹಲೆಗಳಿಂದ ತನಗೆ ಮಾಡಿಟ್ಟಿರುವ ಹಾಸಿಗೆಯನ್ನು ನೋಡಿ ರಾಮನು, ಸೀತಾಲಕ್ಷ್ಮಣರೊಡನೆ ಮಲಗಿದನು. ಆಮೇಲೆ ಲಕ್ಷ್ಮಣನು, ಸೀತೆಯೂ ರಾಮನೂ ಮಲಗಿರುವುದನ್ನು ನೋಡಿ,ತಾನು ಎಚ್ಚರವಾಗಿಯೇ ಇದ್ದು ಸುಮಂತ್ರನೊಡನೆ ನಾನಾವಿಧವಾದ ಸಲ್ಲಾಪಗಳನ್ನು ಮಾಡುತ್ತಾ, ರಾಮನ ಗುಣಗಳನ್ನು ಕೊಂಡಾಡುತಿದ್ದನು. ಹೀಗೆ ಅವರು ಮಾತಾಡುತ್ತಿರುವಾಗಲೇ ರಾತ್ರಿಯು ಕಳೆದು ಬೆಳಗಾಗಿ ಸೂರ್ಯನೂ ಉದಿಸುತ್ತಿದ್ದನು. ರಾಮನು ತನ್ನನ್ನು ಹಿಂಬಾಲಿಸಿ ಬಂದ ಪುರಜನರೊಡನೆ ಸೇರಿ ಅನೇಕಗೋಸಮೂಹದಿಂದ ಕೂಡಿದ ಆ ತಮಸಾನದಿಯ ತೀರದಲ್ಲಿಯೇ ಆರಾತ್ರಿಯೆಲ್ಲವನ್ನೂ ಕಳೆದು, ಬೆಳಗಿನಜಾವದಲ್ಲಿ ಎದ್ದು,ತನ್ನ ಸುತ್ತಲೂ ಇದ್ದ ಪ್ರಜೆಗಳನ್ನು ನೋಡಿ, ಲಕ್ಷ್ಮಣನನ್ನು ಕುರಿತು''ವತ್ಸಲಕ್ಷ್ಮಣಾ! ಈ ಜನರನ್ನುನೋಡಿದೆಯಾ?ಇವರು ನಮ್ಮಲ್ಲಿರತಕ್ಕ ಪ್ರೀತಿವಿಶೇಷದಿಂದ ತಮ್ಮಮನೆಮಠಗಳಲ್ಲಿಯೂ ಆಸೆಯನ್ನು ಬಿಟ್ಟು ನಮ್ಮನ್ನು ಹಿಂಬಾಲಿಸಿ ಬಂದು,ಈಮರದಕೆಳಗೆಮಲಗಿರುವರು.ಇವರುನಮ್ಮನ್ನುಹಿಂತಿರುಗಿಸುವುದಕ್ಕಾಗಿ ಪಡುವಕಷ್ಟವನ್ನು ನೋಡಿದರೆ,ತಮ್ಮಪ್ರಾಣವನ್ನಾದರೂ ಬಿಟ್ಟುಬಿಡುವರೇಹೊರತು, ತಾವು ಹಿಡಿದ ಪಟ್ಟನ್ನು ಬಿಡುವಹಾಗೆ ತೋರುವುದಿಲ್ಲ.ಇವರಿಂದ ತಪ್ಪಿಸಿಕೊಂಡುಹೋಗುವುದಕ್ಕೆ ನಮಗೆ ಬೇರೆಉಪಾಯವಿಲ್ಲ. ಆದುದರಿಂದ ಈಗ ಇವರು ಮಲಗಿರುವಾಗಲೇ ನಾವು ರಥದಮೇಲೆ ಹತ್ತಿ, ನಮ್ಮದಾರಿಯನ್ನು ಹಿಡಿದು ಬೇಗನೆ ಹೊರಟುಹೊಗುವುದುತ್ತಮವು.ನಾವು ಹೀಗೆ ಮಾಡಿದರೆ ಈಪ್ರಜೆಗಳಿಗೆ ಇನ್ನುಮೇಲೆ ಮರದಡಿಯಲ್ಲಿ ಮಲಗುವ ಕಷ್ಟವನ್ನು ತಪ್ಪಿಸಿದಂತಾಗುವುದು.ಹಾಗಿಲ್ಲದಿದ್ದರೆ ಇವರು ನಾವು ಹೋದಕಡೆಗೆಲ್ಲಾ ನಮ್ಮನ್ನು ಹಿಂಬಾಲಿಸಿ ಬರುವರು. ನಮ್ಮಂತೆಯೇ ಮರದಕೆಳಗೆ ಮಲಗಿ ಕಷ್ಟಪಡುವರು. ಪ್ರಜೆಗಳು ಕಷ್ಟಪಡದಂತೆ ಮಾಡಬೇಕಾದುದೇ ರಾಜಕುಮಾರರಿಗೆ ಮುಖ್ಯಧರ್ಮವು. ಆದುದರಿಂದ ನಮಗಾಗಿ ಅವರು ದುಃಖಪಡುವಂತೆ ಮಾಡಬಾರದು"ಎಂದನು. ಇದ

ನ್ನು ಕೇಳಿ ಲಕ್ಷ್ಮಣನು ಧರ್ಮಸ್ವರೂಪನಾದ ರಾಮನನ್ನು ಕುರಿತು “ಅಣ್ಣಾ! ನನಗೂ ಹಾಗೆಯೇ ತೋರುವುದು. ಬೇಗ ರಥವನ್ನೇರು.” ಎಂದು ಹೇಳಲು, ರಾಮನು ಆ ಜನರನ್ನು * ವಂಚಿಸಿ ಹೋಗಬೇಕೆಂದೇ ನಿಶ್ಚಯಿಸಿ, ಸುಮಂತ್ರನಿಗೆ ರಥವನ್ನು ಸಿದ್ಧಪಡಿಸುವಂತೆ ಹೇಳಿ, ಆಸ್ಥಳವನ್ನು ಶೀಘ್ರದಲ್ಲಿಯೇ ಬಿಟ್ಟು ಅರಣ್ಯಪ್ರದೇಶಕ್ಕೆ ಹೋಗುವಹಾಗೆ ಹೇಳಿದನು. ಆಕ್ಷಣವೇ ಸುಮಂತ್ರನು ರಥಕ್ಕೆ ಕುದುರೆಗಳನ್ನು ಕಟ್ಟಿ ಸಿದ್ಧಪಡಿಸಿ, ರಾಮನಬಳಿಗೆ ಬಂದು ಕೈಮುಗಿದು ನಿಂತು “ಎಲೈ ಮಹಾಬಾಹುವಾದ ರಾಮನೆ! ಇದೋ ರಥವು ಸಿದ್ಧವಾಗಿರುವುದು. ನೀನು ಸೀತಾಲಕ್ಷ್ಮಣರೊಡನೆ ಏರಬಹುದು” ಎಂದನು ರಾಮನು, ಬಿಲ್ಲು, ಕವಚ ಮೊದಲಾದ ಪರಿಕರಗಳೊಡನೆ ಆ ರಥವನ್ನೇರಿ, ವೇಗದಿಂದ ಪ್ರವಹಿಸುವುದಾಗಿಯೂ, ಬಹಳ ಸುಳಿಗಳುಳ್ಳುದಾಗಿಯೂ ಇರುವ ಆ ತಮಸಾನದಿಯನ್ನು ದಾಟಿದನು. ಆ ನದಿಯನ್ನು ದಾಟಿದಮೇಲೆ,ಮುಂದೆ ಒಂದು ದೊಡ್ಡದಾರಿಯನ್ನು ಸೇರಿ ಕ್ರೂರಮೃಗಗಳ ಬಾಧೆಯೊಂದೂ ಇಲ್ಲದೆ ನಿರ್ಭಯವಾಗಿರುವ ಆದಾರಿಯಲ್ಲಿ ರಥದಿಂದಿಳಿದು, ಕಾಲುನಡೆಯಿಂದಲೇ ಹೋಗುತಿದ್ದನು. ಅತ್ತಲಾಗಿ ಹಿಂದೆ ತನ್ನನ್ನು ಹಿಂಬಾಲಿಸಿ ಬರುತಿದ್ದ ಪುರವಾಸಿಗಳಿಗೆ, ತಾನು ಹೋದ ದಾರಿಯು ತಿಳಿಯದಿರಬೇಕೆಂಬುದಕ್ಕಾಗಿ, ಸಾರಥಿಯನ್ನು ಕುರಿತು “ಎಲೈಸುಮಂತ್ರನೆ! ನೀನೊಬ್ಬನೇ ರಥದಲ್ಲಿ ಕುಳಿತು, ಅದನ್ನು ಈ ಉತ್ತರದಿಕ್ಕಿನಕಡೆಗೆ ಸ್ವಲ್ಪ ದೂರ ನಡೆಸಿಕೊಂಡುಹೋಗಿ ಹಿಂತಿರುಗಿ ಬಂದುಬಿಡು! ಆಗ ಈ ಪುರಜನರು ನಾನು ಪುನಃ ಅಯೋಧ್ಯೆಯಕಡೆಗೆ ಹೊರಟುಹೋದೆನೆಂದು ತಿಳಿದುಕೊಳ್ಳು

* ದಯಾನಿಧಿಯಾದ ರಾಮನು, ತನ್ನಲ್ಲಿ ಪ್ರೀತಿಯಿಂದ ಹಿಂಬಾಲಿಸಿ ಬಂದವರನ್ನು ವಂಚಿಸಿಹೋದುದು ಅನುಚಿತವೆಂದು ಶಂಕೆಯುಂಟಾಗಬಹುದು. ಇದುವಂಚನೆಯೆಂದು ತಿಳಿಯಕೂಡದು ಆ ಪ್ರಜೆಗಳೊಡನೆ ತಾನು ಯಾವಾಗಲೂ ಕಲೆತಿದ್ದರೆ, ಅವರಿಗೆ ಆ ಆನಂದವು ಉನ್ಮತ್ತಕವಾಗಿ ಅವರ ಸತ್ವವೇ ಹೋಗಿಬಿಡುವುದು. ಅವರಿಗೆ ಸ್ವಾತ್ಮಾನುಭವವು ಚೆನ್ನಾಗಿ ಬೇರೂರಬೇಕೆಂಬುದಕ್ಕಾಗಿಯೇ, ವ್ರಣಚಿಕಿತ್ಸೆಯಂತೆ, ವನವಾಸದಿಂದ ಅವರಿಗೆ ತನ್ನ ವಿಶ್ಲೇಷವನ್ನುಂಟುಮಾಡಿದುದಾಗಿ ಗ್ರಹಿಸಬೇಕು. ಇದು ಅವರಿಗೆ ಹಿತವೇಹೊರತು ವಂಚನೆಯಲ್ಲ. ರಾಮನಿಗೆ ಈ ಸಂಕಲ್ಪವಿಲ್ಲದಿದ್ದರೆ, ಆ ಜನರಲ್ಲಿ ಕೊನೆಗೆ ಯಾರಾದರೂ ಒಬ್ಬರು ಸುಮಂತ್ರಲಕ್ಷ್ಮಣರಂತೆ ಎಚ್ಚರಗೊಂಡಿರುತಿದ್ದರಲ್ಲವೆ? ಹಾಗಿಲ್ಲದುದರಿಂದ ಇದು ರಾಮನ ಸಂಕಲ್ಪವೆಂದೇ ತಿಳಿಯಬೇಕು.

ವರು. ಆದುದರಿಂದ ನೀನು ಆ ಕಡೆಗೆ ಬಹುವೇಗವಾಗಿ ರಥವನ್ನು ನಡೆಸಿ ಕೊಂಡು ಹೋಗಿ, ಅಲ್ಲಿಂದ ಬೇರೆದಾರಿಯುನ್ನು ಹಿಡಿದು, ಇತ್ತಲಾಗಿ ಹಿಂತಿರುಗಿ ಬಿಡು! ಮುಖ್ಯವಾಗಿ ನಾನು ಕಾಡಿಗೆ ಹೋದುದು ಈ ಪುರವಾಸಿಗಳಿಗೆ ತಿಳಿಯದಂತೆ ಮಾಡು" ಎಂದನು. ಅದರಂತೆಯೇ ಸುಮಂತ್ರನು ತಾನೊಬ್ಬನೇ ರಥದಲ್ಲಿ ಕುಳಿತು, ಅದನ್ನು ಉತ್ತರದಿಕ್ಕಿಗೆ ಬಿಟ್ಟುಕೊಂಡುಹೋಗಿ, ಹಿಂತಿರುಗಿ ಬಂದು ರಾಮನಿಗೊಪ್ಪಿಸಿದನು. ಆಮೇಲೆ ಸೀತೆಯೊಡಗೂಡಿ ರಾಮಲಕ್ಷ್ಮಣರಿಬ್ಬರೂ ರಥವನ್ನೇರಲು, ಸುಮಂತ್ರನು ಆ ರಥವನ್ನು ತಪೋವನಕ್ಕೆ ಅಭಿಮುಖವಾಗಿ ಬಿಡುವುದಕ್ಕೆ ಮೊದಲು, ಪ್ರಯಾಣಕಾಲಕ್ಕೆ ಉಚಿತವಾದ ಶುಭಸೂಚನೆಗಳನ್ನು ಕಾಣಬೇಕೆಂಬುದಕ್ಕಾಗಿ, ಅದನ್ನು ಉತ್ತರಾಭಿಮುಖವಾಗಿ ತಿರುಗಿಸಿಟ್ಟನು. ಆಮೇಲೆ ಅವರೆಲ್ಲರೂ ಕಾಡಿಗೆ ಅಭಿಮುಖವಾಗಿ ಹೊರಟರು. ಇಲ್ಲಿಗೆ ನಾಲ್ವತ್ತಾರನೆಯ ಸರ್ಗವು.

---

### { ರಾಮನಿಂದ ವಂಚಿಸಲ್ಪಟ್ಟ ಪ್ರಜೆಗಳು ದುಃಖದಿಂದ ಅಯೋಧ್ಯೆಗೆ ಹಿಂತಿರುಗಿದುದು. }

ಬೆಳಗಾದಕೂಡಲೆ ಅಲ್ಲಿ ಮಲಗಿದ್ದ ಪುರವಾಸಿಗಳೆಲ್ಲರೂ ಎಚ್ಚರಗೊಂಡು,ರಾಮನನ್ನು ಕಾಣದೆ,ದುಃಖದಿಂದ ಏನೊಂದೂ ತೋರದೆ, ಸಬ್ಧರಾಗಿದ್ದರು.ಒಬ್ಬೊಬ್ಬರ ಕಣ್ಣಿನಲ್ಲಿಯೂ ದುಃಖಬಾಷ್ಪವುಸುರಿಯುತ್ತಿತ್ತು. ಒಬ್ಬೊಬ್ಬರೂ ಅಲ್ಲಲ್ಲಿ ಹುಡುಕುವುದಕ್ಕಾರಂಭಿಸಿದರು. ರಾಮನುಹೋದದಾರಿಯನ್ನು ತಿಳಿಸತಕ್ಕ ಚಿಹ್ನವೊಂದೂ ಕಾಣಲಿಲ್ಲ. ಅವರೆಲ್ಲರೂ ದುಃಖದಿಂದ ಕಂದಿದ ಮುಖವುಳ್ಳವರಾಗಿ, ರಾಮನ ಅಗಲಿಕೆಯನ್ನು ಸಹಿಸಲಾರದೆ ಬಹುದೈನ್ಯದಿಂದ ವಿಲಪಿಸುತ್ತಾ, ಒಬ್ಬರಿಗೊಬ್ಬರು ವ್ಯಸನವಾರ್ತೆಗಳನ್ನು ಹೇಳಿಕೊಳ್ಳುತ್ತಿದ್ದರು.“ಛೀ! ನಮಗೆ ಈ ಹಾಳುನಿದ್ರೆಯೇಕೆ ಬಂದಿತು! ಮಹಾಪಾಪಿಷ್ಠವಾದ ಆನಿದ್ರೆಯು ನಮಗೆ ಮೈಮೇಲೆ ಜ್ಞಾನವಿಲ್ಲದಂತೆಮಾಡಿದುದರಿಂದಲ್ಲವೇ ಹೀಗಾಯಿತು!ಉಬ್ಬಿದ ಹೆಗಲುಳ್ಳವನಾಗಿಯೂ, ಮಹಾಬಾಹುವಾಗಿಯೂ ಇರುವ ರಾಮನನ್ನು ಅಗಲಿಸುವುದಕ್ಕೆ ಈನಿದ್ರೆಯೇ ಕಾರಣ

ವಾಯಿತು ! ಅಥವಾ ನಮ್ಮ ನಿದ್ರೆಯನ್ನೇಕೆ ನಿಂದಿಸಬೇಕು ! ಆಶ್ರಿತವತ್ಸಲ ನೆಂದು ಪ್ರಸಿದ್ಧಿಯನ್ನು ಹೊಂದಿದ ಆ ರಾಮನು,ನಂಬಿಬಂದ ನಮ್ಮನ್ನು ಹೀ ಗೆ ಬಿಟ್ಟುಹೋಗಬಹುದೇ?ತಂದೆಯು ಹೊಟ್ಟೆಯಲ್ಲಿ ಹುಟ್ಟಿದಮಕ್ಕಳನ್ನು ಕಾ ಪಾಡುವಂತೆ ಆತನು ನಮ್ಮನ್ನು ಕಾಪಾಡುತಿದ್ದನಲ್ಲಾ! ರಘುವಂಶಶ್ರೇಷ್ಠ ನಾದ ಆರಾಮನು ನಮ್ಮನ್ನು ಬಿಟ್ಟು ಹೇಗೆತಾನೇ ಕಾಡಿಗೆ ಹೋದನು? ಈಗ ನಾವು ಇಲ್ಲಿಯೇ ಪ್ರಾಯೋಪವೇಶವನ್ನು ಮಾಡಿ ಸಾಯುವುದೇ ಮೇಲು!ಅ ಥವಾ ಮರಣದೀಕ್ಷೆಯನ್ನು ಕೈಕೊಂಡು, ಉತ್ತರಾಭಿಮುಖವಾಗಿ ಹೊರಟು ಮಹಾಪ್ರಸ್ಥಾನವನ್ನು ಮಾಡಿ ಪ್ರಾಣವನ್ನು ಬಿಡುವುದಾದರೂ ಉತ್ತಮವು. ರಾಮನನ್ನು ಬಿಟ್ಟು ನಾವು ಇನ್ನೂ ಬದುಕಿರುವುದೇಕೆ ? ಅಥವಾ ಇದೋ ಇಲ್ಲಿ ಬೇಕಾದಷ್ಟು ಕಟ್ಟಿಗೆಗಳು ಸಿಕ್ಕುವುವು. ಚಿತೆಯನ್ನೊಡ್ಡಿ ನಾವೆಲ್ಲರೂ ಒಟ್ಟಿಗೆ ಬೆಂಕಿಯಲ್ಲಿ ಬಿದ್ದುಬಿಡುವೆವೆ? ಹಾಗಿಲ್ಲದೆ ನಾವು ಅಯೋಧ್ಯೆಗೆ ಹಿಂ ತಿರುಗಿದರೆ ಕೇಳಿದವರಿಗೆ ನಾವು ಏನುತ್ತರವನ್ನು ಕೊಡಬಲ್ಲೆವು ? ಮಹಾ ಬಾಹುವಾಗಿ, ಅಸೂಯಾರಹಿತನಾಗಿ, ಸಮಸ್ತಪ್ರಾಣಿಗಳೊಡನೆಯೂ ಪ್ರಿಯವನ್ನೇ ನುಡಿಯತಕ್ಕ ರಾಮನನ್ನು ನಾವೇ ಕಾಡಿನಲ್ಲಿ ಬಿಟ್ಟುಬಂದೆ ವೆಂದು ಹೇಳಬೇಕಾಗಿರುವುದಲ್ಲವೆ ? ಈ ಮಾತನ್ನು ಹೇಗೆ ತಾನೇ ಬಾಯಿ ಬಿಟ್ಟು ಹೇಳಬಲ್ಲೆವು ! ಅಯೋಧ್ಯೆಯಲ್ಲಿರತಕ್ಕ ಜನರೆಲ್ಲರೂ ಈಗ ದುಃಖಿತ ರಾಗಿದ್ದರೂ, ನಾವು ಹಿಂತಿರುಗಿ ಹೋಗುವವರೆಗೂ ರಾಮನ ಪ್ರತ್ಯಾಗಮ ನವನ್ನು ಕುರಿತು ಸ್ವಲ್ಪ ಮಟ್ಟಿಗಾದರೂ ಆಶೋತ್ತರವನ್ನಿಟ್ಟುಕೊಂಡಿರುವು ದರಲ್ಲಿ ಸಂದೇಹವಿಲ್ಲ. ಈಗ ನಾವೂ ರಾಮನನ್ನು ಬಿಟ್ಟುಹೋದರೆ, ಆ ಅಯೋ ಧ್ಯೆಯೆಲ್ಲವೂ ಆಶಾಭಂಗವನ್ನು ಹೊಂದಿ ದುಃಖಿಸುವುದು. ಸ್ತ್ರೀಬಾಲವೃದ್ಧ ರೂ ಸಂಕಟದಿಂದ ಗೋಳಿಡುವುದಕ್ಕಾರಂಭಿಸುವರು. ಜಿತೇಂದ್ರಿಯನಾಗಿ ಮಹಾವೀರನೆನಿಸಿಕೊಂಡಿರುವ ರಾಮನೊಡನೆ ಆಗ ಅಯೋಧ್ಯೆಯಿಂದ ಹೊ ರಟುಬಂದೆವು. ಈಗ ಅವನನ್ನು ಬಿಟ್ಟು ಹೇಗೆತಾನೇ ನಾವು ಅಪಟ್ಟಣಪ್ರ ವೆ ಶವನ್ನು ಮಾಡಬಲ್ಲೆವು? ರಾಮಶೂನ್ಯವಾದ ಆ ಅಯೋಧ್ಯೆಯನ್ನು ನೋಡಿ ನಾವು ಹೇಗೆತಾನೇ ಸಹಿಸಬಲ್ಲೆವು?" ಎಂದು ಅಲ್ಲಿದ್ದ ಜನರೆಲ್ಲರೂ ಎರಡು ತೋಳುಗಳನ್ನೂ ಸೀಡಿಕರುವನ್ನು ಕಾಣದ ಹಸುಗಳಂತೆ ಪರಮದುಃಖದಿಂದ

ಅಳುತಿದ್ದರು. ಹೀಗೆ ಅವರು ರಥಚಕ್ರದ ದಾರಿಯನ್ನೇ ಅನುಸರಿಸಿ ಸ್ವಲ್ಪ ದೂರ ಹೋಗಿ, ಆಮೇಲೆ ಆ ರೇಖೆಯೂ ತಿಳಿಯದುದರಿಂದ ದುಃಖಿತರಾಗಿ ಹಿಂತಿರುಗಿಬರುತ್ತಾ, ಒಬ್ಬರಿಗೊಬ್ಬರು "ಇದೇನು ಈ ವಿಪರೀತವು? ಈಗ ನಾವು ಮಾಡಬೇಕಾದುದೇನು? ಆ ದುರ್ದೈವವು ನಮ್ಮನ್ನು ಪೂರ್ಣವಾಗಿ ಕೆಡಿಸಿಬಿಟ್ಟಿತು." ಎಂದು ವಿಲಪಿಸುತ್ತಾ ತಾವು ಹೋದ ದಾರಿಯನ್ನೇ ಹಿಡಿದು ಹಿಂತಿರುಗಿದರು. ಒಬ್ಬರ ಮನಸ್ಸಾದರೂ ನಿಶ್ಚಿಂತವಾಗಿರಲಿಲ್ಲ. ಹೀಗೆ ಅವರೆಲ್ಲರೂ ಕೂಡಿಹೊರಟು, ದುಃಖಿತರಾದ ಜನರಿಂದ ತುಂಬಿದ ಅಯೋಧ್ಯಾಪಟ್ಟಣವನ್ನು ಪ್ರವೇಶಿಸಿದರು. ಆಪಟ್ಟಣವನ್ನು ನೋಡಿದಾಗ ಅವರ ಮನಸ್ಸು ಮತ್ತಷ್ಟು ವ್ಯಾಕುಲವಾಯಿತು. ಆ ಪಟ್ಟಣದಲ್ಲಿ ಪ್ರತಿನಿತ್ಯವೂ ನಡೆಯಬೇಕಾದ ಸಂಮಾರ್ಜನಾದಿಸಂಸ್ಕಾರಗಳೂ ಕೂಡ ನಡೆದಿರಲಿಲ್ಲ. ಹೀಗೆ ಹೀನದಶೆಯಲ್ಲಿರುವ ಆ ಪಟ್ಟಣವನ್ನು ನೋಡಿದೊಡನೆಯೇ, ಆ ಜನರ ಕಣ್ಣುಗಳಿಂದ ಘಳಘಳನೆ ಕಣ್ಣೀರು ಸುರಿಯಿತು. ಗರುಡನು ಮಡುವಿನಲ್ಲಿ ಬಹುಕಾಲದಿಂದ ಕಾವಲಿದ್ದ ಒಂದು ಮಹಾಸರ್ಪವನ್ನೆತ್ತಿಕೊಂಡು ಹೋದಮೇಲೆ, ಆ ಮಡುವು ಹೇಗೋ ಹಾಗೆ, ರಾಮನಿಲ್ಲದ ಆ ಅಯೋಧ್ಯೆಯು ಕಾಂತಿಹೀನವಾಗಿತ್ತು. ಚಂದ್ರನಿಲ್ಲದ ಆಕಾಶದಂತೆಯೂ, ನೀರಿಲ್ಲದ ಸಮುದ್ರದಂತೆಯೂ ಉತ್ಸಾಹವಿಲ್ಲದ ಆ ಪಟ್ಟಣವನ್ನು ನೋಡಿದೊಡನೆ, ಅವರೆಲ್ಲರಿಗೂ ವ್ಯಸನದಿಂದ ಪ್ರಜ್ಞೆತಪ್ಪಿದಂತಾಯಿತು. ಮೊದಲೇ ಮಹಾದುಃಖದಿಂದ ಪೀಡಿತರಾದ ಈ ಪುರಜನರೆಲ್ಲರೂ ಆ ಪಟ್ಟಣವನ್ನು ನೋಡಿ ಮತ್ತಷ್ಟು ವ್ಯಸನಗೊಂಡವರಾಗಿ, ತಮ್ಮ ಮನೆಗಳನ್ನು ಪ್ರವೇಶಿಸುವಾಗ, ಆ ಮನೆಗಳು ಸಮಸ್ತಸಂಪತ್ತುಗಳಿಂದಲೂ ತುಂಬಿದ್ದರೂ, ಎಷ್ಟೋ ಕಷ್ಟಗಳಿಂದ ಅವುಗಳನ್ನು ಪ್ರವೇಶಿಸಿದರು. ತಮ್ಮ ಬಂಧುಮಿತ್ರಾದಿಗಳು ತಮ್ಮ ಕಣ್ಣೆದುರಿಗೆ ಬಂದುನಿಂತಿದ್ದರೂ, ಅವರು ಯಾರೆಂದು ತಿಳಿಯಲಾರದೆ ವ್ಯಸನದಿಂದ ಬುದ್ಧಿಗೆಟ್ಟವರಾಗಿದ್ದರು. ಇಲ್ಲಿಗೆ ನಾಲ್ವತ್ತೇಳನೆಯ ಸರ್ಗವು.

## ಪುರಜನರ ದುಃಖವು.

ಆ ಪುರವಾಸಿಗಳೆಲ್ಲರೂ ಹೀಗೆ ರಾಮನನ್ನು ಕಾಣದೆ ಮಹಾವ್ಯಸನದಿಂದ ಪೀಡಿತರಾಗಿ, ಕಣ್ಣೀರನ್ನು ಸುರಿಸುತ್ತಾ, ಆಗಾಗಮೂರ್ಛೆಬಿದ್ದೇಳುತ್ತಾ, ಹಿಂತಿರುಗಿ ಪಟ್ಟಣಕ್ಕೆ ಬಂದುಸೇರಿದರು. ತಮ್ಮ ಪ್ರಾಣವೇ ಉತ್ಕ್ರಾಂತವಾಗಿ ಹೋದಂತೆ ಶಕ್ತಿಗುಂದಿದವರಾಗಿ ತಮ್ಮ ತಮ್ಮ ಮನೆಯನ್ನೂ ಸೇರಿದರು. ಅಲ್ಲಿಯೂ ಹೆಂಡಿರುಮಕ್ಕಳೊಡಗೂಡಿ ಕಣ್ಣೀರುಬಿಟ್ಟು ಅಳುವುದಕ್ಕಾರಂಭಿಸಿದರು. ತಮ್ಮ ತಮ್ಮ ಸ್ನೇಹಿತರನ್ನು ನೋಡಿದರೂ ಅವರ ಮನಸ್ಸಿನಲ್ಲಿ ಸಂತೋಷವುಂಟಾಗಲಿಲ್ಲ. ಎಷ್ಟೇ ಅಪೂರ್ವಪದಾರ್ಥಗಳನ್ನು ಮುಂದೆ ತಂದಿಟ್ಟರೂ ಆದರಿಸುತ್ತಿರಲಿಲ್ಲ. ವರ್ತಕರು ತಮ್ಮ ತಮ್ಮ ವಿಕ್ರಯಪದಾರ್ಥಗಳೊಂದನ್ನೂ ತೆರೆದಿಡಲಿಲ್ಲ. ಅಲ್ಲಿ ಅಗ್ನಿಹೋತ್ರಾದಿ ಪುಣ್ಯಕಾರ್ಯಗಳೊಂದೂ ನಡೆಯಲಿಲ್ಲ. ಗೃಹಸ್ಥರು ಮನೆಯಲ್ಲಿ ಅಡಿಗೆಯನ್ನೇ ಮಾಡಲಿಲ್ಲ. ಅಮೂಲ್ಯವಾದ ವಸ್ತುಗಳನ್ನು ಕಳೆದುಕೊಂಡವರು, ಆ ಪದಾರ್ಥವು ಪುನಃ ಲಭಿಸಿದರೂ ಸಂತೋಷಿಸುತ್ತಿರಲಿಲ್ಲ. ವಿಶೇಷವಾದ ಆಕಸ್ಮಿಕಧನಪ್ರಾಪ್ತಿಯುಂಟಾದರೂ ಅದರಿಂದ ಸಂತೋಷಿಸುತ್ತಿರಲಿಲ್ಲ. ಸ್ತ್ರೀಯರು ಬಹುಕಾಲದಿಂದ ಮಕ್ಕಳಿಲ್ಲದಿದ್ದು ಒಂದು ಗಂಡುಮಗುವನ್ನು ಪಡೆದರೂ ಸಂತೋಷಹೊಂದಲಿಲ್ಲ. ಮನೆಮನೆಗಳಲ್ಲಿಯೂ ಹೆಂಗಸರು ದುಃಖದಿಂದ ಗೋಳಿಡುತ್ತ, ರಾಮನಿಂದ ವಂಚಿತರಾಗಿ ಹಿಂತಿರುಗಿ ಬಂದ ತಮ್ಮ ಪತಿಗಳನ್ನು ನೋಡಿ, ಅಂಕುಶದಿಂದ ಆನೆಯನ್ನು ಚುಚ್ಚುವಂತೆ, ಮರ್ಮಭೇದಕವಾದ ಮಾತುಗಳನ್ನಾಡಿ ಹೀಗಳೆಯುತ್ತ, ಅವರನ್ನು ಕುರಿತು “ರಾಮನನ್ನು ಕಳೆದುಕೊಂಡು ಬಂದಮೇಲೆ ನಿಮಗೆ ಈ ಮನೆಗಳೇಕೆ? ಈ ಪತ್ನಿಯರೇಕೆ? ಈ ಹಣವೇಕೆ? ಈಮಕ್ಕಳೇಕೆ? ಅಥವಾ ಈ ಸುಖಗಳೇಕೆ? ಲೋಕದಲ್ಲಿ ಲಕ್ಷ್ಮಣನೊಬ್ಬನೇ ಧನ್ಯನು. ಆತನೊಬ್ಬನೇ ಸತ್ಪುರುಷನು. ಅರಣ್ಯದಲ್ಲಿ ಸೀತಾಸಮೇತನಾದ ರಾಮನನ್ನು ಉಪಚರಿಸುತ್ತಿರುವ ಭಾಗ್ಯವನ್ನು ಪಡೆದವನು ಆ ಲಕ್ಷ್ಮಣನೊಬ್ಬನೇ ಅಲ್ಲವೆ? ರಾಮನು ಕಾಡಿನಲ್ಲಿ ಯಾವ ನದಿಗಳಲ್ಲಿ ಸ್ನಾನಮಾಡುವನೋ, ಯಾವ ತಾವರೆಕೊಳಗಳಲ್ಲಿ ವಿಹರಿಸುವನೋ, ಯಾವ ಸರೋವರಗಳಲ್ಲಿ ಕ್ರೀಡಿಸುವನೋ, ಅವುಗಳೇ ಪುಣ್ಯಮಾಡಿದುವುಗಳು. ಅಂದವಾದ ವೃಕ್ಷ

ಸಮೂಹಗಳಿಂದ ಕೂಡಿದ ತೋಪುಗಳೂ, ವಿಶೇಷವಾದ ಜಲಸಮೃದ್ಧಿ ಯುಳ್ಳ ಮಹಾನದಿಗಳೂ, ಮನೋಹರವಾದ ತಪ್ಪಲುಗಳಿಂದ ಕೂಡಿದ ಪರ್ವತಗಳೂ, ರಾಮನ ಮನಸ್ಸಿಗೆ ಎಷ್ಟೋ ಸಂತೋಷವನ್ನುಂಟುಮಾಡು ವುವು. ನಮ್ಮ ರಾಮನು ಯಾವಕಾಡಿನಲ್ಲಿರುವನೋ, ಯಾವ ಬೆಟ್ಟವನ್ನೇರು ವನೋ,ಅವೆಲ್ಲವೂ ತಮ್ಮ ಸಮೀಪಕ್ಕೆ ಬಂದ ರಾಮನನ್ನು ಎಷ್ಟೋ ಪ್ರೀತಿ ಯಿಂದ ಪ್ರಿಯಾತಿಥಿಯಂತೆ ಭಾವಿಸಿ ಪೂಜಿಸದೆ ಬಿಡಲಾರವು. * ರಾಮನು ವನವನ್ನು ಪ್ರವೇಶಿಸಿದೊಡನೆ ಅಲ್ಲಿರತಕ್ಕ ಹೂಗಿಡಗಳೂ, ಫಲವೃಕ್ಷ ಗಳೂ, ತಮ್ಮ ಪುಷ್ಪಸಮೃದ್ಧಿಯನ್ನೂ, ಫಲಸಮೃದ್ಧಿಯನ್ನೂ ರಾಮನಿಗೆ ತೋರಿಸಿ, ತಮ್ಮ ಇಂಪಾದ ಭ್ರಮರಧ್ವನಿಯಿಂದ ಆತನನ್ನಾನಂದಪಡಿಸ ದಿರಲಾರವು. ಅಲ್ಲಿರತಕ್ಕ ಬೆಟ್ಟಗಳೂಕೂಡ ಋತುಧರ್ಮಗಳನ್ನು ನಿರೀಕ್ಷಿಸದೆ ರಾಮನಲ್ಲಿರತಕ್ಕ ಪ್ರೀತಿಯಿಂದ ಅಕಾಲದಲ್ಲಿಯೂ ಆತನಿಗೆ ಬೇಕಾದ ಪುಷ್ಪ ಫಲಗಳನ್ನುಂಟುಮಾಡುವುವು. ಮತ್ತು ಆತನಿಗಾಗಿ ವಿಚಿತ್ರವಾದ ನದಿಗ ಳನ್ನು ಹುಟ್ಟಿಸಿ,ನಿರ್ಮಲವಾದ ನೀರನ್ನು ಒದಗಿಸಿಕೊಡುವುವು. ಆಪರ್ವತದ ಮೇಲಿರುವ ವೃಕ್ಷಗಳೆಲ್ಲವೂ ಸಮಸ್ತವಿಧದಲ್ಲಿಯೂ ನಮ್ಮ ರಾಮನನ್ನು ಸಂ ತೋಷಪಡಿಸುವುವು. ಮುಖ್ಯವಾಗಿ ರಾಮನೆಲ್ಲಿರುವನೋ ಅಲ್ಲಿ ಭಯವಿಲ್ಲವು. ಆತನಿದ್ದಕಡೆಯಲ್ಲಿ ಪರಾಭವವಿಲ್ಲವು.ಆತನು ಮಹಾಶೂರನು. ಮತ್ತು ಮಹಾ ಬಾಹುವು.ಇದರಮೇಲೆ ಶೂರಾಗ್ರೇಸರನಾದ ದಶರಥನಿಗೆ ಪುತ್ರನಾಗಿಯೂ ಇರುವನು.ಇಂತಹ ಮಹಾತ್ಮನಾದ ರಾಮನಿದ್ದಕಡೆಯಲ್ಲಿ ಯಾವುದೊಂದು ಭಯವೂ ಇರದು.ಇದೆಲ್ಲವೂ ಹಾಗಿರಲಿ! ನಾವು ಈಗ ಸುಮ್ಮನಿದ್ದರೆ ರಾ ಮನು ಇನ್ನೂದೂರಕ್ಕೆ ಹೊರಟುಹೋಗುವನು. ಆದುದರಿಂದ ನಾವೆಲ್ಲ ರೂ ಪುನಃ ಆತನನ್ನು ಹುಡುಕಿಕೊಂಡು ಹೋಗುವುದುತ್ತಮವು. ಮಹಾತ್ಮ ನಾದ ಆತನ ಪಾದಸೇವೆಯೇ ನಮ್ಮ ಸಮಸ್ತಸೌಖ್ಯಕ್ಕೂ ಮೂಲವು. ನಮ್ಮೆಲ್ಲರಿಗೂ ಆತನೇ ನಾಥನು. ಆತನೇ ಗತಿಯು. ಆತನೇ ನಮಗೆ ಮುಖ್ಯಾ ಧಾರವಾದ ವಸ್ತುವು. ''ಎಲೈ ಪ್ರಿಯರೇ!ನಾವೂ ಅವರೊಡನೆಯೇ ಹೊರ

---

* ವೃಕ್ಷಗಳೆಲ್ಲವೂ ರಾಮನನ್ನೇ ಪರಮಾತ್ಮನನ್ನಾಗಿ ತಿಳಿದು, ತಮ್ಮೊಳಗಿನ ಭ್ರ ಮರಗಳ ಝೇಂಕಾರವೆಂಬ ಮಂತ್ರಗಳನ್ನುಚ್ಚರಿಸುತ್ತ ತಮ್ಮ ಶಾಖೆಗಳೆಂಬ ಕೈಗಳಿಂ ದ ಪುಷ್ಪಾಂಜಲಿಯನ್ನು ಮಾಡಿ ಆತನನ್ನು ಅರ್ಚಿಸುತ್ತಿದ್ದುವೆಂದುಭಾವವು. (ಮಹೇ ಶ್ವರತೀರ್ಥೀಯವು.)

ಟು ಸೀತೆಯನ್ನು ಪಚರಿಸುತ್ತಿರುವೆವು. ನೀವು ರಾಮನನ್ನು ಪಚರಿಸಿರಿ? ಎಂದು ಹೇಳಿ ಆ ಪುರಸ್ತ್ರೀಯರೆಲ್ಲರೂ ದುಃಖದಿಂದ ತಮ್ಮ ಗಂಡಂದಿರನ್ನು ನಿರ್ಬಂಧಿಸುತ್ತಾ,ಪುನಃಪುನಃ ಅವರನ್ನು ಕುರಿತು, ''ಕಾಡಿನಲ್ಲಿ ರಾಮನು ನಿಮ್ಮ ಯೋಗಕ್ಷೇಮಲಾಭವನ್ನು ತಾನೇ ವಹಿಸುವನು. ನಮ್ಮೆಲ್ಲರ ಯೋಗಕ್ಷೇಮವನ್ನೂ ಸೀತೆಯು ವಿಚಾರಿಸುವಳು. ರಾಮನಿಲ್ಲದಮೇಲೆ ಈ ಅಯೋಧ್ಯೆಯಲ್ಲಿ ಸಜ್ಜನರಾದವರು ವಾಸಮಾಡುವುದಕ್ಕೆ ಯೋಗ್ಯವಲ್ಲ. ಇಲ್ಲಿರತಕ್ಕ ಯಾವನೊಬ್ಬನ ಮುಖದಲ್ಲಿಯೂ ಸ್ವಲ್ಪವಾದರೂ ಹರ್ಷವಿಲ್ಲದೆ ಒಬ್ಬೊಬ್ಬರೂ ವ್ಯಸನಪೀಡಿತರಾಗಿರುವುದರಿಂದ, ಈ ಪಟ್ಟಣದಲ್ಲಿ ಕಳೆಯೇ ಇರುವುದಿಲ್ಲ. ಇನು ಮೇಲೆ ಇದರಲ್ಲಿ ವಾಸಮಾಡುವುದಕ್ಕೆ ಯಾರಿಗೆತಾನೇ ಮನಸ್ಸು ಹುಟ್ಟುವುದು? ಈ ರಾಜ್ಯವು ಧರ್ಮಾತಿಕ್ರಮದಿಂದ ಆ ಕೈಕೇಯಿಯ ಕೈಗೆ ಸಿಕ್ಕಿ, ಅನಾಯಕವಾದ ರಾಜ್ಯದಂತೆ ದುರ್ದಶೆಯನ್ನು ಹೊಂದುವಪಕ್ಷದಲ್ಲಿ,ನಾವು ಇನ್ನು ಬದುಕಿರುವುದೇ ನ್ಯಾಯವಲ್ಲ. ಇನ್ನು ನಮಗೆ ಮಕ್ಕಳಿಂದೇನು? ಅಥವಾ ಹಣದಿಂದೇನು?ತಾನೇ ಸಕಲೈಶ್ವರ್ಯವನ್ನೂ ಪಡೆಯಬೇಕೆಂಬ ದುರಾಶೆಯಿಂದ,ಕೈಹಿಡಿದ ಗಂಡನನ್ನೂ,ಮಗನನ್ನೂ ಕೆಡಿಸಿ,ಕುಲಗೇಡಿಯೆನಿಸಿಕೊಂಡ ಆ ಕೈಕೇಯಿಯು,ಮುಂದೆ ಇನ್ನು ಯಾರನ್ನು ತಾನೇ ಕೆಡಿಸದಿರುವಳು?ಯಾರನ್ನು ತಾನೇ ಕ್ಷೇಮದಿಂದ ಕಾಪಾಡುವಳು? ನಾವು ಇನ್ನುಮೇಲೆ ಆ ಕೈಕೇಯಿಯ ರಾಜ್ಯದಲ್ಲಿ ಎಂದಿಗೂ ಕೆಲಸಮಾಡಿಕೊಂಡಿರಲಾರೆವು. ಅವಳು ಬದುಕಿರುವವರೆಗೂ ನಮ್ಮ ಜೀವಾವಧಿಯಾಗಿ ನಾವು ಈ ರಾಜ್ಯದಲ್ಲಿರತಕ್ಕವರಲ್ಲ. ನಮ್ಮ ಮಕ್ಕಳಾಣೆಗೂ ಇದು ಸತ್ಯವು. ಮನಸ್ಸಿನಲ್ಲಿ ಸ್ವಲ್ಪವಾದರೂ ಮರುಕವಿಲ್ಲದೆ, ರಾಜಕುಮಾರನನ್ನೇ ಯಾವಳು ದೇಶದಿಂದ ಹೊರಡಿಸಿಬಿಟ್ಟಳೋ,.ಅಂತವಳನ್ನು ನಂಬಿ ಯಾರುತಾನೇ ಸುಖದಿಂದ ಜೀವಿಸಬಹುದು? ಹೀಗೆ ದುಷ್ಟಸ್ವಭಾವವುಳ್ಳವಳಾಗಿಯೂ, ಅಧರ್ಮಪ್ರವರ್ತಕಳಾಗಿಯೂ ಇರುವ ಆಕೆಯಿಂದ ಪ್ರಜೆಗಳಿಗೆ ಸುಖವೆಂಬುದೆಲ್ಲಿಯದು ? ಮುಖ್ಯವಾಗಿ ಈ ರಾಜ್ಯವು ಅನಾಯಕವಾಯಿತು. ಇದಕ್ಕಿದ್ದ ಆಶ್ರಯವೂ ತಪ್ಪಿಹೋಯಿತು.ಈ ರಾಜ್ಯಕ್ಕೆ ಕೊನೆಯಿಲ್ಲದ ಕಷ್ಟವು ಬಂದೊದಗಿತು. ಆಕೈಕೇಯಿಯೊಬ್ಬಳಿಗಾಗಿ ಈ ರಾಜ್ಯವೇ ಹಾಳಾಗುವ ಕಾಲವು ಬಂದೊದಗಿತು. ರಾ

ಮನು ಹೊರಟುಹೋದಮೇಲೆ ದಶರಥನಂತೂ ಬದುಕಿರಲಾರನು. ಆದಶರಥನು ಸತ್ತಮೇಲೆ ರಾಜ್ಯಕ್ಕೆ ವಿನಾಶವೆಂಬುದೇ ಸಿದ್ಧವು. ಮುಖ್ಯವಾಗಿ ನಮ್ಮ ಪುಣ್ಯವು ಇಂದಿಗೆ ತೀರಿತು. ನೀವೂ ದುರ್ಗತಿಗೀಡಾದಿರಿ ! ಎಲೈ ಪ್ರಿಯರೆ ! ಇದೆಲ್ಲವನ್ನೂ ನೀವು ಚೆನ್ನಾಗಿ ಪರ್ಯಾಲೋಚಿಸಿದರೆ, ಈಗಲೇ ವಿಷವನ್ನು ಕುಡಿದು ಪ್ರಾಣವನ್ನು ಬಿಡುವುದುತ್ತಮವು. ಅಥವಾ ರಾಮನನ್ನು ಹಿಂಬಾಲಿಸಿಹೋಗಬೇಕು. ಅದೂ ಇಲ್ಲದಿದ್ದರೆ ನಿಮ್ಮ ಹೆಸರುಕೂಡ ತಿಳಿಯದಂತೆ ದೇಶಭ್ರಷ್ಟರಾಗಿ ಹೊರಟುಹೋಗಿರಿ ! ದಶರಥನು ಕಪಟಬುದ್ಧಿಯಿಂದಲೇ ಸೀತಾಲಕ್ಷ್ಮಣರೊಡನೆ ರಾಮನನ್ನು ಕಾಡಿಗೆ ಕಳುಹಿಸಿಬಿಟ್ಟಿರುವನೇ ಹೊರತು ಬೇರೆಯಲ್ಲ. ಪಶುಗಳನ್ನು ಕಟುಕರ ಕೈಗೆ ಕೊಟ್ಟಂತೆ ನಮ್ಮನ್ನು ಭರತನ ಕೈಗೆ ಕೊಟ್ಟಿರುವನು. ಈ ಅಕಾರ್ಯವನ್ನು ದಶರಥನೇ ಮಾಡಿರುವನು. ಇದರಿಂದ ರಾಮನಿಗೆ ಯಾವುದೊಂದು ಹಾನಿಯೂ ಇಲ್ಲ. ಪೂರ್ಣಚಂದ್ರನಂತೆ ಮುಖವುಳ್ಳವನಾಗಿ, ಶ್ಯಾಮವರ್ಣನಾಗಿ, ಮಾಂಸಪುಷ್ಟಿಯಿಂದ ಉಬ್ಬಿದ ಹೆಗಲುಳ್ಳವನಾಗಿ, ಶತ್ರುಸಂಹಾರಕನಾಗಿ, ಮೊಳಕಾಲಿನವರೆಗೆ ನೀಡಿದ ತೋಳುಳ್ಳವನಾಗಿ, ಕಮಲದಂತೆ ಕಣ್ಣುಳ್ಳವನಾಗಿರುವ ಆ ರಾಮನುಎಲ್ಲಿದ್ದರೇನು? ಆತನ ಸಂಚಾರದಿಂದ ಆ ಅರಣ್ಯಕ್ಕೇ ಒಂದುಕಾಂತಿಯುಂಟಾಗುವುದರಲ್ಲಿ ಸಂದೇಹವಿಲ್ಲ. ಆರಾಮನು ಎಲ್ಲರಲ್ಲಿಯೂ ಬಹುಸುಲಭನಾಗಿ ತಾನೇ ಸಲಿಗೆಯಿಂದ ಅವರವರನ್ನು ಮಾತನಾಡಿಸಿಕೊಂಡು ಹೋಗುವನು. ಯಾವಾಗಲೂ ಆತನ ಮಾತಿನಲ್ಲಿ! ಇಂಪು ಸೋರುತ್ತಿರುವುದು. ಆತನು ಎಂದಿಗೂ ಸತ್ಯವನ್ನು ಬಿಡತಕ್ಕವನಲ್ಲ. ಮಹಾಬಲಾಢ್ಯನು. ಬಹಳ ಸೌಮ್ಯಸ್ವಭಾವವುಳ್ಳವನು. ಚಂದ್ರನಂತೆ ಸಮಸ್ತಲೋಕಕ್ಕೂ ಪ್ರೀತಿಯನ್ನುಂಟುಮಾಡುವವನು. ಹೀಗೆ ಪುರುಷಶ್ರೇಷ್ಠನೆನಿಸಿಕೊಂಡು, ಮದಿಸಿದ ಆನೆಯಂತೆ ಮಹಾಪರಾಕ್ರಮವುಳ್ಳ ಆಮಹಾರಥನು, ತಾನಿದ್ದಸ್ಥಳಕ್ಕೇ ಒಂದಲಂಕಾರವನ್ನುಂಟುಮಾಡುವನು." ಹೀಗೆಂದು ಆ ಅಯೋಧ್ಯೆಯಲ್ಲಿರತಕ್ಕ ಪುರಸ್ತ್ರೀಯರೆಲ್ಲರೂ ಮರಣಭಯವನ್ನು ಹೊಂದಿದಂತೆ ವ್ಯಸನದಿಂದ ಬೆಂದವರಾಗಿ ಗೋಳಾಡುತಿದ್ದರು. ಹೀಗೆ ರಾಮನನ್ನುಕುರಿತು ಸ್ತ್ರೀಯರೆಲ್ಲರೂ ವಿಲಪಿಸುತ್ತಿರುವಾಗಲೇ ಸೂರ್ಯನು ಅಸ್ತಂಗತನಾದನು. ರಾತ್ರಿಯೂ ಪ್ರಾಪ್ತವಾಯಿತು.

ಆ ಅಯೋಧ್ಯೆಯಲ್ಲಿ ಆಗ ಅಗ್ನಿಕಾರ್ಯಗಳಾಗಲಿ, ವೇದಾಧ್ಯಯನಗಳಾಗಲಿ, ಪುರಾಣಕಥೆಗಳಾಗಲಿ ಯಾವುದೊಂದೂ ನಡೆಯುತ್ತಿರಲಿಲ್ಲ. ಸುತ್ತಲೂ ಅಂಧಕಾರವನ್ನು ಸವರಿಟ್ಟಂತೆ, ಕತ್ತಲೆಯು ಆವರಿಸಿಹೋಯಿತು! ವರ್ತಕರು ತಮ್ಮತಮ್ಮ ಅಂಗಡಿಗಳೊಂದನ್ನಾದರೂ ತೆರೆಯಲಿಲ್ಲ. ಯಾರ ಮುಖದಲ್ಲಿಯೂ ಸಂತೋಷವೇ ಇರಲಿಲ್ಲ. ಆ ಅಯೋಧ್ಯೆಯು ನಿರಾಶ್ರಯವಾಗಿ, ಕಾಂತಿಹೀನವಾಗಿ, ನಕ್ಷತ್ರಗಳಿಲ್ಲದ ಆಕಾಶಪ್ರದೇಶದಂತೆ ಕೇವಲಶೂನ್ಯವಾಗಿ ಕಾಣುತ್ತಿತ್ತು. ಅಲ್ಲಿನ ಪುರಸ್ತ್ರೀಯರೆಲ್ಲರೂ ತಮ್ಮತಮ್ಮ ಮಕ್ಕಳನ್ನೋ, ಅಥವಾ ಅಣ್ಣತಮ್ಮಂದಿರನ್ನೋ ಕಳೆದುಕೊಂಡವರಂತೆ, ರಾಮನಿಗಾಗಿ ದುಃಖಿಸುತ್ತ ಬಹುದೈನ್ಯದಿಂದ ನಾನಾವಿಧದಲ್ಲಿ ಪ್ರಲಾಪಿಸುತ್ತಿದ್ದರು. ಅವರಿಗೆ ರಾಮನು ಹೊಟ್ಟೆಯಲ್ಲಿ ಹುಟ್ಟಿದ ಮಗನಿಗಿಂತಲೂ ಹೆಚ್ಚು ಪ್ರೀತಿಗೆ ಪಾತ್ರನಾಗಿದ್ದುದರಿಂದ, ಆತನನ್ನು ಸ್ಮರಿಸಿಕೊಂಡಹಾಗೆಲ್ಲಾ ಮೂರ್ಛೆಬೀಳುತಿದ್ದರು. ಆ ಪಟ್ಟಣದಲ್ಲಿ ಉತ್ಸವಗಳಾಗಲಿ, ನೃತ್ತಗೀತವಾದ್ಯಾದಿಗಳಾಗಲಿ, ಯಾವುದೂ ನಡೆಯದೆ, ಯಾವ ಜನರಲ್ಲಿಯೂ ಹರ್ಷವಿಲ್ಲದೆ, ಅಂಗಡಿಗಳೊಂದೂ ತೆರೆಯದೆ ಇದ್ದುದರಿಂದ, ಅದು ನೀರೊಣಗಿದ ಮಹಾಸಮುದ್ರದಂತೆ ಕಾಣುತಿತ್ತು. ಇಲ್ಲಿಗೆ ನಾಲ್ವತ್ತೆಂಟನೆಯಸರ್ಗವು.

---

{ ರಾಮನು ವೇದಶ್ರುತಿಗೋಮತೀನದಿಗಳನ್ನು ದಾಟಿದುದು. ಸುಮಂತ್ರನೊಡನೆ ಸಂಭಾಷಣವು. }

ಅತ್ತಲಾಗಿ ರಾಮನು ತನ್ನನ್ನು ಹಿಂಬಾಲಿಸಿಬಂದ ಪ್ರಜೆಗಳನ್ನು ವಂಚಿಸಿಹೋದಮೇಲೆ, ಉಳಿದ ಆ ರಾತ್ರಿಯ ಸ್ವಲ್ಪಕಾಲದೊಳಗಾಗಿಯೇ ಬಹುದೂರದವರೆಗೆ ಹೊರಟುಹೋದನು. ಪುರುಷಶ್ರೇಷ್ಠನಾದ ಆತನು ಪಿತೃವಾಕ್ಯಪರಿಪಾಲನವೊಂದನ್ನೇ ಮನಸ್ಸಿನಲ್ಲಿಟ್ಟುಕೊಂಡು, ಮುಂದೆ ಮುಂದೆ ಪ್ರಯಾಣಮಾಡುತ್ತಿರುವಾಗಲೇ ಆ ರಾತ್ರಿಯು ನಿರಾಯಾಸವಾಗಿ ಕಳೆದುಹೋಯಿತು. ಬೆಳಗಾದಕೂಡಲೆ ಸಂಧ್ಯೋಪಾಸನೆಯನ್ನು ಮಾಡಿ, ಕೋಸಲದೇಶದ ಎಲ್ಲೆಕಟ್ಟನ್ನು ಸೇರಿದನು. ಅಲ್ಲಲ್ಲಿ ಬೀಜಗಳನ್ನು ಬಿತ್ತುವುದಕ್ಕೆ ಅನುಕೂಲಿಸುವಂತೆ ಸಿದ್ಧಪಡಿಸಿರುವ ಹೊಲಗದ್ದೆಗಳುಳ್ಳ

ಗ್ರಾಮಗಳನ್ನೂ, ಪುಷ್ಪಿತಗಳಾದ ತೋಟಗಳನ್ನೂ ನೋಡಿ ಆನಂದಿಸುತ್ತ, ತನ್ನ ರಥದ ಕುದುರೆಗಳು ಗತಿಚಾತುರ್ಯದಿಂದ ವೇಗವಾಗಿ ಹೋಗುತಿದ್ದರೂ ತಾನು ಮೆಲ್ಲಗೆ ಹೋಗುತ್ತಿರುವಂತೆ ವಿನೋದದಿಂದಲೇ ಬಹುದೂರದವರೆಗೆ ಹೊರಟುಹೋದನು.ಅಲ್ಲಲ್ಲಿ ದೊಡ್ಡದೊಡ್ಡಗ್ರಾಮಗಳಲ್ಲಿಯೂ, ಸಣ್ಣಗ್ರಾಮಗಳಲ್ಲಿಯೂ ಜನರು ಗುಂಪುಗೂಡಿ,ಒಬ್ಬರಗೊಬ್ಬರು "ಛೀ! ದಶರಥನ ಜನ್ಮವೇತಕ್ಕೆ?ಇಷ್ಟುಮುಪ್ಪಿನಲ್ಲಿಯೂ ಕಾಮಾತುರನಾಗಿ ಎಂತಹ ಪಾಪಕೃತ್ಯವನ್ನು ಮಾಡಿದನು? ಹಾ! ಕೈಕೇಯಿಯು ಎಷ್ಟುಕ್ರೂರಳು ! ಪಾಪಸ್ವಭಾವವುಳ್ಳವಳಾಗಿ, ಯಾವಾಗಲೂ ಪಾಪಕಾರ್ಯವನ್ನೇ ನಡೆಸುತ್ತ, ಮರ್ಯಾದೆಯನ್ನು ಮೀರಿಹೋಗುತ್ತಿರುವ ಆಕೆಯ ಕ್ರೂರಕಾರ್ಯವನ್ನು ಹೇಳತಕ್ಕದೇನು? ರಾಮನಾದರೋ ಪರಮಧಾರ್ಮಿಕನು. ಲೋಕದಲ್ಲಿ ಆತನಿಗೆ ತಿಳಿಯದುದೊಂದೂ ಇಲ್ಲ. ಸಮಸ್ತಪ್ರಾಣಿಗಳಲ್ಲಿಯೂ ದಯೆಯುಳ್ಳವನು. ಮಹರ್ಷಿಗಳಂತೆ ಇಂದ್ರಿಯಗಳೆಲ್ಲವನ್ನೂ ಜಯಿಸಿದವನು. ಇಂತಹ ಪುತ್ರರತ್ನವನ್ನು ಊರಿನಿಂದ ಹೊರಡಿಸಿ ವನವಾಸದಲ್ಲಿರಿಸಬೇಕೆಂದಳಲ್ಲವೆ ! ಅಯ್ಯೋ!ಹುಟ್ಟಿದುದುಮೊದಲು ಸುಖದಲ್ಲಿಯೇ ಬಳೆದು ಮಹಾಭಾಗ್ಯಶಾಲಿನಿಯೆನಿಸಿಕೊಂಡಿರುವ ಜನಕರಾಜನ ಮಗಳಾದ ಆ ಸೀತೆಯು, ಕಾಡಿನಲ್ಲಿ ಹೇಗೆತಾನೇ ಕಷ್ಟವನ್ನನುಭವಿಸಬಲ್ಲಳು? ಆಃ ! ದಶರಥನಿಗೆ ತನ್ನ ಮಗನೆಂಬ ವಾತ್ಸಲ್ಯವಾದರೂ ಇರಬೇಡವೇ! ತನ್ನ ದೇಶದ ಪ್ರಜೆಗಳಿಗೆಲ್ಲಾ ಪರಮಪ್ರಿಯನಾಗಿ, ದೋಷರಹಿತನಾದ ತನ್ನ ಮುದ್ದುಮಗನನ್ನೇ ತೊರೆದುಬಿಟ್ಟನಲ್ಲಾ ! ಇದಕ್ಕಿಂತಲೂ ಲೋಕದಲ್ಲಿ ಆಶ್ಚರ್ಯವೇನಿರುವುದು?" ಎಂದು ಮಾತಾಡಿಕೊಳ್ಳುತಿದ್ದರು. ಇವುಗಳನ್ನು ಕೇಳುತ್ತಾ ರಾಮನು ಕೋಸಲದೇಶವನ್ನು ದಾಟಿದನು. ಆಮೇಲೆ ಮುಂದೆ ಕಾಣುತಿದ್ದ ವೇದಶ್ರುತಿಯೆಂಬ ಮಂಗಳಕರವಾದ ನದಿಯನ್ನು ದಾಟಿ,ಅಗಸ್ತ್ಯದಿಕ್ಕಿಗೆ ಅಭಿಮುಖನಾಗಿಹೋಗುತಿದ್ದನು.ಹೀಗೆಯೇ ಬಹಳಹೊತ್ತಿನವರೆಗೆ ಪ್ರಯಾಣಮಾಡಿದಮೇಲೆಗೋಮತಿಯೆಂಬ ನದಿಯನ್ನು ಕಂಡನು. ಅನೇಕ ಗೋಸಮೂಹದಿಂದ ಕೂಡಿದ ತೀರಪ್ರದೇಶವುಳ್ಳುದಾಗಿ, ಸಮುದ್ರಗಾಮಿನಿಯಾಗಿ ಹೋಗುತ್ತಿರುವ ಆ ಗೋಮತೀನದಿಯನ್ನೂ ದಾಟಿ, ಇನ್ನೂ ಮುಂದೆ ಹೋಗುತ್ತಿರಲು, ಸ್ಯಂದಿ

ಕೆಯೆಂಬ ಮತ್ತೊಂದು ನದಿಯು ಕಾಣಿಸಿತು. ನವಿಲುಗಳ ಕೇಕಾಧ್ವನಿಯಿಂ ದಲೂ, ಹಂಸಗಳ ಕೂಗಿನಿಂದಲೂ, ಅತಿಮನೋಹರವಾದ ಆ ನದಿಯನ್ನೂ ದಾಟಿಹೋದನು. ಅಲ್ಲಿ ನಿಂತು, ಸುತ್ತಲೂ ಕಾಣುತಿದ್ದ ಕೋಸಲದೇಶದ ಅಂದವನ್ನು ನೋಡಿ * ಪೂರ್ವದಲ್ಲಿ ಮನುವಿನಿಂದ ಇಕ್ಷ್ವಾಕುವಿಗೆ ಕೊಡಲ್ಪ ಟ್ಟು, ಧನಧಾನ್ಯಸಮೃದ್ಧವಾಗಿ, ಅನೇಕ ರಾಷ್ಟ್ರಗಳಿಂದ ಕೂಡಿದ ಆ ಭೂಪ್ರದೇಶದ ಅಂದವನ್ನು ಸೀತೆಗೂ ತೋರಿಸುತಿದ್ದನು. ಆಮೇಲೆ ಸಾ ರಥಿಯನ್ನು ಕುರಿತು, ಹಂಸದಂತೆ ಇಂಪಾದ ಸ್ವರವುಳ್ಳವನಾಗಿ ಒಂದಾ ನೊಂದುಮಾತನ್ನು ಹೇಳುವನು "ಎಲೆ ಸೂತನೆ! ನಾನು ಇಲ್ಲಿಗೆ ಪುನಃ ಯಾ ವಾಗ ಹಿಂತಿರುಗಿಬಂದು, ಈ ಸರಯೂನದಿಯ ತೀರದಲ್ಲಿರುವ ಪುಷ್ಪಿತವಾದ ತೋಟಗಳಲ್ಲಿಯೂ, ಕಾಡುಗಳಲ್ಲಿಯೂ ಬೇಟೆಯನ್ನಾಡಿಕೊಂಡು, ನಮ್ಮ ತಂ ದೆತಾಯಿಗಳೊಡನೆ ಸೇರಿ ಸಂತೋಷದಿಂದಿರುವೆನೊ? † ರಾಜಋಷಿಗಳಾದ ವರಿಗೆ ಲೋಕದಲ್ಲಿ ಬೇಟೆಯೆಂಬುದು ಕೇವಲವಿನೋದಾರ್ಥವಾಗಿಯೇ ಹೊರತು ಬೇರೆಯಲ್ಲ. ಸದಾಚಾರಸಂಪನ್ನರಾದವರೂಕೂಡ ಉಚಿತ ಕಾಲಗಳಲ್ಲಿ ಇದನ್ನು ನಡೆಸುವುದುಂಟು. ಧನುರ್ವಿದ್ಯೆಯನ್ನು ಕಲಿತವರೂ ಇದನ್ನು ಆಗಾಗ ಅಪೇಕ್ಷಿಸುವುದುಂಟು. ಆದರೆ ನಾನು ಈ ಬೇಟೆಯೆಂಬು ದನ್ನು ಅಷ್ಟುವಿಶೇಷವಾಗಿ ಅಪೇಕ್ಷಿಸತಕ್ಕವನಲ್ಲವಾದರೂ, ಅದರಲ್ಲಿ ಸ್ವಲ್ಪ ಮಟ್ಟಿಗೆ ಕುತೂಹಲವುಂಟು. ಅನವರತವೂ ಇದೊಂದೇ ವ್ಯಸನವಾಗಿ ಇ

* "ಇಕ್ಷ್ವಾಕೂಣಾಮಿಯಂಭೂಮಿಸ್ಸಶೈಲವನಕಾನನಾ" ಎಂಬುದಾಗಿ, ಭೂಮಿ ಯೆಲ್ಲವೂ ಇಕ್ಷ್ವಾಕುವಿಗೇ ಸೇರಿರುವಾಗ, ಕೋಸಲದೇಶವನ್ನು ಮಾತ್ರ ಇಕ್ಷ್ವಾಕುವಿನ ದೇಶವೆಂದು ಹೇಳುವುದು ಹೇಗೆಂದು ಶಂಕೆಯುಂಟಾಗಬಹುದು. ಈ ದೇಶವು ಆತನಿಗೆ ಜನ್ಮಭೂಮಿಯಾದುದರಿಂದ, ಇದನ್ನು ಮುಖ್ಯವಾಗಿಯೂ, ಇತರದೇಶಗಳೆಲ್ಲವೂ, ಆತ ನಿಗೆ ಕಪ್ಪವನ್ನು ಕೊಡತಕ್ಕವುಗಳೆನ್ನಾಗಿಯೂ ಗ್ರಹಿಸಬೇಕು.

† "ಸ್ತ್ರೀದ್ಯೂತ ಮೃಗಯಾಮದ್ಯ ವಾಕ್ಪಾರುಷ್ಯೋಗ್ರದಂಡಕಾಃ । ಅರ್ಥಸ್ಯದೂ ಷಣಂ ಚೇತಿ ರಾಜ್ಞಾಂವ್ಯಸನಸಪ್ತಕಂ॥" "ಎಂಬಂತೆ ರಾಜರ ಮನಸ್ಸನ್ನು ಕೆಡಿಸತಕ್ಕ ಸಪ್ತವ್ಯಸನಗಳಲ್ಲಿ ಬೇಟೆಯೂ ಒಂದಾಗಿ ಎಣಿಸಲ್ಪಟ್ಟಿರುವಾಗ, ರಾಮನು ಇದರಲ್ಲಿ ಆಸೆಯನ್ನು ತೋರಿಸಬಹುದೆ?" ಎಂದರೆ ಅದಕ್ಕೆ ಸಮಾಧಾನರೂಪವಾಗಿ ಈಮುಂದಿನ ವಾಕ್ಯಗಳನ್ನು ಹೇಳುವನು.

ಟ್ಟುಕೊಳ್ಳದೆ, ಆಗಾಗ ಈ ಬೇಟೆಯಾಡುವುದರಿಂದ ಯಾವುದೊಂದು ದೋಷವೂ ಇರದು. ಅನೇಕರಾಜಋಷಿಗಳು ಇದೊಂದು ವಿನೋದವನ್ನಾಗಿ ಅಂಗೀಕರಿಸಿರುವರು" ಎಂದನು. ಹೀಗೆ ರಾಮನು ಆ ಸಾರಥಿಯೊಡನೆ ಇಂಪಾದ ಮಾತುಗಳಿಂದ * ಇನ್ನೂ ಅನೇಕ ವಿಷಯಗಳನ್ನು ಕುರಿತು ಸಲ್ಲಾಪಮಾಡುತ್ತ ಮುಂದೆ ಹೋಗುತಿದ್ದನು. ಇಲ್ಲಿಗೆ ನಾಲ್ವತ್ತೊಂಭತ್ತನೆಯಸರ್ಗವು.

---

## (ರಾಮನು ಕೋಸಲದೇಶವನ್ನು ದಾಟಿ ಗಂಗಾತೀರವನ್ನು ಸೇರಿದುದು.)

ವಿಶಾಲವಾದ ಮತ್ತು ಅತಿಮನೋಹರವಾದ ಕೋಸಲದೇಶವನ್ನು ದಾಟಿದಮೇಲೆ, ರಾಮನು ತನ್ನ † ಅಯೋಧ್ಯಾನಗರದಕಡೆಗೆ ತಿರುಗಿ,ಕೈಮುಗಿದುನಿಂತು. "ಕಕುತ್ಸ್ಥವಂಶದ ರಾಜರಿಂದ ಪಾಲಿಸಲ್ಪಟ್ಟ ಎಲೈ ಪುರಶ್ರೇಷ್ಠವೆ! ಈಗ ವನವಾಸಕ್ಕಾಗಿ ನಿನ್ನ ಅನುಮತಿಯನ್ನು ಪ್ರಾರ್ಥಿಸುವೆನು. ನಿನ್ನಲ್ಲಿ ವಾಸಮಾಡುತ್ತಿರುವ ಯಾವ ಯಾವ ಪುರದೇವತೆಗಳುಂಟೋ, ನಿನ್ನನ್ನು ಪಾಲಿಸತಕ್ಕ ಯಾವಯಾವ ದೇವತೆಗಳುಂಟೋ ಅವರನ್ನೂ ಪ್ರಾರ್ಥಿಸಿ ಕೇಳಿಕೊಳ್ಳುವೆನು. ನಾನು ವನವಾಸವನ್ನು ಮುಗಿಸಿಕೊಂಡು ತಂದೆಯ ಋಣವನ್ನು ತೀರಿಸಿ, ಹಿಂತಿರುಗಿ ಬಂದು, ತಂದೆತಾಯಿಗಳೊಡನೆ ಸೇರಿ ಪುನಃ ನಿನ್ನನ್ನು ನೋಡುವೆನು. ಈಗ ನನಗೆ ಅನುಜ್ಞೆಯನ್ನು ಕೊಡಬೇಕು" ಎಂದನು. ಆಮೇಲೆ ದಾರಿಯಲ್ಲಿ ನಿಂತಿದ್ದ ಜನರನ್ನು ನೋಡಿ, ಕಣ್ಣೀರು ಬಿಡುತ್ತ, ತನ್ನ ಬಲ ತೋಳನ್ನು ಮೇಲಕ್ಕೆ ನೀಡಿ, ದುಃಖದಿಂದ ಅವರನ್ನು ಕುರಿತು "ಎಲೈ ಪ್ರಜೆಗಳಿರಾ! ನೀವು ನನ್ನಲ್ಲಿ ಯಥೋಚಿತವಾದ ಆದರವನ್ನೂ ಪ್ರೀತಿಯನ್ನೂ ತೋರಿಸುತ್ತಿರುವಿರಿ! ನನ್ನನ್ನು ನೋಡುತಿದ್ದಷ್ಟೂ

---

* ಇವೆಲ್ಲವನ್ನೂ ಮುಂದೆ ಸುಮಂತ್ರನು ದಶರಥನಿಗೆ ತಿಳಿಸುವನು.

† ರಾಮನು ತಾನಾರಂಭಿಸಿದ ವನವಾಸವ್ರತವು ನಿರ್ವಿಘ್ನಪರಿಸಮಾಪ್ತಿಯನ್ನು ಹೊಂದಬೇಕೆಂಬುದಕ್ಕಾಗಿ, ಶಿಷ್ಟಾಚಾರವನ್ನನುಸರಿಸಿ ತಾನು ಹೊರಡುವಾಗಲೇ ಪುರದೇವತೆಗೆ ನಮಸ್ಕಾರಮಾಡಬೇಕಾಗಿದ್ದರೂ, ಆಗಿನ ಕಾರ್ಯಸಂಕಟದಿಂದ ಆಗಲೇ ಅದನ್ನು ಮಾಡದೆ, ಈಗ ಆ ದೇಶದ ಎಲ್ಲೆಕಟ್ಟಿಗೆ ಬಂದಮೇಲೆ, ಪುರದೇವತೆಯನ್ನು ನಮಸ್ಕರಿಸಿ ಅನುಜ್ಞೆಯನ್ನು ಬೇಡುವನೆಂದು ಗ್ರಹಿಸಬೇಕು.

ನಿಮಗೆ ದುಃಖವು ಹೆಚ್ಚುತ್ತಿರುವುದು. ಇದನ್ನು ಇನ್ನೂ ಮೇಲೆಮೇಲೆ ಹೆಚ್ಚಿಸಿಕೊಳ್ಳುವುದು ಉಚಿತವಲ್ಲ. ಆದುದರಿಂದ ನಿಮ್ಮನಿಮ್ಮ ಕೆಲಸಗಳನ್ನು ನೋಡಿಕೊಂಡು ನೀವು ಹೊರಟುಹೋಗಬೇಕೆಂದು ಪ್ರಾರ್ಥಿಸುವೆನು." ಎಂದನು. ಆಗ ಅವರೆಲ್ಲರೂ ರಾಮನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ವ್ಯಸನವನ್ನು ತಡೆಯಲಾರದೆ, ಭಯಂಕರವಾದ ಧ್ವನಿಯಿಂದ ಗೋಳಿಡುತ್ತಾ, ಆತನನ್ನು ಬಿಟ್ಟು ಹೋಗಲಾರದೆ, ಅಲ್ಲಲ್ಲಿಯೇ ಸ್ವಲ್ಪದೂರವಾಗಿ ನಿಂತಿದ್ದರು. ಹಾಗೆಯೇ ಆ ಜನರೆಲ್ಲರೂ ಅತೃಪ್ತರಾಗಿ ಗೋಳಿಡುತ್ತಿರುವಷ್ಟರಲ್ಲಿ, ರಾಮನು ಸಾಯಂಕಾಲದ ಸೂರ್ಯನಂತೆ ಅವರಿಗೆ ಕಣ್ಮರೆಯಾಗಿ ಹೊರಟುಹೋದನು. ಆಗ ರಾಮನು ಧನಧಾನ್ಯಗಳಿಂದ ತುಂಬಿ, ದಾನಶೀಲರಾದ ಅನೇಕಜನರಿಂದ ನಿಬಿಡವಾಗಿ,ಭಯರಹಿತವಾಗಿ, ಅತಿಮನೋಹರವಾಗಿರುವ ಆ ಕೋಸಲದೇಶದ ಪ್ರಾಂತ್ಯಗಳ ಮಾರ್ಗವಾಗಿಯೇ ಹೋಗುತಿದ್ದನು. ಆ ಪ್ರದೇಶಗಳೆಲ್ಲವೂ ಅಂದವಾದ ಉದ್ಯಾನಗಳಿಂದಲೂ, ಹೂವಿನ ತೋಟಗಳಿಂದಲೂ, ನಿರ್ಮಲವಾದ ಸರೋವರಗಳಿಂದಲೂ, ಮನಸ್ಸನ್ನು ಆಕರ್ಷಿಸುತ್ತಿದ್ದುವು. ನಿತ್ಯಸಂತುಷ್ಟರಾಗಿಯೂ, ಧನಿಕರಾಗಿಯೂ ಇರುವ ಅನೇಕಜನರಿಂದ ನಿಬಿಡವಾಗಿದ್ದುವು. ಎಲ್ಲಿ ನೋಡಿದರೂ ದೇವಾಲಯಗಳೂ, ಯೂಪಸ್ತಂಭಗಳೂ ಕಾಣುತಿದ್ದುವು. ಅಲ್ಲಲ್ಲಿ ಗೋಕುಲಗಳು ದಟ್ಟವಾಗಿ ತುಂಬಿದ್ದುವು. ಆ ಪ್ರದೇಶಗಳು ರಾಜಾಧಿರಾಜರ ಮನಸ್ಸನ್ನೂ ತಮ್ಮಕಡೆಗೆ ಎಳೆಯುವಂತಿದ್ದುವು. ಗ್ರಾಮಗ್ರಾಮಗಳಲ್ಲಿಯೂ ಬ್ರಾಹ್ಮಣರ ವೇದಮಂತ್ರಘೋಷಗಳು ಹೊರಡುತಿದ್ದುವು. ಹೀಗೆ ಲೋಕಾತಿಶಯವೆನಿಸಿಕೊಂಡ ಕೋಸಲದೇಶದ ಪ್ರಾಂತ್ಯಗಳೆಲ್ಲವನ್ನೂ ಪುರುಷಶ್ರೇಷ್ಠನಾದ ರಾಮನು ರಥದಿಂದಲೇ ದಾಟಿ ಹೋದನು. ನಿತ್ಯಸಂತೋಷವುಳ್ಳುದಾಗಿ, ಧನಧಾನ್ಯಸಮೃದ್ಧವಾಗಿ, ಅಂದವಾದ ಉದ್ಯಾನಗಳಿಂದ ಕೂಡಿದುದಾಗಿರುವ ರಾಜಭೋಗ್ಯವಾದ ಆ ಕೋಸಲರಾಜ್ಯದ ನಡುವೆ ಪ್ರಯಾಣಮಾಡುತಿದ್ದರೂ, ಅದರಲ್ಲಿ ಆಸೆಯನ್ನು ತೊರೆದು, ಧೈರ್ಯವನ್ನು ಬಿಡದೆ ಹೋಗುತಿದ್ದನೆಂದರೆ, ಆ ರಾಮನ ಮನಸ್ಥೈರ್ಯವನ್ನು ಹೇಳತಕ್ಕುದೇನು? ಹೀಗೆಯೇ ಮುಂದೆಮುಂದೆ ಹೋಗುತ್ತಾ, ಅಲ್ಲಿ ಪ್ರವಹಿಸುತಿದ್ದ ಗಂಗಾನದಿಯನ್ನು ಕಂಡನು. ಸ್ವಲ್ಪವಾದರೂ ಪಾಚಿಯಿಲ್ಲದೆ ನಿರ್ಮಲವಾದ ಜಲವುಳ್ಳುದಾಗಿ,

ಅನೇಕಮಹರ್ಷಿಗಳಿಂದ ಸೇವಿಸಲ್ಪಡುತ್ತಿರುವ ಆ ಪುಣ್ಯನದಿಯನ್ನು ದೂರದಿಂದಲೇ ನಮಸ್ಕರಿಸಿದನು. ಅದರ ತೀರಪ್ರದೇಶದಲ್ಲಿ ಧರ್ಮಸಮೃದ್ಧಿಯುಳ್ಳ ಅನೇಕಪುಣ್ಯಾಶ್ರಮಗಳು ಕಾಣುತಿದ್ದುವು. ಆ ನದಿಯ ಮಡುಗಳಲ್ಲಿ ಅಪ್ಸರಸ್ತ್ರೀಯರೆಲ್ಲರೂ ಸಂತೋಷದಿಂದ ಬಂದು ಜಲಕ್ರೀಡೆಯಾಡುತಿದ್ದರು. ದೇವತೆಗಳೂ, ದಾನವರೂ, ಗಂಧರ್ವರೂ, ಕಿನ್ನರರೂ ಗಂಧರ್ವಪತ್ನಿಯರೂ ಬಂದು ಅದನ್ನು ಸೇವಿಸುತಿದ್ದರು. ಅದರ ತೀರದಲ್ಲಿ ದೇವತೆಗಳ ಕ್ರೀಡಾಪರ್ವತಗಳೂ, ವಿಹಾರೋದ್ಯಾನಗಳೂ, ಅನೇಕವಾಗಿ ಕಂಗೊಳಿಸುತ್ತಿದ್ದುವು. ದೇವತೆಗಳಿಗಾಗಿ ಆಕಾಶದಲ್ಲಿ ಪ್ರವಹಿಸಿ, ದೇವಯೋಗ್ಯವಾದ ಕಮಲಗಳುಳ್ಳದಾಗಿ, ಲೋಕಪ್ರಸಿದ್ಧವಾದ ಆ ಪುಣ್ಯನದಿಯ ಮಹಿಮೆಯನ್ನು ಹೇಳತಕ್ಕದೇನು ! ಆ ಗಂಗಾನದಿಯು ಜಲಪ್ರವಾಹರೂಪವಾಗಿದ್ದರೂ ಸ್ತ್ರೀವ್ಯಕ್ತಿಯಂತೆಯೇ ಕಾಣುತ್ತ, ಅಲ್ಲಲ್ಲಿ ನೀರು ಧುಮ್ಮಿಕ್ಕುವುದರಿಂದ ಅಟ್ಟಹಾಸವನ್ನು ಮಾಡುವಂತೆಯೂ, ಬಿಳುಪಾದ ನೊರೆಗಳಿಂದ ನಗುವಂತೆಯೂ, ಹೆಣಿಕೆಯಂತಿರುವ ಸಣ್ಣಸಣ್ಣ ಪ್ರವಾಹಗಳಿಂದ ಜಡೆಯನ್ನು ತೋರಿಸುವಂತೆಯೂ ಕಾಣುತಿತ್ತು. ಅಲ್ಲಲ್ಲಿ ನಾಭಿಯಂತಿದ್ದ ಸುಳಿಗಳು ತೋರುತಿದ್ದುವು. ಒಂದೊಂದುಕಡೆಯಲ್ಲಿ ಸ್ತಿಮಿತವಾದ ಮತ್ತು ಗಂಭೀರವಾದ ಗತಿ ! ಕೆಲವೆಡೆಗಳಲ್ಲಿ ಶೀಘ್ರಗತಿ ! ಕೆಲವುಕಡೆಯಲ್ಲಿ ಗಂಭೀರವಾದ ಧ್ವನಿ ! ಮತ್ತೆ ಕೆಲವುಕಡೆಗಳಲ್ಲಿ ಭಯಂಕರವಾದ ಘೋಷ ! ಹೀಗೆ ವಿಚಿತ್ರಸ್ವರೂಪವುಳ್ಳದಾಗಿ ತೋರುತಿತ್ತು. ಅಲ್ಲಲ್ಲಿ ದೇವತೆಗಳು ಸ್ನಾನಾರ್ಥವಾಗಿ ಬಂದಿಳಿದಿದ್ದರು. ಅಲ್ಲಲ್ಲಿ ನಿರ್ಮಲವಾದ ನೈದಿಲೆಗಳು ಕಂಗೊಳಿಸುತ್ತಿದ್ದುವು. ಅಲ್ಲಲ್ಲಿ ವಿಸ್ತಾರವಾದ ಮಳಲುದಿಣ್ಣೆಗಳು ಕಾಣುತಿದ್ದುವು. ಕೆಲವುಕಡೆಗಳಲ್ಲಿ ಬಿಳುಪಾದ ಸಣ್ಣಮಳಲುಗಳಿದ್ದುವು. ಅಲ್ಲಲ್ಲಿ ಹಂಸಗಳೂ, ಸಾರಸಗಳೂ, ಚಕ್ರವಾಕಗಳೂ, ಇನ್ನೂ ಇತರಜಲಚರಪಕ್ಷಿಗಳೂ ಮದದಿಂದ ಇಂಪಾದ ಧ್ವನಿಯನ್ನು ಮಾಡುತಿದ್ದುವು. ತೀರವೃಕ್ಷಗಳೆಲ್ಲವೂ ಮಾಲಾಕಾರವಾಗಿ ಶೋಭಿಸುತ್ತಿದ್ದುವು. ಕೆಲವುಕಡೆಯಲ್ಲಿ ಅರಳಿದ ನೈದಿಲೆಗಳೂ, ಕೆಲವುಕಡೆಯಲ್ಲಿ ತಾವರೆಬಳ್ಳಿಗಳೂ, ಕೆಲವುಕಡೆಗಳಲ್ಲಿ ಬಿಳೀನೈದಿಲೆಗಳೂ, ಕೆಲವುಕಡೆಗಳಲ್ಲಿ ಸೌಗಂಧಿಕವೊದಲಾದ ಮೊಗ್ಗುಗಳೂ ಪ್ರಕಾಶಿಸುತ್ತಿದ್ದುವು. ಅನೇಕವಿಧವಾದ ಪುಷ್ಪಧೂಳಿಗಳಿಂದ ತುಂಬಿದ ಆ

ನದಿಯು ಮದದಿಂದ ಕೆಂಪೇರಿರುವಂತೆ ಕಾಣುತಿತ್ತು. ಕೊಳೆಯೆಂಬುದು ಸ್ವಲ್ಪವಾದರೂ ಇಲ್ಲದುದರಿಂದ, ವೈಡೂರ್ಯಮಣಿಯಂತೆ ಸ್ವಚ್ಛವಾಗಿ ತೋರುತಿತ್ತು. ತೀರಪ್ರದೇಶದ ಕಾಡುಗಳಲ್ಲಿ ಕೆಲವುಕಡೆಯಲ್ಲಿ ದೇವಲೋಕದ ಆನೆಗಳು, ಘೀಂಕಾರಧ್ವನಿಯನ್ನು ಮಾಡುತಿದ್ದುವು. ಹಣ್ಣುಗಳು, ಹೂಗಳು, ಚಿಗುರುಗಳು, ಹಸುರಾದ ಪೊದೆಗಳು, ವಿಚಿತ್ರವರ್ಣವುಳ್ಳ ಪಕ್ಷಿಗಳು, ಇವೆಲ್ಲವೂ ಅಲ್ಲಲ್ಲಿ ತುಂಬಿದ್ದುದರಿಂದ, ವಿಚಿತ್ರವಾದ ಆಭರಣಗಳಿಂದ ಅಲಂಕರಿಸಲ್ಪಟ್ಟ ಸ್ತ್ರೀಯಂತೆ ಕಾಣುತಿತ್ತು. ಅಲ್ಲಲ್ಲಿ ನೀರುಕೋಳಿಗಳೂ, ಮೊಸಳೆಗಳೂ,ನೀರುಹಾವುಗಳೂ ಓಡಾಡುತಿದ್ದುವು. ಹೀಗೆ ವಿಷ್ಣುಪಾದದಿಂದ ಹೊರಟು, ದಿವ್ಯಸ್ವರೂಪಿಣಿಯಾಗಿ, ಪಾಪದೂರೆಯಾಗಿ, ಪಾಪನಾಶಿನಿಯಾಗಿ, ಭಗೀರಥನ ಪ್ರಭಾವದಿಂದ ಶಿವನ ಜಟಾಜೂಟದಲ್ಲಿ ಬಿದ್ದು, ಅಲ್ಲಿಂದ ಭೂಮಿಗೆ ಅವತರಿಸಿದ ಸಮುದ್ರಮಹಿಷಿಯಾದ ಗಂಗೆಯನ್ನು ನೋಡಿ, ನಮಸ್ಕರಿಸಿ,ರಾಮನು ಅದರ ಸಮೀಪದಲ್ಲಿದ್ದ ಶೃಂಗಿಬೇರಪುರದಕಡೆಗೆ ಹೊರಟು ಬರುತ್ತ, ಅಲೆಗಳಿಂದಲೂ, ಸುಳಿಗಳಿಂದಲೂ ಕೂಡಿದ ಆ ಗಂಗಾಪ್ರವಾಹವನ್ನು ನೋಡಿ, ಸಾರಥಿಯಾದ ಸುಮಂತ್ರನನ್ನು ಕುರಿತು “ಎಲೆ ಸೂತನೆ! ನಾವು ಈಗ ಇಲ್ಲಿಯೇ ಇಳಿದು ಬಿಡುವೆವು ಇದೋ ! ಇಲ್ಲಿ ಈ ಗಂಗಾನದಿಗೆ ಸಮೀಪವಾಗಿ ಅನೇಕ ಪುಷ್ಪಗಳಿಂದಲೂ, ಚಿಗುರುಗಳಿಂದಲೂ ಕೂಡಿದ ಒಂದುದೊಡ್ಡ ಇಂಗಳದ ಮರವು ಕಾಣುತ್ತಿರುವುದಲ್ಲವೆ?ಇಲ್ಲಿಯೇ ಇದ್ದು ಹೋಗುವೆವು. ದೇವದಾನವಗಂಧರ್ವರೇ ಮೊದಲಾದವರೂ ಈ ನದಿಯನ್ನು ಸನ್ಮಾನಿಸುವರು. ಅನೇಕಮೃಗಪಕ್ಷಿಗಳಿಗೂ ಇದು ಆಶ್ರಯವಾಗಿರುವುದು. ನಾನಾದೇಶದ ಮನುಷ್ಯರೂ ಇದನ್ನು ಸೇವಿಸುವರು. ಹೀಗೆ ಮಂಗಳಕರವಾದ ಈ ಪುಣ್ಯನದಿಯ ಪ್ರಭಾವವನ್ನು ನೋಡುತಿದ್ದು, ಆಮೇಲೆ ಮುಂದೆ ಹೋಗುವೆವು” ಎಂದನು. ಲಕ್ಷ್ಮಣಸುಮಂತ್ರರಿಬ್ಬರೂ ಹಾಗೆಯೇ ಆಗಲೆಂದು ಹೇಳಿ, ಆ ಇಂಗಳದ ಮರವಿದ್ದಕಡೆಗೆ ರಥವನ್ನು ಬಿಟ್ಟುಕೊಂಡು ಹೋದರು. ಅಲ್ಲಿ ರಾಮನು ಸೀತಾಲಕ್ಷ್ಮಣರೊಡನೆ ರಥದಿಂದಿಳಿದಮೇಲೆ, ಸುಮಂತ್ರನೂ ರಥದಿಂದಿಳಿದು, ಕುದುರೆಗಳನ್ನು ಬಿಚ್ಚಿ, ಆ ಮರದಕೆಳಗೆ ವಿಶ್ರಮಿಸಿಕೊಂಡಿದ್ದ ರಾಮನನ್ನು ಉಪಚರಿಸುತ್ತಿ

ದ್ದನು. ಶೃಂಗಿಬೇರಪುರದ ಬೇಡರಿಗೆಲ್ಲಾ ಪ್ರಮುಖನಾದ ಗುಹನೆಂಬವನೊಬ್ಬನು ರಾಮನಿಗೆ * ಪ್ರಾಣಮಿತ್ರನು. ಆತನು ಬೇಡರ ಜಾತಿಯಲ್ಲಿ ಹುಟ್ಟಿದವನು. ಆತನಲ್ಲಿ ಚತುರಂಗಸೈನ್ಯವೂ ಇರುತಿತ್ತು. ಪುರುಷಶ್ರೇಷ್ಠನಾದ ರಾಮನು ತನ್ನ ದೇಶದ ಸಮೀಪಕ್ಕೆ ಬಂದಿರುವನೆಂಬ ಸುದ್ದಿಯನ್ನು ಕೇಳಿದೊಡನೆ ಅವನು, ತನ್ನ ವೃದ್ಧಮಂತ್ರಿಗಳೊಡನೆಯೂ, ಬಂಧುಗಳೊಡನೆಯೂ ಕೂಡಿ ರಾಮನಿದ್ದ ಕಡೆಗೆ ಬಂದನು. ಹೀಗೆ ಗುಹನು ಬರುತ್ತಿರುವುದನ್ನು ರಾಮನು ದೂರದಿಂದಲೇ ನೋಡಿ, ಲಕ್ಷ್ಮಣನೊಡಗೂಡಿ ತಾನೂ ಆತನನ್ನಿದಿರುಗೊಂಡುಬಂದನು. ಆಗ ಗುಹನು ನಾರುಬಟ್ಟೆಯನ್ನುಟ್ಟಿದ್ದ ರಾಮನ †ಅಪೂರ್ವವೇಷವನ್ನು ನೋಡಿದೊಡನೆ ದುಃಖಿತನಾಗಿ, ಆತನನ್ನಪ್ಪಿಕೊಂಡು “ರಾಮಾ! ಈ ನನ್ನ ಪುರವನ್ನು ನೀನು ಅಯೋಧ್ಯೆಯಂತೆಯೇ ನಿನ್ನದೆಂದು ತಿಳಿ! ನನ್ನಿಂದ ನಿನಗೆ ಆಗಬೇಕಾದ ಕೆಲಸವನ್ನು ಆಜ್ಞಾಪಿಸು! ನಿನ್ನಂತಹಪ್ರಿಯನಾದ ಅತಿಥಿಯು ಮತ್ತಾರಿಗೆತಾನೇ ಸಿಕ್ಕುವನು? ನೀನು ಇಲ್ಲಿಗೆ ಬಂದುದು ನನ್ನ ಪೂರ್ವಪುಣ್ಯವೇಹೊರತು ಬೇರೆಯಲ್ಲ” ಎಂದು ಹೇಳಿ, ಮೇಲಾದ ಬಹುವಿಧದ ಅನ್ನಗಳನ್ನು ತಂದಿಟ್ಟು, ಅರ್ಘ್ಯವನ್ನು ತರಿಸಿ “ಮಹಾಬಾಹುವಾದ ಎಲೈ ರಾಮನೆ! ನಿನಗೆ ಸ್ವಾಗತವು! ಈ ಸಮಸ್ತಭೂಮಿಯೂ ನಿನ್ನದೇ ಆಗಿರುವುದು. ನಾವೆಲ್ಲರೂ ನಿನಗೆ ಕಿಂಕರರು. ನೀನೇ ನಮ್ಮನ್ನು ಪೋಷಿಸತಕ್ಕ ಪ್ರಭು! ಇದೋ! ನಮ್ಮ ರಾಜ್ಯವನ್ನು ನಿನಗೇ ಒಪ್ಪಿಸಿರುವೆವು. ಇನ್ನು ಮೇಲೆ ನೀನೇ ಇದನ್ನು ರಕ್ಷಿಸು. ಇದೋ! ನಿನ್ನ ಭೋಜನಕ್ಕೆ ಬೇಕಾದ ಭಕ್ಷ್ಯಭೋಜ್ಯ ಪಾನೀಯಾದಿ ಸಮಸ್ತಭೋಜನಪದಾರ್ಥಗಳೂ ಸಿದ್ಧವಾಗಿ

---

* “ಹೀನಪ್ರೇಷ್ಯಂ ಹೀನಸಖ್ಯಂ ಹೀನಗೇಹನಿಷೇವಣಂ” ಎಂಬಂತೆ, ಹೀನರೊಡನೆ ಸಖ್ಯವೂ ಒಂದು ಉಪಪಾತಕವೆನಿಸುವುದು. ಹೀಗಿರುವಾಗ ಮಹಾಕುಲಪ್ರಸೂತನಾದ ರಾಮನಿಗೆ, ಬೇಡರ ಜಾತಿಯ ಗುಹನೊಡನೆ ಸಖ್ಯವು ಉಚಿತವೇ “ಎಂದರೆ, “ನ ಶೂದ್ರಾ ಭಗವದ್ಭಕ್ತಾ ವಿಪ್ರಾ ಭಾಗವತಾಸ್ಸ್ಮೃತಾಃ । ಸರ್ವವರ್ಣೇಷು ತೇ ಶೂದ್ರಾ ಯೇ ಹ್ಯಭಕ್ತಾ ಜನಾರ್ದನೇ॥” ಎಂಬಂತೆ, ಆತನು ರಾಮಭಕ್ತನಾದುದರಿಂದ ಉತ್ತಮನೇ ಹೊರತು ಹೀನನಲ್ಲವೆಂದು ಗ್ರಹಿಸಬೇಕು.

† ಇವರಿಂದ ರಾಮನಿಗೆ ಬೇಟೆ ವೊದಲಾದ ವ್ಯಾಪಾರಗಳ ಮೂಲಕವಾಗಿ ಗುಹನೊಡನೆ ವೊದಲೇ ಸ್ನೇಹವಿತ್ತೆಂದೂ ಸೂಚಿತವಾಗುವುದು.

ತಂದಿಡಲ್ಪಟ್ಟಿರುವುವು. ಸ್ವೀಕರಿಸಬೇಕು ! ನೀವು ಮಲಗುವುದಕ್ಕೆ ಬೇಕಾದ ಉತ್ತಮವಾದ ಹಾಸಿಗೆಯನ್ನೂ ತರಿಸಿಟ್ಟಿರುವೆನು. ಇದೋ! ಇಲ್ಲಿ ನಿನ್ನ ಕುದುರೆಗಳಿಗೆ ಬೇಕಾದ ಹುಲ್ಲು, ಹುರುಳಿ, ಮೊದಲಾದ ಆಹಾರಗಳೂ ಸಿದ್ಧವಾಗಿರುವುವು" ಎಂದನು. ಇದನ್ನು ಕೇಳಿ ರಾಮನು "ಎಲೆ ಸಖನೆ! ಈ ನಿನ್ನ ಮಾತಿನಿಂದಲೇ ನಾವು ತೃಪ್ತರಾದೆವು. ನೀನು ಕಾಲುನಡೆಯಿಂದ ಇದುವರೆಗೆ ಬಂದು ನಮ್ಮನ್ನಿದಿರುಗೊಂಡು, ಇಷ್ಟು ಸ್ನೇಹವನ್ನು ತೋರಿಸಿದೆಯಲ್ಲವೆ? ಇದರಿಂದಲೇ ನಮಗೆ ನಿನ್ನ ಸತ್ಕಾರಗಳೆಲ್ಲವೂ ಸೇರಿದಂತಾಯಿತು" ಎಂದು ಹೇಳಿ, ತನ್ನ ಎರಡುತೋಳುಗಳಿಂದಲೂ ಆತನನ್ನಪ್ಪಿಕೊಂಡು, "ಎಲೈ ಮಿತ್ರನೆ ! ಬಂಧುಮಿತ್ರರೊಡಗೂಡಿ ಕ್ಷೇಮದಿಂದಿರುವ ನಿನ್ನನ್ನು ನೋಡಿ ಆನಂದಿಸತಕ್ಕ ಅದೃಷ್ಟವು ನನಗೆ ದೈವವಶದಿಂದುಂಟಾಯಿತು! ನಿನ್ನ ರಾಷ್ಟ್ರವು ಸುಭಿಕ್ಷವಾಗಿರುವುದೆ ? ನಿನ್ನ ಮಿತ್ರರೆಲ್ಲರೂ ಕ್ಷೇಮದಿಂದಿರುವರೆ? ನಿನ್ನ ಬಂಡಾರವು ಲೋಪವಿಲ್ಲದೆ ವೃದ್ಧಿಯನ್ನು ಹೊಂದುತ್ತಿರುವುದೆ ? ನೀನು ನನ್ನಲ್ಲಿ ಪ್ರೀತಿಯಿಂದ ತಂದಿಟ್ಟಿರುವ ಈ ಪದಾರ್ಥಗಳನ್ನು ನಾನು ಸ್ವೀಕರಿಸಿದಂತೆಯೇ ಭಾವಿಸು! ಇದೆಲ್ಲವನ್ನೂ ನೀನೇ ಪ್ರತಿಗ್ರಹಿಸು. ಈಗ ನಾನು ಇದೊಂದನ್ನೂ ಸ್ವೀಕರಿಸಕೂಡದು. ಇದಕ್ಕೆ ಅನಿವಾರ್ಯಗಳಾದ ಕೆಲವು ಕಾರಣಗಳುಂಟು. ಈಗ ನಾನು ಪಿತೃವಾಕ್ಯಪರಿಪಾಲನವೆಂಬ ವ್ರತವನ್ನು ಅಂಗೀಕರಿಸಿ, ಆತನ ಆಜ್ಞೆಯಂತೆ ನಾರುಮಡಿಯನ್ನೂ, ಕೃಷ್ಣಾಜಿನವನ್ನೂ, ದರ್ಭೆಗಳನ್ನೂ ಧರಿಸಿ, ಫಲಮೂಲಗಳನ್ನು ತಿನ್ನುತ್ತ ಕಾಡಿನಲ್ಲಿ ತಪೋನಿರತನಾಗಿರುವೆನು. ಈ ಕುದುರೆಗಳಿಗೆ ಹುಲ್ಲನ್ನು ಮಾತ್ರ ತರಿಸಿಕೊಟ್ಟರೆ ಸಾಕು ! ಬೇರೆ ಯಾವುದನ್ನೂ ಈಗ ನಾನು ನಿನ್ನಿಂದ ಅಪೇಕ್ಷಿಸತಕ್ಕವನಲ್ಲ. ಇಷ್ಟುಮಾತ್ರವನ್ನು ನೀನು ಮಾಡಿಕೊಟ್ಟರೆ ನನಗೆ ಸಮಸ್ತಸತ್ಕಾರಗಳನ್ನೂ ಮಾಡಿದಂತಾಗುವುದು. ಈ ಕುದುರೆಗಳಲ್ಲಿ ನನ್ನ ತಂದೆಯಾದ ದಶರಥನಿಗೆ ಬಹಳ ಪ್ರೀತಿಯುಂಟು. ಇವುಗಳನ್ನು ಚೆನ್ನಾಗಿ ಪೋಷಿಸುತ್ತಿದ್ದರೆ ಅದೇ ನನಗೆ ಸಮಸ್ತಸತ್ಕಾರವು" ಎಂದನು. ಒಡನೆಯೇ ಗುಹನು ಆ ಕುದುರೆಗಳಿಗೆ ಬೇಕಾದಷ್ಟು ಹುಲ್ಲನ್ನೂ, ನೀರನ್ನೂ ತಂದಿಡುವಂತೆ ತನ್ನ ಕಡೆಯುವರಿಗೆ ಆಜ್ಞಾಪಿಸಿದನು. ಆಮೇಲೆ ರಾಮನು ನಾರುಬಟ್ಟೆಯನ್ನು ಹೊದೆದು, ಸಾಯಂಕಾಲದ ಸಂಧ್ಯೋಪಾಸನೆಯನ್ನು ಮುಗಿಸಿಕೊಂಡನು. ಅಷ್ಟರಲ್ಲಿ ಲಕ್ಷ್ಮಣನು

ಮುಂದೆ ತಂದಿಟ್ಟ ಗಂಗಾನದಿಯ ನೀರನ್ನು ಕುಡಿದು,ಆ ಜಲಾಹಾರದಿಂದಲೇ ತೃಪ್ತನಾಗಿ,ಕೈಕಾಲುಗಳನ್ನು ತೊಳೆದು ಆಚಮನವನ್ನು ಮಾಡಿ ಸೀತೆಯೊಡನೆ ನೆಲದಮೇಲೆ ಮಲಗಿಬಿಟ್ಟನು. ಆಮೇಲೆ ಲಕ್ಷ್ಮಣನು ಗುಹನಿದ್ದ ಕಡೆಗೆ ಬಂದು, ಆತನೊಡನೆ ಆ ಮರದಡಿಯಲ್ಲಿ ಕುಳಿತನು. ಆಗ ಗುಹ ಸುಮಂತ್ರರಿಬ್ಬರೂ ರಾಮನ ಗುಣಗಳನ್ನು ಪ್ರಸಂಗಿಸುತ್ತಾ, ಲಕ್ಷ್ಮಣನನ್ನೂ ಆಗಾಗ ವಿಚಾರಿಸುತ್ತಿದ್ದರು. ಅಲ್ಲಿ ಗುಹನು ಧನುರ್ಧಾರಿಯಾಗಿ ಆ ರಾತ್ರಿಯೆಲ್ಲವೂ ಎಚ್ಚರಗೊಂಡು ಕಾವಲಿದ್ದನು. ಹೀಗೆ ಯಶಸ್ವಿಯಾಗಿಯೂ ಬುದ್ಧಿವಂತನಾಗಿಯೂ ಇರುವ ಮಹಾತ್ಮನಾದ ರಾಮನು, ನೆಲದಲ್ಲಿ ಮಲಗಿರಲು, ಹುಟ್ಟಿದುದು ಮೊದಲು ದುಃಖವೆಂಬುದನ್ನೇ ಕಾಣದೆ ಸುಖದಲ್ಲಿಯೇ ಬಳೆದ ಆತನಿಗೆ, ಸುಖನಿದ್ರೆಯು ಬಾರದುದರಿಂದ, ಆ ರಾತ್ರಿಯು ಬಹುದೀರ್ಘಕಾಲದಂತೆ ತೋರಿ, ಹಾಗೆಯೇ ಬಹುಕಷ್ಟದಿಂದ ಕಳೆದುಹೋಯಿತು. ಇಲ್ಲಿಗೆ ಐವತ್ತನೆಯ ಸರ್ಗವು.

---

## ಗುಹಲಕ್ಷ್ಮಣರ ಸಂಭಾಷಣವು

ಆಗ ತನ್ನ ಅಣ್ಣನ ರಕ್ಷಣೆಗಾಗಿ ಮನಃಪೂರ್ವಕವಾದ ಪ್ರೀತಿಯಿಂದ ರಾತ್ರಿಯೆಲ್ಲವೂ ಎಚ್ಚರದಿಂದ ಕಾಯುತಿದ್ದ ಲಕ್ಷ್ಮಣನನ್ನು ನೋಡಿ ಗುಹನು, ಮರುಕಗೊಂಡು, ಆತನನ್ನು ಕುರಿತು ‹‹ಅಯ್ಯ ಲಕ್ಷ್ಮಣಾ! ಇದೋ ! ಇಲ್ಲಿನಿನಗಾಗಿಯೂ ಸುಖವಾದ ಹಾಸಿಗೆಯನ್ನು ಕಲ್ಪಿಸಿರುವೆನು. ನೀನೂ ಇದರಲ್ಲಿ ವಿಶ್ರಮಿಸಿಕೊಳ್ಳಬಹುದಲ್ಲವೆ? ಎಲೈ ರಾಜಕುಮಾರನೆ ! ನೀನೇಕೆ ಮಲಗಬಾರದು ? ಕಾಡಿನಲ್ಲಿ ವಾಸಮಾಡುವ ನಾವೆಲ್ಲರೂ ಯಾವಾಗಲೂ ಕಷ್ಟಜೀವಿಗಳು. ಎಷ್ಟು ಕಷ್ಟವನ್ನಾದರೂ ಸಹಿಸಬಲ್ಲೆವು. ರಾಜಕುಮಾರನಾದ ನೀನು ಸುಖದಲ್ಲಿಯೇ ಬಳೆದವನಾದುದರಿಂದ, ಇಂತಹ ಕಷ್ಟಗಳಿಗೆ ಅರ್ಹನಲ್ಲ! ರಾಮನ ಕಾವಲಿಗಾಗಿ ನಾವೆಲ್ಲರೂ ಎಚ್ಚರಗೊಂಡಿರುವೆವು. ನನಗೆ ರಾಮನಿಗಿಂತಲೂ ಪ್ರಿಯನಾದವನು ಭೂಮಿಯಲ್ಲಿ ಬೇರೊಬ್ಬನೂ ಇಲ್ಲ. ಸತ್ಯವಾಗಿ ಆಣೆಯಿಟ್ಟು ಹೇಳುವೆನು. ಈ ಲೋಕದಲ್ಲಿ ನಾನು ಕೀರ್ತಿಯನ್ನಾಗಲಿ,ಧರ್ಮವನ್ನಾಗಲಿ,ಅರ್ಥವನ್ನಾಗಲಿ, ಈತನ ಅನುಗ್ರಹದಿಂದಲೇಪಡೆಯಬೇ

ಕೆಂದಿರುವೆನು. ಈ ರಾಮನು ಸೀತೆಯೊಡಗೂಡಿ ಇಲ್ಲಿ ಮಲಗಿರುವ ಕಾಲದಲ್ಲಿ, ಆತನ ರಕ್ಷಣೆಗಾಗಿ ನಾನೇ ಧನುರ್ಧಾರಿಯಾಗಿ ಸುತ್ತಲೂ ಕಾವಲಿರುವೆನು. ನಾನೊಬ್ಬನೇ ಅಲ್ಲ! ನನ್ನ ಕಡೆಯವರನೇಕರೂ ಇಲ್ಲಿರುವರು. ಅವರೆಲ್ಲರೂ ನನಗೆ ಸಹಾಯಕರಾಗುವರು. ನಾನು ಬಹುಕಾಲದಿಂದ ಈ ಕಾಡಿನಲ್ಲಿಯೇ ಇದ್ದು ಬಳಕೆಯುಳ್ಳವನು. ಇಲ್ಲಿ ನನಗೆ ತಿಳಿಯದುದೊಂದೂ ಇಲ್ಲ. ಶತ್ರುಗಳು ಎಷ್ಟೇ ದೊಡ್ಡ ಚತುರಂಗಸೈನ್ಯವನ್ನು ಕಟ್ಟಿಕೊಂಡುಬಂದರೂ ನಾವು ತಡೆಯಬಲ್ಲೆವು. ಆದುದರಿಂದ, ನೀನು ಸುಖವಾಗಿ ಮಲಗು"ಎಂದನು. ಇದನ್ನು ಕೇಳಿ ಲಕ್ಷ್ಮಣನು ಗುಹನನ್ನು ಕುರಿತು "ಎಲೈಮಿತ್ರನೆ! ನೀನಿರುವಾಗ ನಮಗೆ ಭಯವೆಲ್ಲಿಯದು?ದೋಷರಹಿತನಾಗಿ, ಧರ್ಮವನ್ನೇಮುಂದಿಟ್ಟು ಕೊಂಡು ನಡೆಯುತ್ತಿರುವ ನೀನೇ ಇಲ್ಲಿ ನಮಗೆ ಬೆಂಬಲವಾಗಿರುವಾಗ, ನಾವು ಸುಖವಾಗಿ ನಿದ್ರಿಸಬಹುದೆಂಬುದರಲ್ಲಿ ಸಂದೇಹವಿಲ್ಲ. ಆದರೂ ಅಣ್ಣನಾದ ರಾಮನು ಸೀತೆಯೊಡನೆ ಹೀಗೆ ನೆಲದಮೇಲೆ ಮಲಗಿದ್ದರೆ, ಅದನ್ನು ನೋಡಿ ಹೇಗೆತಾನೇ ನನಗೆ ನಿದ್ರೆಯು ಬಂದೀತು? ಮನಸ್ಸಿಗೆ ನೆಮ್ಮದಿಯಿಲ್ಲದಮೇಲೆ ಸುಖದಾಸೆಯೇನು?ಯಾವನ ವೀರ್ಯವನ್ನು ಯುದ್ಧಕಾಲದಲ್ಲಿ ದೇವಾಸುರರೂ ತಡೆಯಲಾರರೋ,!ಅಂತಹ ಮಹಾನುಭಾವನು ತನ್ನ ಪತ್ನಿಯೊಡನೆ ಹುಲ್ಲಿನಮೇಲೆ ಮಲಗಿರುವುದನ್ನು ನೋಡಿದೆಯಾ? ದಶರಥನು ಬಹುಕಾಲದವರೆಗೆ ಮಂತ್ರಗಳನ್ನು ನಡೆಸಿ, ಅನೇಕತಪಸ್ಸುಗಳನ್ನು ಮಾಡಿ, ಯಜ್ಞಾದಿಕಾರ್ಯಗಳಿಂದ ಶ್ರಮಪಟ್ಟು ತನಗೆ ಸಮಾನವಾದ ಸುಲಕ್ಷಣಗಳುಳ್ಳ ಯಾವ ಪ್ರಿಯಪುತ್ರನನ್ನು ಪಡೆದನೋ,ಅಂತಹ ಪುತ್ರರತ್ನವೇಕಾಡಿಗೆಹೋದಮೇಲೆ, ದಶರಥನು ಇನ್ನು ಬಹುಕಾಲದವರೆಗೆ ಬದುಕಿರಲಾರನು.ಇನ್ನು ಈ ಭೂದೇವಿಯೂ ಶೀಘ್ರದಲ್ಲಿಯೇ ವಿಧವೆಯಾಗುವುದರಲ್ಲಿ ಸಂದೇಹವಿಲ್ಲ. ರಾಜಗೃಹದಲ್ಲಿರುವ ಸ್ತ್ರೀಯರೆಲ್ಲರೂ ಇದುವರೆಗೆ ಅನೇಕವಿಧದಲ್ಲಿ ಪ್ರಲಾಪಿಸಿ ಅದರಿಂದ ಬಳಲಿ ಸುಮ್ಮನಾಗಿರುವರು. ಈಗ ನಮ್ಮ ಮನೆಯಲ್ಲವೂ ನಿಶ್ಶಬ್ದವಾಗಿರುವುದೆಂದೆಣಿಸುವೆನು. ಕೌಸಲ್ಯೆಯಾಗಲಿ, ರಾಜನಾಗಲಿ, ನನ್ನ ತಾಯಿಯಾಗಲಿ ಬದುಕಿರುವರೆಂಬುದು ನನಗೆ ನಿಶ್ಚಯವಿಲ್ಲ! ಒಂದುವೇಳೆ ಬದುಕಿದ್ದರೂ ಈರಾತ್ರಿಮಾತ್ರವೇ ಬದುಕಿರಬಹುದೇಹೊರತು, ಆಮೇಲೆ ಪ್ರಾಣ

ವನ್ನು ನಿಲ್ಲಿಸಿಕೊಳ್ಳಲಾರರು. ನನ್ನ ತಾಯಿಯಾದ ಸುಮಿತ್ರೆಗೆ ಶತ್ರುಘ್ನನೆಂಬ ಮತ್ತೊಬ್ಬ ಮಗನಿರುವುದರಿಂದ, ಆಗಾಗ ಆತನನ್ನು ನೋಡಿಕೊಂಡು ಆಕೆಯು ಬಂದುವೇಳೆ ಬದುಕಿದ್ದರೂ ಇರಬಹುದು.ಅವಳ ವಿಷಯದಲ್ಲಿ ನಾನು ಅಷ್ಟಾಗಿ ಚಿಂತಿಸಬೇಕಾದುದಿಲ್ಲ. ರಾಮನಂತಹ ಪುತ್ರರತ್ನವನ್ನು ಪಡೆದ ಕೌಸಲ್ಯೆಯು ಎಂದಿಗೂಬದುಕಿರಲಾರಳು. ಆ ಚಿಂತೆಯೇ ನನ್ನನ್ನುಬಹಳವಾಗಿ ಭಾಧಿಸುತ್ತಿರುವುದು. ರಾಜನಲ್ಲಿ ಅನುರಕ್ತರಾದ ಅನೇಕಪ್ರಜೆಗಳಿಂದ ತುಂಬಿ,ಸುಖಾಶ್ರಯವಾಗಿರುವ ಅಯೋಧ್ಯೆಯು,ದಶರಥನ ಮರಣದಿಂದುಂಟಾದ ದುಃಖವನ್ನು ಸಹಿಸಲಾರದೆ, ನಾಶಹೊಂದುವುದರಲ್ಲಿ ಸಂದೇಹವಿಲ್ಲ. ದಶರಥನು ತನಗೆ ಜ್ಯೇಷ್ಠಪುತ್ರನಾದ ಮಹಾತ್ಮನಾದ ಈರಾಮನನ್ನು ನೋಡದೆ ಹೇಗೆ ಬದುಕಿರಬಲ್ಲನು? ಆ ದಶರಥನಿಗೆ ಮರಣವೆಂಬುದೇ ನಿಜವು. ಈ ಪತಿವಿರಹವನ್ನು ಸಹಿಸಲಾರದೆ ಕೌಸಲ್ಯೆಯೂ ಪ್ರಾಣವನ್ನು ಬಿಡುವುದೇ ನಿಶ್ಚಯವು. ಇಷ್ಟು ಅನರ್ಥಗಳನ್ನು ನೋಡಿದಮೇಲೆ, ನನ್ನ ತಾಯಿಯಾದ ಸುಮಿತ್ರೆಯುತಾನೇ ಹೇಗೆ ಬದುಕಿರಬಲ್ಲಳು ? ಏನಾದರೇನು ? ಕಾರ್ಯವು ಮಿಂಚಿಹೋಯಿತು!ನಮ್ಮ ತಂದೆಯಾದ ದಶರಥನು ತನ್ನ ಹಿರಿಯಮಗನಿಗೆ ಪಟ್ಟವನ್ನು ಕಟ್ಟಿ ಸಂತೋಷಿಸಬೇಕೆಂಬ ಮನೋರಥವನ್ನು ಈಡೇರಿಸಿಕೊಳ್ಳುವುದಕ್ಕೆ ಮೊದಲೇ ಸಾಯುವನು ! ಮುಖ್ಯವಾಗಿ ಕೆಲಸವೆಲ್ಲವೂ ಕೆಟ್ಟುಹೋಯಿತು. ಅವುಗಳನ್ನು ಈಗ ನೆನೆಸಿಕೊಂಡು ಚಿಂತಿಸಿದುದರಿಂದ ಫಲವೇನು?ನನ್ನ ತಂದೆಯು ಬಹುಕಾಲದಿಂದ ಮನಸ್ಸಿನಲ್ಲಿ ರಾಮನು ಹುಟ್ಟಿ ಬಳೆದು ವಿವಾಹಿತನಾಗಿ ಪಟ್ಟಾಭಿಷಿಕ್ತನಾಗುವನೆಂದು ಕೋರುತಿದ್ದ ಕೋರಿಕೆಗಳೆಲ್ಲವೂ ಕೆಟ್ಟುಹೋಯಿತು. ರಾಮನಿಗೆ ರಾಜ್ಯವನ್ನು ಕೊಡದೆಯೇ ಸಾಯಬೇಕಾಗಿ ಬಂತು.ಅಯ್ಯೋ!ನಮ್ಮತಂದೆಗೆ ಪ್ರೇತಕಾರ್ಯಗಳನ್ನು ನಡೆಸುವುದಕ್ಕೂ ನಮಗೆ ಅದೃಷ್ಟವಿಲ್ಲದೆ ಹೋಯಿತಲ್ಲಾ! ಆತನಿಗೆ ಮರಣಕಾಲದಲ್ಲಿ ಮಾಡಬೇಕಾದ ಪ್ರೇತಕಾರ್ಯಗಳನ್ನು ಮಾಡತಕ್ಕವರೇ ಧನ್ಯರಲ್ಲವೇ ? ನಮಗೆ ಆ ಧನ್ಯತೆಯೂ ಇಲ್ಲದೆ ಹೋಯಿತು. ಅತಿಮನೋಹರವಾದ ಅಂಗಳಗಳುಳ್ಳದಾಗಿ, ನೇರವಾದ ಬೀದಿಗಳುಳ್ಳದಾಗಿ, ಉಪ್ಪರಿಗೆಗಳಿಂದಲೂ, ಗೋಪುರಗಳಿಂದಲೂ ಕೂಡಿರುವುದಾಗಿ,ಅನೇಕಗಣಿಕಾಸ್ತ್ರೀಯರಿಂದ ಶೋಭಿ

ತವಾಗಿ, ಅನೇಕಕುದುರೆಗಳಿಂದಲೂ, ರಥಗಳಿಂದಲೂ, ವಾದ್ಯಧ್ವನಿಗಳಿಂದಲೂ ತುಂಬಿದುದಾಗಿ, ನಿತ್ಯಸಂತೋಷಿಗಳಾದ ಧನಿಕರಿಂದ ಕೂಡಿದುದಾಗಿ, ಉದ್ಯಾನಗಳಿಂದಲೂ, ಕ್ರೀಡಾವನಗಳಿಂದಲೂ, ಶೋಭಿತವಾಗಿ ಸಮಸ್ತಕಲ್ಯಾಣಗಳಿಗೂ ನೆಲೆಯಾದ ನಮ್ಮ ತಂದೆಯ ರಾಜಧಾನಿಯಲ್ಲಿ ಸುಖವಾಗಿ ಸಂಚರಿಸತಕ್ಕವರೇ ಭಾಗ್ಯಶಾಲಿಗಳು! ನಮಗಂತೂ ಆ ಭಾಗ್ಯವಿಲ್ಲದೆ ಹೋಯಿತು. ದಶರಥನು ನಾವು ಬರುವವರೆಗೂ ಬದುಕಿರುವನೇ? ನಾವು ವನವಾಸದಿಂದ ಹಿಂತಿರುಗಿ ಬಂದು ಮಹಾತ್ಮನಾದ ಆತನನ್ನು ಪುನಃ ನೋಡುವೆವೇ? ಸತ್ಯಪ್ರತಿಜ್ಞನಾದ ರಾಮನಿಗೆ ವನವಾಸವು ಮುಗಿದಮೇಲೆ ಆತನೊಡಗೂಡಿ ನಾವು ಈ ಅಯೋಧ್ಯೆಗೆ ಪುನಃ ಪ್ರವೇಶಿಸುವೆವೆ? ನಮಗೆ ಅಷ್ಟೊಂದು ಭಾಗ್ಯವು ಲಭಿಸುವುದೇ?" ಎಂದು ವ್ಯಸನದಿಂದ ನಾನಾವಿಧವಾಗಿ ವಿಲಪಿಸುತಿದ್ದನು. ಹೀಗೆ ಆ ಲಕ್ಷ್ಮಣನು ಮಾತಾಡುತ್ತಿರುವಾಗಲೇ ರಾತ್ರಿಯು ಕಳೆದುಹೋಯಿತು. ಪ್ರಜೆಗಳಿಗೆ ಹಿತನಾದ ಆ ರಾಜಕುಮಾರನು ಹೀಗೆ ತನ್ನ ತಂದೆಯಾದ ದಶರಥನನ್ನು ಸ್ಮರಿಸಿಕೊಂಡು, ರಾಮನಲ್ಲಿ ತನಗಿರುವ ಮನಃಪೂರ್ವಕವಾದ ಭಕ್ತಿಯಿಂದ ಅವನ ಕಷ್ಟಗಳನ್ನೂ ನೆನೆಸಿಕೊಂಡು ಹೇಳಿದ ತತ್ವಾಂಶಗಳೆಲ್ಲವನ್ನೂ ಗುಹನು ಕೇಳಿ, ರಾಮನಲ್ಲಿ ತನಗಿರುವ ಪ್ರೇಮಾತಿಶಯದಿಂದ ತಾನೂ ಬಹುದುಃಖಿತನಾಗಿ ಜ್ವರದಲ್ಲಿ ನರಳುವ ಆನೆಯಂತೆ, ಕಳವಳಹೊಂದಿ, ಕೊರಗಿ ಕಣ್ಣೀರನ್ನು ಬಿಡುತಿದ್ದನು. ಇಲ್ಲಿಗೆ ಐವತ್ತೊಂದನೆಯ ಸರ್ಗವು.

---

ರಾಮನು ಸುಮಂತ್ರನೊಡನೆ ತನ್ನ ತಂದೆತಾಯಿಗಳಿಗೆ ಸಂದೇಶಗಳನ್ನು ಹೇಳಿ, ಗುಹನನ್ನು ಸಮಾಧಾನಪಡಿಸಿ, ಜಡೆಗಳನ್ನು ಧರಿಸಿದುದು. ವತ್ಸದೇಶವನ್ನು ದಾಟಿ, ಮೃಗಮಾಂಸವನ್ನು ಭುಜಿಸಿ, ಮರದ ಕೆಳಗೆ ಮಲಗಿದುದು.

ರಾತ್ರಿಯು ಕಳೆದು ಬೆಳಗಾದಕೂಡಲೆ, ಮಹಾಯಶಸ್ವಿಯಾದ ರಾಮನು ಲಕ್ಷ್ಮಣನನ್ನು ಕುರಿತು, "ಎಲೆ ವತ್ಸನೆ! ಇದೋ ಸೂರ್ಯೋದಯಸ

ಮಯವಾಯಿತು. ಪೂಜ್ಯವಾದ ರಾತ್ರಿಯೂ ಕಳೆದುಹೋಯಿತು.ಅದೋ! ಅ ಲ್ಲಿಭರದ್ವಾಜಗಳೂ,ಕೋಗಿಲೆಗಳೂ ಕೂಗುತ್ತಿರುವುವು. ಅಲ್ಲಲ್ಲಿ ಕಾಡುನವಿಲು ಗಳ ಕೇಕಾಧ್ವನಿಯು ಕೇಳಿಸುತ್ತಿರುವುದು ಆದುದರಿಂದ ನಾವು ಶೀಘ್ರದ ಲ್ಲಿಯೇ ಸಾಗರಗಾಮಿನಿಯಾದ ಈ ಜಾಹ್ನವೀನದಿಯನ್ನು ದಾಟಿ ಹೋಗಬೇ ಕು" ಎಂದನು. ಲಕ್ಷ್ಮಣನು ರಾಮನ ಈ ಮಾತನ್ನು ಕೇಳಿ, ಆ ನದಿಯನ್ನು ಕಾಲುನಡೆಯಿಂದಲೇ ದಾಟುವುದು ಅಸಾಧ್ಯವಾದುದರಿಂದ,ಅದಕ್ಕೆ ತಕ್ಕ ಸಾ ಧನವನ್ನು ಸಿದ್ಧಪಡಿಸಬೇಕೆಂಬುದೇ ರಾಮನ ಅಭಿಪ್ರಾಯವೆಂದು ತಿಳಿದು, ಗುಹನನ್ನೂ,ಸುಮಂತ್ರನನ್ನೂ ಕರೆದು "ಈ ರಾಮನ ಅಭಿಪ್ರಾಯವು ನಿಮ ಗೆ ತಿಳಿಯಿತೆ?" ಎಂದು ಕೇಳಿ,ರಾಮನ ಮುಂದೆ ಸುಮ್ಮನೆ ನಿಂತಿದ್ದನು. ಒಡ ನೆಯೇ ಗುಹನು ಆ ಅಭಿಪ್ರಾಯವನ್ನು ತಿಳಿದು, ತನ್ನ ಮಂತ್ರಿಗಳನ್ನು ಕರೆ ಯಿಸಿ, "ಎಲೈ, ಮಂತ್ರಿಗಳೆ! ಇವರನ್ನು ಸುಲಭವಾಗಿ ಈ ಗಂಗಾನದಿಯ ನ್ನು ದಾಟಿಸುವುದಕ್ಕೆ ತಕ್ಕ ಒಂದು ದೃಢವಾದ ನಾವೆಯನ್ನು ಸಿದ್ಧಪಡಿ ಸಿರಿ ! ಅದನ್ನು ನಡೆಸುವುದಕ್ಕೆ ಬೇಕಾದ ಹುಟ್ಟು ಮೊದಲಾದ ಉಪಕರಣ ಗಳೆಲ್ಲವೂ ಸಿದ್ಧವಾಗಿರಲಿ ! ಈಕಾರ್ಯಕ್ಕೆ ಸಮರ್ಥರಾದ ನಾವಿಕರನ್ನು ನಿ ಯಮಿಸಿರಿ! ಈಗಲೇ ಆ ನಾವೆಯನ್ನು ತರಿಸಿರಿ!" ಎಂದನು. ಆ ಮಂತ್ರಿಗಳೆಲ್ಲ ರೂ ಇದನ್ನು ಕೇಳಿದೊಡನೆ ಅಂದವಾದ ಒಂದು ನಾವೆಯನ್ನು ತರಿಸಿಟ್ಟು, ಆ ವಿಷಯವನ್ನು ಗುಹನಿಗೆ ತಿಳಿಸಿದರು. ಆಗ ಗುಹನು ರಾಮನಬಳಿಗೆ ಬಂದು ಕೈಮುಗಿದು ನಿಂತು "ಸ್ವಾಮಿ ! ಇದೋ! ಇಲ್ಲಿ ನಾವೆಯು ಸಿದ್ಧವಾಗಿರು ವುದು. ಸಾಗರಗಾಮಿನಿಯಾದ ಈ ಗಂಗಾನದಿಯನ್ನು ದಾಟುವುದಕ್ಕೆ ಇದು ಬಹಳ ಅನುಕೂಲವಾಗಿರುವುದು. ಇನ್ನು ನೀವು ಇದನ್ನೇರಬಹುದು. ಇನ್ನು ನನ್ನಿಂದ ನಿಮಗಾಗಬೇಕಾದ ಕೆಲಸವೇನು? ಎಂದನು. ಆಗ ರಾಮನು ಗುಹ ನನ್ನು ನೋಡಿ "ಎಲೈ ಸಖನೆ! ಇದೊಂದೇ ನನಗೆ ನಿನ್ನಿಂದಾಗಬೇಕಾಗಿದ್ದ ಮುಖ್ಯಕಾರ್ಯವು. ನನಗೆ ಬೇಕಾದುದೆಲ್ಲವೂ ಆಯಿತು. ಇನ್ನು ಗುದ್ದಲಿ, ಪುಟ್ಟಿ,ಸೀತೆಯ ವಸ್ತ್ರಾಭರಣವೇ ಮೊದಲಾದ ಇತರಸಾಮಗ್ರಿಗಳು, ಯಾವು ವುಂಟೋ ಅವೆಲ್ಲವನ್ನೂ ತರಿಸಿ ನಾವೆಯಲ್ಲಿಡು" ಎಂದನು. ಆಮೇಲೆ ರಾ ಮಲಕ್ಷ್ಮಣರಿಬ್ಬರೂ ತಮ್ಮ ತಮ್ಮ ಬತ್ತಳಿಕೆಗಳನ್ನೂ, ಕತ್ತಿಗಳನ್ನೂ ಕಟ್ಟಿ



೧೦೬. ರಾಮನು ಬೆಳಗಿನಜಾವದಲ್ಲಿ ಗುಹನು ತರಿಸಿಟ್ಟ ನಾವೆಯನ್ನೇರಿ, ಗಂಗಾನದಿಯನ್ನು ದಾಟಿದುದು.

ಕೊಂಡು, ಧನುರ್ಧಾರಿಗಳಾಗಿ ಸೀತೆಯೊಡಗೂಡಿ, ಆ ಗಂಗಾನದಿಗೆ ಜನಗಳು ಹೋಗಿ ಬಳಿಕೆಯಾದ ದಾರಿಯನ್ನು ಹಿಡಿದು ಹೊರಟರು. ಇವರೆಲ್ಲರೂ ನಾವೆಯನ್ನೇರುವುದಕ್ಕೆ ಸಿದ್ಧವಾಗಿರುವಾಗ, ಸುಮಂತ್ರನು ಧರ್ಮಜ್ಞನಾದ ರಾಮನ ಬಳಿಗೆ ಬಂದು, ವಿನಯದಿಂದ ಕೈಮುಗಿದು''ಎಲೈ, ರಾಮನೆ! ಈಗ ನಾನು ಮಾಡಬೇಕಾದುದೇನು ?" ಎಂದನು. ಆಗ ರಾಮನು ತನ್ನ ಬಲಗೈಯಿಂದ ಆ ಸುಮಂತ್ರನ ಬೆನ್ನನ್ನು ಸ್ಪರ್ಶಿಸುತ್ತ '' ಎಲೆ ಸೂತನೆ ! ನಾನು ಇನ್ನು ನಿನಗೆ ಹೇಳಬೇಕಾದುದೇನು? ನೀನು ಶೀಘ್ರದಲ್ಲಿಯೇ ದಶರಥನಬಳಿಗೆ ಹಿಂತಿರುಗಿಹೋಗು. ಬಹುಜಾಗರೂಕನಾಗಿ ಆತನನ್ನು ನೋಡಿಕೊಳ್ಳುತ್ತಿರು! ಇನ್ನು ನೀನು ಹಿಂತಿರುಗು! ಇದುವರೆಗೆ ನೀನು ನನ್ನನ್ನು ರಥದಲ್ಲಿ ಕುಳ್ಳಿರಿಸಿ ತಂದುಬಿಟ್ಟುದೇ ಸಾಕು! ಇನ್ನುಮುಂದೆ ನಾವು ಕಾಲುನಡೆಯಿಂದಲೇ ಹೋಗುವೆವು" ಎಂದನು. ಇದನ್ನು ಕೇಳಿ ಸಾರಥಿಯು, ರಾಮನು ತನಗೆ ಹಿಂತಿರುಗಿಹೋಗುವುದಕ್ಕಾಗಿ ಅನುಮತಿಕೊಟ್ಟುಬಿಟ್ಟುದನ್ನು ನೋಡಿ, ಆತನನ್ನು ಬಿಟ್ಟುಹೋಗಲಾರದೆ ವ್ಯಸನದಿಂದ ಕೊರಗುತ್ತಾ, ಪುನಃ ಪುರುಷಶ್ರೇಷ್ಠನಾದ ಆ ರಾಮನನ್ನು ಕುರಿತು ''ವತ್ಸ ರಾಮಾ! ನಿನ್ನಂತಹ ಮಹಾನುಭಾವನು ಹೆಂಡತಿಯನ್ನೂ, ತಮ್ಮನನ್ನೂ ಸಂಗಡಕರೆದುಕೊಂಡು, ಕೇವಲ ಪ್ರಾಕೃತಮನುಷ್ಯನಂತೆ ಕಾಡಿನಲ್ಲಿರಬೇಕೆಂಬುದನ್ನು ಲೋಕದಲ್ಲಿ ಯಾರೂ ಸಮ್ಮತಿಸಲಾರರು. ಹೀಗಿರುವಾಗ ನಿನ್ನಲ್ಲಿ ಚಿರಪರಿಚಯವುಳ್ಳ ನಮ್ಮಂಥವರಿಗೆ ಹೇಳತಕ್ಕುದೇನು? ಎಲೈ ರಾಮನೆ! ಏಷ್ಟಾದರೇನು?ದೈವವು ಹೀಗೆ ನಿನಗೆ ತಂದಿಟ್ಟ ಈ ಕಷ್ಟವನ್ನು ತಪ್ಪಿಸುವುದಕ್ಕೆ ಕೇವಲಮನುಷ್ಯಮಾತ್ರರಿಂದ ಸಾಧ್ಯವೆ?ಬ್ರಹ್ಮಚರ್ಯವ್ರತಗಳನ್ನು ಸಲಿಸಿ,ವೇದಾಧ್ಯಯನಗಳನ್ನು ಮಾಡಿ, ದಯಾಳುವೆನಿಸಿಕೊಂಡು, ಬಹಳ ಋಜುಸ್ವಭಾವವುಳ್ಳವನಾದ ನಿನ್ನಂತವನಿಗೇ ಈ ಮಹಾವ್ಯಸನವು ಬಂದಮೇಲೆ, ಮನುಷ್ಯನು ಎಷ್ಟು ವ್ರತಗಳನ್ನು ನಡೆಸಿದರೇನು ? ಆತನಲ್ಲಿ ಎಷ್ಟು ಗುಣಗಳಿದ್ದರೇನು ? ಆತನಿಗೆ ಎಷ್ಟುಮಟ್ಟಿಗೆ ಪರಲೋಕಭೀತಿಯಿದ್ದರೇನು ? ಯಾವುದೊಂದರಲ್ಲಿಯೂ ಫಲವಿಲ್ಲವೆಂದೇ ನನಗೆ ತೋರಿರುವುದು. ಎಲೈ ಮಹಾವೀರನೆ ! ನಿನ್ನ ಅಗಲಿಕೆಯಿಂದ ನಾವೆಲ್ಲರೂ ವ್ಯಸನದಲ್ಲಿ ಮುಳುಗಬೇಕಾಯಿತೇಹೊರತು, ಇದರಿಂದ ನಿನಗೆ

ಯಾವುದೊಂದು ಹಾನಿಯೂ ಇರದು. ನೀನು ಸೀತಾಲಕ್ಷ್ಮಣರೊಡನೆ ಕಾಡಿನ ಲ್ಲಿದ್ದರೂ, ಮೂರುಲೋಕವನ್ನೂ ವಶಮಾಡಿಕೊಳ್ಳತಕ್ಕ ಸತ್ಕೀರ್ತಿಯನ್ನು ಪಡೆದು ಮಹಾವಿಷ್ಣುವಿನಂತೆ ಬೆಳಗುವೆ ! ಸರ್ವೋತ್ತಮವಾದ ಸದ್ಗತಿಗೆ ಪಾತ್ರನಾಗುವೆ. ಮುಖ್ಯವಾಗಿ ನಿನ್ನಿಂದಗಲಿ ನಾವು ಕೆಟ್ಟೆವು. ನಮ್ಮ ನ್ನು ವಂಚಿಸಿದವಳು ಕೈಕೇಯಿಯುಮಾತ್ರವೇ ಅಲ್ಲ. ನೀನೂ ಒಂದುವಿಧ ದಲ್ಲಿ ನಮ್ಮನ್ನು ವಂಚಿಸಿದಂತೆಯೇ ಎಣಿಸಬೇಕಾಗಿದೆ. ಅಯ್ಯೋ ! ಇನ್ನು ನಮ್ಮ ಗತಿಯೇನು! ಮಹಾಪಾಪಿನಿಯಾದ ಆ ಕೈಕೇಯಿಯ ಕೈಕೆಳಗೆ ಸಿಕ್ಕಿ ಕೊಂಡು ದುಃಖದಿಂದ ಜೀವಿಸಬೇಕಾಗಿ ಬಂತಲ್ಲವೆ ? " ಎಂದು ಹೇಳುತ್ತಾ, ತನಗೆ ಪ್ರಾಣಸಮನಾದ ರಾಮನು ತನ್ನನ್ನು ಬಿಟ್ಟು ದೂರದೇಶಕ್ಕೆ ಹೋ ಗುವ ಪ್ರಯತ್ನ ದಲ್ಲಿರುವುದನ್ನು ನೋಡಿ, ದುಃಖವನ್ನು ತಡೆಯಲಾರದೆ,ಬಹ ಳಹೊತ್ತಿನವರೆಗೆ ಗಟ್ಟಿಯಾಗಿ ಅಳುತಿದ್ದನು. ಹೀಗೆ ಬಹುಕಾಲದವರೆಗೆ ಕ ಣ್ಣೀರನ್ನು ಸುರಿಸುತಿದ್ದುದರಿಂದ, ಅಶುಚಿಯಾಗಿದ್ದ ಸುಮಂತ್ರನು,ಆಚಮ ನವನ್ನು ಮಾಡಿ ಶುದ್ಧನಾಗಿ ಬಂದಮೇಲೆ, ಆತನನ್ನು ನೋಡಿ ರಾಮನು ಬಾರಿಬಾರಿಗೂ ಸಮಾಧಾನವಾಕ್ಯಗಳನ್ನು ಹೇಳುತ್ತಾ, "ಎಲೈ ಸುಮಂ ತ್ರನೆ ! ಇಕ್ಷ್ವಾಕುವಂಶದವರಿಗೆ ನಿನ್ನಂತೆ ಪ್ರಿಯಮಿತ್ರನಾದವನೊಬ್ಬನೂ ದೊರೆಯಲಾರನು. ಆದರಿಂದ ದಶರಥನು ನನಗಾಗಿ ವ್ಯಸನದಿಂದ ಕೊರಗ ದಂತೆ ಮಾಡಬೇಕಾದುದು ನಿನ್ನ ಕೃತ್ಯವು. ಮೊದಲೇ ಆತನು ದುಃಖದಿಂದ ಧೈರ್ಯಗೆಟ್ಟಿರುವನು. ಇದರಮೇಲೆ ಬಹಳ ವೃದ್ಧವಯಸ್ಸುಳ್ಳವನು. ಒಂದು ಕಡೆಯಲ್ಲಿ ಕಾಮಪಾಶವೂ ಆತನನ್ನು ಸೆಳೆಯುತ್ತಿರುವುದು. ಹೀಗೆ ನಾನಾವಿ ಧದಲ್ಲಿಯೂ ಆತನ ದೇಹವೂ, ಮನಸ್ಸೂ ಕದಲಿ ಹೋಗಿರುವುದು. ಆದುದ ರಿಂದ ನೀನು ಯಾವವಿಧದಲ್ಲಿಯೂ ಆತನ ಮನಸ್ಸನ್ನು ನೋಯಿಸದೆ ಅವನ ಕೋರಿಕೆಗಳನ್ನು ಆಗಾಗಲೇ ನಡೆಸುತ್ತಿರಬೇಕು. ಮತ್ತು ಆತನು ಕೈಕೇ ಯಿಯ ಮನಸ್ತೃಪ್ತಿಗಾಗಿ ಯಾವಯಾವ ಕಾರ್ಯಗಳನ್ನು ನಿಯಮಿಸುವ ನೋ, ಅದೆಲ್ಲವನ್ನೂ ನೀನು ಸ್ವಲ್ಪವೂ ಹಿಂಜರಿಯದೆ ನಡೆಸುತ್ತಿರಬೇಕು. ರಾಜರು ಕಾಮದಿಂದಲೋ, ಅಥವಾ ಕ್ರೋಧದಿಂದಲೋ, ಆಗಾಗ ಹಿಂ ದೊಂದುಕಾರ್ಯಗಳನ್ನು ನಿಯಮಿಸುವುದುಂಟು. ಅವರ ಕೋರಿಕೆಗಳಿಗೆ

ಭಂಗವನ್ನುಂಟುಮಾಡದೆ ಅವರ ಮನೋಧರ್ಮವನ್ನನುಸರಿಸಿ ನಡೆಯಬೇಕಾದುದೇ ಆಶ್ರಿತರ ಧರ್ಮವು. ರಾಜ್ಯಾಧಿಕಾರವೆಂಬುದರಲ್ಲಿರತಕ್ಕ ಸೌಖ್ಯವು ಇದೊಂದೇಹೊರತು ಬೇರೊಂದೂ ಇಲ್ಲ. ಈ ಆಶೋತ್ತರದಿಂದಲೇ ಅರಸರು ರಾಜ್ಯಭರಣದಲ್ಲಿರುವ ಇತರಕಷ್ಟಗಳನ್ನೂ ಲಕ್ಷ್ಯಕ್ಕೆ ತಾರದೆ ರಾಜ್ಯವನ್ನು ಪಾಲಿಸುತ್ತಿರುವರು. ಎಲೈ ಸುಮಂತ್ರನೆ! ಮುಖ್ಯವಾಗಿ ನಮ್ಮ ಮಹಾರಾಜನು ಬೇಸರಪಡದೆಯೂ,ದುಃಖದಿಂದ ಕೊರಗದೆಯೂ ಇರುವಂತೆ ನೋಡಿಕೊಳ್ಳುವನಾಗು! ನನ್ನ ತಂದೆಯು ಇದುವರೆಗೆ ದುಃಖವೆಂಬುದನ್ನೇ ಕಂಡವನಲ್ಲ. ಬಹಳವೃದ್ಧನು. ಲೋಕಗಳಿಗೆಲ್ಲಾ ಪೂಜ್ಯನು. ಮತ್ತು ಜಿತೇಂದ್ರಿಯನು.ಅಂತವನಿಗೆ ಈಗ ಇದೊಂದು ಮಹಾವ್ಯಸನವು ಪ್ರಾಪ್ತವಾಯಿತು.ಮಾಡಬೇಕಾದುದೇನು! ನೀನು ಈಗಲೇ ಹೋಗಿ ಆತನಿಗೆ ನಮಸ್ಕರಿಸಿ, ಈ ನನ್ನ ಮಾತುಗಳನ್ನು ಆತನಲ್ಲಿ ವಿಜ್ಞಾಪಿಸು. "ಅಯೋಧ್ಯೆಯನ್ನು ಬಿಟ್ಟುಬಂದು ಕಾಡಿನಲ್ಲಿರಬೇಕಾದುದಕ್ಕಾಗಿ ನಾನಾಗಲಿ, ಸೀತೆಯಾಗಲಿ, ಅಥವಾ ಲಕ್ಷ್ಮಣನಾಗಲಿ ಸ್ವಲ್ಪವೂ ದುಖಿಸುವವರಲ್ಲ. ಈ ಹದಿನಾಲ್ಕು ವರ್ಷಗಳು ಕಳೆದಕೂಡಲೆ,ನಾವು ಮೂವರೂ ಹಿಂತಿರುಗಿ ಬಂದು ನಿನ್ನನ್ನು ಆದರಿಸುವೆವು. ನೀನು ಶೀಘ್ರದಲ್ಲಿಯೇ ನಮ್ಮನ್ನು ನೋಡಬಹುದು. ಇದಕ್ಕಾಗಿ ಸ್ವಲ್ಪವೂ ದುಃಖಿಸಬೇಕಾದುದಿಲ್ಲವು" ಎಂದು ನಾನು ಹೇಳಿದುದಾಗಿ ರಾಜನಿಗೆ ತಿಳಿಸು. ಮತ್ತು ತನ್ನ ತಾಯಿಯಾದ ಕೌಸಲ್ಯೆಯನ್ನೂ,ಇತರರಾಜಪತ್ನಿಯರನ್ನೂ ಹೀಗೆಯೇ ಸಮಾಧಾನಪಡಿಸು! ಕೈಕೇಯಿಯೂ ಈಗ ನಮ್ಮನ್ನು ಕುರಿತು ದುಖಿಸಬಹುದು.ಅವಳಿಗೂ ಸಮಾಧಾನವನ್ನು ಹೇಳು!ನನ್ನ ತಾಯಿಯಾದ ಕೌಸಲ್ಯೆಗೆ ನಮ್ಮೆಲ್ಲರ ಆರೋಗ್ಯವನ್ನೂ ತಿಳಿಸು. ಆಕೆಗೆ ನಾನು* ಪಾದಪ್ರಣಾಮ

---

* ಇಲ್ಲಿ ರಾಮನು ತಾನೊಬ್ಬನೇ ಕೌಸಲ್ಯೆಗೆಮಾತ್ರ ಪಾದಪ್ರಣಾಮವನ್ನು ಮಾಡಿದುದಾಗಿ ಹೇಳಿರುವನೆಂದು ಗ್ರಹಿಸಬೇಕು. "ಆಚಾರ್ಯವದಾಚಾರ್ಯದಾರೇ ವೃತ್ತಿ: ಪಾದಸಂವಾಹನವರ್ಜಂ" ಆಚಾರ್ಯನಲ್ಲಿ ಹೇಗೋ ಹಾಗೆಯೇ ಆಚಾರ್ಯಪತಿಯರಲ್ಲಿಯೂ ವರ್ತಿಸಬೇಕಾಗಿದ್ದರೂ, ಅವರಿಗೆ ಪಾದಸಂವಾಹವನ್ನು ಮಾತ್ರ ಮಾಡಬಾರದು "ಎಂಬ ವಿಧಿಯಿರುವುದರಿಂದ, ಈ ವಿಧಿಯು ಬಲತಾಯಿಯರಲ್ಲಿಯೂ ಅನ್ವಯಿಸುವುದು. ಆದಕಾರಣದಿಂದಲೇ ಬಲತಾಯಿಯರಿಗೆ ಪಾದಪ್ರಣಾಮವನ್ನು ಹೇಳಲಿಲ್ಲವೆಂದು ಗ್ರಹಿಸಬೇಕು.

ಮಾಡಿದೆನೆಂದು ಹೇಳು. ಭರತನನ್ನು ಆತನ ಮಾವನ ಮನೆಯಿಂದ ಈಗಲೇ ಕರೆತರಿಸುವಂತೆ ನಮ್ಮ ತಂದೆಗೆ ತಿಳಿಸು. ಆತನು ಬಂದೊಡನೆಯೇ ಅವನಿಗೆ ಪಟ್ಟಾಭಿಷೇಕವನ್ನೂ ನಡೆಸಿಬಿಡುವಹಾಗೆ ಮಾಡು ! “ಪಟ್ಟಾಭಿಷಿಕ್ತನಾದ ಆ ಭರತನನ್ನು ಆಗಾಗ ಆಲಿಂಗಿಸಿಕೊಂಡು ಸಂತೋಷಿಸುತಿದ್ದರೆ, ನಮ್ಮ ವಿಷಯವಾಗಿ ನಿನಗೆ ಅಷ್ಟಾಗಿ ದುಃಖವುಂಟಾಗ”ದೆಂದು ನಾನು ಹೇಳಿದು ದಾಗಿಯೂ ದಶರಥನಿಗೆ ತಿಳಿಸು. “ತಂದೆಯಾದ ದಶರಥನಲ್ಲಿ ವರ್ತಿಸುತ್ತಿರು ವ ಹಾಗೆಯೇ ಎಲ್ಲಾ ಮಾತೆಯರಲ್ಲಿಯೂ ಪ್ರೀತಿಯಿಂದ ನಡೆದುಕೊಳ್ಳಬೇ ಕೆಂಧು ನಾನು ಕೇಳಿಕೊಂಡುದಾಗಿ ಭರತನಿಗೆ ತಿಳಿಸು. ಹೆತ್ತತಾಯಿ ಯಾದ ಕೈಕೇಯಿಯಲ್ಲಿ ಆತನಿಗೆ ಸಹಜವಾಗಿಯೇ ಪ್ರೇಮವಿರುವುದು ಅದ ರಂತೆ ಶತ್ರುಘ್ನನಮೇಲಿನ ಅಭಿಮಾನದಿಂದ ಸುಮಿತ್ರೆಯಲ್ಲಿಯೂ ಆ ತನು ವಿಶೇಷಪ್ರೇಮವನ್ನು ತೋರಿಸಬಹುದು. ಹಾಗೆಯೇ ನನ್ನ ತಾಯಿಯಾ ದ ಕೌಸಲ್ಯೆಯನ್ನೂ ತಕ್ಕ ರೀತಿಯಲ್ಲಿ ನಿಷ್ಪಕ್ಷಪಾತವಾಗಿ ಆದರಿಸುತ್ತಿರಬೇ ಕೆಂದು ನಾನು ಕೇಳಿಕೊಂಡುದಾಗಿಯೂ ಭರತನಿಗೆ ಹೇಳು. ಭರತನಿಗೆ ನನ್ನ ಮಾತಿನಿಂದ ಹೇಳಬೇಕಾದ ಮುಖ್ಯವಿಷಯವು ಮತ್ತೊಂದುಂಟು “ ಎಲೆವ ತ್ಸನೆ!ತಂಡೆಯ ಪ್ರೀತ್ಯರ್ಥವಾಗಿಯೇ ನೀನು ಯೌವರಾಜ್ಯವನ್ನು ಕೈಕೊಂಡಿರ ವೆ! ಇದರಿಂದ ನೀನು ಇಹಪರಸೌಖ್ಯಗಳೆರಡನ್ನೂ ಸಂಪಾದಿಸಬಹುದಲ್ಲದೆ, ಅತ್ತಲಾಗಿ ರಾಷ್ಟ್ರದ ಪ್ರಜೆಗಳಿಗೂ, ಇತ್ತಲಾಗಿ ರಾಜನಿಗೂ ಸೌಖ್ಯವ ನ್ನುಂಟುಮಾಡಬಹುದು. ಆದುದರಿಂದ ನಿನಗೆ ಈಗ ಲಭಿಸಿರುವ ರಾಜ್ಯಾಧಿ ಕಾರವು ಆ ವಿಧವಾದ ಸತ್ಕಾರ್ಯಗಳಿಂದ ಸಾರ್ಥಕ್ಯವನ್ನು ಹೊಂದುವಂತೆ ಜಾಗರೂಕನಾಗಿರಬೇಕು” ಎಂದು ನನ್ನ ಮಾತಿನಿಂದ ತಿಳಿಸು” ಎಂದನು. ಹೀ ಗೆ ಹೇಳಿ ರಾಮನು ಸುಮಂತ್ರನನ್ನು ಅಯೋಧ್ಯೆಗೆ ಹಿಂತಿರುಗಿ ಹೋಗೆಂ ದು ತ್ವರೆಪಡಿಸುತ್ತಿರಲು, ಸುಮಂತ್ರನು ದುಃಖದಿಂದ ಕುಗ್ಗಿದವನಾಗಿ, ರಾಮನನ್ನು ಕುರಿತು, “ಎಲೈ ರಾಮನೆ! ನಾನೂ ನಿನ್ನಲ್ಲಿ ನಿಷ್ಕಪಟವಾದಪ್ರೀ ತಿಯಿಂದ ಒಂದೆರಡುಮಾತುಗಳನ್ನು ಹೇಳಬೇಕೆಂದಿರುವೆನು. ಅದನ್ನು ಲಾ ಲಿಸಬೇಕು. ಇವುಗಳನ್ನು ಉಪಚಾರವಾಕ್ಯಗಳೆಂದೆಣಿಸಬೇಡ! ನಿನ್ನಲ್ಲಿ ನನಗಿ ರುವ ಪ್ರೇಮದಿಂದುಂಟಾದ ಸಲಿಗೆಯಿಂದ,ನಾನು ಈಗ ಸೇವಾಧರ್ಮವನ್ನೂ ಮೀರಿ, ನಿರ್ಭಯವಾಗಿ ಈ ಮಾತುಗಳನ್ನಾಡಬೇಕಾಗಿಬಂದಿರುವುದು ! ಈ

ವಿಷಯದಲ್ಲಿ ನೀನು ನನ್ನನ್ನು ಮನ್ನಿಸಬೇಕೆಂದು ಕೇಳಿಕೊಳ್ಳುವೆನು. ನಿನ್ನನ್ನು ಬಿಟ್ಟು ನಾನುಹೇಗೆ ಹೋಗಲಿ?ಅಥವಾ ಇಲ್ಲಿಂದ ಬಿಟ್ಟು ಹೊರಟರೂ, ಪುತ್ರಶೋಕದಿಂದ ಕೊರಗುವವರಂತೆ ನೀನಿಲ್ಲದುದರಿಂದ ಕಾಂತಿಹೀನವಾದ ಆ ಅಯೋಧ್ಯಾನಗರವನ್ನು ನಾನು ಹೇಗೆ ಪ್ರವೇಶಿಸಲಿ" ಮೊದಲು ನಿನ್ನೊಡಗೂಡಿದ್ದ ಈ ರಥವನ್ನು ಅಯೋಧ್ಯಾವಾಸಿಗಳೆಲ್ಲರೂ ನೋಡಿದ್ದರಲ್ಲವೆ? ಇದೇ ರಥವು ಈಗ ನೀನಿಲ್ಲದೆ ಹಿಂತಿರುಗಿ ಬರುತ್ತಿದ್ದರೆ ಅದನ್ನು ನೋಡಿ ಯಾರುತಾನೇ ಸಹಿಸುವರು? ರಾಮಶೂನ್ಯವಾದ ಈ ರಥವನ್ನು ನಾನು ನಡೆಸಿಕೊಂಡುಹೋದರೆ, ಅದನ್ನು ನೋಡಿ ಆ ಅಯೋಧ್ಯಾಪಟ್ಟಣವೇ ವ್ಯಸನದಿಂದ ಎದೆಯೊಡೆದು ಪ್ರಾಣಬಿಡುವುದೆಂದು ಊಹಿಸಬೇಕಾಗಿದೆ. ರಥಿಕನಾದ ನೀನಿಲ್ಲದೆ, ಸಾರಥಿಯಾದ ನಾನುಮಾತ್ರ ಕುಳಿತು, ಶೂನ್ಯವಾದ ಈ ರಥವನ್ನು ನಡೆಸಿಕೊಂಡುಹೋದರೆ, ಪುರವಾಸಿಗಳು ಯಾವ ಅವಸ್ಥೆಯನ್ನು ಹೊಂದಬಹುದೋ ನೀನೇ ಆಲೋಚಿಸು! ಮುಖ್ಯವೀರನು ಯುದ್ಧದಲ್ಲಿ ಹತನಾದಮೇಲೆ, ಸೈನಿಕರು ದಿಕ್ಕುಗೆಟ್ಟ ತಮ್ಮ ಸೈನ್ಯವನ್ನು ನೋಡಿ ದುಃಖಿಸುವಂತೆ, ಆ ಅಯೋಧ್ಯಾನಗರವೆಲ್ಲವೂ ದೈನ್ಯದಿಂದ ಕೊರಗುವುದಲ್ಲವೆ? ಈಗ ಅಯೋಧ್ಯಾವಾಸಿಗಳೆಲ್ಲರೂ ನಿನ್ನನ್ನು ಎಡೆಬಿಡದೆ ಮನಸ್ಸಿನಲ್ಲಿ ನೆನೆಸಿಕೊಳ್ಳುತ್ತಿರುವುದರಿಂದ, ನೀನು ದೂರದಲ್ಲಿದ್ದರೂ ಕಣ್ಣೆದಿರಿಗಿರುವಂತೆಯೇ ಭಾವಿಸಿ, ಅನ್ನಾಹಾರಗಳೆಲ್ಲವನ್ನೂ ಬಿಟ್ಟುಕೊರಗುತ್ತಿರುವರೆಂಬುದು ನಿಜವು. ಅದೆಲ್ಲವೂ ಹಾಗಿರಲಿ! ನೀನು ವನವಾಸಕ್ಕಾಗಿ ಅಯೋಧ್ಯೆಯನ್ನು ಬಿಟ್ಟು ಹೊರಟಾಗ, ಅಲ್ಲಿನ ಪ್ರಜೆಗಳು ನಿನ್ನನ್ನು ಬಿಟ್ಟಿರಲಾರದೆ ಎಷ್ಟು ಸಂಕಟಪಟ್ಟು ಕೊರಗುತಿದ್ದರೆಂಬುದನ್ನು ನೀನೇ ನಿನ್ನ ಕಣ್ಣಿನಿಂದ ನೋಡಿರುವೆಯಲ್ಲವೆ! ಆಗ ಅವರ ಗೋಳಾಟದ ಧ್ವನಿಯನ್ನೂ ನೀನು ಕೇಳಿರುವೆ! ಈಗ ನಾನು ಬರೀರಥವನ್ನು ಪಟ್ಟಣಕ್ಕೆ ನಡೆಸಿಕೊಂಡುಹೋದರೆ, ಇದನ್ನು ನೋಡಿ ಅವರು ಆಗಿಗಿಂತಲೂ ನೂರುಪಾಲು ಹೆಚ್ಚಾಗಿ ರೋದನವನ್ನು ಮಾಡುವರು. ನಾನು ಇಲ್ಲಿಂದ ಹೋಗಿ ನಿನ್ನ ತಾಯಿಗೆ ಹೇಗೆ ಮುಖವನ್ನು ತೋರಿಸಿ ಮಾತಾಡಲಿ? "ನಿನ್ನ ಮಗನನ್ನು ಮಾವನ ಮನೆಯಲ್ಲಿ ಬಿಟ್ಟುಬಂದಿರುವೆನು.ನೀನು ಸಂಕಟಪಡಬೇಡ!" ಎಂದು ಹೇಳಲೆ? ನಾನು ಇಂತಹ ಅಸತ್ಯವಾಕ್ಯವನ್ನು ಎಂದೂ ಹೇಳಿದವನಲ್ಲ. ಅಥವಾ ಸತ್ಯವನ್ನೇ ಹೇಳಿ

ಬಿಡುವೆನೆಂದರೆ, ಈ ಅಪ್ರಿಯವಾಕ್ಯವನ್ನು ಹೇಳುವುದು ಹೇಗೆ ? ಸತ್ಯವಾಗಿದ್ದಮಾತ್ರಕ್ಕೆ ಅಪ್ರಿಯವನ್ನು ನುಡಿಯಬಹುದೆ? ಆಕೆಯ ಅಪಮೃತ್ಯುವಿಗೆ ನಾನೇ ಕಾರಣನಾಗುವೆನಲ್ಲವೆ? ಅದೂ ಹೋಗಲಿ ! ನಿನ್ನನ್ನೂ, ನಿನ್ನ ಪ್ರಿಯಪತ್ನಿಯಾದ ಸೀತೆಯನ್ನೂ, ನಿನ್ನ ಮೋಹದ ತಮ್ಮನಾದ ಲಕ್ಷ್ಮಣನನ್ನೂ ರಥದಮೇಲೇರಿಸಿ ಇಲ್ಲಿಗೆ ಕರೆತರುವಾಗ, ಈ ರಥಾಶ್ವಗಳು ನಾನು ಹೇಳಿದಂತೆ ಕೇಳುತಿದ್ದುದೇನೋ ನಿಜವು. ನಿಮ್ಮನ್ನು ಇಲ್ಲಿ ಬಿಟ್ಟು ಈ ಶೂನ್ಯರಥವನ್ನು ಹಿಂತಿರುಗಿಸಿದರೆ, ಈ ಕುದುರೆಗಳಾದರೂ ನನ್ನ ವಶದಲ್ಲಿರುವುವೆ? ಎಂದಿಗೂ ನಾನು ಹೇಳಿದಂತೆ ಕೇಳಲಾರವು. ಇದು ನಿಜವು! ನೀನಿಲ್ಲದ ರಥವನ್ನು ಈಕುದುರೆಗಳು ಎಂದಿಗೂ ಎಳೆಯಲೊಲ್ಲವು! ಹೇಗೂ ನಿನ್ನನ್ನು ಬಿಟ್ಟು ನಾನು ಅಯೋಧ್ಯೆಗೆ ಹಿಂತಿರುಗಿ ಹೋಗಲಾರೆನು. ಆದುದರಿಂದ ನಿನ್ನೊಡನೆ ನಾನೂ ಕಾಡಿಗೆ ಬಂದುಬಿಡುವೆನು. ನನಗೆ ಅನುಜ್ಞೆಯನ್ನು ಕೊಡು. ನಾನು ಇಷ್ಟುವಿಧವಾಗಿ ಕೇಳಿಕೊಳ್ಳುತಿದ್ದರೂ, ನೀನು ನನ್ನನ್ನು ಬಿಟ್ಟುಹೋಗುವುದೇ ನಿಜವಾದರೆ, ನೀನು ಅತ್ತಲಾಗಿ ತಿರುಗಿದೊಡನೆಯೇ, ನಾನು ಈ ರಥದೊಡನೆ ಅಗ್ನಿಯಲ್ಲಿ ಬಿದ್ದು ಪ್ರಾಣಬಿಡುವೆನು. ಎಲೈ ರಾಮನೆ ! ನನ್ನಿಂದ ನಿನಗೆ ಅನೇಕವಿಧದಲ್ಲಿ ಸಹಾಯಗಳುಂಟು. ಕಾಡಿನಲ್ಲಿ ನಿನ್ನ ತಪಸ್ಸಿಗೆ ವಿಘ್ನವನ್ನುಂಟುಮಾಡುವ ಕ್ರೂರಜಂತುಗಳೆಲ್ಲವನ್ನೂ ನಾನು ರಥದಲ್ಲಿ ಕುಳಿತು ಕೊಲ್ಲುತ್ತಾಬರುವೆನು. ನೀನು ಪಟ್ಟಾಭಿಷಿಕ್ತನಾದಮೇಲೆ, ನಿನ್ನ ರಥವನ್ನು

---

* ಇಲ್ಲಿ "ತ್ವತ್ಕೃತೇನ ಮಯಾ ಲಬ್ಧಂ ರಥಚರ್ಯಾಕೃತಂ ಸುಖಂ । ಆಶಂಸೇ ತ್ವತ್ಕೃತೇನಾಹಂ ವನವಾಸಕೃತಂ ಸುಖಂ ॥" ಎಂದು ಮೂಲವು. ಇದಕ್ಕೆ "ನಿನ್ನನುಗ್ರಹದಿಂದ ನನಗೆ ಈಗ ನಿನ್ನ ರಥವನ್ನು ನಡೆಸುವುದರಿಂದುಂಟಾಗುವ ಸುಖವು ಲಭಿಸಿತು. ಹಾಗೆಯೇ ವನವಾಸದಲ್ಲಿಯೂ ನಿನ್ನೊಡನಿದ್ದು ನಿನ್ನ ಉಪಚಾರವನ್ನು ನಡೆಸುವುದರಿಂದ ಲಭಿಸಬಹುದಾದ ಸುಖವನ್ನೂ ಅಪೇಕ್ಷಿಸುವೆನು." ಎಂದು ಅರ್ಥಾಂತರವು. ಇದರಿಂದ "ನಾನು ಮಂತ್ರಿಪ್ರಧಾನನಾಗಿದ್ದರೂ, ನಿನಗೆ ರಥವನ್ನು ನಡೆಸತಕ್ಕ ಮಹಾಭಾಗ್ಯವು ಲಭಿಸುವುದೆಂಬುದಕ್ಕಾಗಿಯೇ, ಸಾರಥಿಕೃತ್ಯವು ನಿಂದ್ಯವಾಗಿದ್ದರೂ ನಾನು ಅದನ್ನೇ ಅಂಗೀಕರಿಸಿದೆನು. ಹೀಗೆಯೇ ವನವಾಸದಲ್ಲಿಯೂ ನಿನ್ನ ಸೇವೆಯಿಂದುಂಟಾದ ಸುಖವನ್ನನುಭವಿಸಬೇಕೆಂದು ಕೋರುವೆನು." ಎಂದು ಹೇಳಿದುದಾಗಿ ಮಹೇಶ್ವರತೀರ್ಥವ್ಯಾಖ್ಯಾನವು.

ನಡೆಸತಕ್ಕ ಸುಖವಂತೂ ಭಾಗ್ಯಹೀನನಾದ ನನಗೆ ಲಭಿಸದೆ ಹೋಯಿತು. ಈಗ ನೀನು ಅನುಗ್ರಹಿಸಿದರೆ ವನವಾಸದಲ್ಲಿಯಾದರೂ ನಿನ್ನ ಸಹವಾಸ ಸೌಖ್ಯವನ್ನನುಭವಿಸಬೇಕೆಂದಪೇಕ್ಷಿಸುವೆನು. ಅದನ್ನಾದರೂ ಅನುಗ್ರಹಿಸು ! ಕಾಡಿನಲ್ಲಿಯಾದರೂ ನಿನ್ನ ಪರಿಚರ್ಯೆಯನ್ನು ಮಾಡುತ್ತಿರುವೆನು ! ನನ್ನಲ್ಲಿ ಪ್ರಸನ್ನನಾಗಿ ನನ್ನ ಈ ಕೋರಿಕೆಯನ್ನು ಈಡೇರಿಸಿಕೊಡು ! ಎಲೈ ರಾಮನೆ! ಈಗ ನೀನು ನನ್ನನ್ನು ಕುರಿತು "ನನ್ನ ಸಮೀಪದಲ್ಲಿರು." ಎಂಬುದೊಂದುಮಾತನ್ನು ಹೇಳಿ ಬಿಟ್ಟರೆ ಸಾಕು! ಪ್ರೀತಿಯುಕ್ತವಾದ ನಿನ್ನ ಆಮಾತಿನಿಂದಲೇ ನಾನು ಎಷ್ಟೋ ಆನಂದಿಸುವೆನು. ಎಲೈ ವೀರನೆ! ಕಾಡಿನಲ್ಲಿ ನಿನಗೆ ಪರಿಚರ್ಯೆಯನ್ನು ಮಾಡಿ ಈಕುದುರೆಗಳೂ ಉತ್ತಮಗತಿಯನ್ನು ಪಡೆಯುವುವು. ನಾನೂ ಕಾಡಿನಲ್ಲಿದ್ದು ನಿನ್ನ ಶುಶ್ರೂಷೆಯನ್ನು ಶಿರಸಾವಹಿಸಿ ಮಾಡುತ್ತಿರುವೆನು. ಇದನ್ನು ಬಿಟ್ಟು ಅಯೋಧ್ಯೆಯನ್ನಾಗಲಿ, ಸ್ವರ್ಗಲೋಕವನ್ನಾಗಲಿ ಅಪೇಕ್ಷಿಸುವವನಲ್ಲ. ಪಾಪಕರ್ಮವುಳ್ಳವನು ಸ್ವರ್ಗಲೋಕವನ್ನು ಹೇಗೆ ಪ್ರವೇಶಿಸಲಾರನೋ, ಹಾಗೆ ನಿನ್ನನ್ನು ಬಿಟ್ಟು ನಾನೂ ಈಗ ಅಯೋಧ್ಯೆಯನ್ನು ಪ್ರವೇಶಿಸಲಾರೆನು. ನಿನ್ನ ವನವಾಸವು ಮುಗಿದಮೇಲೆ ಈ ರಥದಿಂದಲೇ ನಿನ್ನನ್ನು ಪಟ್ಟಣಕ್ಕೆ ತಂದು ಬಿಡಬೇಕೆಂಬುದು ನನ್ನ ಮುಖ್ಯವಾದ ಉದ್ದೇಶವು. ನಾನು ನಿನ್ನೊಡನೆ ಕಾಡಿನಲ್ಲಿದ್ದರೆ ಈ ಹದಿನಾಲ್ಕುವರ್ಷಗಳು ನನಗೆ ನಿಮಿಷಮಾತ್ರದಂತೆ ಕಳೆದುಹೋಗುವುವು. ನಿನ್ನನ್ನು ಬಿಟ್ಟಿದ್ದರೆ ಇದೇ ನನಗೆ ನೂರಾರುವರ್ಷಗಳಂತಾಗುವುದು. ಎಲೈ ರಾಮನೆ ! ನೀನು ಭೃತ್ಯರಲ್ಲಿ ಪರಮವಾತ್ಸಲ್ಯವುಳ್ಳವನಲ್ಲವೆ ? ನಿನಗೆ ನಾನು ಭೃತ್ಯನೆಂಬುದನ್ನು ತಿಳಿಯೆಯಾ ? ನಿನ್ನಲ್ಲಿ ನಾನು ಮನಃಪೂರ್ವಕವಾದ ಭಕ್ತಿಯುಳ್ಳವನೆಂಬುದನ್ನೂ ನೀನು ಬಲ್ಲೆ! ಹೀಗೆ ಭೃತ್ಯಧರ್ಮವನ್ನು ಮೀರದೆ ನಡೆಯುತ್ತಿರುವ ನಾನು ನನ್ನ ಪ್ರಭುಪುತ್ರನಾದ ನಿನ್ನನ್ನೇ ಅನುಸರಿಸಿ ಬರಬೇಕೆಂದಿರುವಾಗ, ನನ್ನನ್ನು ನೀನು ಬಿಟ್ಟು ಹೋಗುವುದುಚಿತವೆ?" ಎಂದನು. ಹೀಗೆ ಬಹುದೈನ್ಯದಿಂದ ಅನೇಕವಿಧದಲ್ಲಿ ಪ್ರಾರ್ಥಿಸುತ್ತಿರುವ ಸುಮಂತ್ರನನ್ನು ನೋಡಿ ಆಶ್ರಿತವತ್ಸಲನಾದ ರಾಮನು "ಎಲೆ ಸೂತನೆ! ನೀನು ಸ್ವಾಮಿಭಕ್ತಿಯುಳ್ಳವನೆಂಬುದನ್ನು ನಾನು ಚೆನ್ನಾಗಿ ಬಲ್ಲೆನು. ನನ್ನಲ್ಲಿ ನಿನಗೆ ಅಸಾಧಾರಣವಾದ ಪ್ರೀತಿಯಿದೆಯೆಂಬುದರಲ್ಲಿಯೂ ಸಂದೇಹವಿಲ್ಲ. ಆದರೆ ನಿ

ನ್ನನ್ನು ಈಗ ಅಯೋಧ್ಯೆಗೆ ಕಳುಹಿಸುವುದಕ್ಕೆ ಅವಶ್ಯವಾದ ಕಾರಣವುಂಟು. ನೀನು ಈಗ ಪಟ್ಟಣಪ್ರವೇಶವನ್ನು ಮಾಡಿದರೆ, ಕೈಕೇಯಿಗೆ ನಾನು ಕಾಡಿಗೆ ಹೊರಟುಹೋದೆನೆಂದು ಸಂಪೂರ್ಣವಾದ ನಂಬಿಕೆಯುಂಟಾಗುವುದು. ಹಾಗಿಲ್ಲದಿದ್ದರೆ ಅವಳಿಗೆ ಆ ಸಂದೇಹವು ತಪ್ಪುವುದೇ ಇಲ್ಲ. ಅವಳಿಗೆ ಈ ನಂಬಿಕೆಯುಂಟಾಗುವವರೆಗೂ ಅವಳ ಮನಸ್ಸಿಗೆ ನೆಮ್ಮದಿಯಿರುವುದಿಲ್ಲ. ರಾಜನಲ್ಲಿಯೂ ಸುಳ್ಳುಹೇಳಿರುವನೆಂದು ಅವಳಿಗೆ ಸಂದೇಹವುಂಟಾಗುವುದು. ಧಾರ್ಮಿಕನಾದ ಆತನಲ್ಲಿ ಇಲ್ಲದ ಅಪವಾದವನ್ನು ಹೊರಿಸುವಳು. ನೀನು ಇಲ್ಲಿಂದ ಹಿಂತಿರುಗಿ ಹೋದರೆ ಅವಳಿಗೆ ಆ ಸಂದೇಹವೆಲ್ಲವೂ ತಪ್ಪುವುದು. ಆಗ ದಶರಥನನ್ನೂ ಪ್ರೀತಿಯಿಂದ ಆದರಿಸುವಳು. ಆದುದರಿಂದ ನೀನು ಹೋಗಿ ಮೊದಲು ಅವಳಿಗೆ ಈ ವೃತ್ತಾಂತವನ್ನು ತಿಳಿಸುವುದುತ್ತಮವು. ಎಲೈ ಸುಮಂತ್ರನೆ! ನನ್ನ ಬಲತಾಯಿಯಾದ ಕೈಕೇಯಿಯು, ತನ್ನ ಮಗನಾದ ಭರತನಿಂದ ಸುರಕ್ಷಿತವಾಗಿ ಪಾಲಿಸಲ್ಪಡುತ್ತಿರುವ ಸಮೃದ್ಧವಾದ ಈ ರಾಜ್ಯವನ್ನು ನೋಡಿ, ಸಂತೋಷಿಸುತ್ತಿರಬೇಕೆಂಬುದೇ ನನ್ನ ಮುಖ್ಯೋದ್ದೇಶವು. ನೀನು ನನಗೂ, ರಾಜನಿಗೂ ನಿಜವಾಗಿ ಪ್ರಿಯವನ್ನುಂಟುಮಾಡಬೇಕೆಂದಿದ್ದರೆ, ಈ ರಥವನ್ನು ಹಿಂತಿರುಗಿಸಿಕೊಂಡು ಈಗಲೇ ಅಯೋಧ್ಯೆಗೆಹೊರಡು. ಮತ್ತು ನಾನು ನಿನಗೆ ಹೇಳಿರುವ ವಿಷಯಗಳೆಲ್ಲವನ್ನೂ ಅವರವರಿಗೆ ಯಥಾವತ್ತಾಗಿ ತಿಳಿಸು."ಎಂದು ಹೇಳಿ, ಆ ಸುಮಂತ್ರನನ್ನು ಅನೇಕವಿಧದಲ್ಲಿ ಸಮಾಧಾನಪಡಿಸಿದನು. ಆ ಮೇಲೆ ಗುಹನನ್ನು ನೋಡಿ ಯುಕ್ತಾಯುಕ್ತಗಳಾದ ಮಾತುಗಳಿಂದ "ಎಲೆ ಸಖನೆ! ನೀನು ನನ್ನನ್ನು ಇಲ್ಲಿಯೇ ನಿಲ್ಲೆಂದು ಹೇಳುವೆಯಲ್ಲವೆ? ಜನಸಂಚಾರವುಳ್ಳ ಈ ವನಪ್ರದೇಶದಲ್ಲಿ ನಾನು ನಿಂತುಬಿಡುವುದು ಸರಿಯಲ್ಲ. ನಾನು ಆಶ್ರಮಗಳಲ್ಲಿಯೇ ಇದ್ದು ಈ ವನವಾಸಕಾಲವನ್ನು ಕಳೆಯಬೇಕು. ತಂದೆಯಾಜ್ಞೆಯೂ ಹಾಗೆಯೇ ಆಗಿರುವುದು. ಆತನ ಆಜ್ಞೆಯನ್ನನುಸರಿಸಿ ನಡೆಯಬೇಕಾದುದೇ ಯುಕ್ತವಾದುದರಿಂದ, ನಾನು ತಪಸ್ವಿಗಳಿಗೆ ಭೂಷಣವಾದ ವ್ರತವನ್ನು ಕೈಕೊಂಡು,ಜಟಾಧಾರಿಯಾಗಿವನಕ್ಕೆಹೋಗುವೆನು. ಇದರಿಂದತಂದೆಗೂ ಕ್ಷೇಮವುಂಟು,*ಸೀತಾ

---

* ಇಲ್ಲಿ ರಾಮನು ಜಡೆಯನ್ನು ಧರಿಸುವುದು ಸೀತಾಲಕ್ಷ್ಮಣರಿಗೆ ಪ್ರಿಯವಲ್ಲ

ಲಕ್ಷ್ಮಣರಿಗೂ ಇದರಿಂದ ಶ್ರೇಯಸ್ಸುಂಟು. ಆದುದರಿಂದ ಈಗಲೇ ನಾನು ಜಡೆಯನ್ನು ಧರಿಸುವೆನು. ಆಲದ ಹಾಲನ್ನು ತರಿಸು. ಆಮೇಲೆ ಮುಂದೆ ಹೊರಡುವೆನು."ಎಂದನು. ಒಡನೆಯೇ ಗುಹನು ಆ ಹಾಲನ್ನು ತರಿಸಿಡಲು, ಅದರಿಂದ ಮೊದಲು ಲಕ್ಷ್ಮಣನಿಗೆ ಜಡೆಯನ್ನು ಕಲ್ಪಿಸಿ, ಪುರುಷಶ್ರೇಷ್ಠನೆನಿಸಿಕೊಂಡ ರಾಮನೂ ಜಟಾಧಾರಿಯಾದನು.ಹೀಗೆ ಜಡೆಯನ್ನು ಧರಿಸಿ, ನಾರುಮಡಿಯನ್ನುಟ್ಟು ನಿಂತಿದ್ದ ಅಣ್ಣತಮ್ಮಂದಿರಾದ ರಾಮಲಕ್ಷ್ಮಣರಿಬ್ಬರೂ ಇಬ್ಬರು ಋಷಿಕುಮಾರರಂತೆ ಶೋಭಿಸುತಿದ್ದರು. ಹೀಗೆ ರಾಮನು ಲಕ್ಷ್ಮಣನೊಡನೆ*ವೈಖಾನಸವೃತ್ತಿಯನ್ನಂಗೀಕರಿಸಿ, ವ್ರತವನ್ನು ಹಿಡಿದಮೇಲೆ,ಸಮೀಪದಲ್ಲಿದ್ದ ತನ್ನ ಪ್ರಿಯಮಿತ್ರನಾದ ಗುಹನನ್ನು ನೋಡಿ, "ಮಿತ್ರನೆ! ರಾಜ್ಯರಕ್ಷಣೆಯೆಂಬುದು ಸುಲಭವಲ್ಲ. ಆದುದರಿಂದ ನೀನು ಬಹುಜಾಗರೂಕನಾಗಿದ್ದು, ನಿನ್ನ ಚತುರಂಗಸೈನ್ಯಗಳನ್ನೂ, ನಿನ್ನ ಬೊಕ್ಕಸಬಂಡಾರಗಳನ್ನೂ, ಕೋಟೆ ಕೊತ್ತಲಗಳನ್ನೂ, ರಾಷ್ಟ್ರಗಳನ್ನೂ ನೋಡಿಕೊಳುತ್ತಿರಬೇಕು" ಎಂದುಹೇಳಿ, ಆಮೇಲೆ ಆತನ ಅನುಮತಿಯನ್ನು ಪಡೆದು, ಸೀತಾಲಕ್ಷ್ಮಣರೊಡನೆ ಮುಂದಕ್ಕೆ ಹೊರಟನು. ಗಂಗಾತೀರಕ್ಕೆ ಹೋಗಿ ಅಲ್ಲಿ ಲಕ್ಷ್ಮಣನನ್ನು ನೋ

---

ದಿದ್ದರೂ, ಹಿತವಾದುದೆಂದು ಗ್ರಹಿಸಬೇಕು. ಹೀಗೆ ರಾಮನು ಜಟಾಧಾರಿಯಾಗುವುದರಿಂದ ಸಹಧರ್ಮಚಾರಿಣಿಯಾದ ಸೀತೆಯೂ, ಅಣ್ಣನಲ್ಲಿ ಭಕ್ತಿಯುಳ್ಳ ಲಕ್ಷ್ಮಣನೂ ಅವನನ್ನೇ ಅನುಸರಿಸಿರಬೇಕಾಗಿಬರುವುದರಿಂದ, ಅವರಿಬ್ಬರಿಗೂ ಆ ಧರ್ಮವು ಸಿದ್ಧಿಸುವುದಲ್ಲವೆ? ಆದುದರಿಂದ ಇದು ಅವರಿಗೆ ಹಿತಕರವಾದುದೆಂಬುದೇ ಸಿದ್ಧವು.

* ಇಲ್ಲಿ ರಾಮನು ವಾನಪ್ರಸ್ಥಧರ್ಮಗಳೆಲ್ಲವನ್ನೂ ಅಂಗೀಕರಿಸಿದನೆ? ಅಥವಾ ಅವುಗಳಲ್ಲಿ ಒಂದೆರಡನ್ನುಮಾತ್ರ ಅವಲಂಬಿಸಿದನೇ ? ಎಂದು ಶಂಕೆಯುಂಟಾಗುವುದು. ಪೂರ್ಣವಾಗಿ ಅಂಗೀಕರಿಸಿದನೆಂದು ಹೇಳುವುದಕ್ಕಿಲ್ಲ. ಹಾಗೆ ಸಂಪೂರ್ಣವಾಗಿ ವಾನಪ್ರಸ್ಥವನ್ನಾಶ್ರಯಿಸಿದವನು ಪುನಃ ಗೃಹಸ್ಥಾಶ್ರಮಕ್ಕೆ ಬರಲಾಗದು. ಹಾಗೆ ಬಂದರೆ "ಆರೂಢಪತಿತೋಹಿ ಸಃ" ಎಂಬಂತೆ ನಿಂದಾಸ್ಪದವಾಗುವುದು. ಅವುಗಳಲ್ಲಿ ಒಂದೆರಡನ್ನುಮಾತ್ರ ಅವಲಂಬಿಸಿದನೆಂದೂ ಹೇಳುವುದಕ್ಕಿಲ್ಲ. ಹೀಗೆ ಆಶ್ರಮದಲ್ಲಿ ವಾಸಮಾಡುವುದು ಹಾಸ್ಯಾಸ್ಪದವು. ಆದುದರಿಂದ ಈತನು ಯುಧಿಷ್ಠಿರಾದಿಗಳ ಸನ್ಯಾಸಧರ್ಮದಂತೆ ಪಿತೃನಿಯೋಗದಿಂದುಂಟಾದ ಸಾಂಕಲ್ಪಿಕವಾದ ನಿಯಮವಿಶೇಷವನ್ನು ಅಂಗೀಕರಿಸಿದ್ದನೆಂದು ಹೇಳಿದರೆ ದೋಷವಿಲ್ಲವು. "ಸಮ್ಯಕ್ ಸಂಕಲ್ಪಜಃ ಕಾಮೋ ಧರ್ಮಮೂಲಮಿದಂ ಸ್ಮೃತಂ" ಎಂದು ಮನುವಾಕ್ಯವುಂಟು.

ಡಿ, ‟ವತ್ಸನೆ ! ಇದೋ ಇಲ್ಲಿ ದೋಣಿಯು ಸಿದ್ಧವಾಗಿ ಆಳ್ಹಾಡದಹಾಗೆ ನಿಲ್ಲಿಸಲ್ಪಟ್ಟಿದೆ. ಮೊದಲು ನೀನು ಇದನ್ನೇರು! ಆಮೇಲೆ ಭಯಶೀಲೆಯಾದ ಈ ಸೀತೆಯನ್ನೂ ಮೆಲ್ಲಗೆ ಕೈಗೊಟ್ಟು ಮೇಲಕ್ಕೇರಿಸು.” ಎಂದನು. ಲಕ್ಷ್ಮ ಣನು ಬುದ್ಧಿವಂತನಾದುದರಿಂದ, ಅಣ್ಣನ ಈ ಆಜ್ಞೆಯನ್ನು ಕೇಳಿ, ಮೊ ದಲು ಸೀತೆಯನ್ನೇರಿಸಿ ಆಮೇಲೆ ತಾನೇರುವುದೇ ರಾಮನ ಅಭಿಪ್ರಾಯವೆಂ ದು ತಿಳಿದು, ಅದಕ್ಕನುಸಾರವಾಗಿ, ಮೊದಲು ಸೀತೆಯನ್ನೇ ಏರಿಸಿ, ಆಮೇಲೆ ತಾನೂ ಆನಾವೆಯನ್ನೇರಿದನು. ಒಡನೆಯೇ ರಾಮನೂ ಹತ್ತಿದನು. ಆಗ ಗು ಹನು ತನ್ನ ಕಡೆಯವರನ್ನು ನೋಡಿ, ದೋಣಿಯನ್ನು ಬಿಡುವಂತೆ ನಿಯಮಿಸಿ ದನು. ಅತ್ತಲಾಗಿ ತೇಜಸ್ವಿಯಾದ ರಾಮನು ನಾವೆಯನ್ನೇರಿದಕೂಡಲೆ, ಬ್ರಾಹ್ಮಣಕ್ಷತ್ರಿಯ ವರ್ಣದವರಿಬ್ಬರಿಗೂ ಅನುಸಂಧೇಯವಾದ, ‟ದೈವೀಂ ನಾವಂ” ಇತ್ಯಾದಿ ನಾವಾರೋಹಮಂತ್ರವನ್ನು ಜಪಿಸಿದನು. ಆಮೇಲೆ ಸೀತಾಸಮೇತನಾಗಿ ಆಚಮನವನ್ನು ಮಾಡಿ, ಆ ನದಿಯನ್ನು ಭಕ್ತಿಪೂರ್ವಕ ವಾಗಿ ಸಂತೋಷದಿಂದ ನಮಸ್ಕರಿಸಿದನು. ಲಕ್ಷ್ಮಣನೂ ಶಾಸ್ತ್ರೋಕ್ತವಾಗಿ ಆ ಪುಣ್ಯನದಿಯನ್ನು ನಮಸ್ಕರಿಸಿದನು. ರಾಮನು ಸುಮಂತ್ರನಿಂದಲೂ, ಸೇನಾಸಮೇತನಾದ ಗುಹನಿಂದಲೂ ಅನುಮತಿಯನ್ನು ಪಡೆದು, ನಾವೆ ಯಲ್ಲಿ ಕುಳಿತು, ಮುಂದೆ ನಡೆಸುವಂತೆ ನಾವಿಕರಿಗೆ ಹೇಳಿದನು. ಹಾಗೆಯೇ ಆ ನಾವಿಕರು ಎಚ್ಚರಿಕೆಯಿಂದ ನಾವೆಯನ್ನು ನಡೆಸಿಕೊಂಡು ಹೋಗು ತ್ತಿರಲು, ಬಲವಾಗಿ ಹುಟ್ಟುಗಳನ್ನು ತೆಗೆಯುವ ವೇಗದಿಂದ ಆ ನಾವೆಯು ಬಹುಬೇಗನೆ ನದಿಯ ಮಧ್ಯವನ್ನು ಸೇರಿತು. ಗಂಗಾನದಿಯ ನಡು ನೀರಿನಲ್ಲಿ ನಾವೆಯು ಬಂದು ನಿಂತಾಗ, ಸೀತೆಯು ಸುತ್ತಲೂ ನೋಡಿ ಕೈಮುಗಿಯುತ್ತಾ ಆ ನದಿಯನ್ನುಕುರಿತು ‟ ಎಲೆ ಗಂಗೆ ! ಇದೋ ಈತನು ದಶರಥಮಹಾರಾಜನ ಪುತ್ರನು. ತಂದೆಯ ಅಜ್ಞಾನುಸಾರವಾಗಿ ಹದಿನಾಲ್ಕುವರ್ಷಗಳವರೆಗೆ ಪೂರ್ಣವಾಗಿ ಕಾಡಿನಲ್ಲಿರಬೇಕಾಗಿರುವುದು. ಪಿತೃವಾಕ್ಯಪರಿಪಾಲನವೆಂಬ ಈ ವ್ರತವನ್ನು ನಿರ್ವಿಘ್ನವಾಗಿ ಮುಗಿಸಿ ಕೊಂಡು, ತನ್ನ ತಮ್ಮನಾದ ಲಕ್ಷ್ಮಣನೊಡನೆಯೂ, ನನ್ನೊಡನೆಯೂ ಹಿಂತಿರುಗಿಬರುವನು. ಅದುವರೆಗೆ ಈತನನ್ನು ನೀನು ನಿರಪಾಯವಾಗಿ ರಕ್ಷಿ ಸುತ್ತಿರು. ನಾವೆಲ್ಲರೂ ನಿನ್ನ ಅನುಗ್ರಹದಿಂದ ಕಾಡಿನಲ್ಲಿ ಸುಖವಾಗಿದ್ದು



೬೧೬. ಸೀತಾರಾಮಲಕ್ಷ್ಮಣರು ಮೂವರೂ ಯಮುನಾನದಿಯ ನಡುವೆ
ದೋಣಿಯಲ್ಲಿ ಹೋಗುತ್ತಿರುವುದು.

ಕ್ಷೇಮದಿಂದ ಹಿಂತಿರುಗಿ ಬರುವಾಗ, ಸಂತೋಷದಿಂದ ನಿನ್ನನ್ನು ಪೂಜಿಸುವೆನು. ಆಗಲೇ ನನ್ನ ಎಲ್ಲಾ ಕೋರಿಕೆಗಳೂ ಕೈಗೂಡಿದಂತಾಗುವುದು. ಆಗ ಅತ್ಯುತ್ಸಾಹದಿಂದ ನಿನ್ನನ್ನು ಆರಾಧಿಸುವೆನು. ಎಲೆದೇವಿ! ನೀನು ಮೂರುಲೋಕದಲ್ಲಿಯೂ ಸಂಚರಿಸತಕ್ಕ ಮಹಾಮಹಿಮೆಯುಳ್ಳವಳು. ಬ್ರಹ್ಮಲೋಕವೂ ಕೂಡ ನಿನ್ನ ದೃಷ್ಟಿಗೆ ಗೋಚರವಾಗಿರುವುದು. ಸಮುದ್ರರಾಜನಿಗೆ ನೀನು ಪ್ರಿಯಪತ್ನಿಯೆನಿಸಿಕೊಂಡಿರುವೆ. ಲೋಕದಲ್ಲಿ ನಿನಗೆ ಅಸಾಧಾರಣವಾದ ಪ್ರಸಿದ್ಧಿಯುಂಟು. ನಿನಗೆ ನಮಸ್ಕರಿಸುವೆನು. ಅನೇಕವಿಧದಲ್ಲಿ ನಿನ್ನನ್ನು ಸ್ತುತಿಸುವೆನು. ಪುರುಷಶ್ರೇಷ್ಠನಾದ ಈ ನನ್ನ ಪತಿಯು ಕ್ಷೇಮದಿಂದ ಹಿಂತಿರುಗಿ ಬರುವಂತೆ ನೀನು ಅನುಗ್ರಹಿಸುವುದಾದರೆ, ನಾನು ಬಂದೊಡನೆಯೇ ನಿನ್ನ ಪ್ರೀತ್ಯರ್ಥವಾಗಿ ಬ್ರಾಹ್ಮಣರಿಗೆ ಲಕ್ಷಸಂಖ್ಯೆಯಿಂದ ಗೋದಾನವನ್ನೂ, ಅನ್ನದಾನವನ್ನೂ, ವಸ್ತ್ರದಾನವನ್ನೂ ಮಾಡುವೆನು. ಮತ್ತು ನಾನು ಹಿಂತಿರುಗಿ ಬಂದಕೂಡಲೆ ನಿನಗೆ ಸಾವಿರಾರುಘಟಗಳಲ್ಲಿ ಮದ್ಯವನ್ನೂ ಅರ್ಪಿಸುವೆನು. ಆಹಾರಾರ್ಥವಾಗಿ ಮಾಂಸರಾಶಿಯನ್ನೂ ಸಮರ್ಪಿಸುವೆನು. ನಿನ್ನ ತೀರದಲ್ಲಿ ವಾಸವಾಗಿರತಕ್ಕ ಸಮಸ್ತದೇವತೆಗಳನ್ನೂ ತೃಪ್ತಿಪಡಿಸುವೆನು. ಮತ್ತು ನಿನ್ನ ತೀರದಲ್ಲಿ ಮಣಿಕರ್ಣಿಕೆ ಮೊದಲಾದ ಯಾವ ಪುಣ್ಯತೀರ್ಥಘಟ್ಟಗಳುಂಟೋ, ಕಾಶಿ ಮೊದಲಾದಯಾವಪುಣ್ಯಕ್ಷೇತ್ರಗಳುಂಟೋ, ಅವೆಲ್ಲವನ್ನೂ ಪೂಜಿಸುವೆನು. 'ಎಲೈ ಪುಣ್ಯಾತ್ಮಳೆ! ಮಹಾಭುಜನಾದ ಈ ನನ್ನ ಪತಿಯು ಲಕ್ಷ್ಮಣನೊಡನೆಯೂ, ನನ್ನೊಡನೆಯೂ ಕೂಡಿ ವನವಾಸವನ್ನು ಮುಗಿಸಿಕೊಂಡು ಕ್ಷೇಮದಿಂದ ಈ ಅಯೋಧ್ಯೆಗೆ ಹಿಂತಿರುಗಿಬರುವಂತೆ ಅನುಗ್ರಹಿಸು!" ಎಂದು ಗಂಗೆಯನ್ನು ಪ್ರಾರ್ಥಿಸುತ್ತಿರುವಾಗಲೇ ನಾವೆಯು ಆ ನದಿಯ ದಕ್ಷಿಣತೀರವನ್ನು ಸೇರಿತು. ಅಲ್ಲಿ ಮಹಾಬಾಹುವಾದ ರಾಮನು ಸೀತಾಲಕ್ಷ್ಮಣರೊಡನೆ ನಾವೆಯಿಂದಿಳಿದು ಮುಂದಕ್ಕೆ ಪ್ರಯಾಣಮಾಡುತ್ತಿರುವಾಗ, ಸುಮಿತ್ರಾನಂದವರ್ಧಕನಾದ ಲಕ್ಷ್ಮಣನನ್ನು ಕುರಿತು, "ಎಲೆವತ್ಸನೆ! ಇನ್ನು ನೀನು ಬಹುಜಾಗರೂಕನಾಗಿರಬೇಕು. ವಿಶೇಷವಾಗಿ ಜನರು ತುಂಬಿದ್ದರೂ, ಅಥವಾ ನಿರ್ಜನವಾದ ಪ್ರದೇಶವಾಗಿದ್ದರೂ ನೀನು ಎಚ್ಚರದಿಂದ ಕಾವಲಿರಬೇಕು. ಆದರಲ್ಲಿಯೂ ಮುಖ್ಯವಾಗಿ ನಾವು ಎಂದೂ ಕಾಣದ ಇಂತಹ ನಿರ್ಮಾನುಷ್ಯವಾದ ಪ್ರದೇಶದಲ್ಲಿ ಬಹಳ ಎಚ್ಚರಿಕೆಯಿಂದಿರ

ಬೇಕು. ಆದುದರಿಂದ ಎಲೆ ವತ್ಸನೆ! ನೀನು ಮುಂದೆ ಹೋಗು! ನಿನ್ನ ಹಿಂದೆ ಸೀತೆಯು ಬರಲಿ! ಅವಳ ಹಿಂದೆ ನಿಮ್ಮಿಬ್ಬರಿಗೂ ನಾನು ಬೆಂಗಾವಲಾಗಿ ಬರುವೆನು. ಇಂತಹ ಘೋರವಾದ ಅರಣ್ಯಪ್ರದೇಶದಲ್ಲಿ ಒಬ್ಬರಿಗೊಬ್ಬರು ಬೆಂಬಲವಾಗಿದ್ದು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಯಾವಕಾರ್ಯಕ್ಕಾಗಲಿತಕ್ಕಸಮಯವು ಮಿಂಚಿಹೋದಮೇಲೆ,ಪುನಃ ಅದನ್ನು ಸರಿಮಾಡಿಕೊಳ್ಳುವುದು ಸುಲಭವಲ್ಲ.ಈಗೀಗ ಸೀತೆಗೆ ವನವಾಸದ ಕಷ್ಟವು ಚೆನ್ನಾಗಿ ತಿಳಿಯುವುದು. ಇದೋ! ಈ ವನವನ್ನು ನೋಡಿದೆಯಾ? ಇಲ್ಲಿ ವಿಶೇಷವಾಗಿ ಜನಸಂಚಾರವೇ ಕಾಣುವುದಿಲ್ಲ. ಹೊಲಗದ್ದೆಗಳಾಗಲಿ, ತೋಟಗಳಾಗಲಿ ಯಾವುದೊಂದೂ ಗೋಚರಿಸುವುದಿಲ್ಲ. ಇಲ್ಲಿನ ಭೂಪ್ರದೇಶವೆಲ್ಲವೂ ಹಳ್ಳತಿಟ್ಟುಗಳಿಂದ ಕೂಡಿ ಸಂಚಾರಕ್ಕೇಯೋಗ್ಯವಲ್ಲದಿರುವುದು.ಅಲ್ಲಲ್ಲಿ ದೊಡ್ಡಹಳ್ಳಗಳು ಕಾಣುವುವು.ಇಂತಹ ದುರ್ಗಮವಾದ ವನಪ್ರದೇಶವನ್ನು ಸೇರಿರುವೆವಾದುದರಿಂದ,ಈಗೀಗ ಸೀತೆಗೆ ವನವಾಸದ ಕಷ್ಟವು ಚೆನ್ನಾಗಿ ಅನುಭವಕ್ಕೆ ಬರುವುದು” ಎಂದನು. ಈ ಮಾತನ್ನು ಕೇಳಿ ಲಕ್ಷ್ಮಣನು ತಾನೇ ಮುಂದೆ ಹೊರಟನು. ಆತನ ಹಿಂದೆ ಸೀತೆಯೂ, ಅವಳ ಹಿಂದೆ ರಾಮನೂ ಹೋಗುತಿದ್ದರು. ಅವರು ಮೂವರೂ ಗಂಗಾನದಿಯನ್ನು ದಾಟಿ, ಆಚೆಯ ದಡವನ್ನು ಸೇರಿ, ಅಲ್ಲಿಂದ ಮುಂದೆ ಹೋಗುವವರೆಗೂ ಸುಮಂತ್ರನು ಅವರನ್ನು ಎವೆಯಿಕ್ಕದೆ ನೋಡುತಿದ್ದನು. ಆಮೇಲೆ ಅವರು ಬಹುದೂರಕ್ಕೆ ಹೊರಟುಹೋಗಿ ತನ್ನ ಕಣ್ಣಿಗೆ ಗೋಚರಿಸದಿರಲು, ತನ್ನ ದೃಷ್ಟಿಯನ್ನು ಹಿಂತಿರುಗಿಸಿ ಮಹಾವ್ಯಸನದಿಂದ ಕಣ್ಣೀರನ್ನು ಸುರಿಸುತಿದ್ದನು.ದಿಕ್ಪಾಲಕರಿಗೆಣೆಯಾದ ಮಹಾಮಹಿಮೆಯುಳ್ಳವನಾಗಿಯೂ, ಮಹಾತ್ಮನಾಗಿಯೂ, ವರಪ್ರದನಾಗಿಯೂ ಇರುವ ರಾಮನು ಆ ಮಹಾನದಿಯನ್ನು ದಾಟಿ ಬಹುದೂರದವರೆಗೆ ಪ್ರಯಾಣಮಾಡಿ, ಉತ್ತಮವಾದ ಸಸ್ಯಸಮೃದ್ಧಿಗಳಿಂದ ತುಂಬಿದ * ವತ್ಸದೇಶದ

* ಇಲ್ಲಿ ಮತ್ಸ್ಯದೇಶಗಳೆಂದು ಕೆಲವರು ಪಾಠಾಂತರವನ್ನು ಹೇಳುವರು ಅದು ಪ್ರಾಮಾದಿಕವೇಹೊರತು ನ್ಯಾಯವಲ್ಲ. ಇಲ್ಲಿನ ದೇಶಗಳ ವ್ಯವಸ್ಥೆಯು ಹೇಗೆಂದರೆ, ಗಂಗಾಯಮುನೆಗಳನಡುವೆ ಇರುವ ಪ್ರಯಾಗಪ್ರದೇಶವೇ ವತ್ಸದೇಶವು. ಅದರ ಪಶ್ಚಿಮಕ್ಕೆ ಪಾಂಚಾಲದೇಶವು. ಯಮುನೆಯ ದಕ್ಷಿಣತೀರದಲ್ಲಿ ಶೂರಸೇನದೇಶವು. ಅದರ ಪಶ್ಚಿಮಕ್ಕಿರುವ ದೇಶಗಳಿಗೆ ಮತ್ಸ್ಯದೇಶವೆಂದು ಹೆಸರು.



೬೧೫. ಅರಣ್ಯದಲ್ಲಿ ಮೊದಲನೆಯ ರಾತ್ರಿಯನ್ನು ಕಳೆಯುವುದು.

ನೆಲದಮೇಲೆಯೇ ಮಲಗಿದನು. ಲಕ್ಷ್ಮಣನೊಡನೆ ಮೃದುವಾದ ಮಾತುಗಳ ನ್ನಾಡುತ್ತ, ಪುನಃ ಅವನನ್ನು ಕುರಿತು “ವತ್ಸ ಲಕ್ಷ್ಮಣಾ! ಈಗ ನಮ್ಮ ತಂದೆಯು ಏನವಸ್ಥೆಯನ್ನನುಭವಿಸುತ್ತಿರಬಹುದೆಂದು ಬಲ್ಲೆಯಾ? ದುಃಖ ವನ್ನು ತಡೆಯಲಾರದೆ ಮಲಗಿಬಿಟ್ಟಿರುವನು. ಆತನಿಗೆ ಸುಖನಿದ್ರೆಯೂ ಬಂದಿರಲಾರದು! ಇದು ನಿಶ್ಚಯವು! ಕೈಕೇಯಿಯುಮಾತ್ರ ತನ್ನ ಕೋರಿಕೆಯು ಕೈಗೂಡಿತೆಂಬ ಸಂತೋಷದಿಂದ ಉಬ್ಬುತ್ತಿರುವಳು. ಆಕೆಯು ಭರತನನ್ನು ಕರೆಸಿದೊಡನೆಯೇ ಆತನಿಗೆ ರಾಜ್ಯವನ್ನು ಕೊಡಿ ಸುವುದಕ್ಕಾಗಿಯೂ, ಆತನಿಗೆ ಆ ರಾಜ್ಯವನ್ನು ನಿರುಪಾಧಿಕವಾಗಿ ಸ್ಥಿರಪಡ ಬೇಕೆಂಬದಕ್ಕಾಗಿಯೂ, *ನಮ್ಮ ಮಹಾರಾಜನ ಪ್ರಾಣವನ್ನೇ ಹಿಂಡಿಬಿಡು ವಳು! ಈಗ ನಮ್ಮ ತಂದೆಯಾದರೋ ಅನಾಥನಾಗಿರುವನು. ಆತ ನನ್ನು ಕೇಳುವವರೇ ಇಲ್ಲ. ಇದರಮೇಲೆ ನಾವೂ ಅವನನ್ನು ಬಿಟ್ಟು ಬಂ ದೆವು. ಆತನು ಬಹಳ ವೃದ್ಧನಾಗಿರುವುದರಿಂದ ಅವನ ದೇಹದಲ್ಲಿಯೂ ಬ ಲವಿಲ್ಲ. ಇಷ್ಟಾದರೂ ಕಾಮಪಾಶದಲ್ಲಿ ಬಿದ್ದು ಕೈಕೇಯಿಯ ವಶನಾಗಿರು ವನು. ಇನ್ನು ಆತನು ಏನು ಮಾಡಬಲ್ಲನು? ಈಗ ನಮಗೆ ಬಂದೊದಗಿರುವ ಕಷ್ಟದಶೆಯನ್ನೂ, ರಾಜನಿಗುಂಟಾಗಿರುವ ಬುದ್ಧಿಭ್ರಮವನ್ನೂ ನೋಡಿ ದರೆ, ಧರ್ಮಾರ್ಥಗಳಿಗಿಂತ ಕಾಮವೆಂಬ ಪುರುಷಾರ್ಥವೇ ಪ್ರಬಲವೆಂದು ತೋರುವುದು. ಎಷ್ಟೇ ಬುದ್ಧಿಹೀನರಾಗಿದ್ದರೂ, ತಂದೆಯು ನನ್ನನ್ನು ತೊರೆದು ಬಿಟ್ಟಂತೆ, ತನ್ನ ಇಷ್ಟಾನುಸಾರವಾಗಿ ನಡೆದುಕೊಳ್ಳುತಿದ್ದ ವಿಧೇಯನಾದ ಪುತ್ರನನ್ನು ಹೆಂಡತಿಯಮಾತಿಗಾಗಿ ಕಾಡಿಗೆ ಕಳುಹಿಸುವವರುಂಟೇ? ಯಾ ರೂ ಬಿಡಲಾರರು. ಕೈಕೇಯಿಗೆ ಮಗನಾದ ಭರತನೊಬ್ಬನೇ ಭಾಗ್ಯಶಾ ಲಿಯು! ರಾಜಾಧಿರಾಜನೆನಿಸಿಕೊಂಡು ಕೋಸಲದೇಶವೆಲ್ಲವನ್ನೂ ಸುಖವಾಗಿ ಅನುಭವಿಸುವನು. ಅವನೊಬ್ಬನೇ ಹೆಂಡತಿಯೊಡಗೂಡಿ ಸುಖವಾಗಿ ರಾಜ್ಯ

---

* “ನಿಸ್ಪೃಹನಾದ ರಾಮನು, ತನಗೆ ರಾಜ್ಯವು ತಪ್ಪಿಹೋದುದಕ್ಕಾಗಿ ಕೈಕೇಯಿ ಯನ್ನು ನಿಂದಿಸಬಹುದೆ?” ಎಂದರೆ, ಈತನು ಬೆಳಗಾದಮೇಲೆ ಅಯೋಧ್ಯೆಗೆ ಹಿಂತಿರುಗಿ ಹೋಗುವಂತೆ ಲಕ್ಷ್ಮಣನಿಗೆ ಬೋಧಿಸುವುದರಿಂದ, ಆಕೆಯಲ್ಲಿ ಬದ್ಧದ್ವೇಷವುಳ್ಳ ಲಕ್ಷ್ಮ ಣನ ಮನೋಧರ್ಮವನ್ನನುಸರಿಸಿ ಹೇಳುವುದಕ್ಕಾಗಿಯೇ ಹೀಗೆನಿಂದಿಸುತಿದ್ದನೇ ಹೊರತು ಬೇರೆಯಲ್ಲ.

ವಾಳುವನು! ಆತನೊಬ್ಬನೇ ಸಮಸ್ತರಾಜ್ಯಕ್ಕೂ ಒಂದೇಮುಖದಂತಿರುವನು. ತಂದೆಗೂ ಕೊನೆಗಾಲವು ಸಮೀಪಿಸಿ, ನಾನೂ ಕಾಡುಪಾಲಾಗಿ ಹೊರಟು ಬಂದಮೇಲೆ, ಆತನೊಬ್ಬನೇ ಏಕಾಧಿಪತ್ಯದಿಂದ ರಾಜ್ಯವನ್ನಾಳುವ ನಲ್ಲವೆ? ಲೋಕದಲ್ಲಿ ಅರ್ಥಧರ್ಮಗಳನ್ನು ಬಿಟ್ಟು, ಕಾಮಮಾತ್ರವನ್ನು ಅನುಸರಿಸುವರೆಲ್ಲರಿಗೂ ಹೀಗೆಯೇ ಮಹಾವಿಪತ್ತು ಬಂದೊದಗುವು ದರಲ್ಲಿ ಸಂದೇಹವಿಲ್ಲ. ಎಲೆ ಸೌಮ್ಯನೆ! ದಶರಥನ ಕೊನೆಗಾ ಲಕ್ಕೂ, ನನ್ನನ್ನು ಕಾಡುಪಾಲುಮಾಡುವುದಕ್ಕೂ, ಭರತನಿಗೆ ರಾಜ್ಯವನ್ನು ಕೊಡಿಸುವುದಕ್ಕೂ ಆ ಕೈಕೇಯಿಯು ನಮ್ಮ ಮನೆಗೆ ಬಂದು ಸೇರಿದಳೆಂದೇ ನನಗೆ ತೋರಿರುವುದು. ಆ ಕೈಕೇಯಿಯು ಈಗ ತನಗೆ ಲಭಿಸಿದ ಸೌಭಾಗ್ಯದ ಮದದಿಂದ ಮೈಮರೆತು, ನನ್ನ ಮೇಲಿನ ದ್ವೇಷಕ್ಕಾಗಿ ಕೌಸಲ್ಯೆಯನ್ನೂ, ಸುಮಿತ್ರೆಯನ್ನೂ ಪೀಡಿಸದೆ ಬಿಡುವಳೆ? ಎಂದಿಗೂ ಬಿಡಲಾರಳು! ವತ್ಸ ಲಕ್ಷ್ಮಣಾ! ನನಗಾಗಿ ಸುಮಿತ್ರೆಯೂ ಏಕೆ ಕಷ್ಟಪಡಬೇಕು? ನಾವು ಇನ್ನೂ ದೂರಕ್ಕೆ ಹೊರಟುಹೋದರೆ! ಹಿಂತಿರುಗುವುದು ಕಷ್ಟವು. ಆದುದ ರಿಂದ ನೀನು ಬೆಳಗಾಗುವುದಕ್ಕೆ ಮುಂಚೆಯೇ ಎದ್ದು, ಇಲ್ಲಿಂದ ಹಿಂತಿರುಗಿ ಅಯೋಧ್ಯೆಗೆ ಹೋಗು! ನಾನೊಬ್ಬನೇ ಸೀತೆಯೊಡನೆ ದಂಡಕಾರಣ್ಯಕ್ಕೆ ಹೋಗುವೆನು. ಕೌಸಲ್ಯೆಯು ಈಗ ದಿಕ್ಕಿಲ್ಲದೆ ಕಷ್ಟಪಡುತ್ತಿರುವಳು. ನೀನಾದರೂ ಹೋಗಿ ಅವಳಿಗೆ ದಿಕ್ಕಾಗಿರು! ಕೈಕೇಯಿಯು ಬಹಳ ಅಲ್ಪ ಬುದ್ಧಿಯುಳ್ಳವಳು. ಆದುದರಿಂದ ಅವಳು ಒಂದುವೇಳೆ ತನ್ನ ದ್ವೇಷಕ್ಕೆ ತಕ್ಕಂತೆ ಕೌಸಲ್ಯೆಗೆ ಏನಾದರೂ ಕೇಡನ್ನೇ ಮಾಡಬಹುದು. *ಭರತನು ಧರ್ಮಜ್ಞನಾದುದರಿಂದ ನೀನು ಹೋಗಿ ನಮ್ಮ ಮಾತೆಯರನ್ನು ಕಾಪಾಡು ವಂತೆ ಹೇಳಿ, ಅವರನ್ನು ಆತನ ಕೈಗೊಪ್ಪಿಸು! ಎಲೆ ವತ್ಸನೆ! ನನ್ನ ತಾಯಿಯು

---

* ಇಲ್ಲಿ, "ಪರಿದದ್ಯಾದ್ಧಿ ಧರ್ಮಜ್ಞೋ ಭರತೇ ಮಮ ಮಾತರಂ" ಎಂದು ಗೋ ವಿಂದರಾಜೀಯವಾದ ಪಾಠವು. ತಿಲಕವ್ಯಾಖ್ಯಾನಾನುಸಾರವಾಗಿ "ಪರಿದದ್ಯಾದ್ಧಿ ಧರ್ಮ ಜ್ಞಗರಂತೇ ಮಮ ಮಾತರಂ" ಎಂದು ಪಾಠಾಂತರವನ್ನುಮಾಡಿ, "ತೇ ಮಮಚ ಮಾತರಂ ಗರಂ ಪರಿದದ್ಯಾದ್ಧಿ) ನಿನ್ನತಾಯಿಗೂ ನನ್ನತಾಯಿಗೂ ವಿಷವನ್ನು ಕೊಟ್ಟು ಬಿಡುವಳಲ್ಲವೆ?" ಎಂದು ಅರ್ಥವು ಮಾಡಲ್ಪಟ್ಟಿದೆ.

ಪೂರ್ವಜನ್ಮದಲ್ಲಿ ಬೇರೆ ಯಾವ ಸ್ತ್ರೀಯರಿಗೋ ಪುತ್ರವಿಯೋಗವನ್ನುಂಟು ಮಾಡಿರಬಹುದು! ಅದರಿಂದಲೇ ಅವಳಿಗೂ ಈಗ ಅದೇ ವ್ಯಸನವು ಪ್ರಾಪ್ತವಾಯಿತು. ಅವಳು ನನ್ನನ್ನು ಬಹುಕಾಲದಿಂದ ಪೋಷಿಸಿ ಕಷ್ಟಪಟ್ಟು ವೃದ್ಧಿಗೆ ತಂದಿದ್ದರೂ, ನನ್ನಿಂದಾಗಬೇಕಾದ ಮಾತೃಶುಶ್ರೂಷೆ ಮೊದಲಾದ ಫಲಗಳನ್ನು ಅನುಭವಿಸುವ ಕಾಲಕ್ಕೆ ಸರಿಯಾಗಿ ನನ್ನನ್ನು ತೊರೆದು ಬಿಡಬೇಕಾಯಿತು. ಛೀ! ಇನ್ನು ನನ್ನ ಜನ್ಮವೇಕೆ ? ನನ್ನಂತಹ ಪುತ್ರನನ್ನು ಪಡೆದೂ ಫಲವೇನು?ನನ್ನ ತಾಯಿಗೆ ನಾನೇ ಕೊನೆಯಿಲ್ಲದ ದುಃಖಕ್ಕೆ ಕಾರಣರನಾದೆನಲ್ಲವೆ ? ಇಂತಹ ಮಕ್ಕಳನ್ನು ಮಾತ್ರಲೋಕದಲ್ಲಿ ಯಾರೂ ಪಡೆಯಬಾರದು ! ನನ್ನ ತಾಯಿಯಾದ ಕೌಸಲ್ಯೆಯು ಮನೆಯಲ್ಲಿ ಸಾಕಿದ ಶಾರಿಕೆಯೆಂಬ ಪಕ್ಷಿಯೇ ನನಗಿಂತಲೂ ಮೇಲಾದುದೆಂದೆಣಿಸುವೆನು. ನನಗಿಂತಲೂ ನ್ನ ತಾಯಿಯಲ್ಲಿ ಅದಕ್ಕೆ ನಹೆಚ್ಚು ಪ್ರೀತಿಯುಂಟು. ಹಿಂದೆ ಒಂದಾನೊಂದು ಕಾಲದಲ್ಲಿ ಆ ಹಕ್ಕಿಯು ಸಮೀಪದಲ್ಲಿದ್ದ ಗಿಳಿಯನ್ನು ನೋಡಿ “ಎಲೆ ಗಿಳಿಯೆ!ಆಕೆಯ ಶತ್ರುವಿನ ಕಾಲನ್ನು ಕಚ್ಚು!”ಎಂದು ಹೇಳಿದುದನ್ನು ನಾನೇ ಕೇಳಿರುವೆನು. ಅದರಂತೆ ನನ್ನ ತಾಯಿಗೆ ಪ್ರೀತಿಯುಕ್ತವಾದ ಒಂದು ಮಾತನ್ನಾದರೂ ನಾನು ಹೇಳಿದವನಲ್ಲ ! ನಾನು ಆಕೆಯ ಹೊಟ್ಟೆಯಲ್ಲಿ ಹುಟ್ಟಿದ ಮಗನಾಗಿದ್ದರೂ, ದೌರ್ಭಾಗ್ಯದಿಂದ ದುಃಖಿಸುತ್ತಿರುವ ಆಕೆಗೆ ಇದುವರೆಗೆ ಯಾವುದೊಂದುಪಕಾರವನ್ನೂ ಮಾಡಲಿಲ್ಲ! ಅವಳಿಗೆ ಮನಸ್ಸಂತೋಷವಾಗುವಂತೆ ಒಂದೆರಡು ಮಾತುಗಳನ್ನಾದರೂ ಆಡಲಿಲ್ಲ ! ಆ ಕೌಸಲ್ಯೆಯು ಸ್ವಲ್ಪಪ್ರೀತಿಯನ್ನು ತೋರಿಸಿದರೂ ಎಷ್ಟೋ ಸಂತೋಷಿಸತಕ್ಕವಳು. ಆ ಶಾರಿಕೆಯ ಮಾತನ್ನು ಕೇಳಿದಮಾತ್ರಕ್ಕೆ ಅವಳಿಗೆ ಎಷ್ಟೋ ಸಂತೋಷವುಂಟಾಯಿತು. ತಿರ್ಯಗ್ಜಾತಿಯಲ್ಲಿ ಹುಟ್ಟಿದ ಆ ಹಕ್ಕಿಯು, ತನ್ನನ್ನು ಪೋಷಿಸಿದ ಕೌಸಲ್ಯೆಗೆ ಮಾಡಿದಷ್ಟು ಪ್ರಿಯವನ್ನೂ ನಾನು ಮಾಡದೆ ಹೋದೆನಲ್ಲಾ ! ಲೋಕದಲ್ಲಿ ನನ್ನಂತಹ ಮಗನು ಹುಟ್ಟಿ ಫಲವೇನು ! ಮಗನನ್ನು ಪಡೆದೂ ಅದರಿಂದುಂಟಾಗತಕ್ಕ ಫಲವನ್ನನುಭವಿಸದೇ ಸಂಕಟಪಡುತ್ತಿರುವ ಆ ಭಾಗ್ಯಹೀನೆಯಾದ ಕೌಸಲ್ಯೆಯು ನನ್ನನ್ನು ಕಾಣದೆ ದುಃಖಸಾಗರದಲ್ಲಿಯೇ ಮುಳುಗಿ ಹೋಗಿರುವಳು! ವತ್ಸಲಕ್ಷ್ಮಣಾ! ಅದೆಲ್ಲವೂ ಹ

ಗಿರಲಿ ! ನನಗೆ ಕೋಪವುಂಟಾದರೆಮಾತ್ರ ಯಾರೂ ತಡೆಯಲಾರರು. ಈ ಅಯೋಧ್ಯೆಯನ್ನು ಮಾತ್ರವೇ ಅಲ್ಲ. ಸಮಸ್ತಭೂಮಂಡಲವನ್ನಾದರೂ ಬಾಣಗಳಿಂದ ಇತರರ ಸಹಾಯವಿಲ್ಲದೆ ನಾನೊಬ್ಬನೇ ಆಕ್ರಮಿಸಬಲ್ಲೆನು. ಹೀಗಿದ್ದರೂ ನಿಷ್ಕಾರಣವಾಗಿ ನನ್ನ ವೀರ್ಯವನ್ನು ಪಯೋಗಿಸಬಾರದೆಂದು ಸುಮ್ಮನಿರುವೆನು. ಅಧರ್ಮಹೇತುವಾದ ಕಾರ್ಯದಲ್ಲಿ ವೀರ್ಯವನ್ನು ಸಾಧನವನ್ನಾಗಿ ಉಪಯೋಗಿಸಬಾರದಲ್ಲವೆ? ಆದುದರಿಂದ ಧರ್ಮಹಾನಿಯುಂಟಾಗುವುದೆಂಬಭಯದಿಂದಲೂ,ಪರಲೋಕಪ್ರಾಪ್ತಿಯು ಕೆಡುವುದೆಂಬಶಂಕೆಯಿಂದಲೂ, ನಾನಾಗಿಯೇ ಅಭಿಷೇಕಕ್ಕೆ ಇಷ್ಟಪಡದೆ ಇತ್ತಲಾಗಿ ಹೊರಟುಬಂದೆನು. ಅಧರ್ಮಕ್ಕೂ, ಪರಲೋಕಕ್ಕೂ ಹೆದರಿ ನಾನು ಹೀಗೆ ಸುಮ್ಮನಿರುವೆನೇಹೊರತು, ಈ ಲೋಕದಲ್ಲಿ ನನಗೆ ಬೇರೊಬ್ಬರ ಭಯವಿಲ್ಲವು." ಎಂದನು. ಹೀಗೆ ರಾಮನು ಇನ್ನೂ ಅನೇಕವಿಧದಲ್ಲಿ ದುಃಖದಿಂದ ವಿಲಪಿಸಿ, ಜನಶೂನ್ಯವಾದ ಆ ಕಾಡಿನಲ್ಲಿ ಕಣ್ಣೀರನ್ನು ಸುರಿಸುತ್ತಾ ಹಾಗೆಯೇ ಸುಮ್ಮನಾದನು. ಹೀಗೆದೈನ್ಯದಿಂದ, ಜ್ವಾಲೆಯಿಲ್ಲದ ಅಗ್ನಿಯಂತೆಯೂ, ವೇಗವಿಲ್ಲದ ಸಮುದ್ರದಂತೆಯೂ ಸುಮ್ಮನಾಗಲು, ಲಕ್ಷ್ಮಣನು ಆತನನ್ನು ಅನೇಕವಿಧದಲ್ಲಿ ಸಮಾಧಾನಪಡಿಸಿ, "ಅಣ್ಣಾ ! ಮಹಾವೀರನಾಗಿಯೂ, ರಾಜಪದವಿಗೆ ಅರ್ಹನಾಗಿಯೂ ಇರುವ ನೀನು ಅಯೋಧ್ಯೆಯನ್ನು ಬಿಟ್ಟು ಬಂದುದರಿಂದ, ಈಗ ಆ ಪಟ್ಟಣವು ಚಂದ್ರನಿಲ್ಲದ ರಾತ್ರಿಯಂತೆ ಕೇವಲ ಕಾಂತಿಹೀನವಾಗಿರುವುದೆಂಬುದರಲ್ಲಿ ಸಂದೇಹವೇ ಇಲ್ಲ!ಆದರೂ ಪುರುಷಶ್ರೇಷ್ಠನಾದನೀನು ಹೀಗೆ ದುಃಖಿಸುವುದು ಸರಿಯಲ್ಲ!ಇದರಿಂದ ನನಗೂ,ಈ ಸೀತೆಗೂ ದುಃಖವನ್ನು ಹೆಚ್ಚಿಸಿದಂತಾಗುವುದೇಹೊರತು ಬೇರೆಯಲ್ಲ! ಬೆಳಗಾದಮೇಲೆ ಅಯೋಧ್ಯೆಗೆ ಹೋಗೆಂದು ನನಗೆ ಹೇಳಿದೆಯಲ್ಲವೆ? ಎಲೈ ಆರ್ಯನೆ ! ಮುಖ್ಯವಾಗಿ ಒಂದುವಿಷಯವನ್ನು ಹೇಳುವೆನು ಕೇಳು; ಈ ಸೀತೆಯಾಗಲಿ, ನಾನಾಗಲಿ ನಿನ್ನನ್ನು ಬಿಟ್ಟುಹೋದಮೇಲೆ, ನೀರಿನಿಂದ ಹೊರಕ್ಕೆ ತಂದು ಹಾಕಿದ ಮೀನಿನಂತೆ, ಒಂದುಮುಹೂರ್ತಕಾಲವಾದರೂ ಬದುಕಿರಲಾರೆವು. ನಿನ್ನನ್ನು ಬಿಟ್ಟು ನಾನು ತಂದೆಯನ್ನಾಗಲಿ, ತಮ್ಮನಾದ ಶತ್ರುಘ್ನನನ್ನಾಗಲಿ, ತಾಯಿಯಾದ ಸುಮಿತ್ರೆಯನ್ನಾಗಲಿ, ನೋಡಬೇಕೆಂದು ಆಸೆಪಡುವ

ವನಲ್ಲ! ಕೊನೆಗೆ ಸ್ವರ್ಗಲೋಕವನ್ನೂ ನಾನು ಅಪೇಕ್ಷಿಸುವವನಲ್ಲ! ಇದುನಿಜವು" ಎಂದನು. ಆಮೇಲೆ ರಾಮಲಕ್ಷ್ಮಣರಿಬ್ಬರೂ ಆ ಭೋಜನಸ್ಥಾನದಲ್ಲಿಯೇ ನಿಶ್ಚಿಂತರಾಗಿ ಸ್ವಲ್ಪಕಾಲದವರೆಗೆ ಕುಳಿತಿದ್ದು, ಆಮೇಲೆ ಅಲ್ಲಿಗೆ ಸಮೀಪದಲ್ಲಿ ಆಲದಮರದಕೆಳಗೆ ಲಕ್ಷ್ಮಣನು ಸಿದ್ಧಪಡಿಸಿಟ್ಟ ಹಾಸಿಗೆಯನ್ನುನೋಡಿ, ಅಲ್ಲಿ ಹೋಗಿ ಸುಖವಾಗಿ ಮಲಗಿದ್ದರು *ಲಕ್ಷ್ಮಣನು ಹೇಳಿದ ಯುಕ್ತಿಯುಕ್ತವಾದ ಮಾತುಗಳೆಲ್ಲವನ್ನೂ ರಾಮನು ಅತ್ಯಾದರದಿಂದ ಕೇಳಿ, ಲಕ್ಷ್ಮಣನೊಡನೆಯೇ ಆ ಹದಿನಾಲ್ಕುವರ್ಷಗಳನ್ನೂ ವಾನಪ್ರಸ್ಥಧರ್ಮದಿಂದ ಕಳೆಯುವುದಾಗಿ ಸಂಕಲ್ಪಿಸಿಕೊಂಡನು. ರಘುವಂಶವರ್ಧನರಾದ ಆ ರಾಮಲಕ್ಷ್ಮಣರಿಬ್ಬರೂ ಮಹಾಬಲಾಢ್ಯರಾದುದರಿಂದ, ನಿರ್ಜನವಾದ ಆ ಘೋರಾರಣ್ಯದಲ್ಲಿಯೂಕೂಡ, ಬೆಟ್ಟದ ತಪ್ಪಲುಗಳಲ್ಲಿ ತಿರುಗುತ್ತಿರುವ ಸಿಂಹಗಳಂತೆ ನಿರ್ಭಯರಾಗಿ ಸಂಚರಿಸುತಿದ್ದರು. ಇಲ್ಲಿಗೆ ಐವತ್ತುಮೂರನೆಯ ಸರ್ಗವು.

---

* ಇಲ್ಲಿ ''ಸ ಲಕ್ಷ್ಮಣಸ್ಯೋತ್ತಮಪುಷ್ಕಲಂ ವಚೋ ನಿಶಮ್ಯಚೈವಂ ವನವಾಸಮಾದರಾತ್ । ಸಮಾಸ್ಸಮಸ್ತಾ ವಿದಧೇ ಪರಂತಪಃ ಪ್ರಪದ್ಯ ಧರ್ಮಂ ಸುಚಿರಾಯ ರಾಘವಃ'' ಎಂದು ಮೂಲವು. ಇದಕ್ಕೆ ಮಹೇಶ್ವರತೀರ್ಥರು ಬರೆದ ವ್ಯಾಖ್ಯಾನುಸಾರವಾಗಿ, ''ರಾಮನು, ತನಗೆ ಲಕ್ಷ್ಮಣನು ವನವಾಸದ ವಿಷಯವನ್ನುಕುರಿತು ಹೇಳಿದ ಮಾತುಗಳೆಲ್ಲವನ್ನೂ ಅತಿಪ್ರೀತಿಯಿಂದ ಕೇಳಿ, ತಾನು ಧರ್ಮದೃಷ್ಟಿಯುಳ್ಳವನಾಗಿ, ಲಕ್ಷ್ಮಣನಿಗೆ ಆ ಸಂವತ್ಸರಗಳೆಲ್ಲವನ್ನೂ ತನ್ನೊಡನೆ ವನವಾಸದಲ್ಲಿ ಕಳೆಯುವುದ ಅನುಮತಿಯನ್ನು ಕೊಟ್ಟನು'' ಎಂಬುದಾಗಿ ಅರ್ಥಾಂತರವು ವಿವರಿಸಲ್ಪಟ್ಟಿದೆ.